೭ ಸಮಗ್ರ ವಚನ ಸಂಪುಟ

ಜನಪ್ರಿಯ ಆವೃತ್ತಿ

# ಸಂಕೀರ್ಣ ವಚನಸಂಪುಟ ೧

ಸಂಪಾದಕ
ಡಾ. ಎಸ್. ವಿದ್ಯಾಶಂಕರ

ಕರ್ನಾಟಕ ಸರ್ಕಾರ
ಕನ್ನಡ ಪುಸ್ತಕ ಪ್ರಾಧಿಕಾರ
ಬೆಂಗಳೂರು

# ಸಂಕೀರ್ಣ ವಚನಸಂಪುಟ : ಎರಡು

೧. ಬಸವಣ್ಣನವರ ವಚನಸಂಪುಟ - ಸಂ : ಡಾ. ಎಂ. ಎಂ. ಕಲಬುರ್ಗಿ

೨. ಅಲ್ಲಮಪ್ರಭುದೇವರ ವಚನಸಂಪುಟ - ಸಂ : ಡಾ. ಬಿ. ವ್ಹಿ. ಮಲ್ಲಾಪುರ

೩. ಚೆನ್ನಬಸವಣ್ಣನವರ ವಚನಸಂಪುಟ - ಸಂ : ಡಾ. ಬಿ. ವ್ಹಿ. ಮಲ್ಲಾಪುರ

೪. ಸಿದ್ಧರಾಮೇಶ್ವರ ವಚನಸಂಪುಟ - ಸಂ : ಡಾ. ಎಸ್. ವಿದ್ಯಾಶಂಕರ

೫. ಶಿವಶರಣೆಯರ ವಚನಸಂಪುಟ - ಸಂ : ಡಾ. ವೀರಣ್ಣ ರಾಜೂರ

೬. ಸಂಕೀರ್ಣ ವಚನಸಂಪುಟ : ಒಂದು - ಸಂ : ಡಾ. ಎಂ. ಎಂ. ಕಲಬುರ್ಗಿ

೭. ಸಂಕೀರ್ಣ ವಚನಸಂಪುಟ : ಎರಡು - ಸಂ : ಡಾ. ಎಸ್. ವಿದ್ಯಾಶಂಕರ

೮. ಸಂಕೀರ್ಣ ವಚನಸಂಪುಟ : ಮೂರು - ಸಂ : ಡಾ. ಬಿ. ಆರ್. ಹಿರೇಮಠ

೯. ಸಂಕೀರ್ಣ ವಚನಸಂಪುಟ : ನಾಲ್ಕು - ಸಂ : ಡಾ. ಬಿ. ಆರ್. ಹಿರೇಮಠ

೧೦. ಸಂಕೀರ್ಣ ವಚನಸಂಪುಟ : ಐದು - ಸಂ : ಡಾ. ವೀರಣ್ಣ ರಾಜೂರ

೧೧. ಸಂಕೀರ್ಣ ವಚನಸಂಪುಟ : ಆರು - ಸಂ : ಎಸ್. ಶಿವಣ್ಣ

೧೨. ಸಂಕೀರ್ಣ ವಚನಸಂಪುಟ : ಏಳು - ಸಂ : ಡಾ. ವೀರಣ್ಣ ರಾಜೂರ

೧೩. ಸಂಕೀರ್ಣ ವಚನಸಂಪುಟ : ಎಂಟು - ಸಂ : ಡಾ. ವೀರಣ್ಣ ರಾಜೂರ

೧೪. ಸಂಕೀರ್ಣ ವಚನಸಂಪುಟ : ಒಂಬತ್ತು - ಸಂ : ಡಾ. ವೀರಣ್ಣ ರಾಜೂರ

೧೫. ವಚನ ಪರಿಭಾಷಾಕೋಶ - ಸಂ : ಡಾ. ಎನ್. ಜಿ. ಮಹಾದೇವಪ್ಪ

# ಸಂಕೀರ್ಣ ವಚನಸಂಪುಟ : ಎರಡು

ಸಂಪಾದಕ

**ಡಾ. ಎಸ್. ವಿದ್ಯಾಶಂಕರ**

ವಿಶ್ರಾಂತ ಕನ್ನಡ ಪ್ರಾಧ್ಯಾಪಕರು, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು

ಕರ್ನಾಟಕ ಸರ್ಕಾರ

**ಕನ್ನಡ ಪುಸ್ತಕ ಪ್ರಾಧಿಕಾರ**

ಬೆಂಗಳೂರು

**SANKEERNA VACHANASAMPUTA : ERADU** : Complete Vachanas of 36 Vachanakaras of Basaveshvara Period, Ed. by Dr. S. Vidyashankar, Bangalore and Published by The Administrative Officer, Kannada Pusthaka Pradhikara (Kannada Book Authority) Pampa Mahakavi Road, Chamarajpet, Bangalore - 560 018

ISBN : 81-7713-098-6

Pp. Iii+448

ಹಕ್ಕುಗಳನ್ನು ಕಾಯ್ದಿರಿಸಿದೆ

ಪ್ರಥಮ ಮುದ್ರಣ : ೧೯೯೩
ದ್ವಿತೀಯ ಪರಿಷ್ಕೃತ ಮುದ್ರಣ : ೨೦೦೧

ಪ್ರತಿ : ಐದು ಸಾವಿರ

ಬೆಲೆ : ರೂ. ೮೫೦/-
(೧೫ ಸಂಪುಟಗಳ ಸೆಟ್)

**ಛಾಯಾಕ್ಷರ ಜೋಡಣೆ:**
ವರ್ಷಿಣಿ ಗ್ರಾಫಿಕ್ಸ್, ಬೆಂಗಳೂರು-೪೦ ✆ : 3402575

**ಮುದ್ರಕರು :**
ಸ್ನೇಹಾ ಪ್ರಿಂಟರ್ಸ್
ನಂ. ೧೧೪, ೫ನೇ ಅಡ್ಡರಸ್ತೆ, ಬಿ.ಸಿ.ಸಿ. ಬಡಾವಣೆ
ಅತ್ತಿಗುಪ್ಪೆ, ವಿಜಯನಗರ ೨ನೇ ಹಂತ
ಬೆಂಗಳೂರು - ೪೦ ✆ : 3302417, 3392814

ಸಮಗ್ರ ವಚನಸಾಹಿತ್ಯದ ಜನಪ್ರಿಯ ಆವೃತ್ತಿ ಪ್ರಕಟನ ಯೋಜನೆ

❊


## ಸಂಪಾದಕ ಮಂಡಳಿ

ಪ್ರಧಾನ ಸಂಪಾದಕರು

**ಡಾ. ಎಂ. ಎಂ. ಕಲಬುರ್ಗಿ**

ವಿಶ್ರಾಂತ ಕುಲಪತಿಗಳು, ಕನ್ನಡ ವಿಶ್ವವಿದ್ಯಾಲಯ, ಹಂಪಿ

❊

ಸದಸ್ಯರು

**ಡಾ. ಎಂ. ಚಿದಾನಂದಮೂರ್ತಿ**

ವಿಶ್ರಾಂತ ಕನ್ನಡ ಪ್ರಾಧ್ಯಾಪಕರು, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು

**ಡಾ. ಸಿ. ಪಿ. ಕೃಷ್ಣಕುಮಾರ**

ವಿಶ್ರಾಂತ ಕನ್ನಡ ಪ್ರಾಧ್ಯಾಪಕರು, ಮೈಸೂರು ವಿಶ್ವವಿದ್ಯಾಲಯ, ಮೈಸೂರು

**ಡಾ. ಎಸ್. ವಿದ್ಯಾಶಂಕರ**

ವಿಶ್ರಾಂತ ಕನ್ನಡ ಪ್ರಾಧ್ಯಾಪಕರು, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು

**ಎಸ್. ಶಿವಣ್ಣ**

ವಿಶ್ರಾಂತ ಸಂಪಾದಕರು, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು

**ಕೆ. ಸಿ. ರಾಮಮೂರ್ತಿ**

ನಿರ್ದೇಶಕರು, ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ಬೆಂಗಳೂರು

※

# ಮುನ್ನುಡಿ

## ಎಸ್. ಎಂ. ಕೃಷ್ಣ
ಮುಖ್ಯಮಂತ್ರಿಗಳು

ಕನ್ನಡನಾಡಿನ ಪ್ರಥಮ ಪ್ರಜಾಸಾಹಿತ್ಯವಾಗಿರುವ ವಚನವಾಙ್ಮಯ ನಮ್ಮ ಪರಂಪರೆಯ ಅಪೂರ್ವ ಸಾಂಸ್ಕೃತಿಕ ಆಸ್ತಿಯೆನಿಸಿದೆ. ಅನೇಕ ಜನ ವಿದ್ವಾಂಸರು, ಅನೇಕ ಸಂಸ್ಥೆಗಳು ಈ ಸಾಹಿತ್ಯವನ್ನು ಬೆಳಕಿಗೆ ತರಲು ಕಳೆದ ನೂರು ವರ್ಷಗಳಿಂದ ದುಡಿಯುತ್ತ ಬಂದುದು, ಇದರ ವ್ಯಾಪಕತೆಯ ದ್ಯೋತಕವಾಗಿದೆ. ಹೀಗೆ ಪ್ರಕಟವಾಗಿದ್ದ ಮತ್ತು ಅಪ್ರಕಟಿತ ಸ್ಥಿತಿಯಲ್ಲಿದ್ದ ಈ ಸಾಹಿತ್ಯದ ದ್ವಿತೀಯ ಆವೃತ್ತಿಯನ್ನು ವಚನ ಪರಿಭಾಷಾಕೋಶವೂ ಒಳಗೊಂಡಂತೆ ೧೫ ಸಂಪುಟಗಳ ಮೂಲಕ ಕರ್ನಾಟಕ ಸರ್ಕಾರ ಹೊರತರುತ್ತಿರುವುದು, ನಮ್ಮ ಸಾಹಿತ್ಯ ಪ್ರಕಟಣೆಯ ಇತಿಹಾಸದಲ್ಲಿ ಒಂದು ಗಣ್ಯ ಸಾಧನೆಯೆಂದೇ ಹೇಳಬೇಕು. ಈ ಪ್ರಜಾಸಾಹಿತ್ಯವನ್ನು ಪ್ರಜೆಗಳಿಗೆ ಮುಟ್ಟಿಸುವುದು ತನ್ನ ಕರ್ತವ್ಯವೆಂದು ಭಾವಿಸಿ, ಕರ್ನಾಟಕದ ಪ್ರಜಾಸರ್ಕಾರ ಈ ಕೆಲಸವನ್ನು ಪೂರೈಸಿದೆ.

ವಚನಸಾಹಿತ್ಯಕ್ಕೆ ನಮ್ಮ ನಾಡಿನಲ್ಲಿ ಸುಮಾರು ೮೦೦ ವರ್ಷಗಳ ಇತಿಹಾಸವಿದೆ. ಈವರೆಗೆ ಬಸವಯುಗದ ಬರವಣಿಗೆಯನ್ನು ಹೊರತರಲು ವಿದ್ವಾಂಸರು ಹೆಚ್ಚು ಗಮನ ಕೊಟ್ಟಿದ್ದರು. ಈ ಯೋಜನೆ ಅದನ್ನೂ ಒಳಗೊಂಡು, ಬಸವೋತ್ತರ ಯುಗದ ಮೇಲೆಯೂ ಒತ್ತುಕೊಟ್ಟುದು ವಿಶೇಷವೆನಿಸಿದೆ. ಇದರಿಂದಾಗಿ ಈ ಯೋಜನೆಗೆ "ಒಂದು ಸಾಹಿತ್ಯ ಪ್ರಕಾರದ ಪ್ರಕಟಣೆ" ಎಂಬ ಕೀರ್ತಿ ಸಲ್ಲುತ್ತದೆ.

ವಚನವೆಂಬುದು ಚಳುವಳಿ ಸಾಹಿತ್ಯಪ್ರಕಾರವಾಗಿದೆ. ಆತ್ಮಕಲ್ಯಾಣದೊಂದಿಗೆ ಸಮಾಜಕಲ್ಯಾಣವನ್ನೂ ಕಾರ್ಯಗತಗೊಳಿಸಲು ಹೋರಾಡಿ ಮಡಿದ ಹುತಾತ್ಮರ ಸಾಹಿತ್ಯವಿದು. ರಾಜಸತ್ತೆ, ಪುರೋಹಿತಸತ್ತೆ, ಪುರುಷಸತ್ತೆಗಳೆಂಬ ಪ್ರತಿಗಾಮಿ ಸತ್ತೆಗಳ ವಿರುದ್ಧ, ಕರ್ನಾಟಕದ ಎಲ್ಲ ಸಮಾಜದ ಜನರು ನಡೆಸಿದ ಹೋರಾಟದ ಉಪನಿಷ್ಪತ್ತಿಯಾದ ಈ ಸಾಹಿತ್ಯದಲ್ಲಿ ಜೀವಪರಧ್ವನಿಗಳು ದಟ್ಟವಾಗಿ ಕೇಳಿಸುತ್ತವೆ. ಪ್ರಾಚೀನ ಕರ್ನಾಟಕದ ಬೌದ್ಧಿಕ ಶ್ರಮದ ವಿದ್ವತ್ ಜನತಾಸಾಹಿತ್ಯಕ್ಕಿಂತ ದೈಹಿಕ ಶ್ರಮದ ಜನತಾಸಾಹಿತ್ಯ ಹೇಗೆ ಭಿನ್ನವಾಗಿದೆಯೆಂಬುದನ್ನು ಕಾಣಬೇಕಾದರೆ ನಾವು ಈ ಸಾಹಿತ್ಯಕ್ಕೇ ಮೊರೆಹೊಗಬೇಕು.

"ವಿಪ್ರ ಮೊದಲು ಅಂತ್ಯಜ ಕಡೆಯಾಗಿ" ಸಮಾಜದ ಎಲ್ಲ ವರ್ಗದ ಸ್ತ್ರೀ-ಪುರುಷರ ಸಂಕೀರ್ಣ ಧ್ವನಿಗಳು ಇದರಲ್ಲಿ ತುಂಬ ಕಲಾತ್ಮಕವಾಗಿ

ಎರಕಗೊಂಡಿವೆ. ಹೀಗಾಗಿ ಸಮಗ್ರ ಕರ್ನಾಟಕದ ಪ್ರಾತಿನಿಧಿಕ ಧ್ವನಿಯೆನಿಸಿದ ಈ ಸಾಹಿತ್ಯದ ಪ್ರಕಟನೆಯು ತನ್ನ ಕರ್ತವ್ಯದ ಭಾಗವೆಂದು ಭಾವಿಸಿರುವ ಕರ್ನಾಟಕ ಸರ್ಕಾರ, ಅದನ್ನು ಸುಲಭ ಬೆಲೆಯಲ್ಲಿ ಜನತೆಗೆ ನೀಡುತ್ತಿದೆ.

ಈ ಯೋಜನೆಯ ನೇತೃತ್ವ ವಹಿಸಿ ದುಡಿದ ಡಾ. ಎಂ. ಎಂ. ಕಲಬುರ್ಗಿ ಅವರ ಶ್ರದ್ಧೆಯನ್ನು, ಸಂಪಾದಕ ಮಂಡಳಿಯ ಮಾರ್ಗದರ್ಶನವನ್ನು, ಸಂಪಾದಕರ ಶ್ರಮವನ್ನು ಸ್ಮರಿಸುತ್ತ, ಈ ಐತಿಹಾಸಿಕ ಪ್ರಕಟನೆಯ ಪರಿಷ್ಕೃತ ದ್ವಿತೀಯ ಆವೃತ್ತಿ ಸಂಪುಟಗಳನ್ನು ಕನ್ನಡ ಜನತೆಗೆ ಅರ್ಪಿಸುತ್ತೇನೆ.

■■

❊

# ಬಿನ್ನಹ

**ರಾಣಿ ಸತೀಶ್**
ಕನ್ನಡ ಮತ್ತು ಸಂಸ್ಕೃತಿ ಸಚಿವರು

ಸಾಹಿತ್ಯಕ್ಕೆ ಸಾಹಿತ್ಯ, ಶಾಸ್ತ್ರಕ್ಕೆ ಶಾಸ್ತ್ರವಾಗಿರುವ ವಚನವಾಙ್ಮಯ ನಮ್ಮ ಪರಂಪರೆಯ ಅಪೂರ್ವ ಸೃಷ್ಟಿಯಾಗಿದೆ; ಅತ್ಯಪೂರ್ವ ಆಸ್ತಿಯೆನಿಸಿದೆ. ಪಂಡಿತರ ಮಾರ್ಗಸಾಹಿತ್ಯಕ್ಕೆ ಪ್ರತಿಯಾಗಿ ಸಾಮಾನ್ಯರ ಈ ದೇಶೀಸಾಹಿತ್ಯ ಹೊರಹೊಮ್ಮಿದ್ದು ೧೨ನೆಯ ಶತಮಾನದಲ್ಲಿ; ಕಲಚುರಿಗಳ ರಾಜಧಾನಿಯಾಗಿದ್ದ ಕಲ್ಯಾಣದಲ್ಲಿ; ಬಸವಾದಿ ಶರಣರ ಚಳುವಳಿಯಲ್ಲಿ.

ಮೂಲತಃ ಭಾರತೀಯರದು ಆತ್ಮ ಪರಮಾತ್ಮನಾಗಬೇಕೆಂಬ ವ್ಯಕ್ತಿಕೇಂದ್ರಿತ ಸಿದ್ಧಾಂತ. ಶರಣರು ಇದನ್ನು ಸಮಾಜಕೇಂದ್ರಿತ ಸಿದ್ಧಾಂತಕ್ಕೆ ವಿಸ್ತರಿಸಿದರು. ಹೀಗಾಗಿ ವ್ಯಕ್ತಿ ಕಲ್ಯಾಣದ ಜೊತೆ ಸಮಾಜಕಲ್ಯಾಣವೂ ಈ ಚಳುವಳಿಯ ಮುಖ್ಯ ಲಕ್ಷಣವೆನಿಸಿತು. ಸಾಹಿತ್ಯ ಸಾಹಿತ್ಯಕ್ಕಾಗಿ ಅಲ್ಲ, ವ್ಯಕ್ತಿ ಪರಿವರ್ತನೆಗಾಗಿ, ಸಮಾಜ ಪರಿವರ್ತನೆಗಾಗಿಯೆಂಬ ಸಿದ್ಧಾಂತ ಇಲ್ಲಿ ಅರ್ಥ ಪಡೆಯಿತು.

೧೨ನೆಯ ಶತಮಾನದ ಹೊತ್ತಿಗೆ, ಶೂದ್ರಜೀವ ದೇವನಾಗಲಾರನೆಂಬ ಸಿದ್ಧಾಂತ ಸ್ಥಾಪಿತವಾಗಿದ್ದಿತು. ಸಮಾಜದಲ್ಲಿ ಪುರುಷ-ಸ್ತ್ರೀ, ಪ್ರಭು-ಪ್ರಜೆ, ಬ್ರಾಹ್ಮಣ-ಶೂದ್ರರಲ್ಲಿ ಸಮಾನತೆ ಸಾಧ್ಯವಿಲ್ಲವೆಂಬ ಭೇದಸಂಸ್ಕೃತಿಯೂ ನಿರ್ಮಾಣವಾಗಿದ್ದಿತು. ಈಗ, ಶೂದ್ರನಿಗೂ ದೇವರಾಗುವ ಅರ್ಹತೆಯಿದೆ; ಸ್ತ್ರೀಗೆ ಪುರುಷನಷ್ಟು - ಪ್ರಜೆಗೆ ಪ್ರಭುವಿನಷ್ಟು - ಶೂದ್ರನಿಗೆ ಬ್ರಾಹ್ಮಣನಷ್ಟು ಅಧಿಕಾರವಿದೆಯೆಂದು ಶರಣರು ವಾದಿಸಿದರು. ಇದರ ಫಲವಾಗಿ, ಹೊಸ ಸಮಾಜವೊಂದು ಸೃಷ್ಟಿಯಾಯಿತು. ಇದರಿಂದಾಗಿ ಎಲ್ಲರೂ ಸ್ವತಂತ್ರರು, ಎಲ್ಲರೂ ಸಮಾನರು, ಎಲ್ಲರೂ ಸಹೋದರರೆಂಬ ತತ್ವ ಅನುಷ್ಠಾನಕ್ಕೆ ಬಂದಿತು. ಇದರ ಮುಂದುವರಿಕೆಯೆಂಬಂತೆ ಎಲ್ಲರೂ ದುಡಿಯಬೇಕು ಎಂಬ ಕಾಯಕತತ್ವ, ಎಲ್ಲರೂ ಹಂಚಿಕೊಂಡು ಉಣ್ಣಬೇಕು ಎಂಬ ದಾಸೋಹತತ್ವಗಳು ಆಕಾರ ಪಡೆದವು.

ಹೊಸ ಸಮಾಜದ ಈ ಎಲ್ಲ ನೆಲೆಗಳನ್ನು ಗುರಿಯಿಟ್ಟು ಆಡಿದ ಶರಣರ ಮಾತು ವಚನವೆಂಬ ಸಾಹಿತ್ಯಪ್ರಕಾರವಾಗಿ ಮೂಡಿತು. ವರ್ಗಭೇದ, ವರ್ಣಭೇದ, ಲಿಂಗಭೇದವೆನ್ನದೆ ಎಲ್ಲ ಜನವರ್ಗದವರ ಸಾವಿರ ಸಾವಿರ ವಚನಗಳು ಈ ಕಾಲದಲ್ಲಿ ಸೃಷ್ಟಿಯಾದವು. ಆದರೆ ಒಮ್ಮೆಲೇ ತಲೆದೋರಿದ ಕಲ್ಯಾಣ ಕ್ರಾಂತಿಯಿಂದಾಗಿ ಈ ಸಾಹಿತ್ಯ ನಾಡಿನ ತುಂಬ ಹರಿದು ಹಂಚಿಹೋಯಿತು.

ಹೀಗೆ ಹಂಚಿಹೋಗಿದ್ದ ಈ ಸಾಹಿತ್ಯವನ್ನು ೧೫-೧೬ನೆಯ ಶತಮಾನಗಳಲ್ಲಿ

ಶೋಧಿಸುವ, ಸಂಪಾದಿಸುವ ಪ್ರಯತ್ನ ನಡೆದು, ನೂರಾರು ಸಂಪಾದನ ಕೃತಿಗಳು ಹುಟ್ಟಿ ಬಂದು, ವಚನಸಾಹಿತ್ಯ ವೀರಶೈವ ಮಠಗಳಲ್ಲಿ ತಕ್ಕ ಮಟ್ಟಿಗೆ ರಕ್ಷಿಸಲ್ಪಟ್ಟಿತು. ದುರ್ದೈವದ ಸಂಗತಿಯೆಂದರೆ ಮಠಗಳಲ್ಲಿ ಪ್ರವೇಶ ಪಡೆದ ಸಂಸ್ಕೃತ ಭಾಷೆಯಿಂದಾಗಿ ಕನ್ನಡ ಭಾಷೆಯ ಈ ವಚನಗಳು ಅಲ್ಲಿ ಮೂಲೆ ಸೇರಿದವು.

ಹೀಗೆ ಮೂಲೆಗುಂಪಾಗಿದ್ದ ವಚನಸಾಹಿತ್ಯವು ೨೦ನೆಯ ಶತಮಾನದಲ್ಲಿ ಅನೇಕ ಜನ ವಿದ್ವಾಂಸರ, ಹತ್ತಾರು ಸಂಸ್ಥೆಗಳ ಪ್ರಯತ್ನದ ಫಲವಾಗಿ ಪ್ರಕಟಣೆಗೊಳ್ಳುತ್ತ ಬಂದಿತು. ಈಗ ೧೨ನೆಯ ಶತಮಾನದ ಶರಣಸಾಹಿತ್ಯ ಪ್ರಕಟನೆಗೆ ಒತ್ತುಬಿದ್ದರೂ ಅದು ಬಿಡಿಬಿಡಿಯಾಗಿ ಪ್ರಕಟಣೆಗೊಂಡಿತು. ಆ ತರುವಾಯದ ಶರಣ ಸಾಹಿತ್ಯವಂತೂ ಉಪೇಕ್ಷೆಗೆ ಗುರಿಯಾಯಿತು. ಈ ಎರಡೂ ಕೊರತೆಗಳನ್ನು ನೀಗಿಸುವ ಉದ್ದೇಶದಿಂದ ಎಲ್ಲ ಶರಣರ ಎಲ್ಲ ವಚನಗಳನ್ನು ಸಂಪುಟ ಶ್ರೇಣಿಯಲ್ಲಿ ಪ್ರಕಟಿಸಲು ಕರ್ನಾಟಕ ಸರಕಾರ "ಸಮಗ್ರ ವಚನಸಾಹಿತ್ಯದ ಜನಪ್ರಿಯ ಆವೃತ್ತಿ ಪ್ರಕಟನ ಯೋಜನೆ"ಯನ್ನು ಕೈಗೆತ್ತಿಕೊಂಡಿತು.

ಡಾ. ಎಂ. ಎಂ. ಕಲಬುರ್ಗಿಯವರ ಪ್ರಧಾನ ಸಂಪಾದಕತ್ವದಲ್ಲಿ ವ್ಯಾಪಕ ಕಾರ್ಯ ನಡೆದು, ೨೦ ಸಾವಿರ ವಚನ, ೧೦ ಸಾವಿರ ಪುಟಗಳನ್ನೊಳಗೊಂಡ ೧೫ ಸಂಪುಟಗಳು ೧೯೯೩ರಲ್ಲಿ ಬೆಳಕು ಕಂಡವು. ಆಶ್ಚರ್ಯದ ಸಂಗತಿಯೆಂದರೆ ಇದರ ೫ ಸಾವಿರ ಪ್ರತಿಗಳು ಒಂದೇ ವರ್ಷದಲ್ಲಿ ಮಾರಾಟವಾಗಿ, ಜನರಿಂದ ಬೇಡಿಕೆ ಹೆಚ್ಚುತ್ತ ನಡೆಯಿತು. ಇದನ್ನು ಪೂರೈಸುವ ದಿಕ್ಕಿನಲ್ಲಿ ಪರಿಷ್ಕೃತ ದ್ವಿತೀಯ ಆವೃತ್ತಿ ಈಗ ಹೊರಬರುತ್ತಲಿದೆ. ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಚಿವೆಯಾಗಿ ಕನ್ನಡದ ಈ ಅಪೂರ್ವ ಆಸ್ತಿಯನ್ನು ಕನ್ನಡ ಜನತೆಗೆ ಅರ್ಪಿಸುತ್ತೇನೆ.

■■

❊

# ನಿರ್ದೇಶಕರ ಮಾತು

**ಕೆ. ಸಿ. ರಾಮಮೂರ್ತಿ**
ನಿರ್ದೇಶಕರು, ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ

ವಚನಸಾಹಿತ್ಯ, ಕರ್ನಾಟಕದ ಬಹುದೊಡ್ಡ ಸಾಂಸ್ಕೃತಿಕ ಸಂಪತ್ತು. ಪ್ರಾಚೀನ ಕರ್ನಾಟಕದ ಜನಸಾಮಾನ್ಯರ ಧ್ವನಿಯಾಗಿರುವ ಇದನ್ನು ಪ್ರಕಟಿಸುವುದು, ಪ್ರಸಾರ ಮಾಡುವುದು ಜನತಂತ್ರ ಸರಕಾರದ ಮುಖ್ಯ ಕರ್ತವ್ಯವಾಗಿದೆ.

ಭಾರತದಲ್ಲಿ ಆತ್ಮೋದ್ಧಾರದ ಬಗ್ಗೆ ಉದಾತ್ತ ತತ್ವಗಳನ್ನು ಪ್ರತಿಪಾದಿಸುತ್ತ ಬಂದಿದ್ದರೂ ಸಮಾಜೋದ್ಧಾರದ ಬಗ್ಗೆ ಉಪೇಕ್ಷೆ ಬೆಳೆದು, ಅಲ್ಲಿ ಶೋಷಣೆ ವರ್ಧಿಸುತ್ತ ಬಂದುದು ನಮ್ಮ ಇತಿಹಾಸದ ಒಂದು ವಿಪರ್ಯಾಸವೇ ಸರಿ. ೧೨ನೆಯ ಶತಮಾನದಲ್ಲಿ ಉಲ್ಬಣಗೊಂಡಿದ್ದ ಈ ವಿಷಮ ಪರಿಸ್ಥಿತಿಯನ್ನು ನಾಶಗೊಳಿಸಿ, ಸಮಸ್ಥಿತಿಯನ್ನು ಸಮಾಜದಲ್ಲಿ ತರಲು ಹೋರಾಡಿದವರು, ಕಲ್ಯಾಣದ ಶರಣರು. ಈ ಕಾರ್ಯಕ್ಕಾಗಿ ಅವರು ಕೈಕೊಂಡ ಜನಪರ ಆಂದೋಲನ ನಮ್ಮ ದೇಶದ ಇತಿಹಾಸದಲ್ಲಿಯೇ ಒಂದು ವಿಶಿಷ್ಟ ಘಟನೆಯಾಗಿದೆ.

ಭಾರತದಲ್ಲಿ ರಾಜಸತ್ತೆಯ ಸ್ಥಾಪನೆಗಾಗಿ ರಾಜರು, ಮತಸತ್ತೆಯ ಸ್ಥಾಪನೆಗಾಗಿ ಧರ್ಮಗಳು ಪರಸ್ಪರ ಸಂಘರ್ಷಕ್ಕಿಳಿದುದು ಸರ್ವಶ್ರುತ. ಆದರೆ ಸಾಮಾಜಿಕ ನ್ಯಾಯದ ಸ್ಥಾಪನೆಗಾಗಿ ಈ ರಾಜಸತ್ತೆ, ಮತಸತ್ತೆಗಳ ವಿರುದ್ಧ ಸಮಾಜದ ವಿವಿಧ ಸ್ತರಗಳ ಜನತೆ, ಅದರಲ್ಲಿಯೂ ದೀನರು-ದಲಿತರು-ಮಹಿಳೆಯರು ಬೀದಿಗಿಳಿದು ನಡೆಸಿದ ಈ ಆಂದೋಲನ, ಇಪ್ಪತ್ತನೆಯ ಶತಮಾನವೂ ಆಶ್ಚರ್ಯಪಡುವ ಸಂಗತಿಯಾಗಿದೆ.

ಅಂದಿನ ಸನ್ನಿವೇಶಕ್ಕೆ ಅನುಗುಣವಾಗಿ ಧಾರ್ಮಿಕ ಕ್ಷೇತ್ರದಲ್ಲಿ ಅಂಕುರಿಸಿದ ಈ ಆಂದೋಲನ, ಸಾಮಾಜಿಕ ಕ್ಷೇತ್ರವನ್ನೂ ಆವರಿಸಿದ ಕಾರಣ, ಇದನ್ನು 'ಸಮಾಜೋ ಧಾರ್ಮಿಕ' ಆಂದೋಲನವೆಂದು ಗುರುತಿಸಲಾಗುತ್ತದೆ. ಸಮಾಜವೆನ್ನುವುದು ಸಂಕೀರ್ಣ ವ್ಯವಸ್ಥೆ. ಅದರ ಎಲ್ಲ ಸ್ತರಗಳನ್ನೂ ಎಲ್ಲ ಮಗ್ಗಲುಗಳನ್ನೂ ಬದಲಿಸಲು ಮಾಡಿದ ಪ್ರಯತ್ನವಾಗಿರುವುದರಿಂದ ಇದು ಒಂದು "ಸಮಗ್ರ ಆಂದೋಲನ"ವಾಗಿದೆ. ಈ ಆಂದೋಲನದ ನೇರ ಧ್ವನಿ, ವಚನಸಾಹಿತ್ಯ.

ಹನ್ನೆರಡನೆಯ ಶತಮಾನದಲ್ಲಿ ಬಸವಣ್ಣನಿಂದಾಗಿ ವ್ಯಕ್ತಿ ಸ್ವಾತಂತ್ರ್ಯ ಪಡೆದ ಜನವರ್ಗವು ವ್ಯಕ್ತಪಡಿಸಿದ ಅಭಿಪ್ರಾಯ ಸ್ವಾತಂತ್ರ್ಯದ ಫಲ, ಈ ಸಾಹಿತ್ಯ. ಹೀಗಾಗಿ ಇಲ್ಲಿ ಆತ್ಮವಿಮರ್ಶೆಯಷ್ಟೇ ವಿಪುಲವಾಗಿ ಸಮಾಜವಿಮರ್ಶೆಯನ್ನೂ ಕಾಣಬಹುದಾಗಿದೆ. ಅದರಲ್ಲಿಯೂ ವರ್ಣಭೇದ ನಿರಾಕರಣೆ, ವರ್ಗಭೇದ

ನಿರಾಕರಣೆ, ಲಿಂಗಭೇದ ನಿರಾಕರಣೆಗಳಂಥ ವಿಚಾರಗಳು ಸ್ಫೋಟಗೊಂಡುದು ಲಕ್ಷಿಸತಕ್ಕ ಸಂಗತಿಯಾಗಿದೆ. ಇಲ್ಲಿ ಪುರುಷರಷ್ಟೇ ಪ್ರಧಾನವಾಗಿ ಮಹಿಳೆಯರೂ, ಕುಲಜರಷ್ಟೇ ಪ್ರಧಾನವಾಗಿ ಅಂತ್ಯಜರೂ, ಪ್ರಭುಗಳಷ್ಟೇ ಪ್ರಧಾನವಾಗಿ ಪ್ರಜೆಗಳೂ ಬಾಳಿದುದು, ಬರೆದುದು ಬಹುಶಃ ಜಗತ್ತಿನ ಇತಿಹಾಸದಲ್ಲಿಯೇ ಏಕೈಕ ಉದಾಹರಣೆಯಾಗಿದೆ. ಇಂಥ ವಿಚಾರಶೀಲರ ಅಂದರೆ ಇವರ ತತ್ವ-ಸಾಹಿತ್ಯಗಳ ಉತ್ತರಾಧಿಕಾರಿಗಳಾದುದು ನಮ್ಮ ಭಾಗ್ಯ; ಇವರ ಸಾಹಿತ್ಯಸಂಪತ್ತನ್ನು ರಕ್ಷಿಸುವುದು, ಪ್ರಸಾರಮಾಡುವುದು ನಮ್ಮ ಕರ್ತವ್ಯ. ಈ ಕರ್ತವ್ಯದ ಭಾಗವಾಗಿ "ಸಮಗ್ರ ವಚನಸಾಹಿತ್ಯದ ಜನಪ್ರಿಯ ಆವೃತ್ತಿ ಪ್ರಕಟನ ಯೋಜನೆ"ಯನ್ನು ಕರ್ನಾಟಕ ಸರಕಾರ ಕೈಗೆತ್ತಿಕೊಂಡಿತು.

ಈವರೆಗೆ ವಚನಸಾಹಿತ್ಯ ಬಿಡಿಬಿಡಿಯಾಗಿ ಭಾಗಶಃ ಪ್ರಕಟವಾಗಿದ್ದಿತು, ಕೆಲವು ಭಾಗ ಅಪ್ರಕಟಿತ ಸ್ಥಿತಿಯಲ್ಲಿ ಉಳಿದಿದ್ದಿತು. ಇದೆಲ್ಲವನ್ನು ಕ್ರೋಢೀಕರಿಸಿ, ಪರಿಷ್ಕರಿಸಿ ಪ್ರಕಟಿಸುವುದು ಶ್ರಮದ ಕೆಲಸ. ಡಾ. ಎಂ. ಎಂ. ಕಲಬುರ್ಗಿಯವರ ಪ್ರಧಾನ ಸಂಪಾದಕತ್ವದಲ್ಲಿ, ಅನೇಕ ಜನ ವಿದ್ವಾಂಸರ ಮತ್ತು ಸಂಪಾದಕ ಮಂಡಳಿ ಸದಸ್ಯರ ಸಂಯುಕ್ತ ಪರಿಶ್ರಮದಿಂದ ಈ ಬೃಹತ್ ಯೋಜನೆ ಪೂರ್ತಿಗೊಂಡುದು ಸಂತೋಷದ ಸಂಗತಿ. ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯದ ಆಶ್ರಯದಲ್ಲಿ ಅಸ್ತಿತ್ವಕ್ಕೆ ಬಂದು, ನಿರ್ದಿಷ್ಟ ಅವಧಿಯಲ್ಲಿ ಪೂರ್ಣಗೊಂಡ ಈ ಐತಿಹಾಸಿಕ ಯೋಜನೆಗಾಗಿ ಸಂಬಂಧಪಟ್ಟ ಎಲ್ಲ ವಿದ್ವಾಂಸರನ್ನು ಅಭಿನಂದಿಸುತ್ತೇನೆ. ಕನ್ನಡ ಪುಸ್ತಕ ಪ್ರಾಧಿಕಾರದ ಮೂಲಕ ಪ್ರಕಟವಾಗುತ್ತಲಿರುವ ಈ ಪರಿಷ್ಕೃತ ದ್ವಿತೀಯ ಆವೃತ್ತಿ ಸಂಪುಟಗಳನ್ನು ಕನ್ನಡ ಜನತೆಗೆ ಅರ್ಪಿಸುತ್ತೇನೆ.

*

# ಪ್ರಕಾಶಕರ ಮಾತು

## ಪ್ರೊ. ಮಲ್ಲೇಪುರಂ ಜಿ. ವೆಂಕಟೇಶ
ಅಧ್ಯಕ್ಷರು, ಕನ್ನಡ ಪುಸ್ತಕ ಪ್ರಾಧಿಕಾರ

ಸಮಗ್ರ ವಚನ ಸಂಪುಟಗಳ ಪರಿಷ್ಕೃತ ಆವೃತ್ತಿ ಪ್ರಕಟಣೆ ಕರ್ನಾಟಕ ಸಾಂಸ್ಕೃತಿಕ ಇತಿಹಾಸದಲ್ಲಿ ನಡೆದಿರುವ ಒಂದು ದಿವ್ಯಘಟನೆ. ವಚನಸಾಹಿತ್ಯದ ಪ್ರಕಟಣೆಗೆ ಸುಮಾರು ಎಂಬತ್ತು ವರ್ಷಗಳ ಇತಿಹಾಸವಿದೆ. ವಚನಪಿತಾಮಹ ಶ್ರೀ ಫ. ಗು. ಹಳಕಟ್ಟಿ ಅವರಿಂದ ಪ್ರಕಟಣೆಯ ದಿವ್ಯಘಟನೆ ಆರಂಭಗೊಂಡಿತು. ಇದೀಗ ಡಾ. ಎಂ. ಎಂ. ಕಲಬುರ್ಗಿಯವರ ಪ್ರಧಾನ ಸಂಪಾದಕತ್ವದ ಮೂಲಕ ಸಹಸ್ರಮಾನದ ಸೂರ್ಯೋದಯದ ವೇಳೆಗೆ ಇದು ಒಂದು ಪೂರ್ಣ ಘಟ್ಟಕ್ಕೆ ಬಂದಿದೆ. ಶರಣ ಸಾಹಿತ್ಯದ ಪ್ರಕಟಣೆಯ ಇತಿಹಾಸದಲ್ಲಿ ಇದು ಚಾರಿತ್ರಿಕ ಘಟನೆಯೇ ಸರಿ. ಈ ನಡುವೆ ವಚನಸಾಹಿತ್ಯದ ಸಹಸ್ರಾರು ಬಿಡಿ ಪ್ರಕಟಣೆಗಳು ಹೊರಬಂದಿವೆ. ವಿಶ್ವವಿದ್ಯಾಲಯಗಳು, ಖಾಸಗಿ ಸಂಸ್ಥೆಗಳು, ಮಠಗಳು, ಶಿಕ್ಷಣ ಕೇಂದ್ರಗಳು, ಖಾಸಗಿ ಪ್ರಕಾಶಕರು, ಆಸಕ್ತ ಲೇಖಕರು ಬಿಡಿಬಿಡಿಯಾಗಿ ವಚನಸಾಹಿತ್ಯದ ಪ್ರಕಟಣೆಗಳನ್ನು ಹೊರತಂದಿದ್ದಾರೆ. ನಾವು ಪ್ರೀತಿಯಿಂದ ಇವರನ್ನೆಲ್ಲ ಈ ಹೊತ್ತಿನಲ್ಲಿ ನೆನೆಯುವುದು, ಆ ಪಾತ್ರಃಸ್ಮರಣೀಯರ ಹಾದಿಯಲ್ಲಿ ಮುನ್ನಡೆಯುವುದು ನಮ್ಮ ಸಾಂಸ್ಕೃತಿಕ ಕರ್ತವ್ಯ.

ಸಮಗ್ರ ವಚನ ಸಂಪುಟಗಳು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯಿಂದ ೧೯೯೩ರಲ್ಲಿ ಪ್ರಕಟಗೊಂಡಿದ್ದವು. ಆ ಸಂಪುಟಗಳು ಪ್ರಕಟವಾದ ವರ್ಷವೇ ಕನ್ನಡಿಗರ ಮನೆಯನ್ನು ಸೇರಿಕೊಂಡವು. ಆದರೆ, ಸಂಪುಟಗಳ ಬೇಡಿಕೆ ಮಹಾಜನರಿಂದ ಇದ್ದೇ ಇತ್ತು. ಅನಂತರ ಕರ್ನಾಟಕ ಸರ್ಕಾರ ಪರಿಷ್ಕೃತ ಆವೃತ್ತಿಗೆ ತಾತ್ವಿಕ ಒಪ್ಪಿಗೆ ನೀಡಿತು. ಹೀಗೆ ಒಪ್ಪಿಗೆ ನೀಡಿದ ಸಂಸ್ಕೃತಿ ಸಂಪನ್ನರೂ ಮುಖ್ಯಮಂತ್ರಿಗಳೂ ಆದ ಸನ್ಮಾನ್ಯ ಶ್ರೀ ಎಸ್. ಎಂ. ಕೃಷ್ಣ ಅವರನ್ನು ತುಂಬು ಹೃದಯದಿಂದ ಈ ಪ್ರಕಟಣೆಯ ದಿವ್ಯಘಟನೆಯ ಹೊತ್ತಿನಲ್ಲಿ ಸ್ಮರಿಸಿಕೊಳ್ಳುತ್ತೇನೆ. ಅನಂತರ ನಾಡಿನ ಶ್ರೇಷ್ಠ ವಿದ್ವಾಂಸರಾದ ಡಾ. ಎಂ. ಎಂ. ಕಲಬುರ್ಗಿ ಅವರ ಪ್ರಧಾನ ಸಂಪಾದಕತ್ವದಲ್ಲಿ ವಚನ ಸಂಪುಟಗಳ ಪರಿಷ್ಕೃತ ಆವೃತ್ತಿ ಸಿದ್ಧಗೊಂಡವು. ಕನ್ನಡ ಮತ್ತು ಸಂಸ್ಕೃತಿ ಇಲಾಖೆಯು ಈ ಸಂಪುಟಗಳನ್ನು ಪ್ರಕಟಿಸಬೇಕಿತ್ತು. ಆದರೆ, ಆ ಕಾರ್ಯವನ್ನು ಕನ್ನಡ ಪುಸ್ತಕ ಪ್ರಾಧಿಕಾರಕ್ಕೆ ಒಪ್ಪಿಸಿದ್ದು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಔದಾರ್ಯ; ಅದನ್ನು ಪಡೆದು ಪ್ರಕಟಿಸುತ್ತಿರುವುದು ಪುಸ್ತಕ ಪ್ರಾಧಿಕಾರದ ಭಾಗ್ಯ. ಈ ಭಾಗ್ಯಕ್ಕೆ ಕಾರಣರಾದವರು ಕನ್ನಡ ಮತ್ತು ಸಂಸ್ಕೃತಿ

ಇಲಾಖೆಯ ಸಚಿವೆಯರಾದ ಮಾನ್ಯ ಶ್ರೀಮತಿ ರಾಣಿ ಸತೀಶ್ ಮತ್ತು ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯದ ನಿರ್ದೇಶಕರಾದ ಶ್ರೀ ಕೆ. ಸಿ. ರಾಮಮೂರ್ತಿ. ಇವರಿಬ್ಬರ ಆಸಕ್ತಿಯ ಫಲ ಈ ಕಾರ್ಯವನ್ನು ಆಗುಗೊಳಿಸಿತು. ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಮಾನ್ಯ ಸಚಿವೆಯರ ಆಪ್ತ ಕಾರ್ಯದರ್ಶಿ ಡಾ. ಎ. ಆರ್. ಮಂಜುನಾಥ್, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಕಾರ್ಯದರ್ಶಿ ಶ್ರೀ ಸಿ. ಎಸ್. ಕೇದಾರ್, ಕನ್ನಡ ಸಂಸ್ಕೃತಿ ನಿರ್ದೇಶನಾಲಯದ ಜಂಟಿ ನಿರ್ದೇಶಕ ಶ್ರೀ ಕಾ. ತ. ಚಿಕ್ಕಣ್ಣ ಪ್ರಕಟಣೆಯ ವಿವಿಧ ಹಂತಗಳಲ್ಲಿ ನನಗೆ ನೆರವಾಗಿದ್ದಾರೆ. ಈ ಮೇಲಿನ ಎಲ್ಲ ಮಹನೀಯರಿಗೂ ಕನ್ನಡ ಪುಸ್ತಕ ಪ್ರಾಧಿಕಾರವು ಅನನ್ಯವಾದ ಕೃತಜ್ಞತೆಯನ್ನು ಅರ್ಪಿಸುತ್ತದೆ.

ಸಮಗ್ರವಚನ ಸಂಪುಟಗಳ ಪರಿಷ್ಕೃತ ಆವೃತ್ತಿಯ ಸಂಪಾದಕ ಮಂಡಳಿಯ ವಿದ್ವಾಂಸರಾದ ಡಾ. ಎಂ. ಎಂ. ಕಲಬುರ್ಗಿ, ಡಾ. ಎಂ. ಚಿದಾನಂದಮೂರ್ತಿ, ಡಾ. ಸಿ. ಪಿ. ಕೃಷ್ಣಕುಮಾರ್, ಡಾ. ಎಸ್. ವಿದ್ಯಾಶಂಕರ್, ಎಸ್. ಶಿವಣ್ಣ ಇವರನ್ನು, ಕನ್ನಡ ಪುಸ್ತಕ ಪ್ರಾಧಿಕಾರದ ಮೂಲಕ ಹೊರತರಲು ಒಪ್ಪಿಗೆ ನೀಡಿದ ಪುಸ್ತಕ ಪ್ರಾಧಿಕಾರದ ಸ್ಥಾಯಿಸಮಿತಿ ಸದಸ್ಯರಾದ ಪ್ರೊ. ರಾಮೇಗೌಡ, ಶ್ರೀ ಆರ್. ಜಿ. ಹಳ್ಳಿ ನಾಗರಾಜ್, ಪ್ರೊ. ಸಿದ್ಧಪ್ಪ ಉತ್ನಾಳ್, ಶ್ರೀ ಛಾಯಾಪತಿ ಮತ್ತು ಶ್ರೀಮತಿ ಇಂದಿರಾ ಶಿವಣ್ಣ ಇವರನ್ನು ತುಂಬು ಮನಸ್ಸಿನಿಂದ ನೆನೆಯುತ್ತೇನೆ. ಹದಿನೈದು ಸಂಪುಟಗಳ ಅಕ್ಷರ ಜೋಡಣೆ ಮಾಡಿಕೊಟ್ಟವರನ್ನು, ಬಹು ಅಂದವಾಗಿ ಮುದ್ರಿಸಿದವರನ್ನು, ಸುಂದರವಾಗಿ ಮತ್ತು ಆಕರ್ಷಕವಾಗಿ ಸಂಪುಟಗಳನ್ನು ಬೈಂಡ್ ಮಾಡಿಕೊಟ್ಟವರನ್ನು, ಮುಖಪುಟ ವಿನ್ಯಾಸ ಮಾಡಿಕೊಟ್ಟವರನ್ನು, ತುಂಬು ಪ್ರೀತಿಯಿಂದ ನೆನೆಯುವುದು ನನ್ನ ಕರ್ತವ್ಯ. ಇವರ ಮುದ್ರಣ ಪರಿಣತಿಯ ಫಲ ಈ ಸಂಪುಟಗಳಿಗೆ ದೊರಕಿ ಅಂದವಾಗಲು ಕಾರಣವಾಗಿದೆ. ಪುಸ್ತಕ ಪ್ರಾಧಿಕಾರದ ಆಡಳಿತಗಾರರಾದ ಶ್ರೀ ಬಲವಂತರಾವ್ ಪಾಟೀಲ ಸನ್ನೊಡನೆ ಉದ್ದಕ್ಕೂ ಸಹಕರಿಸಿದ್ದಾರೆ. ಈ ಮೇಲೆ ಹೆಸರಿಸಿದ ಎಲ್ಲ ಮಹನೀಯರನ್ನು ಕೃತಜ್ಞತಾಪೂರ್ವಕವಾಗಿ ನೆನೆಯುತ್ತೇನೆ.

ಕನ್ನಡ ಪುಸ್ತಕ ಪ್ರಾಧಿಕಾರವು ಪ್ರಕಟಿಸುತ್ತಿರುವ ಸಮಗ್ರ ವಚನ ಸಂಪುಟಗಳನ್ನು ಕನ್ನಡದ ಮಹಾಜನತೆ ಪ್ರೀತಿಯಿಂದ ಸ್ವೀಕರಿಸಬೇಕೆಂದು ಬೇಡುತ್ತೇನೆ.

■■

❊

# ಸಂಪಾದಕೀಯ

## ಡಾ. ಎಂ. ಎಂ. ಕಲಬುರ್ಗಿ

ಪ್ರಧಾನ ಸಂಪಾದಕರು

ಕರ್ನಾಟಕದ ಇತಿಹಾಸದಲ್ಲಿ ಶಿವಶರಣರ ಚಳುವಳಿ ಒಂದು ಅಪೂರ್ವ ಘಟನೆ, ವಚನಗಳ ಸೃಷ್ಟಿ ಒಂದು ಅನನ್ಯ ಪ್ರಯೋಗ. ಸಮಾಜದ ಎಲ್ಲ ವರ್ಗ, ಎಲ್ಲ ವರ್ಣಗಳ ಜನಸಮುದಾಯ ಬಸವಣ್ಣನವರ ನೇತೃತ್ವದಲ್ಲಿ ಕೈಕೊಂಡಿದ್ದ ವ್ಯಕ್ತಿಕಲ್ಯಾಣ ಮತ್ತು ಸಮಾಜಕಲ್ಯಾಣ ಚಳುವಳಿಯ ಸೃಷ್ಟಿಯೆನಿಸಿದ ಈ ವಚನಗಳು, ಜಾಗತಿಕ ಸಾಹಿತ್ಯದ ಮಹತ್ವಪೂರ್ಣ ಭಾಗವೆನಿಸಿವೆ.

'ವಚನ' ಶಬ್ದಕ್ಕೆ ಇಲ್ಲಿ ಗದ್ಯ ಸಾಹಿತ್ಯಪ್ರಕಾರವೆಂದು ಅರ್ಥವಲ್ಲ; ಪ್ರತಿಜ್ಞೆ, ಆತ್ಮಸಾಕ್ಷಿಯ ಮಾತು ಎಂದು ಅರ್ಥ. ನಡೆ ಹೇಗೇ ಇರಲಿ, ನುಡಿ ಮಾತ್ರ ಕಲಾತ್ಮಕವಾಗಿದ್ದುದು 'ರಚನೆ'ಯಾದರೆ, ನಡೆದಂತೆ ನುಡಿದ ಆತ್ಮಸಾಕ್ಷಿಯ ವಾಣಿ 'ವಚನ'ವೆನಿಸುತ್ತದೆ.

ವಚನಗಳು ಆಚಾರ್ಯರ ಸಾಹಿತ್ಯವಲ್ಲ, ಅನುಭಾವಿಗಳ ಸಾಹಿತ್ಯ. ಆಚಾರ್ಯರು ಜೀವಿಸಿರುವಾಗಲೇ ತಮ್ಮ ವಿಚಾರಗಳನ್ನು ಬರೆದು, ಅವುಗಳಿಗೆ ಸಂವಿಧಾನಾತ್ಮಕ ಮುದ್ರೆ ಒತ್ತುತ್ತಾರೆ. ಅನುಭಾವಿಗಳು ಮಾತ್ರ ತಮ್ಮ ಚಿಂತನೆಯನ್ನು ಹೃದಯದಿಂದ ಹೃದಯಕ್ಕೆ ಮುಟ್ಟುವಂತೆ ಬಿಡಿಮಾತುಗಳ ಮೂಲಕ ಹೇಳುತ್ತಾರೆ. ಬಿಡಿಮುತ್ತುಗಳಂತೆ ಸೂರೆಯಾದ ಅವುಗಳನ್ನು ಸಂಗ್ರಹಿಸುವ, ಸಂಕಲಿಸುವ, ಸಂಪಾದಿಸುವ ಕೆಲಸವನ್ನು ಉತ್ತರಕಾಲೀನ ಅನುಯಾಯಿಗಳು ಮಾಡುತ್ತಾರೆ. ಏಸುವಿನ ವಾಣಿಯಾದ ಬೈಬಲ್, ಮಹಮ್ಮದನ ಉಪದೇಶವಾದ ಕುರಾನ್, ಬುದ್ಧನ ಬೋಧೆಯಾದ ತ್ರಿಪಿಟಕ, ಶರಣರ ಸಂದೇಶವಾದ ವಚನಕೃತಿಗಳು ಈ ಬಗೆಯ ಉತ್ತರಕಾಲೀನ ಸಂಕಲನಗಳಾಗಿವೆ.

ಮೂಲತಃ ವಚನನಿಧಿ ಜನರಿಂದ, ಜನರಿಗಾಗಿ ಹುಟ್ಟಿ, ಜನರ ಮಧ್ಯದಲ್ಲಿ ಬಾಳಿದ ಸಾಹಿತ್ಯವಾಗಿದೆ. ಹೀಗಾಗಿ ಹನ್ನೆರಡರಿಂದ ಹದಿನೈದನೆಯ ಶತಮಾನಕ್ಕೆ ಬರುವಷ್ಟರಲ್ಲಿ ಅದಕ್ಕೆ ವಿಪುಲ ಭಿನ್ನಪಾಠಗಳು ಹುಟ್ಟಿಕೊಂಡವು. ಆಮೇಲೆ ಸಂಕಲನ-ಸಂಪಾದನ ಕಾರ್ಯದಿಂದಾಗಿ ಕೆಲವೊಮ್ಮೆ ಪ್ರಕ್ಷಿಪ್ತ ವಚನಗಳೂ ತಲೆಯೆತ್ತಿದವು. ಈ ಗೊಂದಲ ಕಾರಣವಾಗಿ ಕವಿಸಾಹಿತ್ಯಕ್ಕಿಂತ ವಚನಸಾಹಿತ್ಯದ ಸಂಪಾದನಕಾರ್ಯ ತುಂಬ ಜಟಿಲಸ್ವರೂಪ ದ್ದಾಗಿದೆ.

ಪ್ರಾಚೀನ ಕನ್ನಡ ಸಾಹಿತ್ಯದ ಪ್ರಕಟನಕಾರ್ಯವನ್ನು ಮೊದಲು ಕೈಗೆತ್ತಿಕೊಂಡವರು, ಕ್ರೈಸ್ತ ಪಾದ್ರಿಗಳು. ಜೈನ ಪುರಾಣ-ಕಾವ್ಯಗಳನ್ನು, ವೈದಿಕ ಪುರಾಣ-ಕೀರ್ತನೆಗಳನ್ನು, ವೀರಶೈವ ಶಾಸ್ತ್ರ-ಪುರಾಣಗಳನ್ನು ಪ್ರಕಟಿಸಿದ ಇವರು, ವಚನಸಾಹಿತ್ಯವನ್ನು ಮಾತ್ರ ತಪ್ಪಿಯೂ ಪ್ರಕಟಿಸಲಿಲ್ಲ. ದೇಶೀ ವಿದ್ವಾಂಸರೇ ಈ ಕೆಲಸವನ್ನು ಪ್ರಾರಂಭ ಮಾಡಬೇಕಾಯಿತು. ಈ

ದಿಸೆಯಲ್ಲಿ ಮೊದಲು ಪ್ರಕಟವಾದ ವಚನಕೃತಿ (೧೮೮೩) 'ಅಪ್ರಮಾಣ ಕೂಡಲ ಸಂಗಮದೇವಾ' ಮುದ್ರಿಕೆಯ ವಚನಗಳನ್ನೊಳಗೊಂಡ "ಶಿಖಾರತ್ನಪ್ರಕಾಶ"[೧]. ಆಮೇಲೆ ಒಂದು ಮೈಲಿಗಲ್ಲಿನಂತೆ ಪ್ರಕಟವಾದ ವಚನಕೃತಿ, ಬಸವಣ್ಣನವರ ಷಟ್‌ಸ್ಥಲವಚನ ಸಂಪುಟ. ಅದು ಮೊದಲು ಬೆಳಕು ಕಂಡುದು ೧೮೮೯ರಲ್ಲಿ[೨]. ಅಲ್ಲಿಂದ ಸರಿಯಾಗಿ ಒಂದು ಶತಮಾನ ಕಳೆಯುವಷ್ಟರಲ್ಲಿ ಅಂದರೆ ೧೯೮೮ರಲ್ಲಿ ಈ 'ಸಮಗ್ರ ವಚನಸಾಹಿತ್ಯದ ಜನಪ್ರಿಯ ಆವೃತ್ತಿ ಪ್ರಕಟನ ಯೋಜನೆ' ಅಸ್ತಿತ್ವಕ್ಕೆ ಬಂದುದು ಒಂದು ಯೋಗಾಯೋಗವಾಗಿದೆ; ವಚನಸಾಹಿತ್ಯದ ಪ್ರಕಟನಚರಿತ್ರೆಯ ಶತಮಾನಸ್ಮರಣೆಯಾಗಿದೆ.

ಈ ನೂರು ವರ್ಷಗಳ ಕಾಲವ್ಯಾಪ್ತಿಯಲ್ಲಿ ವಚನಸಾಹಿತ್ಯ ಪ್ರಕಟಣೆಗಾಗಿ ಅನೇಕರು ದುಡಿದಿರುವರಾದರೂ ಯೋಜನಾಬದ್ಧ ವ್ಯಾಪಕ ಪ್ರಯತ್ನಗಳು, ವಿಜಾಪುರ, ಧಾರವಾಡ, ಗದಗಗಳಲ್ಲಿ ಹೀಗೆ ಜರುಗಿವೆ :

೧. ಶಿವಾನುಭವ ಗ್ರಂಥಮಾಲೆ, ವಿಜಾಪುರ - ಡಾ. ಫ. ಗು. ಹಳಕಟ್ಟಿ

೨. ಕನ್ನಡ ಅಧ್ಯಯನ ಪೀಠ, ಕ. ವಿ. ಧಾರವಾಡ - ಡಾ. ಆರ್. ಸಿ. ಹಿರೇಮಠ

೩. ತೋಂಟದಾರ್ಯಮಠ, ಗದಗ - ಡಾ. ಎಂ. ಎಂ. ಕಲಬುರ್ಗಿ

ವಚನಸಾಹಿತ್ಯದ ಪ್ರಕಟನ ಕಾರ್ಯ ಹೀಗೆ ವಿಜಾಪುರದಲ್ಲಿ ಪ್ರಾರಂಭವಾಗಿ, ಧಾರವಾಡದಲ್ಲಿ ಬೆಳೆದು, ಗದುಗಿನಲ್ಲಿ ಒಂದು ನಿಲುಗಡೆಗೆ ಬರುತ್ತಿದ್ದಂತೆಯೇ, ಈಗ ನಾಲ್ಕನೆಯ ಘಟ್ಟದಲ್ಲಿ 'ಸಮಗ್ರ ವಚನಸಾಹಿತ್ಯದ ಜನಪ್ರಿಯ ಆವೃತ್ತಿ ಪ್ರಕಟನ ಯೋಜನೆ'ಯ ಅಂಗವಾಗಿ, ೧೫ ಸಂಪುಟಗಳು ಕರ್ನಾಟಕ ಸರಕಾರದ ಮೂಲಕ ಪ್ರಕಟವಾಗುತ್ತಲಿವೆ. ಸುಮಾರು ೧೧೦ ಜನ ಪ್ರಕ್ಷಿಪ್ತ ವಚನಕಾರರನ್ನೂ ಪ್ರಕ್ಷಿಪ್ತವಾಗಿರಬಹುದಾದ ಅನೇಕ ವಚನಗಳನ್ನೂ ಕೈಬಿಟ್ಟು ಸಂಯೋಜಿಸಲಾದ ಈ ಹದಿನೈದು ಸಂಪುಟಗಳ ಒಟ್ಟು ಪುಟ ಸುಮಾರು ಹತ್ತು ಸಾವಿರ; ಒಟ್ಟು ವಚನ ಸಂಖ್ಯೆ ಸುಮಾರು ಇಪ್ಪತ್ತು ಸಾವಿರ. ವಚನಸಾಹಿತ್ಯವನ್ನು ಒಮ್ಮೆ ಸಮಗ್ರವಾಗಿ ಹೊರತಂದ ಪ್ರಥಮ ಮಹತ್ವಾಕಾಂಕ್ಷೆಯ ಯೋಜನೆಯಿದು. ಈ ಸಾಹಿತ್ಯದ ಗಡಿಗೆರೆಗಳನ್ನು, ಸಂಖ್ಯಾಬಾಹುಳ್ಯವನ್ನು ವ್ಯವಸ್ಥೆಗೊಳಿಸಿ ಕೊಟ್ಟು, ವಿದ್ವಾಂಸರ ಅಧ್ಯಯನದ ಮುಂದುವರಿಕೆಗೆ ಒಂದು ನಿರ್ದಿಷ್ಟ ಚೌಕಟ್ಟನ್ನು ಒದಗಿಸಿದ ಹಿರಿಮೆ ಈ ಯೋಜನೆಗೆ ಸಲ್ಲುತ್ತದೆ.

ಈ ಯೋಜನೆಯ ಅಂಗವಾಗಿ ಬಸವಣ್ಣನವರ ವಚನ, ಪ್ರಭುದೇವರ ವಚನ, ಚೆನ್ನಬಸವಣ್ಣನವರ ವಚನ, ಸಿದ್ಧರಾಮೇಶ್ವರ ವಚನ, ಶಿವಶರಣೆಯರ ವಚನ - ಹೀಗೆ ಐದು ಸಂಪುಟಗಳು, ಬಸವ ಸಮಕಾಲೀನ ಮಿಕ್ಕ ಶರಣರ ವಚನಗಳ ನಾಲ್ಕು ಸಂಪುಟಗಳು,

---

೧. ಮೊದಲು ಪ್ರಕಟವಾದ ವಚನಕೃತಿ ಅಖಂಡೇಶ್ವರ ವಚನ (೧೮೮೨)ವೆಂದು ಡಾ. ಬಿ. ನಂಜುಂಡ ಸ್ವಾಮಿ ಅವರ ಅಭಿಪ್ರಾಯ. (ಬಸವಪಥ ೧೬.೬)

೨. ಬಸವಣ್ಣನವರ ಷಟ್ಸ್ಥಲದ ವಚನಗಳು ಪ್ರಥಮ ಸಲ ಬೆಳಕುಕಂಡುದು ೧೮೮೬ರಲ್ಲಿಯೆಂದು ಡಾ. ಬಿ. ನಂಜುಂಡಸ್ವಾಮಿ ಹೇಳುತ್ತಾರೆ. (ಬಸವಪಥ ೧೫-೫ ಪು. ೪೫)

ಬಸವೋತ್ತರ ಕಾಲೀನ ಶರಣರ ವಚನಗಳ ಐದು ಸಂಪುಟಗಳು ಮತ್ತು ಒಂದು ವಚನ ಪರಿಭಾಷಾಕೋಶ - ಹೀಗೆ ಹದಿನೈದು ಸಂಪುಟಗಳು ಬೆಳಕುಕಾಣುತ್ತಲಿವೆ. ಇವುಗಳಲ್ಲಿ ಮೊದಲಿನ ಐದು ಸಂಪುಟಗಳು (ಬಸವಣ್ಣ, ಅಲ್ಲಮಪ್ರಭು, ಚೆನ್ನಬಸವಣ್ಣ, ಸಿದ್ಧರಾಮ, ಶಿವಶರಣೆಯರು) ಈಗಾಗಲೇ ಕರ್ನಾಟಕ ವಿಶ್ವವಿದ್ಯಾಲಯದ ಮೂಲಕ ಪ್ರಕಟವಾಗಿದ್ದವು. ಆ ಬಳಿಕ ಲಭ್ಯವಾದ ನೂರಾರು ಹೊಸ ವಚನಗಳನ್ನು ಸೇರಿಸಿ, ಈ ಐದೂ ಸಂಪುಟಗಳಿಗೆ ಸಮಗ್ರರೂಪ ಕೊಟ್ಟಿದ್ದೇವೆ ಮತ್ತು ಪರಿಷ್ಕರಿಸಿದ್ದೇವೆ.

ಬಸವ ಸಮಕಾಲೀನ ಮಿಕ್ಕ ಶರಣರ ನಾಲ್ಕು ಸಂಪುಟಗಳ ಕೆಲಸ ಈವರೆಗೆ ಸಮರ್ಪಕವಾಗಿ ನಡೆದಿರಲಿಲ್ಲ. ಈ ಶರಣರ ಸಂಖ್ಯೆ, ಇವರ ವಚನಸಂಖ್ಯೆ ಅಸ್ಪಷ್ಟವಾಗಿಯೇ ಉಳಿದಿದ್ದಿತು. ವಚನಗಳೂ ಅಲ್ಲಿಷ್ಟು, ಇಲ್ಲಿಷ್ಟು ಪ್ರಕಟವಾಗಿದ್ದವು. ಒಂದಿಷ್ಟು ಅಪ್ರಕಟಿತ ಸ್ಥಿತಿಯಲ್ಲಿಯೇ ಉಳಿದುಬಿಟ್ಟಿದ್ದವು. ಇವೆಲ್ಲವುಗಳನ್ನು ಸಂಗ್ರಹಿಸಿ, ಪರಿಷ್ಕರಿಸಿ ಈ ನಾಲ್ಕೂ ಸಂಪುಟಗಳಿಗೆ ಸಮಗ್ರ ರೂಪ ಕೊಟ್ಟಿದ್ದೇವೆ. ಒಟ್ಟಿನಲ್ಲಿ ಬಸವಯುಗದ ಈ ಎಲ್ಲ ಒಂಬತ್ತು ಸಂಪುಟಗಳಿಗೆ ಸುಮಾರು ಸಾವಿರದಷ್ಟು ಹೊಸ ವಚನಗಳನ್ನು ಸೇರಿಸಿದ್ದೇವೆ.

ಬಸವೋತ್ತರ ಕಾಲೀನ ಶರಣರ ಸಂಪುಟಗಳ ಕೆಲಸ ಇನ್ನೂ ಅಲಕ್ಷಿತವಾಗಿದ್ದಿತು. ಈವರೆಗೆ ತಿಳಿಮಬಂದಿದ್ದ ವಚನಕಾರರ ಹೊಸ ವಚನಗಳನ್ನು ಶೋಧಿಸುವುದರೊಂದಿಗೆ, ಅನೇಕ ಹೊಸ ವಚನಕಾರರನ್ನೂ ಬೆಳಕಿಗೆ ತಂದಿದ್ದೇವೆ. ಇದರಿಂದಾಗಿ ಬಸವೋತ್ತರಯುಗದ ಶರಣರನ್ನೂ ಅವರ ವಚನಗಳ ವ್ಯಾಪ್ತಿಯನ್ನೂ ಜನತೆಯ ಮುಂದಿಟ್ಟ ಪ್ರಥಮ ಕೀರ್ತಿ ಈ ಐದು ಸಂಪುಟಗಳಿಗೆ ಸಲ್ಲುತ್ತದೆ. ಹೀಗೆ ಬಸವಯುಗ, ಬಸವೋತ್ತರಯುಗಗಳ ವಚನಸಾಹಿತ್ಯಕ್ಕೆ ಸಂಬಂಧಪಟ್ಟ ಎಲ್ಲ ಕೊರತೆಗಳನ್ನು ತುಂಬಿಕೊಡುವ ಒಂದು ಪರಿಪೂರ್ಣ ಯೋಜನೆ ಇದಾಗಿದೆ. ಮೊದಲ ಬಾರಿಗೆ ೧೯ನೆಯ ಶತಮಾನದವರೆಗಿನ ಎಲ್ಲ ಶರಣರ ಎಲ್ಲ ವಚನಗಳನ್ನು ಒಂದೆಡೆ ಸಂಗ್ರಹಿಸಿ, ಒಂದು ಕ್ರಮಕ್ಕೆ ಅಳವಡಿಸಿ, ಸಂಪುಟ ಶ್ರೇಣಿಯಲ್ಲಿ ಹೊರತಂದ ದೊಡ್ಡಪ್ರಯತ್ನ ಇಲ್ಲಿದೆ.

ವಚನಸಾಹಿತ್ಯದ ಪರಿಷ್ಕರಣಕಾರ್ಯ ತುಂಬ ಜಟಿಲವಾದುದು. ೧. ಎಲ್ಲ ಶರಣರ ಎಲ್ಲ ವಚನಗಳನ್ನು ಎಲ್ಲ ಪ್ರಾಚೀನ ಆಕರಗಳಿಂದ ಸಂಗ್ರಹಿಸುವುದು, ೨. ಪ್ರಕ್ಷಿಪ್ತವಾಗಿರ ಬಹುದಾದ ವಚನಕಾರರನ್ನು, ವಚನಗಳನ್ನು ಕೈಬಿಡುವುದು, ೩. ನಿಜವಚನಗಳ ಪಾಠವನ್ನು ಪರಿಷ್ಕರಿಸುವುದು - ಇದು ಈ ಯೋಜನೆಯ ಉದ್ದೇಶವಾಗಿದೆ. ಈ ಉದ್ದೇಶ ಸಾಧನೆಗಾಗಿ ಎಲ್ಲ ಪ್ರಾಚೀನ ಆಕರಗಳಿಂದ ಅಂದರೆ ಸುಮಾರು ೧೦೮ ಆಕರಗಳಿಂದ ಎಲ್ಲ ವಚನಗಳನ್ನು ಸಂಗ್ರಹಿಸಿ, ಪ್ರತಿಯೊಂದು ವಚನದ ಕೆಳಗೆ ಅದರ ಎಲ್ಲ ಆಕರಗಳನ್ನು ನಮೂದಿಸಿದ 'ವಚನ ಬ್ಯಾಂಕ'ನ್ನು ಅಸ್ತಿತ್ವಕ್ಕೆ ತರಲಾಯಿತು. ಒಂದು ವಚನಕ್ಕೆ ಇರುವ ವಿವಿಧ ಪಾಠಾಂತರ, ರೂಪಾಂತರಗಳ ಸ್ವರೂಪವನ್ನು ಅರ್ಥಮಾಡಿಕೊಳ್ಳಲು, ಮುದ್ರಿಕೆಯ ವ್ಯತ್ಯಾಸವನ್ನು ಗಮನಿಸಲು, ಒಬ್ಬ ವಚನಕಾರನ ಒಟ್ಟು ವಚನಗಳ ಸಂಖ್ಯೆಯನ್ನು ನಿರ್ಧರಿಸಲು, ಕೊನೆಯದಾಗಿ ವಚನದ ನಿಜಪಾಠವನ್ನು ನಿರ್ಣಯಿಸಲು ಈ ಬ್ಯಾಂಕ್ ತುಂಬ ನೆರವಾಯಿತು.

ಇವು ಜನಪ್ರಿಯ ಆವೃತ್ತಿಗಳಾಗಿರುವುದರಿಂದ ಲಭ್ಯವಿರುವ ಪಾಠಾಂತರಗಳಲ್ಲಿ ಯೋಗ್ಯವಾದುದನ್ನು ಸ್ವೀಕರಿಸಿ, ಅನ್ಯಪಾಠಗಳನ್ನು ಅಡಿಯಲ್ಲಿ ನಮೂದಿಸದೆ ಕೈಬಿಟ್ಟಿದ್ದೇವೆ. ಜನಸಾಮಾನ್ಯರ ಅನುಕೂಲತೆಗಾಗಿ ಶಕಟರೇಫೆಗೆ ಬದಲು ರೇಫೆ ಇಟ್ಟುಕೊಂಡಿದ್ದೇವೆ. ಅಭ್ಯಾಸಿಗಳ ಉಪಯೋಗ ದೃಷ್ಟಿಯಿಂದ ಕಠಿಣ ಪದಕೋಶ, ಅಕಾರಾದಿ, ಆಕರಸೂಚಿಗಳನ್ನು ಅನುಬಂಧದಲ್ಲಿ ಕೊಟ್ಟಿದ್ದೇವೆ. ಹೆಚ್ಚಿನದಾಗಿ ಪಾರಿಭಾಷಿಕ ಪದಗಳ ಒಂದು ಸ್ವತಂತ್ರ ಕೋಶವನ್ನೇ ಪ್ರಕಟಿಸಿದ್ದೇವೆ. ಒಟ್ಟಿನಲ್ಲಿ, ಇವು ಜನಪ್ರಿಯ ಆವೃತ್ತಿಗಳಾದರೂ ವಿದ್ವಜ್ಜನಪ್ರಿಯ ಆವೃತ್ತಿಗಳೂ ಆಗಬೇಕೆಂಬ ಆದರ್ಶದಲ್ಲಿ ಈ ಸಂಪುಟಗಳನ್ನು ರೂಪಿಸಲು ಪ್ರಯತ್ನಿಸಿದ್ದೇವೆ.

## ಕೃತಜ್ಞತೆ

ವಿಶ್ವವಿದ್ಯಾಲಯದಂಥ ಶಿಕ್ಷಣ ಸಂಸ್ಥೆಗಳು, ಲಿಂಗಾಯತ ವಿದ್ಯಾಭಿವೃದ್ಧಿ ಸಂಸ್ಥೆಯಂಥ ಸಾರ್ವಜನಿಕ ಸಂಸ್ಥೆಗಳು, ವೀರಶೈವ ಮಠಗಳಂಥ ಧಾರ್ಮಿಕ ಸಂಸ್ಥೆಗಳು, ಡಾ. ಫ. ಗು. ಹಳಕಟ್ಟಿಯವರಂಥ ವಿದ್ವಾಂಸ ವ್ಯಕ್ತಿಗಳು ನಿರಂತರ ದುಡಿದರೂ ವಚನಸಾಹಿತ್ಯ ಪೂರ್ಣಪ್ರಮಾಣದಲ್ಲಿ ಪ್ರಕಟವಾಗಲು ಒಂದುನೂರು ವರ್ಷ ಹಿಡಿದುದು ಅದರ ಗಾತ್ರಬಾಹುಳ್ಯಕ್ಕೆ ಸಾಕ್ಷಿಯಾಗಿದೆ. ನೂರುವರ್ಷ ದುಡಿದು, ಸಾಮಗ್ರಿಯನ್ನು ಪ್ರಕಟಿಸಿದ ಈ ಎಲ್ಲ ವ್ಯಕ್ತಿ-ಸಂಸ್ಥೆಗಳಿಗೆ ನಮ್ಮ ಕೃತಜ್ಞತಾಪೂರ್ವಕ ವಂದನೆಗಳು ಸಲ್ಲುತ್ತವೆ.

ಈ ಯೋಜನೆಯ ಕಾರ್ಯಾಲಯ ಅಸ್ತಿತ್ವಕ್ಕೆ ಬಂದು ಕೆಲಸ ಪ್ರಾರಂಭವಾದದ್ದು ಅಕ್ಟೋಬರ್ ೧೫, ೧೯೮೮ರಂದು. ಹಸ್ತಪ್ರತಿಗಳು ಅಚ್ಚಿಗೆ ಹೋದದ್ದು ೧೬ ಮಾರ್ಚ್ ೧೯೯೦ರಂದು. ಹೀಗೆ ಮೊದಲೇ ಯೋಜಿಸಿದಂತೆ ಎರಡು ವರ್ಷಗಳ ನಿರ್ದಿಷ್ಟ ಅವಧಿಯಲ್ಲಿ ಈ ಕೆಲಸವನ್ನು ಪೂರ್ಣಗೊಳಿಸಿದ್ದೇವೆ. ಪ್ರತಿಯೊಂದು ಹಂತದಲ್ಲಿಯೂ ಈ ಯೋಜನೆ ಸಕ್ರಮವಾಗಿ ಮುನ್ನಡೆಯುವುದಕ್ಕಾಗಿ 'ಸಂಪಾದಕ ಮಂಡಳಿ'ಯ ಸದಸ್ಯರಾದ ಡಾ. ಎಂ. ಚಿದಾನಂದಮೂರ್ತಿ, ಡಾ. ಸಿ. ಪಿ. ಕೃಷ್ಣಕುಮಾರ, ಡಾ. ಎಸ್. ವಿದ್ಯಾಶಂಕರ, ಶ್ರೀ ಎಸ್. ಶಿವಣ್ಣ ಅವರು ಉದ್ದಕ್ಕೂ ಬೆಲೆಯುಳ್ಳ ಸಲಹೆ-ಮಾರ್ಗದರ್ಶನ ನೀಡಿದ್ದಾರೆ. ಡಾ. ಎಚ್. ತಿಪ್ಪೇರುದ್ರಸ್ವಾಮಿ ಅವರು ಆರಂಭದ ಕೆಲವು ತಿಂಗಳು ಸಂಪಾದಕ ಮಂಡಳಿಯ ಸದಸ್ಯರಾಗಿ, ವಿಶ್ವಾಸದಿಂದ ನೆರವಾಗಿದ್ದಾರೆ. ಸಂಪಾದಕ ಮಿತ್ರರಾದ ಡಾ. ಬಿ. ವ್ಹಿ. ಮಲ್ಲಾಪುರ, ಡಾ. ಎಸ್. ವಿದ್ಯಾಶಂಕರ, ಡಾ. ವ್ಹಿ. ಬಿ. ರಾಜೂರ, ಡಾ. ಬಿ. ಆರ್. ಹಿರೇಮಠ, ಶ್ರೀ ಎಸ್. ಶಿವಣ್ಣ ತುಂಬ ಶ್ರಮ-ಶ್ರದ್ಧೆಗಳಿಂದ ಸಂಪಾದನ ಕೆಲಸ ಪೂರೈಸಿದ್ದಾರೆ. ಸಹಾಯಕ ಸಂಶೋಧಕರಾದ ಶ್ರೀಮತಿ ವಿಜಯಶ್ರೀ ಹಿರೇಮಠ, ಶ್ರೀ ವಾಯ್. ಎಂ. ಯಾಕೊಳ್ಳಿ, ಶ್ರೀ ಬಿ. ವ್ಹಿ. ಕೋರಿ ಅವರು ದಣಿವನ್ನು ಲೆಕ್ಕಿಸದೆ ದುಡಿದಿದ್ದಾರೆ. ಇವರೆಲ್ಲರಿಗೆ ನಾವು ಕೃತಜ್ಞರಾಗಿದ್ದೇವೆ.

ಈ ಯೋಜನೆಯನ್ನು ಅನುದಾನ ಮಾಡಿದ ಕರ್ನಾಟಕ ಸರಕಾರದ ಔದಾರ್ಯಕ್ಕೆ ನಮ್ಮ ಅಭಿನಂದನೆಗಳು ಸಲ್ಲುತ್ತವೆ. ಈ ಅವಧಿಯಲ್ಲಿ ಮುಖ್ಯಮಂತ್ರಿಗಳಾಗಿದ್ದ ಮಾನ್ಯ ಶ್ರೀ ರಾಮಕೃಷ್ಣ ಹೆಗಡೆ, ಶ್ರೀ ಎಸ್. ಆರ್. ಬೊಮ್ಮಾಯಿ, ಶ್ರೀ ವೀರೇಂದ್ರ ಪಾಟೀಲ, ಶ್ರೀ ಎಸ್. ಬಂಗಾರಪ್ಪ ಅವರಿಗೂ, ಸಾಹಿತಿಗಳೂ ಸಾಹಿತ್ಯ-ಸಂಸ್ಕೃತಿಗಳ ಗಾಢ ಆಸಕ್ತರೂ

ಆಗಿರುವ ಮುಖ್ಯಮಂತ್ರಿಗಳಾದ ಮಾನ್ಯ ಶ್ರೀ ಎಂ. ವೀರಪ್ಪ ಮೊಯಿಲಿ ಅವರಿಗೂ ಋಣಿಯಾಗಿದ್ದೇವೆ.

ಈ ಯೋಜನೆ ಅಸ್ತಿತ್ವಕ್ಕೆ ಬರುವಲ್ಲಿ ವಿಶೇಷ ಆಸಕ್ತಿ ವಹಿಸಿದವರು, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಅಂದಿನ ಸಚಿವರಾಗಿದ್ದ ಶ್ರೀ ಎಂ. ಪಿ. ಪ್ರಕಾಶ ಅವರು. ಸಾಹಿತ್ಯ-ಸಂಸ್ಕೃತಿಗಳ ಬಗ್ಗೆ ಅನನ್ಯ ಪ್ರೀತಿ-ಗೌರವ ಬೆಳೆಸಿಕೊಂಡಿರುವ ಶ್ರೀಯುತರಿಗೆ ನಾವು ಕೃತಜ್ಞರಾಗಿದ್ದೇವೆ. ಆಮೇಲೆ ಈ ಇಲಾಖೆಗೆ ಸಚಿವರಾಗಿ ಬಂದ ಶ್ರೀ ಎಂ. ವೀರಪ್ಪ ಮೊಯಿಲಿ, ಶ್ರೀ ಕೆ. ಎಚ್. ರಂಗನಾಥ, ಶ್ರೀ ಎಸ್. ರಮೇಶ್, ಇಂದಿನ ಸಚಿವರಾದ ಮಾನ್ಯ ಶ್ರೀ ಎಚ್. ವಿಶ್ವನಾಥ್ ಅವರಿಗೆ ನಮ್ಮ ಗೌರವಗಳು ಸಲ್ಲುತ್ತವೆ.

ಈ ಪ್ರಸಂಗದಲ್ಲಿ ಆತ್ಮೀಯ ಆಡಳಿತ ನಿರ್ದೇಶನ ಮಾಡಿದ ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯದ ಅಂದಿನ ನಿರ್ದೇಶಕರಾಗಿದ್ದ ಶ್ರೀ ಐ. ಎಂ. ವಿಠ್ಠಲಮೂರ್ತಿ, ಶ್ರೀ ಬಿ. ಪಾರ್ಥಸಾರಥಿ, ಕಮಿಷನರ್ ಡಾ. ಪಿ. ಎಸ್. ರಾಮಾನುಜಂ, ಇಂದಿನ ಕಮಿಷನರ್‌ರಾದ ಶ್ರೀ ಪಿ. ಎಸ್. ವಿ. ರಾವ್ ಅವರನ್ನೂ ಅಧಿಕ ನಿರ್ದೇಶಕರಾದ ಶ್ರೀ ಕೆ. ದೇವರಸಯ್ಯ, ಉಪನಿರ್ದೇಶಕರಾದ ಶ್ರೀ ಕಾ. ತ. ಚಿಕ್ಕಣ್ಣ ಅವರನ್ನೂ ನೆನೆಯುವುದು ಪ್ರೀತಿಯ ವಿಷಯವಾಗಿದೆ.

ಇಂಥ ಒಂದು ಬೃಹತ್ ಯೋಜನೆಗೆ ಕಾರ್ಯಾಲಯವೊಂದು ಅತ್ಯವಶ್ಯ. ಕರ್ನಾಟಕ ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಪೀಠದಲ್ಲಿ ಈ ಅವಕಾಶ ಕಲ್ಪಿಸಿಕೊಟ್ಟ ಕರ್ನಾಟಕ ವಿಶ್ವವಿದ್ಯಾಲಯದ ಅಂದಿನ ಕುಲಪತಿ ಡಾ. ಜಿ. ಕೆ. ನಾರಾಯಣರೆಡ್ಡಿ, ಇಂದಿನ ಕುಲಪತಿ ಡಾ. ಎಸ್. ರಾಮೇಗೌಡ ಅವರ ಔದಾರ್ಯವನ್ನು, ಪೀಠದ ಮುಖ್ಯಸ್ಥರ ಸಹಕಾರವನ್ನು ಕೃತಜ್ಞತೆಯಿಂದ ನೆನೆಯುತ್ತೇವೆ.

ಇದು ಒಂದು ದೊಡ್ಡ ಯೋಜನೆ. ಇದರ ಸಂಪಾದನೆಯ ಸಮಸ್ಯೆಗಳೂ ದೊಡ್ಡವು. ಪಾಠಾಂತರ, ರೂಪಾಂತರ, ಪ್ರಕ್ಷಿಪ್ತತೆ ಇತ್ಯಾದಿಗಳ ದಾಳಿಗೆ ಗುರಿಯಾಗುತ್ತ ಬಂದ ವ್ಯಾಪಕ ಪ್ರಮಾಣದ ಈ ಸಾಹಿತ್ಯವನ್ನು ಒಂದೆಡೆ ಸಂಗ್ರಹಿಸುವುದು, ಪುನರುಕ್ತಿಗಳನ್ನು ಗುರುತಿಸುವುದು, ಮುದ್ರಿಕೆ ಪಲ್ಲಟಗಳನ್ನು ಸರಿಪಡಿಸುವುದು, ಪ್ರಕ್ಷಿಪ್ತಗಳನ್ನು ದೂರೀಕರಿಸುವುದು, ಕೊನೆಯದಾಗಿ ವಚನಗಳನ್ನು ಶುದ್ಧೀಕರಿಸುವುದು - ಎಂಥವರನ್ನೂ ಧೈರ್ಯಗೆಡಿಸುವ ಕೆಲಸ. ಹೀಗಿದ್ದೂ ವಚನಸಾಹಿತ್ಯದ ಮೇಲಿನ ಗೌರವ, ಕೆಲಸದ ಮೇಲಿನ ಪ್ರೀತಿಗಳು ನಮ್ಮಿಂದ ಈ ಕಾರ್ಯ ಮಾಡಿಸಿವೆ. ನಮ್ಮ ಶಕ್ತಿಗೆ ಮೀರಿ ಉಳಿದಿರಬಹುದಾದ ದೋಷಗಳನ್ನು ಮನ್ನಿಸಬೇಕೆಂದು ಕೋರುತ್ತ, ಎರಡು ವರ್ಷ ರಾತ್ರಿಯನ್ನೂ ಹಗಲುಮಾಡಿ ದುಡಿದು ರೂಪಿಸಿದ ಈ ಹದಿನೈದು ಸಂಪುಟಗಳನ್ನು ಸಹೃದಯಲೋಕಕ್ಕೆ ಅರ್ಪಿಸುತ್ತೇವೆ. 'ಶಿವಶರಣರ ಸಮಗ್ರ ವಚನಸಾಹಿತ್ಯ' ಸುಲಭ ಬೆಲೆಯಲ್ಲಿ ಕನ್ನಡಿಗರ ಮನೆ-ಮನಗಳನ್ನು ಬೆಳಗಲೆಂದು ಹಾರೈಸುತ್ತೇವೆ.

# ದ್ವಿತೀಯ ಆವೃತ್ತಿ

ಸಮಗ್ರ ವಚನಸಾಹಿತ್ಯದ ಜನಪ್ರಿಯ ಆವೃತ್ತಿ ಸಂಪುಟಗಳು ೧೯೯೩ರಲ್ಲಿ ಪ್ರಕಟವಾಗಿ, ಒಂದು ವರ್ಷ ಕಳೆಯುವಷ್ಟರಲ್ಲಿ ಮಾರಾಟವಾದವು. ಕರ್ನಾಟಕ ಸರಕಾರದ ಗ್ರಂಥಪ್ರಕಟನೆಯ ಇತಿಹಾಸದಲ್ಲಿಯೇ ಈ ಬಗೆಯ ಮಾರಾಟ ಒಂದು ದಾಖಲೆ. ಜನತೆಯ ಅಪಾರ ಬೇಡಿಕೆಯನ್ನು ಗಮನಿಸಿ, ಈಗ ಪರಿಷ್ಕೃತ ದ್ವಿತೀಯ ಆವೃತ್ತಿಯನ್ನು ಪ್ರಕಟಿಸುತ್ತಿದ್ದೇವೆ. ಇತ್ತೀಚೆಗೆ ಲಭ್ಯವಾದ ಸುಮಾರು ಒಂದು ಸಾವಿರ ಹೊಸವಚನಗಳನ್ನು ಸೇರಿಸುವ, ಮೊದಲ ಆವೃತ್ತಿಯ ವಚನಪಾಠವನ್ನು ಮತ್ತೆ ಪರಿಷ್ಕರಿಸುವ ಮೂಲಕ ಮೊದಲಿನ ೧೪ ಸಂಪುಟಗಳನ್ನು ಸಮಗ್ರವಾಗಿ ಮತ್ತೆ ರೂಪಿಸಿದ್ದೇವೆ. ೧೫ನೆಯ ಸಂಪುಟ (ಪರಿಭಾಷಾಕೋಶ) ವನ್ನು ಹೊಸದಾಗಿ ಸಿದ್ಧಪಡಿಸಿದ್ದೇವೆ. ಹೊಸ ವಿಚಾರ, ಶೋಧಗಳ ಬೆಳಕಿನಲ್ಲಿ ಸಂಪಾದಕೀಯ, ಪ್ರಸ್ತಾಪವನೆಗಳನ್ನು ಸೂಕ್ತ ರೀತಿಯಲ್ಲಿ ಪರಿಷ್ಕರಿಸಿದ್ದೇವೆ.

ಈ ಆವೃತ್ತಿ ಬೆಳಕು ಕಾಣಲು ವಿಶೇಷ ಆಸಕ್ತಿ ವಹಿಸಿದ ನಮ್ಮ ರಾಜ್ಯದ ಮುಖ್ಯಮಂತ್ರಿಗಳಾದ ಮಾನ್ಯ ಶ್ರೀ ಎಸ್. ಎಂ. ಕೃಷ್ಣ ಅವರಿಗೂ, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಚಿವರಾದ ಮಾನ್ಯ ಶ್ರೀಮತಿ ರಾಣಿ ಸತೀಶ್ ಅವರಿಗೂ ನಾವು ಋಣಿಯಾಗಿದ್ದೇವೆ. ಈ ಕೆಲಸ ನಿರ್ದಿಷ್ಟ ಕಾಲಾವಧಿಯಲ್ಲಿ ಪೂರ್ಣಗೊಳ್ಳುವಂತೆ ನೋಡಿಕೊಂಡ ಕನ್ನಡ ಸಂಸ್ಕೃತಿ ನಿರ್ದೇಶನಾಲಯದ ನಿರ್ದೇಶಕರಾದ ಶ್ರೀ ಕೆ. ಸಿ. ರಾಮಮೂರ್ತಿ ಅವರಿಗೂ ಅವರ ಸಿಬ್ಬಂದಿ ವರ್ಗಕ್ಕೂ, ಮಾರ್ಗದರ್ಶನ ಮಾಡಿ ಸಂಪುಟಗಳ ಉತ್ತಮಿಕೆ ಕಾರಣರಾದ ಸಂಪಾದಕ ಮಂಡಲದ ಸದಸ್ಯರಿಗೂ, ಸಂಸ್ಕೃತ ಶ್ಲೋಕಗಳನ್ನು ಪರಿಷ್ಕರಿಸಿಕೊಟ್ಟ ಮೈಸೂರಿನ ಪೂಜ್ಯ ಶ್ರೀ ಇಮ್ಮಡಿ ಶಿವಬಸವಸ್ವಾಮಿಗಳು ಕುಂದೂರುಮಠ ಅವರಿಗೂ, ೧೫ನೆಯ ಪರಿಭಾಷಾ ಸಂಪುಟವನ್ನು ಹೊಸದಾಗಿ ರೂಪಿಸಿಕೊಟ್ಟ ಡಾ. ಎನ್. ಜಿ. ಮಹಾದೇವಪ್ಪ ಅವರಿಗೂ ನಮ್ಮ ವಂದನೆಗಳು ಸಲ್ಲುತ್ತವೆ. ಹತ್ತು ಸಾವಿರ ಪುಟಗಳ, ಹದಿನೈದು ಸಂಪುಟಗಳ ಪ್ರಕಟನೆ ಸುಲಭದ ಕೆಲಸವೇನಲ್ಲ. ಸಾಹಿತ್ಯದ ಮೇಲಿನ, ಅದರಲ್ಲಿಯೂ ವಚನಸಾಹಿತ್ಯದ ಮೇಲಿನ ಪ್ರೀತಿ ಕಾರಣವಾಗಿ ಪುಸ್ತಕ ಪ್ರಾಧಿಕಾರದ ಮೂಲಕ ಪ್ರಕಟಿಸಿದ ಅಧ್ಯಕ್ಷರಾದ ಪ್ರೊ. ಮಲ್ಲೇಪುರಂ ಜಿ. ವೆಂಕಟೇಶ ಅವರಿಗೆ ನಾವು ಋಣಿಯಾಗಿದ್ದೇವೆ.

ಮೊದಲ ಆವೃತ್ತಿಯಲ್ಲಿ ಉಳಿದುಕೊಂಡಿದ್ದ ಕೊರತೆ, ದೋಷಗಳನ್ನು ಕಷ್ಟಪಟ್ಟು ಹುಡುಕಿ, ನಮಗೆ ಪೂರೈಸಿದ ತುಮಕೂರಿನ ಶ್ರೀ ಎಂ. ಚಂದ್ರಪ್ಪ ಅವರಿಗೂ, ಬೆಂಗಳೂರಿನ ಶ್ರೀ ಎಸ್. ಶಿವಣ್ಣ ಅವರಿಗೂ ನಾವು ಕೃತಜ್ಞರಾಗಿದ್ದೇವೆ.

■■

★

# ಪ್ರಸ್ತಾವನೆ

ವಚನಸಾಹಿತ್ಯವು ಹನ್ನೆರಡನೆಯ ಶತಮಾನದ ಶಿವಶರಣರು ನಡೆಸಿದ ಸಮಾಜೋಧಾರ್ಮಿಕ ಚಳುವಳಿಯ ಆನುಷಂಗಿಕ ಫಲ. ಪ್ರೊ. ಶಿ.ಶಿ. ಬಸವನಾಳರು ಹೇಳುವಂತೆ "ದೇವವಾಣಿ ಜನವಾಣಿಯಾಗುವುದು ಅಸಾಧ್ಯವಾದಾಗ ಜನವಾಣಿಯನ್ನೇ ದೇವವಾಣಿಯ ಮಟ್ಟಕ್ಕೇರಿಸಿದ ಪವಾಡ ವೀರಶೈವ ವಚನಕಾರರದು." ಚೆನ್ನಬಸವಣ್ಣ ಅಭಿಪ್ರಾಯಪಡುವಂತೆ ಶಿವಶರಣರು "ಮರ್ತ್ಯರ ಮನದ ಮೈಲಿಗೆಯ ಕಳೆಯಲೆಂದು ಗೀತಮಾತೆಂಬ ಜ್ಯೋತಿಯ ಬೆಳಗಿಟ್ಟರು." ವಚನ-ರಚನೆ -ಅನುಭಾವ ಈ ಮೂರರ ಸಾಮರಸ್ಯಪೂರ್ಣವಾದ ಕೂಟವೇ ವಚನ ಸಾಹಿತ್ಯ. ಚೆನ್ನಬಸವಣ್ಣ ಹೇಳುವಂತೆ ಆತ್ಮತೃಪ್ತಿಯನ್ನು ತಿಳಿಯುವುದು: ವಚನ; ಸ್ಥಾವರ ಜಂಗಮದಲ್ಲಿ ದಯವಾಗಿರುವುದು: ರಚನೆ; ಅರಿಷಡ್ವರ್ಗಗಳ ಇಚ್ಛೆಗೆ ಹರಿಯದಿರುವುದು: ಅನುಭಾವ.

ಈ ಸಂಪುಟದಲ್ಲಿ ಮೂವತ್ತಾರು ಮಂದಿ ಬಿಡಿ ವಚನಕಾರರ ಒಟ್ಟು ೧೩೪೧ ವಚನಗಳಿವೆ:

| | | | |
|---|---|---|---|
| ಕಂಬದ ಮಾರಿತಂದೆ | : | ಕದಂಬಲಿಂಗ | ೧೧ |
| ಕನ್ನಡಿ ಕಾಯಕದ ಅಮ್ಮಿದೇವಯ್ಯ | : | ಚೆನ್ನಬಸವಣ್ಣಪ್ರಿಯ ಕಮಳೇಶ್ವರಲಿಂಗ | ೧೦ |
| ಕನ್ನದ ಮಾರಿತಂದೆ | : | ಮಾರನವೈರಿ ಮಾರೇಶ್ವರಾ | ೪ |
| ಕರುಳ ಕೇತಯ್ಯ | : | ಮನಕ್ಕೆ ಮನೋಹರ ಶಂಕೇಶ್ವರಲಿಂಗ | ೮ |
| ಕಲಕೇತಯ್ಯ | : | ಮೇಖಲೇಶ್ವರಲಿಂಗ | ೧೧ |
| ಕಾಮಾಟದ ಭೀಮಣ್ಣ | : | ಧಾರೇಶ್ವರಲಿಂಗ | ೪ |
| ಕಿನ್ನರಿ ಬ್ರಹ್ಮಯ್ಯ | : | ತ್ರಿಪುರಾಂತಕಲಿಂಗ | ೧೮ |
| ಕೀಲಾರದ ಭೀಮಣ್ಣ | : | ಕಾಲಕರ್ಮವಿರಹಿತ ತ್ರಿಪುರಾಂತಕಲಿಂಗ | ೧೦ |
| ಕೂಗಿನ ಮಾರಯ್ಯ | : | ಮಹಾಮಹಿಮ ಮಾರೇಶ್ವರಾ | ೧೧ |
| ಕೊಟ್ಟಾರದ ಸೋಮಣ್ಣ | : | ಬಸವಣ್ಣಪ್ರಿಯ ನಿಃಕಳಂಕ ಸೋಮೇಶ್ವರಾ | ೧ |
| ಕೋಲ ಶಾಂತಯ್ಯ | : | ಪುಣ್ಯಾರಣ್ಯದಹನ ಭೀಮೇಶ್ವರಲಿಂಗ ನಿರಂಗಸಂಗ | ೧೦೩ |

| | | |
|---|---|---|
| ಗಜೇಶ ಮಸಣಯ್ಯ | : ಮಹಾಲಿಂಗ ಗಜೇಶ್ವರಾ | ೨೦ |
| ಗಾಣದ ಕಣ್ಣಪ್ಪ | : ಗೊಹೇಶ್ವರನ ಶರಣ ಅಲ್ಲಮ | ೧೦ |
| ಗಾವುದಿ ಮಾಚಯ್ಯ | : ತ್ರಿಪುರಾಂತಕಲಿಂಗದಲ್ಲಿ ಗಾವುದಿಮಾಚಯ್ಯ ಹೇಳಿದುದ ದಿಟವೆನ್ನಿರಣ್ಣ | ೧೧ |
| ಗುಪ್ತ ಮಂಚಣ್ಣ | : ನಾರಾಯಣಪ್ರಿಯ ರಾಮನಾಥ | ೧೦೦ |
| ಗುರುಪುರದ ಮಲ್ಲಯ್ಯ | : ಪುರದ ಮಲ್ಲಯ್ಯಾ | ೪ |
| ಗುರುಬಸವೇಶ್ವರ | : ಗುರುಬಸವ | ೩ |
| ಗುರುಭಕ್ತಯ್ಯ | : ಘಂಟೇಶ್ವರಲಿಂಗ | ೧ |
| ಗೋರಕ್ಷ | : ಗೋರಕ್ಷಪಾಲಕ ಮಹಾಪ್ರಭು ಸಿದ್ಧ ಸೋಮನಾಥಲಿಂಗ | ೧೧ |
| ಘಟ್ಟಿವಾಳಯ್ಯ | : ಚಿಕ್ಕಯ್ಯಪ್ರಿಯ ಸಿದ್ಧಲಿಂಗ ಇಲ್ಲ ಇಲ್ಲ | ೧೪೨ |
| ಚಂದಿಮರಸ | : ಸಿಮ್ಮಲಿಗೆಯ ಚೆನ್ನರಾಮ | ೧೫೨ |
| ಜಗಳಗಂಟ ಕಾಮಣ್ಣ | : ಕಾಮೇಶ್ವರ | ೪ |
| ಜೇಡರ ದಾಸಿಮಯ್ಯ | : ರಾಮನಾಥ | ೧೭೬ |
| ಜೋದರ ಮಾಯಣ್ಣ | : ಶಂಭು ಸೋಮನಾಥಲಿಂಗ | ೫ |
| ಡಕ್ಕೆಯ ಬೊಮ್ಮಣ್ಣ | : ಕಾಲಾಂತಕ ಭೀಮೇಶ್ವರಲಿಂಗ | ೯೦ |
| ಡೋಹರ ಕಕ್ಕಯ್ಯ | : ಅಭಿನವ ಮಲ್ಲಿಕಾರ್ಜುನಾ | ೬ |
| ತಳವಾರ ಕಾಮಿದೇವಯ್ಯ | : ಕಾಮಹರಪ್ರಿಯ ರಾಮನಾಥ | ೧೦ |
| ತುರುಗಾಹಿ ರಾಮಣ್ಣ | : ಗೋಪತಿನಾಥ ವಿಶ್ವೇಶ್ವರಲಿಂಗ | ೪೬ |
| ತೆಲುಗೇಶ ಮಸಣಯ್ಯ | : ತೆಲುಗೇಶ್ವರ | ೨ |
| ದಶಗಣ ಸಿಂಗಿದೇವಯ್ಯ | : ನಾಚಯ್ಯಪ್ರಿಯ ಮಲ್ಲಿನಾಥಾ | ೪ |
| ದಸರಯ್ಯ | : ದಸರೇಶ್ವರ ಲಿಂಗ | ೧೦ |
| ದಾಸೋಹದ ಸಂಗಣ್ಣ | : ಮಾತುಳಂಗ ಮಧುಕೇಶ್ವರ | ೧೦೧ |
| ನಗೆಯ ಮಾರಿತಂದೆ | : ಆತುರವೈರಿ ಮಾರೇಶ್ವರಾ | ೯೯ |
| ನಿಜಗುಣ ಶಿವಯೋಗಿ | : ನಿಜಗುಣಯೋಗಿ/ನಿಜಗುಣಯೋಗಿಯ ಯೋಗ | ೧೬ |
| ನಿವೃತ್ತಿ ಸಂಗಯ್ಯ | : ನಿವೃತ್ತಿ ಸಂಗಯ್ಯ | ೩ |
| ನುಲಿಯ ಚಂದಯ್ಯ | : ಚಂದೇಶ್ವರಲಿಂಗ | ೪೮ |

ಈ ಸಂಪುಟದಲ್ಲಿ ಬರುವ ಬಹಳಷ್ಟು ಮಂದಿ ವಚನಕಾರರು ಕೆಳವರ್ಗಕ್ಕೆ ಸೇರಿದವರಾಗಿರುವುದು ಮುಖ್ಯ ಸಂಗತಿ. ಸಾಮಾಜಿಕ ನೆಲೆಯ ಬೇರೆ ಬೇರೆ ಸ್ತರಗಳಿಂದ

ಬರುವ ಅಮ್ಮಿದೇವಯ್ಯನು ಕ್ಷೌರಿಕ; ಮಾರಿತಂದೆ ಮೂಲತಃ ಕನ್ನ ಕೊರೆದು ಕಳ್ಳತನ ಮಾಡುತ್ತಿದ್ದವನು; ಕಣ್ಣಪ್ಪ ಗಾಳಹಾಕಿ ಮೀನು ಹಿಡಿಯುವವನು; ಭೀಮಣ್ಣ ಹಾಗೂ ರಾಮಣ್ಣ ಗೋವಳಿಗರು; ಕಲಕೇತಯ್ಯ ಓರ್ವ ಜನಪದ ಕಲಾವಿದ; ಕಿನ್ನರಿ ಬ್ರಹ್ಮಯ್ಯ ಕಿನ್ನರಿ ನುಡಿಸುತ್ತಿದ್ದ ಓರ್ವ ಕಲಾವಿದ; ಡಕ್ಕೆಯ ಬೊಮ್ಮಣ್ಣನು ಮೂಲತಃ ಡಕ್ಕೆಯನ್ನು ಬಾರಿಸುತ್ತ ಮೊರದಲ್ಲಿ ಮಾರಿಯನ್ನಿಟ್ಟು ಕುಣಿಸುವವನು; ನುಲಿಯ ಚಂದಯ್ಯ ಹುಲ್ಲನ್ನು ತಂದು ಹಗ್ಗವನ್ನಾಗಿ ಹೊಸೆದು ಮಾರಿ ಜೀವಿಸುವವನು; ಮಾರಿತಂದೆ ಮೂಲತಃ ನಗಿಸುವುದನ್ನೇ ಕಾಯಕವಾಗಿ ಮಾಡಿಕೊಂಡಿದ್ದವನು; ಕಾಮಾಟದ ಭೀಮಣ್ಣ ಮನೆಕಟ್ಟುವ ವೃತ್ತಿಯವನು; ಕಾಮಿದೇವಯ್ಯ ಊರನ್ನು ಕಾಯುವ ತಳವಾರ ಕಾಯಕದವನು -ಇವರೆಲ್ಲರೂ ವೀರಶೈವ ಮತವನ್ನು ಸ್ವೀಕರಿಸಿ ಶಿವನನ್ನು ತಮ್ಮ ಇಷ್ಟದೈವವೆಂದು ಭಾವಿಸಿದವರು, ನಂಬಿದವರು. ವೀರಶೈವದ ತೆಕ್ಕೆಗೆ ಇವರು ಬಂದದ್ದರಿಂದ ಹುಟ್ಟಿನಿಂದ ಬಂದ ಅಸ್ಪೃಶ್ಯತೆಯನ್ನು ನೀಗಿಕೊಂಡು ಸಮಾನತೆಯ ಗೌರವ ಪಡೆದರು. ಈ ನಂಬಲೇಬೇಕಾದ ಪವಾಡ ಸಾಧ್ಯವಾದದ್ದು ಕಾಯಕ ತತ್ತ್ವದಿಂದಾಗಿ.

ಬಸವಾದಿ ಶರಣರು ನಡೆಸಿದ ಭಕ್ತಿ ಚಳುವಳಿ ಹರಿದು ಹಂಚಿಹೋಗಿದ್ದ ಸಮಾಜವನ್ನು ಸಮಾನತೆಯ ಆಧಾರದ ಮೇಲೆ ಒಂದುಗೂಡಿಸಿತು. ಭಿನ್ನ ಭಿನ್ನ ಕಾಯಕದ, ಮನೋಧರ್ಮದ ವ್ಯಕ್ತಿಗಳು ಒಂದೆಡೆ ಸಂಘಟಿತರಾಗಿ ವಿಚಾರವಿನಿಮಯ ನಡೆಸಿದುದು, ತಮ್ಮ ಅಂದಂದಿನ ಅನುಭವ ಅನುಭಾವಗಳಿಗೆ ವಚನಗಳ ಮೂಲಕ ಅಭಿವ್ಯಕ್ತಿಸಿದುದು ಗಮನಾರ್ಹ ವಿಷಯ. ಕೆಳವರ್ಗದವರನ್ನು ಆರ್ಥಿಕವಾಗಿ, ಸಾಮಾಜಿಕವಾಗಿ, ಶೈಕ್ಷಣಿಕವಾಗಿ ಮೇಲೆತ್ತುವ ಕ್ರಿಯೆ ಒಂದು ಚಳುವಳಿಯ ರೂಪದಲ್ಲಿ ವ್ಯಕ್ತವಾದಾಗ ಶತಶತಮಾನಗಳಿಂದ ಶಾರೀರಿಕವಾಗಿಯಲ್ಲದೆ ಮಾನಸಿಕವಾಗಿಯೂ ದಾಸ್ಯಭಾವವನ್ನು ಬೆಳೆಸಿಕೊಂಡಿದ್ದ ಜನತೆ ತಮ್ಮ ಜಡತ್ವವನ್ನು ಕೊಡವಿಕೊಂಡು ಮೇಲೆದ್ದಿತು. ಅವರನ್ನು ಅರ್ಥಮಾಡಿಕೊಂಡು ಅವರ ಕೊರಳ ಸೆರೆಗೆ ಜೀವ ತುಂಬುವ ಮೂಲಕ ಬಸವಾದಿ ಶಿವಶರಣರು ಸಾಮಾಜಿಕ ಕ್ರಾಂತಿಯ ಹರಿಕಾರರಾದರು.

ಅತ್ಯಂತ ವಿಸ್ಮಯಕಾರಿಯಾದ ಅಂಶವೆಂದರೆ, ಹಲವು ಮತಗಳಿಗೆ ಸೇರಿದ್ದ, ಭಿನ್ನಭಿನ್ನ ವೃತ್ತಿಗಳಲ್ಲಿ ತೊಡಗಿದ್ದ, ಒಂದೇ ಆದ ಮನೋಧರ್ಮವೂ ಅಲ್ಲದ ಜನರೆಲ್ಲರೂ ಲಿಂಗಭೇದವಿಲ್ಲದೆ ಒಂದೆಡೆ ಸೇರಿ ವಚನರಚನೆಯ ಸಾಮೂಹಿಕ ಕ್ರಿಯೆಯಲ್ಲಿ ಭಾಗಿಯಾದುದು. ಕೆಳವರ್ಗಕ್ಕೆ ಸೇರಿದವರಲ್ಲಿ ಬಹಳಷ್ಟು ಮಂದಿ 'ಕುರಿತೋದದೆಯುಂ ಕಾವ್ಯಪ್ರಯೋಗ ಪರಿಣತಮತಿ'ಗಳಾಗಿದ್ದವರು. ಅವರಿಗೆ ಕನ್ನಡ ಸಾಹಿತ್ಯ ಪರಂಪರೆಯ ತಿಳುವಳಿಕೆಯಿಲ್ಲ. ಪಂಪ, ರನ್ನರಾಗಲೀ ಅವರ ಕೃತಿಗಳೇ ಆಗಲಿ ಪರಿಚಯವಿಲ್ಲ ; ಭಾಷೆ, ಛಂದಸ್ಸು, ಅಲಂಕಾರ ಇವಾವುದರ ತಿಳಿವಳಿಕೆಯೂ ಇಲ್ಲ. ಬಸವಾದಿ ಶಿವಶರಣರು ನಡೆಸಹೊರಟ ಸಾಮಾಜಿಕ ಹಾಗೂ ಧಾರ್ಮಿಕ ಚಳುವಳಿ ಅವರಲ್ಲಿ ಧೈರ್ಯತುಂಬಿದೆ; ಅಚಲವಾದ ಆತ್ಮವಿಶ್ವಾಸ ಮೂಡಿಸಿದೆ. ತಮ್ಮ ಅನುಭವಗಳನ್ನು,

ತಮಗೆ ತಿಳಿದ ಅಥವಾ ತಾವು ಕೇಳಿದ ಆಧ್ಯಾತ್ಮವನ್ನು ಸರಳವಾದ ಆಡುಭಾಷೆಯಲ್ಲಿ ಹೇಳಬಹುದೆಂದು ಒಳಗಿನ ಪ್ರೇರಣೆಯಾಗಿ ಅವರು ವಚನ ರಚನೆಗೆ ತೊಡಗಿದರು. ಅನುಭವ ಇಲ್ಲವೆ ಅನುಭಾವ ಮಾತಿನ ಮೂಲಕ ಅಭಿವ್ಯಕ್ತಿ ಕಂಡುಕೊಳ್ಳಹೊರಟಾಗ ಗಾದೆ, ಸಾಮತಿ, ಲೋಕೋಕ್ತಿ, ದೃಷ್ಟಾಂತ, ಜನಬಳಕೆಯ ಅರ್ಥಪೂರ್ಣ ನುಡಿಗಟ್ಟುಗಳು ಅವರ ಆಡುಭಾಷೆಗೆ ಮೆರುಗನ್ನು, ಕಳೆಯನ್ನು, ಜೀವಂತಿಕೆಯನ್ನು ತಂದುಕೊಟ್ಟುವು. ವಚನ ರಚನೆಯ ಮೂಲಕ ತಮ್ಮ ಅನುಭವಗಳನ್ನು ವ್ಯಂಜಿಸಲು ಸಾಧ್ಯವೆಂಬ ಭಾವ ಸ್ಫುರಿಸಿದ ಕ್ಷಣವೇ ಈ ಭಿನ್ನ ಭಿನ್ನ ಮನೋಭಾವದ ಜನ ಒಬ್ಬರು ಮತ್ತೊಬ್ಬರಿಂದ ಸ್ಫೂರ್ತಿ ಪಡೆದು ಬರೆಯಲು ತೊಡಗಿದರು. ಇಲ್ಲಿ ವಸ್ತು ತಮ್ಮ ಅಂತರಂಗದ ಶೋಧನೆಯಾಯಿತು; ಅರ್ಥವಿಹೀನ ಆಚರಣೆಗಳ ಟೀಕೆಯಾಯಿತು; ವ್ಯಕ್ತಿಗಳ ಅಂತರಂಗ ಬಹಿರಂಗಗಳಲ್ಲಿನ ಕ್ಷುದ್ರತನದ ವಿಡಂಬನೆಯಾಯಿತು; ಶೋಷಣೆ ಮಾಡುವವರ ಬಗೆಗೆ ಆಕ್ರೋಶವಾಯಿತು; ಸಮಾಜದಲ್ಲಿನ ಗೋಮುಖವ್ಯಾಘ್ರಗಳ ನೀತಿಗೆಟ್ಟ ನಡಾವಳಿಗಳನ್ನು ಬಯಲುಮಾಡುವುದಾಯಿತು; ಸತ್ಯ-ಸದಾಚಾರ-ಸದ್ವರ್ತನೆಗಳ ಬೋಧೆಯಾಯಿತು; ವೀರಶೈವ ಧರ್ಮದ ತಾತ್ವಿಕ ನೆಲಗಟ್ಟಿನ ಪರಿಚಯವಾಯಿತು. ಇದೆಲ್ಲಕ್ಕೂ ಮಿಗಿಲಾಗಿ ಈ ಸಾಮಾನ್ಯ ಜನ ತಮಗೆ ತಿಳಿದ ಆಧ್ಯಾತ್ಮದ ಅನುಭವವನ್ನು ತಮ್ಮ ತಮ್ಮ ವೃತ್ತಿಧರ್ಮಕ್ಕೆ ಹೊಂದಿಸಿ ಗೂಢವಾಗಿ 'ಬೆಡಗಿನ ವಚನ'ಗಳ ಮೂಲಕ ಹೇಳಹೊರಟದ್ದು ವಿಸ್ಮಯಗಳಲ್ಲಿ ಒಂದು.

ಈ ಸಂಪುಟದ ವಚನಕಾರರಲ್ಲಿ ನಿಜಗುಣಯೋಗಿ, ಚಂದಿಮರಸ, ಜೇಡರ ದಾಸಿಮಯ್ಯ, ಡೋಹರ ಕಕ್ಕಯ್ಯ -ಈ ನಾಲ್ವರು ಬಸವನಿಗಿಂತ ಸ್ವಲ್ಪ ಹಿರಿಯ ವಚನಕಾರರು. ಇವರಲ್ಲಿ ಸಾಮಾಜಿಕವಾಗಿ ಸ್ಪಂದಿಸಿದವನು ಜೇಡರ ದಾಸಿಮಯ್ಯನೊಬ್ಬನೆ. ನಿಜಗುಣಯೋಗಿಯಲ್ಲಿ ಯೌಗಿಕ ಅನುಭವಗಳ ಅಭಿವ್ಯಕ್ತಿಗೆ ಪ್ರಾಧಾನ್ಯವಾದರೆ ಚಂದಿಮರಸನಲ್ಲಿ ಆತ್ಮಜ್ಞಾನದ ಕಡೆಗೇ ಹೆಚ್ಚಿನ ಒಲವು. ಡೋಹರ ಕಕ್ಕಯ್ಯನ ವಚನಗಳ ಸಂಖ್ಯೆ ಕಡಿಮೆ; ಪ್ರಭು, ಬಸವ ಇವರ ಪ್ರಭಾವೀವಲಯಕ್ಕೆ ಬಂದ ಮೇಲೆ ಬರೆದ ವಚನಗಳು ಅವು. ನಿಜವಾದ ಅಂತಃಸತ್ವವುಳ್ಳ ವಚನಗಳನ್ನು ಜೇಡರ ದಾಸಿಮಯ್ಯನಲ್ಲಿ ನಾವು ಕಾಣುವೆವು. ವಚನ ಒಂದು ಸಾಹಿತ್ಯ ಪ್ರಕಾರವಾಗಿ ರೂಪುಗೊಳ್ಳಲು ಹೊರಟ ಸ್ಥಿತಿಯನ್ನು ಹಾಗೂ ಬಸವಾದಿ ಶಿವಶರಣರು ನಡೆಸಿದ ಚಳುವಳಿಯ ಪೂರ್ವದ ಸಮಾಜೋಧಾರ್ಮಿಕ ಸ್ಥಿತಿ-ಗತಿಗಳ ಪರಿಚಯವನ್ನು ನಾವು ಅಲ್ಲಿ ಗುರುತಿಸಬಹುದು. ಆದ್ಯ ವಚನಕಾರನಾಗುವ ಹಾಗೂ ಮುಂದಿನವರಿಗೆ ಮಾರ್ಗದರ್ಶಕನಾಗುವ ಸಕಲ ಗುಣಗಳನ್ನೂ ದಾಸಿಮಯ್ಯ ಹೊಂದಿರುವನು. ದೇಸೀಗಬ್ಬವಾದ ತ್ರಿಪದಿ ವಚನವಾಗುವ ಸಾಧ್ಯತೆಯನ್ನು ನಾವಲ್ಲಿ ಕಾಣುವೆವು. ವಚನದ ರೂಪ ಮತ್ತು ಶಿಲ್ಪ ರೂಪುಗೊಂಡು ಬಸವಾದಿ ಶರಣರಿಗೆ ಅದು ಅಭಿವ್ಯಕ್ತಿ ಮಾಧ್ಯಮವಾದುದನ್ನೂ ನಾವು ನೋಡಬಹುದು.

## ವಚನಕಾರರು-ಜೀವನವೃತ್ತಾಂತ

**ಕಂಬದ ಮಾರಿತಂದೆ:**

ಇವನ ಇತಿವೃತ್ತವೇನೂ ತಿಳಿದುಬರುವುದಿಲ್ಲ. ಇವನ ವಚನಗಳಲ್ಲಿ ಮಡುವು, ಸೆಳೆಗೋಲಿನ ಗಾಳದ ಕೀಟಕ, ಬಲೆ, ಮತ್ಸ್ಯ -ಇವು ಮೇಲಿಂದ ಮೇಲೆ ಬರುವುದರಿಂದ ಬಹುಶಃ ಇವನು ಮೀನುಗಾರನಾಗಿರಬಹುದು. ತನ್ನ ವೃತ್ತಿ ಪರಿಭಾಷೆಯಲ್ಲಿಯೇ ಅಧ್ಯಾತ್ಮವನ್ನು ಹೇಳಿರುವನು.

**ಕನ್ನಡಿಕಾಯಕದ ಅಮ್ಮಿದೇವಯ್ಯ:**

ಇವನ ವಚನಗಳಲ್ಲಿ ಬರುವ ಹಡಪ, ಕನ್ನಡಿ, ಕತ್ತಿ, ಕತ್ತರಿ, ಚಿಮ್ಮುಟ, ಹಣಿಗೆ, ಕಡಿಚಣ (= ಉಗುರು ತೆಗೆಯುವ ಸಾಧನ), ಅಂಗುಲಸಂಗಿ (= ಮೂಗಿನ ಕೂದಲು ತೆಗೆಯುವ ಸಾಧನ) ಮೊದಲಾದ ಕ್ಷೌರಿಕನ ಪರಿಕರಗಳ ಉಲ್ಲೇಖವನ್ನು ಗಮನಿಸಿದಾಗ ಇವನು ವೃತ್ತಿಯಲ್ಲಿ ಕ್ಷೌರಿಕನೆಂದು ಹೇಳಬಹುದು. ತನ್ನ ವೃತ್ತಿ ಪರಿಭಾಷೆಯನ್ನೇ ಬಳಸಿಕೊಂಡು ಮೇಲಿಂದ ಮೇಲೆ ಅನುಭಾವವನ್ನು ವ್ಯಂಜಿಸುವುದು ಇವನಿಗೆ ಪ್ರಿಯವಾದುದು. ತನಗೆ ಕತ್ತಿಯನ್ನು ಬಸವಣ್ಣನೂ, ಕತ್ತರಿಯನ್ನು ಚೆನ್ನಬಸವಣ್ಣನೂ, ಕಿತ್ತುಹಾಕುವ ಚಿಮ್ಮುಟಿಕೆಯನ್ನು ಪ್ರಭುರಾಯನೂ, ಉಳಿದುವನ್ನು ಶರಣರೂ ಕೊಟ್ಟುದಾಗಿ ತನ್ನ ವಚನವೊಂದರಲ್ಲಿ ಹೇಳಿಕೊಂಡಿರುವನು. 'ಮಂಡೆಯ ಬೋಳಿಸುವೆ ಚಂಡಿಕೆಯನಿರಿಸುವೆ' ಎಂಬ ಇವನ ವಚನದ ಒಂದು ಸಾಲು ಆ ಕಾಲದ ಜನರ ವೇಷಭೂಷಣದ ಚಿತ್ರ ಕೊಡುತ್ತದೆ. 'ಬೆನ್ನ ಪಳಿಗೆ ಎನ್ನ ಕೇಳಬೇಡ. ಅಂಗಾಲ ಹುಣ್ಣಿಗೆ ಎನ್ನ ಕೇಳಬೇಡ. ಬಾಯೊಳಗಣ ಬಗದಳಕ್ಕೆ ಎನ್ನ ಕೇಳಬೇಡ.....' ಎಂಬ ಇವನ ವಚನ ಸಾಂಸ್ಕೃತಿಕ ಅಧ್ಯಯನದ ದೃಷ್ಟಿಯಿಂದ ಬಹಳ ಮುಖ್ಯವಾದುದು. ಹಿಂದಿನಕಾಲದಲ್ಲಿ ಕ್ಷೌರಿಕನು ಜನಪದ ವೈದ್ಯನೂ ಆಗಿರುತ್ತಿದ್ದನು. ಪ್ರಾಸಂಗಿಕವಾಗಿ ತಮ್ಮ ರೋಗವನ್ನು ಇವನಲ್ಲಿ ಹೇಳಿಕೊಂಡವರಿಗೆ ಪರಿಹಾರರೂಪವಾಗಿ ನಾರು ಬೇರುಗಳಿಂದ ಮಾಡಿದ ಔಷಧವನ್ನು ಕ್ಷೌರಿಕನು ಸೂಚಿಸುವ ವಾಡಿಕೆಯಿದ್ದಿತು. ಅದರ ದಾಖಲೆ ಈ ವಚನವಲ್ಲಿ ಕಂಡುಬರುತ್ತದೆ. 'ವ್ಯಾಧಿಗೆ ನಾನರಸು' ಎಂಬ ಅಮ್ಮಿದೇವಯ್ಯನ ಹೇಳಿಕೆ ಈ ಹಿನ್ನೆಲೆಯಲ್ಲಿ ಮುಖ್ಯವಾಗುತ್ತದೆ. ಈತ ಹದಿನೆಂಟು ಕಾಯಕಗಳ ಉಲ್ಲೇಖ ಮಾಡುವನಾದರೂ ಅವುಗಳ ವಿವರ ನೀಡುವುದಿಲ್ಲ. 'ಆವಾವ ಜಾತಿ ಗೋತ್ರದಲ್ಲಿ ಬಂದಡೂ ತಮ್ಮ ತಮ್ಮ ಕಾಯಕಕ್ಕೆ, ಭಕ್ತಿಗೆ ಸೂತಕವಿಲ್ಲದಿರಬೇಕು' ಎಂಬ ಇವನ ಮಾತು ಗಮನಾರ್ಹವಾಗಿದೆ.

**ಕನ್ನದ ಮಾರಿತಂದೆ:**

ಶಿವಭಕ್ತರಲ್ಲದವರ ಮನೆಗೆ ಕನ್ನ ಹಾಕುವುದು ಇವನ ಕಾಯಕ. ಕನ್ನ ಹಾಕುವ ವಿಷಯ ಇವನ ವಚನಗಳಲ್ಲಿ ಬರುತ್ತದೆ. 'ಕತ್ತಲೆಯಲ್ಲಿ ಕನ್ನವನಿಕ್ಕಿದಡೆ ಎನಗೆ ಕತ್ತಿಯ

ಕೊಟ್ಟ ಕರ್ತುವಿಂಗೆ ಭಂಗ. ಅವರು ಮರದಿರ್ದಲ್ಲಿ ಮನೆಯ ಹೊಕ್ಕಡೆ ಎನ್ನ ಚೋರತನದ ಅರಿಕೆಗೆ ಭಂಗ. ಮರದಿರ್ದವರ ಎಬ್ಬಿಸಿ ಅವರಿಗೆ ಅವರೊಡವೆಯ ತೋರಿ ಎನ್ನೊಡವೆಯ ತಂದೆ.......' ಎಂಬ ಇವನ ಈ ವಚನ ವೃತ್ತಿಧರ್ಮಕ್ಕೆ ವ್ಯತಿರಿಕ್ತವಾದ ವರ್ತನೆಯನ್ನು ಪ್ರಕಟಪಡಿಸುತ್ತದೆ. ತನ್ನ ಕಾಯಕವನ್ನೇ ಸಂಕೇತವಾಗಿಟ್ಟುಕೊಂಡು ಅಧ್ಯಾತ್ಮದ ಪರಿಭಾಷೆಯಲ್ಲಿ ಈ ಮಾತು ಬಳಸುತ್ತಿರುವನೇನೊ?

ಕನ್ನದ ಮಾರಯ್ಯನ ಹೆಸರಿನ ಜೊತೆಗೆ ಕನ್ನದ ಬ್ರಹ್ಮಯ್ಯನ ಹೆಸರೂ ಬರುತ್ತದೆ. ಕನ್ನದ ಮಾರಯ್ಯನ ಹೆಸರು ಲಕ್ಕಣ್ಣ ದಂಡೇಶನ 'ಶಿವತತ್ವ ಚಿಂತಾಮಣಿ'ಯಲ್ಲಿ ಮಾತ್ರ ಬರುತ್ತದೆ. ಬಸವಪುರಾಣ, ಸಿಂಗಿರಾಜಪುರಾಣ, ಭೈರವೇಶ್ವರ ಕಾವ್ಯದ ಕಥಾಮಣಿ ಸೂತ್ರರತ್ನಾಕರ ಮೊದಲಾದ ಕೃತಿಗಳಲ್ಲಿ ಕನ್ನದ ಬ್ರಹ್ಮಯ್ಯನ ಉಲ್ಲೇಖ ಬರುತ್ತದೆ. ಲಕ್ಕಣ್ಣದಂಡೇಶ ಹೇಳುವ ಶಿವಶರಣನು ನಮ್ಮ ವಚನಕಾರ ಕನ್ನದ ಮಾರಿತಂದೆಯೆ? ಎಂಬುದು ಪ್ರಶ್ನಾರ್ಹವಾಗಿದೆ. ಬಹುಶಃ ಮೊದಲಿಗೆ ಕಳ್ಳನಾಗಿದ್ದು, ಬಸವಾದಿಗಳ ಸಂಪರ್ಕಕ್ಕೆ ಬಂದಮೇಲೆ ತನ್ನ ಚೋರವೃತ್ತಿಯನ್ನು ಇವನು ಬಿಟ್ಟಿರಬಹುದು.

**ಕರುಳ ಕೇತಯ್ಯ:**

ಇವನ ಬಗ್ಗೆ ಹೆಚ್ಚಿನ ವಿವರಗಳೇನೂ ತಿಳಿದುಬರುವುದಿಲ್ಲ. ಶಾಂತಲಿಂಗ ದೇಶಿಕನ 'ಭೈರವೇಶ್ವರ ಕಾವ್ಯದ ಕಥಾಮಣಿಸೂತ್ರರತ್ನಾಕರ'ದಲ್ಲಿ ಬರುವಂತೆ 'ಭವಿಯ ಸೋಂಕಲಾಗದು ಅನರ್ಪಿತವ ಸ್ವೀಕರಿಸಲಾಗದು' ಎಂಬ ನೇಮವನ್ನು ಪಾಲಿಸುತ್ತಿದ್ದ ಈತ ಒಂದು ದಿನ ಕನಸಿನಲ್ಲಿ ಶಿವನಿಗರ್ಪಿಸಿದ ಕ್ಷೀರವನ್ನು ಕುಡಿದಂತೆ ಕಾಣಲು, ತನ್ನ ವ್ರತ ಭಿನ್ನವಾಯಿತೆಂದು ಬಗೆದು ದೇಹವನ್ನು ತೊರೆದನು. ಬಹುಶಃ ಈ ಕಥೆಗೆ ಕರುಳ ಕೇತಯ್ಯನ 'ತನ್ನ ಸಮ ಕ್ರೀವಂತರಲ್ಲಿಯಲ್ಲದೆ.....' ಎಂದು ಪ್ರಾರಂಭವಾಗುವ ವಚನ (ವ. ೩೧) ಪ್ರೇರಣೆ ನೀಡಿರಬಹುದು. ಈ ಕಥೆಯಲ್ಲಿ ಸತ್ಯಾಂಶವಿದ್ದಂತೆ ತೋರುವುದಿಲ್ಲ. ಏಕೆಂದರೆ 'ವ್ರತ ತಪ್ಪಿತ್ತೆಂದು ಘಟವ ಬಿಟ್ಟಲ್ಲಿ ಮೆಚ್ಚುವ ದೈವಬೇಡ' (ವ. ೨೭) ಎಂಬ ಇವನ ವಚನವು ಮೇಲಣ ಅಭಿಪ್ರಾಯಕ್ಕೆ ವಿರುದ್ಧವಾಗಿದೆ. ಇವನ ಇತರ ವಚನಗಳಲ್ಲೂ ವ್ರತಗಳ ಬಗೆಗೆ ವಿರೋಧದ ಧೋರಣೆಯಿದೆ. ತನ್ನ ಸುತ್ತಮುತ್ತ ಕಾಣಬರುವ ಆತ್ಮವಂಚನೆ, ಸೋಗಲಾಡಿತನವನ್ನು ಮೆಚ್ಚದೆ ಅವನ್ನು ಇವನು ಟೀಕಿಸಿರುವನು. ಒಡೆಯರು (= ಜಂಗಮರು) ಭಕ್ತರ ವಧುಗಳಲ್ಲಿ ಕಳ್ಳದೃಷ್ಟಿ ಇಡುವುದನ್ನೂ, ಹೆಣ್ಣನ್ನು ನೋಡಬಾರದೆಂದು ಕಟ್ಟುಮಾಡಿ ಅಂತರಂಗದಲ್ಲಿ ಹೆಣ್ಣನ್ನು ನೋಡಬಯಸುವ ಮಿಟ್ಟಿಯ ಭಂಡರನ್ನೂ ಟೀಕಿಸುವ ಇವನು ಅಂತಹವರನ್ನು ವ್ರತಸ್ಥರೆಂದು ಹೇಳಲಾಗದೆನ್ನುವನು.

**ಕಲಕೇತಯ್ಯ:**

ಇವನು ಓರ್ವ ಜಾನಪದ ಕಲಾವಿದ. ಕಿಳ್ಳಿಕೇತರ ಆಟವೆಂಬ ಜಾನಪದ ಕಲೆಯನ್ನು ಪ್ರದರ್ಶಿಸುವುದೇ ಇವನ ಕಾಯಕ. ಹರಿಹರನ 'ಲಿಂಗಾರ್ಚನಾ ರಗಳೆ'ಯಲ್ಲಿ ಇವನ

ಉಲ್ಲೇಖ ಬಂದಿದೆ. ತೆಲುಗು ಕವಿ ಪಾಲ್ಕುರಿಕೆ ಸೋಮನಾಥನು ತನ್ನ 'ಪಂಡಿತಾರಾಧ್ಯ ಚರಿತ್ರೆ'ಯಲ್ಲಿ ಇವನನ್ನು ಹೆಸರಿಸಿದ್ದು, ತನ್ನ ತೆಲುಗು ದ್ವಿಪದ 'ಬಸವಪುರಾಣ'ದಲ್ಲಿ ಇವನ ಕಥೆಯನ್ನು ಹೇಳಿರುವನು. ಮುಂದಲೆಯಲ್ಲಿ ಎತ್ತಿಕಟ್ಟಿದ ಮುಡಿ, ನೊಸಲಲ್ಲಿ ವಿಭೂತಿ, ಕಿವಿಗಳಲ್ಲಿ ಕೆಂದಳಿರು, ಎಡಗಾಲಲ್ಲಿ ಅಂದುಗೆ, ಬಲಗಾಲಲ್ಲಿ ಗೆಜ್ಜೆ, ಎಡಗೈಯಲ್ಲಿ ದಕ್ಷನ ಕುರಿದಲೆಯ ತರಿದ ತಗರಿನ ಕೋಡು, ಬಲಗೈಯಲ್ಲಿ ಬೆತ್ತ, ಮೈಮೇಲೆ ಹೊದೆದ ಕಾಗಿನ ಕಪ್ಪಡ -ಹೀಗೆ ಕಲಕೇತ ಬ್ರಹ್ಮಯ್ಯನ ವೇಷದ ವರ್ಣನೆಯನ್ನು ಭೀಮಕವಿಯು ತನ್ನ 'ಬಸವ ಪುರಾಣ'ದಲ್ಲಿ ಮಾಡಿರುವನು (ಸಂ. ೨೮ ಪು. ೩-೪). ಕಾಲಂದುಗೆ ಗೆಜ್ಜೆಗಳು ಘಲ್ ಘಲ್ ಎಂದು ಉಲಿಯುತ್ತಿರಲು ಕೈಯ ಬೆತ್ತವನ್ನು ತಿರುಹುತ್ತ, ಭಕ್ತರ ಅಂಗಳದಲ್ಲಿ ಸಂದರ್ಭಕ್ಕೆ ಒಪ್ಪುವಂತಹ ವೇಷಧರಿಸಿ ವಿವಿಧ ಪಾತ್ರಗಳನ್ನು ಅಭಿನಯಿಸುತ್ತ ಕುಣಿಯುತ್ತ ಭಕ್ತರನ್ನು ನಗಿಸುತ್ತಿದ್ದನು. ತನ್ನ ಕಾಯಕದಿಂದ ಬಂದ ದ್ರವ್ಯವನ್ನು ಇವನು ಬಡಭಕ್ತರಿಗೆ ಹಂಚಿಬಿಡುತ್ತಿದ್ದನು. ಒಂದು ದಿನ ಬಡಭಕ್ತನೋರ್ವನು ಕಿನ್ನರಯ್ಯನು ಪಡಿಕೊಡುವನೆಂಬುದನ್ನು ಕೇಳಿ ಅವನನ್ನು ಕಾಣಲು ಹೋಗುತ್ತಿದ್ದುದನ್ನು ಕಂಡು ಇವನು ಅವನ ಮನದಾಸೆಯನ್ನು ಪೂರೈಸಲು ತನ್ನ ಪಾದಸೋಂಕಿನಿಂದ ಕಲ್ಲುಗಳನ್ನು ಚಿನ್ನವನ್ನಾಗಿ ಮಾಡಿ ಅವನ್ನು ತೆಗೆದುಕೊಂಡು ಹೋಗುವಂತೆ ಅವನಿಗೆ ತಿಳಿಸಿದನು. ತನ್ನಿಂದ ಸಾಧ್ಯವಾದಷ್ಟನ್ನು ತೆಗೆದುಕೊಂಡು ಹೋದ ಆ ಭಕ್ತನಿಂದ ನಡೆದುದೆಲ್ಲವನ್ನೂ ಕೇಳಿ ತಿಳಿದ ಬಸವಣ್ಣನು ಕಲಕೇತ ಬೊಮ್ಮಯ್ಯನನ್ನು ಹೊಗಳಿ ಉಳಿದ ಚಿನ್ನವನ್ನು ತನ್ನ ಸೇವಕರಿಂದ ತರಿಸಿಕೊಟ್ಟನು. ಅದನ್ನು ತಿಳಿದ ಕಿನ್ನರಯ್ಯನು ಕಲಕೇತ ಬೊಮ್ಮಯ್ಯನನ್ನು ಕಂಡು ಅವನನ್ನು ಸ್ತುತಿಸಿದನು.

ಮೇಲಣ ಪವಾಡಕಥೆ 'ಬಸವಪುರಾಣ' ಹಾಗೂ 'ಶಿವತತ್ವ ಚಿಂತಾಮಣಿ'ಗಳಲ್ಲಿ ಕಂಡುಬರುತ್ತದೆ. ಬಸವಣ್ಣ ತನ್ನ ವಚನವೊಂದರಲ್ಲಿ 'ಕಲಕೇತನಂತಪ್ಪ ತಂದೆ ನೋಡೆನಗೆ' ಎಂದು ಸ್ತುತಿಸಿರುವನು.

**ಕಾಮಾಟದ ಭೀಮಣ್ಣ:**

ಇವನ ಜೀವಿತದ ಬಗೆಗೆ ಹೆಚ್ಚಿನ ವಿವರಗಳೇನೂ ತಿಳಿದುಬಂದಿಲ್ಲ. ಇವನ ವಚನಗಳಿಂದ ಇವನು ಕಾಮಾಟಿ ಕಾಯಕದವನೆಂಬುದು ತಿಳಿದುಬರುತ್ತದೆ. ವೃತ್ತಿಪರವಾದ ವಚನಗಳು ಬೆಡಗಿನ ಧಾಟಿಯನ್ನು ಹೊಂದಿವೆ; ಆಧ್ಯಾತ್ಮವತ್ತ ಹೊರಳಿವೆ.

**ಕಿನ್ನರಿ ಬ್ರಹ್ಮಯ್ಯ:**

ಇವನು ಮೂಲತಃ ಆಂಧ್ರದ ಪ್ರೂಮೂರು (ಪೊಡೂರು) ಎಂಬ ಗ್ರಾಮಕ್ಕೆ ಸೇರಿದವನು. ವೃತ್ತಿಯಲ್ಲಿ ಅಕ್ಕಸಾಲಿ. ಒಮ್ಮೆ ಗುರುವಿನ ಆಭರಣದಲ್ಲಿ ತೂಕ ಕಡಿಮೆಯಾಗಲು ಬೇಸರಗೊಂಡು ವೃತ್ತಿಯನ್ನು ತ್ಯಜಿಸಿ ಕಲ್ಯಾಣಕ್ಕೆ ಬಂದು ಬಸವಣ್ಣನ ಆಪ್ತವರ್ಗಕ್ಕೆ ಸೇರಿದವನಾದನು. ಕಲ್ಯಾಣದಲ್ಲಿ ನೆಲೆಸಿದ ಮೇಲೆ, ಅಲ್ಲಿನ ತ್ರಿಪುರಾಂತ-

ಕೇಶ್ವರನ ಮುಂದೆ ಕಿನ್ನರಿ ನುಡಿಸುವುದನ್ನು ಕಾಯಕವನ್ನಾಗಿ ಸ್ವೀಕರಿಸಿ, ಅದರಿಂದ ಬಂದ ಆದಾಯದಿಂದ ಜಂಗಮದಾಸೋಹ ನಡೆಸುತ್ತಿದ್ದನು. ಇದರಿಂದಾಗಿ ಕಿನ್ನರಿ ಬ್ರಹ್ಮಯ್ಯನೆಂಬ ಹೆಸರು ಇವನಿಗೆ ಬಂದಿತು. ಹರಿಹರನ 'ಬಸವರಾಜದೇವರ ರಗಳೆ'ಯಲ್ಲಿ ಉಳ್ಳಿಯ ಪ್ರಸಂಗ ಸ್ವಾರಸ್ಯಕರವಾಗಿ ಬಂದಿದೆ. ಬಸವಣ್ಣನು ಉಳ್ಳಿಯನ್ನು ನಿಂದಿಸಿದಾಗ ಕಿನ್ನರಯ್ಯನಿಗೆ ಕೋಪ ಬಂದು ಬಸವಣ್ಣನ ಮನೆಯಿಂದ ಹೊರಟು ಹೋಗುವನು. ತನ್ನ ತಪ್ಪನ್ನು ಮನಗಂಡ ಬಸವಣ್ಣ ಕಿನ್ನರಯ್ಯನಲ್ಲಿಗೆ ಹೋಗಿ ಅವನನ್ನು ಸಮಾಧಾನಪಡಿಸಿ ಕರೆದುಕೊಂಡು ಬಂದದ್ದಲ್ಲದೆ ತನ್ನ ಭಕ್ತನ ಪ್ರೀತ್ಯರ್ಥವಾಗಿ ಊರಲ್ಲೆಲ್ಲಾ ಉಳ್ಳಿಯ ಮೆರವಣಿಗೆಯನ್ನು ಮಾಡಿಸುವನು.

ಕಲ್ಯಾಣಕ್ಕೆ ಬಂದ ಅಕ್ಕಮಹಾದೇವಿಯ ತೀವ್ರತರವಾದ ವೈರಾಗ್ಯವನ್ನು ಒರೆ ಹಚ್ಚಿ ನೋಡಿದವರಲ್ಲಿ ಕಿನ್ನರಯ್ಯ ಮೊದಲಿಗ. ಮಹಾದೇವಿಯಕ್ಕ ನಿಜವಾದ ಭಕ್ತೆಯೆಂಬುದು ಅರಿವಿಗೆ ಬಂದಾಗ ಕಿನ್ನರಯ್ಯನಿಗೆ ತೀವ್ರವಾದ ಪಶ್ಚಾತ್ತಾಪವಾಗುತ್ತದೆ. ಅವನ ಆಗಿನ ಮನೋಧರ್ಮವನ್ನು ಅವನ ವಚನದ 'ಹುಲಿನೆಕ್ಕಿ ಬದುಕಿದೆನು ಶರಣಾರ್ತಿ ಶರಣಾರ್ತಿ ತಾಯೆ' ಎಂಬ ಒಂದು ಸಾಲು ಬಹಳ ಸೊಗಸಾಗಿ ಧ್ವನಿಸುತ್ತದೆ.

ಕಲ್ಯಾಣದಲ್ಲಿ ನಡೆದ ಕ್ರಾಂತಿಯಲ್ಲಿ ಬಿಜ್ಜಳನ ಕೊಲೆಯಾದ ಮೇಲೆ ಶಿವಶರಣರು ಚದುರಿಹೋದರು. ಚನ್ನಬಸವಣ್ಣನು ಉಳವಿಗೆ ಹೋಗುವ ಮುನ್ನ ಕಿನ್ನರಯ್ಯನಿಗೆ ದಂಡಿನ ಆಧಿಪತ್ಯವನ್ನು ವಹಿಸಿಕೊಟ್ಟನು. ಯುದ್ಧದಲ್ಲಿ ಹೋರಾಡಿದ ಕಿನ್ನರಯ್ಯನು ಉಳವಿಯಲ್ಲಿಯ ಮಹಾಮನೆಯ ಮುಂದಿನ ನದಿಯನ್ನು ಒಂದು ಗವಿಗೆ ತಿರುಗಿಸಿದನು. ಅದರಿಂದ ಶತ್ರುಸೇನೆಯ ಬಹುಭಾಗ ನಾಶವಾಯಿತು. ಈತ ತಿರುಗಿಸಿದ ಆ ನದಿಗೆ ಈಗ 'ಕಿನ್ನರಿ ಬ್ರಹ್ಮಯ್ಯನ ಹೊಳೆ' ಎಂಬ ಹೆಸರು ಬಂದಿದೆ. ಮಹಾಮನೆಗೆ ಸಮೀಪದಲ್ಲಿರುವ ಈತನ ಸಮಾಧಿಯ ಮೇಲೆ 'ಕಿನ್ನರಯ್ಯ' ಎಂಬ ಹೆಸರಿರುವ ಒಂದು ಶಿಲಾಶಾಸನವೂ ಇದೆ.

'ಶರಣ ಲೀಲಾಮೃತ'ದಲ್ಲಿ ಇವನ ಬಗ್ಗೆ ತಿಳಿದುಬರುವ ಸಂಗತಿಯೊಂದು ಇಂತಿದೆ: ಒಂದು ದಿನ ವಿಟನೊಬ್ಬನು ತನ್ನ ವಾರಾಂಗನೆಯ ಆಹಾರಕ್ಕಾಗಿ ಒಂದು ಕುರಿಯನ್ನು ಕೊಂಡೊಯ್ಯುತ್ತಿರುವಾಗ ಅದು ಹಗ್ಗವನ್ನು ಕಿತ್ತುಕೊಂಡು ಓಡುತ್ತಾ ತ್ರಿಪುರಾಂತಕೇಶ್ವರನ ಗುಡಿಯನ್ನು ಹೊಕ್ಕಿತು. ಅಲ್ಲಿದ್ದ ಕಿನ್ನರಯ್ಯನು ಅದಕ್ಕಾಗಿ ಸಾವಿರಹೊನ್ನು ಕೊಟ್ಟು ಬಿಡಿಸಿ, ಅದಕ್ಕೆ ಲಿಂಗ ಮುದ್ರೆಯನ್ನು ಒತ್ತಿದನು. ಆದರೆ ಆ ವಿಟ ತನ್ನ ವಾರಾಂಗನೆಗೆ ಹೆದರಿ ಕುರಿಯನ್ನು ಹೊಡೆದುಕೊಂಡು ಹೋಗುತ್ತಿರಲು ಕೋಪೋದ್ರಿಕ್ತನಾದ ಕಿನ್ನರಯ್ಯ ಅವನನ್ನು ಕೊಂದನು. ವಿಷಯ ತಿಳಿದ ಬಿಜ್ಜಳನು ಕಿನ್ನರಯ್ಯನನ್ನು ಆಕ್ಷೇಪಿಸಿದನು. ಕುರಿಯ ವಾದದಲ್ಲಿ ಕಿನ್ನರಯ್ಯನು ತ್ರಿಪುರಾಂತಕೇಶ್ವರನ ಕೈಲಿ ಕದವ ತೆಗೆಸಿ, ಶಿವನಿಂದ ಸಾಕ್ಷಿ ಹೇಳಿಸಿ, ಅವನನ್ನು ಬದುಕಿಸಿ ಅನಂತರ ಕುರಿಯನ್ನು ರಜತಗಿರಿಗೆ ಕಳುಹಿಸಿದನು. ಈ ಪವಾಡಕಥೆ ವಿರೂಪಾಕ್ಷ ಪಂಡಿತನ ಕಾಲಕ್ಕೆ ಪ್ರಚಲಿತವಿದ್ದಿತು. 'ಚೆನ್ನಬಸವ ಪುರಾಣ'ದಲ್ಲಿ '........

ಕಿನ್ನರಿಬ್ರಹ್ಮಯ್ಯನಿಲ್ಲಿಯ ನೃಪಾಲಕಂ ಕೇಳೆ ತ್ರಿಪುರಾಂತಕನ ನುಡಿಸಿದಂ' ಎಂದು ಈ ಘಟನೆಯ ಸಂಕ್ಷಿಪ್ತ ವಿವರ ಬಂದಿದೆ (ಸಂ. ೫೭ ಪ. ೫೨).

**ಕೀಲಾರದ ಭೀಮಣ್ಣ :**

ಇವನು ಕಲ್ಯಾಣದಲ್ಲಿ ವ್ಯವಸಾಯ ಮಾಡಿಕೊಂಡು ದನಗಳನ್ನು ಸಾಕುತ್ತಿದ್ದನು. ಹಲವು ಗಿರಿಗಳ ತಪ್ಪಲಲ್ಲಿ, ಮಲೆಯ ಮಂದಿರಗಳಲ್ಲಿ ಗೋವುಗಳು ಮೇದು ತಮ್ಮ ಮೂಲಸ್ಥಾನಕ್ಕೆ ತಪ್ಪದೆ ಬರುವುದನ್ನೂ, ಎರಡು ಮಾನ ಹತ್ತಿಯ ಕಾಳನ್ನು ಮೇಯಲಿಕ್ಕೆ ಹಾಕಿ ಅಂಡೆಯಲ್ಲಿ ಹಾಲು ಕರೆಯುವುದನ್ನೂ ಇವನು ಹೇಳುವನು. ನಾನಾ ವರ್ಣದ ಗೋವುಗಳು, ಆದರೆ ಅವು ಕರೆಯುವ ಹಾಲಿಗೆ ಮಾತ್ರ ಏಕವರ್ಣ ಎನ್ನುವಲ್ಲಿನ ಆಶ್ಚರ್ಯಭಾವ ಮೆಚ್ಚುವಂತಿದೆ. ಕರೆದು ತಂದ ಹಾಲನ್ನು ಚಟ್ಟಿಹತ್ತದೆ, ಹಸುಕು ನಾರದೆ, ಕೌರು ಏಳದೆ, ನೀರ ರಸ ತಪ್ಪಿ ಮಧುರ ರಸ ತುಂಬಿ ಕಾಸಬೇಕು. ಹಾಗೆ 'ಕಾಸಿ ಉಣಬಲ್ಲಡೆ ಆತನೆ ಭೋಗಿ' ಎಂದು ಇವನು ಹೇಳುವನು.

**ಕೂಗಿನ ಮಾರಯ್ಯ :**

ಪರ್ವತೇಶನ 'ಚತುರಾಚಾರ್ಯ ಪುರಾಣ'ದ ಪ್ರಕಾರ ಇವನು ಕಲ್ಯಾಣದಲ್ಲಿ ಶಿವಾನುಭವ ಮಂಟಪದ ಗೋಷ್ಠಿಯಲ್ಲಿ ಭಾಗವಹಿಸುತ್ತಿದ್ದು, ಪ್ರಸಿದ್ಧ ಶಿವಾನುಭವಿಯಾಗಿದ್ದನು. ಕಲ್ಯಾಣದ ಕ್ರಾಂತಿಯ ಕಾಲದಲ್ಲಿ ಈತ ಶರಣರೊಡನಿದ್ದುಕೊಂಡು ಬಿಜ್ಜಳನ ಸೈನ್ಯ ಬಂದಾಗ ಉಚ್ಚಧ್ವನಿಯಲ್ಲಿ ಕೂಗು ಹಾಕುತ್ತಿದ್ದನು. ಆಗ ಶರಣಸೈನ್ಯ ಎಚ್ಚತ್ತು ಬಿಜ್ಜಳನ ಸೈನ್ಯದೊಂದಿಗೆ ಯುದ್ಧಮಾಡಲು ಸನ್ನದ್ಧವಾಗುತ್ತಿತ್ತು. ಈ ಕಾರಣದಿಂದ ಇವನಿಗೆ ಈ ಹೆಸರು ಬಂದಿರಬಹುದು.

**ಕೊಟಾರದ ಸೋಮಣ್ಣ :**

ಇವನ ಬಗೆಗೆ ಹೆಚ್ಚಿನ ವಿವರಗಳೇನೂ ತಿಳಿದುಬಂದಿಲ್ಲ. ದೊರೆತಿರುವ ಇವನ ಒಂದು ವಚನದಲ್ಲಿ ಸದ್ಭಕ್ತನ ಲಕ್ಷಣ ಹಾಗೂ ಅಷ್ಟಾವರಣಗಳ ವಿವರಣೆ ಬಂದಿದೆ.

**ಕೋಲ ಶಾಂತಯ್ಯ :**

'ಭೈರವೇಶ್ವರ ಕಾವ್ಯದ ಕಥಾಮಣಿ ಸೂತ್ರರತ್ನಾಕರ'ದಲ್ಲಿ ಹೇಳಿರುವಂತೆ ಇವನು 'ಬಸವಣ್ಣನಲ್ಲಿ ಕಟ್ಟಿಗೆವಿಡಿದು ಮಾಲದಾರ ನಿಯೋಗವನು ನಡೆಸುವವನು.' ಇಲ್ಲಿ ಬರುವ 'ಕಟ್ಟಿಗೆವಿಡಿದು' ಎಂಬುದರಿಂದ ಈತನು ಕಟ್ಟಿಗೆ ಅಥವಾ ಕೋಲನ್ನು ಹಿಡಿದು ಕಾಯಕ ನಡೆಸುತ್ತಿದ್ದನೆಂದು ಹೇಳಬಹುದು. ಆ ಕಾರಣಕ್ಕಾಗಿಯೇ ಇವನಿಗೆ ಕೋಲ ಶಾಂತಯ್ಯನೆಂಬ ಹೆಸರು ಬಂದಿರಬಹುದು. ಇವನ ೧೦೩ ವಚನಗಳು ದೊರೆತಿದ್ದು, ವಚನಗಳ ಗುಣಾತ್ಮಕ ಮೌಲ್ಯದಿಂದಾಗಿ ಹಿರಿಯ ವಚನಕಾರನಾಗಿರುವನು. ಪುರಾತನರ ವಚನಗಳ ಕಟ್ಟಿನಲ್ಲಿ ಹಾಗೂ ಮೂರುಸಾವಿರ ವಚನಗಳ ಕಟ್ಟಿನಲ್ಲಿ ಮೊದಲಸ್ಥಾನ ಇವನದು. ಕೋಲಶಾಂತಯ್ಯನು ಚಿತ್ರದ ಜಂಗಮವನ್ನು ಇರಿದವನನ್ನು ಇರಿದ ಕಥೆ ಭೈರವೇಶ್ವರ

ಕಾವ್ಯ, ಚೆನ್ನಬಸವಪುರಾಣ, ಭೈರವೇಶ್ವರ ಕಾವ್ಯದ ಕಥಾಮಣಿ ಸೂತ್ರರತ್ನಾಕರ ಮೊದಲಾದ ಕೃತಿಗಳಲ್ಲಿ ಬಂದಿದೆ. ಆ ಪ್ರಸಂಗ ಹೀಗಿದೆ: ಬಿಜ್ಜಳರಾಯನ ಕಂಭ ಕುಸಿದ ಚಾವಡಿಯನ್ನು ಬಿಚ್ಚಿ ಕಟ್ಟುತ್ತಿದ್ದ ಉಪ್ಪಾರ ಹರಿದಾಸನು ಅದರ ಗೋಡೆಯಲ್ಲಿದ್ದ ಚಿತ್ರದ ಜಂಗಮನನ್ನು ಡೊಳ್ಳು ಹೊಟ್ಟೆಯವನೆಂದು ಹಾರೆಯಿಂದ ಇರಿಯುವನು. ಇರಿಯಬೇಡವೆಂದು ಕೋಲ ಶಾಂತಯ್ಯ ತಡೆದರೂ ಕೇಳದೆ ತಿವಿಯಲು ಕೆರಳಿದ ಅವನು ಹರಿದಾಸನನ್ನು ಕೊಂದನು. ಬಿಜ್ಜಳನು ಇದನ್ನು ಆಕ್ಷೇಪಿಸಿದನು. ಚಿತ್ರದ ಜಂಗಮನು ನಿಜವಾದ ಜಂಗಮವಾದರೆ ಅವನನ್ನು ಕರೆಯಿರಿ ಎಂದು ಬಿಜ್ಜಳ ವ್ಯಂಗ್ಯವಾಡಲು ಆಗ ಕೋಲ ಶಾಂತಯ್ಯನು "ಚಿತ್ರದ ಸಂಗಮನಾಥ ಬನ್ನಿ" ಎಂದು ಕರೆದು ಅವನನ್ನು ನಿಜವಾದ ಜಂಗಮವನ್ನಾಗಿ ಮಾಡಿದನು. ಬಿಜ್ಜಳನು ಹರಿದಾಸನನ್ನು ಬದುಕಿಸಿ ಎಂದು ಕೇಳಿಕೊಳ್ಳಲು ಶಾಂತಯ್ಯನು ತನ್ನ ಕೋಲನ್ನು ಮುಟ್ಟಿಸಿ ಹರಿದಾಸನಿಗೆ ಪ್ರಾಣಬರುವಂತೆ ಮಾಡಿದನು.

**ಗಜೇಶ ಮಸಣಯ್ಯ :**

ಪಾಲ್ಕುರಿಕೆ ಸೋಮನಾಥನ 'ಗಣಸಹಸ್ರ ನಾಮಾವಳಿ'ಯಲ್ಲಿ ಇವನ ಹೆಸರಿನ ಉಲ್ಲೇಖ ಬಂದಿದೆ. ವಿಜಾಪುರದಿಂದ ೬೦ ಮೈಲು ದೂರದಲ್ಲಿ ಅಕ್ಕಲಕೋಟೆಗೆ ಸಮೀಪದಲ್ಲಿ ಕರಜಿಗೆ ಎಂಬ ಒಂದು ಗ್ರಾಮವಿದ್ದು, ಇವನ ಇಷ್ಟದೈವವಾದ ಗಜೇಶ್ವರ ದೇವಾಲಯವು ಇಲ್ಲಿ ಇದ್ದುದಾಗಿ ಶಿಲಾಹಾರರ ಒಂದು ಶಾಸನದಿಂದ ತಿಳಿದುಬರುತ್ತದೆ. ಇದರ ಬಳಿಯಲ್ಲಿರುವ ಮನಹಳ್ಳಿಯಲ್ಲಿ ಮಸಣಯ್ಯನ ದೇವಾಲಯವಿದ್ದು ಅಲ್ಲಿ ಪ್ರತಿ ವರ್ಷ ಜಾತ್ರೆ ನಡೆಯುತ್ತದೆ. ಈ ಮನಹಳ್ಳಿಯಿಂದ ಆರು ಮೈಲು ದೂರದಲ್ಲಿ ಬೆಣ್ಣೆ ತೊರೆ ಎಂಬ ಹಳ್ಳ ಹರಿಯುತ್ತದೆ. ಮಸಣಯ್ಯನು ಪೂಜೆಗೆ ಕುಳಿತಿದ್ದ ಸ್ಥಳವು ಬಹುಶಃ ಇದೇ ಆಗಿರಬಹುದೆಂದೂ ಈ ಕರಜಿಗೆಯೇ ಮಸಣಯ್ಯನ ಊರಾಗಿರಬಹುದೆಂದೂ ಫ.ಗು. ಹಳಕಟ್ಟಿಯವರು ಊಹಿಸುವರು (ಶಿವಶರಣರ ಚರಿತ್ರೆಗಳು-೨, ಪು. ೨೧೪). 'ಭೈರವೇಶ್ವರ ಕಾವ್ಯದ ಕಥಾಮಣಿ ಸೂತ್ರರತ್ನಾಕರ'ದಲ್ಲಿ ಇವನ ಕಥೆ ಹೀಗೆ ಬಂದಿದೆ: ಕರಜಿಗೆ ಗ್ರಾಮದಲ್ಲಿ ಇವನು 'ಜಂಗಮದಾಸೋಹ ಮಾಡುತ್ತ ಲಿಂಗಪೂಜೆ ಮಾಡುವಲ್ಲಿ ಇತರೇತರವ ಮರದು ಹುಲಿ, ಕರಡಿ, ಸರ್ಪ, ಶರಭ, ಶರಧಿ, ವೃಶ್ಚಿಕ, ಆನೆ, ಭೂತವೇತಾಳ, ಬಿರುಗಾಳಿ, ಅನಲ, ಸಿಡಿಲು, ಮಿಂಚು, ಮಳೆ, ಹೊಳೆ ಇದರ ಭಯ ಬಂದಡೆಯು ಲಿಂಗಪೂಜೆಯ ಬಿಟ್ಟು ತೊಲಗಬಾರದೆಂಬ ಭಾಷೆಯಿಂದ ಪೂಜೆಗೆಯ್ಯುತ್ತಿದ್ದನು'. ಒಂದು ದಿನ ಗುರು ದರ್ಶನಕ್ಕೆ ಹೋಗುತ್ತಿದ್ದಾಗ ದಾರಿಯಲ್ಲಿ ಒಂದು ನದಿಯನ್ನು ಕಂಡು ಅಲ್ಲಿ ಶಿವಪೂಜೆಗೆ ಕುಳಿತನು. ಶಿವನು ಇವನನ್ನು ಪರೀಕ್ಷಿಸಬೇಕೆಂದು ಗಗನವಿಬ್ಭಾಗವಪ್ಪಂತೆ ಮಳೆಯ ಕರೆಯಲು ಆತ ಅದಕ್ಕೆ ಅಂಜದೆ ತದೇಕಚಿತ್ತನಾಗಿ ಚಳಿಯನ್ನೂ ತಾಳೆಯಮರದ ಎತ್ತರಕ್ಕೆ ಉಕ್ಕಿ ಹರಿದುಬರುವ ಹೊಳೆಯನ್ನೂ ಲೆಕ್ಕಿಸದೆ ಪೂಜಾನಿರತನಾಗಿದ್ದನು. ಇವನ ಭಕ್ತಿಗೆ ಬೆರಗಾದ ಹೊಳೆ ಇವನ ಮೇಲೆ ಹರಿಯದೆ ಇಬ್ಭಾಗವಾಗಿ ಹರಿದು ಇವನನ್ನು ಮಧ್ಯೆ ಬಿಟ್ಟು ಮತ್ತೆ ಒಂದಾಗಿ

ಪರಿಯತೊಡಗಿತು. ಮಸಣಯ್ಯ 'ಲಿಂಗವ ನುತಿಸುವ ಪಿಕಳಾವಸ್ಥೆ'ಯಲ್ಲಿ ನಿರ್ವಯಲಾದನು.

ಕನ್ನಡದ ಅತ್ಯಂತ ಶ್ರೇಷ್ಠ ಮಧುರಭಾವದ ವಚನಗಳನ್ನು ಬರೆದವರಲ್ಲಿ ಇವನು ಮುಖ್ಯನು. ಈತ ಭಾಷೆಯನ್ನು ಶಕ್ತಿಪೂರ್ಣವಾಗಿ ಬಳಸಿಕೊಂಡಿರುವನು. 'ಸತಿಪತಿ ಭಾವ' ಇವನ ವಚನಗಳ ಕೇಂದ್ರ ಬಿಂದು.

**ಗಾಣದ ಕಣ್ಣಪ್ಪ :**

ಈತ ವೃತ್ತಿಯಲ್ಲಿ ಮೀನುಗಾರ. ಅಲ್ಲಮಪ್ರಭು ಇವನ ಆದರ್ಶ ಮೂರ್ತಿಯಾಗಿರಬಹುದು. ಆದ್ದರಿಂದಲೋ ಏನೋ ಇವನು ಅಲ್ಲಮಪ್ರಭುವಿನ ಹೆಸರಿನಿಂದಲೇ ವಚನಗಳನ್ನು ರಚಿಸಿದ್ದಾನೆ. ಕಲ್ಯಾಣದ ತ್ರಿಪುರಾಂತಕೇಶ್ವರನ ಕೆರೆಯಲ್ಲಿ ಮೀನು ಹಿಡಿಯುವುದು ಇವನ ನಿತ್ಯದ ಕಾಯಕ. ಇವನ ಪತ್ನಿ ರೇಚವ್ವೆ. ಸತಿಪತಿಗಳೀರ್ವರೂ ಶಿವಾನುಭವಗೋಷ್ಠಿಯಲ್ಲಿ ಭಾಗವಹಿಸುತ್ತಿದ್ದರು. ಒಮ್ಮೆ ಇವನಿಗೆ ಗಣಪರ್ವ ಮಾಡಬೇಕೆಂಬ ಆಸೆಯಾಯಿತು. ಅಂದು ಲಿಂಗಪೂಜೆಗೆ ಕುಳಿತಾಗ 'ನಿನಗೇನು ಬೇಕು' ಎಂಬ ಅವ್ಯಕ್ತ ಧ್ವನಿ ಕೇಳಿಸಿತು. ತನಗೆ ಒಂದು ಸ್ವರ್ಣಮತ್ಸ್ಯ ಬೇಕು ಎಂದ ಕಣ್ಣಪ್ಪ. 'ಆಗಲಿ' ಎಂಬ ಉತ್ತರವೂ ಕೇಳಬಂದಿತು. ಅಂದು ತ್ರಿಪುರಾಂತಕ ಕೆರೆಯಲ್ಲಿ ಬಲೆಯನ್ನು ಹಾಕಿದಾಗ ಒಂದು ಸ್ವರ್ಣಮತ್ಸ್ಯ ದೊರೆಯಿತು. ಅದನ್ನು ಮಾರಿ ಬಂದ ಹಣದಿಂದ ಗಣಪರ್ವ ಮಾಡಲು ತೀರ್ಮಾನಿಸಿ ಶಿವಾನುಭವ ಮಂಟಪಕ್ಕೆ ಬಂದು ಜಂಗಮಮೂರ್ತಿಗಳಿಗೆ ಬಿನ್ನಹಮಾಡಿದನು. ಕಣ್ಣಪ್ಪನ ಮನೆಗೆ ಬಂದ ಜಂಗಮರು ಅಲ್ಲಿ ಸತ್ತು ಬಿದ್ದ ಮೀನುಗಳ ವಾಸನೆಯನ್ನು ತಡೆಯಲಾರದೆ ಅಸಹ್ಯಪಟ್ಟು ಬಸವಣ್ಣನ ಮಹಾಮನೆಗೆ ಬಂದರು. ಅವರನ್ನು ಕಣ್ಣಪ್ಪ ಮತ್ತೆ ಕರೆಯಲು ಬಂದಾಗ ಜಂಗಮರು ಅವನಿಗೆ ಛೀಮಾರಿ ಹಾಕಿ ಅವನ ಲಿಂಗವನ್ನು ಕಿತ್ತು ಹೊರಗೆ ಹಾಕಿದರು. ಇತ್ತ ಬಸವಣ್ಣನ ಮಹಮನೆಯಲ್ಲಿ ಲಿಂಗಪೂಜೆಗೆ ಕುಳಿತ ಜಂಗಮರು ತಮ್ಮ ಕರಡಿಗೆಯನ್ನು ಬಿಚ್ಚಿದಾಗ ಸಜ್ಜೆಯಲ್ಲಿ ಲಿಂಗಗಳೇ ಇರಲಿಲ್ಲ. ವಿಷಯ ತಿಳಿದ ಬಸವಣ್ಣ ಕಣ್ಣಪ್ಪನ ಮನೆಗೆ ಅವರನ್ನು ಕರೆದುಕೊಂಡು ಹೋಗಿ ಅವರ ತಪ್ಪನ್ನು ಮನ್ನಿಸುವಂತೆಯೂ ಅವರ ಇಷ್ಟಲಿಂಗಗಳನ್ನು ಹಿಂತಿರುಗಿಸುವಂತೆಯೂ ಕೇಳಿಕೊಂಡನು. ಕಣ್ಣಪ್ಪ ಜಂಗಮರನ್ನು ತ್ರಿಪುರಾಂತಕ ಕೆರೆಯ ಬಳಿಗೆ ಕರೆದುಕೊಂಡು ಹೋಗಿ ತಾನು ಧ್ಯಾನಾಸಕ್ತನಾದನು. ಸ್ವಲ್ಪ ಹೊತ್ತಿನಲ್ಲಿಯೇ ಕಳೆದುಹೋದ ಲಿಂಗಗಳು ನೀರಿನಲ್ಲಿ ತೇಲಿಬಂದವು. ಜಂಗಮರು ತಮ್ಮ ತಮ್ಮ ಲಿಂಗಗಳನ್ನು ಪಡೆದು ಕಣ್ಣಪ್ಪನನ್ನು ಸ್ತುತಿಸಿ ಹೋದರು. ಈ ಪವಾಡಕಥೆ ಪಾಲ್ಕುರಿಕೆ ಸೋಮೇಶ್ವರ ಪುರಾಣ, (ಪರ್ವತೇಶನ) ಚತುರಾಚಾರ್ಯ ಪುರಾಣ, ಬಸವೇಶ್ವರ ಪುರಾಣ ಕಥಾಸಾಗರ, ಭೈರವೇಶ್ವರ ಕಾವ್ಯದ ಕಥಾಮಣಿ ಸೂತ್ರ ರತ್ನಾಕರ, ಶರಣಲೀಲಾಮೃತ ಮೊದಲಾದ ಕೃತಿಗಳಲ್ಲಿ ಕಂಡುಬರುತ್ತದೆ. ಗಾಳದ ಕನ್ನ(ಯ್ಯ)ನ ಸಾಂಗತ್ಯ ಎಂಬ ಅಜ್ಞಾತಕವಿಯೊಬ್ಬನ ಸಾಂಗತ್ಯ ಕೃತಿ (ಅಪೂರ್ಣ-ಓಲೆಪ್ರತಿ) ಮುಬ್ಬಳ್ಳಿಯ

ಶ್ರೀ ಜಗದ್ಗುರು ಮೂರು ಸಾವಿರ ಮಠದ ಹಸ್ತಪ್ರತಿ ಸಂಗ್ರಹದಲ್ಲಿ ಸಿಗುತ್ತದೆ. ನೋಡಿ: ಶ್ರೀ ಜಗದ್ಗುರು ಮೂರುಸಾವಿರ ಮಠದ ವರ್ಣನಾತ್ಮಕ ಹಸ್ತಪ್ರತಿಸೂಚಿ, ಪು. ೧೦೦-೧, (೧೯೮೯)

**ಗಾವುದಿ ಮಾಚಯ್ಯ :**

ಇವನ ಜೀವಿತದ ಬಗ್ಗೆ ಹೆಚ್ಚಿನ ವಿವರಗಳು ತಿಳಿದುಬಂದಿಲ್ಲ. ಮಾಚಯ್ಯ ನಿತ್ಯವೂ ಶಿವಪೂಜೆ ಮಾಡಿ ದೈನಂದಿನ ಕಾರ್ಯವನ್ನು ನಿರ್ವಹಿಸುತ್ತಿದ್ದನು. ಒಮ್ಮೆ ಈತ ಪೂಜಿಸುತ್ತ ಪ್ರಾಣಲಿಂಗಾನುಸಂಧಾನದಲ್ಲಿರಲು ಕೊಂಡೆಯರು ಇವನು ಮರಣ ಹೊಂದಿದನೆಂದು ಬಿಜ್ಜಳನಿಗೆ ಹೇಳಹೋದರು. ಬಿಜ್ಜಳನು ಪರೀಕ್ಷಿಸಲು ಬಂದನು. ಶಿವಪೂಜೆಯಲ್ಲಿಯೇ ಬೆರತುಹೋಗಿದ್ದ ಮಾಚಯ್ಯ ಧೂಪ, ಪರಿಮಳ ಶಿವನಿಗೆ ಬೆಳಗಿ ಬಹಿರ್ಮುಖನಾದನು. ಅತಿಯಾಗಿ ಗಳಿಸಬಾರದು; ಗಳಿಸಿದ ದ್ರವ್ಯವನ್ನು ಉಳಿಸದೆ ಗುರು-ಲಿಂಗ- ಜಂಗಮಕ್ಕೆ ಅರ್ಪಿಸಬೇಕು; ಹೊನ್ನು ಹೆಣ್ಣು ಮಣ್ಣು - ಈ ಲೌಕಿಕ ಸುಖಭೋಗಗಳನ್ನು ಬಿಟ್ಟ ಮೇಲೆ ಮತ್ತೆ ಅದಕ್ಕೆ ಆಶೆಪಡಬಾರದು - ಇವು ಇವನ ವಚನಗಳ ಆಶಯ.

**ಗುಪ್ತ ಮಂಚಣ್ಣ :**

ಇವನು ಬಿಜ್ಜಳನ ಭಂಡಾರದ ಕರಣಿಕನಾಗಿದ್ದ ದಾಮೋದರ ಹಾಗೂ ಅವನ ಪತ್ನಿ ಮಾಯಾವಾದಿಯ ಮಗ. ಈ ದಂಪತಿಗಳು ವೈಷ್ಣವರಾಗಿದ್ದರು. ಬಹುಕಾಲ ಮಕ್ಕಳಾಗದಿದ್ದಾಗ ಮಾಯಾವಾದಿಯು ಗುಪ್ತವಾಗಿ ಶಿವಾಲಯಕ್ಕೆ ಹೋಗಿ ಸಂತಾನವನ್ನು ಅನುಗ್ರಹಿಸುವಂತೆ ಶಿವನನ್ನು ಪ್ರಾರ್ಥಿಸುತ್ತಿದ್ದಳು. ಶಿವನ ಕರುಣೆಯಿಂದ ಮಂಚಣ್ಣ ಜನಿಸಿದನು. ವೈಷ್ಣವ ಮತದ ಪ್ರಕಾರ ಜಾತಕರ್ಮಾದಿಗಳೂ ಎಂಟನೇ ವಯಸ್ಸಿಗೆ ಉಪನಯನವೂ ಆದುವು. ಕುಶಾಗ್ರಮತಿಯಾದ ಇವನನ್ನು ಬಿಜ್ಜಳ ತನ್ನ ಪತ್ರವ್ಯವಹಾರಗಳನ್ನು ನೋಡಿಕೊಳ್ಳುವ ನಿಯೋಗಿಯಾಗಿ ನೇಮಿಸಿದನು. ಮಂಚಣ್ಣ ವೇದವೇದಾಂತಗಳನ್ನೂ ಉಪವೇದಗಳನ್ನೂ ಪುರಾಣಗಳನ್ನೂ ಧರ್ಮ ಶಾಸ್ತ್ರಗಳನ್ನೂ ಆಗಮಗಳನ್ನೂ ಅಭ್ಯಾಸಮಾಡಿದನು. ವೈಷ್ಣವನಾಗಿದ್ದರೂ ಶಿವನ ಶ್ರೇಷ್ಠತೆಯನ್ನು ತಿಳಿದು ಕ್ರಮಕ್ರಮವಾಗಿ ಹರಿಭಕ್ತಿಯನ್ನು ತ್ಯಜಿಸಿ ಶಿವಭಕ್ತಿಯನ್ನು ಇವನು ಹೊಂದಿದಂತೆ ತೋರುತ್ತದೆ. ಈ ಸ್ಥಿತ್ಯಂತರದ ಚಿತ್ರ ಇವನ ವಚನಗಳಲ್ಲಿ ಕಾಣಬರುತ್ತದೆ. ಶಿವಭಕ್ತಿಯ ಮಹತ್ವ ತಿಳಿದ ಮೇಲೆ ವೈಷ್ಣವ ಮತವನ್ನು ತ್ಯಜಿಸಿ ವೀರಶೈವ ಆಚಾರಗಳನ್ನು ಇವನು ಅಳವಡಿಸಿಕೊಳ್ಳುವನು. ಬಹಿರಂಗವಾಗಿ ತಾನು ವೀರಶೈವನೆಂದು ಹೇಳಿಕೊಳ್ಳಲಾಗದೆ ಗುಪ್ತವಾಗಿ ಲಿಂಗಧಾರಣೆ ಹೊಂದಿ ಶಿವಪೂಜೆಯನ್ನು ಇವನು ಮಾಡುತ್ತಿದ್ದನು. ಒಮ್ಮೆ ಇವನ ಮನೆಯ ಮಾಳಿಗೆಯ ಮೇಲಿನ ಕಿಂಡಿಯಿಂದ ಧೂಪದ ಹೊಗೆ ಬರುತ್ತಿದ್ದುದನ್ನು ಗಮನಿಸಿದ ವೈಷ್ಣವನೋರ್ವನು ಅನುಮಾನಗೊಂಡು ಕಿಂಡಿಯಿಂದ ನೋಡಿದನು. ಮಂಚಣ್ಣ ದಂಪತಿಗಳು ಶಿವಪೂಜಾ ನಿರತರಾಗಿರುವುದನ್ನು ಅವನು ನೋಡಿದನು. ಇವರ

ಗುಪ್ತಭಕ್ತಿ ಬಯಲಾಯಿತು. ವಿಷಯ ತಿಳಿದ ಸೊಡ್ಡಳ ಬಾಚರಸ, ಮಧುವರಸ, ಚೆನ್ನಬಸವಣ್ಣ ಮೊದಲಾದವರು ಮಂಚಣ್ಣನ ಮನೆಗೆ ಬಂದು ಬಾಗಿಲು ತೆಗೆಯಲು ಪ್ರಾರ್ಥಿಸುವರು. ತೆಗೆಯದಿದ್ದಾಗ ಬಾಗಿಲು ಮುರಿದು ಒಳಗೆ ಪ್ರವೇಶಿಸುವರು. ತಮ್ಮ ಗುಪ್ತಭಕ್ತಿ ಬಯಲಾದ ಕಾರಣ ಮಂಚಣ್ಣ ದಂಪತಿಗಳು ಪ್ರಾಣ ತ್ಯಜಿಸಿದ್ದರು. ವೈಷ್ಣವರು ಮಂಚಣ್ಣನ ಶವದಹನಕ್ಕೆ ಒಪ್ಪದಿದ್ದಾಗ ಬಸವಣ್ಣನೇ ಅಂತ್ಯಸಂಸ್ಕಾರ ನೆರವೇರಿಸಲು ಮುಂದಾಗುವನು. ಆದರೆ ಬಸವಣ್ಣನ ಹಸ್ತಸ್ಪರ್ಶದಿಂದ ದಂಪತಿಗಳು ಮರಳಿ ಜೀವ ಪಡೆಯುವರು. ನಂತರ ಮಂಚಣ್ಣ ಬಹಿರಂಗವಾಗಿಯೇ ಅನುಭವ ಮಂಟಪದ ಕಾರ್ಯ ಕಲಾಪಗಳಲ್ಲಿ ಭಾಗಿಯಾಗುವನು. ಕಲ್ಯಾಣದಲ್ಲಿಯೇ ಸಮಾಧಿಸ್ಥನಾಗುವನು.

ವೈಷ್ಣವನಾಗಿದ್ದ ಮಂಚಣ್ಣ ಶಿವಭಕ್ತನಾಗಿ ಪರಿವರ್ತಿತನಾದ ಘಟ್ಟದ ಅವನ ಮಾನಸಿಕ ಸ್ಥಿತಿ ಅವನ ವಚನಗಳ ಮೂಲಕ ನಮಗೆ ಪರಿಚಯವಾಗುತ್ತದೆ. ಉದಾಹರಣೆಗೆ "ಆನು ನಾಮದ ದಾಸನಲ್ಲದೆ ದಾಸೋಹದ ದಾಸನಲ್ಲಯ್ಯ..ಆನು ಹರಿಭಕ್ತನಲ್ಲದೆ ಶಿವಭಕ್ತನಲ್ಲಯ್ಯ. ಎನಗೆ ಶಿವಭಕ್ತಿ ನೆಲೆಗೊಳ್ಳದಯ್ಯ. ನೀನೆ ಎನಗೆ ಕೃಪೆಮಾಡಾ ನಾರಾಯಣಪ್ರಿಯ ರಾಮನಾಥಾ"; "ಎಮ್ಮಾಕೆಯ ಕೈಯ ಮೊಗೆಯ ನೀರಿನಲ್ಲಿ ನಾಮವ ತೇಯಲಾಗಿ ನಾಮವುಳಿದು ನೀರಳಿಯಿತ್ತು. ಅಳಿದ ನೀರ ಹಣೆಗಿಕ್ಕಲಾಗಿ ನಿರ್ನಾಮವಾಯಿತ್ತು ; ನಾರಾಯಣಪ್ರಿಯ ರಾಮನಾಥನಲ್ಲಿ ನಿಶ್ಚಯವಾಯಿತ್ತೆನಗೆ"; "ತೊಳಸಿಯ ಗಿಡುವ ಮೆಲಲಾರದೆ ಕಿವಿಯೊಳಗಿಕ್ಕಿದೆ. ಕಲಸಿದ ನಾಮಕ್ಕೆ ಹಣೆಯ ಕಾಣದೆ ಎದೆಯೊಳಗಿಕ್ಕಿದೆ. ತಾವರೆಯ ಮಣಿಯ ತಾವಡಿಸೂದಕ್ಕೆ ಠಾವ ಕಾಣದೆ ಡಾವರಿಸುತ್ತಿದ್ದೆ. ಇದಕ್ಕಿನ್ನಾವುದು ಹವನಯ್ಯ. ಎನ್ನ ನಿಮ್ಮ ದಾಸೋಹದ ದಾಸನ ಮಾಡಿಸಯ್ಯಾ ನಾರಾಯಣಪ್ರಿಯ ರಾಮನಾಥಾ"; "ನಾ ವಿಶ್ವಾಸಿಯಾದಡೆ ಗುಪ್ತಭಕ್ತಿಯ ಮಾಡಲೇಕೆ? ನಾ ವಿಶ್ವಾಸಿಯಾದಡೆ ಹರಿವೇಷವಂ ಇದಿರಿಗೆ ತೊಟ್ಟು ಹರನ ಹರಣದಲ್ಲಿ ಇರಿಸಿದೆನೆಂಬ ಸಂದೇಹವೇತಕ್ಕೆ? ನನ್ನ ವಿಶ್ವಾಸಕ್ಕೆ ಇದಿರ ಅರಿತಡೆ ಅಸುವ ಹೊಸೆದೆಹೆನೆಂಬ ಹುಸಿಮಾತಿನ ಗಸಣೆಯೇತಕ್ಕೆ? ಎನ್ನ ವೇಷವು ಹುಸಿ, ನಿಮ್ಮ ಭಕ್ತಿಯ ದಾಸೋಹದ ದಾಸನೆಂಬುದು ಹುಸಿಯಯ್ಯಾ, ನಾರಾಯಣಪ್ರಿಯ ರಾಮನಾಥಾ"; "ನಾ ಬಂದೆ ಹರಿಭಕ್ತನಾಗಿ, ಬಾಹಾಗ ನಾ ದಾಸನಾಗಿ. ಒಂಬತ್ತು ಜೂಳಿಯ ತಣ್ಣೀರ ಕಣಿತೆಯ ಹೊತ್ತು ತಿತ್ತಿಗ ನೀರ ಕಾಣೆ. ಲೆಕ್ಕವಿಲ್ಲದ ನಾಮವನಿಕ್ಕಿದೆ, ಸುತ್ತಿ ಸುತ್ತಿ ಬಳಸಿದೆ. ಹೀಲಿಯ ಗರಿಯ ಹೇಕಣ್ಣಾ, ಪಚ್ಚೆಯ ನಾಮವ ದೃಷ್ಟಿಯ ಮಧ್ಯದಲ್ಲಿ ಇಕ್ಕಿ ಮತ್ತೆ ಅದರ ನಡುವೆ ನಿಶ್ಚಯ ಬಿಳಿಯ ನಾಮವನಿಕ್ಕಿ ಹೊತ್ತ ದಾಸಿಕೆ ಹುಸಿಯಾಯಿತ್ತು. ದಾಸೋಹವೆಂಬುದನರಿಯದೆ ಎನ್ನ ವೇಷ ಹುಸಿಯಾಯಿತ್ತು, ನಾರಾಯಣಪ್ರಿಯ ರಾಮನಾಥಾ."

**ಗುರುಭಕ್ತಯ್ಯ :**

ಇವನ ಜೀವನವೃತ್ತಾಂತದ ಬಗೆಗೆ ಹೆಚ್ಚಿಗೆ ಏನೂ ತಿಳಿದುಬಂದಿಲ್ಲ. ದೊರೆತಿರುವುದು ಒಂದೇ ಒಂದು ವಚನ.

**ಗೋರಕ್ಷ :**

ಇವನು ಅಲ್ಲಮಪ್ರಭುವಿನ ಸಮಕಾಲೀನ. ಗೋವುಗಳನ್ನು ನೋಡಿಕೊಳ್ಳುವುದು ಇವನ ಕಾಯಕ. ಆದುದರಿಂದಲೇ ಇವನಿಗೆ ಗೋರಕ್ಷನೆಂಬ ಹೆಸರು ಬಂದಿರಬಹುದು. ಇವನ ಮೊದಲ ಹೆಸರು ಗೋರಖನಾಥ. ಈತ ನಾಥಪಂಥದವನೆಂದೂ ಮಚ್ಛೇಂದ್ರ ಈ ಪಂಥದ ಗುರುವೆಂದೂ ತಿಳಿದುಬರುತ್ತದೆ. ಉತ್ತರಕರ್ನಾಟಕದ ಪಟ್ಟದಕಲ್ಲು ಗೋರಕ್ಷನ ಜನ್ಮಸ್ಥಳ. ಇವನು ನರವರ್ಮರಾಜನ ಗೋವುಗಳನ್ನು ಕಾಯುತ್ತಿದ್ದನು. ಬಾಲ್ಯದಲ್ಲಿ ಗತಿಸ್ತಂಭ ಜಿಹ್ವಾಸ್ತಂಭಗಳೇ ಮೊದಲಾದ ವಿದ್ಯೆಗಳನ್ನು ಮಚ್ಛೇಂದ್ರನಾಥನಲ್ಲಿ ಕಲಿತನು. ಇವನ ಬಗ್ಗೆ ವಿವರಗಳನ್ನು ನೀಡುವ ಎರಡು ಪ್ರಮುಖ ಕೃತಿಗಳೆಂದರೆ ಹರಿಹರನ ರೇವಣಸಿದ್ಧೇಶ್ವರ ರಗಳೆ ಹಾಗೂ ಚಾಮರಸನ ಪ್ರಭುಲಿಂಗಲೀಲೆ. ರೇವಣಸಿದ್ಧೇಶ್ವರ ರಗಳೆಯಲ್ಲಿ ಇವನ ವಿಷಯ ಹೀಗೆ ಬಂದಿದೆ: ಮಂಗಳವಾಡದ ಬಿಜ್ಜಳರಾಯನ ಆಸ್ಥಾನದಲ್ಲಿದ್ದ ರೇವಣಸಿದ್ಧೇಶ್ವರನು ಒಮ್ಮೆ ಕೊಲ್ಲಾಪುರಕ್ಕೆ ಆಗಮಿಸಿದನು. ಅಲ್ಲಿದ್ದ ಗೋರಕ್ಷನ ಮನೆಯ ಮುಂದೆ ಬಂದು ನಿಂತು ಭಿಕ್ಷವನ್ನು ಬೇಡಿದನು. ಗೋರಕ್ಷನು ಅವನನ್ನು ಹೀಯಾಳಿಸಿ ಕೊನೆಗೆ ತನ್ನ ಸ್ತ್ರೀ ಚಿಕ್ಕಲಕ್ಕಾದೇವಿಯ ಮೂಲಕ ಅವನ ಜೋಳಿಗೆಗೆ ಒಂದು ಕಠಾರಿಯನ್ನು ಹಾಕಿಸಿದನು. ರೇವಣಸಿದ್ಧೇಶ್ವರನು ಆ ಕಠಾರಿಯನ್ನು ತನ್ನ ನೊಸಲಗಣ್ಣಿನಿಂದ ಕರಗಿಸಿ ಕುಡಿದು ಅನಂತರ ಅವನ ಮೇಲೆ ಪ್ರಯೋಗಿಸಿದಾಗ ವಕ್ಷದಲ್ಲಿ ನಾಟಿತು. ಇದನ್ನು ಕಂಡ ಚಿಕ್ಕಲಕ್ಕಾದೇವಿ ಗಳಗಳನೆ ಅಳುತ್ತಾ ಹಿರಿಯ ಲಕ್ಕಾದೇವಿಗೆ ತಿಳಿಸಿದಳು. ಸದ್ಗುಣವತಿಯಾದ ಆಕೆ ಸಿದ್ಧನ ಬಳಿಗೆ ಬಂದು ಅವನ ಕರುಣೆಯನ್ನು ಬೇಡಿದಳು. ಅವಳ ಪ್ರಾರ್ಥನೆಗೆ ಕರಗಿದ ಸಿದ್ಧನು ಗೋರಕ್ಷನ ಎದೆಯಲ್ಲಿ ನಾಟಿದ್ದ ಕಠಾರಿಯನ್ನು ತೆಗೆದು ಅವನಿಗೆ ಉಪದೇಶ ಮಾಡಿದನು.

ಚಾಮರಸನ 'ಪ್ರಭುಲಿಂಗಲೀಲೆ'ಯಲ್ಲಿ ಅಲ್ಲಮ ಹಾಗೂ ಗೋರಕ್ಷರ ಭೇಟಿಯ ಪ್ರಸಂಗ ಸ್ವಾರಸ್ಯಕರವಾಗಿ ಬಂದಿದೆ. ಶ್ರೀಶೈಲದಲ್ಲಿ ಕಠಿಣವಾದ ಸಾಧನೆಮಾಡಿ ಗೋರಕ್ಷನು ವಜ್ರದೇಹಿಯಾದನು. ತನ್ನನ್ನು ಗೆಲ್ಲುವವರು ಲೋಕದಲ್ಲೇ ಇಲ್ಲವೆನ್ನುವ ಗರ್ವ ಅವನನ್ನು ಆವರಿಸಿತು. ವಜ್ರಶರೀರವೇ ಸರ್ವಸ್ವವೆಂದು ಭಾವಿಸಿದ್ದ ಗೋರಕ್ಷನ ಭ್ರಮೆಯನ್ನು ಪರಿಹರಿಸಲು ಅಲ್ಲಮಪ್ರಭು ಶ್ರೀಶೈಲಕ್ಕೆ ಬರುವನು. ವಜ್ರಶರೀರದಿಂದ ದೇಹಸಿದ್ಧಿಯೇ ಹೊರತು ಮುಕ್ತಿಯಲ್ಲವೆಂಬುದನ್ನು ಮನಗಾಣಿಸಲು ಅಲ್ಲಮಪ್ರಭು ತನ್ನ ಶರೀರದ ಮೇಲೆ ಕತ್ತಿಯಿಂದ ಹೊಡೆಯುವಂತೆ ಗೋರಕ್ಷನಿಗೆ ಹೇಳುವನು. ಗೋರಕ್ಷನು ಹೊಡೆವಾಗ ಯಾವ ಶಬ್ದವೂ ಆಗಲಿಲ್ಲ. ಖಡ್ಗಕ್ಕೆ ದೇಹ ಒಳಗಾಗಲೇ ಇಲ್ಲ. ಬಯಲಿನಲ್ಲಿ ಖಡ್ಗವನ್ನು ಬೀಸಿದಂತಾಯಿತು. ಗೋರಕ್ಷನ ದೇಹದ ಮೇಲಿನ ಮೋಹ ಸರ್ರನೆ ಇಳಿದು ಹೋಯಿತು. ಅಲ್ಲಮ ಪ್ರಭುವಿಗೆ ಶರಣಾದ ಗೋರಕ್ಷನು ಅವನಿಂದ ಇಷ್ಟಲಿಂಗದ ಮಾರ್ಗವನ್ನೂ ಶೂನ್ಯಮಾರ್ಗದ ವಿವರಗಳನ್ನೂ ತಿಳಿಯುವನು; ವೀರಶೈವ ದೀಕ್ಷೆಯನ್ನು ಹೊಂದುವನು. ಬಹುಶಃ ಗೋರಕ್ಷನು ಬಸವಾದಿಗಳ ಸಂಪರ್ಕಕ್ಕೆ ಬಂದಮೇಲೆ ವಚನಗಳನ್ನು ಬರೆದಿರಬಹುದು.

**ಘಟ್ಟಿವಾಳಯ್ಯ :**

"ಅಸನಕ್ಕಂಜಿ ವೇಷವನೆ ಹೊತ್ತು ದೇಶವ ತೊಳಲುವ ಹಿರಿಯರ ಗಂಡ, ಕಾಲದ ಗಂಡ, ಕರ್ಮದ ಗಂಡ, ಲಿಂಗವಿಡಿದು ಸಾವ ಹಿರಿಯರ ಗಂಡ, ಗೊಹೇಶ್ವರಾ, ನಿಮ್ಮ ಶರಣ ಘಟ್ಟಿವಾಳ ಅಲ್ಲಮನಂತಿಂತೆಂಬವರ ಗಂಡ" ಎಂಬ ಅಲ್ಲಮಪ್ರಭುವಿನ ಪ್ರಶಂಸೆ ಘಟ್ಟಿವಾಳಯ್ಯನ ಅಮೋಘ ವ್ಯಕ್ತಿತ್ವವನ್ನು ಪರಿಚಯಿಸುತ್ತದೆ. ಘಟ್ಟಿವಾಳಯ್ಯನ ವ್ಯಕ್ತಿತ್ವದ ಮಹತಿಯನ್ನು ಕಂಡ ಸಮಕಾಲೀನ ಶರಣರು ಬಗೆದುಂಬಿ ಅವನ ಗುಣಗಾನ ಮಾಡಿರುವರು. ಬಸವಣ್ಣನವರು "ಕಾಯವಂಚಕನಲ್ಲ, ಜೀವ ವಂಚಕನಲ್ಲ, ನಿರಂತರ ಸಹಜ ನೋಡಯ್ಯಾ ಶಂಕೆಯಿಲ್ಲದ ಮಹಾಮಹಿಮನು ಕೂಡಲ ಸಂಗನ ಶರಣನುಪಮಾತೀತ ನೋಡಯ್ಯಾ" ಎಂದು ಹೊಗಳಿರುವರು. ಚೆನ್ನಬಸವಣ್ಣನು "ಅರಿವರತು ಕುರುಹು ನಷ್ಟವಾದ ಬಳಿಕ, ಕುರುಹಿನ ಬಣ್ಣ ಅಂಗದ ಮೇಲೇಕೊ ಘಟ್ಟಿವಾಳಂಗೆ? ಅರಿವನಾರು? ಅರುಹಿಸಿಕೊಂಬನಾರು? ಬರಿಯ ಬಯಲು ಕಾಣಾ, ಕೂಡಲ ಚೆನ್ನಸಂಗಾ ನಿಮ್ಮ ಶರಣ ಘಟ್ಟಿವಾಳಯ್ಯನಲ್ಲದೆ ನೆರೆ ಅರಿವರಾರೋ?" ಎಂದು ಮನದುಂಬಿ ಗುಣಗಾನ ಮಾಡಿರುವನು. ಡಕ್ಕೆಯ ಬೊಮ್ಮಣ್ಣನು 'ಶರಣಸ್ಥಲ ಘಟ್ಟಿವಾಳಯ್ಯಗಾಯಿತ್ತು' ಎಂದಿದ್ದರೆ, ಆದಯ್ಯನು 'ಘಟ್ಟಿವಾಳ ನನ್ನ ಭಾವ' ಎಂದಿರುವನು. ಸಿದ್ಧರಾಮನು, 'ಘಟ್ಟಿವಾಳಯ್ಯ ತನ್ನ ಮಾಯೆಯ ಕೊಟ್ಟು, ಮೂಲಪ್ರಸಾದವ ಪಡೆದ' 'ಧೀರನಾದಡೆ ಘಟ್ಟಿವಾಳಯ್ಯನಂತಾಗಬೇಕಯ್ಯ' ಎಂದಿರುವನು. ಮೋಳಿಗೆಯ ಮಾರಯ್ಯನು '...... ಲೆಕ್ಕವಿಲ್ಲದ ಆಸೆ ಮನದೊಳಗೆ ಹೊಕ್ಕು ತಿರುಗಾಡುತಿಹ ಚಿಕ್ಕಮಕ್ಕಳಿಗೆಲ್ಲಿಯದೊ ನಿರ್ವಾಣ ಘಟ್ಟಿವಾಳಂಗಲ್ಲದೆ?' ಎಂದು ಪ್ರಶ್ನಿಸಿರುವನು. ಪ್ರೌಢರಾಯನ ಕಾವ್ಯದಲ್ಲಿ ಶಿವನ ಅಣತಿಯಂತೆ ಬಸವಣ್ಣ ಮೊದಲಾದ ಪ್ರಮಥಗಣಂಗಳು ಮರ್ತ್ಯಲೋಕಕ್ಕೆ ಹೋದಾಗ ಶಿವನ ಗಣವರನೊಬ್ಬನು ಕೈಲಾಸದಲ್ಲಿ ಶಿವನೆದುರಿನಲ್ಲಿ 'ಪೊಡವಿಯ ಜಡಸ್ತ್ರೀಯರೊಳೊರ್ವಳ ಮದುವೆಯಾಗಿ ಬಿಡದೆ ನಡೆಸುವೆ ಭಕ್ತಿ ಜ್ಞಾನ ಕ್ರಿಯಂಗಳನು ನಡೆಯದಿರ್ದಡೆ ಅವಳ ಬಿಟ್ಟು ಸವಿರಕ್ತಿಯಂ ಪಿಡಿವೆಂ' ಎಂದು ಪ್ರತಿಜ್ಞೆ ತೊಟ್ಟನು.

ಆದಯ್ಯ ಇವನನ್ನು ಘಟ್ಟಿವಾಳ ಮುದ್ದಣ್ಣನೆಂದು ಕರೆದಿರುವನು. ಮುದ್ದಣ್ಣನು ಮದ್ದಳೆ ನುಡಿಸುತ್ತಾ ನರ್ತಿಸುತ್ತಾ ಶಿವಾನುಭಾವವನ್ನು ಸಾರಿ ಹೇಳುವ ಕಾಯಕವನ್ನು ಕೈಗೊಂಡನು. ಕಾಯಕದಿಂದ ದೊರೆತಷ್ಟರಲ್ಲಿಯೇ ತೃಪ್ತಿ ಪಡೆದು ದಾಸೋಹ ನಡೆಸುತ್ತಿದ್ದನು.

ಒಮ್ಮೆ ಬಸವಣ್ಣನ ಮಹಾಮನೆಗೆ ಊಟಕ್ಕೆ ಹೋಗುತ್ತಿದ್ದ ಜಂಗಮರನ್ನು ಕಂಡು ಘಟ್ಟಿವಾಳಯ್ಯನು ಅವರನ್ನು ಬಸವಣ್ಣನ ಮನೆಯ ಮುಸುರೆ ಗಡಿಗೆಗೆ ಇವರೆ ಮಕ್ಷಿಕಗಳೆನ್ನಲು ಅವರು ಕೋಪದಿಂದ ಇವನ ಇಷ್ಟಲಿಂಗವನ್ನು ಕಿತ್ತುಕೊಂಡರು. ಆತನು

ಅದನ್ನು ಕೊಡುವಂತೆ ಬೇಡಲು ಅವರು ಕುಹಕದಿಂದ ತಮ್ಮ ಮುಂದಿದ್ದ ಕಲ್ಲುಗುಂಡೊಂದನ್ನು ತೋರಿ 'ಅದೋ ಅಲ್ಲಿದೆ ನಿನ್ನ ಇಷ್ಟಲಿಂಗ' ಎಂದು ಹಾಸ್ಯಮಾಡಿದರು. ಆತನು ಅದನ್ನೇ ಇಷ್ಟಲಿಂಗವೆಂದು ಕೊರಳಲ್ಲಿ ಕಟ್ಟಿಕೊಂಡು ಬಸವಣ್ಣನ ಮಹಾಮನೆಯ ಹೆಬ್ಬಾಗಿಲಿನಲ್ಲಿ ಕುಳಿತುಬಿಟ್ಟನು. ನೀಲಲೋಚನೆಯಿಂದ ಸುದ್ದಿ ತಿಳಿದ ಬಸವಣ್ಣನು ಪ್ರಭುದೇವ, ಚೆನ್ನಬಸವಣ್ಣ ಮೊದಲಾದವರೊಡನೆ ಅಲ್ಲಿಗೆ ಬಂದು ಆ ಜಂಗಮರಿಗೆ ಆತನ ಇಷ್ಟಲಿಂಗವನ್ನು ಕೊಟ್ಟುಬಿಡುವಂತೆ ಹೇಳಿದನು. ಆಗ ಅವರು "ಘಟ್ಟಿವಾಳಯ್ಯಗಳೆ ನಿಮಗೆ ಗುರುಕೊಟ್ಟ ಲಿಂಗ ಮತ್ತು ಬೆಟ್ಟದ ಈ ಗುಂಡು ಹೀಗೆ ಎರಡು ಲಿಂಗಗಳೆ? ನಿಮಗೆ ಇಬ್ಬರು ಗಂಡರೆ?" ಎಂದು ವ್ಯಂಗ್ಯವಾಡಿದರು. ಆಗ ಆತನು ಆ ಗುಂಡನ್ನು ತನ್ನ ಇಷ್ಟಲಿಂಗದಲ್ಲಿ ಅಡಗಿಸಿಕೊಳ್ಳಲು ಪ್ರಭುವೇ ಮೊದಲಾದ ಶರಣರು ಘಟ್ಟಿವಾಳಯ್ಯನದು ನಿಜವಾದ ನಡೆಯೆಂದು ಆತನನ್ನು ಸ್ತುತಿಸಿದರು.

ನರ್ತನ ಕಾಯಕ ನಡೆಸುತ್ತಿರುವಾಗಲೇ ಘಟ್ಟಿವಾಳಯ್ಯ ಲಿಂಗೈಕ್ಯನಾದ ಸುದ್ದಿ ತಿಳಿದ ಬಸವಣ್ಣನು ಸಮಾಧಿಯ ಸಿದ್ಧತೆಯೊಡನೆ ಶರಣರನ್ನೊಡಗೂಡಿಸಿಕೊಂಡು ಅಲ್ಲಿಗೆ ಹೋಗುವಷ್ಟರಲ್ಲಿ ಅವನು ನಿರವಯ ಸಮಾಧಿಯನ್ನು ಹೊಂದಿದ್ದನು. ಜಂಗಮ ಹಸ್ತ ಸ್ಪರ್ಶವಾಗುತ್ತಲೇ ಆತನ ಶರೀರವು ಶರಣರ ಹಸ್ತದಲ್ಲಿಯೇ ಬಯಲಾಯಿತು.

**ಚಂದಿಮರಸ :**

ಚಂದಿಮರಸನು ಬಸವಣ್ಣನಿಗಿಂತ ಹಿಂದಿದ್ದರೂ ವಯಸ್ಸಿನಲ್ಲಿ ಹಿರಿಯನಾಗಿ ಬಸವ ಸಮಕಾಲೀನನಾಗುವನು. ಕವಿಚರಿತೆಕಾರರು ಇವನ ಒಂದು ವಚನವನ್ನು ಉದಾಹರಿಸಿ ಇವನ ಕಾಲ ಸು. ೧೧೬೦ ಎಂದು ಹೇಳಿರುವರು. ಹೀಗೆ ಹೇಳಲು ಅವರಿಗೆ ಆಧಾರವಾವುದೆಂಬುದು ತಿಳಿಯಬರುವುದಿಲ್ಲ. ಕವಿಚರಿತೆಯ ಭಾಗ ೧ (೧೯೬೧ರ ಕನ್ನಡ ಸಾಹಿತ್ಯ ಪರಿಷತ್‌ನ ಪರಿಶೋಧಿತ ಪ್ರಥಮ ಮುದ್ರಣ) ಅನುಬಂಧ ೨ರ ಪುಟ ೯೦-೯೧ರಲ್ಲಿ ಚಂದಿಮರಸನು ಕೆಂಭಾವಿಯ ಚಂದಿಮರಸನೇ ಆಗಿರಬೇಕೆಂದೂ ಕೆಂಬಾವಿಯ ಭೋಗಣ್ಣನ ಸಮಕಾಲೀನನಾದುದರಿಂದ ಇವನ ಕಾಲ ಕ್ರಿ.ಶ.ಸು. ೧೦೨೦ ಆಗಿರಬಹುದೆಂದೂ ಅಭಿಪ್ರಾಯಪಡಲಾಗಿದೆ. ಇದನ್ನು ಒಪ್ಪಲಾಗದು. ಚಂದಿಮರಸನು ಕೃಷ್ಣಾನದೀತೀರದ ಚಿಮ್ಮಲಿಗೆಯೆಂಬ ಗ್ರಾಮದವನು. ಅಲ್ಲಿ ಇವನ ನೆನಪಿಗಾಗಿ ಒಂದು ಗುಡಿಯಿದೆ. ಚಂದಿಮರಸನು ಬಸವಣ್ಣನಿಗಿಂತ ಸು. ೧೪೦ ವರ್ಷ ಹಿಂದೆ ಇದ್ದನೆಂದು ಭಾವಿಸಲು ಇವನ ವಚನಗಳು ಸಮರ್ಥನೆ ನೀಡುತ್ತಿಲ್ಲ. ಚಂದಿಮರಸನ ಗುರು ನಿಜಗುಣದೇವ. ಮಹಾದೇವಿಯಕ್ಕ ತನ್ನ ವಚನವೊಂದರಲ್ಲಿ (ವ. ೧೯೭) 'ನಿಜಗುಣನ ಆರೂಢಸ್ಥಲ' ಎಂದು ಹೇಳಿ ಗೌರವಿಸಿರುವಳು. ಉಗ್ಘಡಿಸುವ ಗಬ್ಬಿದೇವಯ್ಯಗಳು ತಮ್ಮ ವಚನವೊಂದರಲ್ಲಿ 'ಎರಡನರಿವಲ್ಲಿ ಭಂಡಾರಿ ಬಸವಣ್ಣ, ಮೂರನರಿವಲ್ಲಿ ಚೆನ್ನಬಸವಣ್ಣ, ಒಂದನರಿವಲ್ಲಿ ಪ್ರಭುದೇವರು. ಇಂತೀ ಉಭಯದ ಸಂಗಂಗಳ ಮರೆದಲ್ಲಿ ನಿಜಗುಣ ಸಂಗ' ಎಂದಿರುವನು. ಅಂಗ ಸೋಂಕಿನ ಲಿಂಗತಂದೆಗಳು 'ಎನ್ನ ಬಹಿರಂಗದ ನಿರಾಳವೆ ನಿಜಗುಣದೇವರು' ಎಂದು ಹೊಗಳಿರುವನು. ಉರಿಲಿಂಗ ಪೆದ್ದಿಯು

'ಆಚಾರಕರ್ಪರವಳವಟ್ಟಿತ್ತು ಶಂಕರ ದಾಸಿಮಯ್ಯಂಗಳಿಗೆ, ವಿಚಾರಕರ್ಪರವಳವಟ್ಟಿತ್ತು ಸಕಳೇಶ ಮಾದಿರಾಜಯ್ಯಂಗಳಿಗೆ, ಅವಿಚಾರಕರ್ಪರವಳವಟ್ಟಿತ್ತು ಅಲ್ಲಮಪ್ರಭುದೇವರಿಗೆ. ಇಂತೀ ತ್ರಿವಿಧಕರ್ಪರವಳವಟ್ಟಿತ್ತು ನಿಜಗುಣದೇವಂಗೆ' ಎಂದಿರುವನು. ಈ ಉಲ್ಲೇಖಗಳಿಂದ ನಿಜಗುಣ ದೇವನು ಶ್ರೇಷ್ಠ ಅನುಭಾವಿಯಾಗಿದ್ದನೆಂದೂ ಬಸವಣ್ಣನಿಗಿಂತ ಸ್ವಲ್ಪ ಹಿಂದಿದ್ದವನೆಂದೂ ವ್ಯಕ್ತವಾಗುತ್ತದೆ. ಚಂದಿಮರಸನು ನಿಜಗುಣನ ಶಿಷ್ಯನಾಗಿರು-ವುದರಿಂದ ಬಸವ ಸಮಕಾಲೀನನಾಗುತ್ತಾನೆಯೇ ಹೊರತು ಸು. ೧೦೨೦ರಲ್ಲಿದ್ದ ಕೆಂಬಾವಿ ಭೋಗಣ್ಣನ ಸಮಕಾಲೀನನಾಗಿರಲಾರ.

ಚಂದಿಮರಸನು ರಾಜನಾಗಿದ್ದನೆ? ರಾಜನಾಗಿದ್ದರೆ, ಕೆಂಬಾವಿ ಭೋಗಣ್ಣನಿಗೆ ಶಿಕ್ಷೆಯಿತ್ತ ಚಂದಿಮರಸ ಇವನಾಗಿರಲಾರ. ನಿಜಗುಣನಿಂದ ಚಂದಿಮರಸನು ದೀಕ್ಷೆ ಸ್ವೀಕರಿಸಿ ಲಿಂಗವಂತನಾಗಿ ಅನಂತರ ವಚನಗಳನ್ನು ಬರೆದಿರಬಹುದು. ಅವನ ವಚನಗಳನ್ನು ನೋಡಿದಾಗ ಆತ್ಮಜ್ಞಾನದ ಬಗೆಗೇ ಅವನಿಗೆ ಹೆಚ್ಚಿನ ಒಲವಿರುವಂತೆ ತೋರುತ್ತದೆ. ತೀವ್ರ ವಿರಕ್ತಿ ಅವನ ವ್ಯಕ್ತಿತ್ವದಲ್ಲಿನ ಪ್ರಧಾನ ಭಾವ.

**ಜಗಳಗಂಟ ಕಾಮಣ್ಣ :**

ಇವನ ಬಗೆಗೆ ಹೆಚ್ಚಿಗೆ ಏನೂ ತಿಳಿದುಬಂದಿಲ್ಲ. ಇವನು ಬಸವಸಮಕಾಲೀನ ವಚನಕಾರನಾಗಿರಬಹುದು. ಇವನ ನಾಲ್ಕು ವಚನಗಳು ದೊರೆತಿವೆ. ಎಲ್ಲವೂ ಪುಟ್ಟ ಪುಟ್ಟ ವಚನಗಳು. 'ತನ್ನ ತಾನರಿದಡೆ ತನ್ನರುಹೆ ಗುರು; ಆ ಅರಿದ ನಿಶ್ಚಯವೆ ಲಿಂಗ; ಆ ಅರುಹಿನ ನಿಶ್ಚಯ ನಿಷ್ಪತಿಯೆ ಜಂಗಮ; ಇಂತೀ ತ್ರಿವಿಧವು ಒಂದಾದಡೆ ಕಾಮೇಶ್ವರಲಿಂಗವು ತಾನೆ!' ಎಂದಿರುವನು. 'ಸಾವ ದೇವರನೊಲ್ಲೆ, ಭಾವವಳಿಯದ ಭಕ್ತಿಯನೊಲ್ಲೆ, ಆವಾವ ಪರಿಯಲ್ಲು ವಿಧಿಯನೊಲ್ಲೆ, ಕಾಮೇಶ್ವರನೆಂಬುದನೊಂದನೆ ಬಲ್ಲೆ' ಎಂಬ ಇವನ ಆಲೋಚನೆಯಲ್ಲಿ ಹೊಸತನವಿದೆ, ಸ್ವತಂತ್ರ ಮನೋಭಾವವಿದೆ.

**ಜೇಡರ ದಾಸಿಮಯ್ಯ :**

ಇವನು ಬಸವಣ್ಣನಿಗಿಂತ ಸ್ವಲ್ಪ ಹಿಂದೆ ಇದ್ದ ಶರಣ. ಇವನು ಶಿವನಿಂದ ತವನಿಧಿಯನ್ನು ಪಡೆದು ದಾಸೋಹಂಭಾವದಿಂದಿರಲು ಇವನ ಅಹಂಕಾರವನ್ನು ಶಂಕರ ದಾಸಿಮಯ್ಯನು ತವನಿಧಿಯನ್ನು ಇಲ್ಲವಾಗಿಸುವ ಮೂಲಕ ಮುರಿದನಂತೆ! ಇವನು ಗುಲ್ಬರ್ಗ ಜಿಲ್ಲೆಯ ಮುದನೂರಿನವನು. ಇವನು ವೃತ್ತಿಯಲ್ಲಿ ನೇಯ್ಗೆಯವನು; ಮುದನೂರಿನ ರಾಮನಾಥನ ಭಕ್ತ. ಇವನ ಹೆಂಡತಿ ದುಗ್ಗಳೆ. "ಆರನೆಯ ವಿಕ್ರಮಾದಿತ್ಯನ (ಕ್ರಿ.ಶ. ೧೦೭೬-೧೧೨೭) ತಮ್ಮ ಜಯಸಿಂಹ ಎಂಬಾತ ಕೆಲವು ಕಾಲವಾದರೂ ಕೊನೆಯ ಪಕ್ಷ ೧೦೮೨ರವರೆಗಾದರೂ ಬನವಾಸಿ ಮುಂತಾದ ಪ್ರಾಂತಗಳನ್ನು ಆಳುತ್ತಿದ್ದಂತೆ ಕಾಣುತ್ತದೆ. ಪ್ರಬಲನಾದ ಇವನನ್ನು ಒಬ್ಬ 'ರಾಜ' ಎಂದು ಈಚಿನವರು ಭಾವಿಸಿರಬಹುದು. ಇವನು ಎಂದೂ ಚಕ್ರವರ್ತಿಯಾಗಿ ಆಳಲಿಲ್ಲವೆಂಬುದೂ ನಿಜವೇ. ಆರನೆಯ ವಿಕ್ರಮಾದಿತ್ಯನ ಮೊಮ್ಮಗ ಜಗದೇಕಮಲ್ಲ II ಎಂಬಾತ ಕ್ರಿ.ಶ. ೧೧೩೮-೪೯ ರವರೆಗೆ

ಆಳಿದ. ಜೇಡರ ದಾಸಿಮಯ್ಯ ಇವರಿಬ್ಬರ ಕಾಲದಲ್ಲಿಯೂ ಇದ್ದ ಎಂದಿಟ್ಟುಕೊಂಡರೆ ಆಗ ಅನೇಕ ಸಮಸ್ಯೆಗಳು ಪರಿಹಾರವಾಗುತ್ತವೆ. ಕ್ರಿ.ಶ. ೧೧೪೮ರ ಗೊಬ್ಬೂರು ಶಾಸನದಲ್ಲಿ ಬರುವ ಜೇಡರ ದಾಸಿಮಯ್ಯ ಇವನೇ ಆಗುತ್ತಾನೆ....." (ಡಾ|| ಎಂ. ಚಿದಾನಂದಮೂರ್ತಿ: ವಚನಸಾಹಿತ್ಯ, ಪು. ೧೪). 'ದೇವರ ದಾಸಿಮಾರ್ಯರ ಕಥೆ' ಎಂಬ ಕೃತಿಯೊಂದಿರುವುದಾಗಿ ತಿಳಿದುಬಂದಿದೆ. ಅದರ ಆದಿಯ ಕಂದದಲ್ಲಿ "ಶಾಂಭವೀಶ ಮದ್ದುಗ್ಗುರು....... ಗರಳಪುರೀಶ" ಎಂದಿದೆ (ನೋಡಿ: ಶಿವಾನುಭವ ೩೪.೬ (೧೯೬೦) ಪು. ೨೧೨-೧೪; ೩೪.೭ (೧೯೬೦) ಪು. ೨೫೫-೬೪).

ಆದ್ಯ ವಚನಕಾರನಾದ ಜೇಡರ ದಾಸಿಮಯ್ಯನು ತನ್ನ ವಚನಗಳ ಸಾಹಿತ್ಯಿಕ ಗುಣ ಹಾಗೂ ಮೌಲ್ಯಗಳಿಂದಾಗಿ ಬಸವಪೂರ್ವದ ಶ್ರೇಷ್ಠ ವಚನಕಾರನಾಗಿರುವನು. ಚಂಪೂ ತನ್ನೆಲ್ಲ ಸಾಧ್ಯತೆಗಳನ್ನು ಪ್ರಕಟಪಡಿಸಿ ಕಳಾಹೀನವಾಗಿದ್ದಾಗ ಸಾಹಿತ್ಯವು ಜನ ಸಮ್ಮುಖವಾಗಿ ಮರುಹುಟ್ಟು ಪಡೆಯಲು ಚಡಪಡಿಸುತ್ತಿದ್ದಿತು. ಈ ವೇಳೆಗೆ ಶೈವಧರ್ಮವನ್ನು ಪರಿಷ್ಕರಿಸಿ ಅದಕ್ಕೊಂದು ಹೊಸ ರೂಪು ಕೊಡುವ ಪ್ರಯತ್ನವೂ ನಡೆಯಿತು. ಈ ಸಂಧಿಕಾಲದಲ್ಲಿ ಬರುವ ಪ್ರತಿಭಾಶಾಲಿ ಜೇಡರ ದಾಸಿಮಯ್ಯ. ತಾಜಾತನದಿಂದ ಕೂಡಿದ ತನ್ನ ವಿಚಾರಪ್ರಣಾಲಿಯನ್ನು ಜನವಾಣಿ ಹಾಗೂ ದೇಸಿ ಛಂದಸ್ಸಿನಿಂದ ಹದವಾಗಿ ಪಾಕಗೊಳಿಸಿ ಮುಂದಣ ಶಿವಶರಣರಿಗೆ ದಾಸಿಮಯ್ಯ ಮಾರ್ಗದರ್ಶಿಯಾದನು. ಅವನ ವಚನಗಳ ಮುಖ್ಯಗುಣ ಸಂಕ್ಷಿಪ್ತತೆ, ಸರಳತೆ ಹಾಗೂ ಅರ್ಥಪ್ರಚುರತೆ. ಹೊಸದಾಗಿ ರೂಪುಗೊಳ್ಳುತ್ತಿದ್ದ ವೀರಶೈವಧರ್ಮದ ತಾತ್ತ್ವಿಕಾಂಶಗಳನ್ನು ನಾವು ಅವನ ವಚನಗಳಲ್ಲಿ ಕಾಣಲಾಗದಿದ್ದರೂ ಆ ಕಾಲಮಾನದ ಸಾಮಾಜಿಕ ಜೀವನದ ಹಲವು ವೈಪರೀತ್ಯಗಳ ವಿಡಂಬನೆಯನ್ನೂ, ಟೀಕೆಯನ್ನೂ ಕಾಣುತ್ತೇವೆ. 'ವಚನ' ಒಂದು ಸಾಹಿತ್ಯ ಪ್ರಕಾರವಾಗಿ ರೂಪುಗೊಳ್ಳುತ್ತಿದ್ದುದನ್ನು ಇವನ ವಚನಗಳಲ್ಲಿ ನಿಚ್ಚಳವಾಗಿ ನಾವು ಗುರುತಿಸುತ್ತೇವೆ. ಈ ಹೊಸ ಸಾಹಿತ್ಯ ಪ್ರಕಾರಕ್ಕೆ ಬೇರೆ ಬೇರೆ ಆಯಾಮಗಳನ್ನು ತೆರೆದು ತೋರಿಸಿದವನು ಜೇಡರ ದಾಸಿಮಯ್ಯನೆಂದರೆ ತಪ್ಪಾಗಲಾರದು.

**ಜೋದರ ಮಾಯಣ್ಣ :**

ಇವನು ಬಿಜ್ಜಳನ ಆಸ್ಥಾನದಲ್ಲಿ ಆನೆಯ ಪಡೆಯ ಮೇಲಧಿಕಾರಿಯಾಗಿದ್ದು ಅದರಿಂದ ಬಂದುದನ್ನು ಜಂಗಮದಾಸೋಹಕ್ಕೆ ಬಳಸುತ್ತಿದ್ದನು. ಇವನ ಬಗೆಗೆ ಪ್ರಚಲಿತವಿರುವ ಕಥೆ ಹೀಗಿದೆ: ಕಲ್ಯಾಣಕ್ಕೆ ಒಂದು ದಿನ ಪರದೇಶದ ರಾಜಕುಮಾರನೊಬ್ಬನು ಆನೆಯ ಮೇಲೆ ಬಂದು ವೇಶ್ಯೆಯೊಬ್ಬಳ ಮನೆಯಲ್ಲಿ ಬಿಡಾರಹೂಡಿದನು. ಅದನ್ನು ನೋಡಿದ ಮತ್ತೊಬ್ಬ ವೇಶ್ಯೆ ತನ್ನ ವಿಟನನ್ನು ಕುರಿತು, ಆ ರಾಜಕುಮಾರನಂತೆ ತನ್ನ ಮನೆಯ ಮುಂದೆ ಬಿಜ್ಜಳನ ಪಟ್ಟದಾನೆಯನ್ನು ತಂದು ನಿಲ್ಲಿಸಬಲ್ಲೆಯಾ? ಎಂದು ಕೇಳಿದಳು. ಅದಕ್ಕೊಪ್ಪಿದ ವಿಟನು ಆನೆಯನ್ನು ಬೇಡಲು ಬಸವಣ್ಣನವರಲ್ಲಿಗೆ ಹೊರಟನು. ಮಾರ್ಗದಲ್ಲಿ ಬಿಜ್ಜಳನ ಪಟ್ಟದಾನೆಯೊಂದಿಗೆ ಮಾಯಣ್ಣನು ಎದುರಾದನು. ವಿಟನು ತಾನು ಬಸವಣ್ಣನವರಲ್ಲಿಗೆ ಹೊರಟಿರುವ ಸಂಗತಿಯನ್ನು ತಿಳಿಸಿದನು. ವಿಟನ ಕೋರಿಕೆಯನ್ನು

ತಾನು ನೆರವೇರಿಸುವುದಾಗಿ ಹೇಳಿ ಅವನ ಜೊತೆ ಬಿಜ್ಜಳನ ಪಟ್ಟದಾನೆಯನ್ನು ಕಳುಹಿಸಿದನು. ಅದನ್ನು ಕರೆದುಕೊಂಡು ಬಂದ ವಿಟನು ವೇಶ್ಯೆಯ ಮನೆಯ ಮುಂದೆ ಕಟ್ಟಿದನು. ಅದನ್ನು ನೋಡಿದವರು ಬಿಜ್ಜಳನಿಗೆ ದೂರು ಕೊಟ್ಟರು. ಬಿಜ್ಜಳನು ಮಾಯಣ್ಣನನ್ನೂ ವಿಟಜಂಗಮನನ್ನೂ ಕರೆಯಿಸಿ ವಿಚಾರಿಸಿದನು. ಪಟ್ಟದಾನೆಯು ಗಜಶಾಲೆಯಲ್ಲಿಯೇ ಇರುವುದಾಗಿ ಮಾಯಣ್ಣನು ತಿಳಿಸಿದನು. ಅದನ್ನು ಪರೀಕ್ಷಿಸಿದಾಗ ಪಟ್ಟದಾನೆ ಗಜಶಾಲೆಯಲ್ಲಿಯೇ ಇದ್ದುದು ಕಂಡು ಬಂದಿತು. ಆಶ್ಚರ್ಯವೆಂದರೆ, ಅಂಥದೇ ಪಟ್ಟದಾನೆಯು ವೇಶ್ಯೆಯ ಮನೆಯ ಮುಂದೆಯೂ ಇದ್ದಿತು. ಬಿಜ್ಜಳ ಮಾಯಣ್ಣನ ಮಹಿಮೆಯನ್ನು ತಿಳಿದು ಅವನನ್ನು ಗೌರವಿಸಿದನು.

**ಡಕ್ಕೆಯ ಬೊಮ್ಮಣ್ಣ :**

ಡಕ್ಕೆಯ ಬೊಮ್ಮಣ್ಣ ಹಾಗೂ ಡಕ್ಕೆಯ ಮಾರಯ್ಯ ಎಂಬ ಎರಡು ಹೆಸರುಗಳು ಪ್ರಚಲಿತವಿದ್ದು ಅವೆರಡೂ ಒಬ್ಬನವೇ ಎಂಬುದು ಈಗ ಖಚಿತವಾಗಿದೆ. ಹಸ್ತ ಪ್ರತಿಗಳಲ್ಲಿ ಡಕ್ಕೆಯ ಬೊಮ್ಮಣ್ಣಗಳ ವಚನಗಳೆಂದೇ ಹೆಸರಿಸಲಾಗಿದೆ. ಬಸವಾದಿ ಶಿವಶರಣರ ಸಂಪರ್ಕಕ್ಕೆ ಬರುವ ಮುನ್ನ, ಡೊಳ್ಳು ಬಾರಿಸುತ್ತ, ಉಡಿಯಲ್ಲಿ ತಡಿಯಲ್ಲಿ ಬೇವಿನ ಸೊಪ್ಪನ್ನು ಕಟ್ಟಿಕೊಂಡು, ಬಾಳು ಬಟ್ಟಲನ್ನು ಕೈಯಲ್ಲಿ ಹಿಡಿದುಕೊಂಡು, ಬಳೆಯನ್ನು ಕೈಗೆ ತೊಟ್ಟುಕೊಂಡು, ಮಾರಿಯನ್ನು ಮೊರದಲ್ಲಿ ಹಾಕಿಕೊಂಡು ಭಕ್ತರ ಮನೆಮನೆಯ ಮುಂದೆ ನಿಂತು ಬೇಡುವುದು ಇವನ ಕಾಯಕವಾಗಿದ್ದಿರಬಹುದು. "ತನುವೆಂಬ ಮೊರದಲ್ಲಿ ಮಾಯಾಗುಣವೆಂಬ ಮಾರಿಯ ಹಿಡಿದು......" ಎಂಬ ವಚನದಲ್ಲಿ (ವ. ೯೨೮) ಇವನ ವೇಷಭೂಷಣಗಳ ಚಿತ್ರ ಹಾಗೂ ಕಾಯಕದ ಚಿತ್ರ ಸೊಗಸಾಗಿ ಮೂಡಿಬಂದಿದೆ. ಗುಬ್ಬಿಯ ಮಲ್ಲಣಾರ್ಯನ ವೀರಶೈವಾಮೃತ ಮಹಾಪುರಾಣದಲ್ಲಿ ನಿರೂಪಿತವಾಗಿರುವಂತೆ ಶಂಕರದಾಸಿಮಯ್ಯನ ಗರ್ವವನ್ನು ಮುರಿದವನು ಡಕ್ಕೆಯ ಮಾರಯ್ಯ. ಈ ಪವಾಡಕಥೆ ಎಳಂದೂರ ಹರೀಶ್ವರನ ಪ್ರಭುದೇವರ ಪುರಾಣ, ಅದೃಶ್ಯ ಕವಿಯ ಪ್ರೌಢರಾಯನ ಕಾವ್ಯ, ಶಾಂತಲಿಂಗದೇಶಿಕನ ಭೈರವೇಶ್ವರ ಕಾವ್ಯದ ಕಥಾಮಣಿ ಸೂತ್ರರತ್ನಾಕರಗಳಲ್ಲಿ ಬಂದಿದೆ. ತನ್ನ ಇಷ್ಟದೈವವಾದ ಮಾರಿಯನ್ನು ಹೊತ್ತು ತಿರುಗುವುದು, ಕ್ಷುದ್ರ ದೈವವೆಂದು ಭಾವಿಸಿದ್ದ ಮಾರಿಯ ಮೂಲಕವೇ ತನ್ನ ಇಹ-ಪರಗಳೆರಡನ್ನೂ ಸಾಧಿಸುವುದು ಹನ್ನೆರಡನೆಯ ಶತಮಾನದ ಶಿವಶರಣರ ಭಕ್ತಿ ಚಳುವಳಿಗೆ ಪರಸ್ಪರ ವಿರೋಧವಾಗಿ ಕಂಡುಬಂದರೂ ಇಂತಹ ವ್ಯಕ್ತಿಗಳು ಸಾಮಾಜಿಕ ಸ್ತರದಲ್ಲಿದ್ದರೆಂಬುದೂ ಅವರು ಏರಿದ ಎತ್ತರದ ನಿಲುವಿಗೆ ಬಸವಾದಿ ಶಿವಶರಣರು ತಲೆಬಾಗಿದ್ದರೆಂಬುದೂ ವಾಸ್ತವ ಸಂಗತಿ. "ತನಗೆ ಇದಿರಿಟ್ಟು ಕಾಬುದೆಲ್ಲವು ತನಗೆ ಅನ್ಯದೈವ, ತಾ ಕುರುಹಳಿದು ತನಗೆ ಅನ್ಯವೆಂಬುದೊಂದಿಲ್ಲವಾಗಿ ಅದು ತನಗೆ ಭಿನ್ನವಿಲ್ಲದ ದೈವ. ಅಹಂಕಾರವೆಂಬ ಆತ್ಮಘಟದ ಮಾರಿಯ ಹೊತ್ತು ಉಲುಹೆಂಬ ಡಕ್ಕೆಯ ಹಿಡಿದು ಭವಭವವೆಂಬ ಬಾಗಿಲಲ್ಲಿ ತಿರುಗಾಡುತ್ತಿದೇನೆ ಡಕ್ಕೆಯ ದನಿಯ ಬಿಡಿಸು...." ಎನ್ನುವ ಅವನ ವಚನ (೯೨೫) ಅವನ ನಿಲುಮೆಯನ್ನು ನಿಚ್ಚಳವಾಗಿ ಹೇಳುತ್ತದೆ. ಅವನಿಗೆ ಮಾರಿ ಎಂಬುದು

ಭೌತಿಕವಾದುದಲ್ಲ, ಅದು ಮನುಷ್ಯನಲ್ಲಿನ ಅಹಂಕಾರದ ಸಂಕೇತ. ಶರೀರವೆನ್ನುವ ಮೊರದಲ್ಲಿ ವಿಕಾರವೆನ್ನುವ ಕೋಣವನೇರಿ ಮಲತ್ರಯಗಳ ರೂಪದಲ್ಲಿ ಮಾರಿತಾಯಿ ಬಂದಳು. ಅವಳ ಬಾಧೆಗೆ ಒಳಗಾಗಿ ಎಲ್ಲರೂ ಮಾರ್ಗದಪ್ಪಿದ್ದರು. ಇದಕ್ಕೆ ಕಾರಣ ಅವರು ಕಾಲಾಂತಕ ಭೀಮೇಶ್ವರಲಿಂಗವನ್ನು ಅರಿಯದಿದ್ದುದು (ವ. ೮೯೨) ಎನ್ನುವನು. ಅವನು ಕಾಯವನ್ನು ಡಕ್ಕೆಗೆ ಹೋಲಿಸುತ್ತಾ ಅದರ ಮೇಲೆ ಜೀವವೆಂಬ ಹೊಡೆಚೆಂಡು ಬೀಳಲು ತ್ರಿವಿಧವ (=ಹೆಣ್ಣು, ಹೊನ್ನು, ಮಣ್ಣು) ತಾ ತಾ ಎಂಬ ಆಸೆ ಹಿಂಡಿ ಡಿಂಡಿಯೆನ್ನುತ್ತಿದೆ. ಈ ದನಿಯ ಭೇದದಲ್ಲಿ ಮಾರ್ಗದಪ್ಪದೆ ಕಾಲವೆನ್ನುವ ಮಾರಿಯನ್ನು ಗೆಲ್ಲಬೇಕು (ವ. ೯೧೬) ಎನ್ನುವನು.

**ಡೋಹರ ಕಕ್ಕಯ್ಯ :**

ಇವನು ತೀರಾ ಕೆಳವರ್ಗಕ್ಕೆ ಸೇರಿದ 'ಡೋಹಾರ' ಜಾತಿಯವನು. 'ಕೀಳು ಡೋಹರ ಕಕ್ಕ' ಎಂಬ ಜೇಡರ ದಾಸಿಮಯ್ಯನ ಉಲ್ಲೇಖದಿಂದ ಹಾಗೂ ಬಸವಣ್ಣನು ಇಷ್ಟಲಿಂಗವನ್ನು ತನಗೆ ಅನುಗ್ರಹಿಸಿದ್ದರಿಂದ ತನ್ನ ಕಷ್ಟಕುಲದಲ್ಲಿ ಹುಟ್ಟಿದ ಕರ್ಮ ಪರಿಹಾರಗೊಂಡಿತು ಎಂದು ಇವನೇ ತನ್ನ ವಚನವೊಂದರಲ್ಲಿ ಹೇಳಿಕೊಂಡಿರುವುದರಿಂದ ಇವನು ಅಸ್ಪೃಶ್ಯ ಕುಲಕ್ಕೆ ಸೇರಿದವನೆಂಬುದು ಸ್ಪಷ್ಟವಾಗುತ್ತದೆ. ಪ್ರಭುದೇವರ ಕರುಣದಿಂದ ತನ್ನಲ್ಲಿನ ಆಸೆ-ಆಮಿಷಗಳು ಅಳಿದವು, ಹುಸಿ-ವಿಷಯಂಗಳೆಲ್ಲಾ ಹಿಂಗಿದವು, ಸಂಶಯ ಸಂಬಂಧ ವಿಸಂಬಂಧವಾಯಿತು. ನನ್ನ ಮನಸ್ಸಿನಲ್ಲಿ ಘನ ಪರಿಣಾಮವ ಕಂಡು ಮನ ಅದರಲ್ಲಿ ಮಗ್ನವಾಯಿತು -ಎಂದು ತನ್ನ ಒಂದು ವಚನದಲ್ಲಿ ಪ್ರಭುದೇವನನ್ನು ಸ್ತುತಿಸಿರುವನು. ತನಗೆ ಗುರು, ಲಿಂಗ, ಜಂಗಮ, ಪ್ರಸಾದಿ, ಪ್ರಾಣಲಿಂಗಿ, ಶರಣ, ಐಕ್ಯ ಹಾಗೂ ನಿಜಸ್ಥಲಗಳನ್ನು ತೋರಿದವರು ಕ್ರಮವಾಗಿ ಬಸವಣ್ಣ, ಚೆನ್ನಬಸವಣ್ಣ, ಸಿದ್ಧರಾಮಯ್ಯ, ಬಿಬ್ಬಬಾಚಯ್ಯ, ಚಂದಯ್ಯ, ಸೊಡ್ಡಳ ಬಾಚರಸ, ಅಜಗಣ್ಣ, ಪ್ರಭುದೇವರುಗಳೆಂದು ಇವನು ತನ್ನ ಒಂದು ವಚನದಲ್ಲಿ ಹೇಳಿಕೊಂಡಿರುವನು. ಇವನು ಶ್ರೇಷ್ಠಮಟ್ಟದ ಅನುಭಾವಿಯೆಂಬುದು "ಎನ್ನ ಕಷ್ಟಕುಲದ ಸೂತಕ ನಿಮ್ಮ ಹಸ್ತ ಮುಟ್ಟಿದಲ್ಲಿ ಹೋಯಿತ್ತು! ಶುಕ್ಲ ಶೋಣಿತದಿಂದಲಾದ ಸೂತಕ ನಿಮ್ಮ ಮುಟ್ಟಲೊಡನೆ ಬಯಲಾಯಿತ್ತು! ತಟ್ಟಿದ ಮುಟ್ಟಿದ ಸುಖಂಗಳನೆಲ್ಲವ ಲಿಂಗಮುಖಕ್ಕೆ ಅರ್ಪಿಸಿದೆನಾಗಿ ಎನ್ನ ಪಂಚೇಂದ್ರಿಯಂಗಳು ಬಯಲಾದುವು! ಎನ್ನ ಅಂತರಂಗದಲ್ಲಿ ಜ್ಞಾನಜ್ಯೋತಿಯೆಡೆಗೊಂಡುದಾಗಿ ಒಳಗೂ ಬಯಲಾಯಿತ್ತು! ಸಂಸಾರಸಂಗದ ಅವಸ್ಥೆಯ ಮೀರಿದ ಕ್ರೀಯಲ್ಲಿ ತರಪರವಾಯಿತ್ತಾಗಿ ಬಹಿರಂಗ ಬಯಲಾಯಿತ್ತು! ಅಭಿನವ ಮಲ್ಲಿಕಾರ್ಜುನಾ, ನಿಮ್ಮ ಮುಟ್ಟಿದ ಕಾರಣ ನಾನೂ ಬಯಲಾದೆ!" ಎಂಬ ವಚನದಿಂದ (ವ. ೯೮೩) ಸ್ಪಷ್ಟಗೊಳ್ಳುತ್ತದೆ. ಇವನ ಆರು ವಚನಗಳು ದೊರೆತಿವೆ. ಬಸವ ಹಾಗೂ ಪ್ರಭುದೇವರಿಗಿಂತ ವಯಸ್ಸಿನಲ್ಲಿ ಹಿರಿಯನಾಗಿದ್ದರೂ ಅವರ ಸಂಪರ್ಕಕ್ಕೆ ಬಂದು ತನ್ನ ಕಷ್ಟಕುಲದ ಕರ್ಮವನ್ನು ನೀಗಿಕೊಂಡಂತೆ ವಚನಗಳನ್ನು ಬರೆದಿರುವುದರಿಂದ ಇವನು ಬಸವಪೂರ್ವದ ವಚನಕಾರನಾಗಿರುವ ಸಾಧ್ಯತೆ ಕಡಿಮೆ.

**ತಳವಾರ ಕಾಮಿದೇವಯ್ಯ :**

ಕಲ್ಯಾಣದಲ್ಲಿದ್ದ ಇವನು ತಳವಾರನ ಕಾಯಕ ಕೈಗೊಂಡಿದ್ದನು. ಇವನ ಹತ್ತು ವಚನಗಳು ದೊರೆತಿವೆ, ಸಾಮಾನ್ಯ ವಚನಕಾರನಾಗಿ ಕಂಡುಬರುವನು.

**ತುರುಗಾಹಿ ರಾಮಣ್ಣ :**

ಶಿವಭಕ್ತರ ಮನೆಯ ಗೋವುಗಳನ್ನು ಕಾಯುವುದು ಇವನ ಕಾಯಕ. 'ಬಂದಿತ್ತು ದಿನ ಬಸವಣ್ಣ ಕಲ್ಲಿಗೆ.....' ಎಂಬ ಇವನ ವಚನವು (ವ. ೧೦೨೫) ಕಲ್ಯಾಣದಲ್ಲಿ ನಡೆದ ಗಲಭೆಯ ನಂತರ ಬಸವಣ್ಣನು ಕಲ್ಲಿಗೆ (=ಕೂಡಲಸಂಗಮ), ಚೆನ್ನಬಸವಣ್ಣ ಉಳುವೆಗೆ, ಪ್ರಭುದೇವ ಹಾಗೂ ಅಕ್ಕಮಹಾದೇವಿ ಕದಳಿದ್ವಾರಕ್ಕೆ (=ಶ್ರೀಶೈಲ), ಮಿಕ್ಕಿನ ಶರಣರು ತಮ್ಮ ಗುರಿ ಬಂದತ್ತ ಐಕ್ಯರಾಗಲು ನಡೆದರು -ಎಂಬ ಮುಖ್ಯ ಸಂಗತಿಯನ್ನು ತಿಳಿಸುತ್ತದೆ. ಇವನು ಗೋವಳಿಗನಾದರೂ ಶ್ರೇಷ್ಠ ಅನುಭಾವಿ. ಇವನ ಅನೇಕ ವಚನಗಳಲ್ಲಿ ಕಾಯಕದ ಬಗೆಗಿನ ಗೌರವವನ್ನೂ ಹಾಗೂ ಅದರಿಂದೊದಗುವ ತೃಪ್ತಿಯನ್ನೂ ಕಾಣಬಹುದಾಗಿದೆ. ಗೋವಳ ಗೋವುಗಳನ್ನು ಕರೆಯುವ ವಿಧಾನ, ಗೋವುಗಳನ್ನು ಬೆಟ್ಟದ ತಪ್ಪಲಿನಲ್ಲಿ ಹುಲಿ ಹಿಡಿಯುವುದು, ಗೋವುಗಳ ದಶವರ್ಣ, ಗೋವುಗಳ ಸಂಜ್ಞೆ, ಗರ್ಜನೆ ತಾಪನೆ, ತೊಂಡುಹೋಗದಂತೆ ಗೋವುಗಳನ್ನು ಕಾಯುವ ವಿಧಾನ, ಹಸು-ಎತ್ತು-ಕರುಗಳನ್ನು ಕಾಯಲು ಪಡೆಯುವ ಸಂಭಾವನೆ -ಹೀಗೆ ವೈವಿಧ್ಯಮಯವಾದ ವಿಷಯಗಳ ಪ್ರಸ್ತಾಪ ಇವನ ವಚನಗಳಲ್ಲಿ ಬಂದಿದೆ. ತನ್ನ ವೃತ್ತಿಪರಿಭಾಷೆಯಲ್ಲಿ ಅಧ್ಯಾತ್ಮವನ್ನು ತಿಳಿಯಹೇಳುವ ಇವನ ಪ್ರಯತ್ನ ಮೆಚ್ಚುವಂತಹದು. ತಾತ್ತ್ವಿಕ ವಿವೇಚನೆ ಇವನ ಕೆಲವು ಬೆಡಗಿನ ವಚನಗಳಲ್ಲಿ ಕಂಡುಬರುತ್ತದೆ.

**ತೆಲುಗೇಶ ಮಸಣಯ್ಯ :**

ಇವನು ಗೋವುಗಳನ್ನು ಕಾಯುವ ಕಾಯಕದವನು. "ಹಳದಿಯ ಸೀರೆಯನುಟ್ಟು,......" ಎಂದು ಪ್ರಾರಂಭವಾಗುವ ವಚನವು (ವ. ೧೦೪೯) ಗೋವಳಿಗನೊಬ್ಬನ ವೇಷದ ಆಕರ್ಷಕ ಚಿತ್ರವನ್ನು ಕೊಡುತ್ತದೆ.

**ದಶಗಣ ಸಿಂಗಿದೇವಯ್ಯ :**

ಇವನ ಅಂಕಿತ 'ನಾಚಯ್ಯಪ್ರಿಯ ಮಲ್ಲಿನಾಥ' ಎಂಬುದಾಗಿದ್ದು, ನಾಲ್ಕು ವಚನಗಳು ದೊರೆತಿವೆ. ಇವುಗಳ ಕರ್ತೃ ನಾಚಯ್ಯನೆಂದೂ ಸಿಗುತ್ತದೆ. ದಶಗಣ ಸಿಂಗಿದೇವನ ವಚನಗಳು ತೀರಾ ಸರಳವಾಗಿವೆ. ಬಸವಣ್ಣನ ವಚನಗಳ ಪ್ರಭಾವ ಇವನ ವಚನಗಳ ಮೇಲೆ ಆಗಿರುವಂತೆ ತೋರುತ್ತದೆ.

**ದಸರಯ್ಯ :**

ಇವನು ಬಸವಣ್ಣನ ಸಮಕಾಲೀನ. ರಾಮಗೊಂಡೆ ಗ್ರಾಮ ಇವನ ವಾಸಸ್ಥಳ. ವೀರಮ್ಮ ಇವನ ಪತ್ನಿ. ವೀರಶೈವ ಪುರಾಣಗಳಲ್ಲಿ ಇವನ ಬಗೆಗೆ ವಿವರಗಳು

ದೊರೆಯುತ್ತವೆ. ದಸರಯ್ಯ ನಿತ್ಯವೂ ತೋಟಕ್ಕೆ ಹೋಗಿ ಗಿಡಗಳಿಂದ ಹೂವುಗಳನ್ನು ತಿರಿದು ತಂದು ಪೂಜೆ ಮಾಡುತ್ತಿದ್ದನು. ಒಮ್ಮೆ ಹೂ ತಿರಿಯುತ್ತಿದ್ದಾಗ 'ಅಯ್ಯೋ ನಾನು ನೊಂದೆನು' ಎಂಬ ಧ್ವನಿ ಕೇಳಿಬಂದಿತು. ಗಿಡಕ್ಕೆ ನೋವಾಯಿತೆಂದು ಭಾವಿಸಿದ ದಸರಯ್ಯ ಅಂದಿನಿಂದ ಗಿಡಗಳಿಂದ ಹೂವನ್ನು ಕೀಳದೆ ಉದುರಿ ಬಿದ್ದ ಹೂಗಳನ್ನು ಮಾತ್ರ ಆಯ್ದುಕೊಂಡು ಬಂದು ಶಿವಪೂಜೆ ಮಾಡಹೊರಟನು. ನಡೆಯುವಾಗ ನೆಲದಲ್ಲಿನ ಕ್ರಿಮಿಕೀಟಗಳಿಗೆ ನೋವಾಗಬಾರದೆಂದು ಎಚ್ಚರಿಕೆಯಿಂದಿರುತ್ತಿದ್ದನು. ಇವನ ಕೀರ್ತಿಯನ್ನು ಕೇಳಿ ಸಹಿಸದ ದುರ್ಜನರು ಕೈಗಳನ್ನು ಕಳೆದುಕೊಂಡಿದ್ದ ಮೋಟುಮಲ್ಲನೆಂಬವನಿಗೆ ಜಂಗಮವೇಷ ತೊಡಿಸಿ ದಸರಯ್ಯನನ್ನು ಪೀಡಿಸಲು ಕಳುಹಿಸಿದರು. ಮೋಟಮಲ್ಲನು ದಸರಯ್ಯನನ್ನು ವಿನಾಕಾರಣ ಛೇಡಿಸಿ ತನ್ನ ಮೋಟು ಕೈಗಳಿಂದ ಗುದ್ದಿ ಗುದ್ದಿ ಹಿಂಸಿಸತೊಡಗಿದನು. ದಸರಯ್ಯ ಶಾಂತಚಿತ್ತನಾಗಿ ನೋವನ್ನೆಲ್ಲ ಸಹಿಸಿಕೊಂಡನು. ಮೋಟಮಲ್ಲನಿಗೆ ಬಳಲಿಕೆಯಾಯಿತು. ಆಗ ದಸರಯ್ಯ ಅವನನ್ನು ತಬ್ಬಿಕೊಂಡು ಅವನ ಮೈಸವರುತ್ತ 'ಶಿವಶಿವಾ! ಏನು ಕಾರಣ ಇಷ್ಟು ಬಳಲಿದಿರಿ? ನಿಮ್ಮ ಹಸ್ತಗಳು ನೊಂದುವೇ?' ಎಂದು ಉಪಚರಿಸಿದನು. ಆಗ ಮೋಟಮಲ್ಲನ ಮೋಟು ಕೈಗಳು ಚಿಗುರಿದುವು. ಅವನ ಬರಿದಾದ ಸೆಜ್ಜೆಯಲ್ಲಿ ಲಿಂಗವು ಕಾಣಿಸಿಕೊಂಡಿತು. ಹುಸಿ ಜಂಗಮವು ನಿಜ ಜಂಗಮವಾದನು.

'ಉದುರಿಬೀಳುವನ್ನಕ್ಕ.....' ಎಂದು ಪ್ರಾರಂಭವಾಗುವ ವಚನವು (ವ. ೧೦೫೪) ಇವನ ಬದುಕಿನಲ್ಲಿ ನಡೆದ ಘಟನೆಗೆ ಸಂಬಂಧಿಸಿದುದು. ಇವನ ಸರ್ವಜೀವ ದಯಾಗುಣವನ್ನು ಹೇಳುವ ವ್ಯಕ್ತಿತ್ವದ ಎಳೆ 'ಎಲು ನರ ಚರ್ಮ ಮಜ್ಜೆ' ಎಂದು ಪ್ರಾರಂಭವಾಗುವ ವಚನದಲ್ಲಿ (೧೦೫೬) ನೋಡಬಹುದು. ಇದೇ ಭಾವ ವಚನ ೧೦೬೯ರಲ್ಲೂ ಕಾಣಬಹುದು.

**ದಾಸೋಹದ ಸಂಗಣ್ಣ :**

ಇವನು ಬನವಾಸಿಯ ಮಧುಕೇಶ್ವರನ ಭಕ್ತನು. ಅನ್ನಸಂತರ್ಪಣೆ ಮಾಡುವುದು ಇವನ ಕಾಯಕವಾಗಿದ್ದುದರಿಂದ ದಾಸೋಹದ ಸಂಗಣ್ಣನೆಂಬ ಹೆಸರು ಬಂದಿತು. ಇವನ ಜೀವಿತವೃತ್ತಾಂತದ ಬಗೆಗೆ ಹೆಚ್ಚಿನ ವಿವರಗಳೇನೂ ತಿಳಿದು ಬರುವುದಿಲ್ಲ. ಇವನ ವಚನಗಳಲ್ಲಿ ತಾತ್ವಿಕ ಚರ್ಚೆ ಮುಖ್ಯವಾಗಿದೆ. 'ಆಡುವ ಮಡಕೆಯ ತೋರಿ ಶಿಶುವಿನ ಹಸುವ ಅಡಗಿಸುವವಳಂತೆ ಬರಿದೆ ಗುಮ್ಮನಿದೆಯೆಂದು ಶಿಶುವ ಬೆದರಿಸಿ ಹಸುಳೆಯ ಅಡಗಿಸುವವಳಂತೆ'; 'ಏತರ ದೊಣ್ಣೆಯಲ್ಲಿ ಹೊಯ್ದಡೂ ಪೂಸನಪ್ಪನು'; 'ತಾನಿರಿಸಿದ ಕಡವರವೆಂದಡೆ ಸಾಕ್ಷಿಯಿಲ್ಲದೆ ಕುರುಹನರಿಯದೆ ಆಗೆಯಬಹುದೆ?'; 'ಬೇವಿನ ಮರನನೇರಿ ಬೆಲ್ಲವ ಮೆದ್ದಡೆ ಕಹಿಯಾದುದುಂಟೆ?' ಇಂತಹ ಅರ್ಥಪೂರ್ಣ ಹೋಲಿಕೆಗಳು ಇವನ ವಚನಗಳಲ್ಲಿ ಕಂಡು ಬರುತ್ತವೆ. ವೀರಶೈವದ ತಾತ್ವಿಕ ವಿವರಣೆ ಅನೇಕ ವಚನಗಳಲ್ಲಿ ಬರುವುದರಿಂದ ಇವನ ವಚನಗಳು ಸಾಮಾನ್ಯನ ಗ್ರಹಿಕೆಗೆ ಸುಲಭವಾಗಿ ಒಳಗಾಗವು.

**ನಗೆಯ ಮಾರಿತಂದೆ :**

ಜನರನ್ನು ನಗಿಸುವುದೇ ಇವನ ಕಾಯಕ. ಈತ ತನ್ನ ಹಾಸ್ಯಪ್ರವೃತ್ತಿಯಿಂದ ಶಿವನನ್ನೆ ಒಲಿಸಿ ಕೈಲಾಸಕ್ಕೆ ಹೋದಂತೆ 'ಗುರು ವಿರೂಪಾಕ್ಷ' ಅಂಕಿತದ ರಗಳೆಯಿಂದ ತಿಳಿದು ಬರುತ್ತದೆ. ಭಕ್ತನಾಗಿ ಹುಟ್ಟಿ ಮತ್ತೊಬ್ಬರಲ್ಲಿ ಬೇಡುವುದೆ ಕಷ್ಟವೆನ್ನುವ ನಗೆಯ ಮಾರಿತಂದೆ 'ಈ ಹೊತ್ತು ದೇಹಕ್ಕೆ ನಗೆಯ ಚಿತ್ತದ ಕಾಯಕ, ಇದನೊಪ್ಪುಗೊ ಆತುರವೈರಿ ಮಾರೇಶ್ವರಾ' ಎಂದು ತನ್ನ ಇಷ್ಟದೈವದಲ್ಲಿ ವಿನಂತಿಸುವನು (ವ. ೧೨೩೬). 'ಎನ್ನ ಚಿತ್ತದಲ್ಲಿ ಕಲೆದೋರಿ, ನೀನಾಡಿಸಿದಂತೆ ಆಡಿದೆ, ನೀ ಕೊಟ್ಟ ಕಾಯಕವ ಹೊತ್ತೆ, ನೀ ಹೇಳಿದ ಬಿಟ್ಟಿಯ ಮಾಡಿದೆ. ಕುಳದವನಾದ ಮತ್ತೆ ಮಾನ್ಯರ ಒಲವರ ಎನಗೊಂದು ಗುಣವಿಲ್ಲ. ನೀನಾಡಿಸಿದಂತೆ ಆಡಿದೆ. ಆತುರವೈರಿ ಮಾರೇಶ್ವರಾ' ಎಂಬ ಇವನ ಇನ್ನೊಂದು ವಚನವನ್ನೂ (ವ. ೧೨೫೫) ಪರಿಭಾವಿಸಬೇಕು. ಜ್ಞಾನವನ್ನು ಸಾರುವ ಪುಸ್ತಕವನ್ನು (ಓಲೆ ಕಟ್ಟುಗಳನ್ನು) ವಿರಕ್ತರು ಊರಿಂದೂರಿಗೆ ಎತ್ತುಗಳ ಮೇಲೆ ಹೇರಿಕೊಂಡು ಹೋಗುತ್ತಿದ್ದ ಚಿತ್ರವನ್ನು ಇವನು ಒಂದು ವಚನದಲ್ಲಿ ಕೊಟ್ಟಿರುವನು (ವ. ೧೨೫೪). ಸಮತೆ ಸೈರಣೆಯಿಲ್ಲದ ಈ ವಿರಕ್ತರು ಮಾತಿನಲ್ಲಿ ಆಗಮವನ್ನೂ ಮನದಲ್ಲಿ ಆಸೆಯನ್ನೂ ಹೊಂದಿರುತ್ತಿದ್ದುದನ್ನು ಕಂಡ ಇವನು 'ಇದು ನೀತಿಯಲ್ಲ'ವೆಂದು ಎಚ್ಚರಿಸುವನು. ಭಕ್ತನಾದವನಿಗೆ ಗುಂಡ ವೇಶಿ ದಾಸಿ ಜೂಜು ಬೇಂಟೆ ಭಂಡರ ಸಂಸರ್ಗ -ಇವು ನಿಷಿದ್ಧ. ಆದರೂ ಇವುಗಳ ಸಂಸರ್ಗದಲ್ಲಿರುತ್ತ ಮತ್ತೆ ಲಿಂಗಾಂಗಸಂಗ ಶರಣರ ವಚನಾನುಭಾವದ ಸುದ್ದಿಯೇಕೊ? ಎಂದು ಇವನು ಪ್ರಶ್ನಿಸುವನು (ವ. ೧೨೦೫). ಜ್ಞಾನ ಉತ್ತಮರ ಸೊತ್ತಾಗಬಾರದು. ಅದು ಎಲ್ಲರಿಗೂ ಲಭ್ಯವಾಗಬೇಕೆಂಬುದು ನಗೆಯ ಮಾರಿತಂದೆಯ ಆಸೆ. ಪುರೋಹಿತವರ್ಗವು ಮಾತಿನ ಅದ್ವೈತವ ಕಲಿತು ಅದನ್ನು ಅರಿಯದ ಜನರಿಗೆ ತಿಳಿಯದ ಸಂಸತದಲ್ಲಿ ಬೋಧಿಸಹೊರಟಿದ್ದುದನ್ನು ನಗೆಯ ಮಾರಿತಂದೆಯು 'ಕಲ್ಲಿಯ ಹಾಕಿ ನೆಲ್ಲವ ತುಳಿದು ಗುಬ್ಬಿಯ ಸಿಕ್ಕಿಸುವ ಕಳ್ಳನಂತೆ' ಎಂದು ವ್ಯಂಗ್ಯವಾಡಿರುವನು. ಪುರೋಹಿತ ವರ್ಗದವರು ನಡೆಸುವ ಈ ಮೋಸವನ್ನು ರೂಪಕವೊಂದರಲ್ಲಿ ನಗೆಯ ಮಾರಿತಂದೆ ಹೇಳುತ್ತಾ ವಾಗದ್ವೈತವಾಗಲಿ ಸಂಸತವಾಗಲಿ ಅರಿಯದ ಜನರೆಂಬ ಹಕ್ಕಿಯನ್ನು ಬಲೆಯಲ್ಲಿ ಹಿಡಿಯಲು ಬಳಸುವ ಅಕ್ಕಿಕಾಳು ಎಂದಿರುವನು. ಮೇಲಿಂದ ಮೇಲೆ ಸಂಸತದ ಶ್ಲೋಕಗಳನ್ನು ಉಲ್ಲೇಖಿಸುತ್ತಾ ಅದ್ವೈತವನ್ನು ಬೋಧಿಸುವ ಪುರೋಹಿತ ವರ್ಗದವರ ಮಾತಿನ ಮೋಡಿಗೆ ಸೆರೆಯಾಗುವ ಸಾಮಾನ್ಯನ ಸ್ಥಿತಿಯನ್ನು ಅತ್ಯಂತ ವಾಸ್ತವವಾಗಿ 'ಮತ್ಸ್ಯದ ವಕ್ತ್ರದಲ್ಲಿ ಗ್ರಾಸವ ಹಾಕುವಂತೆ' ಎಂಬ ಮತ್ತೊಂದು ಅರ್ಥಪೂರ್ಣ ಹೋಲಿಕೆಯಿಂದ ನಗೆಯ ಮಾರಿತಂದೆ ಹೇಳಿರುವನು (ವ. ೧೧೯೦). ಇವನ ವಚನಗಳು ಸರಳತೆ ಮತ್ತು ಸಂಕ್ಷಿಪ್ತತೆಗಳಿಂದಾಗಿ ಸುಲಭಗ್ರಾಹ್ಯವಾಗಿವೆ.

**ನಿಜಗುಣಯೋಗಿ :**

ಇವನು ಬಸವಪೂರ್ವದ ಶ್ರೇಷ್ಠ ಶಿವಯೋಗಿ. ಮಹಾದೇವಿಯಕ್ಕ ತನ್ನ ವಚನವೊಂದರಲ್ಲಿ 'ನಿಜಗುಣನ ಆರೂಢಸ್ಥಲ'ವೆಂದು ಹೇಳಿ ಅವನ ಶಿವಾನುಭಾವತ್ವಕ್ಕೆ ಗೌರವ ಸಲ್ಲಿಸಿರುವಳು. ಮಹಾಲಿಂಗದೇವನ 'ಏಕೋತ್ತರ ಶತಸ್ಥಲ'ದಲ್ಲಿ ಇವನ ೩೩

ಹಾಡುಗಳು ಕಂಡುಬಂದಿವೆ. ಇವನ ವಚನಗಳು ಶಿವಯೋಗದ ಪ್ರತಿಪಾದನೆಯಲ್ಲಿ ತೊಡಗಿವೆ. ಶ್ರೇಷ್ಠ ಅನುಭಾವಿಯೊರ್ವನ ಸ್ಫಟಿಕಸದೃಶವಾದ ಚಿಂತನಾಂಶ ಅರ್ಥಪೂರ್ಣವಾದ ಮಾತುಗಳಲ್ಲಿ ಹರಳುಗೊಂಡಿರುವುದನ್ನು ನಾವು ಇವನ ವಚನಗಳಲ್ಲಿ ಕಾಣುವೆವು. 'ಬೇರಿಗೆ ನೀರೆರೆದಲ್ಲಿ ಶಾಖೆಗೆ ಸಂದುಂಟೆ?'; 'ಅಂಗಲಿಂಗವೆಂಬನ್ನಕ್ಕ ಯೋಗಪೂಜೆ ಪುಣ್ಯಕ್ಕೆ ಬೀಜ'; 'ಗಲ್ಲ ಸೋಲಕ್ಕೆ ಹೋರಿ ಒಳ್ಳಿದನಾದೆನೆಂಬಲ್ಲಿಯೆ ಕಳಕದ್ದ ಗಜವೆಲ್ಲಿ ಅಡಗಿ ಮಾರೂದು ಹೇಳಾ' - ಇಂತಹ ಸೂತ್ರಪ್ರಾಯವಾದ ಮಾತುಗಳಲ್ಲಿ ಅರ್ಥ ಜೀಕುತ್ತದೆ; ಆಲೋಚನೆಗಳು ತನ್ನ ತಾಜಾತನದಿಂದಾಗಿ ನಮ್ಮ ಮನಸ್ಸನ್ನು ಸೆರೆಹಿಡಿಯುತ್ತವೆ. ಇವನ ಹಾಡುಗಳಲ್ಲಿ ತಾತ್ತ್ವಿಕ ಚಿಂತನೆ ಸೊಗಸಾಗಿ ಮೈತಾಳಿದೆ.

**ನಿವೃತ್ತಿ ಸಂಗಯ್ಯ :**

ಇವನ ಮೂರು ವಚನಗಳು ದೊರತಿವೆ. ಇವನ ಬಗೆಗೆ ಹೆಚ್ಚಿನ ವಿವರಗಳೇನೂ ತಿಳಿದುಬಂದಿಲ್ಲ. ಶರಣನಾದವನು ಪರಧನ ಪರಾನ್ನ ಪರಸ್ತ್ರೀಯರಾಸೆ ಬಿಡಬೇಕು; ಚಾತುರ್ವರ್ಣ್ಯದವರು ಶಿವಭಕ್ತರಾದ ಬಳಿಕ ತಮ್ಮ ಮುನ್ನಿನ ಜಾತಿಯನ್ನು ಬಿಡಬೇಕು; ಆಸೆಯನ್ನು ಧಿಕ್ಕರಿಸಿ ನಿರಾಶೆಯಲ್ಲಿ ನಡೆವವನೆ ಲಿಂಗಾಂಗಿ ಎಂದು ತನ್ನ ವಚನಗಳಲ್ಲಿ ಇವನು ಹೇಳಿರುವನು.

**ನುಲಿಯ ಚಂದಯ್ಯ :**

ಇವನು ಮೆದೆಹುಲ್ಲನ್ನು ತಂದು ಹಗ್ಗ ಹೊಸೆದು ಮಾರಿ ಬಂದ ಹಣದಿಂದ ದಾಸೋಹ ಕಾರ್ಯವನ್ನು ನಡೆಸುತ್ತಿದ್ದನು. ಇವನು ವಿಜಾಪುರ ಪಟ್ಟಣದಿಂದ ಪೂರ್ವಕ್ಕೆ ಹದಿನೆಂಟು ಮೈಲುಗಳ ಮೇಲಿರುವ ಶಿವಣಗಿ ಗ್ರಾಮದವನೆಂಬ ಐತಿಹ್ಯವಿದೆಯೆಂದು ಫ.ಗು. ಹಳಕಟ್ಟಿಯವರು ಹೇಳುವರು ('ಶಿವಶರಣರ ಚರಿತ್ರೆಗಳು' -೨ ಪು. ೨೨೪). ನುಲೇನೂರಿನಲ್ಲಿ ಪದ್ಮಾವತಿ ಎಂಬುವಳು ಚಂದಯ್ಯನಿಗೆ ಒಂದು ಕೆರೆಯನ್ನು ಕಟ್ಟಿಸಿಕೊಟ್ಟಿದ್ದು, ಅದರ ಏರಿಯ ಮೇಲಿನ ಚಿಕ್ಕ ಮಠದಲ್ಲಿ ಶಿವಾನುಭವ ಗೋಷ್ಠಿಗಳನ್ನು ನಡೆಸುತ್ತಲಿದ್ದು ಅಲ್ಲಿಯೇ ಬಯಲಾದನೆಂಬ ಮತ್ತೊಂದು ಅಭಿಪ್ರಾಯವೂ ಇದೆ. ಚಿಕ್ಕಮಠದಲ್ಲಿ ಇಂದಿಗೂ ಅವನ ಸಮಾಧಿ ಇದೆಯೆಂದು ಹೇಳುವರು. ಚಂದಯ್ಯನು ಲಿಂಗೈಕ್ಯನಾದ ನಂತರ ಪದ್ಮಾವತಿಯೆಂಬ ಈ ಊರು ನುಲಿಯಯ್ಯನೂರು ಎಂದಾಗಿ, ಈಗ ನುಲೇನೂರು ಎಂದಾಗಿದೆಯೆಂದು ಶ್ರೀ ಚನ್ನಪ್ಪ ಎರೆಸೀಮೆಯವರು ಅಭಿಪ್ರಾಯಪಡುವರು ('ಬಸವೇಶ್ವರರ ಸಮಕಾಲೀನರು' ೧೯೬೮, ಪು. ೩೯೧-೯೯.)

ವೀರಶೈವ ಪುರಾಣಗಳಲ್ಲಿ ಚಂದಯ್ಯನ ಬದುಕಿನ ಬಗೆಗೆ ಕೆಳಗಿನ ಸಂಗತಿಗಳು ತಿಳಿದುಬರುತ್ತವೆ: ಕಲ್ಯಾಣ ಪಟ್ಟಣದಲ್ಲಿ ಚಂದಯ್ಯನು ಹಗ್ಗ ಹೊಸೆದು ದಾಸೋಹ ಕಾರ್ಯ ಮಾಡುತ್ತಿದ್ದಾಗ ಒಂದು ದಿನ ಅವನ ಇಷ್ಟಲಿಂಗವು ಸೆಜ್ಜೆಯಿಂದ ಹುಲ್ಲಿನ ಮೆದೆಗೆ ಬಿದ್ದುಹೋಯಿತು. ಚಂದಯ್ಯ ಅದನ್ನು ಎತ್ತಿಕೊಳ್ಳದೆ ತನ್ನಷ್ಟಕ್ಕೆ ತಾನು ನಡೆದನು. ಆಗ ಲಿಂಗವು 'ನಾನು ಬಂದೇನು ಚಂದಯ್ಯ' ಎಂದಿತು. ಅದಕ್ಕೆ ಅವನು 'ಮೊದಲೇಕೆ

ಹೋದಿರಿ, ಈಗಲೇಕೆ ಬಂದೆನೆಂದಿಹಿರಿ, ನಾನೊಲ್ಲೆ' ಎಂದು ಹೇಳಿ ಮುಂದೆ ನಡೆದನು. ಆಗ ಲಿಂಗವು ನೀನೊಲ್ಲೆನೆಂದೊಡೆ ನಾ ಬಿಡೆ ತನ್ನಾಣೆ ಎಂದಿತು. ಚಂದಯ್ಯ ಲಿಂಗದ ಮಾತಿಗೆ ಬೆಲೆಕೊಡಲಿಲ್ಲ. ಆಗ ಲಿಂಗವು ಮಡಿವಾಳ ಮಾಚಯ್ಯನ ಬಳಿಗೆ ಹೋಗಿ ದೂರುಕೊಟ್ಟಿತು. ಮಡಿವಾಳಯ್ಯ ಚಂದಯ್ಯನನ್ನು ವಿಚಾರಿಸಿದನು. ಅದಕ್ಕೆ ಅವನು 'ಸೆಜ್ಜೆಯಿಂದ ಕಡೆಗೆ ಬಂದು ಆತ ಹೋದನೆಂಬ ಸಂದೇಹ ನನಗಿಲ್ಲ; ಆತ್ಮ ಹೋದರೆ ಘಟವುಳಿಯುವುದೆ?' ಎಂದನು. ಮಡಿವಾಳಯ್ಯ ಅದಕ್ಕೆ ಪ್ರತಿಯಾಗಿ 'ದಾಸೋಹವುಳ್ಳನ್ನಕ್ಕ ಲಿಂಗಪೂಜೆಯಂ ಮಾಡಬೇಕು' ಎಂದು ಹೇಳಿದನು. ಲಿಂಗಪೂಜೆಗಿಂತ ಜಂಗಮಪೂಜೆಯೇ ವಿಶೇಷವೆಂದು ಭಾವಿಸಿದ್ದ ಚಂದಯ್ಯನು 'ನಮಗೆ ಜಂಗಮಾರ್ಚನೆಗೆ ವೇಳೆ ಸಮ, ಲಿಂಗಪೂಜೆಗೆ ವೇಳೆಯಿಲ್ಲ'ವೆಂದು ಹೇಳಿ ಮುಂದೆ ಸಾಗಿದನು. ಆಗ ಲಿಂಗವು 'ಜಂಗಮದ ಸೇವೆಗೆ ನಾ ನೆರವಪ್ಪೆನು' ಎಂದು ಹೇಳಿ ಹುಲ್ಲನ್ನು ಚಂದಯ್ಯನ ಮನೆಗೆ ಹೊತ್ತುಕೊಂಡು ಹೋಗಿ ಅದನ್ನು ಹೊಸೆದು ಪೇಟೆಗೆ ಮಾರಲು ತೆಗೆದುಕೊಂಡು ಹೋಯಿತು. ಆದರೆ ಹಗ್ಗವು ಗಂಟುಗಂಟಾಗಿದ್ದುದರಿಂದ ಅದನ್ನು ಯಾರೂ ಕೊಳ್ಳಲಿಲ್ಲ. ಆಗ ಲಿಂಗವು ಅದನ್ನು ಬಸವಣ್ಣನ ಮನೆಗೆ ತೆಗೆದುಕೊಂಡು ಹೋಯಿತು. ವಿವರ ತಿಳಿದ ಬಸವಣ್ಣನು ಲಿಂಗಕ್ಕೆ ಒಂದು ಸಾವಿರ ಹೊನ್ನನ್ನು ಕೊಟ್ಟು ಕಳುಹಿಸಿದನು. ಚಂದಯ್ಯನು ಆ ಹಣವನ್ನು ಅನ್ಯಾಯದ ಹಣವೆಂದು ಸ್ವೀಕರಿಸಲು ಒಪ್ಪಲಿಲ್ಲ. ಹಗ್ಗದ ನಿಜವಾದ ಬೆಲೆಯಾದ ಹಾಗದ ರೊಕ್ಕ ತಂದರೆ ಮಾತ್ರ ಸ್ವೀಕರಿಸುವುದಾಗಿ ಹೇಳಿದನು. ಲಿಂಗವು ಅಂತೆಯೇ ಮಾಡಲು ಅದನ್ನು ಸ್ವೀಕರಿಸಿದ ಚಂದಯ್ಯ ಅದರಿಂದ ಜಂಗಮಾರ್ಚನೆ ಮಾಡಿದನು.

ನುಲಿಯ ಚಂದಯ್ಯನು ಕಾಯಕಕ್ಕೆ ಹೆಚ್ಚಿನ ಮಹತ್ವ ಕೊಟ್ಟಿರುವನು. 'ಆವಾವ ಕಾಯಕದಲ್ಲಿ ಬಂದಡೂ ಭಾವಶುದ್ಧವಾಗಿ ಗುರು-ಲಿಂಗ-ಜಂಗಮಕ್ಕೆ ಮಾಡುವುದೆ ಶಿವಪೂಜೆ' (ವ. ೧೨೮೪); 'ಕಂದಿಸಿ ಕುಂದಿಸಿ ಬಂಧಿಸಿ ಕಂಡವರ ಬೇಡಿತಂದು ಜಂಗಮಕ್ಕೆ ಮಾಡಿಹೆನೆಂಬ ದಂದುಗದೋಗರ ಲಿಂಗಕ್ಕೆ ನೈವೇದ್ಯ ಸಲ್ಲ. ತನು ಕರಗಿ ಮನ ಬಳಲಿ ಬಂದ ಚರದ ಅನುವರಿತು ಸಂದಿಲ್ಲದೆ ಸಂಶಯವಿಲ್ಲದೆ ಜಂಗಮಲಿಂಗಕ್ಕೆ ದಾಸೋಹವ ಮಾಡುವುದೆ ಮಾಟ. ಕಾಶಿಯ ಕಾಯಿ ಕಾಡಿನ ಸೊಪ್ಪಾಯಿತ್ತಾದಡೂ ಕಾಯಕದಿಂದ ಬಂದುದು ಲಿಂಗಾರ್ಪಿತ. ಚೆನ್ನಬಸವಣ್ಣಪ್ರಿಯ ಚಂದೇಶ್ವರ ಲಿಂಗಕ್ಕೆ ನೈವೇದ್ಯ ಸಂದಿತ್ತು' ಎಂದಿರುವನು (ವ. ೧೨೯೧). ಚಂದಯ್ಯನ ಈ ಕಾಯಕದ ಕಲ್ಪನೆ ಅರ್ಥಪೂರ್ಣವಾಗಿದೆ. 'ಕಾಯಕ' ಭಾವಶುದ್ಧವಾಗಿರಬೇಕು. ಹಾಗೆ ಬಂದುದನ್ನು ಗುರು-ಲಿಂಗ-ಜಂಗಮಕ್ಕೆ ವಿನಿಯೋಗಿಸುವುದೆ 'ಶಿವಪೂಜೆ' ಎನ್ನುವ ಅವನ ಆಲೋಚನೆಯಲ್ಲಿ ನಾವೀನ್ಯತೆಯಿದೆ. ನುಲಿಯ ಚಂದ್ಯಯನಂತಹ ಓರ್ವ ದಲಿತ ಲಿಂಗನಿಷ್ಠೆಗಿಂತ ಕಾಯಕನಿಷ್ಠೆ ಮಹತ್ವದ್ದೆಂದು ಭಾವಿಸುವನು. ಅವನ ಬದುಕಿಗೆ ಸಂಬಂಧಪಟ್ಟ ಮೇಲಿನ ಕಥೆಯಲ್ಲಿ ಆತ ಹುಲ್ಲಿನ ಹೊರೆಯನ್ನು ಕಟ್ಟುತ್ತಿರುವಾಗ ಕಳಚಿಬಿದ್ದ ಲಿಂಗವನ್ನು ಮತ್ತೆ ಎತ್ತಿ ಧರಿಸಿಕೊಳ್ಳುವುದಿಲ್ಲ. ಆ ಸಂದರ್ಭದಲ್ಲಿ ನುಲಿಯ ಚಂದಯ್ಯನಿಗೂ ಕೆಳಗೆ ಬಿದ್ದ ಲಿಂಗಕ್ಕೂ ಮಾತುಕತೆಯಾಗುತ್ತದೆ.

ಈ ಮಾತುಕತೆಯ ನಾಟಕೀಯ ಉಲ್ಲೇಖ ಬರುವುದು ಹೆಂಡದ ಮಾರಯ್ಯಗಳ ವಚನಗಳಲ್ಲಿ. ನುಲಿಯ ಚಂದಯ್ಯನು ಲಿಂಗದಿಂದಲೇ ಸೇವೆ ಮಾಡಿಸಿಕೊಂಡ ಶರಣ. ಹಲಗೆದೇವರ ಶೂನ್ಯಸಂಪಾದನೆಯಲ್ಲಿ ಈ ಪ್ರಸಂಗ ಬರುತ್ತದೆ. ಲಿಂಗವು ಕೆಳಗೆ ಬಿದ್ದಾಗ ಅದಕ್ಕೆ ಮಹತ್ವ ಕೊಡದೆ ತನ್ನ ಕಾಯಕದಲ್ಲಿಯೇ ಶಿವನನ್ನು ಕಂಡ ಚಂದಯ್ಯನನ್ನು ನೋಡಿ ಜಲದಲ್ಲಿ ಬಿದ್ದ ಲಿಂಗವು ಪುರಾಷಾಕಾರವನ್ನು ತಳೆದು ಚಂದಯ್ಯನ ಜೊತೆಯಲ್ಲಿ ಮಾತುಕತೆ ನಡೆಸುತ್ತದೆ. ಅವರ ಸಂಭಾಷಣೆ ನಾಟಕೀಯವಾಗಿ ಹೆಂಡದ ಮಾರಯ್ಯನ ವಚನವೊಂದರಲ್ಲಿ ಅಪರೂಪವಾಗಿ ಹೀಗೆ ಅಭಿವ್ಯಕ್ತಿ ಪಡೆದುಕೊಳ್ಳುತ್ತದೆ:

| | | |
|---|---|---|
| ಲಿಂಗಯ್ಯ | : | ನುಲಿಯೊಡೆಯರೇ ನಿಮ್ಮಾಳ್ದನ ಕೊಳ್ಳಿರೆ. |
| ನುಲಿಯ ಚಂದಯ್ಯ | : | ಆಳ್ದರೆಂದರಾರು? ಅವರು ನಮ್ಮ ಕೈಯಲ್ಲಿದ್ದಂಥವರು. ಅವರು ಆಳ್ದರಲ್ಲ. |
| ಲಿಂಗಯ್ಯ | : | ಆದರೇನು? ಅವರು ನಿಮ್ಮ ಇಷ್ಟರುದ್ರರಾಗರೆ? |
| ನುಲಿಯ ಚಂದಯ್ಯ | : | (ನಮ್ಮ ಇಷ್ಟರುದ್ರರು) ಜಂಗಮವಾಗಿದ್ದಹರು. |
| ಲಿಂಗಯ್ಯ | : | ಇವರು ಬೇಡವೆ? |
| ನುಲಿಯ ಚಂದಯ್ಯ | : | ಇಹರೆ ಬೇಡೆನ್ನೆ. ಹೋಹರೆ ನಿಲಿಸ ಶಕ್ತನಲ್ಲ. |
| ಲಿಂಗಯ್ಯ | : | ನಾವು ಇರಲು ಬರಲಿಲ್ಲ? |
| ನುಲಿಯ ಚಂದಯ್ಯ | : | ಇರಿ. |
| ಲಿಂಗಯ್ಯ | : | ಕೈಯಲ್ಲಿ ಕೊಳ್ಳಿರೇ. |
| ನುಲಿಯ ಚಂದಯ್ಯ | : | ಮುನ್ನವೇ ಕೊಂಡಿದ್ದೆನು. |
| ಲಿಂಗಯ್ಯ | : | ಎನ್ನನೇಕೆ ಒಲ್ಲೆಯಯ್ಯ? |
| ನುಲಿಯ ಚಂದಯ್ಯ | : | ನೀನು ಮುನಿದಿದ್ದೆಯಾಗಿ. |
| ಲಿಂಗಯ್ಯ | : | ಇನ್ನು ಮುನಿವುದಿಲ್ಲ ನಾನು. |
| ನುಲಿಯ ಚಂದಯ್ಯ | : | ನಿಮ್ಮ ನಂಬುವುದಿಲ್ಲ. |
| ಲಿಂಗಯ್ಯ | : | ಹೊಣೆಯ ಕೊಟ್ಟೆಹೆನು. |
| ನುಲಿಯ ಚಂದಯ್ಯ | : | ಅವರಾರು? |
| ಲಿಂಗಯ್ಯ | : | ಮಾಚಿದೇವ ಮಹಾಪ್ರಸಾದಿ ಹೊಣೆಯಾಗ್ಯೆ. |
| ನುಲಿಯ ಚಂದಯ್ಯ | : | ನಂಬೆನು. |

ಲಿಂಗಯ್ಯ : ಜೀಯಾ, ನಿಮ್ಮಾಣೆ, ಪತ್ರವಾದರೆ ಕೊಟ್ಟೆಹೆನು.

ನುಲಿಯ ಚಂದಯ್ಯ : (ಆಗಲಿ)

ಲಿಂಗಯ್ಯ : ಇರಲಿಕೆ ಠಾವೆಲ್ಲಿ? ಕರದಲ್ಲಿಯೆ?

ನುಲಿಯ ಚಂದಯ್ಯ : ಅಲ್ಲ.

ಲಿಂಗಯ್ಯ : ಉರದಲ್ಲಿಯೆ?

ನುಲಿಯ ಚಂದಯ್ಯ : ಅಹುದು.

ಲಿಂಗಯ್ಯ : ನಂಬಿದೆನು.

ನುಲಿಯ ಚಂದಯ್ಯ : ಸುಖದಲ್ಲಿರು ಧರ್ಮೇಶ್ವರ[ಲಿಂಗಾ].

**ಸಂಪಾದನೆಯ ವಿಧಾನ :**

ಮೂವತ್ತಾರು ಮಂದಿ ಬಿಡಿ ವಚನಕಾರರ ವಚನಗಳನ್ನು ಸಂಪಾದಿಸುವಾಗ ಒಬ್ಬ ವಚನಕಾರನ ಒಂದು ವಚನಕ್ಕೆ ಎಷ್ಟು ಆಕರಗಳು ಲಭ್ಯವಾಗುತ್ತವೆಯೋ ಅಷ್ಟನ್ನೂ ಬಳಸಿಕೊಂಡು ಆ ವಚನದ ಸಾಧ್ಯವಾದಷ್ಟು ಮಟ್ಟಿನ ಶುದ್ಧಪಾಠವನ್ನು ಕೊಡುವ ಪ್ರಾಮಾಣಿಕ ಪ್ರಯತ್ನವನ್ನು ಮಾಡಲಾಗಿದೆ. ಇದು ಜನಪ್ರಿಯ ಆವೃತ್ತಿಯಾಗಿರುವುದರಿಂದ ಶಕಟರೇಫವನ್ನು ಬಳಸಲಾಗಿಲ್ಲ. ಹಾಗೆಯೇ ಬೇರೆ ಬೇರೆ ಆಕರಗಳಲ್ಲಿ ಕಂಡುಬರುವ ವಚನದ ಭಿನ್ನ ಪಾಠಗಳನ್ನು ಕೊಡುವ ಸಂಪ್ರದಾಯವನ್ನೂ ಅನುಸರಿಸಲಾಗಿಲ್ಲ. ಒಂದು ವಚನ ಬೇರೆ ಬೇರೆ ಆಕರಗಳಲ್ಲಿ ಅಲ್ಪಸ್ವಲ್ಪ ಪಾಠ ವ್ಯತ್ಯಾಸಗಳೊಡನೆ ಬೇರೊಂದು ಸ್ವತಂತ್ರ ವಚನವೆಂಬ ಭ್ರಮೆಯನ್ನುಂಟುಮಾಡಿರುವುದೂ ಉಂಟು. ಉದಾಹರಣೆಗೆ ಜೋದರ ಮಾಯಣ್ಣನ ಒಂದು ವಚನವನ್ನು ಪರಿಭಾವಿಸಬಹುದು:

ಎನ್ನ ತ್ರಿವಿಧಾತ್ಮರು ನಿಮ್ಮ ಹೆಂಡಿರು.
ಸತ್ವ ರಜ ತಮಂಗಳು ನಿಮ್ಮ ಭೃತ್ಯರಯ್ಯಾ.
ಅಂತಃಕರಣ ಚತುಷ್ಟಯಂಗಳು ನಿಮ್ಮ ಮಂತ್ರಿಗಳಯ್ಯಾ.
ಪಂಚೇಂದ್ರಿಯಂಗಳು ನಿಮ್ಮ ಪಡಿಹಾರರಯ್ಯಾ.
ಅರಿಷಡ್ವರ್ಗಂಗಳು ನಿಮ್ಮ ತೊತ್ತಿರು.
ಸಪ್ತಧಾತುಗಳು ನಿಮ್ಮ ಬಾಣಸಿಗರಯ್ಯಾ.
ಅಷ್ಟಮದಂಗಳು ನಿಮ್ಮ ದಳವಾಯಿಗಳು.
ನವರಸಂಗಳು ನಿಮ್ಮ ಭಂಡಾರಿಗಳಯ್ಯಾ.
ದಶವಾಯುಗಳು ನಿಮ್ಮ ಛತ್ರ ಚಾಮರ ಸೀಗುರಿಗರು.
ಷೋಡಶಕಳೆಗಳು ನಿಮ್ಮ ರಾಣಿವಾಸ.
ಶಂಭು ಸೋಮನಾಥಲಿಂಗ,
ನಿಮಗೆನ್ನ ಕಾಯ ಮುಂತಾಗಿ ಬಾಹತ್ತರ ಡಿಂಗರಿಗರಯ್ಯಾ!

ಮೇಲಿನ ಈ ವಚನದ ಪಾಠ 'ಲಿಂಗಲೀಲಾವಿಲಾಸ ಚಾರಿತ್ರ'ದ್ದು. ಈ ವಚನವು ಎಲ್ಲ ಪುರಾತನರ ಸ್ತೋತ್ರದ ವಚನ, ಭಕ್ತ್ಯಾನಂದ ಸುಧಾರ್ಣವ, ಲಿಂಗಚಿದಮೃತಬೋಧೆ, ಲಿಂಗಸ್ತೋತ್ರದ ವಚನಗಳು, ಸಕಲಪುರಾತನರ ವಚನ-೩, ಏಕೋತ್ತರ ಶತಸ್ಥಲ, ಏಕೋತ್ತರ ಶತಸ್ಥಲಸಾರ -ಈ ಆಕರಗಳಲ್ಲಿ ಕೆಳಗಿನ ರೂಪದಲ್ಲಿ ದೊರೆಯುತ್ತದೆ:

ಎನ್ನ ಪ್ರಾಣ ಮನ ಬುದ್ಧಿ ಚಿತ್ತಂಗಳು ನಿಮ್ಮ ತೊತ್ತಿರಯ್ಯಾ.
ಸತ್ವ ರಜ ತಮಂಗಳು ನಿಮ್ಮ ಭೃತ್ಯರಯ್ಯಾ.
ಅಂತಃಕರಣಗಳು ನಿಮ್ಮ ಮಂತ್ರಿಗಳಯ್ಯಾ.
ಪಂಚೇಂದ್ರಿಯಂಗಳು ನಿಮ್ಮ ಪಡಿಹಾರರಯ್ಯಾ.
ಅರಿಷಡ್ವರ್ಗಂಗಳು ನಿಮ್ಮ ಲೆಂಕರಯ್ಯಾ.
ಸಪ್ತಧಾತುಗಳು ನಿಮ್ಮ ಬಾಣಸಿಗರಯ್ಯಾ.
ಅಷ್ಟಮದಂಗಳು ನಿಮ್ಮ ಕುಮಾರರಯ್ಯಾ.
ನವರಸಂಗಳು ನಿಮ್ಮ ಭಂಡಾರಿಗಳಯ್ಯಾ.
ದಶವಾಯುಗಳು ನಿಮ್ಮ ಸೀಗುರಿ ಚಾಮರಂಗಳಯ್ಯಾ.
ಷೋಡಶಕಲೆಗಳು ನಿಮ್ಮ ರಾಣಿವಾಸವಯ್ಯಾ.
ಶಂಭು ಸೋಮನಾಥಲಿಂಗಾ,
ನಿಮಗೆ ಎನ್ನ ಕಾಯ ಮುಂತಾಗಿ ಬಾಹತ್ತರ ನಿಯೋಗ
ಡಿಂಗರಿಗರಯ್ಯಾ.

ದಾಸೋಹದ ಸಂಗಣ್ಣನ 'ಗುರುಸ್ವರೂಪನಾಗಿ ಬಂದು.....' ಎಂದು ಪ್ರಾರಂಭವಾಗುವ ವಚನದ (ವ. ೧೦೯) ಉತ್ತರಾರ್ಧದಲ್ಲಿ 'ಜಂಗಮಮೂರ್ತಿಯಾಗಿ ಬಂದು....' ಎಂಬಲ್ಲಿಂದ ಪ್ರಾರಂಭವಾಗುವ ಸಾಲುಗಳು 'ಶಿವಯೋಗ ಚಿಂತಾಮಣಿ'ಯಲ್ಲಿ ಒಂದು ಸ್ವತಂತ್ರ ವಚನವಾಗಿಯೇ ದೊರೆಯುತ್ತದೆ.

ತೆಲುಗೇಶ ಮಸಣಯ್ಯನ ವಚನಗಳನ್ನು ಗುಮ್ಮಳಾಪುರದ ಸಿದ್ಧಲಿಂಗದೇವರ ಶೂನ್ಯಸಂಪಾದನೆಯಲ್ಲಿ ಹಾಗೂ ಫ.ಗು. ಹಳಕಟ್ಟಿಯವರ 'ವಚನಶಾಸ್ತ್ರಸಾರ ಭಾಗ ೧' (ಪು. ೨೦೦)ರಲ್ಲಿ ತೆಲುಗು ಜೊಮ್ಮಯ್ಯನ ವಚನಗಳೆಂದು ಕರೆಯಲಾಗಿದೆ. ಲಿಂಗಲೀಲಾವಿಲಾಸಚಾರಿತ್ರ, ವೀರಶೈವ ಚಿಂತಾಮಣಿ, ಶರಣಮುಖಮಂಡನ, ಸಂಪಾದನೆ ಸಾರಾಮೃತ, ಏಕೋತ್ತರ ಶತಸ್ಥಲ, ಏಕೋತ್ತರ ಶತಸ್ಥಲಸಾರ, ಶೂನ್ಯಸಂಪಾದನೆ (ಗೂಳೂರು, ಗುಮ್ಮಳಾಪುರ), ಸಕಲಪುರಾತನರ ವಚನಗಳು-೩, ಎಲ್ಲ ಪುರಾತನ ಸ್ತೋತ್ರದ ವಚನಗಳು, ಶಿವನ ಬಿರುದಾವಳಿ ಸ್ತೋತ್ರದ ವಚನಗಳು, ಶಿವ ಮಹಿಮಾಸ್ತೋತ್ರದ ವಚನ- ಈ ಎಲ್ಲ ಆಕರಗಳಲ್ಲಿ ತೆಲುಗೇಶ ಮಸಣಯ್ಯನ ವಚನಗಳೆಂದೇ ಕರೆಯಲಾಗಿದೆ. ಹೀಗಾಗಿ ನಾವು ತೆಲುಗೇಶ ಮಸಣಯ್ಯನ ವಚನಗಳಾಗಿ

ಸ್ವೀಕರಿಸಿರುವೆವು. 'ಅರಿವನ್ನಕ್ಕ ಭೃತ್ಯಾಚಾರಿ.....' ಎಂದು ಪ್ರಾರಂಭವಾಗುವ ವಚನ ಗೋರಕ್ಷನ ವಚನವಾಗಿ ಕೊಟ್ಟಿದ್ದೆವು. ಇದು ಸರಿಯಲ್ಲ ಈ ವಚನ ಅಮುಗಿದೇವಯ್ಯನದು. ಆದ್ದರಿಂದ ಈ ಸಂಪುಟದಲ್ಲಿ ಇದನ್ನು ಕೈಬಿಡಲಾಗಿದೆ.

ಈ ಸಂಪುಟವನ್ನು ಸಂಪಾದಿಸುವಾಗ ವಿವಾದಗ್ರಸ್ತ ಕೃತಿಯಾದ 'ಮುಕ್ತಿ ಕಂಠಾಭರಣ'ವಲ್ಲಿ ಮಾತ್ರ ದೊರೆತು ಬೇರೆಲ್ಲೂ ದೊರೆಯದ ಕಾಳಿಲಿಂಗದೇವ ಹಾಗೂ ಕೇದಾರಗುರು -ಇವರ ವಚನಗಳನ್ನು ಪ್ರಕ್ಷೇಪಗಳೆಂದು ಕೈಬಿಡಲಾಗಿದೆ.

ಈ ಸಂಪುಟಪಲ್ಲಿ ಬರುವ ಮೂವತ್ತಾರು ಮಂದಿ ವಚನಕಾರರ ವಚನಗಳಲ್ಲಿ ಹಲವು ಹೊಸ ವಚನಗಳಿರುವುದು ಗಮನಿಸಬೇಕಾದ ಸಂಗತಿ. ಹೊಸ ಹೊಸ ಆಕರಗಳು ಬೆಳಕು ಕಂಡಂತೆ ವ್ಯಾಪಕ ಶೋಧನೆಯಿಂದ ಹೊಸ ಹೊಸ ವಚನಗಳೂ ಹೊರಬರುವಂತಾಮವು. ಯಾವುದೇ ವಚನಕಾರಸ ವಚನಗಳನ್ನು ಇಂತಿಷ್ಟೇ ಎಂದು ಖಚಿತವಾಗಿ ಹೇಳುವುದು ಸಾಧ್ಯವಿಲ್ಲ. ಏಕೆಂದರೆ, ಸಂಶೋಧನೆಯೆನ್ನುವುದು ನಿರಂತರ ಪ್ರಕ್ರಿಯೆ.

ನಾವು ಕೈಗೊಂಡ ಕಾರ್ಯದಲ್ಲಿ ನಮಗೆ ಅನೇಕರು ಅನೇಕ ವಿಧದಲ್ಲಿ ನೆರವಾಗಿರುವರು. ಎಲ್ಲರನ್ನೂ ಇಲ್ಲಿ ನೆನೆಯುವುದಕ್ಕೆ ಸಾಧ್ಯವಾಗುತ್ತಿಲ್ಲ. ಸಂಪಾದನೆಯ ಸಂದರ್ಭದಲ್ಲಿ ನಮಗೆ ತಲೆದೋರಿದ ಸಮಸ್ಯೆಗಳನ್ನು ಪರಿಹರಿಸಿ ದಾರಿ ತೋರಿದವರು ಸಮಗ್ರ ವಚನಸಾಹಿತ್ಯದ ಜನಪ್ರಿಯ ಆವೃತ್ತಿ ಪ್ರಕಟನ ಯೋಜನೆಯ ಸಂಪಾದಕ ಮಂಡಲಿಯ ಸದಸ್ಯರು. ಈ ಯೋಜನೆಯ ಪ್ರಧಾನ ಸಂಪಾದಕರಾದ ಡಾ।। ಎಂ.ಎಂ. ಕಲಬುರ್ಗಿಯವರು ಪ್ರತಿಯೊಂದು ಸಂಪುಟವೂ ಪರಿಪೂರ್ಣವಾಗಿರಬೇಕು, ಜನಪ್ರಿಯ ಆವೃತ್ತಿಯಾದರೂ ವ್ಯಾಪಕ ಪಾಠಶೋಧನೆಯಿಂದ ಸರ್ವಾಂಗ ಶುದ್ಧವಾಗಿ ಹೊರಬರಬೇಕು ಎನ್ನುವ ಎಚ್ಚರವನ್ನು ನಮ್ಮಲ್ಲಿ ಮೂಡಿಸಿದ್ದಲ್ಲದೆ ಹೊಸ ವಚನವೊಂದು ಕಂಡುಬಂದಾಗ ಇಲ್ಲವೆ ನಮ್ಮಲ್ಲಿ ದೋಷಗಳು ಅಥವಾ ಕೊರತೆಗಳು ತೋರಿದಾಗ ಅವನ್ನು ನಮ್ಮ ಗಮನಕ್ಕೆ ತಂದು ಉಪಕರಿಸಿದ್ದಾರೆ. ಪ್ರಸ್ತುತ ಸಂಪುಟದಲ್ಲಿ ಸೇರುವ ಶರಣರ ವಚನಗಳನ್ನು ಈ ಮೊದಲು ಪ್ರಕಟಿಸಿದ ಎಲ್ಲ ವಿದ್ವಾಂಸ ಸಂಪಾದಕರಿಗೆ; ಈ ಯೋಜನೆ ಕಾರ್ಯರೂಪಕ್ಕೆ ಬರಲು ನೆರವಾದ ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯದ ಅಂದಿನ ನಿರ್ದೇಶಕರಾಗಿದ್ದ ಶ್ರೀ ಐ.ಎಂ. ವಿಠ್ಠಲಮೂರ್ತಿ, ಶ್ರೀ ಬಿ. ಪಾರ್ಥಸಾರಥಿ, ಅಂದಿನ ಕಮಿಷನರ್‌ರಾದ ಡಾ।। ಪಿ.ಎಸ್. ರಾಮಾನುಜಂ, ಅಂದಿನ ಸಹನಿರ್ದೇಶಕರಾದ ಶ್ರೀ ಕೆ. ದೇವರಸಯ್ಯ, ಉಪ ನಿರ್ದೇಶಕರಾದ ಶ್ರೀ ಕಾ.ತ. ಚಿಕ್ಕಣ್ಣ -ಇವರುಗಳಿಗೆ; ಚೆನ್ನಾಗಿ ಮುದ್ರಿಸಿಕೊಟ್ಟ ಸ್ನೇಹಾ ಪ್ರಿಂಟರ್ಸ್‌ರವರಿಗೆ ನಾವು ವಿಶೇಷ ಕೃತಜ್ಞರಾಗಿದ್ದೇವೆ.

‘ಸಚರಾಚರವೆಲ್ಲಕ್ಕೆ......’ ಹಾಗೂ ‘ಬ್ರಾಹ್ಮಣ ಶಿವಭಕ್ತನಾದ ಬಳಿಕ....’ ಎಂದು ಪ್ರಾರಂಭವಾಗುವ ವಚನಗಳು (ಕ್ರಮವಾಗಿ ೧೨೮೨, ೧೨೮೧) ನಿವೃತ್ತಿ ಸಂಗಯ್ಯನದು. ಇವು ಕನ್ನಡ ಅಧ್ಯಯನ ಕೇಂದ್ರ, ಬೆಂಗಳೂರು ವಿಶ್ವವಿದ್ಯಾಲಯ, ಜ್ಞಾನಭಾರತಿ, ಬೆಂಗಳೂರು- ಇಲ್ಲಿನ ಹಸ್ತಪ್ರತಿ ವಿಭಾಗದ ಕೆ. ೨೨೭/೪೫-೪೬ ಕ್ರಮಸಂಖ್ಯೆಯ ಹಸ್ತಪ್ರತಿಯಲ್ಲಿದ್ದು, ಮೊದಲಿಗೆ ಇವನ್ನು ಬೆಳಕುಕಾಣಿಸಿದವರು ಮಿತ್ರರಾದ ಶ್ರೀ ಎಸ್. ಶಿವಣ್ಣನವರು (ನೋಡಿ: ‘ಬಸವ ಪಥ’ ಮಾಸಿಕ ೭.೧೨). ಈ ಎರಡು ವಚನಗಳನ್ನು ಬಳಸಿಕೊಳ್ಳಲು ಅನುಮತಿಸಿದ ಅವರಿಗೆ ನಮ್ಮ ಧನ್ಯವಾದಗಳು.

ಈ ಸಂಪುಟದಲ್ಲಿ ಬಂದಿರುವ ವಚನಕಾರರ ವಚನಗಳು ಸಂಖ್ಯಾದೃಷ್ಟಿಯಿಂದ ಹಿಂದಿನ ಸಂಪಾದನೆಗಳಿಗಿಂತ ಸ್ವಲ್ಪ ಹೆಚ್ಚಿವೆ. ಕ್ವಚಿತ್ತಾಗಿ ಕಡಿಮೆಯಿವೆ. ಉದಾಹರಣೆಗೆ ಕಂಬದ ಮಾರಿತಂದೆಯ ವಚನಗಳು (ಹಿಂದೆ ಪ್ರಕಟವಾಗಿದ್ದುದು ೧೦) ಈಗ ಪ್ರಕಟವಾಗಿರುವುದು ೧೧; ಕನ್ನದ ಮಾರಿತಂದೆಯ ವಚನಗಳು (ಹಿಂದೆ ಪ್ರಕಟವಾಗಿದ್ದುದು ೩) ಈಗ ಪ್ರಕಟವಾಗಿರುವುದು ೪; ಕಲಕೇತಯ್ಯನ ವಚನ (೧೦) ೧೧; ಕಿನ್ನರಿ ಬ್ರಹ್ಮಯ್ಯನ ವಚನ (೪) ೧೮; ಕೋಲಶಾಂತಯ್ಯನ ವಚನ (೧೦೦) ೧೦೩; ಗಜೇಶ ಮಸಣಯ್ಯನ ವಚನ (೬೧) ೭೦; ಗಾವುದಿ ಮಾಚಯ್ಯನ ವಚನ (೧೦) ೧೧; ಗುಪ್ತ ಮಂಚಣ್ಣಗಳ ವಚನ (೯೯) ೧೦೦; ಗುರುಪುರದಮಲ್ಲಯ್ಯ (೧) ೪; ಗುರು ಬಸವೇಶ್ವರನ ವಚನ (೨) ೩; ಘಟ್ಟಿವಾಳಯ್ಯನ ವಚನ (೯೯) ೧೪೭; ಚಂದಿಮರಸನ ವಚನ (೧೪೫) ೧೫೭; ಜಗಳಗಂಟ ಕಾಮಣ್ಣನ ವಚನ (೨) ೪; ಜೇಡರ ದಾಸಿಮಯ್ಯನ ವಚನ (೧೭೫) ೧೭೬; ಜೋದರ ಮಾಯಣ್ಣನ ವಚನ (೪) ೫; ಡಕ್ಕೆಯ ಬೊಮ್ಮಣ್ಣನ ವಚನ (೮೯) ೯೦; ಡೋಹರ ಕಕ್ಕಯ್ಯನ ವಚನ ೬; ತುರುಗಾಹಿ ರಾಮಣ್ಣನ ವಚನ (೪೫) ೪೬; ತೆಲುಗೇಶ ಮಸಣಯ್ಯನ ವಚನ (೪) ೭; ದಾಸೋಹದ ಸಂಗಣ್ಣನ ವಚನ (೧೦೦) ೧೦೧; ನಿಜಗುಣಯೋಗಿಯ ವಚನ (೧೦) ೧೬; ನಿವೃತ್ತಿ ಸಂಗಯ್ಯನ ವಚನ (೧) ೩; ನುಲಿಯ ಚಂದಯ್ಯನ ವಚನ (೪೯) ೪೮.

ಹೊಸ ವಚನಗಳನ್ನು ಶೋಧಿಸಿ ಪ್ರಕಟಿಸುವ ಮೂಲಕ ಇಲ್ಲಿ ನಮ್ಮ ಶ್ರಮ ಸಾರ್ಥಕವಾಗಿದೆಯೆಂದು ನಾವು ಭಾವಿಸಿರುವೆವು.

–ಡಾ. ಎಸ್. ವಿದ್ಯಾಶಂಕರ

★

# ಪರಿವಿಡಿ


ಮುನ್ನುಡಿ

ಬಿನ್ನಹ

ನಿರ್ದೇಶಕರ ಮಾತು

ಪ್ರಕಾಶಕರ ಮಾತು

ಸಂಪಾದಕೀಯ

ಪ್ರಸ್ತಾವನೆ

೧. ಕಂಬದ ಮಾರಿತಂದೆಯ ವಚನ ೧

೨. ಕನ್ನಡಿ ಕಾಯಕದ ಅಮ್ಮಿದೇವಯ್ಯನ ವಚನ ೬

೩. ಕನ್ನದ ಮಾರಿತಂದೆಯ ವಚನ ೧೦

೪. ಕರುಳ ಕೇತಯ್ಯನ ವಚನ ೧೨

೫. ಕಲಕೇತಯ್ಯನ ವಚನ ೧೫

೬. ಕಾಮಾಟದ ಭೀಮಣ್ಣನ ವಚನ ೨೦

೭. ಕಿನ್ನರಿ ಬ್ರಹ್ಮಯ್ಯನ ವಚನ ೨೨

೮. ಕೀಲಾರದ ಭೀಮಣ್ಣನ ವಚನ ೨೯

೯. ಕೂಗಿನ ಮಾರಯ್ಯನ ವಚನ ೩೪

೧೦. ಕೊಟಾರದ ಸೋಮಣ್ಣನ ವಚನ ೪೦

೧೧. ಕೋಲ ಶಾಂತಯ್ಯನ ವಚನ ೪೨

೧೨. ಗಜೇಶ ಮಸಣಯ್ಯನ ವಚನ ೭೩

೧೩. ಗಾಣದ ಕಣ್ಣಪ್ಪನ ವಚನ ೯೨

೧೪. ಗಾವುದಿ ಮಾಚಯ್ಯನ ವಚನ ೯೫

೧೫. ಗುಪ್ತ ಮಂಚಣ್ಣನ ವಚನ ೯೮

೧೬. ಗುರುಪುರದ ಮಲ್ಲಯ್ಯನ ವಚನ ೧೩೧

೧೭. ಗುರುಬಸವೇಶ್ವರನ ವಚನ ೧೩೩
೧೮. ಗುರುಭಕ್ತಯ್ಯನ ವಚನ ೧೩೪
೧೯. ಗೋರಕ್ಷನ ವಚನ ೧೩೫
೨೦. ಘಟ್ಟಿವಾಳಯ್ಯನ ವಚನ ೧೪೦
೨೧. ಚಂದಿಮರಸನ ವಚನ ೧೮೨
೨೨. ಜಗಳಗಂಟ ಕಾಮಣ್ಣನ ವಚನ ೨೨೯
೨೩. ಜೇಡರ ದಾಸಿಮಯ್ಯನ ವಚನ ೨೩೦
೨೪. ಜೋದರ ಮಾಯಣ್ಣನ ವಚನ ೨೬೯
೨೫. ಡಕ್ಕೆಯ ಬೊಮ್ಮಣ್ಣನ ವಚನ ೨೭೧
೨೬. ಡೋಹರ ಕಕ್ಕಯ್ಯನ ವಚನ ೨೯೮
೨೭. ತಳವಾರ ಕಾಮಿದೇವಯ್ಯನ ವಚನ ೩೦೧
೨೮. ತುರುಗಾಹಿ ರಾಮಣ್ಣನ ವಚನ ೩೦೪
೨೯. ತೆಲುಗೇಶ ಮಸಣಯ್ಯನ ವಚನ ೩೧೯
೩೦. ದಶಗಣ ಸಿಂಗಿದೇವಯ್ಯನ ವಚನ ೩೨೨
೩೧. ದಸರಯ್ಯನ ವಚನ ೩೨೪
೩೨. ದಾಸೋಹದ ಸಂಗಣ್ಣನ ವಚನ ೩೨೯
೩೩. ನಗೆಯ ಮಾರಿತಂದೆಯ ವಚನ ೩೭೨
೩೪. ನಿಜಗುಣಯೋಗಿಯ ವಚನ ೪೦೦
೩೫. ನಿವೃತ್ತಿ ಸಂಗಯ್ಯನ ವಚನ ೪೦೫
೩೬. ನುಲಿಯ ಚಂದಯ್ಯನ ವಚನ ೪೦೭

## ಅನುಬಂಧ

ಕಠಿಣ ಪದಕೋಶ ೪೨೩
ಕೋಲ ಶಾಂತಯ್ಯನ ವಚನಗಳ ಅಕಾರಾದಿ ೪೩೪
ಆಕರ ಗ್ರಂಥಗಳು ೪೩೭

# ಕಂಬದ ಮಾರಿತಂದೆಯ ವಚನ

೧

ಕಾಯದಿಂದ ಕರ್ಮವ ಕಂಡು,
ಭಾವದಿಂದ ಲಿಂಗವ ಕಂಡು
ಲಿಂಗದಿಂದ ಸ್ವಾನುಭಾವವಾಗಿ,
ಅಂಗದ ಸಂಗಕ್ಕೆ ಹೊರಗಾಯಿತ್ತು
ಕದಂಬಲಿಂಗವನರಿಯಲಾಗಿ ॥ ೧ ॥

೨

ಕಾಯದಿಂದ ಸತ್ಕ್ರೀಯ ಕಂಡೆ.
ಸತ್ಕ್ರೀಯಿಂದ ಸದ್ಭಾವವ ಕಂಡೆ.
ಸದ್ಭಾವದಿಂದ ನಿಮ್ಮ ನಿಜಮೂರ್ತಿ ಕಂಡೆ.
ನಿಮ್ಮ ನಿಜಮೂರ್ತಿಯಿಂದ
ಸ್ವಾನುಭಾವವಳವಟ್ಟುದ ಕಂಡೆನಯ್ಯಾ.
ಸ್ವಾನುಭಾವಜ್ಞಾನದಿಂದ ಅಂಗಕರಣೇಂದ್ರಿಯ
ಸೂತಕಪಾತಕಕ್ಕೆ ಹೊರಗಾದೆನಯ್ಯಾ ಕದಂಬಲಿಂಗವೆ,
ನೀವೆನ್ನ ಕರಸ್ಥಲದಲ್ಲಿ ಮೂರ್ತಿಗೊಂಡ ಕಾರಣ,
ನಿಮ್ಮನೆನ್ನ ಸರ್ವಾಂಗದಲ್ಲಿ ಕಂಡೆನಯ್ಯಾ. ॥ ೨ ॥

೩

ಗಂಪಕ್ಕೆ ಸಿಕ್ಕೆ, ಬಲೆಗೊಳಗಾಗೆ,
ಗೂಳಿಯ ಇರಿತದ ಡಾವರಕ್ಕೆ ನಿಲ್ಲೆ,
ಸೆಳೆಗೋಲಿನ ಗಾಣದ ಕೀಟಕವನೊಲ್ಲೆ.
ನಿನ್ನಾಟ ಅದೇತರ ಮಡುವಿನಾಟ ಹೇಳಾ,
ಕದಕತನ ಬೇಡ ಕದಂಬಲಿಂಗಾ. ॥ ೩ ॥

೪

ನಾನಾ ಜನ್ಮಂಗಳಲ್ಲಿ ಬಂದಡೂ,
ನಾನಾ ಯುಕ್ತಿಯಲ್ಲಿ ನುಡಿದಡೂ,
ನಾನಾ ಲಕ್ಷಣಂಗಳಲ್ಲಿ ಶ್ರುತ ದೃಷ್ಟ ಅನುಮಾನಂಗಳ ಲಕ್ಷಿಸಿ
ನುಡಿವಲ್ಲಿ
ಏನನಹುದು ಏನನಲ್ಲಾಯೆಂಬ ಠಾವನರಿಯಬೇಕು.
ಮಾತ ಬಲ್ಲೆನೆಂದು ನುಡಿಯದೆ,
ನೀತಿವಂತನೆಂದು ಸುಮ್ಮನಿರದೆ,
ಆ ತತ್ಕಾಲದ ನೀತಿಯನರಿದು
ಸಾತ್ವಿಕ ಲಕ್ಷಣದಲ್ಲಿಪ್ಪಾತನ ಲಕ್ಷಣವೇ ನಿರೀಕ್ಷಣ
ಕದಂಬಲಿಂಗಾ. ॥ ೪ ॥

೫

ಪಶುಪಾಷಂಡಿ ಜ್ಞಾನಹೀನ ಶೂನ್ಯವಾದಿ
ಇಂತಿವರುಗಳಲ್ಲಿ ಷಡುಸ್ಥಲಭರಿತ, ತ್ರಿವಿಧಸ್ಥಲಸಂಪೂರ್ಣ,

ಸರ್ವಗುಣಸಂಪನ್ನ, ಸಂಬಂಧಸಂಯೋಗಲಿಂಗಾಂಗಿ
ಅವರಂಗಳವ ಮೆಟ್ಟಿದಡೆ ಅವರೊಂದಾಗಿ ನುಡಿದಡೆ
ಅವರು ಅಂದಿಗೂ ಇಂದಿಗೂ ಎಂದಿಗೂ ಹೊರಗು
ಕದಂಬಲಿಂಗ ಸಾಕ್ಷಿಯಾಗಿ. ॥ ೫ ॥

೬

ಮಹಾ ಘೋರಾರಣ್ಯದಲ್ಲಿ ಪೋಗುತ್ತಿರಲಾಗಿ
ಆಡುವ ನವಿಲ ಕಂಡು,
ಹಾರುವ ಹಂಸೆಯ ಕಂಡು,
ಕೂಗುವ ಕೋಳಿಯ ಕಂಡು,
ಬೆಳಗಾಯಿತ್ತೆಂದು ಹೋಗುತ್ತಿದ್ದೆ ಕದಂಬಲಿಂಗದಲ್ಲಿಗೆ. ॥ ೬ ॥

೭

ಮಹಾ ಅಂಬುಧಿಯಲ್ಲಿ ಹರಿವ ಮತ್ಸ್ಯಕ್ಕೆ
ನಾನೊಂದು ಬಗೆಯ ಕಂಡೆ.
ಅದು ಅಡಗುವ ಮಡುವ ನೋಡಿ ತ್ರಿವಿಧದ ಸೊಕ್ಕು ತಂದು
ಆ ಮಡುವಿನುದಕದಲ್ಲಿ ಒಡಗೂಡಿ ಕದಡೆ
ಆ ಸೊಕ್ಕು ಮತ್ಸ್ಯವ ಮುಟ್ಟಿದುದಿಲ್ಲ.
ಅದೆಂತೆಂದಡೆ:
ಅದರ ನಾಸಿಕದ ಉಸುರು ಸೂಸಲಿಲ್ಲ
ಕಂಗಳ ದೃಷ್ಟಿ ಅನಿರಸಂಗೊಳಲಿಲ್ಲ.
ಆ ಮತ್ಸ್ಯದಂಗದ ಕವಚ ದುಸ್ಸಂಗದ ನೀರ ಮುಟ್ಟದಾಗಿ
ಅದು ನಿರಂಗದ ಮತ್ಸ್ಯ.
ಸುಸಂಗದ ಹೊಳೆಯಲ್ಲಿ ನಿರತಿಶಯದಿಂದ ತಿರುಗುತ್ತದೇಕೊ?
ಕದಂಬಲಿಂಗನ ಬಲೆಯ ಹೊಲಬ ಕಂಡು. ॥ ೭ ॥

೮

ಮಾಟ ಕೂಟವೆಂಬ ತೆಪ್ಪವ ಮಾಡಿ,
ಮೂರ್ತಿ ವಿಶ್ವಾಸವೆಂಬ ಕಣೆಯ ಹಿಡಿದು,
ಒತ್ತುತ್ತಿರಲಾಗಿ
ಹಾಯಿ ಮಾರುತನೆಂಬ ಮತ್ಸ್ಯ.
ಆ ಸರಹು ನೋಡಿ ತೆಪ್ಪವನೊತ್ತುತ್ತಿರಲಾಗಿ

ತ್ರಿವಿಧದ ಸತ್ತೆಯ, ಸರ್ವೇಂದ್ರಿಯ ಬೆಳೆದ ಪಾಸೆಯ
ಮರೆಯಲ್ಲಿ ತಪ್ಪಿಹೋಯಿತ್ತು ಮತ್ಸ್ಯ.
ಇಂತೀ ಬರಿ ಕುಕ್ಕೆಯ ಹೊತ್ತು
ಮತ್ಸ್ಯವ ಕಾಣದೆ ವೆಚ್ಚ ಕಡಹಿಲ್ಲ.
ಇವರಚ್ಚಿಗವ ಬಿಡಿಸಾ,
ಕಪಕತನ ಬೇಡ ಕವಂಬಲಿಂಗಾ. ॥ ೮ ॥

೯

ವೇದ ಕಲ್ಲಿಯಾಗಿ, ಶಾಸ್ತ್ರ ಮಣಿಯಾಗಿ,
ಪುರಾಣ ತೊಡಕಿನ ಬಂಧದ ನೂಲಾಗಿ,
ಆಗಮದ ಪಸರದಲ್ಲಿ ಆಯತವ ಮಾಡಿ,
ಗುರುವೆಂಬ ತಡಿಯ ಮೆಟ್ಟಿ,
ನಾಭಿಮಧ್ಯವೆಂಬ ಲಿಂಗದ ಜಲವ ಹೊಕ್ಕು,
ಮಹಾಸ್ಥಳಕುಳ ವಿವರಂಗಳೆಂಬ ಮಡುವಿಗೆ ಇಡಲಾಗಿ
ಅಡಗಿದ ಮತ್ಸ್ಯವೆದ್ದಿತ್ತು.
ಬಲೆಯ ಹೊಲಬ ಕಂಡು
ಅದು ಸ್ಥೂಲಕ್ಕೆ ಸೂಕ್ಷ್ಮವಾಗಿ, ಸೂಕ್ಷ್ಮಕ್ಕೆ ಸ್ಥೂಲವಾಗಿ
ಆ ಕಲ್ಲಿಯ ದ್ವಾರದಲ್ಲಿ ಅಲ್ಲಿಯೆ ನುಸುಳುತ್ತ
ಕಲ್ಲಿಗೆ ಹೊರಗಾಗುತ್ತ, ಮತ್ತಾ ಕಲ್ಲಿಗೆ ಒಳಗಾಗುತ್ತ
ಸ್ಥಲಂಗಳನರಿದು ಹೊರಗಾಗುತ್ತ
ಭಾವಜ್ಞನಾಗಿ ಭಾವವಿರಹಿತನಾದೆಯಲ್ಲಾ
ಮಾವನ ಮಗಳಿಗೆ ಅಣ್ಣನಾದೆಯಲ್ಲಾ
ಚನ್ನಕದಂಬಲಿಂಗಾ. ॥ ೯ ॥

೧೦

ಸಾಲು ಕೊಡಬೆಗೆ ಹುಗದು.
ಆರು ಕೊಡಬೆಗೆ ಬಾರದು.
ಮೂರು ಕುಳಿಗೆ ಸಿಕ್ಕದು ನೋಡಾ!
ಬಸವಣ್ಣನ ಅಂಗದಲ್ಲಿ ಹರಿದು
ಚೆನ್ನಬಸವಣ್ಣನ ಹೃದಯದಲ್ಲಿ ಮೂಡಿ
ಪ್ರಭುದೇವರ ಕರದಲ್ಲಿ ಸಿಕ್ಕಿದೆಯಲ್ಲಾ.
ಸಿಕ್ಕಿ ನಿನ್ನ ಕುಲಿಶದ ಹೊಲಸೇಕೆ ಅಡಗದು?

ಇಂತೀ ತ್ರಿವಿಧದ ಕಲಸಾಟವ ಬಿಡು,
ಕದಕತನ ಬೇಡ ಕದಂಬಲಿಂಗಾ. ॥ ೧೦ ॥

೧೧

ಹರಿವ ಹರಕುಳಿಯಲ್ಲಿ ಕೈಯನಿಕ್ಕಿ ನೋಡಿ
ಅಡಗಿದ್ದ ಆವೆಯ ಹಿಡಿದೆ.
ಒಂದು ಬಿಗಿವ ಬಿಲವ ಕಂಡು
ಏಗೆಯ್ದು ಕೈಯನಿಕ್ಕಿ ನೋಡಿ ಸಾಗಿಸಿ ಹಿಡಿದೆ,
ಉಭಯರಳಗ್ಯೆಯಣ್ಣನ.
ಇಂತೀ ಸರುಹಿನ ತಪ್ಪಲಲ್ಲಿ
ನೆಪ್ಪ ನೋಡುತ್ತ ಹೋಗುತ್ತಿರಲಾಗಿ
ಮುಂದೆ ಒಂದು ಕಟ್ಟೆ ಕಟ್ಟಿಮುದು ಕಂಡೆ.
ಆ ಕಟ್ಟೆಯೊಳಗೆ
ನೀರತಡಿಯಲ್ಲಿ ಕಪೋತ,
ಮಧ್ಯದಲ್ಲಿ ಪೀತ, ಕಡೆಯಲ್ಲಿ ಶ್ವೇತವಾಗಿದ್ದಿತು.
ಈ ತ್ರಿವಿಧದ ನೀರ ಹೊಳದು ನೋಡುತ್ತಿರಲಾಗಿ
ಎನ್ನ ಕಣ್ಣಿನ ಹೊಳಹುಗೂಡಿ ಹೊಳೆಯಿತ್ತೊಂದು ಮತ್ಸ್ಯ.
ಆ ಹೊಳಹಿನ ಬೆಂಬಳಿಯಲ್ಲಿ ತಿಳಿದು ಕಂಡಹೆನೆಂದಡೆ
ಉದಕವನೊಡಗೂಡಿದ ವರ್ಣ,
ವರ್ಣವನೊಡಗೂಡಿದ ಮತ್ಸ್ಯ ನೋಡಾ.
ಅದು ಎನಗೆ ಅಸಾಧ್ಯ,
ಸಿಕ್ಕಿದವೆರಡೇ ಸಾಕು.
ಆವೆಯ ಹೊಟ್ಟೆಯ ಕಳದು,
ಏಡಿಯ ಕಾಲ ಮುರಿದು,
ಇಷ್ಟೇ ಸಾಕೆಂದು ಬರುತ್ತಿರಲಾಗಿ, ಒಂದು ಉಡುವ ಕಂಡೆ.
ದಡಿಯಲ್ಲಿ ಹೊಯ್ದೆ, ಆ ದಡಿ ಉಡುವಿನೊಳಡಗಿತ್ತು.
ಆ ಉಡು ತ್ರಿವಿಧದ ತಡಿಯಲ್ಲಿ ಒಡಗೂಡಿತ್ತು.
ಇದಕ್ಕೆ ಕಡೆ ನಡು ಮೊದಲ ಹೇಳಾ,
ಕದಕತನ ಬೇಡ ಕದಂಬಲಿಂಗಾ. ॥ ೧೧ ॥

# ಕನ್ನಡಿ ಕಾಯಕದ ಅಮ್ಮಿದೇವಯ್ಯನ ವಚನ

೧೨

ಅಂಗದ ರೋಮ ಮುವ್ವೊಸೆದೋರಿ ಮೊಳೆಗಾಣದಂತೆ,
ದಶಾಂಗುಲಿಯ ನಖ ಪ್ರತಿರೂಪುದೋರದಂತೆ.
ಇದು ಶರೀರ ಚಿತ್ರಾಂಗಿಯ ಕಾಯದ ನಿರಿಗೆಯ ತೆರ.
ಹೊರಗಣ ಕ್ರೀ, ಆತ್ಮನೊಳಗಣ ಜ್ಞಾನ
ಇಂತೀ ಉಭಯವನರಿದು ಕಾಯಕವನೊಡಗೂಡಿ ಮಾಡಬೇಕು.
.ಹದಿನೆಂಟು ಕಾಯಕದೊಳಗಾದ, ನಾಲ್ಕು ಕಾಯಕ ಹೊರಗಾದ
ಮೂರು ಕಾಯಕ ಮುಂತಾದ ಕಾಯಕದಂದವ ತಿಳಿದು
ಚೆನ್ನಬಸವಣ್ಣ ಸಾಕ್ಷಿಯಾಗಿ
ಕಮಳೇಶ್ವರಲಿಂಗವನೊಡಗೂಡಬೇಕು. ॥ ೧ ॥

೧೩

ಆವಾವ ಜಾತಿ ಗೋತ್ರದಲ್ಲಿ ಬಂದಡೂ
ತಮ್ಮ ತಮ್ಮ ಕಾಯಕಕ್ಕೆ, ಭಕ್ತಿಗೆ ಸೂತಕವಿಲ್ಲದಿರಬೇಕು.
ಆವಾವ ವ್ರತವ ಹಿಡಿದಡೂ, ಇದಿರ ದಾಕ್ಷಿಣ್ಯವ ಮರೆದು
ತನ್ನಯ ತ್ರಿಕರಣ ಶುದ್ಧವಾಗಿ ನಡೆಯಬೇಕು.
ಪರಪುರುಷಾರ್ಥಕ್ಕೆ ಅರಿಯಿಸಿಕೊಂಬಡೆ ಮೂಗ
ಅರುಹಿರಿಯರು ಹೇಳಿದರೆಂದು ಕಲಸಬಹುದೆ ಅಮಂಗಲವ.
ಇಂತೀ ಕ್ರೀಯಲ್ಲಿ ಭಾವಶುದ್ಧವಾಗಿ
ಭಾವದಲ್ಲಿ ದಿವ್ಯಜ್ಞಾನಪರಿಪೂರ್ಣವಾಗಿಪ್ಪ ಗುರುಚರಭಕ್ತಂಗೆ
ಚೆನ್ನಬಸವಣ್ಣ ಸಾಕ್ಷಿಯಾಗಿ
ಕಮಳೇಶ್ವರಲಿಂಗವು ತಾನೆಯೆಂದು ಭಾವಿಸುವನು. ॥ ೨ ॥

೧೪

ಎನ್ನ ಕನ್ನಡಿ ಒಳ ಹೊರಗಿಲ್ಲ.
ಎನ್ನ ಘಳಿಹ ಮುಟ್ಟನೊಳಕೊಂಡ

ಚಿರ ಹಡಪಕ್ಕೆ ಅಳವಲ್ಲ.
ಕತ್ತಿಯ ಬಸವಣ್ಣ ಕೊಟ್ಟ.
ಕತ್ತರಿಯ ಚೆನ್ನಬಸವಣ್ಣ ಕೊಟ್ಟ.
ಕಿತ್ತುಹಾಕುವ ಚಿಮ್ಮಟಿಕೆಯ ಪ್ರಭುರಾಯ ಕೊಟ್ಟ.
ಮಿಕ್ಕಾದ ಎನ್ನಯ ಮುಟ್ಟ ಸತ್ಯಶರಣರು ಕೊಟ್ಟರು.
ದೃಷ್ಟವ ತೋರಿ ಅಡಗುವ ಮುಕುರವ ಕೊಟ್ಟವರ ಹೇಳುವೆನು
ದೃಷ್ಟ ಪ್ರಸಿದ್ಧ ಅಪ್ರತಿಮ ಪ್ರಸನ್ನ
ಚೆನ್ನಬಸವಣ್ಣ ಪ್ರಿಯ ಕಮಳೇಶ್ವರಲಿಂಗವು
ಎನಗೆ ದೃಷ್ಟವ ಕೊಟ್ಟು ತಾ ಬೆಳಗಿನೊಳಗಾದ! ॥ ೩ ॥

೧೫

ಎಲ್ಲವ ಬಿಟ್ಟು ಪಲ್ಲ ಸುಲಿಯ ಬಂದೆ.
ಮುನ್ನಿನಲ್ಲಿಯ ಹಾವಚೆ ಹಲ್ಲ ಬಿಡದು ನೋಡಾ.
ಮೆಲ್ಲನೆ ಥಾಳಿಸಿದಡೆ ಹಾವಚೆ ಒಲ್ಲಗಾಗದು.
ಬಲ್ಲಿತ್ತಾಗಿ ಥಾಳಿಸಿದಡೆ ಒಸಡಿನಲ್ಲಿ ಜಾರಿತ್ತು.
ಇಂತೀ ಬಲ್ಲತನದಲ್ಲಿ ಸಂಸಾರದ ಬಾಯ ಹಲ್ಲ ಸುಲಿಯಬೇಕು.
ಇದ ಬಲ್ಲವರ ಬಲ್ಲ ತಾನರಿಯ,
ಚೆನ್ನಬಸವಣ್ಣಪ್ರಿಯ ಕಮಳೇಶ್ವರಲಿಂಗ ಸಾಕ್ಷಿಯಾಗಿ. ॥ ೪ ॥

೧೬

ತುರುಬು ಜಡೆ ಬೋಳು ಬಿಡುಗುರುಳು
ಇವೆಲ್ಲವೂ ರುದ್ರನ ಅಡಿವೆಜ್ಜೆಯ ಕುರುಹು.
ಇಂತೀ ಕುರುಹಿನ ಮುದ್ರೆಗಳಲ್ಲಿ ಬಂದು
ತಮ್ಮಡಿಯ ಇರವನರಿಯದೆ
ಬರಿಯ ಬೊಮ್ಮವನಾಡಿ ನುಡಿವರ
ಸರ್ವಾಂಗದ ತೊಡಿಗೆಯ ಬಂಡೆ ಸಿಡಿಹಿಂಗೆ
ಕತ್ತರಿ ತರುಬಿಂಗೆ ಬೆಳೆಮುದಕ್ಕೆ ತೊರೆಗೂರ
ಮತ್ತೆ, ಪರಿವ ನಖಕ್ಕೆ ಕಡಿಚಣ
ಮತ್ತೆ, ಉಸುರಿನ ದೆಸೆಯ ನಾಸಿಕಕ್ಕೆ, ಕಸನ ತೆಗೆಯುವುದಕ್ಕೆ
ಅಂಗುಲ ಸಂಗಿ.
ಇಂತೀ ಕಾಯಕದ ಬೆಂಬಳಿಯಲ್ಲಿ ತಂದನೆನ್ನ ಬಸವಣ್ಣ.
ಆತನಂಗವ ದೆಸೆಯಿಂದ ಬಂದೆ ಕನ್ನಡಿವಿಡಿದು,
ಆ ಕನ್ನಡಿಯ ದೆಸೆಯಿಂದ ನಿಮ್ಮ ಕಂಗಳಲ್ಲಿ ನೋಡಿ

ನಿಮ್ಮ ಮಲವ ನೀವೇ ಪರಿಹರಿಸಿಕೊಳ್ಳಿ ಎನಗನ್ಯ ಭಿನ್ನವಿಲ್ಲ
ಕಮಳೇಶ್ವರ ಲಿಂಗವು ಕಳುಹಿದ ಮಣಿಹ. ॥ ೫ ॥

೧೭

ನಾ ಶಸ್ತ್ರವ ಹಿಡಿದಲ್ಲಿ
ಮುಮ್ಮುಖದಲ್ಲಿ ಒಂದನಿರಿಸಿ ಎರಡ ತೊಡೆವೆನು.
ಪೂರ್ವಪಕ್ಷದಲ್ಲಿ ಆರನಿರಿಸಿ ಮೂರ ತೊಡೆವೆನು.
ಉತ್ತರ ಪಕ್ಷದಲ್ಲಿ ಆರನಿರಿಸಿ ಮೂವತ್ತಾರ ತೊಡೆವೆನು.
ಮೇಲಣ ದಂಡೆಯನೊತ್ತುವಲ್ಲಿ ಎರಡ ನಿಲಿಸಿ
ಇಪ್ಪತ್ತೈದ ತೊಡೆವೆನು.
ಇಂತೀ ಕೆಲಸವ ಸಾಧಿಸಿದಲ್ಲಿ,
ಕಂಕುಳ ತಟ್ಟೆನು, ಮೂಗುವ ಮುಟ್ಟೆನು,
ಮಂಡೆಯ ಬೋಳಿಸುವೆ, ಚಂಡಿಕೆಯನಿರಿಸುವೆನು
ಚೆನ್ನಬಸವಣ್ಣಪ್ರಿಯ ಕಮಳೇಶ್ವರಲಿಂಗ ಸಾಕ್ಷಿಯಾಗಿ. ॥ ೬ ॥

೧೮

ನಿಜ ಬೋಳಿಂಗೆ ಲೋಚು ಮಾಡಲೇತಕ್ಕೆ?
ಚಿದ್ಘನ ಬೋಳಿಂಗೆ ವೈಭವದ ಮದನನ ಶೃಂಗಾರದ
ಹಾರವೇತಕ್ಕೆ?
ಸಕಲಸುಖ ಬೋಳಿಂಗೆ ಅಖಿಳ ಸುಖಗೋಷ್ಠಿ ಏತಕ್ಕೆ?
ಸರ್ವಸಂಗಪರಿತ್ಯಾಗ ನಿರ್ಮಲ ಪರಮನಿರ್ವಾಣಿಗೆ
ತ್ರಿಬಂಧದಲ್ಲಿ ಸಿಲುಕಿ ಕಂಡವರಿಗೆ ಕಾರ್ಪಣ್ಯಬಡಲೇತಕ್ಕೆ?
ಇಂತೀ ಗುಣದಲ್ಲಿ ತಾವು ತಾವು ಬಂದುದನರಿಯದೆ
ತಮಗೆ ವಂದಿಸಿ ನಿಂದಿಸುವರಂಗವನರಿಯದೆ
ಮತ್ತೆ ಲಿಂಗಾಂಗಿಗಳೆಂದು ನುಡಿವ ಜಗ ಸರ್ವಾಂಗ ಭಂಡರ
ಕಂಡು
ನುಡಿದಡೆ ಸಮಯಕ್ಕೆ ಹಾನಿ.
ಸುಮ್ಮನಿದ್ದಡೆ ಜ್ಞಾನಕ್ಕೆ ಭಂಗ.
ಉಭಯವನೂ ಪ್ರತಿಪಾದಿಸದಿದ್ದಡೆ,
ತನ್ನಯ ಭಕ್ತಿಗೆ ಇದಿರೆಡೆಗೇಡು.
ಇದು ಚುನ್ನವಲ್ಲ, ಎನ್ನಯ ಕೇಡು.
ಈ ಗುಣ ಚೆನ್ನಬಸವಣ್ಣಪ್ರಿಯ
ಕಮಳೇಶ್ವಲಿಂಗ ಸಾಕ್ಷಿಯಾಗಿ. ॥ ೭ ॥

೧೯

ಪಂಜ ಹಿಡಿವಂಗೆ ಸಂದೇಹವೆಲ್ಲಿದೆ
ಉರಿವ ಬೆಳಗಿಂಗೆ ಸಂದೇಹವುಂಟೆ?
ಸಂಸಾರ ಸಂದಣಿಯಲ್ಲಿ ಅನಂಗನ ಆತುರದಲ್ಲಿ
ಹೊಂದಿ ಬೇವಂಗೆ ಲಂದಣತನವಲ್ಲದೆ
ನಿಜಪ್ರಸಂಗಿಗೆ, ನಿರತಿಶಯ ಲಿಂಗಾಂಗಿಗೆ, ಪರಬ್ರಹ್ಮಪರಿಣಾಮಿಗೆ
ಜಗದ ಹರದಿಗರಲ್ಲಿ ಸಿಕ್ಕಿ ಪರಿಭ್ರಮಣಕ್ಕೊಳಗಾಹನೆ?
ಇಂತೀ ನಿಜವನರಿದಾತನೆ
ಚೆನ್ನಬಸವಣ್ಣ ಸಾಕ್ಷಿಯಾಗಿ
ಕಮಳೇಶ್ವರಲಿಂಗವು ತಾನೆಂಬೆನು. ॥ ೮ ॥

೨೦

ಚೆನ್ನಪಳಿಗೆ ಎನ್ನ ಕೇಳಬೇಡ.
ಅಂಗಾಲ ಹುಣ್ಣಿಗೆ ಎನ್ನ ಕೇಳಬೇಡ.
ಬಾಯೊಳಗಣ ಬಗದಳಕ್ಕೆ ಎನ್ನ ಕೇಳಬೇಡ.
ಆ ವ್ಯಾಧಿಗೆ ಬಲ್ಲವರ ಬಲ್ಲೆ.
ಬೆನ್ನಿಗೆ ಬಸವಣ್ಣ, ಕಾಲಿಗೆ ಚೆನ್ನಬಸವಣ್ಣ,
ಬಾಯಿಗೆ ಪ್ರಭುದೇವರು, ಬಸುರಿಗೆ ನಿಜಗುಣ.
ಈ ರೋಗವ ಬಲ್ಲವರಿವರು, ಮಿಕ್ಕಾದ ವ್ಯಾಧಿಗೆ ನಾನರಸು.
ಮತ್ತಾರುವ ಬಳಿವಿಡಿಯಲಿಲ್ಲ.
ಚೆನ್ನಬಸವಣ್ಣ ಮುಂತು ಕಮಳೇಶ್ವರಲಿಂಗ ಹಿಂತುಳಿದು
ಒಡಗೂಡಬೇಕು. ॥ ೯ ॥

೨೧

ಹಿಡಿಯಿಲ್ಲದ ಶಸ್ತ್ರ, ಕೀಲಿಲ್ಲದ ಕತ್ತರಿ,
ಉಭಯ ಒಡಗೂಡದ ಚಿಮ್ಮುಟ, ರೂಹಿಲ್ಲದ ಚಣ
ಹಲ್ಲಿಲ್ಲದ ಹಣಿಗೆ, ಮಲವಿಲ್ಲದ ಬೆಳಗಿನ ಮುಕುರವ ಹಿಡಿದು
ಶರಣರೆಲ್ಲರ ಅಡಿವಿಡಿದಾಡ ಬಂದೆ.
ಚೆನ್ನಬಸವಣ್ಣಂಗೆ ಭೃತ್ಯನಾಗಿ, ಶರಣತತಿಗೆ ಲೆಂಕನಾಗಿ
ಸತ್ಯ ಗುರುಚರದ ಕರ್ತೃಸ್ವರೂಪಕ್ಕೆ ಡಿಂಗರಿಗ
ಉಭಯ ಡಿಂಗರಿಗರ ಪ್ರತಿ ಡಿಂಗರಿಗರ ಕಂದನೆಂದು
ಪ್ರತಿಪಾಲಿಸಿಕೋ
ಚೆನ್ನಬಸವಣ್ಣಪ್ರಿಯ ಕಮಳೇಶ್ವರಲಿಂಗಾ. ॥ ೧೦ ॥

# ಕನ್ನದ ಮಾರಿತಂದೆಯ ವಚನ

೨೨

ಊರ ಕನ್ನವನಿಕ್ಕಿ ನೀರ ಕದ್ದೆನು.
ಹೋಹಾಗ ಆರೂ ಅರಿಯರು,
ಬಾಹಾಗ ಎಲ್ಲರೂ ಅರಿವರು.
ಅರಿದರಲ್ಲಾ ಎಂದು ಸುರಿದೆ ನೀರ.
ಹಾಕಿದ ಮಡಕೆಯು ಕನ್ನಗತ್ತಿಯ ಕೈಯಲ್ಲಿಯದೆ.
ಅಂಗ ಸಿಕ್ಕಿತ್ತು ಮದನಂಗದೂರ ಮಾರೇಶ್ವರಾ. ॥ ೧ ॥

೨೩

ಎನ್ನ ಕನ್ನಗತ್ತಿಯ ಒಡೆಯಂಗೆ ಆಡನರಿದೆ,
ಕೋಡಗವ ಬಲಿಯನಿಕ್ಕಿದೆ,
ಎನ್ನ ಮಾತಾಪಿತರ ಮೀಸಲನಿಕ್ಕಿದೆ.
ಇಷ್ಟಕ್ಕೆ ಎನಗೆ ಕನ್ನ ಕೂರ್ತು ಬಾರದಿದ್ದಡೆ
ಮಾರನವೈರಿ ಮಾರೇಶ್ವರನಿಲ್ಲಾ ಎಂದೆ. ॥ ೨ ॥

೨೪

ಕತ್ತಲೆಯಲ್ಲಿ ಕನ್ನವನಿಕ್ಕಿದಡೆ
ಎನಗೆ ಕತ್ತಿಯ ಕೊಟ್ಟ ಕರ್ತುವಿಗೆ ಭಂಗ.
ಅವರು ಮರದಿರ್ದಲ್ಲಿ ಮನೆಯ ಹೊಕ್ಕಡೆ
ಎನ್ನ ಚೋರತನದ ಅರಿಕೆಗೆ ಭಂಗ.
ಮರದಿರ್ದವರ ಎಬ್ಬಿಸಿ ಅವರಿಗೆ ಅವರೂಡವೆಯ ತೋರಿ
ಎನ್ನೊಡವೆಯ ತಂದೆ ಮಾರನವೈರಿ ಮಾರೇಶ್ವಾರಾ. ॥ ೩ ॥

೨೫

ನುಡಿದ ಮಾತಿಂಗೆ ಕೊರತೆಯೆಂದು,
ಮನಮಾಡಿ ತನು ಅಂಡಿಸಲೇತಕ್ಕೆ?
ಹಾವಿನ ಹೇಳಿಗೆಯ ತೆಗೆದ ಕೋಡಗನಂತೆ ಮಾತಾಡಲೇಕೆ?
ಮತ್ತಡಗಲೇಕೆ?
ಮಕರಧ್ವಜವೈರಿ ಮಾರೇಶ್ವರಾ. ॥ ೪ ॥

## ಕರುಳ ಕೇತಯ್ಯನ ವಚನ

೨೬

ಅರ್ಪಿತವಲ್ಲದುದ ಕಲಸಿದ ಕೈ, ಉಂಡ ಬಾಯಿ,
ತುಂಬಿದ ಘಟ, ಅರಿದು ಕೊಂಡ ಆತ್ಮ
ಇವ ಹಿಡಿದಡೆ ಭಂಗ.
ಸಡಗರಿಸಿ ತುಂಬಿದ ಗರಳ ಘಟವನೊಡೆದು ಕಿತ್ತು
ಆಸೆಯ ನುರಿಚಿ ಹಾಕಿ
ಮತ್ತಾ ಅಂಗವನೊಡಗೂಡಿಹೆನೆಂಬ ಚಿತ್ತದ ಹಂಗು ಬೇಡ
ಮತ್ತಾ ತಪ್ಪ ಕಂಡು ಎನ್ನಂಗವನೊಡಗೂಡುವ
ಮನಕ್ಕೆ ಮನೋಹರ ಶಂಕೇಶ್ವರ ಲಿಂಗವೆ ಬೇಡಾ. ॥ ೧ ॥

೨೭

ಈ ವ್ರತ ತಪ್ಪಿತ್ತೆಂದು ಘಟವ ಬಿಟ್ಟಲ್ಲಿ
ಮೆಚ್ಚುವ ದೈವ ಬೇಡ.
ಇಂತೀ ಕ್ರೀ ಒಸರಿಸಿದಲ್ಲಿ ಬಿಟ್ಟಡೆ ಪ್ರಾಣವ
ಮೆಚ್ಚಿ ಕೈಲಾಸಕ್ಕೆ ಕರೆವ ದೈವವುಂಟೆ?
ಇಂತೀ ಉಭಯ ಭ್ರಷ್ಟವಾದಲ್ಲಿ ಸಿಕ್ಕಿತ್ತು ವ್ರತ.
ಮನಕ್ಕೆ ಮನೋಹರ ಶಂಕೇಶ್ವರ ಲಿಂಗ ತಪ್ಪಿದಡೂ
ಹೊರಗೆಂಬೆನು. ॥ ೨ ॥

೨೮

ಎಂದಿಂಗೂ ಸಾವುದು ತಪ್ಪದೆಂದು ಅರಿದು ಮತ್ತೆ
ವ್ರತಭಂಗಿತನಾಗಿ ಅಂದಿಂಗೆ ಸಾಯಲೇತಕ್ಕೆ?
ನಿಂದೆಗೆಡೆಯಾಗದ ಮುನ್ನವೆ
ಅಂಗವ ಹಾಕಿ ಚಿತ್ತದ ನಿಜಲಿಂಗವನೆಯ್ದಿ
ಮನಕ್ಕೆ ಮನೋಹರ ಶಂಕೇಶ್ವರ ಲಿಂಗವ ಕೂಡಿ. ॥ ೩ ॥

೨೯

ಜಲ ನೆಲ ಅನಲ ಅನಿಲ ಮಿಕ್ಕಾದ
ದೃಷ್ಟಂಗಳೆಲ್ಲವನೂ ನಿರೀಕ್ಷಿಸಿ ಸಾಧಿಸಿಕೊಂಡು
ಶ್ರುತ ದೃಷ್ಟ ಅನುಮಾನಂಗಳಲ್ಲಿ ತಿಳಿದು,
ಹಿಂದಣ ಮುಂದಣ ಸಂದೇಹವ ಹರಿದು
ಮುಟ್ಟೂದು ಘಟಕ್ರಿಯಾಭೇದ
ಮನಕ್ಕೆ ಮನೋಹರ ಸಂಕೇಶ್ವರ ಲಿಂಗವನರಿವುದಕ್ಕೆ. ॥೪॥

೩೦

ತನಗಲ್ಲದುದ ಘಟ ಸೋಂಕಿದಲ್ಲಿ ಅಲ್ಲಿಯೇ ಕಡಿವೆನು.
ತನಗಲ್ಲದುದ ಕೈ ಮುಟ್ಟಿದಲ್ಲಿ ಅಲ್ಲಿಯೇ ತೆಗೆವೆನು.
ತನಗಲ್ಲದುದ ಕಿವಿ ಕೇಳಿದಲ್ಲಿ ಅಲ್ಲಿಯೇ ಗುಂಟೆ ಬಲಿವೆನು.
ತನಗಲ್ಲದುದ ನಾಸಿಕ ವಾಸಿಸಿದಲ್ಲಿ
ಅಲ್ಲಿಯೇ ದಸಿಯ ದಕ್ಕನೇರಿಸುವೆನು.
ದೃಷ್ಟಿ ಅನುತಪ್ಪಿ ನೋಡಿದಲ್ಲಿ ಅಲ್ಲಿಯೇ ಕಿತ್ತಿಡುವೆನು.
ಚಿತ್ತ ಅನುತಪ್ಪಿ ಮತ್ತೊಂದ ನೆನೆದಡೆ,
ಆತ್ಮನಲ್ಲಿಯೆ ಕಿತ್ತು ಹಾಕುವೆನು.
ಇದಕ್ಕೆ ನೀವೇ ಸಾಕ್ಷಿ,
ಮನಕ್ಕೆ ಮನೋಹರ ಶಂಕೇಶ್ವರ ಲಿಂಗವು. ॥ ೫ ॥

೩೧

ತನ್ನ ಸಮ ಕ್ರೀವಂತರಲ್ಲಿಯಲ್ಲದೆ ಕೊಳುಕೊಡೆ
ಮಿಕ್ಕಾದ ಹೊರಗಣ ಕ್ರೀ ಸೋಂಕು ಬಾಹ್ಯರಚನೆ ತಪ್ಪದಿರಬೇಕು.
ಆತ್ಮನರಿದು ಮುಟ್ಟುವಲ್ಲಿ ತನ್ನ ವ್ರತದೆಸಕವನರಿದು
ಸ್ವಪ್ನಾವಸ್ಥೆಗಳಲ್ಲಿದ್ದು ಸೂಕ್ಷ್ಮತನುವಂ ಮುಟ್ಟದೆ,
ಅಲ್ಲದುದ ಕಂಡು ಮತ್ತೆ ಆರೂ ಅರಿಯರೆಂದು ತನ್ನಲ್ಲಿಯೇ
ಅಡಗದೆ,
ತಲೆದೋರಿದಲ್ಲಿಯೆ ಲಯವಾಗಬೇಕು.
ಇಂತೀ ಗುಣ ಆತ್ಮನ ಶೀಲ
ಮನಕ್ಕೆ ಮನೋಹರ ಶಂಕೇಶ್ವರ ಲಿಂಗದಲ್ಲಿ. ॥ ೬ ॥

೩೨

ದೃಷ್ಟಿ ಕಾಮ್ಯಾರ್ಥದಲ್ಲಿ ನೆಟ್ಟು ನೋಡಿ,
ಒಡೆಯರು ಭಕ್ತರ ವಧುಗಳಲ್ಲಿ
ಮತ್ತಾ ದೃಷ್ಟಿಯ ಮುಟ್ಟಲೇತಕ್ಕೆ?
ಮತ್ತೆ ಇತ್ಯಾದಿಗಳ ಬಿಟ್ಟು ಹೆಣ್ಣವ್ರತ ಕಟ್ಟೆಂದು ಮಾಡಬಹುದೆ?
ಮತ್ತದ ಕಟ್ಟಿಕೊಂಡು ಮಿಟ್ಟಿಯ ಭಂಡರಂತೆ
ಕುಟ್ಟಿಯಾಡಬಮದೆ?
ಇಂತೀ ಬಾಹ್ಯ ದೃಷ್ಟಿಗಳ್ಳರ, ಆತ್ಮಚಿತ್ತಗಳ್ಳರ
ವ್ರತಸ್ಥರೆಂದು ಎನಲಾಗದು.
ಮನಕ್ಕೆ ಮನೋಪರ ಶಂಕೇಶ್ವರ ಲಿಂಗವು
ಅವರುವ ಮುಟ್ಟದಿಹನಾಗಿ ॥೭॥

೩೩

ದ್ರವ್ಯಶೀಲ ಧನಶೀಲ ತನುಶೀಲ ಆತ್ಮಶೀಲ
ಇಂತಿವರೊಳಗಾದ ನಾನಾ ಶೀಲಂಗಳೆಲ್ಲವೂ
ಓಸರಿಸಿದಲ್ಲಿ ಭಾಷೆ ಹೋಯಿತ್ತು.
ಕಳ್ಳನ ತಾಯ ಕಣೆಯ ಕೇಳ ಹೋದಂತೆ.
ಅಲ್ಲಿಗಲ್ಲಿಗೆ ಹೋಗದೆ, ಎಲ್ಲರ ಕೂಡಿ
ಎನಗೊಂದರಲ್ಲಿ ಇರೆಂದು ಕೇಳುವ ಆತ್ಮಗಳ್ಳನ ಶೀಲ
ಮನಕ್ಕೆ ಮನೋಪರ ಶಂಕೇಶ್ವರ ಲಿಂಗವ
ಮುಟ್ಟದೆ ಹೋಯಿತ್ತು. ॥ ೮ ॥

## ಕಲಕೇತಯ್ಯನ ವಚನ

೩೪

ಅಕ್ಕನ ಗಂಡ ಭಾವಾಂತೆಗೆ ತಂದೆ
ಮುಪ್ಪಟ್ಟಿಯ ಬಣ್ಣವ ಬಿಳಿದುದಲು
ಕಡೆಯಲ್ಲಿ ಕಪೋತ ಕೆಂಪು ಪುಟ್ಟಿತ್ತು.
ಆ ಬಣ್ಣವ ತೊಳೆವಡೆ ಬಿಳಿವನೊಡಗೂಡುವವಾಗಿ
ಅರಿವು ಮರವೆಯೆಂಬ ಕಡೆದಡಿಯ ಬಣ್ಣದಡಿ
ಹರಿಯಲಾಗಿ ಬಿಳ್ಳಿಯರಿವೆಯಾಯಿತ್ತು.
ನಿನ್ನ ಉಡಿ ತುಂಬಿ ಉಟ್ಟುಕೊ ಎಂದು ತಂದೆ
ಮೇಖಲೇಶ್ವರಲಿಂಗವನರಿಯ ಹೇಳಿ. ॥ ೧ ॥

೩೫

ಎನ್ನ ತಗರು ಆರು ಸನ್ನೆಗೆ ಏರದು,
ಮೂರು ಸನ್ನೆಗೆ ಓಡದು.
ಲೆಕ್ಕವಿಲ್ಲದ ಸನ್ನೆಗೆ ಧಿಕ್ಕರಿಸಿ ನಿಲುವದು.
ಕುಟಿಲ ಕವಳವನೊಲ್ಲದು.
ಮದ್ದು ಮರುಡೆ ಬೆಳುವೆಯ ಗುಣ ಗಾಳಿಯ ಲೆಕ್ಕಿಸದು.
ಇಂತೀ ಅರಿಗುರಿಯ ಕೋಡ ಕಿತ್ತು
ಒಂದ ಹಿಂದಕ್ಕಿರಿಸಿ, ಒಂದ ಹಿಡಿದಾಡ ಬಂದೆ.
ಆ ಕೋಡಿನಲ್ಲಿ ನಾನಾ ವರ್ಣದ ಶಬ್ದದ ಉಲುಹು.
ಇಂತಿವೆಲ್ಲವ ಒಂದುಂಗುರದಲ್ಲಿ ಸೇರಿಸಿ
ಅಂಗುಲಿಗಳಲ್ಲಿ ಮುಟ್ಟಿಯಾಡುತ್ತ ಬಂದೆ,
ಮೇಖಲೇಶ್ವರಲಿಂಗದಲ್ಲಿ ಲೀಯವಾದ
ಶರಣರ ನೋಡಿಹೆನೆಂದು ॥ ೨ ॥

೩೬

ಕಾಣುತವೆ ಬಂದುದನರಿದು,
ಕಂಡಾತನ ಮನಧರ್ಮವ ಚಂದವ ಕಂಡು,

ಬಂದಿತ್ತು ಬಾರದೆಂಬ ಸಂದೇಹ ನಿಂದು,
ಇದೆಲ್ಲವೂ ಲಿಂಗಾಣತಿಯೆಂಬ ಸಂದನರಿದು
ವರ್ಮದ ಮಾಟದವಂಗೆ ತಾ ವರ್ಮಿಗನಾಗಿದ್ದು,
ಗಂಡಭೇರುಂಡನ ಪಕ್ಷಿಯಂತೆ
ಒಡಲೊಂದೆ ಉಭಯ ಶಿರ ಬೇರಾದ ತೆರ.
ಇದು ಕಲಕೇತನ ಒಲವಿನ ತೆರ.
ಉಭಯಸ್ಥಲದ ಹೊಲದ ನಲವಿನ ಪಥ.
ಮೇಖಲೇಶ್ವರಲಿಂಗದ ಒಲವಿನ ಕುಲ. ॥ ೩ ॥

೩೭

ಕಾಲಸಾಲ್ಕ ಮುರಿದು, ಕೋಡೆರಡ ಕಿತ್ತು,
ಆರಡಗಿತ್ತು ತಗರಿನ ಹಣೆಯಲ್ಲಿ.
ಮೂರು ಹೋಯಿತ್ತು ತಗರಿನ ಕೋಡೆರಡರಲ್ಲಿ.
ಎಂಟು ಹೋಯಿತ್ತು ಕಾಲು ನಾಲ್ಕರಲ್ಲಿ.
ತಗರಿನ ಜೀವ ಉಭಯದ ಸನ್ನೆಯಲ್ಲಿ ಹೋಯಿತ್ತು.
ಇಂತೀ ಕಲಕೇತ ವಿದ್ಯವ ಧರಿಸಿ
ಮಹಾಶರಣರ ಮನದ ಮಂದಿರದಲ್ಲಿ
ಕಲಕೇತನ ಒಲವರದಲ್ಲಿ
ಮೂಡಿ ಮುಳುಗಬೇಡ ಎಂದು ಸಾರಿ ಮಾರಬಂದೆ.
ಶುದ್ಧಪ್ರಸಾದ ಎನಗುಂಟು, ಸಿದ್ಧಪ್ರಸಾದ ಎನಗುಂಟು,
ಪ್ರಸಿದ್ಧಪ್ರಸಾದ ನಿಮಗುಂಟು,
ಆ ಪ್ರಸನ್ನಪ್ರಸಾದ ಎನಗೆ ಬೇಕೆಂದು
ಮೇಖಲೇಶ್ವರಲಿಂಗವನೊಡಗೂಡಿಕೊಂಡು ಬೇಡ
ಬಂದೆ. ॥ ೪ ॥

೩೮

ಕ್ರಿಯಾಶಕ್ತಿ ಬ್ರಹ್ಮಂಗೆ ಸರಸ್ವತಿಯಾಗಿ ಬಂದುದನರಿದು,
ಇಚ್ಛಾಶಕ್ತಿ ವಿಷ್ಣುವಿಂಗೆ ಮಹಾಲಕ್ಷ್ಮಿಯಾಗಿ ನಿಂದುದನರಿದು,
ಜ್ಞಾನಶಕ್ತಿ ರುದ್ರಂಗೆ ಉಮಾದೇವಿಯಾಗಿ ಸಲೆ ಸಂದುದನರಿದು,
ಇಂತೀ ತ್ರಿವಿಧ ಶಕ್ತಿಗಳ ಮನೋಹರದಲ್ಲಿ
ತ್ರಿವಿಧ ಮೂರ್ತಿಗಳು ಆಡುವದ ಕಂಡು
ನಾನಾಸುಖ ಪರಿಪೂರ್ಣ ಕಳೆಯಿಂದ ಕ್ರಿಯಾಶಕ್ತಿ

ಅವರ ಸುಖಿಚ್ಛೆಯಿಂದ ಇಚ್ಛಾಶಕ್ತಿ
ಈ ಉಭಯಶಕ್ತಿ ಸನ್ನತ್ರವಾಗಿ ನಿಂದ ಉಳುಮೆ ಜ್ಞಾನಶಕ್ತಿ.
ಇಂತೀ ತ್ರಿವಿಧ ಶಕ್ತಿಯ ಒಡಹುಟ್ಟಿ ನಾ ಬಂದೆ.
ಬ್ರಹ್ಮಂಗೆ ಕಿರಿದಂಗಿಯ ಕೊಟ್ಟು ಮೈದುನನ ಮಾಡಿಕೊಂಡೆ.
ವಿಷ್ಣುವಿಂಗೆ ನಡುವಳಾಕೆಯ ಕೊಟ್ಟು ಬಿಡುಮುಡಿಯ ಮೈದುನನ
ಮಾಡಿಕೊಂಡೆ.
ರುದ್ರಂಗೆ ಹಿರಿಯಕ್ಕನ ಕೊಟ್ಟು ಎನ್ನೊಡಗೂಡುವ ಭಾವನ
ಮಾಡಿಕೊಂಡೆ.
ಕಿರಿದಂಗಿಯ ಗಂಡ ಸತ್ತ, ನಡುದಂಗಿಯ ಗಂಡ ಬಿಟ್ಟ,
ಹಿರಿಯಕ್ಕನ ಕೊಂದ ಭಾವ.
ಇಂತೀ ಮೂವರ ಕೊಳುಕೊಡೆ ದೃಷ್ಟ ಸಂಬಂಧ ನಷ್ಟವಾಯಿತ್ತು.
ಕಲುಷ್ಯದಯದ ಕಲಕೇತಮಲ್ಲ ಬಂದೆ.
ಗೆಲ್ಲ ಸೋಲವೆಂಬ ತಗರ ಕೋಡ ಹಿಡಿದು
ಮೇಖಲೇಶ್ವರಲಿಂಗವಲ್ಲದಿಲ್ಲಾಯೆಂದು ನಲಿದು
ಕುಣಿದಾಡಬಂದೆ. ॥ ೫ ॥

೩೯

ಜಗಕ್ಕಹುದಾದುದ ಕಿತ್ತು ಜಗಕ್ಕಲ್ಲವಾದುದ ತೊಟ್ಟು
ಜಗ ಹಿಡಿದುದ ಬಿಟ್ಟು, ಜಗ ಒಲ್ಲದುದ ತೊಟ್ಟು
ತಾನರಿದುದ ಮರದು, ಆ ಮರವೆಗೆ ಒಡಲಾದುದನರಿದು
ಉಭಯದ ಕೋಡ ಕಿತ್ತು, ನಲಿದೊಲವಿನ ಮೊಲನ ಬಿಟ್ಟು
ಕೊಂಬಿನ ಗಿಲಿಕೆಯಲ್ಲಿ ಒಲದಾಡುವೆ.
ಜಗಭಂಡರ ಅಂಗಳದಲ್ಲಿ ತುಳಿದಾಡುತ್ತಲಿರಬೇಕು
ಮೇಖಲೇಶ್ವರಲಿಂಗ ಒಡಗೂಡುತ್ತಲಿರಬೇಕು. ॥ ೬ ॥

೪೦

ನಾನು ನಿನಗೆ ತಂಗಿಯ ಕೊಟ್ಟು ನೀನೆನಗೆ ಮೈದುನನಾದೆ.
ನಾನು ನಿನಗೆ ಅಕ್ಕನ ಕೊಟ್ಟು ನೀನೆನಗೆ ಭಾವನಾದೆ.
ನಾನು ನೀನೂ ಏನಹರೆಂಬುದ ತಿಳಿಮ
ಅಣ್ಣನಿಗೆ ತಂಗಿ, ಅಕ್ಕನಿಗೆ ತಮ್ಮ
ಇವರಿಬ್ಬರೂ ದೃಷ್ಟದಲ್ಲಿ ಒಡಹುಟ್ಟಿದರಾದ ಮತ್ತೆ

ತಂಗಿಯ ಮಗಳು ಸೊಸೆಯಾಗಿ,
ಅಕ್ಕನ ಮಗ ಅಳಿಯನಾದ ಚಿತ್ರವ ನೋಡಾ!
ಒಂದು ಯೋನಿಯಲ್ಲಿ ಬಂದುದನರಿಯದೆ,
ನಿನ್ನ ಒಡಹುಟ್ಟಿನ[ವ]ಳಿಗೆ ನೀ ಗಂಡನಾಗಿ,
ಎನಗೆ ನೀ ಭಾವನಾದ ಪರಿಯ ನೋಡಿ ನಾಚಿಸಬಂದೆ.
ಕಲಕೇತನಲ್ಲಿ ಕೊಳುಕೊಡೆ ಬೇಡ
ಮೇಖಲೇಶ್ವರಲಿಂಗದ ಹೊಲಬ ತಿಳಿಯಬಲ್ಲಡೆ. ॥ ೭ ॥

೪೧

ಪ್ರಥಮದಲ್ಲಿ ರುದ್ರತ್ವ;
ಅದು ಘಟಿಸಿದಲ್ಲಿ ಈಶ್ವರತ್ವ.
ಈ ಎರಡು ಕೂಡಿದಲ್ಲಿ ಸದಾಶಿವತತ್ವ.
ಇಂತೀ ತ್ರಿವಿಧಲೀಲೆ ಏಕಾರ್ಥವಾದಲ್ಲಿ
ಪರಶಿವತತ್ವದ ಪರಮಪ್ರಕಾಶ.
ಇದರಿಂದ ಮೀರುವ ತೆರನುಂಟಾದಡೆ ನೀವು ಹೇಳಿ
ನಾ ಮಾರ್ಕೊಳ್ಳೆನು.
ನೀವು ಹೇಳಿದಂತೆ ನಾ ಪ್ರಸಾದವೆಂಬೆನು.
ಆರು ಶೈವದ ಭೇದ,
ಮೂರು ಶೈವದ ಭಜನೆ,
ಷಡುದರ್ಶನದ ತರ್ಕ
ಇವನೆಲ್ಲವನುದ್ಧರಿಸಬಂದ ಪ್ರಭುದೇವರು,
ಬಸವಣ್ಣ, ಚೆನ್ನಬಸವಣ್ಣ
ಇವರೊಳಗಾದ ಏಳ್ನೂರೆಪ್ಪತ್ತಮರಗಣಂಗಳು,
ಸ್ವತಂತ್ರ ಸಂಬಂಧಿಗಳಪ್ಪ ಪ್ರಥಮರು
ಶಿವಾಚಾರ ಚಕ್ರವರ್ತಿಗಳು,
ಸತ್ಯರು ನಿತ್ಯರು ಸದ್ಯನ್ಮುಕ್ತರು
ಸುಮನರು ವಿಮಲರು ಪೂರ್ಣರು ಪರಿಪೂರ್ಣರು
ಮೇಖಲೇಶ್ವರಲಿಂಗದಲ್ಲಿ ಮಹಾನುಭಾವಿಗಳು. ॥ ೮ ॥

೪೨

ಬೇಡಲೇತಕ್ಕೆ ಕಾಯಕವ ಮಾಡಿಹೆನೆಂದು?
ಕೊಡದಡೆ ಒಡಗೂಡಿ ಬಯ್ಯಲೇತಕ್ಕೆ?
ಒಡೆಯರು ಭಕ್ತರಿಗೆ ಮಾಡಿಹೆನೆಂದು

ಗಡಿತಡಿಗಳಲ್ಲಿ ಕವಾಟ ಮಂದಿರ ಮಂದೆ ಗೊಂದಿಗಳಲ್ಲಿ
ನಿಂದು ಕಾಯಲೇತಕ್ಕೆ?
ಈ ಗುಣ ಕಾಯಕದಂದವೆ?
ಈ ಗುಣ ಹೊಟ್ಟೆಗೆ ಕಾಣದ ಸಂಸಾರದ ಘಟ್ಟದ ನಿಲುವು.
ಉಭಯ ಭ್ರಷ್ಟಂಗೆ ಕೊಟ್ಟ ದ್ರವ್ಯ
ಮೇಖಲೇಶ್ವರಲಿಂಗಕ್ಕೆ ಮುಟ್ಟದೆ ಹೋಯಿತ್ತು. ॥ ೯ ॥

೪೩

ಬೇಡುವ ಭಂಡನ, ಕೊಡದೆ ಹೋರುವ ಲಂಡನ
ಉಭಯದ ದ್ರವ್ಯವ ತಂದು, ಅಲ್ಲಿ ಉಂಡು,
ಸುಖಿಯಾದೆಹೆನೆಂಬ ಉಭಯ ಭಂಡನ ದಿಂಡಿಕೆ ಕೆಡೆಯದು
ಮೇಖಲೇಶ್ವರ ಲಿಂಗದ ಅಂಗವೇಕೆ ತಿಳಿಯದು. ॥ ೧೦ ॥

೪೪

ಭಕ್ತ ಮಾಹೇಶ್ವರ ಪ್ರಸಾದಿ
ಈ ತ್ರಿವಿಧವು ಒಂದೇ ಕೋಡಿನಲ್ಲಿ ಅಡಗಿತ್ತು.
ಪ್ರಾಣಲಿಂಗ ಶರಣ ಐಕ್ಯ
ಈ ತ್ರಿವಿಧವು ಒಂದೇ ಕೋಡಿನಲ್ಲಿ ಅಡಗಿತ್ತು.
ಇಂತೀ ಉಭಯದ ಕೋಡ ಹಿಡಿದು
ಪಶ್ಚಿಮ ದ್ವಾರವ ಮುಚ್ಚಿ ನಿಂದು
ಉತ್ತರ ದ್ವಾರದಲ್ಲಿ ಎಡತಾಕುವ ನಿಶ್ಚಿಂತರ ಮುಚ್ಚಿಸಿ
ಸಚ್ಚಿದಾನಂದದಿ ನಲಿದೊಲೆದು
ಕಲೆ ವಿದ್ಯವನೊಪ್ಪಿಸ ಬಂದೆ.
ಉಲುಹಿನ ಗಿಲಿಕೆಯ ಕೊಂಬಿನಲ್ಲಿ ಸುಳುಹಿನ
ಸೂಕ್ಷ್ಮದ ಕಳೆಯ ಬೆಳಗಿನಲ್ಲಿ
ಅಕ್ಕನ ಗಂಡ ಭಾವಂದಿರ ಧಿಕ್ಕರಿಸ ಬಂದೆ.
ಮೇಖಲೇಶ್ವರಲಿಂಗವನರಿಯ ಹೇಳಿ. ॥ ೧೧ ॥

## ಕಾಮಾಟದ ಭೀಮಣ್ಣನ ವಚನ

೪೫

ಐಗೈಮನೆ ನಾಗೈಕಂಬ ಮೂಗೈತೊಲೆ
ಭೇದ ಕರವಳವ ಹಾಕಿ ನೋಡಿ ಅರಿದಡೆ ಆಯ ಬಂದಿತ್ತು.
ಮಸದಡೆ ಆಯ ಹೋಯಿತ್ತು.
ಮೂಗೆಯ್ಯ ಕರದಲ್ಲಿ ಇವರರಿಕೆಯಾಗಿ
ಹೇಳಾ ಧಾರೇಶ್ವರ ನಿನ್ನಾಲಯಕ್ಕೆ. ॥ ೧ ॥

೪೬

ಜೀವನೆಂಬ ಅಳತವ ಕೋಲಿನಲ್ಲಿ
ಭಾವಜ್ಞ ನಾನಾದೆನೆಂಬವರೆಲ್ಲರೂ
ಅಳತಕ್ಕೆ ಸಂದು ಹೊರಳಿ ಮರಳುತ್ತೈದಾರೆ.
ಸರ್ವಸಂಗ ಪರಿತ್ಯಾಗವ ಮಾಡಿದೆನೆಂಬ ಅರುಹಿರಿಯರೆಲ್ಲರೂ
ತಥ್ಯಮಿಥ್ಯವೆಂಬ ಕೋಲಿನಲ್ಲಿ ಅಳತೆಗೊಳಗಾಗುತ್ತೈದಾರೆ.
ಹಿಂದಕೊಂದು ಕುರುಹಿಲ್ಲ, ಮುಂದಕೊಂದು ಲಕ್ಷ್ಯವಿಲ್ಲಾ
ಎಂದು ಹಿಂಗಿ ನುಡಿದು,
ನಾವು ನಿರಂಗಿಗಳೆಂದು ಅಂಗವ ಹೊತ್ತು ತಿರುಗಾಡುವರೆಲ್ಲರು
ಬಂಧ ಮೋಕ್ಷ ಕರ್ಮಂಗಳಿಂದ
ಅಂಗಳ ಬಾಗಿಲ ವಾಸಂಗಳಲ್ಲಿ
ಬಾ ಹೋಗೆನಿಸಿಕೊಂಬ ನಿಂದೆಯ ಕೋಲಿನಲ್ಲಿ
ಅಳತಕ್ಕೊಳಗಾಪರೆಲ್ಲರು ಸರ್ವಾಂಗಲಿಂಗಿಗಳಪ್ಪರೆ?
ಇದರಂದವ ತಿಳಿದು ಆರಾರ ಇರವು ಅವರಿರವಿನಂತೆ.
ತಾವಾಗಿ ಅರಿವವರಲ್ಲಿ ಅರುಹಿಸಿಕೊಂಬನ್ನಕ್ಕ
ಅವರೊಡಗೂಡಿ ಅವರು ತನ್ನನರಿದ ಮತ್ತೆ
ಆ ಅರಿಕೆಯ ತೆರ ತಾನೆಂಬುದನೆ ಪ್ರಮಾಣಿಸಿ
ಪಕ್ವವಾಹನ್ನಕ್ಕ ತೊಟ್ಟನೊಳಗಿಪ್ಪ ಫಲದ ತೆರನಂತೆ

ಈ ದೃಷ್ಟ ತನ್ನಷ್ಟವಹನ್ನಕ್ಕ
ತನ್ನ ಕಣ್ಣಿನಿಂದ ಕನ್ನಡಿಯ ನೋಡಿ
ತನ್ನ ತಾನೆ ಅರಿವುದು ಕಣ್ಣೋ ಕನ್ನಡಿಯೋ?
ಕನ್ನಡಿಯೆಂದಡೆ ಅಂಧಕಂಗೆ ಪ್ರತಿರೂಪಿಲ್ಲ.
ಇದು ಕಾರಣದಲ್ಲಿ ಅವರರಿವ ತಾನರಿದು ತನ್ನರಿವ ಅವರರಿದು
ಉಭಯದರಿವು ಒಡಗೂಡುವನ್ನಕ್ಕ ಹಿಂದಣ ಕುರುಹು
ಮುಂದಣ ಲಕ್ಷ್ಯವ ವಿಚಾರಿಸಿ ಮರೆಯಬೇಕು
ಧಾರೇಶ್ವರಲಿಂಗನ ಕೂಡಬಲ್ಲಡೆ. ॥ ೨ ॥

೪೭

ಬೋದಿಗೆ ನಾಲ್ಕು, ಕಂಬವೆಂಟು, ಅರುಗುಗಾಲು ಹತ್ತು,
ತೊಲೆಯೊಂದೇ ಏರಿತ್ತು.
ಮುಚ್ಚಳವಲಗಿಗೆ ದಿಕ್ಕು ಕಾಣದೆ
ಕರ್ಮಕಾಂಡಿಗಳೆಲ್ಲರು ಕಾಮನ ಕಾಮಾಟಕ್ಕೆ ಒಳಗಾಗಿ ಹೋದರು.
ಈ ಗುಣವ ನಾನು ನೀನೆಂಬುದ ತಿಳಿದು ನೋಡು
ಧಾರೇಶ್ವರಲಿಂಗವನರಿವುದಕ್ಕೆ. ॥ ೩ ॥

೪೮

ಮೂರು ಕೋಲ ಬ್ರಹ್ಮಂಗೆ ಅಳದು ಕೊಟ್ಟೆ;
ನಾಲ್ಕು ಕೋಲ ವಿಷ್ಣುವಿಂಗೆ ಅಳದು ಕೊಟ್ಟೆ;
ಐದು ಕೋಲ ರುದ್ರಂಗೆ ಅಳದು ಕೊಟ್ಟೆ;
ಆರು ಕೋಲ ಈಶ್ವರಂಗೆ ಅಳದು ಕೊಟ್ಟೆ;
ಒಂದು ಕೋಲ ಸದಾಶಿವಂಗೆ ಅಳದು ಕೊಟ್ಟೆ.
ಇಂತೀ ಐವರು ಕೋಲಿನ ಒಳಗು ಹೊರಗಿನಲ್ಲಿ
ಅಳಲುತ್ತ ಬಳಲುತ್ತ ಒಳಗಾದರು.
ಇಂತೀ ಒಳ ಹೊರಗ ಸೋಧಿಸಿಕೊಂಡು
ಅಳಿವು ಉಳಿವಿನ ವಿವರವನರಿಯಬೇಕು,
ಧಾರೇಶ್ವರಲಿಂಗವನರಿವುದಕ್ಕೆ. ॥ ೪ ॥

# ಕಿನ್ನರಿ ಬ್ರಹ್ಮಯ್ಯನ ವಚನ

೪೯

ಆಕಾರವೆಂಬೆನೆ ನಿರಾಕಾರವಾಗಿದೆ
ನಿರಾಕಾರವೆಂಬೆನೆ ಆತ್ತತ್ತ ತೋರುತ್ತದೆ.
ತನ್ನನಳಿದು ನಿಜವುಳಿದ
ಮಹಾಲಿಂಗ ತ್ರಿಪುರಾಂತಕನ ನಿಲವ ಕಂಡು ಒಳಕೊಂಡ
ಮರುಳಶಂಕರದೇವರ ಮೂರ್ತಿಯ ನಿಮ್ಮಿಂದ ಕಂಡು
ಬದುಕಿದೆನು ಕಾಣಾ ಸಂಗನಬಸವಣ್ಣಾ. ॥ ೧ ॥

೫೦

ಆವ ಮಡಕೆಯಾಗಲಿ ಸ್ವಾದ ಸಾಕಾರದಲ್ಲಿ ಭೇದವಿಲ್ಲ.
ಮಣ್ಣ ಮಡಕೆ ಒಕ್ಕಲಿಗನಲ್ಲಿ,
ಚಿನ್ನದ ಮಡಕೆ ಅರಮನೆಯಲ್ಲಿ.
ಅರಮನೆ ಗುರುಮನೆ ಓರಿದಾದ ಕಾರಣ-
ಹಾದರ ಸಲ್ಲದು ಕಾಣಾ, ತ್ರಿಪುರಾಂತಕಲಿಂಗವೆ! ॥ ೨ ॥

೫೧

ಆಶ್ರಯ ನಿರಾಶ್ರಯ ಹರಪುರಾತರಿಗಲ್ಲದೆ ಕಿರಾತರಿಗುಂಟೆ?
ಆಶ್ರಯಿಸಬಹುದು ಪ್ರಭುವಿನ ನುಡಿಯ;
ಆಶ್ರಯಿಸಬಹುದು ಹರಗಣಂಗಳ ನುಡಿಯ.
ಅದೇನು ಕಾರಣವೆಂದಡೆ:
ಕಾರಣವಿಲ್ಲದೆ ಕಂಡಂತಾವರು ತ್ರಿಪುರಾಂತಕಲಿಂಗ ಶರಣರು
ಚೆನ್ನಬಸವಯ್ಯಾ. ॥ ೩ ॥

೫೨

ಕಲ್ಲಿಲಿಟ್ಟವಂಗೊಲಿದೆ, ಕಾಲಲೊದ್ದವಂಗೊಲಿದೆ,
ಬಾಯಲ್ಲಿ ಉಗಿದವಂಗೊಲಿದೆ.
ಅದು ನಿನ್ನ ಭಕ್ತಿಯೋ ಸತ್ಯವೋ ಗರ್ವವೋ!
ತ್ರೈಭುವನಂಗಳಿಗಭೇದ್ಯ ತಿಳಿವಡೆ ನಿನ್ನ ಮಹಿಮೆ,
ಉಮೆಯ ವರ ತ್ರಿಪುರಾಂತಕಲಿಂಗವೆ. ॥ ೪ ॥

೫೩

ಕಲ್ಲೊಳಗಣ ಬೆಲ್ಲವ ಮೆದ್ದವರಿನ್ನಾರೊ?
ಕಲ್ಲನೆ ಹಿಡಿದು ಬಿಡದೆ ಹಾರುವಿರಿ.
ಕಲ್ಲು ಹಲ್ಲನೆ ಕಳೆಯಿತ್ತು,
ಬಲ್ಲವರಿದ ಹೇಳಿ.
ಕಲ್ಯಾಣದ ತ್ರಿಪುರಾಂತಕ ನೀನೆ ಬಲ್ಲೆಯಯ್ಯಾ. ॥ ೫ ॥

೫೪

ಕಾಯದಲ್ಲಿ ಕಳವಳವಿರಲು,
ಪ್ರಾಣದಲ್ಲಿ ಮಾಯೆಯಿರಲು,
ಏತರ ಗಮನ ಏತರ ನಿರ್ವಾಣ.
ಮಹಾಲಿಂಗ ತ್ರಿಪುರಾಂತಕ ನಿನ್ನ ಸಂಹಾರಿ ಎಂಬನಲ್ಲದೆ
ಸಜ್ಜನೆಯೆಂದು ಕೈವಿಡಿವನಲ್ಲ. ॥ ೬ ॥

೫೫

ಚಂದ್ರನ ಸೂಡುವವ ಲಿಂಗನೊ ಅಂಗನೊ?
ಸುಸಂಗದ ಮುಕುಟದಲ್ಲಿ ಗಂಗೆಯ ಧರಿಸುವವ ಭಂಗನೊ
ಅಭಂಗನೊ?
ಭಕ್ತರಂಗದಿಚ್ಛೆಯಲ್ಲಿ ಅಡಗುವವ ಬಂಧನೊ ನಿರ್ಬಂಧನೊ?
ಇದು ನನಗೆ ಸಂದೇಹವಾಗಿದೆ,
ತ್ರೈಭುವನಂಗಳಿಗೆ ಚೋದ್ಯ ನಿಮ್ಮ ಪರಿ,
ಅಂಬಿಕಾವರ ತ್ರಿಪುರಾಂತಕಲಿಂಗವೆ. ॥ ೭ ॥

೫೬

ಚಿನಿಪಾಲ ಚಿನ್ನದ ಹರಿವಾಣದಲ್ಲಿ ಭೋಗಿಪುದು
ಭೂಷಣವಲ್ಲದೆ,
ಮಣ್ಣ ಹರಿವಾಣದಲ್ಲಿ ಭೂಷಣವೆ?
ತಾ ಮಾಳ್ಪ ಶಿವಲಿಂಗ ಪೂಜೆಗೆ ಕಾಯ ಪವಿತ್ರವಲ್ಲದೆ,
ಅಪವಿತ್ರವೆಂತೊ ತ್ರಿಪುರಾಂತಕಲಿಂಗವೆ? ॥ ೮ ॥

೫೭

ತನು ಸೆಜ್ಜೆ ಮನ ಲಿಂಗವಾದ ಬಳಿಕ
ಆಸು ಮತ್ತೆ ಬೇರೆ ಅರಸಲುಂಟೆ?
ತನುವೆ ಬಸವಣ್ಣ ಮನವೇ ಪ್ರಭುದೇವರೆಂಬ
ಮಹಾ ಘನವನೊಳಕೊಂಡಿರ್ದ ಬಳಿಕ
ಗುಣಾವಗುಣವ ಸಂಪಾದಿಸುವರೆ?
ಮಹಾಲಿಂಗ ತ್ರಿಪುರಾಂತಕದೇವ, ಸಂಗನ ಬಸವಣ್ಣನಲ್ಲಿ
ನಿಮ್ಮಡಿಗಳಲ್ಲಿ ಸಂದು ಸಂಶಯವುಂಟೆ?
ಬಿಜಯಂಗೈವುದಯ್ಯಾ ಪ್ರಭುವೆ. ॥ ೯ ॥

೫೮

ನಿನ್ನ ಸ್ವರೂಪ ಕಂಡೆನ್ನ ದೃಷ್ಟಿ ನಟ್ಟುದೆನಗೆ.
ನಿನ್ನ ಲಾವಣ್ಯರಸವ ಕಂಡು ಮನ ಹಾರೈಸಿತ್ತೆನಗೆ.
ನಿನ್ನ ಪ್ರವುಡಿಯಿಂದ ಕೂಡಿದೆನೆಂಬುದು ಭಾವದಲ್ಲಿ
ಬಚ್ಚಬರಿಯ ಹೆಂಗುಸಾಗಿ ತೋರಿತ್ತೆನಗೆ.
ಮಹಾಲಿಂಗ ತ್ರಿಪುರಾಂತಕನೆನಗೊಡ್ಡಿದ ಮಾಯೆಯ
ನಿನ್ನ ಸಮಸುಖ ಕೂಟದೊಳಿರ್ದು ಶಿವಭಾವಭಕ್ತಿಯಿಂ
ಗೆಲುವೆನು ಮಹಾ ಹೆಣ್ಣು ಎಂದು ಕೈವಿಡಿದೆನು. ॥ ೧೦ ॥

೫೯

ನಿನ್ನ ಪರೆಯದ ರೂಹಿನ ಚೆಲುವಿನ, ನುಡಿಯ ಜಾಣಿನ,
ಸಿರಿಯ ಸಂತೋಷದ,
ಕರಿ ತುರಗ ರಥ ಪದಾತಿಯ ನೆರವಿಯ,
ಸತಿ ಸುತರ ಬಂಧುಗಳ ಸಮೂಹದ,

ನಿನ್ನ ಕುಲದಭಿಮಾನದ
ಗರ್ವವ ಬಿಡು, ಮರುಳಾಗದಿರು.
ಅಕಟಕಟಾ ರೋಮಜನಿಂದ ಹಿರಿಯನೆ?
ಮದನನಿಂ ಚೆಲುವನೆ?
ಸುರಪತಿಯಿಂದ ಸಂಪನ್ನನೆ?
ವಾಮದೇವ ವಶಿಷ್ಠರಿಂದ ಕುಲಜನೆ?
ಅಂತಕನ ದೂತರು ಬಂದು ಕೈವಿಡಿದೆಳದೊಯ್ಯುವಾಗ
ಸುಡಿ ತಡವಿಲ್ಲ ಕೇಳೋ ನರನೆ!
ಎನ್ನ ಮಾಹಾಲಿಂಗ ತ್ರಿಪುರಾಂತಕದೇವರ ಪೂಜಿಸಿಯಾದರೆ
ಕೇಡಿಲ್ಲದ ಪದ ದೊರಕೊಂಬುದು ಮರುಳೆ. ॥ ೧೧ ॥

೬೦

ಪ್ರಣವದ ಚಿನ್ನಾದವೆ ಅಕಾರ,
ಪ್ರಣವದ ಚಿದ್ಬಿಂದುವೆ ಉಕಾರ,
ಪ್ರಣವದ ಚಿತ್ಕಲೆಯೆ ಮಕಾರ.
ಪ್ರಣವದ ಬಟ್ಟೆಯ ಬಕಾರ,
ಪ್ರಣವದ ಸೋಪಾನವೆ ಸಕಾರ,
ಪ್ರಣವದ ವರ್ತನೆಯೆ ವಕಾರ.
ಪ್ರಣವದ ಬಹಳಾಕಾರವೆ ಬಕಾರ
ಪ್ರಣವದ ಸಾಹಸವೆ ಸಕಾರ,
ಪ್ರಣವದ ವಶವೆ ವಕಾರ.
ಪ್ರಣವದ ಬರವೆ ಬಕಾರ,
ಪ್ರಣವದ ಸರವೆ ಸಕಾರ,
ಪ್ರಣವದ ಇರವೆ ವಕಾರ.
ಪ್ರಣವದ ಬಲ್ಮೆಯೆ ಬಕಾರ,
ಪ್ರಣವದ ಸಲ್ಮೆಯೆ ಸಕಾರ,
ಪ್ರಣವದ ಒಲ್ಮೆಯೆ ವಕಾರ.
ಪ್ರಣವದ ಪಶ್ಯಂತಿವಾಕೇ ಬಕಾರ,
ಪ್ರಣವದ ಸೂಕ್ಷ್ಮವಾಕೇ ಸಕಾರ,
ಪ್ರಣವದ ವೈಕಲ್ಯವಾಕೇ ವಕಾರ.
ಪ್ರಣವದ ಬಹಳ ಜ್ಞಾನವೆ ಬಕಾರ,
ಪ್ರಣವದ ಸಹಜ ಜ್ಞಾನವೆ ಸಕಾರ,
ಪ್ರಣವದ ಶುದ್ಧ ಜ್ಞಾನದೀಪ್ತಿಯೆ ವಕಾರ.

ಪ್ರಣವದ ಮೂಲವೆ ಬಕಾರ,
ಪ್ರಣವದ ಶಾಖೆಯೆ ಸಕಾರ,
ಪ್ರಣವದ ಫಲವೆ ವಕಾರ.
ಪ್ರಣವದ ಬಹಳ ನಾದವೆ ಬಕಾರ,
ಪ್ರಣವದ ಸನಾದವೆ ಸಕಾರ,
ಪ್ರಣವದ ಸುನಾದವೆ ವಕಾರ.
ಪ್ರಣವದ ಭಕ್ತಿಯೆ ಬಕಾರ,
ಪ್ರಣವದ ಸುಜ್ಞಾನವೆ ಸಕಾರ,
ಪ್ರಣವದ ವೈರಾಗ್ಯವೆ ವಕಾರ.
ಪ್ರಣವದ ಶಬ್ದವೆ ಬಕಾರ,
ಪ್ರಣವದ ನಿಃಶಬ್ದವೆ ಸಕಾರ,
ಪ್ರಣವದ ಶಬ್ದ ನಿಶಬ್ದದ ವಾಕುಗಳೆ ವಕಾರ.
ಇಂತಪ್ಪ ಪ್ರಣವ ಮಂತ್ರಂಗಳೇ
ಬಸವಾ ಎಂಬ ಪ್ರಣವ ನಾದತ್ರಯಸಂಬಂಧವಾದುದಂ
ತ್ರಿಪುರಾಂತಕಲಿಂಗದಲ್ಲಿ ಅರಿದು ಸುಖಿಯಾಗಿ
ಆನು ಬಸವಾ, ಬಸವಾ, ಬಸವಾ, ಎಂದು
ಜಪಿಸುತ್ತಿದ್ದೆನಯ್ಯಾ. ॥ ೧೨ ॥

೬೧

ಭಕ್ತಿಸ್ಥಲವನರಿದು ತಮ್ಮ ಭಕ್ತಿ ಸ್ಥಲದಲ್ಲಿ
ಬಯಲಾದರು ಸಂಗನ ಬಸವರಾಜದೇವರು.
ಮಾಹೇಶ್ವರ ಸ್ಥಲವನರಿದು ತಮ್ಮ ಮಾಹೇಶ್ವರ ಸ್ಥಲದಲ್ಲಿ
ಬಯಲಾದರು ಮಡಿವಾಳ ಮಾಚಿತಂದೆಗಳು.
ಪ್ರಸಾದಿಸ್ಥಲವನರಿದು ತಮ್ಮ ಪ್ರಸಾದಿಸ್ಥಲದಲ್ಲಿ
ಬಯಲಾದರು ಬಿಬ್ಬಬಾಚಯ್ಯಗಳು.
ಪ್ರಾಣಲಿಂಗಿಸ್ಥಲವನರಿದು ತಮ್ಮ ಪ್ರಾಣಲಿಂಗಿಸ್ಥಲದಲ್ಲಿ
ಬಯಲಾದರು ನುಲಿಯ ಚಂದಯ್ಯಗಳು.
ಶರಣಸ್ಥಲವನರಿದು ಶರಣಸ್ಥಲದಲ್ಲಿ
ಬಯಲಾದರು ಘಟ್ಟಿವಾಳಯ್ಯಗಳು.
ಐಕ್ಯಸ್ಥಲವನರಿದು ತಮ್ಮ ಐಕ್ಯಸ್ಥಲದಲ್ಲಿ
ಬಯಲಾದರು ಅಜಗಣ್ಣಯ್ಯಗಳು.
ಇಂತೀ ಷಡ್ವಿಧಸ್ಥಲವನರಿದು ತಮ್ಮ ಷಡ್ವಿಧಸ್ಥಲದಲ್ಲಿ

ಬಯಲಾದರು ಚೆನ್ನಬಸವೇಶ್ವರ ದೇವರು.
ನಿಜಸ್ಥಲವನರಿದು ತಮ್ಮ ನಿಜಸ್ಥಲದಲ್ಲಿ
ಬಯಲಾದರು ಅಲ್ಲಮಪ್ರಭುದೇವರು.
ನಿರ್ವಯಲಸ್ಥಲವನರಿದು ತಮ್ಮ ನಿರ್ವಯಲಸ್ಥಲದಲ್ಲಿ
ಬಯಲಾದರು ಏಳ್ನೂರೆಪ್ಪತ್ತಮರಗಣಂಗಳು.
ಇಂತಿವರ ಒಕ್ಕುಮಿಕ್ಕ ಬಯಲಪ್ರಸಾದವ ಕೊಂಡು
ನಾನು ಬಯಲಾದೆನು ಕಾಣಾ ಮಹಾಲಿಂಗ
ತ್ರಿಪುರಾಂತಕದೇವಾ. ॥ ೧೩ ॥

೬೨

ಮಸ್ತಕವ ಮುಟ್ಟಿ ನೋಡಿದಡೆ,
ಮನೋಹರದಳಿವು ಕಾಣ ಬಂದಿತ್ತು!
ಮುಖಮಂಡಲವ ಮುಟ್ಟಿ ನೋಡಿದಡೆ,
ಮೂರ್ತಿಯ ಅಳಿವು ಕಾಣ ಬಂದಿತ್ತು!
ಕೊರಳ ಮುಟ್ಟಿ ನೋಡಿದಡೆ,
ಗರಳಧರನ ಇರವು ಕಾಣ ಬಂದಿತ್ತು!
ತೋಳುಗಳ ಮುಟ್ಟಿ ನೋಡಿದಡೆ,
ಶಿವನಪ್ಪುಗೆ ಕಾಣ ಬಂದಿತ್ತು!
ಉರಸ್ಥಲವ ಮುಟ್ಟಿ ನೋಡಿದಡೆ,
ಪರಸ್ಥಲದಂಗಲೇಪ ಕಾಣ ಬಂದಿತ್ತು!
ಬಸಿರ ಮುಟ್ಟಿ ನೋಡಿದಡೆ,
ಬ್ರಹ್ಮಾಂಡವ ಕಾಣ ಬಂದಿತ್ತು!
ಗುಹ್ಯವ ಮುಟ್ಟಿ ನೋಡಿದಡೆ,
ಕಾಮದಹನ ಕಾಣ ಬಂದಿತ್ತು!
ಮಹಾಲಿಂಗ ತ್ರಿಪುರಾಂತಕದೇವಾ,
ಮಹಾದೇವಿಯಕ್ಕನ ನಿಲುವನರಿಯದೆ
ಅಳುಪಿ ಕೆಟ್ಟೆನು. ॥ ೧೪ ॥

೬೩

ವಿಷಯಂಗಳು ನಿರ್ವಿಷಯವಾದವಿಂದು,
ಕರ್ಣಂಗಳು ತರಹರಿಸಿದವಿಂದು,
ಎನ್ನ ಅಳುಪೆಂಬ ಅರೆವಾವು ಮಡಿಯಿತ್ತಿಂದು
ಎನ್ನ ಹೃದಯದ ಕಲ್ಮಶ ತೊಡೆಯಿತ್ತಿಂದು
ಮಹಾಲಿಂಗ ತ್ರಿಪುರಾಂತಕ, ಮಹಾದೇವಿಯಕ್ಕಗಳ ಧರ್ಮದಿಂದ
ಹಿಂದಣ ಹುಟ್ಟು ಮುರಿಯಿತ್ತಿಂದು. ॥ ೧೫ ॥

೬೪

ಶರಣಾರ್ಥಿ ಶರಣಾರ್ಥಿ ಎಲೆ ನಮ್ಮವ್ವ,
ಶರಣಾರ್ಥಿ ಶರಣಾರ್ಥಿ ಕರುಣ ಸಾಗರ ನಿಧಿಯೆ,
ದಯಾಮೂರ್ತಿ ತಾಯೆ, ಶರಣಾರ್ಥಿ!
ಮಹಾಲಿಂಗ ತ್ರಿಪುರಾಂತಕನೊಡ್ಡಿದ ತೊಡಕು,
ನೀವು ಬಿಡಿಸಿದರಾಗಿ ನಿಮ್ಮ ದಯದಿಂದ
ನಾನು ಹುಲಿಸೆಕ್ಕಿ ಬದುಕಿದೆನು ಶರಣಾರ್ಥಿ ಶರಣಾರ್ಥಿ
ತಾಯೆ. ॥ ೧೬ ॥

೬೫

ಹುಟ್ಟಿತ್ತಲ್ಲಾ ಉಂಟೆನಿಸಿತ್ತಲ್ಲಾ.
ಕರುವಿಟ್ಟಿತ್ತಲ್ಲಾ ರೂಪಾಯಿತ್ತಲ್ಲಾ.
ನೋಡ ನೋಡ ವಾಯುಗುಂದಿತ್ತಲ್ಲಾ.
ನೋಡ ನೋಡ ಭಾವಗುಂದಿತ್ತಲ್ಲಾ.
ಅರಿವು ವಿಕಾರದಲ್ಲಿ ಆಯಿತ್ತು, ಹೋಯಿತ್ತು,
ಮಹಾಲಿಂಗ ತ್ರಿಪುರಾಂತಕಾ, ನಿಮಗೆರಗದ ತನು. ॥ ೧೭ ॥

೬೬

ಹುಸಿಯೆಂಬ ಅಲಗಿಂಗೆ ಒಡಲೆ ಗುರಿಯಾಯಿತ್ತು
ಏನೆಂಬೆನೇನೆಂಬೆ ವಿಧಿ ಮಾಡಿತ್ತ.
ಸಮೆದ ಮಾಡಿಗಳು ನೆಲೆಗೊಳ್ಳದೆ ಹೋದವು.
ಮಹಾಲಿಂಗ ತ್ರಿಪುರಾಂತಕನ ಶರಣರೆ
ಎನ್ನೊಡೆಯರೆಂದರಿಯದೆ ಇದ್ದ ಕಾರಣ
ತೆರಹು ಮರಹಿನಲ್ಲಿ ತಾವೆಡೆಗೊಂಡವು. ॥ ೧೮ ॥

# ಕೀಲಾರದ ಭೀಮಣ್ಣನ ವಚನ

೬೭

ಇಮ್ಮನ ಪತ್ತಿಯಕಾಳ ಸುರಿದು ಪಶು ಮೇವುತ್ತಿರಲಾಗಿ
ಓಮ್ಮನವ ಮೇದು ಇಮ್ಮನ ಉಳಿಯಿತು.
ಅದ ಸುಮ್ಮಾನದಲ್ಲಿ ಕರೆಯ ಹೋಗಲಿಕೆ
ಅಂಡೆಯಲ್ಲಿ ಐಗುಳವ ಕರೆದು
ಕಂದಲಲ್ಲಿ ಸುರಿಯಲಾಗಿ ಮೂಗುಳವಾಯಿತ್ತು.
ಆ ಮೂಗುಳವ ಒಲೆಯ ದೆಸೆಯಲ್ಲಿರಿಸಲಿಕೆ
ಕಾಸೂದಕ್ಕೆ ಮುನ್ನವೆ ನಾಶವಾಯಿತ್ತು.
ಇಂತೀ ಈಶ್ವರ ವಿಶ್ವಾಸದಲ್ಲಿ ಆತ್ಮ ನಿಶ್ಚಯಿಸಲಾಗಿ
ಕಾಲಕರ್ಮವಿರಹಿತ ತ್ರಿಪುರಾಂತಕಲಿಂಗದೊಳಗಾದವನ
ಇರವು. ॥ ೧ ॥

೬೮

ಎರಡು ಮೊಲೆಯ ಪಶುವಿಂಗೆ
ಕೊಂಬು ಮೂರು, ಕಿವಿ ನಾಲ್ಕು, ಕಣ್ಣೊಂದೆ.
ಮೂರು ಮೊಲೆಯ ಪಶುವಿಂಗೆ
ಕೊಂಬು ನಾಲ್ಕು, ಕಿವಿಯೊಂದು, ಕಣ್ಣು ಮೂರು.
ನಾಲ್ಕು ಮೊಲೆಯ ಪಶುವಿಂಗೆ
ಕೊಂಬಾರು, ಕಿವಿಯೆಂಟು, ಕಣ್ಣೆರಡು.
ಒಂದು ಮೊಲೆಯ ಪಶುವಿಂಗೆ
ಕೊಂಬು ಹಿಂದೆ, ಕಿವಿ ಸಂದಿಯಲ್ಲಿ, ಕಣ್ಣು ನೆತ್ತಿಯಲ್ಲಿ,
ಮುಟ್ಟಿ ನೋಡಿ ಕರೆವವನೆಂದಡೆ
ಕೆಚ್ಚಲು ಮೊಲೆಯೊಳಗಡಗಿತ್ತು.

ಮೊಲೆಯ ಮುಟ್ಟಿ ನೋಡಿಹೆನೆಂದಡೆ ಬಟ್ಟಬಯಲು,
ಕಾಲಕರ್ಮವಿರಹಿತ ತ್ರಿಪುರಾಂತಕಲಿಂಗದೊಳಗಾಯಿತ್ತು. ॥ ೨ ॥

೬೯

ಕಂಟಕ ಬಂದಲ್ಲಿ ಸಂತೈಸಿಕೊಂಡು ಆತ್ಮನ ಸಂಚರಿಸದೆ
ನಿಷ್ಠೆಯಿಂದ ದೃಷ್ಟವ ಕಾಬುದೇ
ಶ್ರದ್ಧೆ ಸದ್ಭಕ್ತನ ಇರವು.
ವೃಥಾಳಾಪದಿಂದ ನಿಂದ, ದುರ್ಜನ ಬಂದಲ್ಲಿ
ಸಂದು ಸಂಶಯವಿಲ್ಲದೆ ಅಂಗವ ಬಂಧಿಸದೆ
ನಿಜಾತ್ಮನ ಸಂದೇಹಕಿಕ್ಕದೆ
ಪರಮಾನಂದಸ್ವರೂಪನಾಗಿ
ಬಂಧ ಮೋಕ್ಷಕರ್ಮಂಗಳ ಹರಿದಿಪ್ಪುದು
ಸರ್ವಾಂಗಲಿಂಗಿಯ ಅರಿವು.
ಅದು ಕರಿಗೊಂಡು ಎಡೆದೆರಪಿಲ್ಲದೆ
ಪರಿಪೂರ್ಣನಾದುದು ಪರಮ ವಿರಕ್ತನ ಪರಿ.
ಕಾಲಕರ್ಮವಿರಹಿತ ತ್ರಿಪುರಾಂತಕಲಿಂಗವು ತಾನಾದ
ಶರಣನ ಇರವು. ॥ ೩ ॥

೭೦

ಕರ್ಪುರದ ಹಣತೆಯಲ್ಲಿ ಬತ್ತಿಯ ಹಾಕಿ ಉರುಹಬಹುದೆ?
ಕಿಚ್ಚಿನ ಮಧ್ಯದಲ್ಲಿ ನಿಂದು ಕೆಟ್ಟಿತ್ತೆಂದು
ಹುಲ್ಲ ಸೊಪ್ಪ ಹಾಕಿ ಹೊತ್ತಿಸಬಹುದೆ?
ಅಲಗು ಕ್ರೂರವಾಯಿತ್ತೆಂದು ತನ್ನೊಡಲನಿರಿದು
ಅಲಗಿನ ಕ್ರೂರ ಸುಲಲಿತವೆನ್ನಬಹುದೆ?
ಆ ಗುಣ ಅಲ್ಲಲ್ಲಿಗೆ ದೃಷ್ಟ.
ಇದು ನಿಶ್ಚಯ ನಿಜ ಲಿಂಗಾಂಗಿಗೆ ಅರಿವಿನ ಭೇದ.
ಕಾಲಕರ್ಮವಿರಹಿತ ತ್ರಿಪುರಾಂತಕಲಿಂಗದವನ ತೆರ. ॥ ೪ ॥

೭೧

ಕಾಯವಿಕಾರವಳಿದಲ್ಲದೆ ಗುರುಸ್ಥಲಕ್ಕೆ ಸಲ್ಲ.
ಮನೋವಿಕಾರವಳಿದಲ್ಲದೆ ಲಿಂಗಪೂಜಕನಲ್ಲ.

ತ್ರಿವಿಧಮಲ ದೂರಸ್ಥನಲ್ಲದೆ ವಿರಕ್ತಭಾವಿಯಲ್ಲ.
ಇಂತೀ ಒಂದರಲ್ಲಿ ಒಂದು ಕಲೆಯಿದ್ದು ಮತ್ತೆ
ಲಿಂಗದಲ್ಲಿ ನಿಂದಲ್ಲಿ ಸನ್ಮುಕ್ತನಲ್ಲ.
ಇಂತೀ ಬಂಧ ಮೋಕ್ಷ ಕರ್ಮಂಗಳ ಬಿಟ್ಟು
ನಿಜ ಸಂದು ಸುಖಿಯಾಗಬಲ್ಲಡೆ
ಕಾಲಕರ್ಮವಿರಹಿತ ತ್ರಿಪುರಾಂತಕಲಿಂಗವು ಸಾಧ್ಯವಲ್ಲ. ॥ ೫ ॥

೭೨

ತಾ ಮಿಥ್ಯನಾದ ಮತ್ತೆ ಜಗವೆಲ್ಲವೂ ತನಗೆ ಮಿಥ್ಯ.
ತಾ ತಥ್ಯನಾದ ಮತ್ತೆ ಜಗವೆಲ್ಲವೂ ತನಗೆ ತಥ್ಯ.
ಅಂಗೈಯಲ್ಲಿ ಹಿಡಿದು ಕೈದ ನೋಡದೆ
ಅಲಗು ಕೆಟ್ಟಿತ್ತೆಂದು ಹಲಬುವನಂತಾಗದೆ
ತನ್ನ ತಾ ಮರದು ಅನ್ಯರ ದೆಸೆಯಿಂದ ತನ್ನ ಕೇಳುವನಂತಾಗದೆ
ಅರಿ ನಿಜದರಿವ ಮರೆಯದಂತೆ
ಕಾಲಕರ್ಮವಿರಹಿತ ತ್ರಿಪುರಾಂತಕಲಿಂಗದೊಳಗಾದವನ
ಇರವು. ॥ ೬ ॥

೭೩

ತೊಗಟೆಯೊಳಗಣ ಬೀಜ
ಬೀಜದೊಳಗಣ ಅಂಕುರ
ಸಾರ ಸಸಿರೂಪುದೋರದೆ ವೇಧಿಸಿಕೊಂಡಿಪ್ಪಂತೆ.
ಇಂತೀ ಕ್ರೀಯೊಳಗಣ ಭಾವ,
ಭಾವದೊಳಗಣ ಜ್ಞಾನ,
ಜ್ಞಾನದೊಳಗಣ ಅರಿವು,
ಅರಿವಿನೊಳಗಣ ನಿಜದ ಬೆಳಗಿನ ಮಹಾಕಲೆಯನೊಳಕೊಂಡು
ಘನಮಹಿಮಂಗೆ ಹಿಡಿದಹೆನೆಂಬ ಭಾವದ ಭ್ರಮೆಯಿಲ್ಲ;
ಬಿಟ್ಟಿಹೆನೆಂಬ ಕಟ್ಟಿನ ಸೂತಕವಿಲ್ಲ.
ಎಲ್ಲಿ ಬಿಟ್ಟಲ್ಲಿ ತೊಟ್ಟು ಬಿಟ್ಟ ಹಣ್ಣಿನಂತೆ
ಎಲ್ಲಿ ಮುಟ್ಟಿದಲ್ಲಿ ಕರ್ಪುರದ ಪಂಜರದಲ್ಲಿ
ಉರಿಯಗಿಳಿ ಮಾತಾಡಿದಂತೆ
ಉತ್ತರ ಮಾತಿಂಗೆ ಪ್ರತ್ಯುತ್ತರ ನಷ್ಟವಾದಂತೆ.
ಇಂತೀ ಬಟ್ಟಬಯಲ ಕಟ್ಟಕಡೆಯ ದೃಷ್ಟವಿಲ್ಲದ ನಿರ್ಲಕ್ಷ್ಯಂಗೆ

ಲಕ್ಷ್ಯಗೆಟ್ಟ ನಿಶ್ಚಯವಂತಂಗೆ,
ಯೋಮವಿಲ್ಲದ ಭಾವ ಭಾವವಿಲ್ಲದ ಜ್ಞಾನ
ಜ್ಞಾನವಿಲ್ಲದ ಶೂನ್ಯ ಶೂನ್ಯವಿಲ್ಲದ ಸುಳುಹು
ಸುಳುಹಿಲ್ಲದ ಅಖಂಡಿತನಾದ ಸರ್ವಗುಣ ಭರಿತ
ಕಾಲಕರ್ಮವಿರಹಿತ ತ್ರಿಪುರಾಂತಕಲಿಂಗವೆಂಬಲ್ಲಿ ತಾನು
ತಾನಾದ ಶರಣ. ॥ ೭ ॥

೭೪

ನಾನಾ ವರ್ಣದ ಗೋವುಗಳೆಲ್ಲವೂ ಕೂಡಿ
ಒಂದೇ ಹೊಲದಲ್ಲಿ ಮೇದು,
ಆರು ಕೆರೆಯ ನೀರ ಕುಡಿದು,
ಒಂದೇ ದಾರಿಯಲ್ಲಿ ಬಂದು,
ಮೂರು ಕೊಟ್ಟಿಗೆಯ ಗೊತ್ತಿಂಗೊಳಗಾದುವು.
ಬಿಟ್ಟು ಕರೆಯಲಾಗಿ ಗೋವಿಂಗೆ ಹಲವು,
ಹಾಲಿಗೆ ಏಕವರ್ಣ.
ಹಾಲ ತಂದು ಭಾಜನದಲ್ಲಿ ನೀಡಿ ಕಾಸುವಲ್ಲಿ
ಚಟ್ಟಿ ಹತ್ತದೆ, ಹಸುಕು ನಾರದೆ,
ಕೌರು ಏಳದೆ, ನೀರ ರಸ ತಪ್ಪಿ ಮಧುರ ರಸ ತುಂಬಿ
ಕಾಸಿ ಉಣಬಲ್ಲಡೆ ಆತನೆ ಭೋಗಿ.
ಆತ ನಿರತಿಶಯಾನುಭಾವ ಶುದ್ಧಾತ್ಮನು,
ಕಾಲಕರ್ಮವಿರಹಿತ ತ್ರಿಪುರಾತಕಲಿಂಗ ತಾನೆ. ॥ ೮ ॥

೭೫

ವ್ಯಾಧನಂತೆ ಜಾಲಗಾರನಂತೆ ಹೇಮಚೋರನಂತೆ
ಇಂತೀ ಗಾಹುಗಳ್ಳರಂತೆ ಮಾತಿನಲ್ಲಿ ಬ್ರಹ್ಮವ ನುಡಿದು
ಸರ್ವ ಸಂಸಾರದಲಿ ಏಳುತ್ತ ಮುಳುಗುತ್ತ
ಬೇವುತ್ತ ನೋವುತ್ತ ಮತ್ತೆ
ಬ್ರಹ್ಮದ ಸುಮ್ಮಾನದ ಸುಖಿಗಳೆಂತಪ್ಪರೊ?
ಇಂತು ನುಡಿಯಬಾರದು ಸಮಯವ ಬಿಡಬಾರದು ಕ್ರೀಯ
ಅರಿದು ಮರೆಯಬಾರದು ಜ್ಞಾನವ.
ಇಂತೀ ಭೇದವನರಿದು ಹರಿದವಗಲ್ಲದೆ
ಕಾಲಕರ್ಮವಿರಹಿತ ತ್ರಿಪುರಾಂತಕ ಲಿಂಗವು ಸಾಧ್ಯವಿಲ್ಲ. ॥ ೯ ॥

೭೬

ಹಲವು ಗಿರಿಗಳ ತಪ್ಪಲಲ್ಲಿ,
ಮಲೆಯ ಮಂದಿರಗಳಲ್ಲಿ
ಬಳನೆ ಬಳನೆ ಮೇದು
ಮತ್ತೆ ತಮ್ಮ ನೆಲಹೊಲಕ್ಕೆ ತಪ್ಪದೆ ಬಪ್ಪವು ನೋಡಾ.
ಆ ಪಶುವಿಂಗೆ ಕಟ್ಟು ಗೊತ್ತಿಲ್ಲ,
ಕಾವ ಕಟ್ಟಿಗೆ ಒಳಗಲ್ಲ.
ತಮ್ಮ ಠಾವಿಂಗೆ ಬಂದು ಹಾಲ ಕೊಟ್ಟು,
ಮತ್ತೆ ತಮ್ಮ ನೆಲೆಯ ಠಾವಿಗೆ ಹೋದ ಮತ್ತೆ ಕಾವಲು ತಪ್ಪಿಲ್ಲ,
ಕಾಲಕರ್ಮವಿರಹಿತ ತ್ರಿಪುರಾಂಕ ಲಿಂಗದೊಳ-
ಗಾದವಂಗೆ. ॥ ೧೦ ॥

# ಕೂಗಿನ ಮಾರಯ್ಯನ ವಚನ

೭೭

ಅಪ್ಪುವಿನ ಶಿಲೆಯ ಉಳಿಯ ಮೊನೆಯಲ್ಲಿ ಚಿತ್ರಿಸಬಹುದೇ?
ಅರಗಿನ ಘಟವ ಉರಿಯ ಮೊನೆಯಲ್ಲಿ ಅಕ್ಷರವ
ಬರೆಯಬಹುದೆ?
ಮೃತ್ತಿಕೆಯ ಹರುಗೋಲನೇರಿ ನದಿಯ ತಪ್ಪಲಿಗೆ ಹೋಗಬಹುದೆ?
ನಿಜನಿಶ್ಚಯವನರಿಯದವನ ವಾಚಾರಚನೆ ಇಷ್ಟಲ್ಲದಿಲ್ಲ.
ನಿಜತತ್ತ್ವವನರಿದವನ ವಾಚಾರಚನೆಯ ಕುರುಹೆಂತುಟೆಂದಡೆ:
ಶಿಲೆಯೊಳಗಣ ಸುರಭಿಯಂತೆ
ಪ್ರಳಯದೊಳಗಾದ ನಿಜನಿವಾಸದಂತೆ
ಆಯದ ಘಾಯದಂತೆ, ಸುಘಾಯದ ಸುಖದಂತೆ
ಇಂತೀ ಭಾವರಹಿತವಾದ ಭಾವಜ್ಞನ ತೇರ ಕೂಗಿಂಗೆ ಹೊರಗು
ಮಹಾಮಹಿಮ ಮಾರೇಶ್ವರಾ ॥ ೧ ॥

೭೮

ಖ್ಯಾತಿಲಾಭಕ್ಕೆ ಮಾಡೂದು ಎಂಬುದನರಿದು
ಭೂತಹಿತ ದಯದಾಕ್ಷಿಣ್ಯಕ್ಕೆ ಇಕ್ಕುವಾತನೆಂಬುದನರಿದು
ಮಹಿಮಾಸ್ಪದರಿಂದ ವೀರವೈರಾಗ್ಯಂಗಳಿಂದ
ಇಕ್ಕುವಾತನೆಂಬುದನರಿದು
ಮಾಡಿಕೊಂಡ ಕೃತ್ಯಕ್ಕೆ ಬಿಟ್ಟಡೆ ನುಡಿದಹರೆಂದು
ಗುತ್ತಗೆಯಲ್ಲಿ ಇಕ್ಕುವಾತನೆಂಬುದನರಿದು
ಅರ್ತಿ ತಪ್ಪದೆ ಬಾಹ್ಯದ ಭಕ್ತಿ ತಪ್ಪದೆ
ಅರ್ಚನೆ ಪೂಜನೆಗಳಲ್ಲಿ ನಿತ್ಯನೇಮ ತಪ್ಪದೆ
ಸುಚಿತ್ತ ಧರ್ಮದಲ್ಲಿ ಮಾಡುವವನರಿದು
ಇಂತೀ ವರ್ಮಧರ್ಮಂಗಳಲ್ಲಿ ಅರಿದು
ಸುಮ್ಮಾನದ ಸುಖತರದಲ್ಲಿ ಮಾಡುವ ವರ್ಮಿಗನನರಿದು

ಆರಾರ ಭಾವದ ಕಲೆಯನರಿದು,
ಗುಣವೆಂದು ಸಂಪಾದಿಸದೆ
ಅವಗುಣವೆಂದು ಭಾವದಲ್ಲಿ ಕಲೆಗೆ ನೋವ ತಾರದೆ
ಇಂತೀ ಸರ್ವಗುಣ ಸಂಪನ್ನನಾಗಿ
ಪೂಜಿಸಿಕೊಂಬ ಗುರುಪಿಂಗೆ ಚರಿಸುವ ಜಂಗಮಕ್ಕೆ
ಉಪಾಧಿ ನಷ್ಟವಾದ ವಿರಕ್ತಂಗೆ
ಕೂಗಿಂದಿತ್ತ ನಮೋ ಎಂದು ಬದುಕಿದೆ
ಮಹಾಮಹಿಮ ಮಾರೇಶ್ವರಾ. ॥ ೧ ॥

೭೯

ಚಲನೆಯ ಅಪ್ಪುವಿನ ಮೇಲೆ
ಷಡುವರ್ಣದ ಲೆಕ್ಕಣಿಕೆಯ ಕಡ್ಡಿಯಲ್ಲಿ
ಪುತ್ಥಳಿಯ ಬರೆಯಲಿಕ್ಕಾಗಿ
ಅವಯವಂಗಳ ಅಂಗಸ್ಥಾನದಲ್ಲಿ ಲಕ್ಷಿಸಿಹೆನೆನಬಹುದೆ?
ಸಂಸಾರಿಗೆ ಸಂಕಲ್ಪಿಗೆ ವಿಷಯಲಂಪಟಂಗೆ
ಜೂಜುಪೇಂಟೆ ಕದನಕರ್ಕಶಂಗೆ
ರಾಗದ್ವೇಷಿಗೆ, ತಥ್ಯಮಿಥ್ಯವ ಹೊತ್ತಾಡುವಂಗೆ, ದುರ್ವೃತ್ತಂಗೆ
ಇಂತಿವರೊಳಗಾಗಿ ಅರ್ತಿಕಾರತನದಲ್ಲಿ
ದುರ್ಮದಾಂಧಂಗೆ ಭಕ್ತಿ ಸ್ಥಲವಿಲ್ಲ.
ಕರ್ತೃಸ್ಥಲವಾದಡೂ ಗುರುತ್ವ ಅವನಿಗಿಲ್ಲ.
ವಿರಕ್ತನಾದಡೂ ನಿಜತತ್ವದ ನೆಲೆ ಅವನಿಗಿಲ್ಲ.
ಇಂತಿವನೆಲ್ಲವನುತ್ತರಿಸಿ ನಿಂದಾತಂಗಲ್ಲದೆ
ಕೂಗಿನ ಕುಲಕ್ಕೆ ಹೊರಗಲ್ಲ
ಮಹಾಮಹಿಮ ಮಾರೇಶ್ವರಾ. ॥ ೨ ॥

೮೦

ತನ್ನಲೊಂದು ಗುಣ ತೋರಲಿಕ್ಕಾಗಿ
ಆ ಗುಣವ ಇದಿರು ಕಂಡು ನುಡಿದರೆಂದು ನೋಯಲೇತಕ್ಕೆ?
ಆ ನುಡಿ ತನಗೆ ನಿರುತ್ತರವೆಂಬುದನರಿದು
ಘಾಯ ಬಾಹುಗಳಲ್ಲಿ ಶ್ರೋಣಿತ ಹೊರೆಯಲ್ಲಿ ನಿಂದಿರಲಿಕ್ಕಾಗಿ
ಘಾಳಿಸಿ ಹೊರವಡಿಸಿದಾತ ಹಗೆತನನೆಂಬುದರಿತು
ತನ್ನಲುಂಟಾದವಗುಣ ತನಗೆ ತೋರದಿರೆ

ದೃಷ್ಟವ ಕಂಡು ಹೇಳಿದ ಮತ್ತೆ ಮಿಥ್ಯಗುಣವಿಲ್ಲದೆ
ಆ ಕಷ್ಟಗುಣವ ಬಿಡಬೇಕು.
ಈ ಗುಣ ಅಂಗವಿದ್ದಲ್ಲಿ ನಿಂದೆಯ ದುರ್ಗುಣ ಸೋಂಕದಿಹವೆ?
ಅರಿಯದೆ ಸೋಂಕಿದಲ್ಲಿ ಅರಿವ ಮತ್ತೆ ತೊರೆಯಬೇಕು.
ತೋರಿವಡೆ ಕೂಗಿನ ದನಿಗೆ ಹೊರಗು
ಮಹಾಮಹಿಮ ಮಾರೇಶ್ವರಾ. ॥ ೪ ॥

೮೧

ನಾರಿಯೂ ಮರನೂ ಕೂಡಿ ಬಾಗಲಿಕ್ಕಾಗಿ
ಶರ ಚರಿಸುವುದಕ್ಕೆಡೆಯಾಯಿತ್ತು.
ಭಕ್ತಿಯೂ ವಿರಕ್ತಿಯೂ ಕೂಡಲಿಕ್ಕಾಗಿ
ವಸ್ತುವನರಿವುದಕ್ಕೆ ಒಡಲಾಯಿತ್ತು.
ಆ ವಸ್ತು ತ್ರಿಕರಣವ ವೇದಿಸಿದ ಮತ್ತೆ ತ್ರಿಗುಣ ನಷ್ಟ.
ಆ ನಷ್ಟದಲ್ಲಿ ಪಂಚೇಂದ್ರಿಯ ನಾಶನ,
ಸಪ್ತಧಾತು ವಿಸರ್ಜನ, ಅಷ್ಟಮದ ಹುಟ್ಟುಗೆಟ್ಟಿತ್ತು,
ಹದಿನಾರು ತೊಟ್ಟುಬಿಟ್ಟಿತ್ತು, ಇಪ್ಪತ್ತೈದರ ಬಟ್ಟೆ ಕೆಟ್ಟಿತ್ತು,
ಸದ್ಭಾವದ ನಿಷ್ಠೆ ನಷ್ಟವಾಯಿತ್ತು.
ಇಂತಿವರೊಳಗಾದ ಕುಲವಾಸನೆ ಹೊಲಬುಗೆಟ್ಟಿತ್ತು.
ನಾನಾರೆಂಬುದ ತಿಳಿದಲ್ಲಿ
ಕೂಗಿನ ಕುಲಕ್ಕೆ ಹೊರಗಾಯಿತ್ತು
ಮಹಾಮಹಿಮ ಮಾರೇಶ್ವರನನರಿಯಲಾಗಿ. ॥ ೫ ॥

೮೨

ಬಯಲೊಳಗಣ ರೂಪು, ರೂಪಿನೊಳಗಣ ಬಯಲು
ಉಭಯವ ವಿಚಾರಿಸಿ ನೋಡುವಲ್ಲಿ
ಕುಂಭದೊಳಗೆ ನೀರ ತುಂಬಿ, ಸಿಂಧುವಿನೊಳಗೆ ಮುಳುಗಿಸಲಾಗಿ
ಅದರೊಳಗೂ ನೀರು, ಹೊರಗೂ ನೀರು.
ಹೊರಗಣ ನೀರು ಒಳಗಾಯಿತ್ತು, ಒಳಗಣ ನೀರು
ಹೊರಗಾಯಿತ್ತು.
ಕುಂಭದೊಳಗಣ ನೀರು ಅಂಗಕ್ಕೊ ಒಳಗೊ ಹೊರಗೊ
ಎಂಬುದು ತಿಳಿಯದು.
ಅಂಗದ ಮೇಲಿಹ ಲಿಂಗ, ಲಿಂಗವ ಧರಿಸಿದ ಅಂಗ
ಅರಿವಿನ ಕುರುಹಿಂಗೆ ಒಳಗೊ ಹೊರಗೊ ಎಂಬುವ ವಿಚಾರಿಸಿ
ಕರ್ಪೂರದ ಹಾಗೊಲೆಯಲಿ ಮೃತ್ತಿಕೆಯ ಕುಂಭವನಿರಿಸಿ

ಕಿಚ್ಚಹಾಕಿ ಒಗರವನಡಲಿಕ್ಕಾಗಿ
ಒಲೆ ಉರಿಯದ ಮುನ್ನವೆ ಒಗರ ಬೆಂದು
ಕರ್ಪೂರದ ಹಾಗೆ ಒಲೆಯೊಳಗೆ ಉಭಯ ಬಯಲಾಗಿ
ಮಡಕೆ ಉಳಿಯಿತ್ತದೇತಕ್ಕೆ?
ಘಟ ಉಳಿದು ಆತ್ಮ ಬಯಲಾಯಿತದೇತಕ್ಕೆ?
ಉಭಯ ನಿರತವಾದಲ್ಲಿ
ಉರಿಯಿಂದ ಕರ್ಪೂರ ನಷ್ಟವಾದ,
ಕರ್ಪೂರದಿಂದ ಉರಿ ನಷ್ಟವಾದಂತೆ
ಇಂತೀ ಉಭಯಸ್ಥಲದೊಳಗು
ಅಂಗಲಿಂಗ ಪ್ರಾಣಲಿಂಗ ಉಭಯವನೊಂದು ಮಾಡಿ ತಿಳಿದು
ನಿಜದಲ್ಲಿ ನಿಂದ ಲಿಂಗಾಂಗಿಗೆ ಕೂಗಿನ ಕುಲವಿಲ್ಲ
ಮಹಾಮಹಿಮ ಮಾರೇಶ್ವರಾ. ॥ ೬ ॥

೮೩

ಲಿಂಗಕ್ಕೆ ಹೊರೆಯಲ್ಲದೆ
ನಿಜಶಿಲೆಯ ದೀಪ್ತಿಯ ತರಂಗಕ್ಕೆ ಹೊರೆ ಹೊರೆಯುಂಟೆ?
ಸಂಸಾರಿಗೆ ಪ್ರಕೃತಿ ರಾಗದ್ವೇಷಂಗಳಲ್ಲದೆ
ಮನವು ಮಹದಲ್ಲಿ ನಿಂದ ನಿಜಲಿಂಗಾಂಗಿಗೆ
ಈ ಉಭಯದ ಸಂದುಂಟೆ?
ಈ ಗುಣವಂಗಲಿಂಗಾಂಗಿಯ ಸಂಗ
ಮಹಾಮಹಿಮ ಮಾರೇಶ್ವರಾ. ॥ ೭ ॥

೮೪

ಭಕ್ತಂಗೆ ಮಹಿಮೆ ಮಾಹೇಶ್ವರಂಗೆ ದೃಷ್ಟ
ಪ್ರಸಾದಿಗೆ ನಿಷ್ಠೆ ಪ್ರಾಣಲಿಂಗಿಗೆ ಅವಧಾನ
ಶರಣಂಗೆ ಸರ್ವಗುಣ ಸಂತೋಷ
ಐಕ್ಯಂಗೆ ಪರಿಪೂರ್ಣತ್ವ
-ಇಂತೀ ಷಡುಸ್ಥಲವನಾಧರಿಸಿ ನಡೆವಲ್ಲಿ
ಹುಸಿ ಕೊಲೆ ಕುಹಕ ಕ್ಷುದ್ರ ಅಟಮಟ ಠಕ್ಕು ಠವಾಳ
ಪಿಸುಣತ್ವ ಅಸತ್ಯ ವಿಶ್ವಾಸಘಾತಕ ಪರವಧು ಪರಾಪೇಕ್ಷೆ

ಪರನಿಂದೆ

ಇಂತಿವರೊಳಗಾದ ನಾನಾ ಬಂಧವ ಬಿಟ್ಟು
ನಿಂದ ಸ್ಥಲಕ್ಕೆ ಸಂದುಸಂಶಯವಿಲ್ಲದೆ
ಅರ್ತಿಗಾರಿಕೆಯಲ್ಲಿ ಮತ್ತೊಂದುವ ಹಿಡಿಯದೆ
ಲೆತ್ತ ಚದುರಂಗ ಪಗಡೆ ಪಗುಡಿ ಪರಿಹಾಸಕರಲ್ಲಿ
ಚಚ್ಚಗೋಷ್ಠಿಯಲ್ಲಿ ನಿಲ್ಲದೆ
ನಿತ್ಯನೇಮಂಗಳ, ಸತ್ತು ಚಿತ್ತು ಆನಂದಗಳೆಂಬ ತ್ರಿವಿಧಮಂ ತಿಳಿದು
ನಿಂದ ನಿಶ್ಚಿಂತರಲ್ಲಿ ಸರ್ವಸಂಗ ಪರಿತ್ಯಾಗವ ಮಾಡಿ
ನಿಂದ ನಿರಂಗಿಗಳಲ್ಲಿ ಲಿಂಗಾರ್ಚನೆ ಪೂಜೆ
ತಪ್ಪದೆ ಮಾಡುವ ನಿಶ್ಚಿಂತರಲ್ಲಿ
ಜಪತಪನೇಮ ನಿತ್ಯ ತತ್ಕಾಲವನರಿವ ಸಾವಧಾನಿಗಳಲ್ಲಿ
ಎರಡಿಲ್ಲದೆ ಕೂಡೂದು ಸದ್ಭಾವವಂತನ ಸಂಬಂಧ.
ಆತ ಕೂಗಿಂಗೆ ಹೊರಗು
ಮಹಾಮಹಿಮ ಮಾರೇಶ್ವರಾ. ॥ ೮ ॥

೮೫

ಮಹಿಮೆ ರುದ್ರನ ಹಂಗು,
ಧ್ಯಾನ ಈಶ್ವರನ ಹಂಗು,
ಜ್ಞಾನ ಸದಾಶಿವನ ಹಂಗು.
ಇಂತೀ ಒಂದರ ಹಂಗಿನಲ್ಲಿ ಒಂದನರಿದು
ಒಂದ ಕಾಣಿಸಿಕೊಂಡು, ಒಂದ ನಿಧಾನಿಸಿಕೊಂಡು
ಒಂದರಲ್ಲಿ ಹೆರೆಹಿಂಗದೆ ನಿಂದುದು ತ್ರಿವಿಧ ಸಂಗದ ಸಗುಣ
ಇಂತೀ ತ್ರಿವಿಧವನೊಂದುಗೂಡಿ
ಕರ್ಪೂರದ ಸುವಾಸನೆ ಕಿಚ್ಚಿನ ತಪ್ಪಲಲ್ಲಿಯೇ ನಷ್ಟವಾದಂತೆ.
ಇಂತೀ ತಾ ದೃಷ್ಟದಲ್ಲಿ ಲಕ್ಷಿಸಿ
ಅಲಕ್ಷ್ಯವಾದುದು ಕೂಗಿನ ಹೊರಗು
ಮಹಾಮಹಿಮ ಮಾರೇಶ್ವರಾ. ॥ ೯ ॥

೮೬

ಮುಗ್ಧ ಮೂಢ ಕುಬ್ಜ ಕುಷ್ಟ ಅಂಧಕ ಪಂಗುಳ ನಪುಂಸಕ
ಇಂತೀ ಮುಕ್ತಿಹೀನರ ದೈವವೆಂದು
ಇಕ್ಕಿ ಎರೆದು ಕೊಟ್ಟು ಕೊಂಡು ಮಾಡುವಾತ ಭಕ್ತನಲ್ಲ.
ಅದು ಧಾತೃವರ್ಧನ ಸಂಬಂಧ.
ಭಕ್ತಿಯಿಂದ ಮಾಡುವಲ್ಲಿ
ತ್ರಿವಿಧ ಮಲವ ಹರಿದವನ,

ತ್ರಿಗುಣ ಗುಣವರತವನ,
ತ್ರಿಗುಣಾತ್ಮಕ ಭೇದಕನ;
ಸರ್ವಸಂಗ ಪರಿತ್ಯಾಗವ ಮಾಡಿದ ಪರಮ ವಿರಕ್ತನ
ತಥ್ಯ ಮಿಥ್ಯ ರಾಗದ್ವೇಷಂಗಳ
ಸ್ವಪ್ನದೊಳಗೂ ಅರಿಯದವನ
ಆತ ಗುರುವೆಂದು, ಆತ ಚರವೆಂದು ನಲಿದು
ಮನ ಮುಕ್ತವಾಗಿ ಮಾಡುತ್ತಿರಬೇಕು.
ಇದು ಸದ್ಭಕ್ತರ ಅರಿವಿನ ಕುರುಹಿನ ಮಾಟ.
ಆತ ವ್ಯಾಪಾರದ ಕೂಗಿನ ದನಿಗೆ ಹೊರಗು
ಮಹಾಮಹಿಮ ಮಾರೇಶ್ವರಾ. ॥ ೧೦ ॥

೮೭

ವಂದಿಸಿ ನಿಂದಿಸಿ ಮತ್ತೆ ಅದಾರಿಂಗೆ ಕೇಡೆಂಬುದನರಿತು
ತಾ ನೋಯಲೇತಕೆ?
ಕಟ್ಟಿದ ತಟಾಕವನೊಡೆಯ ಕುಕ್ಕಿದ ಮತ್ತೆ
ಆರನುಭವದ ನಷ್ಟ ಅದಾರಿಗೆ ಹೇಳಾ?
ಭೂಮಿಯ ಬಡತನಕ್ಕೆ ಬೀಜವಿಲ್ಲ
ಪತ್ರಭಾಜನ ಹಸಿಯಿತ್ತೆಂದು ಓಗರವಿಲ್ಲ.
ಮಾಟಕೂಟದಲ್ಲಿ ಇಕ್ಕಿ ಎರೆದು ಕೊಟ್ಟು ಕೊಂಡು
ಚಿತ್ತ ಶುದ್ಧವಿಲ್ಲಾಯೆಂದು ನುಡಿಯಲೇತಕ್ಕೆ?
ಬೆಳೆದ ಬೆಳಸ ಕಳದಲ್ಲಿ ಕಡೆಗಾಣಿಸಿದ ಮತ್ತೆ
ಹೋದ ಹೊಲಬ ಬಳಸಲೇತಕ್ಕೆ ತನ್ನ ತಾನರಿದು?
ಜಗ ತನಗನ್ಯವಿಲ್ಲೆಂದು ಅರಿದ ಮತ್ತೆ
ಪ್ರತಿಮೂದಲೆಗೊಡಲಿಲ್ಲ.
ಆತ ಉಭಯ ಶುದ್ಧಾತ್ಮನು.
ತ್ರಿಗುಣರಹಿತನು, ತ್ರಿಗುಣಾತ್ಮಭರಿತನು.
ಆತ ಕೂಗಿನ ದನಿಗೆ ಹೊರಗು
ಮಹಾಮಹಿಮ ಮಾರೇಶ್ವರಾ. ॥ ೧೧ ॥

# ಕೊಟಾರದ ಸೋಮಣ್ಣನ ವಚನ

೭೮

ವಿಭೂತಿ ರುದ್ರಾಕ್ಷಿಯ ಧರಿಸಿ ಷಡಕ್ಷರಿಯಂ ಜಪಿಸಿ
ಗುರು ಲಿಂಗ ಜಂಗಮದ ಆದ್ಯಂತವನರಿಯದೆ
ಏನೆಂದು ಪೂಜಿಸುವಿರಿ, ಆರಾಧಿಸುವಿರಿ?
ಅದೆಂತೆಂದಡೆ:
ನೆಲದ ಮೇಲಣ ಶಿಲೆಯ ಕಲ್ಲುಕುಟಿಕ ಕಡಿದು ಖಂಡಿಸಿ
ಹರದನ ಕೈಯಲ್ಲಿ ಕೊಟ್ಟು ಮಾರಿಸಿಕೊಂಡುದು
ಲಿಂಗವಾದ ಪರಿ ಹೇಂಗೆ?
ಸಕಲ ವ್ಯಾಪಾರ ಅಳುವಿಂಗೆ ಒಳಗಾಗಿ
ತೊಡಿಸಿ ಬರೆಸಿಕೊಂಡುದು ಮಂತ್ರವಾದ ಪರಿ ಹೇಂಗೆ?
ಅಜ್ಞಾನಿ ಮೃಗ ಪಶುವಿನ ಸಗಣೆಯ ಸುಟ್ಟುದು
ವಿಭೂತಿಯಾದ ಪರಿ ಹೇಂಗೆ?
ಪಂಚಭೂತಿಕದಿಂದ ಜನಿಸಿದ ವೃಕ್ಷದ ಫಲ
ರುದ್ರಾಕ್ಷಿಯಾದ ಪರಿ ಹೇಂಗೆ?
ಸಕಲ ಜೀವವೆಂಿಸಿ ಕರಗಿದ ಅಸಿಯ ಜಲ ತೀರ್ಥವಾದ
ಪರಿ ಹೇಂಗೆ?
ಸಕಲ ಪ್ರಾಣಿಗಳಾಹಾರ ಹದಿನೆಂಟು ಧಾನ್ಯ ಕ್ಷುಧಾಗ್ನಿಯಲ್ಲಿ
ಜನಿಸಿ ಪಚನವಾದುದು ಪ್ರಸಾದವಾದ ಪರಿ ಹೇಂಗೆ?
ಅದೆಂತೆಂಡೆ:

ನಿಗಮ ಶಾಸ್ತ್ರಕ್ಕೆ ಅಗಣಿತವಾದ ನಾದಬಿಂದುವಿಗೆ
ನಿಲುಕದ ನಿತ್ಯತೃಪ್ತ ಪರಂಜ್ಯೋತಿಲಿಂಗದ ವೈಭವಕ್ಕೆ
ಅಂಗವಾದುದು ಈ ಗುರುವಲ್ಲಾ ಎಂದು ಅರಿದು
ಆ ಲಿಂಗದ ಚೈತನ್ಯ ಈ ಲಿಂಗವಲ್ಲಾ ಎಂದು ಅರಿದು
ಮಾಡೂದು ತನು ಮನ ಧನ ವಂಚನೆಯಳಿಮು.
ಗುರುಭಕ್ತಿ ಸನ್ನಿಹಿತವಾಗಿ ಆ ಲಿಂಗದ ವದನ ಈ
ಜಂಗಮವಲಾ

ಎಂದರಿದು ಮಾಡೂದು ಆ ತನು ಮನ ಧನ ವಂಚನೆಯಳಿದು.
ಜಂಗಮಭಕ್ತಿ ಸನ್ನಿಹಿತವಾಗಿ ಆ ಲಿಂಗದ ಕಾಯಕಾಂತಿಯ
ಬೆಳಗಿನ ಐಶ್ವರಿಯಲ್ಲ ಎಂದರಿದು ಧರಿಸೂದು ಶ್ರೀ ವಿಭೂತಿಯ.
ಆ ಲಿಂಗದ ಶೃಂಗಾರದ ಹರಭರಣವಲಾ ಎಂದರಿದು
ಅಳವಡಿಸೂದು ರುದ್ರಾಕ್ಷಿಯನು.
ಆ ಲಿಂಗದ ಉತ್ತುಂಗ ಕಿರಣಚರಣಾಂಬುಜವಲಾ ಎಂದು
ಧರಿಸೂದು, ಕೊಂಬುದು ಪಾದೋದಕವನು.
ಆ ಲಿಂಗದ ನಿತ್ಯಪದ ಸಂಯೋಗ ಶೇಷವ ತಾ ಎಂದರಿದು
ಕೊಂಬುದು ಪ್ರಸಾದವನು.
ಇಂತಿವೆಲ್ಲವನರಿದುದಕ್ಕೆ ಸಂತೋಷವಾಗಿ ಚರಿಸುವಾತನೆ ಸದ್ಭಕ್ತ.
ಆತನ ಕಾಯ ಕರಣ ಪ್ರಾಣ ಭಾವಾದಿಗಳು ಸೋಂಕಿದೆಲ್ಲವೂ
ಲಿಂಗದ ಸೋಂಕು, ಲಿಂಗದ ಕ್ರೀ, ಲಿಂಗದ ದಾಸೋಹ.
ಇಂತೀ ತ್ರಿವಿಧವ ಸವೆದು ಅಳಿದುಳಿದ ಸದ್ಭಕ್ತನ ಶ್ರೀಪಾದಕ್ಕೆ
ನಮೋ ನಮೋ ಎಂಬೆನು ಕಾಣಾ,
ಬಸವಣ್ಣಪ್ರಿಯ ನಿಃಕಳಂಕ ಸೋಮೇಶ್ವರನೆ. ॥ ೧ ॥

## ಕೋಲ ಶಾಂತಯ್ಯನ ವಚನ

೮೯

ಇಷ್ಟ ಪ್ರಾಣವ ಸಂಬಂಧಿಸಬೇಕೆಂಬರು.
ಪ್ರಾಣ ಇಷ್ಟದಲ್ಲಿ ನಿಂದ ಮತ್ತೆ ಕಾಯದ ಸುಳುಹುಂಟೆ?
ಇಷ್ಟದ ಕಳೆ ಪ್ರಾಣದಲ್ಲಿ ನಿಂದ ಮತ್ತೆ
ಇಷ್ಟವ ಮುಟ್ಟಿ ಪೂಜಿಸುವ ಪರಿಯಿನ್ನೆಂತೊ?
ಉಭಯದ ಘಟ ಬಿದ್ದಲ್ಲಿ ಅರಿವೆಲ್ಲಿ ನಿಂದಿತ್ತು?
ಅಲ್ಲಿ ಶೂನ್ಯಕ್ಕೆ ಸುಳುಹುಂಟೆ?
ಇದು ಅವಿದ್ಯರ ಮತ, ವಿದ್ಯರ ಮತವಲ್ಲ;
ಪುಣ್ಯಾರಣ್ಯವಹನ ಭೀಮೇಶ್ವರಲಿಂಗ ನಿರಂಗಸಂಗ. ॥ ೧ ॥

೯೦

ಬಿತ್ತು ಅಂಕುರವ ನುಂಗಿಪ್ಪಾಗ
ಅಂಕುರ ಆ ಬಿತ್ತ ತನ್ನಯ ಸಂಕೇತದಲ್ಲಿ ಇರಿಸಿಕೊಂಡು ಇಹಾಗೆ
ಉಭಯದ ಭೇದ ಎಲ್ಲಿ ಅಡಗಿತ್ತು ಹೇಳಿರಣ್ಣಾ.
ಅರುಹಿಸಿಕೊಂಬ ಕುರುಹು; ಆ ಅರುಹಿನಲ್ಲಿ ಕುರುಹಿನ ಕಳೆ
ನಿಂದ ತೆರಪಾವುದು?
ಅರುಹಿಸಿಕೊಂಬ ಅರಿವು ತೋರಿಸಿಕೊಂಬ ಕುರುಹಿನ ಕಳೆ
ಬೇರೊಂದೆಡೆ ತೆರಪಿಲ್ಲ, ಅದು ತಾನೆ ನಿಶ್ಚಯ;
ಪುಣ್ಯಾರಣ್ಯದಹನ ಭೀಮೇಶ್ವರಲಿಂಗ ನಿರಂಗಸಂಗ. ॥ ೨ ॥

೯೧

ಒಂದು ಯೋನಿಯಲ್ಲಿ ಬಂದ ಮಕ್ಕಳ ವಿವರ:
ಕಡೆ ನಡು ಮೊದಲೆಂದು ಕುರುಹಿಟ್ಟು ಕರೆದಡೆ ನುಡಿವಂತೆ
ಅವರ ಪರಿ.
ನಾಮಧೇಯದಲ್ಲಿ ಕರೆವಡೆ ಓ ಎಂಬಂತೆ ಅದು ಏಕರೂಪು.

ಸರ್ವಮಯನಾಗಿ ಸಂಪದಕ್ಕೆ ಬಂದುದನರಿ;
ಪುಣ್ಯಾರಣ್ಯದಹನ ಭೀಮೇಶ್ವರಲಿಂಗ ನಿರಂಗಸಂಗ. ॥ ೩ ॥

೯೨

ಭಕ್ತಿಜ್ಞಾನ ವೈರಾಗ್ಯದಿಂದ ಅರಿಯಬೇಕೆಂಬುದು
ಭಕ್ತಿಯೊ ಜ್ಞಾನವೊ ವೈರಾಗ್ಯವೊ?
ಮೋಕ್ಷಕ್ಕೆ ಬೇರೊಂದೆಡೆಯುಂಟೆ?
ಅದರ ಎಡೆ ಗುಡಿಯ ತೋರು,
ಬರಿಯ ಮಾತಿನ ಮಾಲೆ ಬೇಡ
ಪುಣ್ಯಾರಣ್ಯದಹನ ಭೀಮೇಶ್ವರಲಿಂಗ ನಿರಂಗಸಂಗ. ॥ ೪ ॥

೯೩

ಸ್ಥಳಕುಳವನೆತ್ತಿದಲ್ಲಿ ಸಮಯಕ್ಕೆ ದೂರ.
ಚಿಹ್ನೆನ ಭೇದ ಭೇದಾಂತವನೆತ್ತಿದಲ್ಲಿ ಅಧ್ಯಾತ್ಮಕ್ಕೆ ದೂರ.
ಸರ್ವವು ಸಮವೆಂದಡೆ ವಿಧಿ ನಿಷೇಧ
ಕಾಲಕರ್ಮಕ್ಕೊಳಗಹರುಂಟು.
ಇದು ತನ್ನೊಪ್ಪದ ದರ್ಪಣದಂತೆ;
ಪುಣ್ಯಾರಣ್ಯದಹನ ಭೀಮೇಶ್ವರಲಿಂಗ ನಿರಂಗಸಂಗ. ॥ ೫ ॥

೯೪

ಮೂಲದ ಪೊಳೆಯ ಮುರಿದಲ್ಲಿ
ಬೇರೊಂದು ಮರ ಶಾಖೆ ಫಲವುಂಟೆ?
ಅರಿವು ಸಂಬಂಧ ನೆರೆ ನಿಂದಲ್ಲಿ
ಕ್ರಿಯೆ ನೆರೆ ಮಾಡುವುದಕ್ಕೆ ಬೇರೊಂದೂಡಲುಂಟೆ?
ತನ್ನಯ  ಶಂಕೆ ಅನ್ಯರ ಮಚ್ಚು ಇದು ಭಿನ್ನಭಾವ;
ಪುಣ್ಯಾರಣ್ಯದಹನ ಭೀಮೇಶ್ವರಲಿಂಗ ನಿರಂಗಸಂಗ. ॥ ೬ ॥

೯೫

ಧರೆ ಸಲಿಲ ಅನಲ ರವಿ ಶಶಿ ಜಗಸೂತ್ರವೆಲ್ಲಕ್ಕೂ ಸರಿ.
ಅರಿದವನ ಚಿತ್ತದ ದಯ ಸರ್ವಪ್ರಾಣಿಗಳಿಗೂ ಸರಿ.
ದಯ ವಿಶ್ರಾಂತಿ ಇದು ಮಿಥ್ಯವಲ್ಲದೆ ತಥ್ಯವಲ್ಲದ

ದಂತಶೂಕ ಶಿಲೆಯಲ್ಲಿ ನಿಂದಂತಾಗಬೇಡ, ನಿನ್ನ ನೀನರಿ,
ಪುಣ್ಯಾರಣ್ಯದಹನ ಭೀಮೇಶ್ವರಲಿಂಗ ನಿರಂಗಸಂಗ. ॥ ೭ ॥

೯೭

ಮರುತ ಸಂಚಾರಿಸಿದಲ್ಲಿ ಲಘುತೃಣ ಪರ್ಣ
ಅದುಗೂಡಿ ಸಂಭವಿಸಿದಾಗ
ಅದರ ಆತ್ಮಗೂಡಿ ತಾ ಒಂದಾಗಿರೆ
ಸಂಚಾರ ಹಿಂದೆ ತಾವು ಮುನ್ನಿನಂದದಿ ಹಿಂಗಿರೆ
ಆತ್ಮಂಗೆ ಬಂಧ ಮೋಕ್ಷ ಎಲ್ಲಿಯದೆಂದೆ.
ಅದು ನಿಂದ ಠಾವ ಹೇಳಿ ಎನ್ನ ಚಿತ್ತದ ಬಂಧವ ಬಿಡಿಸು
ಪುಣ್ಯಾರಣ್ಯದಹನ ಭೀಮೇಶ್ವರಲಿಂಗ ನಿರಂಗಸಂಗ. ॥ ೮ ॥

೯೭

ಪೃಥ್ವಿ ಪೃಥ್ವಿಯ ಕೂಡಿದಲ್ಲಿ
ಅಪ್ಪು ಅಪ್ಪುವ ಕೂಡಿದಲ್ಲಿ
ತೇಜ ತೇಜವ ಕೂಡಿದಲ್ಲಿ
ವಾಯು ವಾಯುವ ಕೂಡಿದಲ್ಲಿ
ಆಕಾಶ ಆಕಾಶವ ಕೂಡಿ ನಿಂದಲ್ಲಿ
ಜೀವನ ಪಾಪ ಪುಣ್ಯವಾವುದು ಹೇಳಿರಣ್ಣಾ.
ಜೀವಕೆ ಭವ ಕಾಯಕ್ಕೆ ಮರಣವೆಂಬರು.
ಕಾಯ ಜೀವದ ಬೆಸುಗೆ ಅದಾವುದು ಹೇಳಿರಣ್ಣಾ.
ಒಡೆಹಂಚ ಹೊಯಿದಡೆ ದನಿ ಭಿನ್ನವಾದಂತೆ
ಅದಾರಿಂದ ಉಭಯ ಭಿನ್ನ ಹೇಳಿರಣ್ಣಾ.
ಅದು ಕಂಚಿನ ಕಾಯದಿಂದಲೊ, ನಾದದ ಪ್ರಕೃತಿಯಿಂದಲೊ?
ವಾಗದ್ವೈತದ ಸಂಬಂಧವಲ್ಲ, ಸ್ವಯದ ನಿಜ.
ನಿನ್ನ ನೀನರಿ, ಪುಣ್ಯಾರಣ್ಯದಹನ ಭೀಮೇಶ್ವರಲಿಂಗ
ನಿರಂಗಸಂಗ. ॥ ೯ ॥

೯೮

ಹೇಮ ಬಣ್ಣವ ಕೂಡಿದ ದಸಯಿಂದ
ಮರ್ತ್ಯರುಗಳಿಗೆ ಆಗುಚೇಗೆಗಳಿಗೀಡಾಯಿತ್ತು.
ದಿವ್ಯ ನಿರಂಜನ ನಿಜವಸ್ತು ಭವ್ಯರ ಭಕ್ತಿಗಾಗಿ

ಶಕ್ತಿ ನಾಮರೂಪವಾಗಿ ತಲ್ಲೀಯವಾಗಲ್ಪಟ್ಟುದು,
ಶಕ್ತಿ ಸಮೇತವಾಗಿ ಲಿಂಗವಾಯಿತ್ತು.
ಅದು ರಂಜನೆಯ ಬಣ್ಣ, ಮಾಯದ ಗನ್ನ,
ಅಂಬರದ ಚಾಪದ ಸಂಚದ ವಸ್ತು.
ಮುನ್ನಿನಂತೆ ನಿನ್ನ ನೀನರಿ,
ಪುಣ್ಯಾರಣ್ಯದಹನ ಭೀಮೇಶ್ವರಲಿಂಗ ನಿರಂಗಸಂಗ. ॥ ೧೦ ॥

೯೯

ಆರು ಸ್ಥಲವನರಿದು ಮೂರು ಸ್ಥಲವ ಮುಟ್ಟಿ,
ಮೂವತ್ತಾರು ಸ್ಥಲವ ಕೂಡಿ,
ಇಪ್ಪತ್ತೈದು ಸ್ಥಲದಲ್ಲಿ ನಿಂದು,
ನೂರೊಂದರಲ್ಲಿ ಸಂಗವ ಮಾಡಿ ಬೇರೆ ನೆಲೆಗಳೆದು ನಿಂದಲ್ಲಿ,
ಕಾಯ ಜೀವದ ಬಂಧ ಅದೇತರಿಂದ ನಿಂದಿತ್ತೆಂದರಿ ನಿನ್ನ ನೀನೆ,
ಪುಣ್ಯಾರಣ್ಯದಹನ ಭೀಮೇಶ್ವರಲಿಂಗ ನಿರಂಗಸಂಗ. ॥ ೧೧ ॥

೧೦೦

ಶಾಸ್ತ್ರವೆ ಅಡ್ಡಣಿಗೆಯಾಗಿ, ಆಗಮವೆ ಪರಿವಾಣವಾಗಿ,
ಪುರಾಣವೆ ಓಗರವಾಗಿ, ಉಂಬಾತ ವೇದವಾಗಿ,
ಸಕಲ ರುಚಿಯನರಿದು ಭೋಗಿಸುವ ಪ್ರಣವ ತಾನಾಗಿ,
ಅದರ ಭೇದ ಏತರಿಂದ ಅಳಿವು ಉಳಿವು? ನಿನ್ನ ನೀನರಿ,
ಪುಣ್ಯಾರಣ್ಯದಹನ ಭೀಮೇಶ್ವರಲಿಂಗ ನಿರಂಗಸಂಗ. ॥ ೧೨ ॥

೧೦೧

ಆತ್ಮತತ್ವ ವಸ್ತುವಾದಡೆ ನಾನಾ ಘಟದಲ್ಲಿ ಇರಲೇಕೆ?
ಆ ಘಟ ವಸ್ತುವ ಗರ್ಭೀಕರಿಸಿದಲ್ಲಿ ಪಂಚಭೌತಿಕಕ್ಕೆ
ಒಡಲಾಗಲೇಕೆ?
ಹಿಡಿಯಬಾರದು, ಹಿಡಿದು ಬಿಡಬಾರದು.
ಒಡಲು ದಿಟವೆಂದಡೆ ಅದು ಒಡೆಯ ಹಾಕುವ ಕುಂಭ.
ಒಡಲೊಡೆಯ ದಿಟವೆಂದಡೆ ರೂಪಿಲ್ಲದ ಛಾಯ.
ಅರಿದು ಮುಕ್ತಿಯ ತೆರನಾವುದು?
ಪುಣ್ಯಾರಣ್ಯದಹನ ಭೀಮೇಶ್ವರಲಿಂಗ ನಿರಂಗಸಂಗ. ॥ ೧೩ ॥

## ಆತ್ಮಘಟ ಸಂಗ ನಿರಿಯಾಣಯೋಗ ಭಾವಸ್ಥಲ:

೧೦೨

ಮೂರು ಮೊಲೆಯನುಂಡು ಬಂದವ,
ಈರೈದು ಕಂಡು ಬಂದವ ನೀನಾರು ಹೇಳಾ?
ಸಂದಿಲ್ಲದ ಪಟ್ಟಣದಲ್ಲಿ ಬಂದು ನೊಂದೆಯಲ್ಲ!
ಅಂದಿನ ಬೆಂಬಳಿಯ ಮರೆದು ಇಂದಿನ ಸಂದೇಹಕ್ಕೊಡಲಾಗಿ,
ಈ ಉಭಯದ ಸಂದ ನಿನ್ನ ನೀನರಿ,
ಪುಣ್ಯಾರಣ್ಯದಹನ ಭೀಮೇಶ್ವರಲಿಂಗ ನಿರಂಗಸಂಗ ॥ ೧೪ ॥

೧೦೩

ಜಲದುಡುಕೆಯ ತುಂಬಿ ಮೊಲೆನೀರ ಮೀಹವರೆಲ್ಲರು
ಅಮಲನ ಗುಣ ನೇಮದ ಮಾತಾಡಲೇಕೆ?
ಸುಮನೆಯ ಸುಖದೊಳಗೆ ಲಯವಹರೆಲ್ಲರು.
ಆ ಸುಮನನ ಭಾವವ ವಿಘಟಿಸುವ ಪರಿಯಿನ್ನಾವುದು?
ಬಾಲೆ ಭವಕ್ಕೆ ಬೀಜ.
ನಿರ್ಗತಿ ನಾಮರೂಪಿಲ್ಲ.
ಇಂತೀ ಭೇದವ ನಿನ್ನ ನೀನರಿ,
ಪುಣ್ಯಾರಣ್ಯದಹನ ಭೀಮೇಶ್ವರಲಿಂಗ ನಿರಂಗಸಂಗ. ॥ ೧೫ ॥

೧೦೪

ಮಲೆಯ ಮಂದಿರದ ಕಾಳವ್ವೆಯ ಉದರದಲ್ಲಿ
ಮೂವರು ಪುರೋಹಿತರು ಬಂದರು.
ಒಬ್ಬ ಇಹದಲ್ಲಿ ಗುಣವ ಬಲ್ಲವ;
ಒಬ್ಬ ಪರದಲ್ಲಿ ಗುಣವ ಬಲ್ಲವ;
ಮತ್ತೊಬ್ಬ ಇಹಪರ ಉಭಯ ತಾ ಸಹಿತಾಗಿ
ಮೂರ ನೆನೆದು ಅರಿಯ.
ಅರಿಯದವನ ತೋಳಿನ ಕೊಡಗೂಸು,
ಕಾಳವ್ವೆಯ ಕತ್ತಲೆಯಲ್ಲಿ ತಳ್ಳಿ, ಮಲೆಗೆ ಕಿಚ್ಚ ಹಚ್ಚಿ,
ಮಂದಿರವ ಹಿರಿದುಹಾಕಿ, ಪುರೋಹಿತರ ಕಣ್ಣ ಕಳೆದು
ಕೊಡಗೂಸು ಕೊಡನೊಳಗಾದಳು.

ಇಂತಿವರಡಿಯ ಭೇದವನರಿ
ಪುಣ್ಯಾರಣ್ಯದಹನ ಭೀಮೇಶ್ವರಲಿಂಗ ನಿರಂಗಸಂಗ. ॥ ೧೬ ॥

೧೦೫

ಒತ್ತಿಲ ಬಾಗಿಲಲ್ಲಿ ಹೋಹ ಹೆತ್ತ ತಾಯ ಮಗ ಕೊಂದು
ಸತ್ತಳೆಂದು ಅಳುತ್ತಿದ್ದ.
ಸತ್ತವಳೆದ್ದು ಮಗನಕ್ಕೆಯ ಮಾಣಿಸಿ
ಮೊತ್ತದ ಬಂಧುಗಳೆಲ್ಲಾರು ಮತ್ತಿವರು ಬದುಕಿದರೆಂದು
ಅಳುತ್ತಿದ್ದರು.
ಇಂತೀ ಚಿತ್ತದ ಭೇದವನರಿ,
ಪುಣ್ಯಾರಣ್ಯದಹನ ಭೀಮೇಶ್ವರಲಿಂಗ ನಿರಂಗಸಂಗ. ॥ ೧೭ ॥

೧೦೬

ಊರ ಬಾರುಕನ ಬಾಗಿಲಲ್ಲಿ ಮಹಾರಾಜ ಕಾಯಿದ್ದೈದಾನೆ.
ಅವನ ಓಲಗಕ್ಕೆ ಎಡೆತೆರಪಿಲ್ಲದೆ ಅವಸರವ ಕಾಯಿದ್ದೈದಾನೆ.
ಅವ ಮನೆಮನೆಯ ಹೊಕ್ಕು ಬವಣೆಗೆ ಬಹ
ಬಾರುಕನ ಭವಕ್ಕೊಳಗಾದನರಸು.
ಒಡೆಯ ಬಂಟನಾದುದನರಿ,
ಪುಣ್ಯಾರಣ್ಯದಹನ ಭೀಮೇಶ್ವರಲಿಂಗ ನಿರಂಗಸಂಗ. ॥ ೧೮ ॥

೧೦೭

ಬೇವಿನ ಮರದಲ್ಲಿ ಕಾಗೆ ಮನೆಯ ಮಾಡಿತ್ತು.
ಕೋಗಿಲೆ ಮರಿಯ ಹಾಕಿತ್ತು.
ಗೂಗೆ ಆರೈಕೆಯ ಮಾಡಿ ಸಾಕಿತ್ತು.
ಹಂಸೆ ತಂಬೆಲರ ಕುಟುಕ ಕೊಟ್ಟು ಸಂಭ್ರಮವ ಮಾಡಿತ್ತು.
ಅದು ಆರ ಹಂಗಿಲ್ಲದೆ ಹಾರಿ ಹೋಗುತ್ತ
ಎನಗೆ ಬೇವಿನ ಮರನೆ ತಾಯಿಯೆಂದಿತ್ತು
ಹಾಗೆಂದುದ ನಿನ್ನ ನೀನರಿ,
ಪುಣ್ಯಾರಣ್ಯದಹನ ಭೀಮೇಶ್ವರಲಿಂಗ ನಿರಂಗಸಂಗ. ॥ ೧೯ ॥

೧೦೮

ದಿನಚರಿಯೆಂಬ ಪಟ್ಟಣದಲ್ಲಿ ಕನಕರತಿಯೆಂಬರಸು,
ಮನಸಿಜನೆಂಬ ಪ್ರಧಾನ,

ಕನಸಕಂಡಡೆ ಅರಿವ ತಮಸೂನು ತಳವಾರ.
ಇವರೆಲ್ಲರ ವಂಚಿಸಿ ಅರಸಿನ ಹೆಂಡತಿ
ಹೆಂಡವ ಕುಡಿವವನ ಅಂಗದಲ್ಲಿ ಸಿಕ್ಕಿದಳು.
ಪ್ರಧಾನ ಕಂಡ; ಅರಸು ತಳವಾರ ಕಂಡುದಿಲ್ಲ.
ಮನಸಿಜ ಕಂಡು ಬದುಕಿದೆ ಹೋಗೆಂದ.
ಅರಸಿಗೆ ಕೂಪಸಾದ; ಮಾನಹಾನಿಗೆ ಕೇಡಿಲ್ಲದಂತೆ.
ಇಂತೀ ಭೇದವನರಿ, ಪುಣ್ಯಾರಣ್ಯದಹನ ಭೀಮೇಶ್ವರಲಿಂಗ
ನಿರಂಗಸಂಗ. ॥ ೨೦ ॥

೧೦೯

ಪಂಚಪೃಥ್ವಿಯ ಮಧ್ಯದಲ್ಲಿ ಒಂದು ಉಡುವರದ ಗಿಡು ಹುಟ್ಟಿತ್ತು.
ಆ ಗಿಡವನೊಡೆದು ಒಬ್ಬ ದುರುದುಂಡಿ ಹುಟ್ಟಿದಳು.
ಅವಳಂಡಕರಂಡದಲ್ಲಿ ಹುಟ್ಟಿದ ಬೆಳೆಯನುಂಬ ಮಕ್ಕಳಾರು?
ನಿನ್ನ ನೀನರಿ, ಪುಣ್ಯಾರಣ್ಯದಹನ ಭೀಮೇಶ್ವರಲಿಂಗ
ನಿರಂಗಸಂಗ. ॥ ೨೧ ॥

೧೧೦

ಮದನದ ಗುಹ್ಯದಲ್ಲಿ ಒಂದು ರಸವಾದದ ಕೂಸು ಹುಟ್ಟಿತ್ತು.
ಅದು ಚಿನ್ನವ ಕೆಡಿಸಿ ಮಣ್ಣ ಮಾಡುವುದು.
ಮಣ್ಣ ಮಣ್ಣಿನಲ್ಲಿ ಬೆರಸಿ ಬೂದಿಯ ಕೂಡಿ ವಾದವ ಮಾಡಿತ್ತು.
ವಾದ ನೀರಿನಲ್ಲಿ ನೆರೆದು ಹೋಹಾಗ ಮೀರಿ ನಿಂದವರಾರು?
ನಿನ್ನ ನೀನರಿ, ಪುಣ್ಯಾರಣ್ಯದಹನ ಭೀಮೇಶ್ವರಲಿಂಗ
ನಿರಂಗಸಂಗ. ॥ ೨೨ ॥

೧೧೧

ಒಡ ಕುದುರೆಯ ಮೇಲೆ ಮಸಿಯ ಹಲ್ಲಣವ ಹಾಕಿ,
ಬಸಲೆಯ ಹಂಬ ಬಾಯಿಗೆ ಕಟ್ಟಿ, ದೆಸೆವರಿವ ಅಸುರಾವುತ
ಜೊಲ್ಲೆಹದ ಬಲ್ಲೆಹವ ಹಿಡಿದು,
ಮುಗುಳುನಗೆಯವಳಲ್ಲಿ ಏರಿ ತಿವಿದ.
ಜೊಲ್ಲೆಹದ ಬಲ್ಲೆಹ ಮುರಿದು, ಒಡಿನ ಕುದುರೆ ಒಡೆದು,
ಮಸಿಯ ಹಲ್ಲಣ ನುಗ್ಗುನುಸಿಯಾಗಿ,

ಬಸಲೆಯ ಬಾಯಕಟ್ಟು ಹರಿದು,
ಅಸುರಾವುತ ಅವಳ ಕಿಸಲೆಯ ರಸಕ್ಕೊಳಗಾದ.
ಅದೇತರಿಂದ ಹಾಗಾಬನೆಂಬುದ ನೀನರಿ,
ಪುಣ್ಯಾರಣ್ಯದಹನ ಭೀಮೇಶ್ವರಲಿಂಗ ನಿರಂಗಸಂಗ. ॥ ೨೩ ॥

೧೧೨

ಸತ್ತ ಹಾವು ಹೆಣನ ಕಚ್ಚಿ ಮತ್ತೆ ಸತ್ತಿತ್ತು.
ಸತ್ತುದ ಕಂಡು ಹದ್ದು ಎತ್ತಲಾಗಿ,
ಎತ್ತಿದ ಬೆಂಬಳಿಯಲ್ಲಿ ಹಾವಿನ ಜೀವವೆದ್ದು
ಹೆಡೆಯನೆತ್ತಿ ಆಡಲಾಗಿ, ಹದ್ದು ಬಿಟ್ಟಿತ್ತು;
ಹಾವು ಹಾವಡಿಗಂಗೆ ಈಡಾಯಿತ್ತು.
ಆ ಹದ್ದು ಹಿಡಿದು ಬಿಟ್ಟೆನಲ್ಲಾ ಎಂದು ಮರೆದೊರಗಿತ್ತು.
ಹಾವು ಹದ್ದು ಕೂಡಿ ಬದುಕಿದವು; ಅದೇನುಕಾರಣವೆಂಬುದನರಿ,
ಪುಣ್ಯಾರಣ್ಯದಹನ ಭೀಮೇಶ್ವರಲಿಂಗ ನಿರಂಗಸಂಗ. ॥ ೨೪ ॥

೧೧೩

ಮದ್ದಿಗೆ ರುಜೆಯಡಸಿ, ನೀರಿಗೆ ಬಾಯಾರಿ,
ಹಾವಿಗೆ ಹಲ್ಲಿಲ್ಲದೆ ವಿಷವುಂಟಾಯಿತ್ತು.
ಬೇವಿನ ಮರವಲ್ಲಿ ಮಾವಿನ ಹಣ್ಣಾಗಿ
ಆ ಮರನ ಏರಿ ಮೆದ್ಧವರನರಿ.
ಪುಣ್ಯಾರಣ್ಯದಹನ ಭೀಮೇಶ್ವರಲಿಂಗ ನಿರಂಗಸಂಗ. ॥ ೨೫ ॥

೧೧೪

ಬಾಳೆ ಬಲಿದು ಈಳೆಯ ಮರನಾಯಿತ್ತು.
ಆ ಈಳೆಯ ಮರನ ಏರಿ ಈರೇಳು ಲೋಕವ ಕಂಡವನ
ಕಂಗಳ ಮಧ್ಯದಲ್ಲಿ ನಿಂದವನ ಆರೆಂವರಿ,
ಪುಣ್ಯಾರಣ್ಯದಹನ ಭೀಮೇಶ್ವರಲಿಂಗ ನಿರಂಗಸಂಗ. ॥ ೨೬ ॥

೧೧೫

ತ್ರಿಸಂಧಿಯಲ್ಲಿ ನಿಂದು, ತ್ರಿಗುಣಾತ್ಮನ ಕೊಂದು,
ಕೆಲದಲ್ಲಿ ನಿಂದವನಾರೆಂಬುದ ತಿಳಿ.
ತಿಳಿದು ನೋಡೆ ಅಯಿಂಗಡಲನಂಗ ಮೂರು ಮುಡಿಯುವನ ಸಂಗ.

ಬೇರೊಂದ ಹಿಡಿದು ನೋಡುವವನ ನಿಸ್ಸಂಗ.
ತನ್ನ ತಾನರಿದಲ್ಲಿಯೆ ಕಾಣಬಂದಿತ್ತು.
ಅದ ನಿನ್ನ ನೀನರಿ, ಪುಣ್ಯಾರಣ್ಯದಹನ ಭೀಮೇಶ್ವರಲಿಂಗ
ನಿರಂಗಸಂಗ. ॥ ೨೭ ॥

೧೧೬

ತತ್ಕಾಲವನರಿವ ಕುಕ್ಕುಟನ ಬಾಯ
ತುತ್ತನಿಕ್ಕಿಸಿಕೊಂಡವನಾರಯ್ಯ?
ಆ ತುತ್ತು ಮುತ್ತದವರ ಮುಕ್ತಿಯ ಬಲೆಗೇಡು ಮಾಡುವುದು.
ತುತ್ತ ಮುಟ್ಟದೆ ಕುಕ್ಕುಟನ ಕುಲವ ಕರೆ.
ಕರೆದಲ್ಲಿ ಬಂದು ನಿಂದುಳುಮೆ, ಅದರಂಗವ ಅರೆಂದರಿ,
ಪುಣ್ಯಾರಣ್ಯದಹನ ಭೀಮೇಶ್ವರಲಿಂಗ ನಿರಂಗಸಂಗ. ॥ ೨೮ ॥

೧೧೭

ಜಲದ ಮಧ್ಯದಲ್ಲಿ ಅಯಿಮೂಲೆಯ ಕೆಲದಲ್ಲಿ
ಒಂದು ಹೊಲ ಬೆಳೆಯಿತ್ತು.
ಬೆಳೆಯ ಮೇಯ ಬಂದ ಎರಳೆ ತೆನೆಯಿಲ್ಲದ ಮರಿಗಂಡಿತ್ತು.
ಆ ಮರಿ ಕಣ್ಣ ತೆಗೆದು ನೋಡಿ
ಎನ್ನ ಹೆತ್ತ ತಾಯಿಯಲ್ಲಾಯೆಂದು ಎರಳೆಯ ಮರಿ ನುಂಗಿತ್ತು.
ಹೊಲದೊಡೆಯ ಬಂದು ನಿಂದು ನೋಡಿ
ಮರಿಯ ಕಂಡು ಅಂಜಿ ಹೊಲಬುದಪ್ಪಿದ.
ಹುಲ್ಲೆ ತಪ್ಪಿ ಹೊಲದಣ್ಣ ಕಪ್ಪಿನಲ್ಲಿ ಬಿದ್ದ.
ಆ ಹೊಲಬ ನಿನ್ನ ನೀನರಿ,
ಪುಣ್ಯಾರಣ್ಯದಹನ ಭೀಮೇಶ್ವರಲಿಂಗ ನಿರಂಗಸಂಗ. ॥ ೨೯ ॥

೧೧೮

ಪಂಚವಳಯ ವಿಸ್ತೀರ್ಣದಲ್ಲಿ ಕಟ್ಟಿದವು ಮೂರು ಪಟ್ಟಣ.
ಕೆಲದಲ್ಲಿ ಹೊಲಗೇರಿ, ಬಲದಲ್ಲಿ ಮಾದಿಗರ ಮನೆ.
ನಡುವೆ ಹೆಬ್ಬಾರುವರ ಮಹಾಜನಂಗಳ ಗುಡಿವಾಡ.
ಹೊಲೆಯರ ಗೋವಧೆಯ ಮಾದಿಗರ ಮನೆಯ ನಾತ.
ಹಾರುವರೂಟದ ಸುಖ ಲೇಸಾಯಿತ್ತು.
ಜಗದ ಕೀಳು ಮೇಲಿನ ಕೂಟ

ಅದೇತರಿಂದಾಯಿತ್ತು ಎಂಬುದ ನಿನ್ನ ನೀನರಿ,
ಪುಣ್ಯಾರಣ್ಯದಹನ ಭೀಮೇಶ್ವರಲಿಂಗ ನಿರಂಗಸಂಗ. ॥ ೩೦ ॥

೧೧೯

ಊರೆಲ್ಲರೂ ಕೂಡಿಕೊಂಡು ತಿಂದರು ದನವ.
ಆ ಖಂಡವನೊಲ್ಲದೆ ಕಾಲ ಕೊಳಗು
ತಲೆಯ ಕೊಂಬು ಬೇಯಿಸಿ ತಿಂಬ ಶರಣ.
ತಿಂಬ ಕೊಂಬು ಕೊಳಗು ಅವನಂಗವ ನುಂಗಿತ್ತು.
ಅಂಗ ಸುಸಂಗ ಲೀಯವಾಯಿತ್ತು.
ಲೀಯ ನಿಜದಲ್ಲಿ ನಿಂದು ನಿರ್ಲೇಪವಾಯಿತ್ತು.
ಆ ಗುಣವೇತರಿಂದ ಆಯಿತ್ತು ಎಂಬುದನರಿ ನಿನ್ನ ನೀ,
ಪುಣ್ಯಾರಣ್ಯದಹನ ಭೀಮೇಶ್ವರಲಿಂಗ ನಿರಂಗಸಂಗ. ॥ ೩೧ ॥

೧೨೦

ಕಾಳಿಯ ಹೊಲದ ಓಣಿಯ ದಾರಿಯಲ್ಲಿ ಮೂವರು ಕಳ್ಳರು ಕಟ್ಟಿ
ಬೆಳ್ಳನೊಬ್ಬನ ಆ ಕಳ್ಳರು ಹಿಡಿಯಲಾಗಿ
ಬೆಳ್ಳನ ಬೆಳುವೆ ತಾಗಿ, ಕಳ್ಳರು ಮೈಮರೆದು,
ಮೂರು ಪಳ್ಳದಲ್ಲಿ ಬಿದ್ದರು.
ಬಿದ್ದು ಸಾವರ ಕೊಲ್ಲಲೊಲ್ಲದೆ ಬೆಳ್ಳನಲ್ಲಿಯೆ ಅಡಗಿದ.
ಅಡಗಿದವನಾರೆಂದರಿ,
ಪುಣ್ಯಾರಣ್ಯದಹನ ಭೀಮೇಶ್ವರಲಿಂಗ ನಿರಂಗಸಂಗ. ॥ ೩೨ ॥

೧೨೧

ಅಲಗನೇರಿ ಪುವ್ವ ಕೊಯಿದು, ಬಾವಿಯ ನುಂಗಿ ನೀರ ಕುಡಿದು,
ಪಣ್ಣ ಹಾಕಿ ಮರನ ಮೆದ್ದವನಾರಯ್ಯ?
ಹೆತ್ತವನ ಕೊಂದು ಅರಿಗಳ ಕೆಳೆಗೊಂಡು
ಬದುಕಿದವನಾರೆಂಬುದ ನಿನ್ನ ನೀನರಿ,
ಪುಣ್ಯಾರಣ್ಯದಹನ ಭೀಮೇಶ್ವರಲಿಂಗ ನಿರಂಗಸಂಗ. ॥ ೩೩ ॥

೧೨೨

ಕೋಣನ ಕಿವಿಯಲ್ಲಿ ಮೂರು ಪಸು ತೆನೆ ತುಂಬಿ
ಕರವೊಂದನೆ ಈಯಿತ್ತು.
ಕರು ತಾಯಿ ನೆರೆ ನೋಡಿ ಹಾಲಿಗೆ ಒಡೆಯರಿಲ್ಲಾ ಎಂದು

ಪ್ರಾಣವ ಬಿಟ್ಟಿತ್ತು.
ಕರುವಿನ ಹರಣವರಿ; ಅರಿತಡೆ ನಿನ್ನ ನೀನೆ ಭಿನ್ನಭಾವವಿಲ್ಲ.
ಪುಣ್ಯಾರಣ್ಯದಹನ ಭೀಮೇಶ್ವರಲಿಂಗ ನಿರಂಗಸಂಗ. ॥ ೩೪ ॥

೧೨೩

ಮರೆಯ ಮನೆಯ ಮಧ್ಯದಲ್ಲಿ
ಮನೋವಿಕಾರದ ಮಾನಿನಿ ಹುಟ್ಟಿದಳು.
ಹಗಲಿಗೆ ಹಾದರಗಿತ್ತಿ, ಇರುಳಿಗೆ ಸಜ್ಜನೆಯಾಗಿ
ಪುರುಷನ ಒಡಗೂಡಿಪ್ಪಳು.
ಅವಳಂಗದ ಬಸುರ ಯೋನಿಯ ಕಂಗಳು, ಮನದ ಮೊಲೆ
ವಿಪರೀತದ ಮಂಡೆಯ ತುರುಬು ತುಡುಕಿತ್ತು ಮೂರಡಿಂಗುಲ್ಲಿ.
ಅವಳ ಒಡಗೂಡುವನಾರೆಂದಲ್ಲಿ ನಿನ್ನ ನೀ ತಳಿ,
ಪುಣ್ಯಾರಣ್ಯದಹನ ಭೀಮೇಶ್ವರಲಿಂಗ ನಿರಂಗಸಂಗ. ॥ ೩೫ ॥

೧೨೪

ಕಣ್ಣೊಳಗಣ ಮತ್ಸ್ಯಕ್ಕೆ ಬಲೆಯ ಬೀಸಿ,
ಹದ್ದಿನ ಬಾಯ ಹಾವಿಂಗೆ ಹೇಳಿಗೆಯ ಮಾಡಿ,
ಕಾಣಬಾರದ ಬಯಲಿಂಗೆ ಮನೆಯ ಕಟ್ಟಿ
ಬಾಳುತ್ತಿದ್ದವನ ನಿನ್ನ ನೀನರಿ,
ಪುಣ್ಯಾರಣ್ಯದಹನ ಭೀಮೇಶ್ವರಲಿಂಗ ನಿರಂಗಸಂಗ. ॥ ೩೬ ॥

೧೨೫

ಆರೂ ಇಲ್ಲದ ಠಾವಿನಲ್ಲಿ ಊರ ಕಟ್ಟಿ,
ಊರವರೆಲ್ಲರು ಒಳಗೆ ತಾ ಹೊರಗಾಗಿ,
ಕೆರೆಯ ಕಟ್ಟಿ, ಕೆರೆಯ ಬಾಗಿಲು ಊರೊಳಗೆ ಮನೆ ಹೊರಗಾಗಿ
ಎಡೆಯಾಡುತ್ತಿದ್ದಾತನ ನೀತಿಯನರಿ,
ಪುಣ್ಯಾರಣ್ಯದಹನ ಭೀಮೇಶ್ವರಲಿಂಗ ನಿರಂಗಸಂಗ. ॥ ೩೭ ॥

೧೨೬

ಕಣ್ಣಿಲ್ಲದ ಕುರುಡ ಕನ್ನಡಿಯ ನೋಡಿ ತನ್ನಯ ಕಣ್ಣ ಕಂಡ.
ಕಾಲಿಲ್ಲದ ಅದವ ಕಠಾರವ ಹಿಡಿದು ಮೂಗಾವುದ ತಿರುಗಿ ಬಂದ.
ನಪುಂಸಕ ಬೆಸನಾಗಿ ಬಂಡು ಮುಪಿಯ ಕೂಸು ಹುಟ್ಟಿ ಮಸಕಿತು.

ಮೊಲೆ ಹೊಲೆಗೇರಿಯಲ್ಲಿ ಹೊಲೆ
ಮೂಲೆಯಸುಂಡು ಬೆಳೆದವರನರಿ,
ಪುಣ್ಯಾರಣ್ಯದಹನ ಭೀಮೇಶ್ವರಲಿಂಗ ನಿರಂಗಸಂಗ. ॥ ೩೮ ॥

೧೨೭

ಸತ್ವ ರಜ ತಮವೆಂಬ ಮೂರು ಭಿತ್ತಿ ಕೂಡಿ ಘಟ್ಟಿಯಾದಲ್ಲಿ
ಚಿತ್ತೆಂಬ ಪುತ್ಥಳಿ ಹುಟ್ಟಿತ್ತು.
ಪುತ್ಥಳಿಯ ಪತ್ಥಳಿಯಲ್ಲಿ ಜಗಕರ್ತೃ ಹುಟ್ಟಿದ.
ಕರ್ತೃವಂ ಹೆತ್ತವನ ನಾಭಿಯ ಮಧ್ಯದ ಬಾಲಲೀಲೆಯ
ಸಾಲಿನೊಳಗಾದ ಸಂಪದವರಿವರಲ್ಲಾ
ಕಾಲಕ್ಷಯನ ಕರ್ಮನಾಶನ ಭಾಳಾಂಬಕನ
ಲೀಲೆಯಲ್ಲಿ ಆಡುತ್ತಿರೆಂದು ಸರ್ವಮಯಕ್ಕೆ ಹೊರಗಾದ
ಪುಣ್ಯಾರಣ್ಯದಹನ ಭೀಮೇಶ್ವರಲಿಂಗ ನಿರಂಗಸಂಗ. ॥ ೩೯ ॥

**ಸರ್ವೇಂದ್ರಿಯ ಸಂಗ ನಿರ್ಲೇಪಸ್ಥಲ:**

೧೨೮

ಇದಿರಿಟ್ಟು ಪೂಜಿಸುವಲ್ಲಿ ಷೋಡಶ ಉಪಚರಿಯದಲ್ಲಿ
ಭರಿತನಾಗಿ ಇರಬೇಕು.
ಅದು ಆರೋಪಿಸಿದಲ್ಲಿ ಭಾವ ಇದಿರಿಡದಲ್ಲಿ
ಬೇರೊಂದು ಬಯಕೆಯ ಅರಿತಿರಬೇಕು.
ಅರಿವನರಿತನೆಂದು ಕುರುಹ ಮರೆದಡೆ
ಆ ಮರೆವುದೆ ತನ್ನ ತಿಂಬ ಮಾಯೆ ಎಂದರಿ
ಪುಣ್ಯಾರಣ್ಯದಹನ ಭೀಮೇಶ್ವರಲಿಂಗ ನಿರಂಗಸಂಗ. ॥ ೪೦ ॥

೧೨೯

ಹಲವ ತೊಳೆವ ಮಡಿವಾಳಂಗೆ
ತನ್ನಯ ಕುರುಹಿನ ಸೆರಗ ನೋಡಿಯಲ್ಲದೆ ಅರಿಯ.
ಅವ ಮರೆದು ಕೊಟ್ಟಡೆ,
ಸೀರೆಯೊಡೆಯರು ಬೇರೊಂದು ಕುರುಹನಿಟ್ಟುಕೊಂಡಿಹರು.
ಅದು ಒಡವೆಯರೊಡವೆಯಲ್ಲದೆ ಬರುಬರಿಗರಗದು.
ಆ ಕುರುಹ ನಿನ್ನ ನೀನರಿ,
ಪುಣ್ಯಾರಣ್ಯದಹನ ಭೀಮೇಶ್ವರಲಿಂಗ ನಿರಂಗಸಂಗ. ॥ ೪೧ ॥

೧೩೦

ನಾಮ ಘಟ್ಟಿಸಿಯಲ್ಲದೆ ಕರೆದಡೆ ನುಡಿಯಬಾರದು.
ಕ್ರೀ ಶುದ್ಧತೆಯಾಗಿ ನಿಂದಲ್ಲದೆ ಅರಿಯಬಾರದು.
ಅರಿವಿಂಗೆ ಆಶ್ರಯಿಸುವುದಕ್ಕೆ ಒಡಲಿಲ್ಲ.
ಅರಿವು ಕುರುಹಿನಲ್ಲಿ ವಿಶ್ರಮಿಸಿ
ಹಣ್ಣಿನ ಸಿಪ್ಪೆಯ ಮರೆಯಲ್ಲಿ ಭಿನ್ನರುಚಿ ನಿಂದು ಸವಿದಾಗ
ಸಿಪ್ಪೆ ನಿಂದು ರಸವೊಪ್ಪಿತ್ತು.
ಆ ಚಿತ್ತವ ನಿನ್ನ ನೀನರಿ,
ಪುಣ್ಯಾರಣ್ಯದಹನ ಭೀಮೇಶ್ವರಲಿಂಗ ನಿರಂಗಸಂಗ. ॥ ೪೨ ॥

೧೩೧

ಸಂಜೀವನವ ತಂದೆನೆಂದಡೆ ಅದು ಬಂದ ಠಾವಿಲ್ಲವೆ?
ಕಾಮಧೇನುವ ಕಟ್ಟಿದೆನೆಂದಡೆ ಅದು ಹುಟ್ಟಿದ ಠಾವಿಲ್ಲವೆ?
ಇಷ್ಟನರಿಯದೆ ವಿರಕ್ತನಾದೆನೆಂಬ
ವಿಧಾಂತರ ಕತ್ತೆಗಾಹಿಯ ಮಾತು ಬೇಡ.
ಕುರುಹಿನ ಮರೆಯ ನಿಜವ ನಿನ್ನ ನೀನರಿ,
ಪುಣ್ಯಾರಣ್ಯದಹನ ಭೀಮೇಶ್ವರಲಿಂಗ ನಿರಂಗಸಂಗ. ॥ ೪೩ ॥

೧೩೨

ಮನೆಯ ಮಂದಿರದ ನಿಳಯವ ಮಾಡಿದಡೇನು
ಎಡೆಯಾಡುವುದಕ್ಕೆ ಬಾಗಿಲು ಬೇಕು.
ನುಡಿಗಡಗಣವನಾಡಿದಡೇನು
ಮನ ಮಡಿವುದಕ್ಕೆ ಕುರುಹಿನ ಅಡಿ ಬೇಕು.
ಅದೆ ಅರುಹಿನ ತೆರ, ನಿನ್ನ ನೀನರಿ,
ಪುಣ್ಯಾರಣ್ಯದಹನ ಭೀಮೇಶ್ವರಲಿಂಗ ನಿರಂಗಸಂಗ. ॥ ೪೪ ॥

೧೩೩

ನಿರ್ಮಲ ಜಲ ಸ್ಥಾನದಲ್ಲಿ ಇದ್ದಡೇನು
ತಮದಕ್ಕೆ ಘಟವಿಲ್ಲದ ಮತ್ತೆ?
ಅರಿವಿನ ಮಾತ ಬರಿಕಾಯರು ನುಡಿವಡೇನು

ಕುರುಹಿಲ್ಲದ ಮತ್ತೆ?
ತನ್ನ ಸೀಮೆಯ ತಾನರಿದು ಅಲ್ಲಿಗೆಯಿದುವವನಂತೆ ನಿನ್ನ ನೀನರಿ,
ಪುಣ್ಯಾರಣ್ಯದಹನ ಭೀಮೇಶ್ವರಲಿಂಗ ನಿರಂಗಸಂಗ. ॥ ೪೫ ॥

೧೨೪

ಲಿಂಗಕ್ಕೆ ಮಜ್ಜನವ ಮಾಡಿದಲ್ಲಿ ತನುವಿನಾವಿಷ್ಕಾಂತದ ಕೇಡು.
ಕುಸುಮವ ಧರಿಸುವಲ್ಲಿ ಮನದ ಪ್ರಕೃತಿಯ ಕೇಡು.
ನೈವೇದ್ಯವ ಸಮರ್ಪಿಸುವಲ್ಲಿ ಸರ್ವ ಇಂದ್ರಿಯಂಗಳ ಕೇಡು.
ಕಾಯಕ್ಕೆ ಮಜ್ಜನ, ಚಿತ್ತದ ವಿಲಾಸಿತಕ್ಕೆ ಕುಸುಮ.
ಮನ ಘನದಲ್ಲಿ ನಿಂದುದಕ್ಕೆ ಅರ್ಪಿತ.
ಇಂತೀ ತ್ರಿವಿಧವ ಮರೆಯಲ್ಲಿ ಕುರುಹುದೋರಿದವನ ನಿನ್ನ
ನೀನರಿ,
ಪುಣ್ಯಾರಣ್ಯದಹನ ಭೀಮೇಶ್ವರಲಿಂಗ ನಿರಂಗಸಂಗ. ॥ ೪೬ ॥

೧೨೫

ಅಂಗ ಮಾಸಿದಲ್ಲಿ ಜಲದೊಲುಮೆ;
ಮನ ಮರೆದಲ್ಲಿ ಅರಿವಿನೊಲುಮೆ;
ಈ ಉಭಯವು ಮರೆದಲ್ಲಿ ಮಹಾಶರಣರ ಸಂಗದೊಲುಮೆ,
ಒಲುಮೆಯ ಒಲವರವ ನಿನ್ನಿ ನೀನರಿ,
ಪುಣ್ಯಾರಣ್ಯದಹನ ಭೀಮೇಶ್ವರಲಿಂಗ ನಿರಂಗಸಂಗ. ॥ ೪೭ ॥

೧೨೬

ಆತ್ಮನಿದ್ದು ಶಯನಾಂತನಾಗಿ ಇದ್ದಲ್ಲಿ
ಸಕಲ ಭೋಗಂಗಳನರಿಯಬಲ್ಲುದೆ?
ರಾಜಸ ತಾಮಸದ ಮರೆಯಲ್ಲಿದ್ದು ಸಾತ್ವಿಕವನರಿಯಬಲ್ಲುದೆ?
ಏತರಲ್ಲಿದ್ದು ಚೇಟಿಯ ಕೊಡದಂತಿರಬೇಕು.
ಇಷ್ಟ ನಿನ್ನ ನೀನರಿ,
ಪುಣ್ಯಾರಣ್ಯದಹನ ಭೀಮೇಶ್ವರಲಿಂಗ ನಿರಂಗಸಂಗ. ॥ ೪೮ ॥

**ಕ್ರಿಯಾಭಾವಜ್ಞಾನ ಸಂಗ ಲೇಪಸ್ಥಲ:**

೧೨೭

ಕಳ್ಳ ಉಸುರಡಗಿ ಬೆಳ್ಳನ ಮಂದಿರದಲ್ಲಿ ಬಂದಡಗಿದಂತೆ
[ದರ್ಶ]ನವ ಹೊತ್ತು ಪಶುಪತಿಯ ಭಕ್ತರುಗಳ
ಸರ ಸಂಪದವನರಿಯದೆ

ತಮ್ಮಯ ತುರೀಯ ಆಪ್ಯಾಯನಕ್ಕಾಗಿ ಅಗಡವ ನುಡಿವ
ದರುಶನ ಸಾಗರಗಳ್ಳರಿಗೇಕೆ ಮೂರಕ್ಷರದ ಭೇದ,
ಪುಣ್ಯಾರಣ್ಯದಹನ ಭೀಮೇಶ್ವರಲಿಂಗ ನಿರಂಗಸಂಗ. ॥ ೪೯ ॥

೧೩೮

ಘಾತ ಮಾಡುವ ತೆರಪನರಿಯದೆ
ಕಾಡುವ ಕಮ್ಮಟದೇಹಿಗಳ ನೋಡಾ!
ಆತನ ಆಗುಚೇಗೆಯನರಿಯದೆ ಮರಿಪಕ್ಷಿ ಕುಟುಕಿಂಗೆ ಬಾಯ ಬಿಡುವಂತೆ
ಕೈ ಬಾಯಾನುವ ದರುಶನ ದಾರಿಗಳ್ಳರಿಗೇಕೆ ಮೂರಕ್ಷರ?
ಪುಣ್ಯಾರಣ್ಯದಹನ ಭೀಮೇಶ್ವರಲಿಂಗ ನಿರಂಗಸಂಗ. ॥ ೫೦ ॥

೧೩೯

ಸಮಯ ಸಮೂಹ ದರುಶನ ಆಡಂಬರ ವಾಚಾರಸದಿಂದ
ನೀತಿಯ ತೋರಿ, ವಾಸವ ಹೊಕ್ಕು
ಧಾತುಗೆಡುವ ಘಾತರಿಗೇಕೆ ಮೂರಕ್ಷರ
ಪುಣ್ಯಾರಣ್ಯದಹನ ಭೀಮೇಶ್ವರಲಿಂಗ ನಿರಂಗಸಂಗ. ॥ ೫೧ ॥

೧೪೦

ಕೊಲೆ ಹೊಲೆ ಪಾರದ್ವಾರವ ಪಾತಕ ಮಾಡುವರೊಳಗಿಟ್ಟು ಕೊಂಡು
ಘನಲಿಂಗದ ಮುದ್ರೆಯನಿಕ್ಕಿ ಹೊಲೆದೊಳಿದೆವೆಂದು
ಕಲಹಕ್ಕೆ ಇದಿರಪ ಕುಲುಮೆಗಾರರಿಗೇಕೆ ಮೂರಕ್ಷರದ ಒಲವರ?
ಪುಣ್ಯಾರಣ್ಯದಹನ ಭೀಮೇಶ್ವರಲಿಂಗ ನಿರಂಗಸಂಗ. ॥ ೫೨ ॥

೧೪೧

ಪೂರ್ವವ ಕಳೆದು ಪುನರ್ಜಾತನಾದೆವೆಂಬಿರಿ.
ಪೂರ್ವ ಬಂದ ಬಟ್ಟೆಯ ಮರೆದು ಜಾತತ್ವಕ್ಕೆ ನಾನಾ ಭೌತಿಕವ ತೊಟ್ಟು
ಪಿಷ್ಟದವರ ಅಭೀಷ್ಟನಾಗಿ ಮತ್ತೆ ಪುನರ್ಜಾತನಾದ ಪರಿಯಿನ್ನೆಂತೊ?

ಜಂಗಮವಾದಲ್ಲಿ ಜನನಿ ಜನಕ ಸಹೋದರ
ಮಿಕ್ಕಾದ ಭವಪಾಶಂಗಳ ಸ್ವಪ್ನದ ಸುಖದಂತೆ ಎಂದರಿದು,
ತನ್ನಿರವ ತಾನರಿತು, ಮುಟ್ಟಿದ ಭಕ್ತರ ಮುಕ್ತಿಯ ಮಾಡು;
ತ್ರಿಯಕ್ಷರದ ಗೊತ್ತು ಮುಟ್ಟರು,
ಪುಣ್ಯಾರಣ್ಯದಹನ ಭೀಮೇಶ್ವರಲಿಂಗ ನಿರಂಗಸಂಗ. ॥ ೫೨ ॥

೧೪೨

ಕೋಲು ಕಪ್ಪರವ ಹಿಡಿದು,
ಭಾಳಾಂಬಕನ ಲೀಲೆಯ ತೊಟ್ಟು,
ಅಶನದಾಪ್ಯಾಯನಕ್ಕೆ ತಿರುಗುವ ಬಾಲಲೀಲೆಯಲ್ಲದೆ
ಭಾಳಾಂಬಕನ ಸೆಲೆಯಲ್ಲ.
ಜಾಳು ಮಾತ ಬಿಟ್ಟು ಮೂರಕ್ಷರದ ನೆಲೆಯನರಿ,
ಪುಣ್ಯಾರಣ್ಯದಹನ ಭೀಮೇಶ್ವರಲಿಂಗ ನಿರಂಗಸಂಗ. ॥ ೫೪ ॥

೧೪೩

ಚರ ಸ್ಥಾವರವಾಮುದುಂಟೆ?
ಮಹಾಸಮುದ್ರಕ್ಕೆ ಕೆರೆಯೇರಿಯುಂಟೆ?
ಸುಖವ ಮಚ್ಚಿ ಅಖಿಳರೊಳಗಿದ್ದು ಸಕಲ ವಿರಹಿತರಾದ
ಪರಿಯಿನ್ನೆಂತೊ?
ಅದು ವಿಕಳರ ಮಾತು, ಮೂರಕ್ಷರಕ್ಕೆ ಮೂರ,
ಪುಣ್ಯಾರಣ್ಯದಹನ ಭೀಮೇಶ್ವರಲಿಂಗ ನಿರಂಗಸಂಗ. ॥ ೫೫ ॥

೧೪೪

ಜ ಎಂದಲ್ಲಿ ಜನನ ನಾಸ್ತಿಯಾಗಿ,
ಗ ಎಂದಲ್ಲಿ ಗಮನ ನಾಸ್ತಿಯಾಗಿ,
ಮ ಎಂದಲ್ಲಿ ಮರಣ ನಾಸ್ತಿಯಾಗಿ,
ಅರಿತು ತಿರುಗುವುದು ಸ್ವಯ ಚರ ಪರವಲ್ಲದೆ,
ಕೂಟಕ್ಕೆ ನೆರೆದ ಅಗುಳಾಸೆಯ ವಿಹಂಗನಂತಾಗಬೇಡ.
ತ್ರಿವಿಧಾಕ್ಷರವ ತ್ರಿಗುಣವಲ್ಲಿ ಇರಿಸಿ ತ್ರಿಗುಣಕ್ಕೆ ಹೊರಗಾಗು.
ತ್ರಿಗುಣರಹಿತ ಸಗುಣಭರಿತನಾಗು.
ಅದ ನಿನ್ನ ನೀನರಿ, ಲಿಂಗ ಜಂಗಮವೆ
ಪುಣ್ಯಾರಣ್ಯದಹನ ಭೀಮೇಶ್ವರಲಿಂಗ ನಿರಂಗಸಂಗ. ॥ ೫೬ ॥

**ಸಮಯಜ್ಞಾನ ಸಂಪಾದನೆ ಲೇಪಸ್ಥಲ:**

೧೪೫

ಸದ್ಗುರುಮೂರ್ತಿಯು ಇರವು ಕರ್ಪುರವ ತಾಳಿರ್ದ
ಕರಂಡದಂತಿರಬೇಕು.
ದರ್ಪಣದೊಳಗಣ ಪ್ರತಿಬಿಂಬದಂತಿರಬೇಕು.
ಕಮಲಪತ್ರದ ಬೆಂಬಳಿಯ ಅಂಬುವಿನಂತಿರಬೇಕು.
ಪುಡಿಸಂಗದ ಸಂಚಾರದ ಸಂಗದಂತಿರಬೇಕು.
ಕುಡಿವೆಳಗಿನ ಬುಡದ ಬೆಳಗಿನಂತಿರಬೇಕು.
ಸದ್ಗುರು ಸದಮಲಾನಂದಮೂರ್ತಿ ಗುರುವಾದುದ ನಿನ್ನ ನೀನರಿ,
ಪುಣ್ಯಾರಣ್ಯದಹನ ಭೀಮೇಶ್ವರಲಿಂಗ ನಿರಂಗಸಂಗ. ॥ ೫೭ ॥

೧೪೬

ತನಗೆ ಇದಿರಾದ ಗುರುವ ಕಳೆದು
ತಾನು ಗುರುವಾಗಿ ಗುರುವಾಗಬೇಕು.
ತಾ ಹರಕರಜಾತನಾಗಿ ನಿಂದು
ತನ್ನಯ ಭೃತ್ಯರ ಗುರುಕರಜಾತನ ಮಾಡಬೇಕು.
ತನ್ನಯ ಗುಣ ಜಡ,
ಇದಿರಿಗೆ ಅಜಡವ ಹೇಳುವ ನರಬಿನ್ನ ಕಾರುಕಂಗೆ
ಸದ್ಗುರು ಸ್ಥಲವಿಲ್ಲ.
ಅದ ಅವನರಿಯ, ನಿನ್ನ ನೀನರಿ,
ಪುಣ್ಯಾರಣ್ಯದಹನ ಭೀಮೇಶ್ವರಲಿಂಗ ನಿರಂಗಸಂಗ. ॥ ೫೮ ॥

೧೪೭

ತಾ ಗುರುವಾಹಾಗ ತನ್ನ ಗುರುವ ತಾನರಿತು,
ತನಗೆ ಇಹದಲ್ಲಿ ಸುಖ,
ತನ್ನ ಗುರುವಿಂಗೆ ಪರದಲ್ಲಿ ಪರಿಣಾಮವನೈದಿಸುವ
ಉಭಯ ಗುರು ತಾನಾಗಿ ಇದಿರಿಂಗೆ ಪ್ರತಿಸ್ವರೂಪವ ಕೊಡುವಲ್ಲಿ,
ತನ್ನಯ ನಿಜರೂಪ ಪ್ರಾಣಪ್ರತಿಷ್ಠೆಯ ಮಾಡಿ
ಮಾಂಸಪಿಂಡವ ಕಳೆದು ಮಂತ್ರಪಿಂಡವ ಮಾಡುವಲ್ಲಿ,
ಕಾಯದ ಸೂತಕವ ಕಳೆದು, ಮನದ ವಿಕಾರವ ಹಿಂಗಿಸಿ,
ತನ್ನಿರವನರಿತು ಅರಿದರಿವ ಶಿಷ್ಯನ ಹೃತ್ಕಮಲ ಮಧ್ಯದಲ್ಲಿ
ನೆಲೆಗೊಳಿಸಿ,

ಅರಿವಿನ ಭೇದದಿಂದ ಶಿಲೆಯ ಸೂತಕವ ಕಳೆದು
ಇಷ್ಟಪ್ರಾಣವ ಬೆಸುವ ಬೆಸುಗೆಯ ತೋರಿ,
ಉಡುವ ತೊಡುವ, ಕೊಡುವ ಕೊಂಬ,
ಮುಟ್ಟುವ ಅರ್ಪಿತಭೇದವ ದೃಷ್ಟದಿಂದ ತೋರಿ,
ಗುರುವೆಂಬ ಭಾವ ತನಗೆ ತಲೆದೋರದೆ
ಪರಶರಣರ ಮುಂದಿಟ್ಟು
ನಿನ್ನಯ ಪರಿದೋಷವ ಪರಿಹರಿಸಿಕೊ ಎಂದು
ತ್ರಿವಿಧದ ಭೇದವ ತೋರಿ,
ಗುರುವೆಂಬ ಭಾವ ತನಗೆ ತಲೆದೋರದೆ
ಪರಶರಣರ ಮುಂದಿಟ್ಟು,
ನಿನ್ನಯ ಪರಿದೋಷವ ಪರಿಹರಿಸಿಕೊ ಎಂದು
ತ್ರಿವಿಧದ ಭೇದವ ತೋರಿ,
ತಾನು ಶುಕ್ತಿ ನುಂಗಿನ ಜಲದಂತೆ,
ಭ್ರಮರ ನುಂಗಿದ ಗಂಧದಂತೆ,
ವೃಜಕೊಂಡ ವೃಮಣಿಯಂತೆ,
ನಾಮ ರೂಪು ಭಾವವಳಿದು ತಾನು ತಾನಾದಡೆ ಗುರುಸ್ಥಲ.
ಅದ ನಿನ್ನ ನೀನರಿ,
ಪುಣ್ಯಾರಣ್ಯದಹನ ಭೀಮೇಶ್ವರಲಿಂಗ ನಿರಂಗಸಂಗ. ॥ ೫೯ ॥

೧೪೮

ಅಂಗಲಿಂಗ ಸಂಬಂಧ ಶೈವಗುರು,
ಸ್ಥಾವರಲಿಂಗ ಸಂಬಂಧ ಶೈವಗುರು,
ಪಥಲಿಂಗ ಸಂಬಂಧ ಶೈವಗುರು,
ಸಂಕಲ್ಪಲಿಂಗ ಸಂಬಂಧ ಶೈವಗುರು.
ಪ್ರಾಣಲಿಂಗ ಸಂಬಂಧ ವೀರಶೈವ ಸಿದ್ಧಾಂತ ಗುರುವಾಗಬೇಕು.
ಚತುರ್ವಿಧ ಶೈವನಾಸ್ತಿ: ಅವು ಸೂತಕಭಾವ;
ಅವು ಜಗದ ವರ್ತಕದಲ್ಲಿ ಕಾಬ ನಿಲುವು; ಆಚಾರ್ಯರ ಭೇದ,
ಪ್ರಾಣಕ್ಕೆ ಪಂಚಾಚಾರವ ಕೊಟ್ಟು,
ಕಾಯದ ಗುಣವ ತ್ರಿವಿಧದಿಂದ ಶುದ್ಧಮಾಡಿ,
ಕಾಯಕ್ಕೆ ಕ್ರೀ ಮನಕ್ಕೆ ಅರಿವು ಎಂದು ಭಾವಿಸಿ ಕೊಟ್ಟುದ್ದು ಪ್ರಾಣಲಿಂಗ
ಅತನಿಹಪರದಲ್ಲಿ ಪರಿಣಾಮಿ, ಸದ್ಗುರು;
ಆ ಭೇದವ ನಿನ್ನ ನೀನರಿ,
ಪುಣ್ಯಾರಣ್ಯದಹನ ಭೀಮೇಶ್ವರಲಿಂಗ ನಿರಂಗಸಂಗ. ॥ ೬೦ ॥

೧೪೯

ಪಥವನರಿಯದೆ ಇಷ್ಟವ ಕಟ್ಟುವ ಗುರು
ಬೆಳಕಿಗೆ ಸಿಕ್ಕಿದ ಪತಂಗನಂತಾದ.
ಗುರುವಿನ ಕೈಯಲ್ಲಿ ಕಟ್ಟಿದ ಶಿಷ್ಯ
ಕೀಟಕನ ಕೈಯಲ್ಲಿ ಸಿಕ್ಕಿದ ಮಕ್ಷಿಕನಂತಾದ.
ಚೇಟಿದಾಸನ ಕೂಟದಂತಾಯಿತ್ತು; ಅದೇತರ ಭೇದ, ನಿನ್ನ ನೀನರಿ
ಪುಣ್ಯಾರಣ್ಯದಹನ ಭೀಮೇಶ್ವರಲಿಂಗ ನಿರಂಗಸಂಗ. ॥ ೬೧ ॥

೧೫೦

ಕಂಡವರಿಗೆ ದೇವರ ಕಟ್ಟುವ ಭಂಡ ಗುರುವಿನ ಇರವು
ಜಗಭಂಡೆ ಎದೆಯ ಕೊಟ್ಟು ಕಂಡವರ ಕೈಯಲ್ಲಿ ಎದೆಯ ಹೆಟ್ಟಿಸಿಕೊಂಬಂತೆ.
ಆಗಲಿ ಬೀಳುವ ಕಲ್ಲಿಗೆ ಹರಿಮು ತಲೆಯನೊಡ್ಡಿಸುವನಂತೆ.
ಆ ಬರಿ ಕಾಯನಲ್ಲಿ ಕಟ್ಟಿದ ಇಷ್ಟ
ತೊಟ್ಟಿಯ ಹುಮರಿನಲ್ಲಿ ಕಲ್ಲು ಸಿಕ್ಕಿದಂತಾಯಿತ್ತು.
ಅದು ಭ್ರಷ್ಟನ ಕೈಯ ಕಟ್ಟುಗೂಳು, ಉತ್ತಮರೊಲ್ಲರು.
ಆ ಚಿತ್ತವ ನಿನ್ನ ನೀನರಿ,
ಪುಣ್ಯಾರಣ್ಯದಹನ ಭೀಮೇಶ್ವರಲಿಂಗ ನಿರಂಗಸಂಗ. ॥ ೬೨ ॥

೧೫೧

ಸೂತೆಯಲ್ಲಿ ಬೀಜ ಹುಟ್ಟಿದಡೆ ಅದೇತಕ್ಕೆ ಬಾತೆ?
ಪಾಷಾಣದ ಕೈಯಲ್ಲಿ ಈಶ ರೂಪ ಧರಿಸಿದಡೆ
ಅದು ನೆಲೆಗಳೆದ ತಟಾಕದ ತೂಬು.
ಆ ಪಥವ ನಿನ್ನ ನೀನರಿ,
ಪುಣ್ಯಾರಣ್ಯದಹನ ಭೀಮೇಶ್ವರಲಿಂಗ ನಿರಂಗಸಂಗ. ॥ ೬೩ ॥

೧೫೨

ಸದ್ಗತಿಯ ತೋರುವ ಗುರುವಿಂಗೆ ರಾಜಸ ತಾಮಸವುಂಟೆ?
ಕೆಡದ ಜ್ಯೋತಿಗೆ ಪಡಿಕುಡಿಕೆ ಎಣ್ಣೆ ಉಂಟೆ?
ಆ ಬಿಡುಮುಡಿಯ ನಿನ್ನ ನೀನರಿ,
ಪುಣ್ಯಾರಣ್ಯದಹನ ಭೀಮೇಶ್ವರಲಿಂಗ ನಿರಂಗಸಂಗ. ॥ ೬೪ ॥

೧೫೩

ಜಡೆಮುಡಿ ಬೋಳು ಹೇಗಾವಡಾಗಲಿ,
ನಡೆನುಡಿ ಸಿದ್ಧಾಂತವಾದಡೆ ಸಾಕು,
ಆತ ಪರಂಜ್ಯೋತಿ ಗುರುವಹ.
ಆ ಇರವ ನಿನ್ನ ನೀನರಿ,
ಪುಣ್ಯಾರಣ್ಯ ದಹನ ಭೀಮೇಶ್ವರಲಿಂಗ ನಿರಂಗಸಂಗ. ॥ ೬೫ ॥

**ಗುರುಭಾವ ಭೇದಸ್ಥಲ ಸಂಬಂಧ:**

೧೫೪

ಭಕ್ತನಾದಲ್ಲಿ ದ್ರವ್ಯವ ಸವೆಸಿ ಮರ್ಮವನರಿಯದೆ
ವ್ಯರ್ಥವಾಯಿತ್ತು.
ಖ್ಯಾತಿಗೆ ಇಕ್ಕಿ ಕೊಟ್ಟು ಮಾಡುವಾತನ ಭಕ್ತನೆಂದಡೆ
ವಾಸಿಯ ಮಾತಿಗೆ ಸತ್ತವನ ಪಾಶವಂತೆ ಆತನ ಮಾಟ.
ಮಾಟವನರಿದುಣ್ಣಬೇಕು,
ಸರ್ವವ ನೇತಿಗಳೆದ ನಿರ್ಮಲಗುರು.
ಆತನ ನಿನ್ನ ನೀನರಿ,
ಪುಣ್ಯಾರಣ್ಯದಹನ ಭೀಮೇಶ್ವರಲಿಂಗ ನಿರಂಗಸಂಗ. ॥ ೬೬ ॥

೧೫೫

ಕ್ಷಮೆಯಿಲ್ಲದ ಭಕ್ತಿ, ನಯರತಿಯಿಲ್ಲದ ಮಾಟ, .
ಶ್ರದ್ಧೆಯಿಲ್ಲದ ಕೂಟ, ಶಿವಲಿಂಗಾರ್ಚನೆಯಿಲ್ಲದವನ ಹೃದಯ
ನಂದಿಸಿದ ಕಜ್ಜಳದಂತೆ.
ಆ ಸಂದೇಹವ ನಿನ್ನ ನೀನರಿ,
ಪುಣ್ಯಾರಣ್ಯದಹನ ಭೀಮೇಶ್ವರಲಿಂಗ ನಿರಂಗಸಂಗ. ॥ ೬೭ ॥

೧೫೬

ಮಾಡಿ ಆಡಲೇತಕ್ಕೆ? ಸಲಹಿ ಕೊಲಲೇತಕ್ಕೆ?
ಬಿತ್ತಿ ಕೀಳಲೇತಕ್ಕೆ? ಕಟ್ಟಿ ಒಡೆಯಲೇತಕ್ಕೆ?
ಮಾಡಿ ಮಾಡಿ ಮನಗುಂದುವ,
ನೀಡಿ ನೀಡಿ ನಿಜಗುಂದುವ ಬೇಡ.

ಆ ಮಾಟವ ನಿನ್ನ ನೀನರಿ,
ಪುಣ್ಯಾರಣ್ಯದಹನ ಭೀಮೇಶ್ವರಲಿಂಗ ನಿರಂಗಸಂಗ. ॥ ೬೮ ॥

೧೫೭

ಬಿತ್ತಿದ ಬೆಳೆ, ಕಟ್ಟಿದ ಕೆರೆ, ಸಲಹಿದ ಶರೀರ, ನೆಟ್ಟ ವೃಕ್ಷ
ತನಗಲ್ಲದೆ ಅವಕ್ಕೊಡಲುಂಟೆ?
ತಾ ಮಾಡುವ ಭಕ್ತಿ ತನಗಲ್ಲದೆ ಬೇರೊಂದು ಗುಣವನರಸಲಿಲ್ಲ.
ಆ ಪರಿಯ ನಿನ್ನ ನೀ ತಿಳಿ,
ಪುಣ್ಯಾರಣ್ಯದಹನ ಭೀಮೇಶ್ವರಲಿಂಗ ನಿರಂಗಸಂಗ. ॥ ೬೯ ॥

೧೫೮

ಅರ್ತಿಗಾರಿಕೆಯಲ್ಲಿ ಕೆಲಬರು ಮೆಚ್ಚಬೇಕೆಂದು ಮಾಡುವನ ಭಕ್ತಿ
ಮಂಡೆಯ ಮೇಲೆ ಹೊತ್ತ ಸುರೆಯ ಲಚ್ಚಣೆಯಂತೆ;
ಅದು ನಿಶ್ಚಯವಲ್ಲ.
ಒಳಗಣ ಕಪಟ ಹೊರಗಣ ಬಣ್ಣ,
ಆ ತೊಡಿಗೆಯ ನಿನ್ನ ನೀನರಿ,
ಪುಣ್ಯಾರಣ್ಯದಹನ ಭೀಮೇಶ್ವರಲಿಂಗ ನಿರಂಗಸಂಗ. ॥ ೭೦ ॥

೧೫೯

ಲಂದಣಗಿತ್ತಿಯ ಮಾತು ಬಂದಿಕಾರರ ಜಗಳದಂತೆ
ಕಂಡವರಲ್ಲಿ ತಂದು ಮಾಡುವನ ಮಾಟ
ಸಾಕಿಕೊಂಡಿಹನ ದಯದಂತೆ.
ಆ ಮಾಟದ ಅಂದವನರಿ,
ಪುಣ್ಯಾರಣ್ಯದಹನ ಭೀಮೇಶ್ವರಲಿಂಗ ನಿರಂಗಸಂಗ. ॥ ೭೧ ॥

೧೬೦

ವ್ರತ ನೇಮವ ತೋರಿ
ಗದಕದಲ್ಲಿ ಮಾಡುವ ಭಕ್ತಿ
ಪಶುವ ಕೊಂದು ಹಸಿಯ ಭಕ್ಷಿಸುವವನ ದೆಸೆ ಲೇಸು.
ಪಶುಪತಿಯ ಭಕ್ತನಾಗಿದ್ದು ಹುಸಿದು ಸರ್ವರ ವಂಚಿಸಿ
ಪಿಸುಣತನದಿಂದ ಕಾಡಿ ಬೇಡಿ ತಂದವನ ಮನೆಯನ್ನ

ಕಿಸುಕುಳಕೆ ಸರಿ.
ಅದು ಹುಸಿಯಲ್ಲ, ನಿನ್ನ ನೀ ತಿಳಿದು ನೋಡು,
ಪುಣ್ಯಾರಣ್ಯದಹನ ಭೀಮೇಶ್ವರಲಿಂಗ ನಿರಂಗಸಂಗ. ॥ ೬೨ ॥

ಭಕ್ತಸ್ಥಲದ ನಿರ್ದೇಶಭಾವ:

೧೬೧

ದಾಳಿಹೋದ ಆಳಿನ ಉಸುರಿನಲ್ಲಿ ಒಂದು ವೇಣು ಹುಟ್ಟಿತ್ತು.
ಮೂರು ಗೆಣ್ಣು, ಹದಿನಾರು ಹೋಟೆ.
ಹತ್ತ ಕಳೆದು ಆರರ ಮೇಲೆ ನಿಂದುದು ಅಯಿದರ ನೆಲೆ.
ಅಯಿದ ಕೂಡಿ ನಿಂದುದು ಇಪ್ಪತ್ತರ ಭಾವ.
ತತ್ವಶಕ್ತಿಯಲ್ಲಿ ಅಡಗಿ ಆಳುವೇಣು
ಹತ್ತು ಆರು ಇಪ್ಪತ್ತೈದು ಕೂಡಿ ನಿಶ್ಚಯವಾಯಿತ್ತು.
ಇವರಾಗ ಭೇದಿಸಿ ತತ್ವವನರಿ
ಪುಣ್ಯಾರಣ್ಯದಹನ ಭೀಮೇಶ್ವರಲಿಂಗ ನಿರಂಗಸಂಗ. ॥ ೬೩ ॥

೧೬೨

ಆರಿಗೂ ತೋರದ ಅಂಬರದಲ್ಲಿ
ಒಂದು ಎರಳೆ ಮರಿಯನಿಕ್ಕಿ ಸತ್ತಿತ್ತು.
ಮರಿಯ ಮಂಡೆಯ ದೆಸೆಯಲ್ಲಿ ಮರಿ ತಾಯ ನೆರೆನೋಡಿ,
ಸತ್ತುದನರಿಯದೆ ಗೊತ್ತ ಮೂಸುತ್ತಿದ್ದಿತ್ತು.
ಹೊಲಸಿನ ಗಲವಲು ನಾಸಿಕವ ತಾಗಿ ಸತ್ತುದ ಎಂಬುದನರಿದು
ಮರಿ ಬಚ್ಚಬಯಲಾಯಿತ್ತು.
ಬಯಲ ತಿಳಿದರಿ ನಿನ್ನ ನೀ,
ಪುಣ್ಯಾರಣ್ಯದಹನ ಭೀಮೇಶ್ವರಲಿಂಗ ನಿರಂಗಸಂಗ. ॥ ೬೪ ॥

೧೬೩

ಒಂದಿರುಹಿನ ಗೂಡಿನಲ್ಲಿ ಅಯಿದಾನೆ
ಮರಿಯನಿಕ್ಕಿ ಹೋದವು ತಮ್ಮ ಕಾಡಿಗೆ.
ಇರುಹು ಮರಿಯ ಕಣ್ಣ ಕಟ್ಟಿ
ಮರಿಯ ತೆಗೆದು ಹಾಕಿದವು ತಮ್ಮ ಗೃಹದಿಂದ.
ಆನೆ ಬಂದು ನಿಂದು ನೋಡಿ ಇದೇನಾಯಿತ್ತು ಮರಣ

ಎಂಬುದಕ್ಕೆ ಮೊದಲೇ ಆನೆ ಸತ್ತು ಇರುಹಿನ ಹಗೆ ಬಿಟ್ಟಿತ್ತು.
ಆ ಅರಿವ ಅರಿದು ನೋಡು,
ಪುಣ್ಯಾರಣ್ಯದಹನ ಭೀಮೇಶ್ವರಲಿಂಗ ನಿರಂಗಸಂಗ. ॥ ೨೫ ॥

೧೬೪

ಮಹಾಮನೆಯ ಮಂಟಪದಲ್ಲಿ
ನಾಲ್ಕು ನಡುವಳ ಕಂಬದ ನಡುವಳ ಕಂಬದಲ್ಲಿ
ಒಂದು ಒರಲೆ ಮನೆಯ ಮಾಡಿತ್ತು.
ಅದಕ್ಕೆ ಎಂಟು ಕಂಬ, ಒಂಬತ್ತು ಬಾಗಿಲು, ಹತ್ತು ಕದ;
ಮಿಗಿಲೊಂದು ಮುಚ್ಚುವುದಕ್ಕೆ ಬಾಗಿಲಿಲ್ಲ.
ತುಂಬಿ ಅಲ್ಲಿ ಹಾರಿತ್ತು.
ಆ ಆತ್ಮನ ನೆಲೆಯನರಿ,
ಪುಣ್ಯಾರಣ್ಯದಹನ ಭೀಮೇಶ್ವರಲಿಂಗ ನಿರಂಗಸಂಗ. ॥ ೨೬ ॥

೧೬೫

ಸಂಪಗೆಯ ತಂಬೆಲರಿನಲ್ಲಿ ಒಂದು ಭೃಂಗ ತತ್ತಿಯನಿಕ್ಕಿತ್ತು.
ತನ್ನ ಬಾಳು ಕುಸುಮದ ವಾಸನೆ ಬಲಿವನ್ನಕ್ಕ ತುಂಬಿಯಿದ್ದಿತ್ತು.
ವಾಸನೆ ತೋರಿ ತುಂಬಿ ಸತ್ತು ಮರಿ ಹಾರಿ ಹೋಯಿತ್ತು.
ಆ ಮರಿಯ ಅರಿವ ನಿನ್ನ ನೀನರಿ,
ಪುಣ್ಯಾರಣ್ಯದಹನ ಭೀಮೇಶ್ವರಲಿಂಗ ನಿರಂಗಸಂಗ. ॥ ೨೭ ॥

೧೬೬

ಪುಟ್ಟಿದ ಮರದಲ್ಲಿ ಹಾರಿದ ಪಕ್ಷಿ ತಲೆದೋರುತ್ತದೆ.
ಆಗದ ಹಣ್ಣು ಕುಟುಕಿ ರಸ ತಾಗದೆ ನುಂಗುತ್ತದೆ.
ಅದು ನಾಗರಿಕ ಪಕ್ಷಿ, ಹಾರಿಹೋಯಿತು.
ಅದರಾಗತವನರಿ, ಆತ್ಮನಿರವ ನಿನ್ನ ನೀನೆ ತಿಳಿ
ಪುಣ್ಯಾರಣ್ಯದಹನ ಭೀಮೇಶ್ವರಲಿಂಗ ನಿರಂಗಸಂಗ. ॥ ೨೮ ॥

೧೬೭

ಬ್ರಹ್ಮನ ಬಾಯ ಓಗರವನುಂಡು,
ವಿಷ್ಣುವಿನ ಕೈಯ ಸೀರೆಯ ಹೊದ್ದು,

ರುದ್ರನ ಮನೆಯಲ್ಲಿ ತಿರುಗಾಡುತ್ತಿಪ್ಪ ಭವ್ರಾಂಗಿಗಳು ಕೇಳಿರೋ.
ಬ್ರಹ್ಮನ ಬಾಯ ಮುಚ್ಚಿ,
ವಿಷ್ಣುವಿನ ಕೈಯ ಮುರಿದು,
ರುದ್ರನ ಮನೆಯ ಸುಟ್ಟು ಬುದ್ಧಿವಂತರಾಗಿ.
ಬುದ್ಧಿವಂತರಾದವರ ಅರಿದವರನರಿ.
ಪುಣ್ಯಾರಣ್ಯದಹನ ಭೀಮೇಶ್ವರಲಿಂಗ ನಿರಂಗಸಂಗ. ॥ ೭೯ ॥

೧೬೮

ವಾರಿ ಸಲಿಲವಲ್ಲಿ ಒಂದು ಶರಧಿ ಹುಟ್ಟಿ
ಊರೆಲ್ಲರ ಉರುಳುತ್ತದೆ.
ಆ ಉರುಳು ಕೊರಳ ಬೀರಿ ಬ್ರಹ್ಮನ ಉಸುರಡಗಿತ್ತು;
ವಿಷ್ಣುವಿನ ಎಡೆಯಾಟ ಬಿಟ್ಟಿತ್ತು,
ರುದ್ರನ ಹಣೆಗಿಚ್ಚು ದಳ್ಳುರಿ ಬೇವುತ್ತದೆ.
ಅದ ನಂದಿಸುವರಿಲ್ಲ, ಮೂರರ ಬಿಂದುವನರಿ,
ಪುಣ್ಯಾರಣ್ಯದಹನ ಭೀಮೇಶ್ವಲಿಂಗ ನಿರಂಗಸಂಗ. ॥ ೮೦ ॥

೧೬೯

ಕಾಮಧೇನುವಿನ ನಡುವೆ ಒಂದು ಕೋಣ ಕಟ್ಟಿ ಇದ್ದಿತ್ತು.
ಕೋಣನ ಗವಲು ತಾಗಿ ಕಾಮಧೇನು ಕೆಡುತ್ತದೆ.
ಕೋಣನ ಡೋಣೆಗೆ ತಳ್ಳಿ ಕಾಮಧೇನುವ ಕಾಣದಂತೆ ಮಾಡು.
ಅರಿವು ಅಜ್ಞಾನವ ನಿನ್ನ ನೀನರಿ,
ಪುಣ್ಯಾರಣ್ಯದಹನ ಭೀಮೇಶ್ವರಲಿಂಗ ನಿರಂಗಸಂಗ. ॥ ೮೧ ॥

೧೭೦

ಅಣು ಇರುಹಿನ ಮರಿ ಬ್ರಹ್ಮನ ಅಂಡವನೂರಿ
ವಿಷ್ಣುವಿನ ಪಿಂಡವ ನುಂಗಿತ್ತು,
ಅದು ತನ್ನೊಡಲಿಗೆಯಿದದೆ ರುದ್ರನ ತೊಡೆಮುಡಿಯವಳ
ಆತ ಸಹಿತಾಗಿ ನುಂಗಿತ್ತು.
ಅದೇತರ ಸೂತ್ರವೆಂದು ಆತ್ಮನ ಭೇದವನರಿ,
ಪುಣ್ಯಾರಣ್ಯದಹನ ಭೀಮೇಶ್ವರಲಿಂಗ ನಿರಂಗಸಂಗ. ॥ ೮೨ ॥

೧೬೧

ಮೃತ ಬೊಂಬೆಯ ಗದಕದ ಪಾಶ ಮಸಕಲಿಕ್ಕೆ
ಸ್ಥಾಣು ಹಲಗೆ ಕಂಬದ ಮರೆಯಲ್ಲಿ ನೇಣಿನ ಸೂಲು ಹರಿಯೆ
ಅವು ಜಾಣ ಜೀವನಾಗಿ ಆಡುತ್ತದೆ.
ಅದರ ಜೀವಾಳವನರಿ;
ಕಾಯ ಜೀವ ಕೂಡಿಹ ತತ್ವದ ಭೇದವ ತಿಳಿ ನಿನ್ನ ನೀನೆ,
ಪುಣ್ಯಾರಣ್ಯದಹನ ಭೀಮೇಶ್ವರಲಿಂಗ ನಿರಂಗಸಂಗ. ॥ ೮೩ ॥

೧೬೨

ತಡಿಮಡುವಾದಡೆ ಮೊಗೆವ ಠಾವೆಲ್ಲಿಯದು?
ಜಗವೆಲ್ಲವನರಿದ ಮತ್ತೆ ಬಲ್ಲವನಿನ್ನಾರು?
ಸ್ವಪ್ನದ ತೆರದಂತೆ ಎತ್ತಾನಕ್ಕೆ ಇಪ್ಪವನೊಬ್ಬ
ಆತನ ಚಿತ್ತವನರಿ ನಿನ್ನ ನೀನೆ,
ಪುಣ್ಯಾರಣ್ಯದಹನ ಭೀಮೇಶ್ವರಲಿಂಗ ನಿರಂಗಸಂಗ. ॥ ೮೪ ॥

೧೬೩

ಮಾತಬಲ್ಲವನಾದಡೆ ಸರ್ವ ಜೀವದ ನೀತಿಯನರಿಬೇಕು.
ಜ್ಞಾತೃ ಜ್ಞಾನ ಜ್ಞೇಯ ಭಾವವ ಬಲ್ಲಡೆ
ಇದಿರ ಭೂತಹಿತವ ಬಲ್ಲವನಾಗಿ ಇರಬೇಕು.
ಸುಜ್ಞಾನವರಿತಡೆ ಭವಪಾಶ ಪಾಕುಳರನರಿಯಬೇಕು.
ಇದೆಲ್ಲವನರಿತು ತನ್ನನರಿಯಬೇಕು.
ಆ ಅನ್ಯ ಭಿನ್ನವ ತಿಳಿ ನಿನ್ನ ನೀನೆ,
ಪುಣ್ಯಾರಣ್ಯದಹನ ಭೀಮೇಶ್ವರಲಿಂಗ ನಿರಂಗಸಂಗ. ॥ ೮೫ ॥

೧೬೪

ಬಾಹ್ಯದ ನೀತಿ ಅಂತರಂಗದ ಅರಿವು ಸರ್ವರಲ್ಲಿ ಕ್ಷಮೆ
ಒಳಹೊರಗಾಗುವ ವರ್ತಕ ತ್ರಿವಿಧ ಶುದ್ಧವಾಗಿಯಿಪ್ಪ
ಭಕ್ತನ ಜಂಗಮದ ಹೃತ್ಕಮಲವೆ ವಿರಕ್ತವಾಸ.
ಇಷ್ಟನರಿದು ಮರೆದವಂಗಲ್ಲದೆ ತೆರಪಿಲ್ಲ ; ನಿನ್ನ ನೀನರಿ
ಪುಣ್ಯಾರಣ್ಯದಹನ ಭೀಮೇಶ್ವರಲಿಂಗ ನಿರಂಗಸಂಗ. ॥ ೮೬ ॥

೧೭೫

ವೇಸಿಯ ಸಂಗ ದ್ರವ್ಯದ ಕೇಡು,
ದಾಸಿಯ ಸಂಗ ಮಾನಹಾನಿಗೆ ಮೊದಲು;
ನಿಮ್ಮ ಶರಣರ ಸಂಗ ಕರಣಂಗಳ ಕೇಡು.
ಇಂತೀ ಆಗುಚೇಗೆಯನರಿ ನಿನ್ನ ನೀ,
ಪುಣ್ಯಾರಣ್ಯದಹನ ಭೀಮೇಶ್ವರಲಿಂಗ ನಿರಂಗಸಂಗ. ॥ ೮೭ ॥

೧೭೬

ಆಸೆಯಳಿದು ನಿರಾಸಕನಾದಲ್ಲಿ ಪಾಶಬದ್ಧರೊಳಗಣ
ಮಾತಿನ ಮಾಲೆಯೇಕೆ?
ಸರ್ವವ ನೇತಿಗಳೆದು ನಿಂದಲ್ಲಿ ಸ್ತುತಿ ನಿಂದೆಯ ಮಾತಿನ
ಬಿರುಬು ಅದೇತಕ್ಕೆ?
ಇಂತಿವನರಿದು ನುಡಿದು ನಡೆಯಲಿಲ್ಲವ ತ್ರಿವಿಧ
ಸುರೆಗುಡಿಹಿಗಳ ಮಾತು.
ಮಂಜಿನ ಹರಿಗೆಯ ಬಿಸಿಲಂಬು ತಾಗಿದಂತಾಯಿತ್ತು.
ಇಷ್ಟರ ಗುಣ ಏತರಿಂದಾಯಿತ್ತು, ನಿನ್ನ ನೀನರಿ,
ಪುಣ್ಯಾರಣ್ಯದಹನ ಭೀಮೇಶ್ವರಲಿಂಗ ನಿರಂಗಸಂಗ. ॥ ೮೮ ॥

೧೭೭

ಭಕ್ತನಾದಲ್ಲಿ ಆವ ಸೋಂಕು ಬಂದಡೂ ಬಾವಶುದ್ಧವಾಗಿರಬೇಕು.
ಭಕ್ತಂಗಲ್ಲದೆ ತಾಕು ಸೋಂಕು ಮತ್ತೊಬ್ಬರಿಗೆ ಬಾರವು.
ಬಿರಿದ ಕಟ್ಟಿದ ಬಂಟಂಗೆ ತಡಹಲ್ಲದೆ ಬರುಬರಿಗುಂಟೆ
ಮನೆದಗಹು?
ನಿಮ್ಮನರಿವಂಗೆ ಮರವೆ ಬಂದಡೆ
ನಿಮ್ಮನರಿದು ತನ್ನ ತಾನರಿಯಬೇಕೆಂಬುದ ನಿನ್ನ ನೀ ತಿಳಿ,
ಪುಣ್ಯಾರಣ್ಯದಹನ ಭೀಮೇಶ್ವರಲಿಂಗ ನಿರಂಗಸಂಗ. ॥ ೮೯ ॥

೧೭೮

ಸುಖದುಃಖ ಸತಿ ಪುರುಷಂಗೂ ಸರಿ.
ಗತಿ ಭೇದ ಕರ್ತೃ ಭೃತ್ಯಂಗೂ ಸರಿ.
ನೀರು ನೆಲದಂತೆ, ಸಾರ ಸುಧೆಯಂತೆ ಭಕ್ತ ಜಂಗಮದ ಇರವು.

ಕರ್ಪೂರ ಉರಿಯಂತೆ ಇದು ನಿಶ್ಚಯ.
ನಿನ್ನ ನೀನರಿ, ಪುಣ್ಯಾರಣ್ಯದಹನ ಭೀಮೇಶ್ವರಲಿಂಗ
ನಿರಂಗಸಂಗ. ॥ ೯೦ ॥

**ವರ್ತಕ ಕ್ರೀಶುದ್ಧಸ್ಥಲ:**

೧೭೯

ಸಕಲ ವ್ಯಾಪಾರದಲ್ಲಿ ವ್ಯವಹರಣೆಯ ಮಾಡಿ ಬಂದು
ನಿಂದ ಧರೆಯ ಮೇಲೆ ಅಯಿದು ರೂಪಾಗಿ
ರೂಪಿಂಗೈದು ಕುರುಹಿನ ಭೇದದಲ್ಲಿ ಆರೋಪಿಸಿ
ರೂಪು ರೂಪಿನಿಂದ ಅಳಿದು ದೃಷ್ಟವ ದೃಷ್ಟದಿಂದ ಕಾಬಂತೆ
ಅರಿವ ಅರಿವಿಂದ ಭಾವವ ಭಾವದಿಂದ
ತನ್ನ ತಾ ಕುರುಹಿಟ್ಟುಕೊಂಡು ತತ್ವ ನಿಶ್ಚಯವಾಗಿ
ನಿಜವ ನಿನ್ನ ನೀಸರಿ,
ಪುಣ್ಯಾರಣ್ಯದಹನ ಭೀಮೇಶ್ವರಲಿಂಗ ನಿರಂಗಸಂಗ. ॥ ೯೧ ॥

೧೮೦

ಉದಕ ನಾನಾ ವರ್ಣದ ರೂಪಿನಲ್ಲಿ ಬೆರಸಿ
ಅವರ ಛಾಯಕ್ಕೆ ಭಿನ್ನಭಾವವಿಲ್ಲದೆ,
ಆ ರೂಪಿಂಗೆ ತಾ ದ್ರವವೊಡಲಾಗಿ ತೋರುವಂತೆ
ಎನ್ನ ಸರ್ವಾಂಗದಲ್ಲಿ ತೋರುವ ಕೋರಿಕೆ ನೀನಾಗಿ,
ಮುಕುರವ ನೋಡುವ ನೋಟದಂತೆ ಒಳಗೆ ತೋರುವ ಇರವು,
ಹೊರಗಳವನ ಪ್ರತಿರೂಪಿನಂತೆ
ಎಲ್ಲಿಯೂ ನೀನಾಗಿ ನಾನರಿದು ಮರೆವುದಕ್ಕೆ ತೆರಪಿಲ್ಲ.
ಹಾಗೆಂದಲ್ಲಿಯೆ ನಿನ್ನ ಉಳುಮೆ,
ಪುಣ್ಯಾರಣ್ಯದಹನ ಭೀಮೇಶ್ವರಲಿಂಗ ನಿರಂಗಸಂಗ. ॥ ೯೨ ॥

೧೮೧

ಆಡಿನ ಕಾಲ ಮುರಿದು, ಕೋಡಗದ ಹಲ್ಲ ಕಿತ್ತು,
ಉಡುವಿನ ಕುಡಿನಾಲಗೆಯ ಕೊಯಿದು, ಬಳ್ಳುವಿನ ಸೊಲ್ಲನರಿದು
ಇವೆಲ್ಲವ ನಿನ್ನಲ್ಲಿಗೆ ತಂದೆ; ಇವ ಬಲ್ಲವ ನೀನಲ್ಲದಿಲ್ಲ.

ಎನಗೆ ಅಲ್ಲಿಯೊ ಇಲ್ಲಿಯೊ ಮತ್ತೆ ಅಂದು ನೀ ಹೇಳಿದಲ್ಲಿಯೊ
ಎಂಬುದ ನಾನರಿಯೆ, ನೀ ಹೇಳು,
ಪುಣ್ಯಾರಣ್ಯದಹನ ಭೀಮೇಶ್ವರಲಿಂಗ ನಿರಂಗಸಂಗ. ॥ ೯೩ ॥

೧೮೨

ಗೋವು ಮೊದಲು ಚತುಃಪಾದಿ ಜೀವಂಗಳು
ತಾವು ಬಂದ ಹಾದಿಯ ಮೂಸಿ ನೋಡಿ ತಮ್ಮಯ
ಬೀಡಿಂಗೆ ಹೋಹಂತೆ,
ಆ ಪರಿ ನಿನಗಿಲ್ಲ, ಪಶುವಿನ ಮತಿಯಷ್ಟು ಗತಿಯಿಲ್ಲ.
ಬಂದುದ ಮರೆದ ಬಂಧಜೀವಿಗ ನಾನಾಗಿ
ಜೀವಕಾಯದ ಸಂದ ಬಿಡಿಸು.
ಬಿಂದು ನಿಲುವ ಅಂದವ ಹೇಳು,
ಪುಣ್ಯಾರಣ್ಯದಹನ ಭೀಮೇಶ್ವರಲಿಂಗ ನಿರಂಗಸಂಗ. ॥ ೯೪ ॥

೧೮೩

ಕೋಲ ಬಳಿಯ ಅಂಧಕನಂತೆ, ವಾಹನದ ಪಂಗುಳನಂತೆ,
ಗಹನದಲ್ಲಿ ಸಿಕ್ಕಿದ ಸಿಸುವಿನಂತೆ,
ಸ್ಥಾನದಪ್ಪಿ ಹೊಲಬುದಪ್ಪಿದ್ದೇನೆ,
ಹೊಲದ ಹೊಲಬ ಹೇಳು,
ಪುಣ್ಯಾರಣ್ಯದಹನ ಭೀಮೇಶ್ವರಲಿಂಗ ನಿರಂಗಸಂಗ. ॥ ೯೫ ॥

೧೮೪

ಆಕಾಯದ ಕಣ್ಣಿನಲ್ಲಿ ನೋಡ ವಿಕಾರವಳಿದು
ಸುಖಪಟ್ಟಣವ ಕಂಡೆ.
ಆ ಪಟ್ಟಣದರಸಿಂಗೆ ಭಾವ ಕಾಲಿಲ್ಲ.
ಪ್ರಧಾನಂಗೆ ಪಾರುಪತ್ಯಕ್ಕೆ ನುಡಿವಡೆ ಬಾಯಿಲ್ಲ.
ತಳವಾರ ತಿರುಗುವುದಕ್ಕೆ ಕಣ್ಣಿಲ್ಲ.
ಆ ಪಟ್ಟಣದಲ್ಲಿ ಮೂವರಿಗೆ ಕರ್ತನೊಬ್ಬ ಅರಸು.
ಆ ಅರಸ ಕಣ್ಣಿನಲ್ಲಿ ಕಾಣಲಿಲ್ಲ, ಎಲ್ಲಿದ್ದಹರೆಂದು ಕೇಳಲಿಲ್ಲ.
ಇದ್ದ ಠಾವಿಂಗೆ ಒಬ್ಬರೂ ಹೊದ್ದಲಿಲ್ಲ.
ಅರಸಿನ ಆಜ್ಞೆ, ಬಲುಹು, ಓಲಗಕ್ಕೆ ತೆರಪಿಲ್ಲ.

ಜೀವಿತಕ್ಕೆ ಅಡಹಿಲ್ಲ, ಎನ್ನ ಬಡತನವ ಇನ್ನಾರಿಗೆ ಹೇಳುವೆ?
ಬಂಟರು ಸತ್ತರು, ಅರಸು ನಷ್ಟವಾದ.
ಆ ಉಭಯದ ಬೇಧವ ನಾನರಿಯೆ, ನೀ ಹೇಳು.
ಪುಣ್ಯಾರಣ್ಯದಹನ ಭೀಮೇಶ್ವರಲಿಂಗ ನಿರಂಗಸಂಗ. ॥ ೯೬ ॥

೧೮೫

ಮನ ಮಂಗಳಾಂಗಿಯೆಂಬ ಹೆಂಗೂಸಿನ ಕೈಯಲ್ಲಿ
ತ್ರಿವಿಧ ಬಂಧವೆಂಬ ಗಡಿಗೆಯಿದ್ದಿತ್ತು.
ಆ ಗಡಿಗೆಯ ಕೊಂಡು ಹೋಗಿ
ಅವಿಗತನೆಂಬ ಬಾವಿಯಲ್ಲಿ ರವಿಶೇಖರನೆಂಬ ನೀರ ತುಂಬಿ
ಬ್ರಹ್ಮಂಗೆ ಎರೆಯಲಾಗಿ ಬಾಯ ಮುಚ್ಚಿತ್ತು;
ವಿಷ್ಣುವಿನ ಉಂಬ ಕೈಗೆ ಎರೆಯಲಾಗಿ ಕೈ ಖಂಡಿಸಿ ಬಿದ್ದಿತ್ತು;
ರುದ್ರನ ಮಂಡೆಗೆ ಮಜ್ಜನವ ಮಾಡಲಾಗಿ
ಅಂಗ ಕರಗಿ ಅವಳಂಗೈಯ ಗಡಿಗೆಯಲ್ಲಿ ಅಡಗಿದ.
ಎನಗಿನ್ನು ಅಂಗವಳಿದ ಠಾವ ಹೇಳಾ,
ನಿರಂಗಮಯ ಪುಣ್ಯಾರಣ್ಯದಪನ ಭೀಮೇಶ್ವರಲಿಂಗ
ನಿರಂಗಸಂಗ. ॥ ೯೭ ॥

೧೮೬

ಇಚ್ಛಾಶಕ್ತಿ ಹೋತಿಂಗೆ ಸತಿಯಾಹಲ್ಲಿ,
ಕ್ರಿಯಾಶಕ್ತಿ ಕೋಡಗಕ್ಕೆ ಸತಿಯಾಹಲ್ಲಿ,
ಜ್ಞಾನಶಕ್ತಿ ಬಳ್ಳುವಿನ ಬಾಗಿಲು ಕಾವಲ್ಲಿ
ಇವರೆಲ್ಲರ ನೀ ನೋಡುತ್ತಿದ್ದೆ.
ನೀ ನೋಡುವ ನೋಟ ತ್ರಿವಿಧ ನಾಶ.
ಕೋಲಿನ ಶಾಂತನ ವೇಷ, ನಿನ್ನ ಕಾರುಣ್ಯವಾಸ,
ಎನ್ನ ಭ್ರಾಂತಿನ ವೇಷ ನಾಶವಾಯಿತ್ತು.
ಪುಣ್ಯಾರಣ್ಯದಹನ ಭೀಮೇಶ್ವರಲಿಂಗ ನಿರಂಗಸಂಗ. ॥ ೯೮ ॥

೧೮೭

ಧರೆ ಸಿರಿ ಉರಿ ಮೂರು ಕೂಡಿ ಉರಿವುತ್ತದೆ.
ಆ ಉರಿಯ ನಡುವೆ ಮಲಯಜ ಹುಟ್ಟಿತ್ತು.
ಮಲಯಜದ ಗಂಧ ತಾಗಿ ಮೂವರ ಬಲೋತ್ರ ನಂದಿತ್ತು.

ಅವು ನಂದುವಾಗ ನಾ ನಿಂದಿರಲಾಗಿ
ಆ ರಾಹು ತಾಗಿ ಎನ್ನಯ ಕಾಯದ ರೂಪು ಬಯಲಾಗದಿದೆ
ಎಂದೆನುತ್ತ ಚಿಪ್ಪಡೋರುತ್ತದೆ.
ತೋರಿ ಅಡಗಬೇಡ, ಅಡಗಿದಡೆ ನಾ ಬಿಡೆ,
ಪುಣ್ಯಾರಣ್ಯದಹನ ಭೀಮೇಶ್ವರಲಿಂಗ ನಿರಂಗಸಂಗ. ॥೯೯॥

೧೮೮

ರಾಜ್ಯ ಪೋದಲ್ಲಿ ರಾಯತನ ಉಂಟೆ?
ಪೂಜೆ ಅಡಗಿದಲ್ಲಿ ಪುಣ್ಯದ ಹಂಗುಂಟೆ?
ಮಾಟಕೂಟ ನಷ್ಟವಾದಲ್ಲಿ ಮಹಾಮನೆಯ ಎಡೆಯಾಟವುಂಟೆ?
ಸಟ್ಟೆಯನೊಪ್ಪಿಸಿದವಂಗೆ ಮತ್ತೆ ಒಪ್ಪದ ಚೀಟುಂಟೆ?
ಭಕ್ತನಾಗಿ ಮಾಡಿ ಕಂಡೆ, ಭೃತ್ಯನಾಗಿ ಕಾಯಿದು ಕಂಡೆ
ಮತ್ತೆ ನೀ ನೀವೊಪ್ಪಿ ಕೊಟ್ಟಿರಿ.
ಎನ್ನಂಗದಲ್ಲಿ ಮರ್ತ್ಯರೂಪನ ರೂಪ
ನಿಮಗೆ ಒಪ್ಪಿಸಿದೆಯೆಂಬುದಕ್ಕೆ ಮೊದಲೇ ಬಚ್ಚಬಯಲಾಯಿತ್ತು.
ಪುಣ್ಯಾರಣ್ಯದಹನ ಭೀಮೇಶ್ವರಲಿಂಗ ನಿರಂಗಸಂಗ. ॥ ೧೦೦ ॥

ಪರಿಶಿಷ್ಟ :

೧೮೯

ಎನಗುಣಲಿಕ್ಕಿದರಯ್ಯ ಸಿರಿಯಾಳ-ಚೆಂಗಳೆಯರು.
ಎನಗುಡ ಕೊಟ್ಟರಯ್ಯಾ ದಾಸ-ದುಗ್ಗಳೆಯವರು.
ಎನ್ನ ಮುದ್ದಾಡಿಸಿದರಯ್ಯಾ ಅಕ್ಕನಾಗಮ್ಮನವರು.
ಎನ್ನ ಸಲಹಿದರಯ್ಯಾ ಅಮ್ಮವ್ವೆ ಕೊಡಗೂಸು
ಚೋಳಿಯಕ್ಕ ನಿಂಬವ್ವೆ ನೀಲಮ್ಮ ಮಹಾದೇವಿ ಮುಕ್ತಾಯಕ್ಕಗಳು.
ಇಂತಿವರ ಒಕ್ಕುಮಿಕ್ಕ ತಾಂಬೂಲ ಪ್ರಸಾದವ ಕೊಂಡು
ಬದುಕಿದೆನಯ್ಯಾ
ಪುಣ್ಯಾರಣ್ಯದಹನ ಭೀಮೇಶ್ವರಲಿಂಗ ನಿರಂಗಸಂಗ. ॥ ೧೦೧ ॥

೧೯೦

ಎನ್ನಾಕಾರವೆ ನೀನಯ್ಯ ಬಸವಣ್ಣ.
ನಿ[ನ್ನಾಕಾರವೆ] ಕೋಲ ಶಾಂತ.
ಓಡಿದಿರ್ದ ಕರಸ್ಥಲ ಬಸವಣ್ಣನಿಂದ ಉದಯವಾದ ಕಾರಣ
ಆ ಬಸವಣ್ಣನ ಶ್ರೀಪಾದಕ್ಕೆ ಅಹೋರಾತ್ರಿಯಲ್ಲಿ

ನಮೋ ನಮೋಯೆಂಬೆ.
ಪುಣ್ಯಾರಣ್ಯದಹನ ಭೀಮೇಶ್ವರಲಿಂಗ ನಿರಂಗಸಂಗ. ॥ ೧೦೨ ॥

೧೯೧

ಬಿಸಿಲ ಮುಂದಣ ಮಂಜಿನಂತಾಯಿತ್ತು.
ದಿಟದ ಮುಂದಣ ಸಟೆಯಂತಾಯಿತ್ತು.
ಪುಣ್ಯದ ಮುಂದಣ ಪಾಪದಂತಾಯಿತ್ತು.
ಯೋಗಿಯ ಮುಂದಣ ಸಂಸಾರದಂತಾಯಿತ್ತು.
ಧೀರನ ಮುಂದಣ ಹೇಡಿಯಂತಾಯಿತ್ತು.
ಉರಗನ ಮುಂದಣ ಭೇಕಸಂತಾಯಿತ್ತು.
ಹರಿಯ ಮುಂದಣ ಕರಿಯಂತಾಯಿತ್ತು.
ವಿವೇಕದ ಮುಂದಣ ದುಃಖದಂತಾಯಿತ್ತು.
ಪುಣ್ಯಾರಣ್ಯದಹನ ಭೀಮೇಶ್ವರನೆಂಬ
ಸದ್ಗುರು ಕಾರುಣ್ಯವಾಗಲೊಡನೆ
ಎನ್ನ ಸುತ್ತಿಹ ಪ್ರಪಂಚು ಸರ್ವವೂ ಓಡಿದವಯ್ಯಾ!॥ ೧೦೩ ॥

# ಗಜೇಶ ಮಸಣಯ್ಯನ ವಚನ

೧೯೨

ಅಖಂಡ ಪರಿಪೂರ್ಣ ಲಿಂಗ ತಾನೆಯಾದ ಶರಣಂಗೆ
ಲಿಂಗವೆಂಬುದೇನು ಹೇಳಾ?
ಲಿಂಗ ಹೊರಗೊ ಒಳಗೊ ಎಂದು ಶಂಕಿಸಿ ನುಡಿವ ಶಂಕಿತರಂತಿರಲಿ.
ಮುನ್ನ ಮುನ್ನವೆ ಮಹಾಲಿಂಗವಾದ ಬಳಿಕ ಮತ್ತೇನೆಂದು
ನೆನೆಯಲಿಲ್ಲ.
ಮಹಾಲಿಂಗ ಗಜೇಶ್ವರನಲ್ಲಿ ನಿಜೈಕ್ಯವಾದ ಶರಣಂಗೆ
ಮುಂದೆ ಒಂದೂ ಇಲ್ಲ, ಮಾಣು. ॥೧॥

೧೯೩

ಅಗಲಿದ ನಲ್ಲನ ಕನಸಿನಲಪ್ಪಿ ಸುಖಿಯಾದಿರವ್ವಾ.
ಕಂಡ ಕನಸು ದಿಟವಾದಡೆ ಅವ ನಮ್ಮ ನಲ್ಲನವ್ವಾ.
ಮನಸುಳ್ಳವರು ನೀವು ಪುಣ್ಯಗೈದಿರವ್ವಾ
ಮಹಾಲಿಂಗ ಗಜೇಶ್ವರನನಗಲಿದಡೆ ನಿದ್ರೆಯೆಮಗಿಲ್ಲ,
ಕನಸಿನ್ನೆಲ್ಲಿ ಬಹುದವ್ವಾ. ॥ ೨ ॥

೧೯೪

ಅಗಲಲಿಲ್ಲದ ನಲ್ಲನನಗಲಿ ನೆರೆದೆಹೆನೆಂಬ
ಕಾಮಿನಿಯರ ಭಂಗವ ನೋಡಾ!
ಆ ನಮ್ಮ ನಲ್ಲನ ಅನುವಿನೊಳಿರ್ದು
ನೆರೆದೆಹೆನೆಂಬ ಭರವೆನಗವ್ವಾ.
ಮಹಾಲಿಂಗ ಗಜೇಶ್ವರದೇವರನಗಲುವಡೆ
ನಾನೇನು ಕಲ್ಲುಮನದವಳೆ ಅವ್ವಾ! ॥ ೩ ॥

೧೯೫

ಅಂಗಸಂಗದಲ್ಲಿದ್ದು ಬಂದುದನೆ ಕಂಡು
ಹಾವು ಹಸು ಮಗುವಿನಂತೆ ಆದೆ ನೋಡವ್ವಾ.
ಕಂಗಳ ನೋಟದ ಸುಖಕ್ಕೆ ಮನವನೊಪ್ಪಿಸುವೆ.
ಪತಂಗದ ಬೆಸನಿಯಂತೆ ಆದೆ ನೋಡವ್ವಾ.
ಮದಾಳಿಯ ನಾಸಿಕದಂತೆ ಸುಳಿದು ಸುಖಬಡುವೆ.
ಮಹಾಲಿಂಗ ಗಜೇಶ್ವರಾ ನಿನ್ನ ವಿನಯ ನೋಡವ್ವಾ. ॥ ೪ ॥

೧೯೬

ಅನಂತಾನಂತಕಾಲ ನಿತ್ಯವೆಂಬಿರಿ ಸಂಸಾರ.
ಸಂಸಾರವೆಂಬುದು ಹುಸಿ ಕಂಡಾ ಎಲವೊ!
ಇಂದಿನಿಂದಿನ ಸುಖ ಇಂದಿಂಗೆ ಪರಿಣಾಮ.
ದಿನದಿನದ ಸುಖ ಹುಸಿ ಕಂಡಾ ಎಲವೊ!
ಘನಘನವೆಂಬ ರೂಪಿಂಗೆ ರತಿಯಿಲ್ಲಯ್ಯಾ.
ಮಹಾಲಿಂಗ ಗಜೇಶ್ವರನಲ್ಲಿ ತಿಳಿದು ನೋಡಾ ಎಲವೊ! ॥ ೫ ॥

೧೯೭

ಅಪ್ಪಿನ ಸೋಂಕಿನ ಸುಖವನಗಲುವ ಮನಕ್ಕಿಂದ
ಬಂಜೆಯಾಗಿಪ್ಪುದು ಕರಸುಖ ನೋಡವ್ವಾ.
ಕಂಗಳ ನೋಟ ಮನಕ್ಕೆ ಸೈರಿಸದು,
ಎಣೆಗೊಂಡು ಬಡವಾದ ಪರಿಯ ನೋಡವ್ವಾ.
ತುಪ್ಪುಳನಿಕ್ಕಿದ ಹಂಸೆಯಂತಾದೆನವ್ವಾ
ಮಹಾಲಿಂಗ ಗಜೇಶ್ವರನುಳಿದಡೆ. ॥ ೬ ॥

೧೯೮

ಅರಳಿದ ಪುಷ್ಪ, ಪರಿಮಳಿಸದಿಹುದೆ ಅಯ್ಯಾ?
ತುಂಬಿದ ಸಾಗರ, ತೆರೆನೊರೆಗಳಾಡದಿಹುದೆ ಅಯ್ಯಾ?
ಆಕಾಶವ ಮುಟ್ಟುವವ, ಅಟ್ಟಗೋಲ ಹಿಡಿವನೆ ಅಯ್ಯಾ?
ಪರದಲ್ಲಿ ಪರಿಣಾಮಿಯಾದ ಶರಣ,
ಕರ್ಮ ಪೂಜೆ ಫಲವನತಿಗಳೆಯದಿಹನೆ ಮಹಾಲಿಂಗ
ಗಜೇಶ್ವರಾ. ॥ ೭ ॥

೧೯೯

ಅವ್ವಾ, ನಾನು ಸೀರೆಯನುಡಲಮ್ಮೆನು.
ಅಲ್ಲಿ ಗಂಡೆಣ ಇದ್ದೂದೆಂದೆಲೆ ಅವ್ವಾ.
ಅವ್ವಾ, ಬೇಟದ ರತಿಯಲ್ಲಿ ಹುಟ್ಟಿ ಬೆಳೆದುದಯವಾದಳು.
ಅವ್ವಾ, ಇಂದೆನ್ನ ಮಹಾಲಿಂಗ ಗಜೇಶ್ವರನುಳಿದನೆಂದಟ್ಟಿದಡೆ
ಅವ್ವಾ, ನಾನು ಮುತ್ತಲಮ್ಮೆ
ಅಲ್ಲಿ ಪ್ರತಿಬಿಂಬವಿದ್ದೂದೆಂದು. ॥ ೮ ॥

೨೦೦

ಅಷ್ಟವಿಧಾರ್ಚನೆ ಷೋಡಶೋಪಚಾರ
ಬಾಹ್ಯಕ್ರೀಯಲ್ಲಿ ಲಿಂಗವುಂಟೆ?
'ಸ್ವಯಮಾತ್ಮ ಪರೋಲಿಂಗ' ವೆಂದುಲಿವ
ಬೀದಿಯ ಭಂಡರ ಮಾತ ಕೇಳಲಾಗದು.
ತಿಲಕುಸುಮ ಪರಿಮಳದಂತೆ ಒಳ ಹೊರಗು ಪರಿಪೂರ್ಣ
ಮಹಾಲಿಂಗ ಗಜೇಶ್ವರಾ. ॥ ೯ ॥

೨೦೧

ಅಹುದಹುದು,
ಲಿಂಗವಿಲ್ಲದೆ ಶಿಷ್ಯನನರಿಯಬಲ್ಲ ಗುರು,
ಲಿಂಗವಿಲ್ಲದೆ ಗುರುವನರಿಯಬಲ್ಲ ಶಿಷ್ಯ.
ಗುರುವನರಿಯಬಲ್ಲ ಶಿಷ್ಯ, ಶಿಷ್ಯನನರಿಯಬಲ್ಲ ಗುರು,
ಇವರಿಬ್ಬರ ಭೇದವ ನೀನೆ ಬಲ್ಲೆ ಗಜೇಶ್ವರಾ. ॥ ೧೦ ॥

೨೦೨

ಆತನ ನೋಡಿದಂದು ದೆಸೆಗಳ ಮರೆದೆನಿನ್ನೆಂತವ್ವಾ.
ಅವ್ವಾ ಅವ್ವಾ ಆತನ ನುಡಿಸಿದಡೆ ಮೈಯೆಲ್ಲಾ ಬೆವತುದಿನ್ನೆಂತವ್ವಾ.
ಅವ್ವಾ ಅವ್ವಾ ಆತನ ಕೈಯ ಹಿಡಿದಡೆ
ಎನ್ನ ನಿರಿಗಳು ಸಡಿಲಿದವಿನ್ನೆಂತವ್ವಾ.
ಇಂದೆಮ್ಮ ಮಹಾಲಿಂಗ ಗಜೇಶ್ವರನನಪ್ಪಿದೆನೆಂದಡೆ
ನಾನಪ್ಪ ಮರೆದೆನಿನ್ನೆಂತವ್ವಾ. ॥ ೧೧ ॥

೨೦೩

ಆತನ ಬೆರಸಿದ ಕೂಟವನೇನೆಂದು ಹೇಳುವೆನವ್ವಾ,
ಹೇಳಲೂಬಾರದು, ಕೇಳಲೂಬಾರದು;
ಏನ ಹೇಳುವೆನವ್ವಾ, ಶಿಖಿ ಕರ್ಪೂರ ಬೆರಸಿದಂತೆ.
ಮಹಾಲಿಂಗ ಗಜೇಶ್ವರನ ಕೂಡಿದ ಕೂಟವ
ಹೇಳಲು ಬಾರದವ್ವಾ. ॥ ೧೨ ॥

೨೦೪

ಆಲಿಕಲ್ಲ ಮರದಡಿಯಲಿಪ ಮಘಮಘಿಸುವ ಗಿಳಿವಿಂಡು
ಉರವಣಿಸುವ ಪಕ್ಷಿಗಳು, ಸರಸಗ್ರೈವ ಕೋಗಿಲೆ,
ಗಗನದ ಚಂದ್ರಮ;
ಅಗಲಲಾರೆನು ಸಖಿಯೆ ಬೆಳುದಿಂಗಳು ಬಿಸಿಲಾದವೆ?
ಗಗನದ ದಶರಥನ ಬೀಡಿನಲ್ಲಿ ಕಾಮಿನಿ ಕೈವೋದಳೆ?
ದಶಾವಸ್ಥೆಗೊಂಡೆನು ಮಹಾಲಿಂಗ ಗಜೇಶ್ವರನುಳಿದಡೆ.॥ ೧೩ ॥

೨೦೫

ಆವುಗೆಯ ಕಿಚ್ಚಿನಂತೆ, ಧಾಮಧೂಮವಾದಂತೆ
ಆವ ನಾಡ ಸುಟ್ಟನೆಂದರಿಯೆನವ್ವಾ.
ಬೊಬ್ಬೆಯ ಕೊಂಡು ಹೋದವನೆಲ್ಲಿ ಉಳಿದನೆಂದರಿಯೆನವ್ವಾ.
ನಿರಾಳ ನಿರಾಳದಲ್ಲಿ ಮಹಾಲಿಂಗ ಗಜೇಶ್ವರದೇವನುಳಿದನೆಂದು ಹೇಳಿದಡೆ
ಕಂಗಳ ನೀರಲ್ಲಿ ನಿಂದೆನವ್ವಾ. ॥ ೧೪ ॥

೨೦೬

ಇಂದುವಿನಲ್ಲಿ ಉದಯವಾದ ಕಲ್ಲಿನಂತೆ ಮುನಿಸ ಮರೆದಿರ್ದಳವ್ವೆ.
ಅವನ ಸೋಂಕಿನಲ್ಲಿ ಸುಖಿಯಾದಳು.
ಅಗಲಿದಡೆ ಕರೆಗೊಂಡಳು.
ಮಹಾಲಿಂಗ ಗಜೇಶ್ವರದೇವರಲ್ಲಿ
ಮನಸೋಂಕಿ ಮನ ಲೀಯವಾದಳವ್ವೆ. ॥ ೧೫ ॥

೨೦೭

ಇರುಳಿನ ಜಕ್ಕವಕ್ಕಿಯಂತೆ ಅಗಲಿ ಹಲುಬುತಿರೆ
ಇರುಳಿನ ತಾವರೆಯಂತೆ ಮುಖ ಬಾಡಿ,
ಇರುಳಿನ ನೆಯ್ದಿಲಂತೆ ಕಣ್ಣಮುಚ್ಚದೆ,
ಇರುಳಿನ ಸಮುದ್ರದಂತೆ ಘನವಾಗಿ,
ಸಲೆ ಉಮ್ಮಳಿಸಿ ಸಂಜೆವರಿದು
ಮಹಾಲಿಂಗ ಗಜೇಶ್ವರನ ಬರವಿಂಗೆ ಬೆಳಗಾಯಿತ್ತು. ॥ ೧೬ ॥

೨೦೮

ಈ ಸಕಲದೊಳಗೆ ಒಂದು ಸಯವಿಲ್ಲದೆ
ನಾವು ಹಿರಿಯರು ನಾವು ಲಿಂಗವಂತರೆಂಬರು.
ಇದಿರ ಕೈಯಲ್ಲಿ ಎನಿಸಿಕೊಳ್ಳುತ್ತಿಹರು ಮನ ನಾಚದೆ.
ಇಂಥ ಮೂಗುನಾಚಿಗಳ ಮೆಚ್ಚುವನೆ
ಮಹಾಲಿಂಗ ಗಜೇಶ್ವರನಲ್ಲಿ
ಎನ್ನ ಹೆತ್ತ ತಂದೆ ಪೂರ್ವಾಚಾರ್ಯ ಸಂಗನಬಸವಣ್ಣ.॥ ೧೭ ॥

೨೦೯

ಉದರವ ತಾಗಿದ ಮಾತು ಅಧರದಲ್ಲಿ ಬೀಸರವೋದೀತೆಂದು
ಅಧರವ ಮುಚ್ಚಿಕೊಂಡಿರ್ದಳವ್ವೆ.
ಕಂಗಳ ಮುಚ್ಚಿಕೊಂಡಿರ್ದಳವ್ವೆ.
ಪರಿಮಳ ಬೀಸರವೋದೀತೆಂದು
ಅಳಿಗೆ ಬುದ್ಧಿಯ ಹೇಳಿದಳವ್ವೆ.
ಮನ ಬೀಸರವೋದೀತೆಂದು
ದಿನಕರನ ಕಾವಲಕೊಟ್ಟಳವ್ವೆ,
ಇಂದು ನಮ್ಮ ಮಹಾಲಿಂಗ ಗಜೇಶ್ವರನ ನೆರೆವ
ಭರದಿಂದ. ॥ ೧೮ ॥

೨೧೦

ಋತುಕಾಲ ತಪ್ಪಿದ ಕೋಗಿಲೆಯಂತೆ
ನುಡಿಯದಂತಿರ್ದಳಲ್ಲಾ!

ಪರಿಮಳ ತಪ್ಪಿದ ಭ್ರಮರನಂತೆ
ಸುಳಿಸುಳಿಗೊಳುತಿರ್ದಳಲ್ಲಾ!
ಫಲವು ತಪ್ಪಿದ ಬಂಜೆ ಬನದೊಳಗಣ ಅರಗಿಳಿಯಂತಿರ್ದಳಲ್ಲಾ!
ಧುರಭಾರದ ಜವ್ವನದಲ್ಲಿ ತೋರಣದೆಲೆಯಂತೆ
ಮಹಾಲಿಂಗ ಗಜೇಶ್ವರನ ನೆರೆವ ಭರದಿಂದ
ಅಳಿಕಾವ್ಯದ್ಧೆಯಾಗಿರ್ದಳಲ್ಲಾ! ॥ ೧೯ ॥

೨೧೧

ಎನ್ನ ಕಡೆಗಣ್ಣು ಕೆಂಪಾಯಿತವ್ವಾ.
ಎನ್ನ ನಳಿತೋಳು ಉಡುಗಿದವವ್ವಾ.
ಇಕ್ಕಿದ ಹವಳದ ಸರ ಬೆಳುಹಾದವವ್ವಾ.
ಮುಕ್ತಾಫಳ ಹಾರದಿಂದ ಆನು ಬೆಂದೆನವ್ವಾ.
ಇಂದೆನ್ನ ಮಹಾಲಿಂಗ ಗಜೇಶ್ವರನು
ಬಹಿರಂಗವನೊಲ್ಲದೆ ಅಂತರಂಗದಲಿ ನೆರೆದ ಕಾಣೆ
ಅವ್ವಾ! ॥ ೨೦ ॥

೨೧೨

ಎನ್ನ ಕರಸ್ಥಲವೇ ಬಸವಣ್ಣನಯ್ಯಾ.
ಎನ್ನ ಮನಸ್ಥಲವೇ ಚೆನ್ನಬಸವಣ್ಣನಯ್ಯಾ.
ಎನ್ನ ಭಾವಸ್ಥಲವೇ ಪ್ರಭುದೇವರಯ್ಯಾ.
ಇಂತೆನ್ನ ಕರ ಮನ ಭಾವಂಗಳಲ್ಲಿ
ಇಷ್ಟ ಪ್ರಾಣ ಭಾವಂಗಳು ತಲ್ಲೀಯವಾಗಿ
ಮಹಾಲಿಂಗ ಗಜೇಶ್ವರಾ,
ನಿಮ್ಮ ಶರಣರ ಘನವನು
ಎನ್ನ ಸರ್ವಾಂಗದಲಿ ಕಂಡು ಪರಮ
ಸುಖಿಯಾಗಿರ್ದೆನು. ॥ ೨೧ ॥

೨೧೩

ಎಲೆ ಎಲೆ ತಾಯೆ ನೋಡವ್ವಾ!
ಇರುಳು ತೊಳಲುವ ಜಕ್ಕವಕ್ಕಿಯಂತೆ ಹಲಬುತ್ತಿದ್ದೆ ನೋಡವ್ವಾ!
ಮಾಗಿಯ ಕೋಗಿಲೆಯಂತೆ ಮೂಗಿಯಾಗಿದ್ದೆ ನೋಡವ್ವಾ!
ಮಹಾಲಿಂಗ ಗಜೇಶ್ವರನ

ಅನುಭಾವಸಂಬಂಧಿಗಳ ಬರವೆನ್ನ
ಪ್ರಾಣದ ಬರವು ನೋಡವ್ವಾ. ॥ ೨೨ ॥

೨೧೪

ಎವೆ ಎವೆ ಹಳಚದೆ ಮೊಲೆಯ ಮೇಲಣ ಗಾಯ
ಬಿಳಿಯ ರಕ್ತದ ಧಾರೆ ಸುರಿದಲ್ಲಿ ಸಸಿವಸರೆ
ಬಸವಂತವೆಸೆದನವ್ವಾ.
ಅಪ್ಪಿನ ಸೋಂಕಿನ ಸುಖ ಅಚ್ಚುಗವಳಿಮುಳಿದಡೆ
ಮಹಾಲಿಂಗ ಗಜೇಶ್ವರದೇವ ನಿರಾಸನಾಗಿರ್ದನವ್ವಾ. ॥ ೨೩ ॥

೨೧೫

ಒಲಿದವರ ಕೊಲುವಡೆ ಮಸೆದ ಕೂರಲಗೇಕೆ?
ಅವರನೊಲ್ಲೆನೆಂದಡೆ ಸಾಲದೆ?
ಮಹಾಲಿಂಗ ಗಜೇಶ್ವರನ ಶರಣರನಗಲಿದಡೆ
ತುಪ್ಪದಲ್ಲಿ ಕಿಚ್ಚ ನಂದಿಸಿದಂತಾದೆನವ್ವಾ! ॥ ೨೪ ॥

೨೧೬

ಒಳಗೆ ಶೋಧಿಸಿ, ಹೊರಗ ಧವಳಿಸಿ
ಭಾವದಿಂದ ಗುಡಿತೋರಣವ ಕಟ್ಟಿದೆನಯ್ಯಾ.
ಲಿಂಗ ಬಾರಯ್ಯಾ, ಎನ್ನ ದೇವಾ ಬಾರಯ್ಯಾ.
ಅಂತರಂಗದ ಪರಂಜ್ಯೋತಿಯನಿದಿರುಗೊಂಬೆನೆನ್ನ
ಮಹಾಲಿಂಗ ಗಜೇಶ್ವರನ! ॥ ೨೫ ॥

೨೧೭

ಕಂಗಳ ಕಾಳಗ ನೋಟದ ಮಸಕ
ಮಿಂಚಿನಗೊಂಚಲು ತಾಗಿದಂತಾಮುದವ್ವಾ.
ತಾರಕಿ ತಾರಕಿ ಸೂಸಿದಂತೆ, ಅರಗಿನ ಬಳ್ಳಿ ಹಬ್ಬಿದಂತವ್ವಾ.
ಓರೆಕೋರೆ ಕೆಂಪಾದವವ್ವಾ, ಆಳುಗಳಿನ್ನಾರೋ?
ಐದು ರೂಪನೊಂದು ಮಾಡಿ,
ಕಾದಿ ಗೆದ್ದು ಸೋತು ಹೊರಹೊಂಟುಹೋದನವ್ವಾ,
ಮಹಾಲಿಂಗ ಗಜೇಶ್ವರ ಕಂಗಳ ಕಾಳಗದ ಮಾಸಾಳು. ॥ ೨೬ ॥

೨೧೮

ಕಂಗಳ ಬಲದಲ್ಲಿ ಮುನಿದೆಹೆನೆಂಬೆನೆ
ಕಂಗಳು ತನ್ನನಲ್ಲದೆ ನೋಡವು.
ಮನದ ಬಲದಲ್ಲಿ ಮುನಿದೆಹೆನೆಂಬೆನೆ
ತನುಮನ ತಾಳಲಾರವವ್ವಾ.
ಇಂತೀ ಮನಪ್ರೇರಕ ಮನ ಚೋರಕ
ತನ್ನಾಧೀನವಾಗಿ ಸಾಧನವಪ್ಪಡೆ
ಮನದ ಒಳ ಮೆಚ್ಚುವನವ್ವಾ.
ಮನದಲ್ಲಿ ಬಯಸುವೆ, ಭಾವದಲ್ಲಿ ಬೆರಸುವೆ.
ಮನಹಿಂಗೆ ಪ್ರಾಣನಾಥನಾಗಿ
ಮಹಾಲಿಂಗ ಗಜೇಶ್ವರದೇವ
ಮನಸಿಂಗೆ ಮನಸ ತರಲೀಸನವ್ವಾ. ॥ ೨೭ ॥

೨೧೯

ಕಾಮಗಂಜಿ ಚಂದ್ರನ ಮರೆಹೊಗಲು ರಾಹು ಕಂಡಂತಾದಳವ್ವೆ.
ಹಾವೆಂದರಿಯದೆ ನೇವಳವೆಂದರಿಯದೆ
ಕ್ಷಣ ನಾಗಭೂಷಣೆಯಾಗಿರ್ದಳವ್ವೆ
ಮಹಾಲಿಂಗ ಗಜೇಶ್ವರನ ನೆರೆವ ಭರದಿಂದ
ಕಳಕ್ಕೆ ಬಂದ ಮೃಗದಂತಿದ್ದಳವ್ವೆ. ॥ ೨೮ ॥

೨೨೦

ಕೂಪರನಗಲುವದು ಆತ್ಮಘಾತುಕವವ್ವಾ.
ದಿಬ್ಬಿಯ ತುಡುಕಿದಡೆ ಕೈ ಬೇವುದಲ್ಲದೆ ಮೈ ಬೇವುದೆ?
ಒಲಿದವರನಗಲಿದಡೆ ಸರ್ವಾಂಗವೂ ಬೇವುದವ್ವಾ.
ಮಹಾಲಿಂಗ ಗಜೇಶ್ವರನನಗಲಿ
ಆವುಗೆಯ ಮಧ್ಯದ ಘಟದಂತಾದೆನವ್ವಾ. ॥ ೨೯ ॥

೨೨೧

ಕೋಗಿಲೆಗಳು ಹುಳುವಟ್ಟೆ ಹೋದ ಬನದಂತೆ ಆದೆ ನೋಡವ್ವಾ.
ರಾಮರಾಡಿದ ಹೊಳಲಿನಂತೆ ಆದೆ ನೋಡವ್ವಾ.
ಜವ್ವನೆಗಳು ಬಳಲ್ದ ಸ್ತ್ರೀಯರ ಮುಖಕಾಂತಿಯಂತೆ ಆದೆ ನೋಡವ್ವಾ.
ಪರಿಮಳವಿಲ್ಲದ ಪುಷ್ಪದಂತೆ ಆದೆ ನೋಡವ್ವಾ.
ಚಂದ್ರಮನಿಲ್ಲದ ನಕ್ಷತ್ರಗಳಂತೆ ಆದೆ ನೋಡವ್ವಾ.

ಮಹಾಲಿಂಗ ಗಜೇಶ್ವರನನಗಲುವದರಿಂದ
ಸಾವುದು ಸುಖ ನೋಡವ್ವಾ. ॥ ೩೦ ॥

೨೨೨

ಗಾಂಧಾರಿ ಮಾಂಧಾರಿಯೆಂಬ ಹೊತ್ತಿನಣತೆ ರಟ್ಟೆಯರೆಂಬರರಿವು
ಮಲುಹಣ ಮಲುಹಣ ನಿಮಗೆಂತು ಬಲ್ಲೆ, ಎಮಗೆಂತು ಅರಿಯೆ,
ಮಲುಹಣ, ಮನೆಯವರು ಬರಲೀಯರು,
ಅಣ್ಣನನು ಬಿಡಲಾರೆ.
ದೇವರಲ್ಲಿಗೆ ಹೋಗಿ ಬೇಡಿಕೊಳ್ಳೊ.
ಮಲುಹಣ, ಅಬುಜಮುಖಿ ಲಂಪಟ ಮಹಾಲಿಂಗ ಗಜೇಶ್ವರ
ನಿಮಗೆಂತು ಬಲ್ಲೆ ಎಮಗೆಂತರಿಯಸೋ. ॥ ೩೧ ॥

೨೨೩

ಗಿಡ ಮರದ ಕುರುಬಿತ್ತಿಯ ಜವ್ವನದಂತೆ
ನುಡಿಯಲರಿಯದ ಮುಗ್ಧೆಯಾಗಿರ್ದೆನವ್ವಾ.
ಹಗಲನರಿಯದ ಜಕ್ಕವಕ್ಕಿಯಂತೆ
ಮನ ಬಯಸುತ್ತಲಿರ್ದೆನವ್ವಾ.
ಹಲವು ಕಾಲ ಎಲವದಮರನ ಸಾರಿರ್ದ ಗಿಳಿಯಂತಾದೆನವ್ವಾ.
ಇಂದು ಮಹಾಲಿಂಗ ಗಜೇಶ್ವರದೇವನ ನೆರೆಯಲರಿಯದೆ
ಇವರೆಲ್ಲರ ವಿಧಿಯ ಹೊತ್ತೆನವ್ವಾ. ॥ ೩೨ ॥

೨೨೪

ಚಂದ್ರಮನ ಕಂಡು ಮಂಡೆಯ ಬಿಟ್ಟು
ಏಳು ಬಂಧವ ತೋರಿ ಬೆದರಿಸಿದನವ್ವಾ.
ಮಗಳ ಕುಂಕುಮ ತಿಲಕವ ಕಂಡು
ನಿನ್ನ ನೊಸಲಲ್ಲಿ ಎಸೆಯಬಂದ ಕಾಮ ಕೈಮರೆದನವ್ವಾ.
ಸಟ್ಟುಪದಿಯ ಸಂಗ ಮಹಾಲಿಂಗ ಗಜೇಶ್ವರನ
ಸಂಪಗೆಯ ವನಕ್ಕೆ ಬಂದು ಶರಣೆನ್ನು ಮಗಳೆ. ॥ ೩೩ ॥

೨೨೫

ಚಕೋರನಂತೆ ದಿನವನೆಣಿಸುತ್ತಿರ್ದಳವ್ವೆ
ದರುವಕ್ಕಿ ಕಂಡ ಕನಸಿನಂತಿರ್ದಳವ್ವೆ
ಮೋಡಂ ಬೊಕ್ಕ ಚಂದ್ರನಂತಿರ್ದಳವ್ವೆ
ಎಂಟನೆಯವಸ್ಥೆಯ ಆಚೆಯ ತಡಿಯಲಿರ್ದವರನು

ಈಚೆಯ ತಡಿಗೆ ಕರೆದುಕೊಂಬಂತೆ ಇದು
ನಮ್ಮ ಮಹಾಲಿಂಗ ಗಜೇಶ್ವರ
ಕಂಗಳ ಕಾಮ ಕಂಗಾಹಿಗಂಡವ್ವಾ. ॥ ೩೪ ॥

೨೨೬

'ಜಾತಸ್ಯ ಮರಣಂ' ಆವಗೆಯೂ ತಪ್ಪದು.
ಅರಿದು ಮರೆಯಬೇಡಯ್ಯಾ.
ಉರಗನ ಬಾಯ ಕಪ್ಪೆಯಂತೆ
ಸಂಸಾರ ಹೆರೆಗೊಳುತ್ತಿರ್ದುದಲ್ಲಾ!
ರೋಮಜರು ಮೀನಜರು ಕಾಲಕಲ್ಪಿತಕೊಳಗಾದರು.
ಮಹಾಲಿಂಗ ಗಜೇಶ್ವರಯ್ಯನೊಬ್ಬನೆ ಶಾಶ್ವತನು. ॥ ೩೫ ॥

೨೨೭

ತಮ್ಮ ತಮ್ಮ ಗಂಡರು ಚೆಲುವರೆಂದು
ಕೊಂಡಾಡುವ ಹೆಣ್ಣುಗಳು ಪುಣ್ಯಜೀವಿಗಳವ್ವಾ!
ನಾನೆನ್ನ ನಲ್ಲನೆಂಥಾವನೆಂದರಿಯೆನವ್ವಾ!
ಮಹಾಲಿಂಗ ಗಜೇಶ್ವರದೇವನು ನಿರಿಯ ಸೆರಗ ಸಡಿಲಿಸಲೊಡನೆ
ಆನೇನೆಂದರಿಯೆನವ್ವಾ. ॥ ೩೬ ॥

೨೨೮

ತಳಿಗೆ ಚಿಕ್ಕುಟು ಕೈಯಲಾರಿಸುಂಬಡೆ ಬಿಸಿ ಬಿಡಲಿಲ್ಲ.
ಅಗಲಿಕ್ಕೆ ತೆರಹಿಲ್ಲ.
ಮಹಾಲಿಂಗ ಗಜೇಶ್ವರನೆತ್ತಿಕೊಂಡು ಕುಡಿದನು. ॥ ೩೭ ॥

೨೨೯

ದೃಷ್ಟಿಯ ಕಲು ತಾಗಿದಂತೆ ಮುನಿಸ ಮುಂದೆ ನೋಡಾ ಅವ್ವಾ.
ಸೋಂಕಿದಡೆ ಸುಖಿಯಾದೆ, ಉಳಿದಡೆ ಕರಿಗೊಂಡೆ.
ಪಾಷಾಣದೊಸರಿನಂತೆ ಆದೆ ನೋಡಾ ಅವ್ವಾ ಸೋಂಕಿದಡೆ.
ಮಹಾಲಿಂಗ ಗಜೇಶ್ವರನೊಲವು
ಎನಗೆ ಕಲುದೇಹ, ಎನಗೆ ಸುಖದ ಮೊದಲು ನೋಡಾ
ಅವ್ವಾ. ॥ ೩೮ ॥

೨೩೦

ದೇವರ ನೆನೆದು ಮುಕ್ತರಾದೆವೆಂಬ
ಯುಕ್ತಿಶೂನ್ಯರ ಮಾತ ಕೇಳಲಾಗದು.
ಅದೇನು ಕಾರಣವೆಂದಡೆ:
ದೇವರ ನೆನೆವಂಗೆ ದೇವರುಂಟೆ?
ದೂರ ದೂರದಲ್ಲಿದ್ದವರ ನೆನೆವರಲ್ಲದೆ
ಸಮೀಪದಲ್ಲಿದ್ದವರ ನೆನೆವವರಿಲ್ಲ.
ಇದನರಿದು ನೀನೆನ್ನೊಳಗಡಗಿ
ನಾ ನಿನ್ನ ನೆನೆಯಲಿಲ್ಲ;
ನೀನೆನಗೆ ಮುಕ್ತಿಯನೀಯಲಿಲ್ಲ.
ನೀನಾನೆಂದೆನಲಿಲ್ಲ ಮಹಾಲಿಂಗ ಗಜೇಶ್ವರಾ. ॥ ೩೯ ॥

೨೩೧

ದೇಶಾಖಿಯಲ್ಲದ ರಾಗ, ಉಪ್ಪಿಲ್ಲದ ಊಟ
ಸಪ್ಪೆ ಕಾಣಿರೋ ಅಯ್ಯಾ, ಮಿಕ್ಕಿನ ರಾಗ.
ಶಿವನಲ್ಲದ ದೈವಫಲವಿಲ್ಲ ಕಾಣಿರೊ ಅಯ್ಯಾ.
ಮಿಕ್ಕಿನ ತುಂಬುರ ನಾರದರು ಶಿವನ ಕೇಳಿಸುವ ರಾಗ,
ಮಹಾಲಿಂಗ ಗಜೇಶ್ವರನ ನಚ್ಚಿನ ರಾಗ. ॥ ೪೦ ॥

೨೩೨

ನಲ್ಲನುಳಿದನೆಂದೊಂದು ಮಾತನಟ್ಟಿದಡೆ
ಕರಸ್ಥಲದಲ್ಲಿ ನೆಯ್ದಿಲು ಮೂಡಿತ್ತ ಕಂಡೆನವ್ವಾ.
ಉದಕದೊಳಗೆ ತಾವರೆ ಬಾಡಿತ್ತ ಕಂಡೆ.
ಎನ್ನ ಮಹಾಲಿಂಗ ಗಜೇಶ್ವರನುಳಿದನೆಂದಡೆ
ಒಂದೆಲೆಯಲ್ಲಿ ಹೂ ಮೂಡಿತ್ತ ಕಂಡೆನವ್ವಾ. ॥ ೪೧ ॥

೨೩೩

ನೀನೊಲಿದು ಕೂರ್ತವರು ನಿಮಗೊಲಿದು ಕೂರ್ತವರು.
ನಿಮ್ಮ ಪರಿಯೇ ಅವರು, ನಿಮ್ಮ ರೂಹೇ ಅವರು.
ಅವರನೇನ ಹೇಳುವೆ.
ಆಳಾರು ಅರಸಾರು ಎಂದರಿಯಬಾರದು.

ನಿಮ್ಮ ರೂಹೆ ಅವರು.
ಮಹಾಲಿಂಗ ಗಜೇಶ್ವರನೊಲಿದು ಪೂಜಿಸಿದವರು
ಸಾಲೋಕ್ಯ ಸಾಮೀಪ್ಯ ಸಾರೂಪ್ಯ ಸಾಯುಜ್ಯ
ಪದವಿಗಳ ಪಡೆವರು.
ಎನಗೆ ನಿಮ್ಮ ಶರಣರೇ ನೀವೆಂದು ಅರಿದಿರ್ಪುದೇ ಸಾಕು.
॥ ೪೨ ॥

೨೩೪

ನೆನಹಿನ ನಲ್ಲನು ಮನೆಗೆ ಬಂದಡೆ ನೆನೆವುದಿನ್ನಾರ ಹೇಳವ್ವಾ.
ನೆರೆವ ಕ್ರೀಯಲ್ಲಿ ಸುಖಿಸುವದಲ್ಲದೆ, ನೆನೆವುದಿನ್ನಾರ ಹೇಳವ್ವಾ.
ನೆನೆದೆನೆಂಬ ಭರವೇಕವ್ವಾ.
ಮಹಾಲಿಂಗ ಗಜೇಶ್ವರದೇವರ ಕಂಡಲ್ಲಿ ಅಗಲಿದಡೆ
ಕರೆಗೊಂಬಲ್ಲಿ ನಾನೇನು ಕಲುಮನದವಳೆ ಕೇಳವ್ವಾ. ॥ ೪೩ ॥

೨೩೫

ನೇಹದ ಮುತ್ತು ಅಧರದ ಬಿತ್ತು.
ಅದು ರಸವಿರಸಕ್ಕೆ ಘಟ್ಟಿಯಾಯಿತ್ತವ್ವಾ.
ಅವ್ವಾ, ತನು ವಿಕಳಚಿತ್ತ ನಾಗೇಂದ್ರನ ಸೂತ್ರದ
ದೃಷ್ಟದಂತೆಯವ್ವಾ.
ನೇಹದ ಮುಗುದೆ ವಿಕಳೆಯಾಗಿ
ಮಹಾಲಿಂಗ ಗಜೇಶ್ವರನಲ್ಲಿ ವಿಕಾರಗೊಂಡು ಇದ್ದಳವ್ವೆ.॥ ೪೪ ॥

೨೩೬

ನೇಹದ ಸನ್ನೆಯ ಮನವರಿಯಲೊಡನೆ ನೋಡಲಮ್ಮೆನವ್ವಾ.
ಕಂಗಳಲಿ ಹಿಸುಣವ ಹೇಳಿಹನೆಂದು ನೋಡಲಮ್ಮೆನವ್ವಾ.
ಕಜ್ಜಲ ಕಲಕಿದಡೆ ಕುರುಹಳಿದೀತೆಂದು ನೋಡಲಮ್ಮೆನವ್ವಾ.
ಕಂಗಳಲಿ ಮಹಾಲಿಂಗ ಗಜೇಶ್ವರನೊಲವ!
ಎನಗೆ ಕಲುದೇಹ, ತನಗೆ ಸುಖದ ಮೊದಲು ನೋಡವ್ವಾ.
॥ ೪೫ ॥

೨೩೭

ನೇಹವೆಳದಾಯಿತ್ತಾಗಿ ನೋಟ ವಿಪುಳವಾಯಿತ್ತ ಕಂಡೆ.
ಅಂಗದ ಕಳೆ ಕಂಗಳ ಮೋಹ ಎವೆಗೆವೆ ಸೈರಿಸಮು.
ಬೆಳಕಿನ ಮೇಲೆ ಕೆಂಪಡರಿತ್ತು.

ಉದಕ ಪಲ್ಲಟ, ಮತ್ಸ್ಯ ಬೆನ್ನು ಬಸುರ ತೋರಿತ್ತು.
ಮಾಗಿಯ ಕೋಗಿಲೆಯಂತೆ ಮೂಗನಾಗಿದ್ದೆನವ್ವಾ.
ಮಹಾಲಿಂಗ ಗಜೇಶ್ವರನೊಲವಿಂದೆನಗೆ ರಣದಣಕನವ್ವಾ.
॥ ೪೬ ॥

೨೩೮

ನೋಟಕ್ಕೆಯೂ ಕೂಟಕ್ಕೆಯೂ ಕಣ್ಣು ಮನವೆರಸವವ್ವಾ.
ಅವ್ವಾ, ಕಂಗಳು ತಪ್ಪಿ ನೋಡಲಮ್ಮೆ;
ಅಮ್ಮೆ ಕೇಳೆಲೆಯವ್ವಾ.
ಅವ್ವಾ, ಕಿವಿಗಳ ತಪ್ಪಿ ಕೇಳಲಮ್ಮೆ;
ಅಮ್ಮೆ ಕೇಳೆಲೆಯವ್ವಾ.
ಅವ್ವಾ, ಕಲಿಗಳಾಗದಲ್ಲಿ ಸೋತಂತೆ.
ತನು ಮನ ಧನದ ಭಂಗವಳಿದು ನೆರೆಯನವ್ವಾ
ಮಹಾಲಿಂಗ ಗಜೇಶ್ವರನವ್ವಾ. ॥ ೪೭ ॥

೨೩೯

ಪರಮ ಪದವಿಯ ನಿಮ್ಮ ಕೊರಳಲ್ಲಿ ಕಟ್ಟಿಕೊಳ್ಳಿ.
ಪರಮ ಪದವಿಯ ನಿಮ್ಮ ತಲೆಯಲ್ಲಿ ಸುತ್ತಿಕೊಳ್ಳಿ.
ಎನಗೆ ನಿಮ್ಮ ತೊತ್ತು ಸೇವೆಯೆ ಸಾಕು.
ಮಹಾಲಿಂಗ ಗಜೇಶ್ವರದೇವಾ,
ಪರಮಪದವಿಯ ನಿಮ್ಮ ಎದೆಯಲ್ಲಿ ಇರಿದುಕೊಳ್ಳಿ. ॥ ೪೮ ॥

೨೪೦

ಬಟ್ಟಬಯಲಲೊಂದು ದೃಷ್ಟವಪ್ಪ ಮೂರುತಿಯಾಗಿ
ನಾನೊಂದು ಅಷ್ಟತನುವ ಪಡೆದೆ.
ಬಾಳೆಯ ದಿಂಡು ಲಾಳಿಲು ನೂಲು ಘಳಿಯ ಶಬುದ
ಉದಕದ ಬಿಂದು ಓ ಓ ಬಾಳೆ
ಮಹಾಲಿಂಗ ಗಜೇಶ್ವರನಲ್ಲಿ ಉದಕ ದಿಟವೆಂದೆನು. ॥ ೪೯ ॥

೨೪೧

ಪದುಮ ಪಜ್ಜಳ ವರ್ಣ ನೈದಿಲೆಯಾಗಿರ್ದಳವ್ವೆ
ತುಂಬಿ ಮುತ್ತನುಗುಳದಂತೆ;
ಕಂಗಳು ಕಂಕಣವಾಗಿ ಚಂದ್ರಬಿಂಬವಾಗಪದಂತೆ

ಅವಗವಿಸಿಕೊಂಡಿರ್ದ ಬಂಗಾರಕ್ಕೆರಗಿದ ರತ್ನದಂತೆ
ಆನೊಂದೆ ಗ್ರಾಹಿಯಾಗಿರ್ದೆನವ್ವಾ
ಅಖಂಡಿತನಾಗಿ ಮಹಾಲಿಂಗ ಗೇಜೇಶ್ವರನ ಅನುಭಾವಕ್ಕೆ
ಸುಖಿಯಾಗಿ. ॥ ೫೦ ॥

೨೪೨

ಬರು ಮನವಾದೀತೆಂದು ಬೇರುವೋದಳು ನೋಡಾ ಅವ್ವಾ.
ಕಮ್ಮರಿವರಿವಳು ನೋಡಾ ಅವ್ವಾ.
ಸಮಧಾತುವಿಲ್ಲ ನೋಡೆಮಗೆ.
ಮದ್ದು ಕುತ್ತದೊಳಗಾದಂತೆ
ಮಹಾಲಿಂಗ ಗಜೇಶ್ವರದೇವರ ಒಲವು ನೋಡಾ
ಅವ್ವಾ. ॥ ೫೧ ॥

೨೪೩

ಬಾಲಕ ಹಾಲ ಸವಿದಂತೆ,
ಮರುಳಿನ ಮನದ ಹರ್ಷದಂತೆ,
ಮೂಗರು ಕಂಡ ಕನಸಿನಂತೆ,
ಬಂಜೆಯ ಮನದ ನೇಹದಂತೆ,
ನೆಯಿ ಆರಿದ ನೆಳಲಂತೆ,
ಮಹಾಲಿಂಗ ಗಜೇಶ್ವರನೊಲವು ನೋಡವ್ವಾ. ॥ ೫೨ ॥

೨೪೪

ಬಿಟ್ಟ ತಲೆಯ ಬಿಡುಮುಡಿಯ ಬರುಮೈಯ
ಕಿವಿಯ ಬಿಚ್ಚೋಲೆಯ ಬಿಟ್ಟ ನಿರಿಯ
ಸಡಿಲಿದ ಕಳೆಯ ಘಳಿಲನೆ ನಡೆತಂದಳು.
ನಚ್ಚಿ ಮಚ್ಚಿ ಮನಸಂದ ಕಳೆವಳು.
ಬಂದಪ್ಪಿನ ಸೋಂಕಿನ ಸುಖವ
ಮಹಾಲಿಂಗ ಗಜೇಶ್ವರ ತಾನೆ ಬಲ್ಲ. ॥ ೫೩ ॥

೨೪೫

ಬೇರೆ ಗತಿ ಮತಿ ಚೈತನ್ಯವಿಲ್ಲದವಳು.
ತೊತ್ತಿನ ಮುನಿಸು ಸಲುವುದೆ?

ಅವಳು ಮುನಿದಡೆ ಆಗಲೇ ಕೆಡುವಳು.
ಅರಸು ಮುನಿದಡೆ ಆಗಲೇ ಕೆಡುವಳು ತೊತ್ತು.
'ರಾಜಾರಕ್ಷತೇ ಧರ್ಮಃ'
ಮಹಾಲಿಂಗ ಗಜೇಶ್ವರಯ್ಯಾ. ॥ ೫೪ ॥

೨೪೬

ಭಕ್ತನ ಮಠಕ್ಕೆ ಜಂಗಮ ಬಂದು,
ಆ ಭಕ್ತ ಮಾಡಿವಂತೆ ಭಕ್ತಿಯ ಮಾಡಿಸಿಕೊಂಡು,
ಕ್ಷಮಿಸಬಲ್ಲಡೆ ಜಂಗಮ;
ಆ ಕ್ಷಮೆಯೊಳಗೆ ಮಗ್ನನಾಗಬಲ್ಲಡೆ ಭಕ್ತ.
ಉಪಾಧಿಯಾಗಿ ಹೇಳಿ ಮಾಡಿಸಿಕೊಂಬನ್ನಬರ ಭೂತಪ್ರಾಣಿ;
ಬಂದ ಪರಿಯಲ್ಲಿ ಪರಿಣಾಮಿಸಬಲ್ಲಡೆ ಲಿಂಗಪ್ರಾಣಿ.
ಬೇಡಿದಲ್ಲದೆ ಮಾಡೆನೆಂಬೆನ್ನಕ್ಕರ ಫಲದಾಯಕ;
ಬಂದ ಜಂಗಮದ ಇಂಗಿತಾಕಾರವರಿದು
ಬೇಡದ ಮುನ್ನವೆ ಮಾಡಬಲ್ಲಡೆ ಭಕ್ತನೆಂಬೆನು;
ಬೇಡದ ಮುನ್ನವೆ ಮಾಡುವ ಭಕ್ತನು,
ಬೇಡದೆ ಮಾಡಿಸಿಕೊಂಬ ಜಂಗಮವು,
ಇಂತೀ ಎರಡರ ಸಮ್ಮೇಳ ಸನ್ನಿಧಿಯಲ್ಲಿರ್ದು
ನಾನು ಸುಖಿಯಾದೆನು ಕಾಣಾ ಮಹಾಲಿಂಗ
ಗಜೇಶ್ವರಾ. ॥ ೫೫ ॥

೨೪೭

ಭಕ್ತಿ ಸಮೇಳ ಎತ್ತಿದ ಹಳವಿಗೆ ಸುತ್ತಲೂ ಬೇವಿನ ದಂಡೆ
ರಣರಂಗ ಹಾಸಿನ ಮೇಲೆ.
ಸಮಕಳೆ ಸಮರತಿ ನೆರೆವ ಭರದಲ್ಲಿ.
ಎಲೆ ಬಿದ್ದ ಮಸಿಯನರಿಯದಿದ್ದಳು.
ರಣರಂಗ ಸಂಯೋಗ ವಿಯೋಗ ಬ್ರಹ್ಮಸಮಾಧಿ
ಮಹಾಲಿಂಗ ಗಜೇಶ್ವರನೇಕೋಭಾವ. ॥ ೫೬ ॥

೨೪೮

ಮಾಗಿಯ ಹುಲ್ಲಿನ ಸೋಂಕಿನಂತೆ
ತನು ಪುಳಕಿತಳಾದಳವ್ವೆ.

ನುಡಿ ತೊದಳು ಆತನ ಒಲವೆ ಆಧಾರವಾಗಿದ್ದಳವ್ವೆ.
ಬಿಳಿಯ ತುಂಬಿ ಕುಂಕುಮ ರಸದಲ್ಲಿ ಬಂಡುಂಡಂತೆ.
ಮಹಾಲಿಂಗ ಗಜೇಶ್ವರನಲ್ಲಿ
ತನ್ನಲ್ಲಿ ತಾನೆ ರತಿಯಾಗಿರ್ದಳವ್ವೆ. ॥ ೫೭ ॥

೨೪೯

ಮಾತಂಗಿಯ ಹೊಳೆಯಲ್ಲಿ ಉತ್ತಮನ ನೆಳಲು ಸುಳಿವಡೆ
ರೂಪು ಹೊಲೆಯನಾಗಬಲ್ಲುದೆ ಅಯ್ಯಾ?
ಮರ್ತ್ಯಲೋಕದ ಮಾನವರೊಳಗೆ ಶರಣ ಸುಳಿದಡೆ
ಶರಣ ಸೂತಕಿಯಾಗಬಲ್ಲನೆ ಅಯ್ಯಾ?
ಮರ್ತ್ಯರ ಭವಿಯ ಮಾತ ವರ್ತಮಾನವೆಂಬ ಜೀವಿಗಳ
ಅಗೆದೊಗೆಯದೆ ಮಾಬನೆ ಮಹಾಲಿಂಗ ಗಜೇಶ್ವರಯ್ಯ! ॥ ೫೮ ॥

೨೫೦

ಮುನಿಸ ಮುನಿದಡೆ ಶ್ರೀಗಂಧದ ಮುರಡಿನ ಹಾಂಗಿರಬೇಕವ್ವಾ.
ತೆಗೆದಪ್ಪಿದಡೆ ಚಂದನ ಶೀತಾಳದ ಹಾಂಗಾಗಬೇಕವ್ವಾ.
ಹೋಗುವಲ್ಲಿ ಮೈಯೆಲ್ಲಾ ಕೈಯಾಗಿ ಹೆಣಗುತ್ತಿರಬೇಕವ್ವಾ.
ಮಹಾಲಿಂಗ ಗಜೇಶ್ವರನ ನೆರೆವ ಭರದಿಂದ
ನೊಂದಂಕದ ಮೇಲೆ ಬಿದ್ದ ಹಾಂಗಿರಬೇಕವ್ವಾ. ॥ ೫೯ ॥

೨೫೧

ಮೂಗಿನ ಕಪ್ಪು ಪ್ರಣತೆಯ ಕತ್ತಲೆ ಜ್ಯೋತಿಯೆಂಬರು.
ವಿವರಣೆ ಹೋಗದೆಂತೊ ರಸದ ರುದ್ರಾಕ್ಷಿ ಸ್ಫಟಿಕದ ಧಾರಂಬೊ.
ಮಾಣಿಕ್ಯ ಸ್ವಯಂಜ್ಯೋತಿ ಜ್ಞಾನದ ಪ್ರಭೆ.
ಮಹಾಲಿಂಗ ಗಜೇಶ್ವರನ ನೆನೆವ ಮನವು ಕಮಳ ತಳವೆಳಕು
ಭೋ. ॥ ೬೦ ॥

೨೫೨

ಮೂಗಿನ ತುಂಬಿಗೆ ಪರಿಮಳ ಒತ್ತಿಹವೆಂದು
ಅಂಗಸಂಗದಲ್ಲಿಕ್ಕಿ ಮುಚ್ಚುವೆನವ್ವಾ.
ಮನವ ಮರೆದ ಮದಾಳಿಯ ನೇಹದಂತಾದೆನವ್ವಾ,
ಮಹಾಲಿಂಗ ಗಜೇಶ್ವರನನುಭಾವಕ್ಕೆ ಸುಖಿಯಾಗಿ. ॥ ೬೧ ॥

೨೫೩

ರಿಪುಗಳ ಕಾಳಗ ಕೊಳುಗುಳದನುಭಾವ
ಅತಿಶಯದ ಬಾಣ ತಾಗಿಮುದಕೆ ಹೋಗಿ ನಿಂದ ಮುಮ್ಮರಿಯಂತೆ
ಜಗಕ್ಕೆಲ್ಲಾ ಕನ್ನಡಿಗೆ ನೋಡಾ!
ಮಹಾಲಿಂಗ ಗಜೇಶ್ವರನ ಅರಿಯನೆ ಬಲ್ಲ ಕನ್ನಡಿಗೆ
ಮರದೊಡಕು. ॥ ೬೨ ॥

೨೫೪

ಸಮರಸದೊಳಗಣ ಸ್ನೇಹ
ಮತ್ಸ್ಯ ಕೂರ್ಮ ವಿಹಂಗದಂತೆ;
ಸ್ನೇಹದ ನೋಟದಲ್ಲಿಯೇ ತೃಪ್ತಿ,
ಸ್ನೇಹದ ನೆನಹಿನಲ್ಲಿಯೇ ತೃಪ್ತಿ,
ಸ್ನೇಹದ ಸ್ಪರ್ಶನವಲ್ಲಿಯೇ ತೃಪ್ತಿ.
ಈ ಪರಿಯಲ್ಲಿ ಎಮ್ಮ ಮಹಾಲಿಂಗ ಗಜೇಶ್ವರನಲ್ಲಿ ಲಿಂಗೈಕ್ಯವು
ವಾರಿಕಲ್ಲ ಪುತ್ಥಳಿ ಕರಗಿ ಅಪ್ಪುವನೊಡಗೂಡಿದಂತಾಯಿತ್ತು.
॥ ೬೩ ॥

೨೫೫

ಸರ್ವಜ್ಞನ ಸನುಮತವೆಂಬ ಮಾತು ಸಾಮಾನ್ಯವೆ ಅವ್ವಾ?
ತಾ ಮೆಚ್ಚ, ಕಲಿಯಾಗಿಪ್ಪವರ ಮೆಚ್ಚ,
ಸುಖಿಯಾಗಿಪ್ಪವರನೊಬ್ಬರನಾರುವ ಕಾಣೆನವ್ವಾ!
ತಾ ಸತ್ತು ಹೆರರ ಕೊಂದವಸ್ಥೆಯ ಚಂದವ
ಚಂದ್ರಮತಿಯಲ್ಲಿ ಕಂಡೆನು.
ಇಂದು ಕಂಡೆನು ಮಹಾಲಿಂಗ ಮಸಣಯ್ಯಗಳಲ್ಲಿ
ಮಹಾಲಿಂಗ ಗಜೇಶ್ವರದೇವರು ಮಾಡಿದ. ॥ ೬೪ ॥

೨೫೬

ಹಗಲು ಮನಸಿಂಗಂಜಿ ಇರುಳು ಕನಸಿಂಗಂಜಿ
ಧ್ಯಾನ ಮೋನಿಯಾಗಿರ್ದಳವ್ವೆ.
ಸಖಿ ಬಂದು ಬೆಸಗೊಂಡಡೆ,
ಏನೆಂದು ಹೇಳುವಳವ್ವೆ ಏನೆಂದು ನುಡಿವಳವ್ವೆ?

ಸಾಕಾರದಲ್ಲಿ ಸವೆಸವೆದು ನಿರಾಕಾರದಲರ್ಪಿಸಿದಡೆ
ಮಹಾಲಿಂಗ ಗಜೇಶ್ವರನುಮೇಶ್ವರನಾಗಿರ್ದನವ್ವೆ. ॥ ೬೫ ॥

೨೫೭

ಹಗಲು ಹಸಿವಿಂಗೆ ಕುದಿದು
ಇರುಳು ನಿದ್ರೆಗೆ ಕುದಿದು
ಉಳಿದಾದ ಹೊತ್ತೆಲ್ಲಾ ಅಶನ ವ್ಯಸನಕ್ಕೆ ಕುದಿದು
ಅಯ್ಯಾ, ನಿಮ್ಮನರಿಯದ ಪಾಪಿ ನಾನಯ್ಯಾ.
ಅಯ್ಯಾ, ನಿಮ್ಮನರಿಯದ ಕರ್ಮಿ ನಾನಯ್ಯಾ.
ಮಹಾಲಿಂಗ ಗಜೇಶ್ವರದೇವಾ,
ಅಸಗ ನೀರಡಸಿದಂತಾಯಿತ್ತೆನ್ನ ಸಂಸಾರ. ॥ ೬೬ ॥

೨೫೮

ಹಲವುಕಾಲದ ಅಗಲಿಕೆ ತಾರ್ಕಣೆಗೊಂಡಂತವ್ವಾ.
ಮುನಿಸು ನಾಚಿಕೆ ಹೋಗಿ ಕಂಗಳ ಕೊನೆಯಲ್ಲಿ ಸಿಲುಕಿದೆನವ್ವಾ.
ತನು ಜರ್ಝರಿತವಾಗಿ ಕಂಗಳ ಕೊನೆಯಲ್ಲಿ ಸಿಲುಕಿದ ಎನ್ನ
ಮಹಾಲಿಂಗ ಗಜೇಶ್ವರನುಳಿದನೆಂದಡೆ
ಆಲಿಕಲ್ಲ ನುಂಗಿದ ಚಕೋರನಂತಾದೆನವ್ವಾ. ॥ ೬೭ ॥

೨೫೯

ಹೆರರಿಗೆ ಕೂರ್ತವಳ ತೆಗೆದಪ್ಪಿಕೊಂಡಡೆ
ಅರ್ಥಗೆಡಹುದಲ್ಲದೆ ಮನವು ಬೇರೆ ತಾನಿರ್ಪುದಲ್ಲಿಯೆ.
ಇದ್ದಿಲ ಹಿಂಡಿದಡೆ ರಸವುಂಟೆ?
ಸಾಧಕ ಸಾಧಿಸಿದ ನಿಧಾನವನೊಯ್ದ ಕುಳಿಯಂತೆ
ಅವರ ವಿಧಿ ಎನಗಾಯಿತ್ತು, ಮಹಾಲಿಂಗ ಗಜೇಶ್ವರಾ.॥ ೬೮ ॥

೨೬೦

ಹೊನ್ನು ಕೊಡನ ಹೊಮ್ಮಿನ ಹಮ್ಮಿನ ಕಳಯ ಪುಳಕದಲ್ಲಿ
ತಾರಕಿ ತಾರಕಿ ತಳಿತಂತೆ ಅಂಗಸಂಗದಲ್ಲಿರ್ದಳವ್ವೆ.
ಬಂದ ಭರವಿನ ನಿಂದ ಚಂದದ ಪೊಸಹೂವ ಮುಡಿದಳವ್ವೆ.
ಅಡವಿಯಲಾದ ಮರನಡಿಯಲಿದ್ದ ಬಿಸಿಲ ಬಯಸಿದಳವ್ವೆ.
ಇಂದು ಮಹಾಲಿಂಗ ಗಜೇಶ್ವರನ ನೆರೆವ ಭರದಲ್ಲಿ,
ಕಳಕೆ ಬಂದ ಮೃಗದಂತೆ ತನ್ನ ತಾ ಮರೆದಿರ್ದಳವ್ವೆ. ॥ ೬೯ ॥

೨೬೧

ಹೊಸ ಮದುವೆ ಹಸೆಯುಡುಗದ ಮುನ್ನ,
ಹೂಸಿದ ಅರಿಸಿನ ಬಿಸಿಲಿಂಗೆ ಹರಿಯದ ಮುನ್ನ,
ತನು ಸಂಚಲವಡಗಿ ಮನವು ಗುರುಕಾರುಣ್ಯವ ಪಡೆದು
ಹುಸಿಯಿಲ್ಲದಿರ್ದಡೆ ಭಕ್ತನೆಂಬೆ!
ಹಿಡಿಹಿಂಗಿಲ್ಲದಿರ್ದಡೆ ಮಾಹೇಶ್ವರನೆಂಬೆ!
ತನುವಿಲ್ಲದಿರ್ದಡೆ ಪ್ರಸಾದಿಯೆಂಬೆ!
ಜೀವವಿಲ್ಲದಿರ್ದಡೆ ಪ್ರಾಣಲಿಂಗಿಯೆಂಬೆ!
ಆಶೆಯಿಲ್ಲದಿರ್ದಡೆ ಶರಣನೆಂಬೆ!
ಈ ಐದರ ಸಂಪರ್ಕ ನಿರ್ಭೋಗವಾದಡೆ ಐಕ್ಯನೆಂಬೆ!
ಐಕ್ಯದ ಸಂತೋಷ ಹಿಂಗಿದಡೆ ಜ್ಯೋತಿರ್ಮಯನೆಂಬೆ!
ಈ ಹೀಂಗಾದ ದೇಹವನಿರಿದಡರಿಯದು ತರಿದಡರಿಯದು.
ಬೈದಡರಿಯದು; ಹೊಯ್ದಡರಿಯದು.
ನಿಂದಿಸಿದಡರಿಯದು; ಸ್ತುತಿಸಿದಡರಿಯದು.
ಸುಖವನರಿಯದು; ದುಃಖವನರಿಯದು.
ಇಂತಿವರ ತಾಗು ನಿರೋಧವನರಿಯದಿರ್ದಡೆ
ಅವರ ಮಹಾಲಿಂಗ ಗಜೇಶ್ವರನೆಂಬೆ. ॥ ೭೦ ॥

# ಗಾಣದ ಕಣ್ಣಪ್ಪನ ವಚನ

೨೬೨

ಒಂದು ಧನುವಿಂಗೆ ಮೂರಂಬ ಹಿಡಿದೆ.
ಒಂದು ಬಾಣವ ಬಿಡಲಾಗಿ ಪದ್ಮೋದ್ಭವನ ಸೃಷ್ಟಿಯ ಕಟ್ಟಿತ್ತು.
ಮತ್ತೊಂದು ಬಾಣವ ಬಿಡಲಾಗಿ ಪದ್ಮನಾಭನ ಹೆಡಗಯ್ಯ ಕಟ್ಟಿತ್ತು.
ಕಡೆಯ ಬಾಣ ರುದ್ರನ ಹಣೆಯನೊಡೆದು
ಅಲಗು ಮುರಿಯಿತ್ತು; ಗರಿ ಜಾರಿತ್ತು;
ನಾರಿಯ ಹೂಡುವ ಹಿಳುಕು ಹೋಳಾಯಿತ್ತು ;
ಗೊಹೇಶ್ವರನ ಶರಣ ಅಲ್ಲಮ ಹಿಡಿದ ಬಿಲ್ಲು
ಮುರಿಯಿತ್ತು. ॥ ೧ ॥

೨೬೩

ಒಂದೆ ಕೋಲಿನಲ್ಲಿ ಮೂರುಲೋಕ ಮಡಿಯಿತ್ತು.
ಬಿಲ್ಲಿನ ಕೊಪ್ಪು ಹಾರಿ ನಾರಿ ಸಿಡಿದು ನಾರಾಯಣನ ತಾಗಿತ್ತು.
ನಾರಾಯಣನ ಹಲ್ಲು ಮುರಿದು ಬ್ರಹ್ಮನ ಹಣೆಯೊಡೆಯಿತ್ತು.
ಹಣೆ ಮುರಿದು ರುದ್ರನ ಹಣೆಗಿಚ್ಚಿನಲ್ಲಿ ಬಿದ್ದಿತ್ತು, ನಷ್ಟವಾಯಿತ್ತು;
ಗೊಹೇಶ್ವರನ ಶರಣ ಅಲ್ಲಮ ಬದುಕು ನಾಮ ನಷ್ಟವಾಯಿತ್ತು.
॥ ೨ ॥

೨೬೪

ಗಾಣವ ಹಾಕಲಾಗಿ ಆರಾರು ಸಿಕ್ಕಿದರು ಆರೈಕೆಗೊಳ್ಳಯ್ಯ.
ಐದಕ್ಕೊಂದು ಹೋಗಿ ನಾಲ್ಕರಲ್ಲಿ ನಾಚಿಕೆಗೆಟ್ಟು
ಜಗದಾಶೆಯ ಬಯಕೆಯಿಂದ ದಶಾವತಾರವಾದ.
ಇಷ್ಟದ ಇಂದ್ರಿಯಕ್ಕಾಗಿ ಪಾಶವ ಹೊತ್ತ ತಲೆಯಲ್ಲಿ
ಇಂತೀ ವೇಷಧಾರಿ ಹಾಕಿದ ಗಾಣದಲ್ಲಿ ಇಷ್ಟಕ್ಕೆ ಸಿಕ್ಕಿ

ಘಾಸಿಯಾದರು ಇನ್ನಿಪ್ಪವರಾರಯ್ಯ
ಗೊಪೇಶ್ವರನ ಶರಣ ಅಲ್ಲಮನಲ್ಲದೆ? ॥ ೩ ॥

೨೬೫

ತನ್ನ ತಾ ಬೀಳುವರ ಕಂಡು ತಳ್ಳಿ ಹಗೆಯಾಗಲೇಕೆ?
ಒಡೆಮದ ಕಂಡು ಒಡಯೆರಿಯಲೇಕೆ?
ಇಂತೀ ಬಿಡುಮುಡಿಯನರಿಯದೆ
ಒಡೆಯರೆಂಮ ಕೊಡುವರ ಕಾಲ ಪಡಿಗಕ್ಕೆ
ಇವರು ಹೆಸರೂಡೆಯರಲ್ಲದೆ ಅಸಮಾಕ್ಷರಲ್ಲ.
ಇಂತೀ ಗಸಣೆಗಿನ್ನೇವೆ,
ಕಣ್ಣಯ್ಯಪ್ರಿಯ ಗೊಪೇಶ್ವರನ ಶರಣ ಅಲ್ಲಮಾ. ॥ ೪ ॥

೨೬೬

ನಾ ಬಂಮುದಕ್ಕೆ ಮಾಡಿದೆ.
ನೀ ಕಳುಹಿದವರ ಕೊಂದೆ.
ಬಂದೆ ನೀವಿರಿಸಿದಂತಿಪ್ಪು
ಎನ್ನಗಿನ್ನು ಬಂಧ ಮೋಕ್ಷವೇಕೆ,
ಕಣ್ಣಯ್ಯಪ್ರಿಯ ಗೊಪೇಶ್ವರನ ಶರಣ ಅಲ್ಲಮನ ಲೇಪವಾದವಂಗೆ.
॥ ೫ ॥

೨೬೭

ನಾ ಬಂದ ಹಾದಿಯಲ್ಲಿ
ಎಂಬತ್ತು ನಾಲ್ಕು ಲಕ್ಷ ಕಳ್ಳರು ಕಟ್ಟಲಂಜಿದರು.
ಮೂರು ತಾಪಿನ ಅನುವ ಮೀರಿದೆ.
ಬಂದು ನಿಂದಿರಲಾಗಿ, ಈ ದೇಶದ ಅಂದವೇನೊ
ಎಂದು ಕೇಳಿದ, ಗೊಪೇಶ್ವರನ ಶರಣ ಅಲ್ಲಮನು. ॥ ೬ ॥

೨೬೮

ನಾ ಹಡೆದೆ ಮೂವರು ಸೂಳೆಯರ.
ಒಬ್ಬಳಿಗೋಹೆಯನಿಕ್ಕುವೆ;
ಒಬ್ಬಳಿಗೆ ವೇಳೆಗೊತ್ತೆಯ ಕೊಡುವೆ;

ಒಬ್ಬಳ ಮನೆಯೊಳಗೆ ಹಾಕಿಕೊಂಡೆ.
ಎನ್ನ ವಂಚಿಸಿ ಮೂವರೂ ಓಡಿಹೋದರು; ಲೇಸಾಯಿತ್ತೆಂದೆ,
ಗೊಹೇಶ್ವರನ ಶರಣ ಅಲ್ಲಮನ ದೆಸೆಯಿಂದ. ॥ ೭ ॥

೨೬೯

ಬಂದ ಜೀವವನೆಲ್ಲವ ಕೊಂದೆ.
ಅಂದಂದಿಗೆ ಪೆರಹಿಂಗಿದೆ.
ಅವರೆಂದಿನ ಅಸುವಿಂಗೊಡೆಯ ಬಂದರೂ ಬಿಡೆನೆಂದೆ
ಗೊಹೇಶ್ವರನ ಶರಣ ಅಲ್ಲಮನಲ್ಲಿ. ॥ ೮ ॥

೨೭೦

ಮದಕರಿ ಮದವೇರಿ ಬೀದಿಯಲ್ಲಿ ಬರಲಾಗಿ
ಎಂಟು ಕೇರಿಯ ಕಂಬ ಮುರಿದು
ಒಂಬತ್ತು ಬಾಗಿಲ ಕದವ ಕಿತ್ತು
ಮತ್ತೆ ಎನ್ನ ಮೇಲೊತ್ತಿ ಬರಲಾಗಿ ನಿಶ್ಚಯವಾಗಿ ನಿಂದೆ.
ಮತ್ತಗಜದ ಸೊಂಡಿಲು ಮುರಿದೊತ್ತಿ ಇಟ್ಟೆ ಆ ಗಜವ
ಗೊಹೇಶ್ವರನ ಶರಣ ಅಲ್ಲಮನೊತ್ತಿಗಾಗಿ. ॥ ೯ ॥

೨೭೧

ಹೋಗುತಿದ್ದ ಎರಳೆಯನೆಚ್ಚಡೆ ಮೂರು ಕಾಲು ಹರಿದು
ಒಂದರಲ್ಲಿ ಆಧರಿಸಿ ನಿಂದಿತ್ತು.
ನಿಂದ ಹೆಜ್ಜೆಯ ಕೀಳಲಾರದೆ ಅಂಗ ಬಿದ್ದಿತ್ತು; ಎರಳೆ ಅಳಿಯಿತ್ತು.
ಗೊಹೇಶ್ವರನ ಶರಣ ಅಲ್ಲಮನಲ್ಲಿ ಬೇಂಟೆಯ ಹಪ್ಪು
ಕೆಟ್ಟಿತ್ತು. ॥ ೧೦॥

# ಗಾವುದಿ ಮಾಚಯ್ಯನ ವಚನ

೨೭೨

ಎನ್ನಂತರಂಗವೆ ಬಸವಣ್ಣನಯ್ಯಾ.
ಎನ್ನ ಬಹಿರಂಗವೆ ಚೆನ್ನಬಸವಣ್ಣನಯ್ಯಾ.
ಎನ್ನ ಸರ್ವಾಂಗವೆ ಪ್ರಭುದೇವರಯ್ಯಾ.
ಇಂತಿವರ ಕರುಣದ ಕಂದನಾಗಿ ಬದುಕಿದೆನಯ್ಯಾ,
ತ್ರಿಪುರಾಂತಕ ಲಿಂಗದಲ್ಲಿ ಗಾವುದಿ ಮಾಚಯ್ಯ ಹೇಳಿದುದ
ದಿಟವೆನ್ನಿರಣ್ಣಾ. ॥ ೧ ॥

೨೭೩

ಒಡಲು ಒಡವೆ ಧರೆ ನಿನಗಾಯಿತ್ತೆಂದು
ಉಣಲೊಲ್ಲದಿಪ್ಪ ಮರುಳೆ ಕೇಳಾ!
ಅಡವಿಯನೆ ಕಳೆಗೊಂಡು ನೆಲದೊಳಗೆ ಬೈಚಿಟ್ಟು.
ಪೊಲಬುವಪ್ಪಿ ಭೂತ ಕೊಡಲೊಲ್ಲದವೆಯೊ.
ಹಾಗಕ್ಕೆ ಹಾಗವ ಗಳಿಸಿ ಆಗಾಯಿತ್ತೆಂದು
ಉಣಲೊಲ್ಲದಿಪ್ಪ ಮರುಳೆ ಕೇಳಾ!
ಇದನರಿದು ಕಲ್ಯಾಣದ ತ್ರಿಪುರಾಂತಕ ಲಿಂಗದಲ್ಲಿ
ಗಾವುದಿ ಮಾಚಯ್ಯ ಹೇಳಿದುದ ಕೇಳು ಮಾನವಾ. ॥ ೨ ॥

೨೭೪

ಕೆರೆಯಲ್ಲಿ ಉಂಡು ತೊರೆಯಲ್ಲಿ ನೆನೆವನಂತೆ
ಆರು ಕೊಟ್ಟ ಒಡವೆಯ ಆರಿಗಿಕ್ಕಿ
ತಾನಾರಾಧಿಸಿಕೊಂಬವನ ನೋಡಾ!
ಅಲ್ಲಿಗಲ್ಲಿಗೆ ಎಲ್ಲಿಯೂ ತಪ್ಪದು.
ಇದನರಿದು, ಕಲ್ಯಾಣದ ತ್ರಿಪುರಾಂತಕ ಲಿಂಗದಲ್ಲಿ
ಗಾವುದಿ ಮಾಚಯ್ಯ ಹೇಳಿದುದ ದಿಟವೆನ್ನಿರಣ್ಣಾ. ॥ ೩ ॥

೨೭೫

ತನ್ನ ದೇಹ ತನಗೆ ಹೊರೆಯಾದ ಮತ್ತೆ ತಾ ಹೊರುವುದೇನು?
ತಾ ಹೇಳುವ ಅರಿವು ತನಗೆ ಮರವೆಯಾದ ಮತ್ತೆ
ತಾನರಿವುದೇನು?
ಇದು ಕಾರಣ, ತ್ರಿಪುರಾಂತಕ ಲಿಂಗದಲ್ಲಿ
ಗಾವುದಿ ಮಾಚಯ್ಯ ಹೇಳಿದುದ ದಿಟವೆನ್ನಿರಣ್ಣಾ. ॥ ೪ ॥

೨೭೬

ಪಶು ಸಾವುತ್ತ ತನ್ನ ಶಿಶುವಿಂಗೆ ಏನ ಗಳಿಸಿಕೊಟ್ಟಿತ್ತು?
ಪಿಂಡ ಹುಟ್ಟುವಾಗ ಅದಕ್ಕೆ ಸಂಚಿತ ಪ್ರಾರಬ್ಧ ಆಗಾಮಿ ತಪ್ಪದೆಂದೆ.
ಆರು ಸತ್ತರೂ ಲೇಸಿಗರಿಲ್ಲ;
ತಮ್ಮತಮ್ಮಷ್ಟಕ್ಕೆ ಲೇಸಿಗರೆಲ್ಲರು.
ಇದು ತಪ್ಪದು, ಕಲ್ಯಾಣದ ತ್ರಿಪುರಾಂತಕ ಲಿಂಗದಲ್ಲಿ
ಗಾವುದಿ ಮಾಚಯ್ಯ ಹೇಳಿದುದ ದಿಟವೆನ್ನಿರಣ್ಣಾ. ॥ ೫ ॥

೨೭೭

ಭಕ್ತರು ದ್ರವ್ಯವ ಗಳಿಸಿದಲ್ಲಿ
ತಮ್ಮ ತನುವಿದ್ದಲ್ಲಿಯೆ ಗುರು ಲಿಂಗ ಜಂಗಮಕ್ಕರ್ಪಿಸುವುದು.
ಇದೇ ಸದ್ಭಕ್ತಿಯ ಹೊಲಬು.
ತಾನಳಿದು ಮತ್ತೆ ಮನೆಮಕ್ಕಳಿಗೆಂದಡೆ
ಅದೆ ಆಚಾರಕ್ಕೆ ಭಂಗ.
ಆತ ಸ್ವಾಮಿಗೆ ಸ್ವಾಮಿದ್ರೋಹಿ.
ಇದನರಿದು ಕಲ್ಯಾಣದ ತ್ರಿಪುರಾಂತಕ ಲಿಂಗದಲ್ಲಿ
ಗಾವುದಿ ಮಾಚಯ್ಯ ಹೇಳಿದುದ ಕೇಳಿ ಎಲ್ಲರೂ ಸತ್ಯವೆನ್ನಿರಣ್ಣಾ.
॥ ೬ ॥

೨೭೮

ಭಕ್ತರು ಬಯಕೆಯನಿರಿಸಿದಡೆ
ಅದು ಸತ್ತ ನಾಯ ಮಾಂಸ.
ವಿರಕ್ತರು ದ್ರವ್ಯವ ಮುಟ್ಟಿದಡೆ
ಅದು ಕತ್ತೆಯ ಹಡುಹಿಂಗೆ ತಪ್ಪಿದರೆಂಬೆ.
ಇದು ಸತ್ಯ, ತ್ರಿಪುರಾಂತಕ ಲಿಂಗದಲ್ಲಿ ಗಾವುದಿ ಮಾಚಯ್ಯ
ಹೇಳಿದುದ ಸತ್ಯವೆನ್ನಿರಣ್ಣಾ. ॥ ೭ ॥

೨೭೯

ಮುನ್ನ ಗಳಿಸಿದವರೊಡವೆಯ ಈಗ ಕಂಡು ಮತ್ತೆ
ಇನ್ನಾರಿಗೆ ಇರಿಸಿದೆ?
ಆದಂದಿಗೆ ಮಳೆ ಬೆಳೆ ತಾನಿದ್ದಂದಿಗೂ ತಪ್ಪದು.
ಇದನರಿದು ಕಲ್ಯಾಣದ ತ್ರಿಪುರಾಂತಕ ಲಿಂಗದಲ್ಲಿ
ಗಾವುದಿ ಮಾಚಯ್ಯ ಹೇಳಿದುದ ದಿಟವೆನ್ನಿರಣ್ಣಾ. ॥ ೮ ॥

೨೮೦

ಶಿಲೆ ಕಮ್ಮಾರನ ಹಂಗು,
ಮಾತು ಮನಸ್ಸಿನ ಹಂಗು,
ಮನಸ್ಸು ಆಕಾಶದ ಹಂಗು,
ಆಕಾಶ ಬಯಲ ಹಂಗು.
ಕುರುಹುವಿಡಿದು ಇನ್ನೇತರಿಂದರಿವೆ?
ಅರಿವುದಕ್ಕೆ ಸ್ವಯಂಭುವಿಲ್ಲ,
ತ್ರಿಪುರಾಂತಕ ಲಿಂಗದಲ್ಲಿ ಗಾವುದಿ ಮಾಚಯ್ಯ
ಹೇಳಿದುದೆ ದಿಟವೆಂಬೆ. ॥ ೯ ॥

೨೮೧

ಹುಲ್ಲಾದಡೂ ತಳ್ಳಿ ಹೋಹ ಜಲವೆ ತಡೆವುದು.
ಹುಳ್ಳಿಯಾದಡೂ ಪ್ರಸ್ತಾವಕ್ಕೊದಗುವದು.
ಎನ್ನಲ್ಲಿದ್ದ ಮಾತು ಭಕ್ತಿಯುಳ್ಳವರಿಗೆಲ್ಲಕ್ಕೂ ಬೇಕು.
ಎನ್ನೊಡೆಯ ಸಂಗನ ಬಸವಣ್ಣ ಪಣ್ಣೆಯದಂದವನಿಕ್ಕಿ ಕೊಟ್ಟ
ಆ ದಂದುಗದಲ್ಲಿದ್ದೇನೆ,
ಆ ಮಾತಿಂಗೆ ದಂದಣಾ ದತ್ತಣಾ ಎನ್ನದೆ.
ಇದರಂದವ ತಪ್ಪದಾಡಿ ಕಲ್ಯಾಣದ ತ್ರಿಪುರಾಂತಕ ಲಿಂಗದಲ್ಲಿ
ಪಣ್ಣೆಯದ ಚಿಣ್ಣ ಹೇಳಿದ ಮಾತ ಕೇಳಿರಣ್ಣಾ. ॥ ೧೦ ॥

೨೮೨

ಹೊತ್ತಾಡಿದ ಚೋಹವ ಮತ್ತೆ ತೊಟ್ಟು ಬಂದಡೆ
ಮೆಚ್ಚರಯ್ಯಾ ಜಗದವರು.
ಬಿಟ್ಟ ಹೊನ್ನು ಹೆಣ್ಣು ಮಣ್ಣು ಮತ್ತೆ ಕಚ್ಚಿದಡೆ
ಅದು ಸತ್ಯಕ್ಕೆ ದೂರ.
ತ್ರಿಪುರಾಂತಕ ಲಿಂಗದಲ್ಲಿ ಗಾವುದಿ ಮಾಚಯ್ಯ
ಹೇಳಿದುದ ಸತ್ಯವೆನ್ನಿರಣ್ಣಾ. ॥ ೧೧ ॥

## ಗುಪ್ತ ಮಂಚಣ್ಣನ ವಚನ

೨೮೩

ಅಟ್ಟಕ್ಕೆ ನಿಚ್ಚಣಿಕೆಯನಿಕ್ಕಲಾಗಿ
ನುಂಗಿತ್ತು ಅಟ್ಟವ ನಿಚ್ಚಣಿಕೆ.
ನಿಚ್ಚಣಿಕೆಯ ಮೆಟ್ಟಿದವಳ ಅಟ್ಟ ನುಂಗಿತ್ತು.
ಅಟ್ಟವ ನಿಚ್ಚಣಿಕೆಯ ಮೆಟ್ಟಿದವಳ ಬಟ್ಟಬಯಲು ನುಂಗಿತ್ತು.
ಆ ಬಟ್ಟಬಯಲ ಮೆಟ್ಟಿ ನೋಡಿ ಕಂಡ
ನಾರಾಯಣಪ್ರಿಯ ರಾಮನಾಥ. ॥ ೧ ॥

೨೮೪

ಅರು ಹಿರಿಯರೆಲ್ಲರು ಕೋಡಗದ ದಾಡೆಯ
ಸಂಚದ ಕೂಳನುಂಡು,
ತಮ್ಮ ಸಂಚಾರದ ಸಂಚವನರಿಯದೆ,
ಮುಂಚಿದರು ಕಾಲನ ನಾಲಗೆಗೆ.
ಇಂತಿವರು ಸಂಚಿತ ಆಗಾಮಿ ಪ್ರಾರಬ್ಧದಲ್ಲಿ ಲಯಕಾರಣರು.
ಲಯವಿರಹಿತ ನಾರಾಯಣಪ್ರಿಯ ರಾಮನಾಥನಲ್ಲಿ
ಅವಿರಳವಾದ ಶರಣಂಗೆ. ॥ ೨ ॥

೨೮೫

ಆಡು ತೋಳನ ಮುರಿದಾಗ, ಮೊಲ ನಾಯ ಕಚ್ಚಿತ್ತು.
ಕಚ್ಚುವುದ ಕಂಡು ಹದ್ದು ಹಾರಲಾಗಿ
ಆ ಹದ್ದ ಹಾವು ಕಚ್ಚಿ ಸತ್ತಿತ್ತು;
ವಿಷವೇರಿ ಹೋಯಿತ್ತು ಗಾರುಡ.
ನಾರಾಯಣಪ್ರಿಯ ರಾಮನಾಥನಲ್ಲಿ
ಐಕ್ಯಾನುಭಾವಿಯಾದ ಶರಣಂಗೆ. ॥ ೩ ॥

೨೮೬

ಆತ್ಮ ತೇಜದಿಂದ ಹೋರುವ ಮಿಥ್ಯಾಭಾವಿಗೆ
ನಿಜತತ್ವದ ಮಾತೇಕೆ?
ವೇದ ಶಾಸ್ತ್ರ ಪುರಾಣ ಆಗಮಂಗಳಲ್ಲಿ ಬಲ್ಲವರಾದಡೆ
ವಾದಕ್ಕೆ ಹೋರಿಹೆನೆಂಬ ಸಾಧನವೇಕೆ?
ಇಷ್ಟನರಿವುದಕ್ಕೆ ದೃಷ್ಟ
ಕುಸುಮ ಗಂಧವ ತೆರವಂತೆ;
ಅನಲ ಅನಿಲನ ತೆರದಂತೆ;
ಕ್ಷೀರ ನೀರಿನ ತೆರದಂತೆ;
ಅದು ತನ್ನಲ್ಲಿಯೆ ಬೀರುವ ವಾಸನೆ.
ನಾರಾಯಣಪ್ರಿಯ ರಾಮನಾಥನಲ್ಲಿ
ಐಕ್ಯಾನುಭಾವಿಯಾದ ಶರಣ. ॥ ೪ ॥

೨೮೭

ಆದಿ ಮಧ್ಯ ಅವಸಾನ ಉಚಿತದ ಸಾವಧಾನವ ಎಚ್ಚರಿಕೆಯಲ್ಲಿ
ಅಸು ಅಡರುವಾಗ ದೆಸೆದಿಕ್ಕಿನಲ್ಲಿ ಕುಚಿತ್ತ ಭಾವವಿಲ್ಲದೆ
ಅಂತರಿಕ್ಷ ಸುಮಾನತೆಯಲ್ಲಿ, ದ್ವಾರದಲ್ಲಿ ನೀರೆಯ್ದುವಂತೆ,
ಸ್ಫಟಲದಲ್ಲಿ ಪನ್ನಗ ಹೋಹಂತೆ,
ಕುಸುಮದಲ್ಲಿ ಗಂಧ ಸಂಚಾರದಲ್ಲಿ ಸಂಗವ ಮಾಡಿದಂತೆ,
ಮಿಂಚಿನಲ್ಲಿ ತೋರಿದ ಕುಡಿವೆಳಗಿನ ಗೊಂಚಲ ಸಂಚಲದಂತೆ,
ಅಂಚೆ ಸೇವಿಸುವ ಪಯ ಉದಕದ
ಹಿಂಚುಮುಂಚನರಿದಂತಿರಬೇಕು.
ಸಂಚಿತ ಆಗಾಮಿ ಪ್ರಾರಬ್ಧಕ್ಕೆ ಹೊರಗಾದ ಮಹಂತನ
ಐಕ್ಯದಿರವು.
ಕಂಚಿನ ನಾದ ಸಂಚಾರ ಮುಂಚಿದಲ್ಲಿಯೆ ಲಯ
ನಾರಾಯಣಪ್ರಿಯ ರಾಮನಾಥಾ. ॥ ೫ ॥

೨೮೮

ಆನರಿದ ಭಕ್ತಿತ್ರಯ ಎಂತುಟೆಂದಡೆ:
ತ್ರಿವಿಧ ಲಿಂಗ, ತ್ರಿವಿಧ ಗುರು, ತ್ರಿವಿಧ ಜಂಗಮ
ತ್ರಿವಿಧ ಪಾದೋದಕ, ತ್ರಿವಿಧ ಪ್ರಸಾದ, ತ್ರಿವಿಧ ಆತ್ಮ;
ತ್ರಿವಿಧ ಬುದ್ಧಿಯಲ್ಲಿ ತ್ರಿವಿಧ ಅರ್ಪಿತ ತ್ರಿವಿಧ ಅವಧಾನಂಗಳಿಂದ

ತ್ರಿವಿಧ ಭೇದೋಪಭೇದಗಳಲ್ಲಿ ಎಚ್ಚತ್ತು,
ತ್ರಿವಿಧ ಗುಣದಲ್ಲಿ ತ್ರಿವಿಧವನರಿತು,
ತ್ರಿವಿಧ ಗುಣದಲ್ಲಿ ತ್ರಿವಿಧವ ಮರೆದು,
ಅರಿದೆ ಮರೆದೆನೆಂಬ ಈ ಉಭಯ ನಷ್ಟವಾಗಿ ನಿಂದುದೆ
ಸಾತ್ವಿಕ ಭಕ್ತಿ, ಸಜ್ಜನ ಯುಕ್ತಿ,
ನಾರಾಯಣಪ್ರಿಯ ರಾಮನಾಥಾ. ॥ ೬ ॥

೨೮೯

ಆನು ನಾಮದ ದಾಸನಲ್ಲದೆ
ದಾಸೋಪದ ದಾಸನಲ್ಲಯ್ಯ.
ಆನು ಹರಿಭಕ್ತನಲ್ಲದೆ ಶಿವಭಕ್ತನಲ್ಲಯ್ಯ.
ಎನಗೆ ಶಿವಭಕ್ತಿ ನೆಲೆಗೊಳ್ಳದಯ್ಯ.
ನೀನೆ ಎನಗೆ ಕೃಪೆಮಾಡಾ
ನಾರಾಯಣಪ್ರಿಯ ರಾಮನಾಥಾ. ॥ ೭ ॥

೨೯೦

ಆವ ಕೈದಿನಲ್ಲಿ ಇರಿದಡೆ ಸಾವುದೊಂದೆ.
ಕೈದಿನ ಭೇದವಲ್ಲದೆ ಕರಣ ಭೇದವಿಲ್ಲ.
ಇಂತಿವರಲ್ಲಿ ಭೇದವ ತಿಳಿ,
ನಾರಾಯಣಪ್ರಿಯ ರಾಮನಾಥಾ. ॥ ೮ ॥

೨೯೧

ಇದು ಅರಿಬಿರಿದು ಇದಾರಿಗೂ ಅಸಂಗ.
ಹಾವು ಹದ್ದಿನಂತೆ ಹುಲಿ ಹುಲ್ಲೆಯಂತೆ
ಹಾವು ಹರಿಯ ಕೂಟದಂತೆ ಅರಿ ಬಿರಿದಿನ ಸಂಗ.
ತೆರಹಿಲ್ಲದ ಆಲಯ, ಭಟರಿಲ್ಲದ ಕಟಕ,
ದಿಟಪುಟವಿಲ್ಲದ ಜಾವಟಿ,
ಎಸಕವಿಲ್ಲದ ಒಲುಮೆ, ರಸಿಕರಿಲ್ಲದ ರಾಜನಗರ
ಇಂತಿವರ ಉಪಸಾಕ್ಷಿ ಸಂತೈಸುವದಕ್ಕೆ, ಭ್ರಾಂತನಳಿವುದಕ್ಕೆ
ಶ್ರುತದಲ್ಲಿ ಕೇಳಿ ದೃಷ್ಟದಲ್ಲಿ ಕಂಡು
ಅನ್ವಯ ಅನುಮಾನದಲ್ಲಿ ಅರಿದು
ಅಭಿನ್ನವಿಲ್ಲದೆ ಅವಿರಳನಾಗಾ, ಮನಸಿಜಪಿತಪ್ರಿಯ

ಶ್ರುತಿ ನಾಮ ದೂರ ಗತಿ ಮತಿ ಈವ
ರಾಮೇಶ್ವರ ಲಿಂಗದಲ್ಲಿ ಪ್ರತಿಭಿನ್ನವಿಲ್ಲದ ಶರಣಂಗೆ. ॥ ೯ ॥

೨೯೨

ಈಶ್ವರಮೂರ್ತಿಯ ಕರಕಮಲಕ್ಕೆ ತಂದಲ್ಲಿ,
ಕಣ್ಮನ ಮೂರ್ತಿಧ್ಯಾನ ಹೆರೆಹಿಂಗದಕ್ಕರಿಂದ
ಭಾವ ಭ್ರಮಿಸದೆ, ಚಿತ್ತ ಸಂಚರಿಸದೆ
ಮನ ವಚನ ಕಾಯದಲ್ಲಿ ಭಿನ್ನ ಭಾವವಿಲ್ಲದೆ
ಪೂಜಿಸುವ ಕೈಯೂ ತಾನಾಗಿ, ಅರಿದ ಮನವೂ ತಾನಾಗಿ,
ಪೊತ್ತಿಪ್ಪ ಅಂಗದ ನೆಲೆಯೂ ತಾನಾಗಿ
ಹೆರೆಹಿಂಗದೆ ಪೂಜೆಯ ಮಾಡುತಿರ್ಪ
ಆತನ ಅಂಗವೆ ಲಿಂಗ, ಆತನಿದ್ದುದೆ ಅವಿಮುಕ್ತಿ ಕ್ಷೇತ್ರ.
ಇಂತಪ್ಪ ಮಹಾಮಹಿಮ
ನಾರಾಯಣಪ್ರಿಯ ರಾಮನಾಥ ತಾನು ತಾನೆ. ॥ ೧೦ ॥

೨೯೩

ಈಶ್ವರ ಲೀಲಾಮೂರ್ತಿಯಾಗಿ
ಏಕಾದಶ ರುದ್ರಮೂರ್ತಿಯ ಭಾವಿಸುವಲ್ಲಿ
ವಾದರುದ್ರನ ಕಳುಹಿದ ಬಿಜ್ಜಳನೆಂಬ ನಾಮವ ಕೊಟ್ಟು,
ಕಾಲರುದ್ರನ ಕಳುಹಿದ ಭಕ್ತಿನಾಮವ ಕೊಟ್ಟು ಬಸವೇಶ್ವರನ,
ಮಾಯಾಕೋಳಾಹಳನೆಂಬ ರುದ್ರನ ಕಳುಹಿದ
ಪ್ರಭುನಾಮವ ಕೊಟ್ಟು,
ಮತ್ಸರವೆಂಬ ನಾಮ ಗುಪ್ತಗಣೇಶ್ವರನೆಂಬ ನಾಮವ
ತಾಳ್ದು ಬಪ್ಪುದಕ್ಕೆ ಮುನ್ನವೇ ಐಕ್ಯ.
ಪ್ರಮಥರುಗಳು ಪ್ರಕಟವ ಮಾಡಲಿಕ್ಕೆ ಬಂದಿತ್ತು.
ಎನಗೆ ಮರ್ತ್ಯದ ಭವ.
ಭವ ಬಸವನಿಂದ ಹರಿವುದು.
ನಾ ಬಿತ್ತಿದ ಬೆಳೆಯೆನಗೆ ಫಲಭೋಗವನಿತ್ತು
ಎನ್ನ ಅವತಾರಭಕ್ತಿ ಇನ್ನೆಂದು ಮೀರವಪ್ಪುದು,
ಅಚ್ಯುತಪ್ರಿಯ ರಾಮನಾಥಾ. ॥ ೧೧ ॥

೨೯೪

ಉಡುವಿನ ನಾಲಗೆ ಮದಾಳಿಯ ಕಾಲು
ಮಾರನ ಕಣ್ಣು ಮನ್ಮಥನ ಬಾಣ ಸಾರಥಿಯ ರೂಪು
ಸಕಲರ ಸಂಗದಲ್ಲಿ ವಿಕಳತೆಗೊಂಬ ಪಶುಗಳಿಗುಂಟೆ?
ರಸಾಳದ ಅಸು ನಾರಾಯಣಪ್ರಿಯ ರಾಮನಾಥನಲ್ಲಿ
ಅರಿದು ಮರೆದೊರಗಿದವಂಗಲ್ಲದೆ. ॥ ೧೨ ॥

೨೯೫

ಉದಕ ಒಂದಾದಡೆ ಕೂಟದ ಗುಣದಿಂದ ಜಾತಿ ಉತ್ತರವಾಯಿತ್ತು.
ಹಾಲು ಹುಳಿ ಕಹಿ ಖಾರ ಇವು ಮೊದಲಾಗಿರೆ
ಅವರವರಲ್ಲಿ ಅವ ಬೆರಸಿದಡೆ
ಅವರವರ ಭಾವಕ್ಕೆ ತಕ್ಕಂತೆ ಇಪ್ಪ ಜಲಭೇದದ ವಸ್ತು ನಿರ್ದೇಶ.
ಆನೆಯ ಮಾನದಲ್ಲಿ ಇರಿಸಬಹುದೆ?
ಕಿರಿಮು ಘನದಲ್ಲಿ ಅಡಗುವುದಲ್ಲದೆ
ಘನ ಕಿರಿದಿನಲ್ಲಿ ಅಡಗುವುದೆ?
ಅಮೃತದ ಕೆಲದಲ್ಲಿ ಅಂಬಲಿಯುಂಟೆ?
ನಾರಾಯಣಪ್ರಿಯ ರಾಮನಾಥಾ. ॥ ೧೩ ॥

೨೯೬

ಉದಕಕ್ಕೆ ಹಳಚಿಕೆಯಲ್ಲದೆ ಪಾಕುಳಕ್ಕುಂಟೆ ಅಯ್ಯಾ.
ಮನದ ಮನ್ನಣೆ ಮಾನ್ಯರಿಗಲ್ಲದೆ ಸಮಯಕ್ಕುಂಟೆ?
ಇಂತೀ ಮನದೆರನರಿ,
ನಾರಾಯಣಪ್ರಿಯ ರಾಮನಾಥಾ. ॥ ೧೪ ॥

೨೯೭

ಉಳಿಯ ಹಿಡಿಯಲ್ಲಿ ಕಲೆ ಮಾಡಿಸಿಕೊಂಡ ದೇವರಿಗೆ
ಅಳಿವು ಉಳಿವಲ್ಲದೆ,
ಉಳಿಗೆ ಹೊರಗಾದ ಅಳಿಯದವನನರಿಯಾ,
ನಾರಾಯಣಪ್ರಿಯ ರಾಮನಾಥಾ. ॥ ೧೫ ॥

೨೯೮

ಎತ್ತು ಹಸುವ ಹಾಯಲಾಗಿ ತೆಕ್ಕೆಯನಿಕ್ಕಿದ ಕಣ್ಣಿಯಲ್ಲಿ
ತೆಕ್ಕೆಗೆ ನಡೆಯದ ಹಸು, ಕಟ್ಟುಗೊಳ್ಳದ ಹೋರಿ.

ಇವೆರಡ ಸಿಕ್ಕಿಸುವ ಪರಿಯಿನ್ನೆಂತೊ?
ಕಟ್ಟಿದ ಕಣ್ಣಿಯ ಕುಣಿಕೆ ಕಳಚಿ ಹೋರಿಯ ಕೊರಳಲ್ಲಿ
ಹೋಯಿತ್ತು,
ಹಸು ಬೆತ್ತಲೆಯಾಯಿತ್ತು,
ನಾರಾಯಣಪ್ರಿಯ ರಾಮನಾಥಾ. ॥ ೧೬ ॥

೨೯೯

ಎನ್ನ ಕ್ರಿಯಾಜ್ಞಾನದ ಕೂಟ
ಮಡಕೆ ಮಣ್ಣಿನಂತಾಯಿತ್ತಯ್ಯಾ,
ಭ್ರಮರ ಗಂಧದಂತಾಯಿತ್ತು ತಂದೆ.
ಮಧುರ ವಾಣಿಯಂತೆ ಸರ ಶರಧಿಯಂತಾಯಿತ್ತಯ್ಯಾ.
ಅಮೃತ ಅಮೃತದಂತಾಯಿತ್ತು.
ಬೆಳಗಿನಂತೆ ಬಯಲು ಬೆಳಗಿನಂತಾಯಿತ್ತು.
ಎಡೆ ಬಿಡುವಿಲ್ಲದೆ ಕಡೆನಡು ಮೊದಲೆನ್ನದೆ
ಸಕ್ಕರೆಯ ದಂಡದಂತೆ ಆ ಗುಣವೆತ್ತಲೂ ಸರಿ,
ಎಲೆ ಅಚ್ಯುತಪ್ರಿಯ, ರಾಮನಾಥಾ ನಿಮ್ಮಲ್ಲಿ ಎನಗೆ. ॥ ೧೭ ॥

೩೦೦

ಎನ್ನ ಹರಿಭಕ್ತಿಯಿಂದ ಸಾವಿರ ಕಮಲ ಕುಸುಮ ತಂದು
ಪಶುಪತಿಯ ಚರಣಕ್ಕೆ ಒಸೆದು ಮಾಡುತಿರಲಾಗಿ,
ಶಶಿಧರ ಒಂದು ಕುಸುಮವ ಕಡಿಮೆ ಮಾಡಲಾಗಿ,
ಹುಸಿಯ ಹೊರಲಾರದೆ ತೆಗೆದಿಕ್ಕಿದ ಕಣ್ಣು
ಕಾಲಸಂಹಾರನ ಕಾಲಲಿದೆ.
ಇದು ಕಾರಣ, ನಾರಾಯಣಪ್ರಿಯ ರಾಮನಾಥ. ॥ ೧೮ ॥

೩೦೧

ಎಮ್ಮಾಕೆಯ ಕೈಯ ಮೊಗೆಯ ನೀರಿನಲ್ಲಿ ನಾಮವ ತೇಯಲಾಗಿ
ನಾಮವುಳಿದು ನೀರಳಿಯಿತ್ತು.
ಅಳಿದ ನೀರ ಹಣೆಗಿಕ್ಕಲಾಗಿ ನಿರ್ನಾಮವಾಯಿತ್ತು ;
ನಾರಾಯಣಪ್ರಿಯ ರಾಮನಾಥನಲ್ಲಿ
ನಿಶ್ಚಯವಾಯಿತ್ತೆನಗೆ. ॥ ೧೯ ॥

೩೦೨

ಎಲ್ಲರಿಗೂ ಬಲ್ಲತನವ ಹೇಳಿ
ಬಲ್ಲವನೆಂದಡೆ ಅದು ಇಲ್ಲದ ಮಾತು.

ಬಲ್ಲತನವನರಿವುದೆಂದು ಹೇಳುವ ಮಾತು ಅವರಿಗೊ ತನಗೊ?
ಸಾಧನೆಯ ಮಾಡುವ ಭೇದಕ
ಗಾಯದ ಆಗ ತೋರಿ ತಿವಿಯೆಂದಡೆ
ಅದರ ಆಗು ಹೋಗು ಆರಿಗೆಂಬುದನರಿ.
ತಂಬಿಗೆಯಲ್ಲಿ ತುಂಬಿದ ಉದಕವ ಕೊಂಬುದು
ತಂಬಿಗೆಯೊ ಕೊಂಬುವ ತಾನೊ ಎಂಬುದನರಿ.
ತನಗಾ ನಿರಂಗದ ಸಂಗ ನಿಬದ್ಧಿಯಾದಲ್ಲಿ,
ಅಂತಾ ಇರವ ಇದಿರು ಕಂಡು ಪ್ರಮಾಣಿಸುವಲ್ಲಿ,
ಅವರಿಗದೇ ನಿಂದ ಉಪದೇಶ.
ಇದು ಅರಿಕೆವಿದರ ಇರವು.
ಹಾಗಲ್ಲದೆ ಬೆಳೆಗೆ ನೀರನೆರೆದು ಫಲವ ಭೋಗಿಸುವಂತೆ
ನಾರಾಯಣಪ್ರಿಯ ರಾಮನಾಥಾ. ॥ ೨೦ ॥

೩೦೩

ಐದು ಕೊಂಬಿನ ಮರನನೇರಿ
ಮೂರು ಕಾಲಿನಲ್ಲಿ ಮೆಟ್ಟಿ ನಿಂದು
ಎಲೆಯ ಮರೆಯ ಹಣ್ಣ ಕೊಯ್ದೆಹೆನೆಂದಡೆ
ಕೊಂಬು ಕೊಯ್ಯಲೀಸದು ನೋಡಾ!
ಮತ್ತೆ ಇಳಿವಡೆ ಮರನಿಲ್ಲ,
ಹಿಡಿವಡೆ ಕೊಂಬಿಲ್ಲ, ಹರಿವಡೆ ಹಣ್ಣಿಲ್ಲ.
ಈ ಗುಣ ಮರದ ಮರವೆಯೊ, ಮನವ ಮರವೆಯೊ?
ಇದನರಿದವಂಗಲ್ಲದೆ ಒಡಗೂಡಲಿಲ್ಲ
ನಾರಾಯಣಪ್ರಿಯ ರಾಮನಾಥಾ. ॥ ೨೧ ॥

೩೦೪

ಕದ್ದಡೆ ಕಳವ ಕೊಟ್ಟಿದ್ದವರಿದ್ದಂತೆ
ಆಚೆಯಲ್ಲಿ ಇದ್ದವರಿಗೇನು?
ಹುಸಿ ಕೊಲೆ ಕಳವು ಹಾದರ ಇಂತಿವನೆಸಗಿ ಮಾಡುವ
ಪಾಪಿಯ ಎದುರಿಗೆ ಹೇಳಿ ಹೇಸದೆ ಬಿಡಲೇತಕ್ಕೆ?
ಇಂತೀ ರಸಿಕವನರಿದವಂಗೆ ಎಸಕವಿಲ್ಲದ ಮಾತು,
ಶಶಿಧರನ ಶರಣಂಗೆ ಹಸುಳೆಯ ತೆರನಂತೆ,
ನಸುಮಾಸದ ಪಿಕದಂತೆ, ಶಬರನ ಸಂದಣಿಯಂತೆ,
ಉಲುಹಡಗಾ ಕಲಹಪ್ರಿಯ ಕಂಜಳಧರ ರಾಮನಾಥಾ.॥ ೨೨ ॥

೩೦೫

ಕನ್ನಡಿಗೆ ಕಪ್ಪಾದಡೆ ಬೆಳಗಿದಡೆ ದೋಷವ ಕಟ್ಟಬಹುದೆ?
ಅರಿ ಕೊಲಬಂದಿದ್ದಲ್ಲಿ ಅರುಪಿದಡೆ ವಿರೋಧವುಂಟೆ?
ಸಂಸಾರ ಸಂಪತ್ತಿನಲ್ಲಿ ರಾಜಸದಲ್ಲಿ ಗುರುವಿಂಗೆ ತಾಮಸ ಬಂದಡೆ
ಭೃತ್ಯ ಬಿನ್ನಹವ ಮಾಡುವಲ್ಲಿ
ಸತ್ಯರೆಂದು ಪ್ರಮಾಣಿಸುವುದು ಗುರುಸ್ಥಲ.
ಇಂತೀ ಉಭಯ ಏಕವಾಗಿಯಲ್ಲದೆ
ಗುರು-ಶಿಷ್ಯ ಜ್ಞಾನಸ್ಥಲವಿಲ್ಲ
ನಾರಾಯಣಪ್ರಿಯ ರಾಮನಾಥಾ. ॥ ೨೩ ॥

೩೦೬

ಕನ್ನವನಿಕ್ಕಿದ ಕಳ್ಳನಿದ್ದಂತೆ ಮಣ್ಣ ಬಂಧಿಸಬಹುದೆ?
ಎನ್ನ ಅಂಗ ಪ್ರಾಣಕ್ಕೆ ಲಿಂಗವಲ್ಲದೆ
ಕರಣಂಗಳಿಗೆ ಬೇರೊಂದಂಗವುಂಟೆ?
ಇದಕ್ಕೆ ಅಂಜುವಡೆ,

**"ಗುರೋಃ ಪಾಪಂ ಶಿಷ್ಯಸ್ಯಾಪಿ ಶಿಷ್ಯಪಾಪಂ ಗುರೋರಪಿ"**

ಎಂಬುದು ಹುಸಿಯಾದಡೆ
ಹೇಳಿಸಿಕೊಂಬುವ ಗುರು ಹೇಳುವಾತ ಶಿಷ್ಯನೆ?
ಆತ ಹೇಳೂದಕ್ಕೆ ಮುನ್ನ ತಾನರಿಯಬೇಕು.
ಈ ಉಭಯಕ್ಕೆ ಭಿನ್ನ ಭಾವವಿಲ್ಲ.
ಜೂಳಿಯ ಕುಂಭದಂತೆ ಏತರಲ್ಲಿ ಒದಗಿದಡೂ ಸರಿ.
ಸಗುಣನೀತಿಗೆ ಮುಕ್ತಿ ಉಭಯಸ್ಥಲ ಯುಕ್ತಿ
ನಾರಾಯಣಪ್ರಿಯ ರಾಮನಾಥಾ. ॥ ೨೪ ॥

೩೦೭

ಕಲ್ಲಿಯ ಗಂಟು, ಲಲನೆಯರ ಮೋಹ,
ಪುಳಿಂದರ ವೇಷ, ಮಾರುತನ ಗ್ರಾಸ,
ಇಂತಿವರ ಇರವು ಗುರುಮಾರ್ಗದ ಬೋಧೆ.
ಜಲಚರ ಆಹಾರಕ್ಕೆ ಸಿಕ್ಕಿದ ಕೊರಳಿನ ವಿಧಿಯಂತೆ,
ನೆರೆಗೆ ಇಲ್ಲದ ಗುರುವಿನ ಕೈದೊಡಕಿನ ಶಿಷ್ಯ

ಅರಿವಿಂಗೆ ಬಡಿಹೋರಿಯಾದ.
ಇಂತಿವ ಕಂಡು ನೊಂದ ಸಂದೇಹಿಗೆ
ನೀ ಅಜಡನಾಗಿ ಎನ್ನ ಜಡವ ಉದ್ಧರವ ಮಾಡು
ಸದ್ಗುರುಮೂರ್ತಿ ನಾರಾಯಣಪ್ರಿಯ ರಾಮನಾಥಾ. ॥ ೨೫ ॥

೩೦೮

ಕಳನನೇರಿ ಕೈಮರೆದ ಸುಭಟಂಗೆ
ಅರಿದು ಮರೆವ ಬರುಕಾಯಂಗೆ
ಕುರುಹಿಡಲೇತಕ್ಕೆ ನೆರೆ ವಿಶ್ವಾಸಹೀನಂಗೆ.
ಅರಿದಡೆ ಗೊಲ್ಲಳನಂತಿರಬೇಕು;
ಮರೆದಡೆ ಚಂದಯ್ಯನಂತಿರಬೇಕು.
ಇಂತೀ ಗುಣಂಗಳಲ್ಲಿ ಸ್ವತಂತ್ರ ಸಂಬಂಧಿಗಳು
ನಾರಾಯಣಪ್ರಿಯ ರಾಮನಾಥಾ,
ನಿಮ್ಮ ಶರಣರು. ॥ ೨೬ ॥

೩೦೯

ಕಳವು ಹಾದರಕ್ಕೆ ಗುಪ್ತ.
ಶಿವಭಕ್ತಿ ಶಿವಪೂಜೆ ಶಿವಜ್ಞಾನ ಇಂತಿವಕ್ಕೆ
ಬಾಹ್ಯಾಡಂಬರವೆ?
ಅರಿವುದೊಂದು ಅರುಹಿಸಿಕೊಂಬುದೊಂದು.
ಇಂತೀ ಉಭಯ ಸುಖ ಸಂಭಾಷಣವಲ್ಲದೆ
ರಟ್ಟೆಯ ಪೂಜೆ ಕರ್ಕಶದನುಭವ.
ಡೊಂಬರ ಡೊಳ್ಳ ಕೇಳಿ, ಬಂದವರೆಲ್ಲರು ನಿಂದು ನೋಡಿ
ತಮ್ಮ ತಮ್ಮ ಮಂದಿರಕ್ಕೆ ಹೋಹಂತಾಯಿತ್ತು.
ಈ ಪಥದ ಸಂದನಾರು ಅರಿಯರು.
ನಾರಾಯಣಪ್ರಿಯ ರಾಮನಾಥನಲ್ಲಿ
ತನ್ನ ತಾನೆ ತಿಳಿದ ಶರಣ ಬಲ್ಲ. ॥ ೨೭ ॥

೩೧೦

ಕಾಗೆಯ ತಿಂದವ ಕಮ್ಮಾರ,
ಎಮ್ಮೆಯ ತಿಂದವ ಸಮಗಾರ,
ಹಸುವ ತಿಂದವ ಪಶುಪತಿಯ ಶರಣ;

ಇವರ ಮೂವರ ತಿಂದ ಅಂದವ ನೋಡಾ!
ಇದರ ಸಂಗವಾರಿಗೂ ಅರಿದು,
ನಿಸ್ಸಂಗ ನಿರ್ಲೇಪ ನಾರಾಯಣಪ್ರಿಯ ರಾಮನಾಥ. ॥ ೨೮ ॥

೩೧೧

ಕಾಡಿ ಬೇಡಿ ಉಂಬರೆಲ್ಲರು ಜಗದ ರೋಡಗವಂತರು.
ಬೇಡದೆ ಕಾಡದೆ ಚಿತ್ತದಲ್ಲಿ ಆಸೆಯ ಕಲೆದೋರದೆ,
ಹೊತ್ತ ಘಟಕ್ಕೆ ತುತ್ತು, ಶೀತಕ್ಕೆ ಅಂಬರ
ನಿರ್ಜಾತನ ಒಲುಮೆ ಎಲ್ಲಿದ್ದರೂ ತಪ್ಪದೆಂದು
ವಿಶ್ವಾಸವುಳ್ಳ ಶರಣಂಗೆ
ಅವ ತೊಟ್ಟಿದ್ದುದು ಅದೇತರ ಕಾಯ? ದಗ್ಧಪಟ ನ್ಯಾಯ!
ನಾರಾಯಣಪ್ರಿಯ ರಾಮನಾಥನಲ್ಲಿ ಕಳೆದುಳಿದ
ಶರಣಂಗೆ! ॥ ೨೯ ॥

೩೧೨

ಕಾಯ ಕಾಯವ ನಂಗಿ, ಮನ ಮನವ ನುಂಗಿ,
ಘನ ಘನವ ನುಂಗಿ, ತನ್ಮಯ ತದ್ರೂಪಾಗಿ ನಿಂದಲ್ಲಿ,
ವಿರಳವ ಅವಿರಳ ನುಂಗಿ, ಸೆರಗುದೋರದ ಕುರುಹು
ಅವತಾರ ಸಾಧನ ಸಾಧ್ಯ ಗುಪ್ತನ ಭಕ್ತಿ,
ಮರ್ತ್ಯದ ಮಣಿಹ ಸಂದಿತ್ತು.
ವೃಷಭೇಶ್ವರ ಮಂದಿರಕ್ಕೆ ಬಂದು
ಎನ್ನ ಸಂದೇಹ ಸಂಕಲ್ಪವಂ ಬಿಡಿಸಿ
ಪ್ರಕಟವೆ ಕಡೆಯೆಂದು ಅಂದು ಎಂದು ಬಂದುದು ಸಂದಿತ್ತು
ಅಂಗಪೂಜೆ ಲಿಂಗವೆ ಎಂಬುದಕ್ಕೆ ಮುನ್ನವೆ ಐಕ್ಯ, ಅವಸಾನ
ರಾಮೇಶ್ವರಲಿಂಗದಲ್ಲಿ. ॥ ೩೦ ॥

೩೧೩

ಕಾಯ ಸ್ಥಿರವೆಂಬುವ ಭಕ್ತನಲ್ಲ.
ಅದೆಂತೆಂದಡೆ:
ಎಲು ನರ ಚರ್ಮದ ಹೊದಿಕೆ,
ಮಲ ಮೂತ್ರ ಕೀವಿನ ಹುತ್ತ, ಹುಳುವಿನಾಗರ.
ಮಲಭಾಂಡದ ಶರೀರವ ನಚ್ಚಿ

ಗುರುವಿಂಗೆ ತನು, ಲಿಂಗಕ್ಕೆ ಮನ, ಜಂಗಮಕ್ಕೆ ಧನ
ಇಂತೀ ತ್ರಿವಿಧವ ಕೊಟ್ಟು ಇಪ್ಪ ಕೃತಾರ್ಥಂಗೆ
ನಮೋ ನಮೋ ಎಂದು ಬದುಕಿದೆ,
ನಾರಾಯಣಪ್ರಿಯ ರಾಮನಾಥಾ. ॥ ೩೧ ॥

೩೧೪

ಕಾಲವನರಿವುದಕ್ಕೆ ಕೋಳಿಯಾಯಿತ್ತು.
ಋತುಕಾಲವನರಿವುದಕ್ಕೆ ಕೋಗಿಲೆಯಾಯಿತ್ತು.
ಶಾಖೆಯ ಲಂಘನವನರಿವುದಕ್ಕೆ ಗೋಲಾಂಗುಲವಾಯಿತ್ತು.
ಕರಣದ ಮರಣವನರಿವುದಕ್ಕೆ ಮಲತ್ರಯ ದೂರನಾದ
ನಾರಾಯಣಪ್ರಿಯ ರಾಮನಾಥಾ. ॥ ೩೨ ॥

೩೧೫

ಕಾಷ್ಠವ ಕಾರ್ಮುಗಿಲು ನುಂಗಿತ್ತು.
ಹರಿವ ನೀರ ಉರಿ ಕುಡಿಯಿತ್ತು.
ಬಡವ ಬಲ್ಲಿದನ ಕೊಂದು ಸತ್ತ ಠಾವಿನಲ್ಲಿ
ಬಂಧುಗಳೆಲ್ಲರು ಕೂಡಿ ಎತ್ತುವರಿಲ್ಲದೆ ಅರೆವೆಣನಾಯಿತ್ತು.
ಮುಕ್ತಿ ನಾಮ ನಷ್ಟ,
ನಾರಾಯಣಪ್ರಿಯ ರಾಮನಾಥಾ, ಇನ್ನೇವೆನಿನ್ನೇವೆ! ॥ ೩೩ ॥

೩೧೬

ಕಾಳರಾತ್ರಿಯಲ್ಲಿ ಅಂಧಕಾರದ ಕೊಟ್ಟಿಗೆಯಲ್ಲಿ
ಕಾಳೆಮ್ಮೆಯ ಕರು ಹಾಳವಾಗಿ
ಹಾಳಿದ್ದ ದನಿಗಂಜೆ ಕೊಟ್ಟಿಗೆ ಹಾಳಾದುದಿಲ್ಲ.
ಎತ್ತ ಕಟ್ಟುವುದಿಲ್ಲ ಎಮ್ಮೆಯಕರು ಸತ್ತಲ್ಲದೆ.
ಕೊಟ್ಟಿಗೆ ಹಾಳಾಗದಯ್ಯಾ.
ಕರುವಿನ ಕೊರಳೂ ಅಡಗದು.
ಇನ್ನೇವೆನಿನ್ನೇವೆನಯ್ಯಾ,
ನಾರಾಯಣಪ್ರಿಯ ರಾಮನಾಥಾ,
ನೀನೇ ಗುರು ರೂಪಾಗಿ ಬಂದೆನ್ನ ಕರಸ್ಥಲವನಿಂಬು
ಗೊಳ್ಳಯ್ಯಾ. ॥ ೩೪ ॥

೩೧೭

ಕೀರ್ತಿಗೆ ಜಗವ ಕೊಂಡು ಮಾಡುವಾತ ಭಕ್ತನೆ ?
ನಿಂದಿಸಿಹರೆಂದು ಅಂಜಿಕೊಂಡಿಪ್ಪವ ತಪಸಿಯಲ್ಲ ;
ಜಗವ ಮೆಚ್ಚಬೇಕೆಂದು ಮಾಡುವಾತ ಭಕ್ತನಲ್ಲ ;
ಇಚ್ಛೆಗೆ ನುಡಿವವ ವಿರಕ್ತನಲ್ಲ.
ಇದರಚ್ಚುಗ ನಿಮಗೇಕೆ ?
ನಾರಾಯಣಪ್ರಿಯ ರಾಮನಾಥ ಒಚ್ಚತ ನಿಮ್ಮನೊಲ್ಲ. ॥ ೩೫ ॥

೩೧೮

ಕುದುರೆಗೆ ಹುಲ್ಲ ಹಾಕಲಾಗಿ
ಹುಲ್ಲು ಕುದುರೆಯ ತಿಂದಿತ್ತು.
ಬಂದ ಗೋವ ಕುದುರೆಯ ನೋಡಿ
ಅದರಂಗದ ಕಾಲು ಇರಲಾಗಿ,
ತಿಂದವರಾರೊ ಎಂಬುದಕ್ಕೆ ಮೊದಲೆ ತಿಂದಿತ್ತು.
ಆ ಕಾಲು ನಿಂದ ಗೋವನ ಈ ಮೂವರ ಅಂದವ ತಿಳಿಯೊ
ನಾರಾಯಣಪ್ರಿಯ ರಾಮನಾಥಾ. ॥ ೩೬ ॥

೩೧೯

ಕುರುಡ ಕೈಯ ಕೋಲ ಹಿಂಗಿದಾಗ ಅವ ಅಡಿಯಿಡಬಲ್ಲನೆ?
ಮೃಡಭಕ್ತಿಯ ಮಾಡುವಂಗೆ ದೃಢಚಿತ್ತವಿಲ್ಲದಿರ್ದಡೆ
ಕಡೆಗಾಣಿಸಬಲ್ಲನೆ ?
ಇಂತೀ ವಿಶ್ವಾಸವಡಿ ಬೆಚ್ಚಂತಿರಬೇಕು,
ನಾರಾಯಣಪ್ರಿಯ ರಾಮನಾಥನಲ್ಲಿ. ॥ ೩೭ ॥

೩೨೦

ಕೆನೆಯ ತೆಗೆದು ಹಾಲನೆರೆವವಳ ವಿನಯ
ತಲೆಯನೊಡೆದು ಲಾಲನೆಯ ಮಾಡುವಳಂತೆ,
ವಂದಿಸಿ ನಿಂದಿಸುವನ ಭಕ್ತಿ ಕೈನೆರವಿಂಗೆ ಹೋಗಿ
ತಮ್ಮವರಳಿದ ಅಂದವ ನೆನೆದು ಅಳುವರಂತೆ,
ನಾರಾಯಣಪ್ರಿಯ ರಾಮನಾಥಾ. ॥ ೩೮ ॥

೩೨೧

ಕೆರೆ ತೊರೆ ಬಟ್ಟೆ ಬಾಗಿಲಲ್ಲಿ ಪೂಜಿಸಿಕೊಂಬುವ
ದೈವವೆಂದು ಪ್ರಮಾಣಿಸುವಲ್ಲಿ
ತಮ್ಮ ಮನಕ್ಕೆ ಸಂದೇಹವಂ ಬಿಡಿಸಿದವೆಂದು
ತಮ ತಮಗೆ ಹಿಂಗದ ದೈವವೆಂದು
ನಿಂದು ಹೋರಲಾಗಿ ಕೊಂದನೆ ಶಿವನು?
ಅವರಂಗದ ಪ್ರಮಾಣು ಇದಕ್ಕೆ ಕೊಂದಾಡಲೇತಕ್ಕೆ?
ನಾರಾಯಣಪ್ರಿಯ ರಾಮನಾಥಾ. ॥ ೩೯ ॥

೩೨೨

ಕೈದಿಲ್ಲದವಂಗೆ ಕಾಳಗವುಂಟೆ?
ಆತ್ಮನಿಲ್ಲದ ಘಟಕ್ಕೆ ಚೇತನವುಂಟೆ?
ಅಜಾತನ ನೀತಿಯನರಿಯದವಂಗೆ
ನಿರ್ಧರದ ಜ್ಯೋತಿರ್ಮಯವ ಬಲ್ಲನೆ?
ಇಷ್ಟವನರಿಯದವನ ಮಾತಿನ ನೀತಿ
ಮಡಕೆಯ ತೂತಿನ ಬೈರೆಯ ನೀರು
ನಾರಾಯಣಪ್ರಿಯ ರಾಮನಾಥಾ. ॥ ೪೦ ॥

೩೨೩

ಕೋಟೆ ಕೋಳುಹೋಗದ ಮುನ್ನವೆ
ಸೂರೆಮಾಡಿದ ಪರಿ ಇನ್ನೆಂತೊ?
ಮಾಡುವ ಮಾಟ ಪುರೋಭಿವೃದ್ಧಿಗೆ ಸಲ್ಲದ ಮುನ್ನವೆ
ಭಕ್ತಿಯಲ್ಲಿ ತಲ್ಲೀಯವಾದ ಪರಿ ಇನ್ನೆಂತೊ.
ಎವೆ ಹಳಚುವುದಕ್ಕೆ ಮುನ್ನವೆ ಅರಿಯಾ
ನಾರಾಯಣಪ್ರಿಯ ರಾಮನಾಥನ. ॥ ೪೧ ॥

೩೨೪

ಕೋಡಗದ ತಲೆಯ ಚಂಡಿನ ಮೇಲೆ
ಮೂರುಕವಲಿನ ಸೂಜೆ.
ಮೂರರ ಮನೆಯಲ್ಲಿ ಐದು ಬೆಟ್ಟವಡಗಿದವು.
ಬೆಟ್ಟದ ತುತ್ತತುದಿಯಲ್ಲಿ ಮಟ್ಟಿಲ್ಲದ ಬಾವಿ.

ಬಾವಿಯೊಳಗೊಂದು ಹಾವು ಹುಟ್ಟಿತ್ತು.
ಆ ಹಾವಿನ ಮೈಯೆಲ್ಲವೂ ಬಾಯಿ.
ಬಾಲದಲ್ಲಿ ಹೆಡೆ ಹುಟ್ಟಿ,
ಬಾಯಲ್ಲಿ ಬಾಲ ಹುಟ್ಟಿ,
ಹರಿವುದಕ್ಕೆ ಹಾದಿಯಿಲ್ಲದೆ,
ಕೊಂಬುದಕ್ಕೆ ಆಹಾರವಿಲ್ಲದೆ ಹೊಂದಿತ್ತು.
ಆ ಹಾವು ಬಾವಿಯ ಬಸುರಿನಲ್ಲಿ ಬಾವಿಯ ಬಸುರೊಡೆದು
ಹಾವಿನ ಇಲು ನುಂಗಿ ಬೆಟ್ಟ ಚಿಪ್ಪು ಬೇರಾಗಿ
ಸೂಜಿಯ ಮೊನೆ ಮುರಿದು
ಕೋಡಗವ ಚಂಡು ಮುಂಡೆಯ ಬಿಟ್ಟು ಹಂಗು ಹರಿಯಿತ್ತು.
ಆತ್ಮನೆಂಬ ಲಿಂಗ ನಾಮ ರೂಪಿಲ್ಲ
ನಾರಾಯಣಪ್ರಿಯ ರಾಮನಾಥನಲ್ಲಿ
ಶಬ್ದಮುಗ್ಧನಾದ ಶರಣಂಗೆ. ॥ ೪೨ ॥

೩೨೫

ಕೋಣ ಎಮ್ಮೆಯನೀಯಿತ್ತು,
ಎಮ್ಮೆ ಹೋರಿಯನೀಯಿತ್ತು,
ಹೋರಿ ಹಸುವನೀಯಿತ್ತು,
ಹಸು ಕೋಳಿಯನೀಯಿತ್ತು,
ಕೋಳಿ ಕೊಕೋ ಎಂದು ಕೂಗುವಾಗ
ಕೋಣ ಎಮ್ಮೆಯ ನುಂಗಿತ್ತು;
ಎಮ್ಮೆಯ ಕೋಣನ ಹೋರಿ ನುಂಗಿತ್ತು;
ಹೋರಿಯ ಕೋಳಿಯ ಕೂಗು ನುಂಗಿತ್ತು
ಇದನಾರೈವುತಿದ್ದೆ ನಾರಾಯಣಪ್ರಿಯ ರಾಮನಾಥಾ. ॥ ೪೩ ॥

೩೨೬

ಕೋಣೆಯ ಕೋಹಿನಲ್ಲಿ ಮೂರು ಬಾಗಿಲುಂಟೆಂಬರು ಯೋಗಿಗಳು.
ಅವು ದ್ವಾರಗಳಲ್ಲದೆ ಬಾಗಿಲ ನಾವರಿಯೆವು.
ಪ್ರದಕ್ಷಿಣದ ಒಳಗಾದ ಬಾಗಿಲು ಮುಚ್ಚಿದಲ್ಲಿ
ಸಿಕ್ಕಿದ ದ್ವಾರಂಗಳಿಗೆ ಕುರುಹಿಲ್ಲ.
ಊರ್ಧ್ವನಾಮ ಯೋಗ ಸಂಬಂಧವಾದ
ಒಂದು ಬಾಗಿಲ ಕಟ್ಟಿ ಒಂಬತ್ತ ಮುಚ್ಚಿದ ಸಂದಿಗಳೆಲ್ಲವು

ಅದರೊಳಗೆ ಸಲೆಸಂದ ಮತ್ತೆ ಹೋಹುದೊಂದೆ ಬಾಗಿಲು
ನಾರಾಯಣಪ್ರಿಯ ರಾಮನಾಥಾ. ॥ ೪೪ ॥

೩೨೭

ಕೋಳಿ ಕುದುರೆಯ ತಿಂದಿತ್ತು.
ವೇಣು ನಾದವ ನುಂಗಿತ್ತು.
ಕೀಳು ಮೇಲ ನುಂಗುವಾಗ
ಆಳದಲ್ಲಿದ್ದವ ಕಂಡು ಗೋಳುಗುಟ್ಟಲಾಗಿ
ಗೋಳಿನ ದನಿಯ ಕೇಳಿ ಬೇಳುವೆ ಹಾಯಿತ್ತು.
ಎಲ್ಲಕ್ಕೂ ಇದು ಎನಗೆ ಆಳವಾಗಿ ಕಾಡುತ್ತಿದೆ
ನಾರಾಯಣಪ್ರಿಯ ರಾಮನಾಥಾ. ॥ ೪೫ ॥

೩೨೮

ಕೋಳಿಯ ಗಂಟಲ ಕಾಳ ನಾಯಿ ಕಡಿವುತ್ತಿದೆ.
ನಾಯ ಹಲ್ಲ ಮುರಿದ ಪರನಾರಿಯ ಸಹೋದರ.
ಕೋಳಿಯ ಕೊರಳು ಉಳಿಯಿತ್ತು
ಕೋಳಿ ಸತ್ತಿತ್ತು, ನಾಯಿ ನಾತಿತ್ತು.
ಇಂತಿವ ಹೇಳಬಂದವನ ವಿಷಾಳಿ ನುಂಗಿತ್ತು,
ನಾರಾಯಣಪ್ರಿಯ ರಾಮನಾಥಾ. ॥ ೪೬ ॥

೩೨೯

ಗಂಡ ಸತ್ತ ಮುಂಡೆಗೆ ಮೂವರು ಮಿಂಡರು.
ಒಬ್ಬಂಗೆ ಅಂಡಿನ ಆಶೆ,
ಒಬ್ಬಂಗೆ ಖಂಡಿಯಾಶೆ,
ಒಬ್ಬಂಗೆ ಮಂಡೆಯಾಶೆ.
ಇಂತೀ ಮೂವರಿಗಾದ ಸೂಳೆ ಸೂಳಕೊಡುವ ಪರಿಯಿನ್ನೆಂತೊ?
ಅಂಡಿಗೆ ಖಂಡಿಗೆ ಮಂಡೆಗೆ ದಿಂಡೊಂದೆ
ಮೂವರು ಕೊಂದಾಡುತ್ತಿದ್ದರು.
ಅಭಿಸಂಧಿಯ ತಿಳಿ ನಾರಾಯಣಪ್ರಿಯ ರಾಮನಾಥಾ. ॥ ೪೭ ॥

೩೩೦

ಗಡಿಗೆ ಗುಡುವನ ನುಂಗಿತ್ತು
ಅಡಿಯಲ್ಲಿದ್ದ ಕುಡಿಕೆ ಆ ಉಭಯವ ನುಂಗಿತ್ತು.

ನುಂಗಿಹೆನೆಂದ ಚಿತ್ತವ ಸಂದೇಹ ನುಂಗಿತ್ತು.
ಈ ಉಭಯದ ಸಂದೇಹದ ಸಂಚ
ಹಿಂಗಿಯಲ್ಲದೆ ಲಿಂಗವಿಲ್ಲ
ನಾರಾಯಣಪ್ರಿಯ ರಾಮನಾಥಾ. ॥ ೪೮ ॥

೩೩೧

ಗುರುವ ನುಡಿಯಬಾರದೆಂದು ಅಡಗಿಪ್ಪುದೆ ಗುರುದ್ರೋಹ.
ಅಪ್ಪು ನಷ್ಟವಾದಲ್ಲಿ ತಪ್ಪದೆ ಬೆಳೆ?
ಘಟವಳಿವಲ್ಲಿ ಆತ್ಮಂಗೆ ಮತವಿಲ್ಲ.
ಗುರುವಿನ ಮರವೆ ಶಿಷ್ಯನ ವಿಶ್ವಾಸದ ಕೇಡು.
ಕೈಗೆ ಕಣ್ಣು ಮನ ಅಂಗಕ್ಕೆ ಬೇರೆ ನೋವುಂಟೆ?
ಬಿತ್ತು ನಷ್ಟವಾದಲ್ಲಿ ಅಂಕುರವುಂಟೆ?
ನೋವ ಗುರು ಇದಕ್ಕಂಜಿ ಹೇಳದ ಶಿಷ್ಯ
ಕಿವಿಮೂಳ ಮೌಕ್ತಿಕದ ಜಾವಳಿಯ ಗಳಿಸಿದಂತೆ
ನಾರಾಯಣಪ್ರಿಯ ರಾಮನಾಥಾ. ॥ ೪೯ ॥

೩೩೨

ಗೋವಿನ ಮರೆ ವಿಹಂಗನಂತಾಗಲಾಗದು.
ತೋಹಿನ ಮರೆಯಲ್ಲಿದ್ದ ಶಬರನಂತಾಗಲಾಗದು.
ಲಾಂಛನದ ಮರೆಯಲ್ಲಿದ್ದ ವೇಷಧಾರಿಯಂತಾಗಲಾಗದು.
ಹೊರವೇಷಮಂ ತೊಟ್ಟು ವ್ಯಾಪ್ತಿಯ ಮನುಜರಂತೆ ನಡೆದು ಮತ್ತೆ
ಅರಿವೇಕೆ ನಾರಾಯಣಪ್ರಿಯ ರಾಮನಾಥಾ. ॥ ೫೦ ॥

೩೩೩

ಚಿನ್ನದೊಳಗಣ ಬಣ್ಣದಂತೆ,
ಬಣ್ಣ ನುಂಗಿದ ಬಂಗಾರದಂತೆ,
ಅನ್ಯ ಭಿನ್ನವಿಲ್ಲದ ಲಿಂಗೈಕ್ಯವು.
ಲಿಂಗಾಂಗವಾದಲ್ಲಿ, ಅಂಗ ಲಿಂಗವಾದಲ್ಲಿ
ಹಿಂಗದ ಭಾವ ಚಿನ್ನ ಬಣ್ಣದ ತೆರ.
ಇದು ಪ್ರಾಣಲಿಂಗಯೋಗ, ಸ್ವಾನುಭಾವ ಸಮ್ಮತ.
ಉಭಯ ನಾಶನ ಐಕ್ಯಲೇಪ
ನಾರಾಯಣಪ್ರಿಯ ರಾಮನಾಥಾ. ॥ ೫೧ ॥

೩೩೪

ಜಗವೆಲ್ಲವೂ ಗೋವಿನ ಹಂಗು.
ನರ ಸುರಾದಿಗಳೆಲ್ಲರೂ ಗೋವಿನ ಹಂಗು.
ಸಕಲ ಜೀವನ ಆಧಾರ ಗೋಮರ.
ಗೋಕುಲಕ್ಕೆ ಒಡೆಯ ಗೋಪತಿಧರ.
ಗೋ ಪ್ರಾಣಸ್ವರೂಪ
ಗೋವಿಂದನೊಡೆಯ ನಾರಾಯಣಪ್ರಿಯ
ರಾಮನಾಥಾ. ॥ ೫೨ ॥

೩೩೫

ಜಲದಲ್ಲಿ ಹುಟ್ಟಿದ ಚರಾದಿಗಳೂ ಸರಿ,
ಜಲವೂ ಸರಿಯೆ.
ಅನಾದಿ ವಸ್ತುವಿನಲ್ಲಿ ಹುಟ್ಟಿದ
ಬ್ರಹ್ಮ ಆದಿಯಾದ ಬಾಧಿಸಿಕೊಂಬ ದೈವವೂ ಸರಿಯೆ,
ವಸ್ತುವೂ ಸರಿಯೆ.
ಇದನಲ್ಲ ಅಹುದೆನಬಾರದು
ಸಂತೆಗೆ ಬಂದವರೆಲ್ಲಕ್ಕೂ ಬೆಲ್ಲದ ವ್ಯವಹಾರವೆ?
ನಾರಾಯಣಪ್ರಿಯ ರಾಮನಾಥಾ. ॥ ೫೩ ॥

೩೩೬

ಡಂಬಕದ ಪೂಜೆ ಹೋಹ ಹೊತ್ತಿನ ಕೇಡು.
ಆಡಂಬರದ ಪೂಜೆ ತಾಮ್ರದ ಮೇಲಣ
ಸುವರ್ಣದ ಛಾಯೆ.
ಇಂತೀ ಪೂಜೆಗೆ ಹೂ ಸೊಪ್ಪನಿಕ್ಕಿ
ಮನ ಹೂಣದೆ ಮಾಡುವ ಪೂಜೆ
ಬೇರು ನನೆಯದೆ ನೀರು,
ಆಯವಿಲ್ಲದ ಗಾಯ,
ಭಾವವಿಲ್ಲದ ಘಟ ವಾಯವೆಂದ
ನಾರಾಯಣಪ್ರಿಯ ರಾಮನಾಥಾ. ॥ ೫೪ ॥

೩೩೭

ತನ್ನ ಮರೆದಡೆ ಜಗವೆಲ್ಲವೂ ತನ್ನ ಸುತ್ತಿದ ಮಾಯೆ
ತಾನರಿತಡೆ ತನ್ನಯ ಅನ್ಯ ಭಿನ್ನವಿಲ್ಲ.

ಪ್ರತಿಬಿಂಬದ ಹಾಗೆ
ನಾರಾಯಣಪ್ರಿಯ ರಾಮನಾಥಾ. ॥ ೫೫ ॥

೩೩೮

ತುಂಬಿ ಕಡವ ಗೂಡಿನ ಮರಿಯಂದವ ತಿಳಿ.
ಆತ್ಮನಿಪ್ಪ ಅಂದವನರಿ.
ಅವರ ಗುಣದ ಸಂಗವ ಯೋಗ ಕೀಟದ ಸಂಗದ ಗುಣ.
ಖೇಚರದ ಆಟ ತಪ್ಪದೆ,
ರತಿಯ ಕೂಟ ತಪ್ಪದೆ,
ಇಪ್ಪುದು ಯೋಗ ಸಂಬಂಧ
ನಾರಾಯಣಪ್ರಿಯ ರಾಮನಾಥಾ. ॥ ೫೬ ॥

೩೩೯

ತ್ರೈಮೂರ್ತಿಗಳು ನಿನ್ನ ಸಾಕಾರದ ಶಾಖೆ.
ತ್ರೈಮೂರ್ತಿಗಳು ನಿನ್ನ ಅಪ್ಪುವಿನ ಅಂಕುರ ಶಕ್ತಿ.
ಇಂತೀ ಸರ್ವಗುಣ ಸಂಪನ್ನನಾಗಿ
ಬ್ರಹ್ಮಂಗೆ ಅಂಡವ ಕೊಟ್ಟು ವಿಷ್ಣುವಿಗೆ ಪಿಂಡವ ಕೊಟ್ಟು
ರುದ್ರಂಗೆ ಕಂಡೆಹವ ಕೊಟ್ಟು ಹಿಂಗಿದೆ.
ನೀನಿದರಂದವನೊಲ್ಲದೆ ಅಂಗಕ್ಕೆ ಮಯ ನೀನೇ,
ನಿರಂಗಕ್ಕೆ ಸಂಗ ನೀನೇ.
ಹಿಂಗೂದಕ್ಕೆ ನಿನ್ನಂಗ ಅನ್ಯ ಭಿನ್ನವಲ್ಲ.
ಮುಕುರದ ಮರೆಯಲ್ಲಿ ತೋರುವ ಪ್ರತಿರೂಪಿನಂತೆ
ಸಕಲದೇವರ ಚೈತನ್ಯಭಾವ ನಿನ್ನ ಉಷ್ಣ ಬಿಂದು,
ಸಕಲದೇವರ ಶಾಂತಿ ನಿನ್ನ ಸಮಾನ ಬಿಂದು,
ಇಂತಿವ ಹೇಳುವಡೆ ವಾಙ್ಮನಕ್ಕತೀತ
ಅತ್ಯತಿಷ್ಠದ್ದಶಾಂಗುಲ ನಾರಾಯಣ ನಯನ ಪೂಜಿತ
ಪ್ರಿಯ ರಾಮೇಶ್ವರಲಿಂಗ ನಾ ನೀನಾದ್ಯೆಕ್ಯ. ॥ ೫೭ ॥

೩೪೦

ತೊಳಸಿಯ ಗಿಡುವ ಮೆಲಲಾರದೆ ಕಿವಿಯೊಳಗಿಕ್ಕಿದೆ.
ಕಲಸಿದ ನಾಮಕ್ಕೆ ಹಣೆಯ ಕಾಣದೆ ಎದೆಯೊಳಗಿಕ್ಕಿದೆ.
ತಾವರೆಯ ಮಣಿಯ ತಾವಡಿಸೂದಕ್ಕೆ
ಠಾವ ಕಾಣದೆ ಡಾವರಿಸುತ್ತಿದ್ದೆ,

ಇದಕಿನ್ನಾವುದು ಹದನಯ್ಯಾ.
ಎನ್ನ ನಿಮ್ಮ ದಾಸೋಹದ ದಾಸನ ಮಾಡಿಸಯ್ಯಾ
ನಾರಾಯಣಪ್ರಿಯ ರಾಮನಾಥಾ. ॥ ೫೮ ॥

೩೪೧

ನಾನಾ ಭೇದದ ತಂತಿಗೆ ಜೀವ ಸೆವರಿನಲ್ಲಿ ಅಡಗುವಂತೆ
ನಾನಾ ಜೀವದ ಕಳೆ ನಿನ್ನ ಕಾರುಣ್ಯದಲ್ಲಿ
ಬೆಳೆವುತಿಪ್ಪ ಮೂರುತಿ ನೀನೆ
ನಾರಾಯಣಪ್ರಿಯ ರಾಮನಾಥಾ. ॥ ೫೯ ॥

೩೪೨

ನಾನು ಭೃತ್ಯನಾಗಿದ್ದಲ್ಲಿ ಕರ್ತರ ಇರವ ವಿಚಾರಿಸೂದು
ಭಕ್ತರ ಇರವಲ್ಲ, ಇದು ವಿಶ್ವಾಸದ ಯುಕ್ತಿ.
ಇಷ್ಟಕಂಜಿ ಬಿಟ್ಟಡೆ ಮೊದಲು ಮೋಸವಾದಲ್ಲಿ
ಲಾಭಕ್ಕೆ ಸರಿಹುದುಗುಂಟೆ?
ಶರಣರ ಮರೆ ಮನಕ್ಕೆ ವಿರೋಧವುಂಟೆ?
ಮಣ್ಣಿನ ಹೊದಕೆ ಮೈ ಜಲಕ್ಕೆ ನಿರ್ಮಲವಲ್ಲದೆ ಭಿನ್ನಭಾವವಿಲ್ಲ.
ಎನ್ನ ಮಾತು ನಿನಗೆ ಅನ್ಯವೆ, ನನ್ನಿಯಲ್ಲದೆ?
ಅದಕ್ಕೆ ಭಿನ್ನ ಭಾವವಿಲ್ಲ,
ನಾರಾಯಣಪ್ರಿಯ ರಾಮನಾಥಾ. ॥ ೬೦ ॥

೩೪೩

ನಾಯ ನರಿಯ ಮಧ್ಯದಲ್ಲಿ ನಾರಿವಾಳದ ಸಸಿ ಹುಟ್ಟಿತ್ತು.
ಐದು ಗೇಣು ಉದ್ದ ಎಂಟು ಗೇಣು ವಿಸ್ತೀರ್ಣ.
ಅದರ ಬೇರು ಪಾತಾಳಕ್ಕೆ ಇಳಿಯಿತ್ತು;
ಬೇರಿನ ಮೊನೆ ನೀರ ತಿಂದಿತ್ತು;
ನೀರ ಸಾರ ತಾಗಿ ಮರನೊಡೆಯಿತ್ತು,
ಮಟ್ಟೆ ಇಪ್ಪತ್ತೈದಾಗಿ ಹೊಂಬಾಳೆ ಬಿಟ್ಟಿತ್ತು;
ಹದಿನಾರು ವಳಯವಲ್ಲಿ ಕಾಯಿ ಬಲಿದವು.
ಮೂರು ದಿಸೆಯಲ್ಲಿ ಆ ಮರವ ಹತ್ತಿ ಕಾಯ ಕೆಡಹುವರಿಲ್ಲ.
ವಾಯವಾಯಿತ್ತು ಮರಹುಟ್ಟಿ ಮರದ ಕೆಳಗಿದ್ದು
ಹಣ್ಣಿನ ಹಂಬಲು ಹರಿವುದ ನೋಡುತ್ತಿದ್ದೇನೆ.
ನಾರಾಯಣಪ್ರಿಯ ರಾಮನಾಥಾ. ॥ ೬೧ ॥

೩೪೪

ನಾ ವಿಶ್ವಾಸಿಯಾದಡೆ ಗುಪ್ತ ಭಕ್ತಿಯ ಮಾಡಬೇಕೆ?
ನಾ ವಿಶ್ವಾಸಿಯಾದಡೆ ಹರಿವೇಷವಂ ಇದಿರಿಗೆ ತೊಟ್ಟು
ಹರನ ಹರಣದಲ್ಲಿ ಇರಿಸಿಹೆನೆಂಬ ಸಂದೇಹವೇತಕ್ಕೆ?
ನನ್ನ ವಿಶ್ವಾಸಕ್ಕೆ ಇದಿರ ಅರಿತಡೆ
ಅಸುವ ಹೊಸೆದೆಹೆನೆಂಬ ಹುಸಿಮಾತಿನ ಗಸಣೆಯೇತಕ್ಕೆ?
ಎನ್ನ ವೇಷವು ಹುಸಿ,
ನಿಮ್ಮ ಭಕ್ತಿಯ ದಾಸೋಹದ ದಾಸನೆಂಬುದು ಹುಸಿಯಯ್ಯಾ,
ನಾರಾಯಣಪ್ರಿಯ ರಾಮನಾಥಾ. ॥ ೬೨ ॥

೩೪೫

ನೀರ ನೆಳಲು ನುಂಗಿತ್ತೆಂದು,
ಅರೈಕೆಗೊಂಬವನ ಅರಣ್ಯ ನುಂಗಿತ್ತು.
ನುಂಗಿದ ಅರಣ್ಯವ ಗುಂಗುರು ನುಂಗಿತ್ತು.
ಗುಂಗುರ ಅಂಗವ ಸೀಳಲಾಗಿ ಕಂಡರು ಮೂರು ಲೋಕವ.
ಈ ಗುಣವ ಕಂಡ ಕಂಡವರಿಗೆ ಹೇಳಿ,
ಭಂಡಾಹವರ ಕಂಡು ನಿಂಗು ನೋಡುತ್ತಿದ್ದೆ
ನಾರಾಯಣಪ್ರಿಯ ರಾಮನಾಥಾ. ॥ ೬೩ ॥

೩೪೬

ನೀಲಮೇಘದ ಭೂಮಿಯಲ್ಲಿ ಕಾಳ ಗೂಳಿ ಹುಟ್ಟಿತ್ತು.
ಬಾಲ ಬಿಳಿದು ಕಾಲು ಕೆಂಪು.
ಅದರ ಕೋಡು ಕಾಳಕೂಟ.
ಅದರ ಬಾಯಿ ಅಸಿಯ ಬಳಗ.
ಅದರ ನಾಲಗೆ ಸಾಲು ಲೋಕದ ಸಂಹಾರ.
ಅದರ ನಾಸಿಕದ ವಾಸ
ಶೇಷನ ಕಮಠನ ಆಶ್ರಯಿಸಿದ ಕ್ಷೋಣಿ.
ಇಂತಿವು ಉಚ್ಛ್ವಾಸದಲ್ಲಿ ಆಡುವ ತುಂತುರು ಬಿಂದು.
ಇದರಂತುಕದಲ್ಲಿ ನಿಂದು ಹೂಂಕರಿಸಲಾಗಿ
ಅಡಗಿತ್ತು ಜಗ, ಉಡುಗಿತ್ತು ಆಕಾಶ.
ತಮ್ಮ ತಮ್ಮ ತೊಡಿಗೆಯ ಬಿಟ್ಟರು,
ಮೂರು ಜಾತಿ ಕುಲ ವರ್ಗ.

ಇಂತೀ ಗೂಳಿಯ ದೆಸೆಯಿಂದ ಗೋಳಕಾಕಾರವಾದ
ಗೋಪಾಲಪ್ರಿಯ ರಾಮನಾಥಾ. ॥ ೬೪ ॥

೩೪೭

ಪರವಸರಿವುದು ಅಪರವೊ ಪರವೊ?
ಜ್ಞಾತೃವನರಿವುದು ಜ್ಞಾನವೊ ಜ್ಞಾತೃವೊ?
ಜ್ಞೇಯವನರಿವುದು ಭಾವವೊ ಜ್ಞೇಯವೊ?
ಅರಿವನರಿವುದು ಅರಿವೊ ಅಜ್ಞಾನವೊ?
ದಿವವನರಿವುದು ರಾತ್ರಿಯೊ ದಿವವೋ?
ಇಂತಿವರುಭಯವನರಿತಲ್ಲಿ
ಭ್ರಾಂತುಗೊಂಡವರಂತೆ ಭ್ರಮಿಸಲದೇತಕ್ಕೆ?
ಕ್ರೀಯಲ್ಲಿ ವೇಧಿಸಿ ಜ್ಞಾನದಲ್ಲಿ ಭೇದಿಸಿ ಬಣ್ಣ ಬಂಗಾರದಂತೆ
ಭಿನ್ನ ಭಾವವಿಲ್ಲದೆ ನೆನೆವ ಮನವೇ ಲಿಂಗವಾಗಿ,
ಲಿಂಗಮೂರ್ತಿಯ ನೆನಹಿಂಗೆ ಭಿನ್ನವಿಲ್ಲದೆ
ರತ್ನಕುಲ ಪಾಷಾಣದಲ್ಲಿ ತೋರುವ ದೀಪ್ತಿಯ ಕಳೆಯಂತೆ
ಲಿಂಗಕ್ಕೂ ಚಿತ್ತಕ್ಕೂ ಕುರುಹು ಹಿಂಗದ ಬೆಳಕು.
ಹೀಗಲ್ಲದೆ ಲಿಂಗಸಂಗವಿಲ್ಲ.
ಬಯಲ ಮಾತಿನ ಬಳಕೆಯಲ್ಲಿ, ವೇಷದ ಬಲಿಕೆಯಲ್ಲಿ,
ಬರು ಮಾತಿಂಗೆ ಬಯಲ ಸಂಗಿ ಒಲಿವನೆ?
ಮಾತು ಮನಸ್ಸು ಕೂರ್ತು ಜಗದೀಶನನರಿ
ರಘುನಾಥಪ್ರಿಯ ರಾಮನಾಥಾ. ॥ ೬೫ ॥

೩೪೮

ಪುಷ್ಪಕ್ಕೆ ಗಂಧ ಬಲಿವಲ್ಲಿ,
ಫಲಕ್ಕೆ ರಸ ತುಂಬುವಲ್ಲಿ,
ತರಳೆಗೆ ವಿಷಯ ತೋರುವಲ್ಲಿ,
ಇವು ಋತುವಲ್ಲದೆ ಸ್ವಯವಲ್ಲ.
ತನ್ನನರಿವುದಕ್ಕೆ ಮುನ್ನವೆ ಲಿಂಗತನ್ಮಯವಾಗಿರಬೇಕು.
ಹೇಮದ ಪುತ್ಥಳಿಯ ಕರಗಿ [ಸಿ] ಮರಳಿ
ರೂಪನರಸಲುಂಟೆ?
ನಾರಾಯಣಪ್ರಿಯ ರಾಮನಾಥಾ. ॥ ೬೬ ॥

೩೪೯

ನಾ ಬಂದೆ ಹರಿಭಕ್ತನಾಗಿ,
ಬಾಹಾಗ ನಾ ದಾಸನಾಗಿ.
ಒಂಬತ್ತು ಜೂಳಿಯ ತಣ್ಣೀರ ಕಣೆತೆಯ ಹೊತ್ತು
ತಿತ್ತಿಗ ನೀರ ಕಾಣೆ.
ಲೆಕ್ಕವಿಲ್ಲದ ನಾಮವನಿಕ್ಕಿದೆ,
ಸುತ್ತಿ ಸುತ್ತಿ ಬಳಸಿದೆ.
ಹೀಲಿಯ ಗರಿಯ ಹೇಕಣ್ಣ,
ಪಚ್ಚೆಯ ನಾಮವ ದೃಷ್ಟಿಯ ಮಧ್ಯದಲ್ಲಿ ಇಕ್ಕಿ
ಮತ್ತೆ ಅದರ ನಡುವೆ ನಿಶ್ಚಯ ಬಿಳಿಯ ನಾಮವನಿಕ್ಕಿ
ಹೊತ್ತ ದಾಸಿಕೆ ಹುಸಿಯಾಯಿತ್ತು.
ದಾಸೋಹವೆಂಬುದನರಿಯದೆ ಎನ್ನ ವೇಷ ಹುಸಿಯಾಯಿತ್ತು,
ನಾರಾಯಣಪ್ರಿಯ ರಾಮನಾಥಾ. ॥ ೬೭ ॥

೩೫೦

ಬಣ್ಣ ಸುಂಗಿದ ಕಪ್ಪಡಕ್ಕೆ ಮುನ್ನಿನ ಅಂದವುಂಟೆ?
ನಿಜದ ಸನ್ನಿಯನರಿತವಂಗೆ ಮುನ್ನಿನ ಕುನ್ನಿಯ ಗುಣವುಂಟೆ?
ಇದು ಸನ್ನದ್ಧ ನಾರಾಯಣಪ್ರಿಯ ರಾಮನಾಥನಲ್ಲಿ
ಸುಸಂಗಿಯಾದ ಶರಣಂಗೆ. ॥ ೬೮ ॥

೩೫೧

ಬಣ್ಣವ ಬಯಲು ಸುಂಗಿದಾಗ
ಅಣ್ಣಗಳೆಲ್ಲಕ್ಕೂ ಮರಣವಹಾಗ
ಮದವಳಿಗೆಯ ಮದವಳಿಗೆ ಹೋದನೆಂದುಕೊಂಡ.
ಒಂದು ಕಡೆಯಲ್ಲಿ ತಾ ಒಂದು ಕಡೆಯಾದ
ಪರಿಯ ನೋಡಾ!
ಗಂಡನೊಂದಾಗಿ ಹೋದವರ ಮಿಂಡ ಉಳುಹಿಸಿಕೊಂಡ
ಪರಿಯ ನೋಡಾ!
ಮಿಂಡನೊಂದಾಗಿ ಗಂಡನ ಕೂಡಿಕೊಂಬ
ಉಂಡ ಮುಂಡೆಯರತನವ ಕಂಡು ನಾನಂಜುವೆ,
ನಾರಾಯಣಪ್ರಿಯ ರಾಮನಾಥಾ. ॥ ೬೯ ॥

೩೫೨

ಬ್ರಹ್ಮ ಅಂಡಿಂಗೆ ಒಡೆಯನಾದಲ್ಲಿ,
ವಿಷ್ಣು ಖಂಡಿಂಗೆ ಒಡೆಯನಾದಲ್ಲಿ,
ರುದ್ರ ಮಂಡೆಗೆ ಒಡೆಯನಾದಲ್ಲಿ
ಅಂಡು ಆಧಾರ, ಖಂಡಿ ಸ್ಥಿತಿ, ಮಂಡೆ ಮರಣ.
ಇಂತೀ ಮೂವರ ಅಂದವನರಿತ ಮತ್ತೆ ಕೊಂಡಾಡಲೇತಕ್ಕೆ?
ಬೇರೊಂದು ಲಿಂಗವುಂಟೆಂದು ಮೂವರ ಹಂಗ ಹರಿದಲ್ಲದೆ
ಪ್ರಾಣಲಿಂಗಿಯಲ್ಲ
ನಾರಾಯಣಪ್ರಿಯ ರಾಮನಾಥಾ. ॥ ೭೦ ॥

೩೫೩

ಬ್ರಹ್ಮ ಆಧಾರ ಚಕ್ರವಾದಲ್ಲಿ,
ವಿಷ್ಣು ಯೋನಿಯಾದಲ್ಲಿ,
ರುದ್ರ ಪ್ರಜಾಪತಿಯಾಗಿ
ಸಂಯೋಗವಾದಲ್ಲಿ ಜಗದ ವ್ಯಾಪಾರ.
ಇದು ಕಾರಣ,
ತಲ್ಲೀಯವಾಗಲ್ಪಟ್ಟುದು ಲಿಂಗವೆಂದು ಓಂಗಿದೆ.
ಅವನ ಇತ್ತ ಸಂಗದ ನಿಜವೇ ಆದೆ.
ನಾರಾಯಣಪ್ರಿಯ ರಾಮನಾಥನಲ್ಲಿ
ನಾಮರೂಪು ಲೇಪವಾದ ಶರಣ. ॥ ೭೧ ॥

೩೫೪

ಬ್ರಹ್ಮ ಮಣಿಯಾದ ವಿಷ್ಣು ಬಲಿಯಾದ
ಸಕಲ ದೇವತಾ ಕುಲವೆಲ್ಲ ಗೊರುವ ದಾರವಾದರು
ವ್ಯಾಪಾರವೆಂಬ ಹೊಳೆಯಲ್ಲಿ ಬೀಸಲಾಗಿ
ಸಿಕ್ಕಿತ್ತು ಜೀವವೆಂಬ ಮತ್ಸ್ಯ.
ಆ ಮತ್ಸ್ಯಕ್ಕೆ ಕಣ್ಣು ಮೂರು, ಬಾಯಿ ಐದು,
ಗರಿ ಹದಿನಾರು, ಹಲ್ಲು ಎಂಟು,
ಆ ಹೊಲಸಿನ ಮುಳ್ಳು ಲೆಕ್ಕವಿಲ್ಲ.
ಕತ್ತಿಗಳವಡದು ಬೆಂಕಿಗೆ ಬೇಯದು.
ಈ ಶಂಕೆಯ ಇನ್ನಾರಿಗೆ ಹೇಳುವೆ,
ನಾರಾಯಣಪ್ರಿಯ ರಾಮನಾಥಾ. ॥ ೭೨ ॥

೩೫೫

ಬಿತ್ತಿದ ಬೆಳೆಯ ಪೃಥ್ವಿ ನುಂಗಿದಾಗ
ಬಿತ್ತದ ವಟ್ಟ ಎಂತಪ್ಪುದೋ?
ಇಷ್ಟಲಿಂಗವ ಚಿತ್ತ ನುಂಗಿದಾಗ
ಭಕ್ತಿಯ ಹೊಲ ಎಂತಪ್ಪುದೊ?
ಮಾರ್ಗವ ಕೇಳುವ ಶಿಷ್ಯ ಪ್ರತ್ಯುತ್ತರಗೆಯ್ದಲ್ಲಿ
ಭೃತ್ಯನಹ ಪರಿಯಿನ್ನೆಂತೊ?
ಇದರಚ್ಚುಗವ ನೋಡಾ,
ನಾರಾಯಣಪ್ರಿಯ ರಾಮನಾಥಾ. ॥ ೭೩ ॥

೩೫೬

ಬಿತ್ತು ರಸವ ಮೆದ್ದಾಗ ಹಣ್ಣಿನ ಹಂಗು ಹರಿಯಿತ್ತು.
ಬಲ್ಲವ ಗೆಲ್ಲ ಸೋಲವ ನುಡಿಯಲಾಗಿ
ಬಲ್ಲತನ ಅಲ್ಲಿಯೆ ಅಡಗಿತ್ತು.
ಬೆಲ್ಲದ ಸಿಹಿಯಂತೆ ಬಲ್ಲವನ ಇರವು, ಎಲ್ಲಕ್ಕೂ ಸರಿ,
ನಾರಾಯಣಪ್ರಿಯ ರಾಮನಾಥಾ. ॥ ೭೪ ॥

೩೫೭

ಬಿರಿದ ಕಟ್ಟಿದವನಿದ್ದಂತೆ ಕಟ್ಟಿಸಿಕೊಂಬ ಕೈದುವಿಂಗೇನು
ಒಚ್ಚೆ ಕಟ್ಟಿದವಂಗಲ್ಲದೆ?
ಜ್ಞಾನವರಿತೆಹೆನೆಂಬ ಭಾವಿಗಲ್ಲದೆ ನಿರ್ಭಾವಿಗುಂಟೆ
ಬಂಧ ಮೋಕ್ಷ ಕರ್ಮಂಗಳೆಂಬವು?
ಇದರಂಗದ ಸಂಗ ಕರಿ ಮುಕುರ ನ್ಯಾಯ.
ಪರಿಪೂರ್ಣ ಪರಂಜ್ಯೋತಿ ಅಘನಾಶನ
ನಾರಾಯಣಪ್ರಿಯ ರಾಮನಾಥಾ. ॥ ೭೫ ॥

೩೫೮

ಬೆಲ್ಲದಿಂದಾದ ಸಕ್ಕರೆ ತವರಾಜಗೂಳ
ಇವೆಲ್ಲವು ಅಲ್ಲಿ ಒದಗಿದವಲ್ಲದೆ
ಬೇರೆ ಮತ್ತೊಂದರಲ್ಲಿ ಒದಗಿದವೆ?
ಇವರಂದವ ತಿಳಿದು ನೋಡಲಾಗಿ

ಹಿಂಗದ ದೈವಕ್ಕೆ ಕೊಂಡಾಡಲೇತಕ್ಕೆ?
ಸಂದಳಿದಭಂಗಂಗೆ ಅದು ನಿಂದಲ್ಲಿಯೆ ತಾನು
ನಾರಾಯಣಪ್ರಿಯ ರಾಮನಾಥಾ. ॥ ೭೬ ॥

೩೫೯

ಭಕ್ತಂಗೆ ತನು ಮನ ಧನ
ಮಾಡುವ ಭಕ್ತಿಯಲ್ಲಿ, ಪೂಜಿಸುವ
ಶಿವಲಿಂಗದಲ್ಲಿ ಭೃತ್ಯಭಾವ,
ಗುರುವಿನಲ್ಲಿ ನಿಶ್ಚಯಭಾವ,
ಜಂಗಮದಲ್ಲಿ ಇವೆಲ್ಲವೂ ತನ್ನೊದಗಲ್ಲದೆ
ಇದಿರಿಗೆ ಭಿನ್ನಭಾವವಿಲ್ಲವಾಗಿ
ತಾ ಬಿತ್ತಿದ ಬೆಳೆಯ ತಾ ಸಲಿಸುವಂತೆ
ತನಗೆ ಲಾಭವಲ್ಲದೆ ಇದಿರಿಗೆ ಲಾಭವಿಲ್ಲ.
ಅರ್ಚಿಸಿ ಪೂಜಿಸಿ ಮಾಡಿ ನೀಡಿ ಮನ ಹೊಲ್ಲದಿರಬೇಕು.
ಇದು ಪ್ರಸಿದ್ಧ, ನಾರಾಯಣಪ್ರಿಯ ರಾಮನಾಥನಲ್ಲಿ
ಭಕ್ತನ ವಿಶ್ವಾಸಸ್ಥಲ. ॥ ೭೭ ॥

೩೬೦

ಭಕ್ತರಾಗಿದ್ದವರು ಭಕ್ತರ ವಿರಕ್ತರ
ಮಿಥ್ಯದಿಂದ ನುಡಿವುದು ಸತ್ಯವಲ್ಲ.
ಮಿಥ್ಯವನಳಿದು ಸತ್ಯವ ಕುರಿತು
ಭಕ್ತ ಜಂಗಮಕ್ಕೆ ತತ್ವದ ಬಟ್ಟೆಯ ಹೇಳಿದಲ್ಲಿ
ನಿತ್ಯ ಅನಿತ್ಯವ ತಿಳಿಯಬೇಕು.
ಇದು ಸುಚಿತ್ತದ ಭಾವ.
ತನ್ನ ವಂಶ ಕೆಟ್ಟಡೆ ತನಗಲ್ಲದೆ ಅನ್ಯರಿಗಿಲ್ಲ.
ಇದು ಕಾರಣದಲ್ಲಿ ತನ್ನಂಗದ ಗಾಯದ ನೋವು
ತನಗೆ ಅನ್ಯ ಭಿನ್ನವಿಲ್ಲದೆ ತೋರುವವೊಲು
ಇದು ನನ್ನಿಯ ನುಡಿದೆ ನೈಸಲ್ಲದೆ ಸಮರಸದ ಸನ್ನರ್ಥನಲ್ಲ.
ನೀವಾಡಿಸುವ ಯಂತ್ರದ ತಂತ್ರವಲ್ಲದೆ ಸ್ವತಂತ್ರಿಯಲ್ಲ.
ಎನಗೆ ಇದಿರನಾಡೆ ನಾ ಮಾಡುವ ಭಕ್ತಿ ಸತ್ಯ ಸುಚಿತ್ತದ ನಿತ್ಯವಲ್ಲ.
ಮೊತ್ತದ ಕರಣಂಗಳ ನಡುವೆ ಸಿಕ್ಕಿ ಮತ್ತನಾಗಿ ಬಿದ್ದವಂಗೆ
ವಸ್ತುವಿನ ಬಟ್ಟೆಯ ತೋರಿ ಮುಕ್ತಿಪಥದಲ್ಲಿ

ನಿಲುವ ನಿಚ್ಚಣಿಕೆಯನಿಕ್ಕಿ ತೋರಿದ ಭಕ್ತ ದೇಹಿಕ
ನಿಜಪದ ತತ್ವ ಸ್ವರೂಪ.
ಸಕಲ ಜೀವದ ಆಧಾರ,
ಸಕಲಮಯ ಅಖಿಳ ಬ್ರಹ್ಮಾಂಡ ಕರಂಡ
ತಮರಿಪು ಕೋದಂಡ, ಶಕ್ತಿಮಯ ಚಂಡಿಕಾ ಕಿರಣದಶ
ಉದಕಭರಿತ,
ಭಕ್ತಿಭಂಡಾರಿ ಬಸವೇಶ್ವರನ ನಿಜತತ್ವದ್ವಯ ಪಾದಂಗಳಿಗೆ
ಮಂಡಿತಮಯಸಾಗರಗಿದೆ ಸಂದೇಹವೆಂಬ ಕರಂಡವ
ಬಂದ ಪ್ರಮಥರ ಸತಿ ಸಂದ ಪ್ರಮಥರ ಡಿಂಗರಿಗ
ಗುಪ್ತಮಂಚನ ನಿತ್ಯನೇಮ ಸಂದಿತ್ತು.
ವೀರದಾಸನ ದಾಸೋಹ ಸೋಹಂ ಎನುತಿದ್ದಿತ್ತು.
ನಾರಾಯಣ ನಯನ ಪೂಜಿತಪದಾಂಬುಜ ವಿಮಲ ಕಮಲ
ಸುಲಲಿತ ರಾಮೇಶ್ವರಲಿಂಗ ಎನ್ನೊಳಗಾದಾ. ॥ ೭೮ ॥

೩೬೧

ಮಣ್ಣ ಹೂಟೆ ಮಳೆಗೆ ಮುಚ್ಚುವುದಲ್ಲದೆ
ಕಲ್ಲ ಹೂಟೆ ಮುಚ್ಚುವುದೆ?
ಬಲ್ಲವನಲ್ಲಿ ಸೋಂಕು ಸುಳಿದಡೆ
ಅಲ್ಲ ಅಹುದೆಂದು ತಿಳಿಯಬಲ್ಲವ ಎಲ್ಲವನು ಬಲ್ಲ,
ಮಣ್ಣಿನ ಬಿರಯ ತೆರದಂತೆ.
ಬಲ್ಲತನವಿಲ್ಲದವನ ಅನುಭಾವಕೂಟ
ಕಲ್ಲಿನ ಹೋಟೆಯಂತೆ,
ನಾರಾಯಣಪ್ರಿಯ ರಾಮನಾಥಾ. ॥ ೭೯ ॥

೩೬೨

ಮರ್ತ್ಯಲೋಕವ ಪಾವನವ ಮಾಡುವೆನೆಂದು
ಸುಳಿವ ವಿರಕ್ತ ಜಂಗಮದಿರವು ಹೇಗಿರಬೇಕೆಂದಡೆ
ಕಲ್ಲಿನ ಮೇಲೆ ಹೊಯ್ದ ನೀರಿನಂತಿರಬೇಕು.
ಪಥವಿಲ್ಲದ ಪಯಣವ ಹೋಗಿ ಗತಿಗೆಟ್ಟವನಂತಿರಬೇಕು.
ಶ್ರುತಿಯಡಗಿದ ನಾದದ ಪರಿಯಂತಿರಬೇಕು.
ಹುರಿದ ಬೀಜದ ಒಳಗಿನಂತಿರಬೇಕು.
ಅದಾವಂಗೂ ಅಸಾಧ್ಯ ನೋಡಾ,
ನಾರಾಯಣಪ್ರಿಯ ರಾಮನಾಥಾ. ॥ ೮೦ ॥

೩೬೩

ಮರುಳನ ಊಟದಂತೆ, ಮಯೂರನ ನಿದ್ರೆಯಂತೆ,
ಮಾರ್ತಾಂಡನ ಕಿರಣದಂತೆ, ಸ್ಫಟಿಕದ ಘಟದಂತೆ,
ಕಟಕದಲ್ಲಿ ತೋರುವ ಅಸಿಯ ರಸೆಯಂತೆ,
ಹೊದ್ದಿಯೂ ಹೊದ್ದದಂತೆ, ಇದ್ದೂ ಇಲ್ಲದಂತೆ,
ಕಂಡೂ ಕಾಣದಂತೆ, ಕೇಳಿಯೂ ಕೇಳದಂತೆ,
ಇಪ್ಪ ಸುಳಿವ ಜಂಗವಮೂರ್ತಿಯ ಕಂಡು
ನಮೋ ನಮೋ ಎಂಬೆ
ನಾರಾಯಣಪ್ರಿಯ ರಾಮನಾಥಾ. ॥ ೮೧ ॥

೩೬೪

ಮಾತಿನಲ್ಲಿ ಬಲೋತ್ತರವಂತರೆಲ್ಲರೂ ಆತನನರಿದುದಿಲ್ಲ
ಆತ ಏತರೊಳಗೂ ಸಿಕ್ಕದ ಅಜಾತ ಶಂಭು.
ಆತನ ನೀತಿಯನರಿವುದಕ್ಕೆ ಅಸುರ ಕರ್ಮವ ಬಿಟ್ಟು
ವೇಷದಿಂದಾದ ಘಾತಕತನವನೊಲ್ಲದೆ
ಭಕ್ತಿಯೆಂಬ ಆಶೆ ಕುರಿತು ಪೋಷಣವ ಹೊರೆಯದೆ
ನಿಜ ತತ್ವದ ಆಶೆಯೇ ಸಾಕಾರವಾಗಿ
ಅರಿದ ಆತ್ಮ ಕರಿಗೊಂಡಲ್ಲಿ
ಹರಿಪ್ರಿಯ ಅಘೋರನಾಶನ ರಾಮನಾಥಾ. ॥ ೮೨ ॥

೩೬೫

ಮಾಧವನ ಮನೆಯ ಬಾಗಿಲಿನಲ್ಲಿ
ಮಹಾಜನಂಗಳೆಲ್ಲರು ಕೂಡಿ
ಹೋಮವನಿಕ್ಕಲಾಗಿ, ಎದ್ದಿತ್ತು ಉರಿ.
ಮೂವರ ಮಸ್ತಕವ ಮುಟ್ಟಿ, ಆ ಹೋಮದ ಹೊಗೆ ತಾಗಿ
ನಾಲ್ವರ ಕಣ್ಣು ಕೆಟ್ಟಿತ್ತು.
ಆ ಹೋಮದ ದಿಕ್ಕಿನ ಕುಂಭ ಉರುಗಿಹೋಗಲಾಗಿ
ತೊರೆ ಹರಿಯಿತ್ತು.
ಕಾಲ ಕಡಹು ಆರಿಗೂ ಆಗದು.
ಎಲ್ಲಾ ಠಾವಿನಲ್ಲಿ ಮಡುಮಯವಾಯಿತ್ತು.
ಮಡುವಿನ ಮೊಸಳೆ ತಡಿಯಲ್ಲಿ
ಆರನೂ ನಿಲಲೀಸದೆ ಕಡಿದು ನುಂಗಿಹುದಿನ್ನೇವೆ.
ಮೊಸಳೆಯ ಹಿಡಿವರ ಕಾಣೆ,

ಮಡುವ ಒಡೆವರ ಕಾಣೆ,
ಹೋಮವ ಕೆಡಿಸುವರ ಕಾಣೆ,
ಮಾಧವನ ಬಾಗಿಲಿನಲ್ಲಿ ನಿಂದು ಹೋದರು ಹೊಲಬುದಪ್ಪಿ,
ನಾರಾಯಣಪ್ರಿಯ ರಾಮನಾಥಾ. ॥ ೮೩ ॥

೩೬೬

ಯೋನಿ ಒಂದರಲ್ಲಿ ಬಂದೆನೆಂದಡೆ ಹಿಂಚುಮುಂಚಿಲ್ಲವೆ?
ರತ್ನಕುಲ ಒಂದಾದಡೆ ಕಾಲಿಗೂ ಸರಿ, ಕೈಗೂ ಸರಿಯೆ?
ನಾ ನುಡಿದಿಹೆನೆಂದಡೆ ಕಡೆನಡು ಮೊದಲಿಲ್ಲ.
ಅಂಜನವನಿಕ್ಕಿ ನಿಧಾನವ ಕಾಬಂಗೆ
ಬರುಬದೊಂದಾಗಿ ಸಂಗವೇತಕ್ಕೆ?
ನಾರಾಯಣಪ್ರಿಯ ರಾಮನಾಥಾ. ॥ ೮೪॥

೩೬೭

ರುದ್ರ ದೈವವಾದಡೆ ಕಪಾಲವ ಹೊತ್ತು ತಿರುಗಲೇಕೆ?
ವಿಷ್ಣು ದೈವವಾದಡೆ ದಶಾವತಾರಕ್ಕೊಳಗಾಗಲೇಕೆ?
ಬ್ರಹ್ಮ ದೈವವಾದಡೆ ಶಿರವ ಹೋಗಾಡಲೇಕೆ?
ಇಂತೀ ಮೂರು ಅಳಿವಿಂಗೊಳಗು.
ಅನಾದಿ ಚಿಚ್ಛಕ್ತಿಯ ಅಂಶೀಭೂತ
ಮಾಯಿಕ ಸಂಬಂಧ ದೇಹಿಕರು;
ಅವತಾರಮೂರ್ತಿಗಳಾದ ರಣಜಗದ ದೈವಂಗಳಿವರು.
ಇವರ ಭೇದ ದರ್ಪಣದ ಒಳ ಹೊರಗಿನಂತಪ್ಪ ಭೇದ.
ನಿಶ್ಚಯವಂತರು ತಿಳಿದು ನೋಡಿರಣ್ಣಾ,
ತಿಳಿದಡೆ ಇರವು ಉದಕದೊಳಗಣ ವಿಕಾರದಂತೆ
ಬಯಲೊಳಗಣ ಮರೀಚಿಯಂತೆ ಹಿಂಗದ ವಸ್ತು
ನಾರಾಯಣಪ್ರಿಯ ರಾಮನಾಥನಲ್ಲಿ ಗುಣವಿರಹಿತ
ಶರಣಂಗೆ. ॥ ೮೫ ॥

೩೬೮

ಲಾಭವ ಕಾಬ ಬೆವಹಾರಿ ನಷ್ಟಕ್ಕೆ ಸಿಕ್ಕುವನೆ?
ಅದು ತನ್ನ ಸಿಕ್ಕಿನ ಬಹುದ ತಾನರಿಯ.
ಈ ಉಭಯವ ತಿಳಿದಲ್ಲಿ ಲಾಭ ನಷ್ಟ ದಿವರಾತ್ರಿಯಂತೆ

ಮಾಟ ಕೂಟದ ಒದಗು.
ವಿಶ್ವಾಸದಲ್ಲಿ ಲಾಭ, ಅದು ಹೀನವಾದಲ್ಲಿ ನಷ್ಟ.
ಇಂತೀ ನಷ್ಟ ಲಾಭವ ಬಿಟ್ಟು
ಸುಚಿತ್ತ ನಿರ್ಮಲಾತ್ಮಕನಾಗಿ ಅರಿದು ಕರಿಗೊಳ್ಳಬೇಕು.
ನಾರಾಯಣಪ್ರಿಯ ರಾಮನಾಥನಲ್ಲಿ
ಚಿತ್ತಶುದ್ಧನಾಗಿರಬೇಕು. ॥ ೮೬ ॥

೩೬೯

ಲಿಂಗಪೂಜೆಯ ಮಾಡುವಲ್ಲಿ
ಮನ ಗುರಿಯ ತಾಗಿದ ಕೋಲಿನಂತಿರಬೇಕು.
ಶಿವಲಿಂಗಪೂಜೆಯ ಮಾಡುವಲ್ಲಿ
ಶ್ರವಕ್ಕೆ ಸಂಜೀವನ ಹುಟ್ಟಿದಂತಿರಬೇಕು.
ಹೀಗಲ್ಲದೆ ಪೂಜೆಯಲ್ಲ.
ಒಳಗಣ ಹುಳುಕು ಮೇಲಕ್ಕೆ ನಯವುಂಟೆ,
ಆ ತರು ಒಣಗುವವಲ್ಲದೆ?
ಇಂತೀ ಬರುಬರ ಅರ್ಚನೆ ಹುರಿಯ ಬೊಂಬೆಯಂತೆ.
ಇಂತೀ ಅರಿಗುರಿಗಳ ಪೂಜೆ ಬರುಕಟೆಯಂತೆ
ನಾರಾಯಣಪ್ರಿಯ ರಾಮನಾಥಾ. ॥ ೮೭ ॥

೩೭೦

ಲಿಂಗ ಸಂಗಿಯಾದಲ್ಲಿ ಕಲ್ಲು ನೆಲ್ಲಿನಂತಿರಬೇಕು.
ಲಿಂಗ ಪ್ರಾಣವಾದಲ್ಲಿ ಉರಿ ಕರ್ಪೂರದಂತಾಗಬೇಕು.
ಆ ತದ್ಭಾವ ಲಿಂಗದ ಕೂಟ.
ವರುಣನ ಕಿರಣ ಕೊಂಡ ಮರೀಚಿಕಾ ಜಲದಂತೆ
ಮಕರ ಉದಕ ಪಥದಂತೆ ನಾಮದೋರದ ಇರವು,
ನಾರಾಯಣಪ್ರಿಯ ರಾಮನಾಥಾ. ॥ ೮೮ ॥

೩೭೧

ಲೋಕವ ಕುರಿತಲ್ಲಿ ಆಚಾರದ ಮಾತು.
ತನ್ನ ಕುರಿತಲ್ಲಿ ಅನಾಚಾರದ ಮಾತು.
ಆಚಾರಸಂಪನ್ನರನ್ನೆಲ್ಲಿಯೂ ಕಂಡೆ.
ಅನಾಚಾರಸಂಪನ್ನರನ್ನೆಲ್ಲಿಯೂ ಕಾಣೆ.

ಭಕ್ತ ಭವಿಯಾಗಬಹುದಲ್ಲದೆ, ಭವಿ ಭಕ್ತನಾಗಬಾರದು.
ಬೆಣ್ಣೆಗೆ ತುಪ್ಪವಲ್ಲದೆ ತುಪ್ಪ ಬೆಣ್ಣೆಯಪ್ಪುದೆ?
ತರು ಬೆಂದಲ್ಲಿ ಕರಿಯಲ್ಲದೆ, ಕರಿ ಬೆಂದಲ್ಲಿ ತರು ಉಂಟೆ?
ಇದು ಅಘಟಿತ, ಅನಾಮಯ,
ನಾರಾಯಣಪ್ರಿಯ ರಾಮನಾಥಾ. ॥ ೮೯ ॥

೩೭೨

ವಸ್ತು ಭಾವದ ಶಕ್ತಿಸ್ವರೂಪು ವಿಷ್ಣು.
ವಿಷ್ಣುಭಾವದ ಶಕ್ತಿಸ್ವರೂಪು ಬ್ರಹ್ಮ.
ಆ ವಿಷ್ಣುವಿನ ಅವತಾರ ಅರುಹಂತ.
ಇಂತಿವೆಲ್ಲವು ವಸ್ತು ಬುಡವೆಂದರಿದು
ಹೇಳುತ್ತದೆ ಪ್ರಣವದಲ್ಲಿ, ಸಾಗಿಸುತ್ತದೆ ವೇದಶಾಸ್ತ್ರ
ಸಂದೇಹವಿಲ್ಲದೆ ಕೂಗುತ್ತದೆ ಪುರಾಣ
ಪುಣ್ಯ ಗತಿಮತಿ ಒಬ್ಬನೇ ಎಂದು.
ಮುಕುರವ ಹಿಡಿದು ಮುಖವ ಕೇಳಲೇಕೆ?
ನಾರಾಯಣಪ್ರಿಯ ರಾಮನಾಥಾ. ॥ ೯೦ ॥

೩೭೩

ವಾದ ವಶ್ಯ ಯಂತ್ರ ಮಂತ್ರ ಇಂದ್ರಜಾಲ ಮಹೇಂದ್ರಜಾಲ
ಅದೃಶ್ಯಾಕರಣ ಪರಕಾಯಪ್ರವೇಶ ತೀರ್ಥಯಾತ್ರೆ
ದಿಗ್ವಳಯದಲ್ಲಿ ಜನಜನಿತದ ಆಗುಚೇಗೆಯಲ್ಲದೆ ಎಲ್ಲಿಯೂ
ಕಾಬುದಿಲ್ಲ.
ಕಾಬುದಕ್ಕೆ ತೆರಪು ಮೂರನರಿದು ಮೂರ ಮರೆದು
ಆರನರಿದು ಹದಿನಾರ ಹರಿದು,
ಐದ ಬಿಟ್ಟು ಇಪ್ಪತ್ತೈದ ಕಟ್ಟಿ
ಬಟ್ಟ ಬಯಲು ತುಟ್ಟತುದಿಯ ಮೆಟ್ಟಿ ನೋಡಿ ಕಂಡ
ನಾರಾಯಣಪ್ರಿಯ ರಾಮನಾಥನಲ್ಲಿ ಕೂಟದ ಶರಣ. ॥ ೯೧ ॥

೩೭೪

ವಾದ್ಯದೊಳಗಣ ನಾದದೊಲು
ಪಾಷಾಣದೊಳಗಣ ಪಾವಕನೊಲು
ಕಿಸಲಯದೊಳಗಣ ರಸದವೊಲು

ಅಸಿಮೊನೆಯಲ್ಲಿ ತೋರುವ ನಯ ಕ[illegible]ಲದವೊಲು
ಮುಸುಕಿನೊಳಗೆ ತೋರುವ ಆಕಾಶದ ಪ್ರತಿರೂಪಿನವೊಲು
ಗಜಗತಿಯಂತೆ ಮಯೂರನಂತೆ ಉಲುಹಡಗಿದ ವೃಕ್ಷ
ಬಯಲೊಳಗಡಗಿದ ನಾದ ಹೊರಹೊಮ್ಮದ ಐಕ್ಯ.
ಇಂತಿವರಂದದಲ್ಲಿ ಸಂದ ಶರಣಂಗೆ ಸಂದೇಹ ಪಥವಿಲ್ಲ
ನಂದಗೋಪಿಯ ಕಂದಪ್ರಿಯ ನಿಸ್ಸಂಗಲಿಂಗ ರಾಮನಾಥಾ.
॥ ೯೨ ॥

೩೭೫

ವೇದ ಪ್ರಣವದ ಶೇಷ.
ಶಾಸ್ತ್ರ ಸಂಕಲ್ಪದ ಸಂದು.
ಪುರಾಣ ಪುಣ್ಯದ ತಪ್ಪಲು.
ಇಂತೀ ವೇದ ಶಾಸ್ತ್ರ ಪುರಾಣ ಆಗಮಂಗಳಲ್ಲಿ
ವಾದಕ್ಕೆ ಹೋರುವ ವಾಗ್ವಾದಿಗಳು
ಭೇದವನರಿಯದೆ ಹೋರಲೇಕೆ?
ಹೊಲಬುದಪ್ಪಿ ಬೇವಿನ ಮರನ ಹತ್ತಿ
ಬೆಲ್ಲವ ಮೆದ್ದಡೆ ಕಹಿಯೊ? ಸಿಹಿಯೊ?
ಎಂಬುದನರಿತಾಗ,
ಆವ ಬಳಕೆಯಲ್ಲಿದ್ದಡೂ ದೇವನ ಕಲೆಯನರಿತಲ್ಲಿ
ಆವ ಲೇಪವೂ ಇಲ್ಲ,
ನಾರಾಯಣಪ್ರಿಯ ರಾಮನಾಥಾ. ॥ ೯೩ ॥

೩೭೬

ಸಮಯಕ್ಕೆ ಹೋರಬೇಕು, ಜ್ಞಾನದಲ್ಲಿ ಸುಮ್ಮನಿರಬೇಕು.
ಹೋರದಿದ್ದಡೆ ರುದ್ರಂಗೆ ದೂರ.
ಹೋರಿದಡೆ ಪರವಸ್ತುವಿಗೆ ದೂರ.
ಇದರಿಂದ ಬಂದುದು ಬರಲಿ.
ಮನೆಯೊಳಗಿದ್ದು ಮನೆಯ ಸುಟ್ಟರುಂಟೆ?
ನಾರಾಯಣಪ್ರಿಯ ರಾಮನಾಥಾ. ॥ ೯೪ ॥

೩೭೭

ಸರ್ವಜ್ಞಾನ ಸಂಬಂಧಿಯ ಇರವು:
ಕಿರಣದೊಳಗಣ ಸುರಂಗದಂತೆ

ಸುರಭಿಯೊಳಗಣ ನವನೀತದಂತೆ
ಬೀಜದೊಳಗಣ ವೃಕ್ಷದಂತೆ
ಸಾಧಕರಲ್ಲಿ ತೋರುವ ಸಂಕಲ್ಪದಂತೆ
ಸಾತ್ವಿಕರಲ್ಲಿ ತೋರುವ ವಿಲಾಸಿತದಂತೆ
ಅಗ್ನಿಯಲ್ಲಿ ಹೊರಹೊಮ್ಮದ ತೆರವು
ಕೆಡದೆ ಉಡುಗಿ ತೋರುವ ಬೆಳಗಿನಂತೆ
ತೆರಹಿಲ್ಲದ ಭಾವ ವೇದಕ್ಕೆ ಅತೀತ, ಶಾಸ್ತ್ರಕ್ಕೆ ಅಗಮ್ಯ,
ಪುರಾಣಕ್ಕೆ ಅಗೋಚರ,
ಪುಣ್ಯದ ಪಟಲ ದಗ್ಧ, ಪಾಪ ನಾಶ,
ನಾರಾಯಣಪ್ರಿಯ ರಾಮನಾಥನಲ್ಲಿ ಐಕ್ಯವಾದ ಶರಣ. ॥ ೯೫ ॥

೩೭೮

ಸರ್ವವ ಮುಟ್ಟಿ ಅರ್ಪಿಸುವಲ್ಲಿ
ಅರ್ಪಿಸಿಕೊಂಬ ವಸ್ತು ಹಿಂಚೊ ಮುಂಚೊ
ಎಂಬುದನರಿದಲ್ಲದೆ ಅರ್ಪಿತಾವಧಾನಿಗಳಲ್ಲ.
ಅರ್ಪಿಸಿಕೊಂಬ ದ್ರವ್ಯ ವಸ್ತುವ ಅರಿಯಬೇಕೊ
ವಸ್ತು ದ್ರವ್ಯವ ತಾನರಿತು ಅರ್ಪಿಸಿಕೊಳಬೇಕೊ?
ಈ ಉಭಯವನರಿತಡೆ ಅರ್ಪಿತ ಅವಧಾನಿ.
ಪುರುಷಂಗೆ ಸತಿ ಸಂಯೋಗದಿಂದಲ್ಲದೆ
ಸತಿಗೆ ಪುರುಷನ ಸಂಯೋಗದಿಂದಲ್ಲದೆ
ಈ ಉಭಯ ಸುಖವಿಲ್ಲ
ನಾರಾಯಣಪ್ರಿಯ ರಾಮನಾಥಾ. ॥ ೯೬ ॥

೩೭೯

ಸ್ಥೂಲ ತನುವನರಿದು ಮರೆದಲ್ಲಿ ಗುರುವನರಿದವ.
ಸೂಕ್ಷ್ಮ ತನುವನರಿದು ಮರೆದಲ್ಲಿ ಲಿಂಗವನರಿದವ.
ಕಾರಣ ತನುವನರಿದು ಮರೆದಲ್ಲಿ ಜಂಗಮವನರಿದವ.
ಇಂತೀ ತ್ರಿವಿಧವನರಿದು ನಿಶ್ಚಯವಾದ ನಿಶ್ಚಟಂಗೆ
ಅರಿದು ಮರೆಯಲಿಲ್ಲ, ಮರೆದು ಅರಿಯಲಿಲ್ಲ.
ವಾಯುವಿನ ಕೈಯ ಗಂಧದಂತ
ನಾರಾಯಣಪ್ರಿಯ ರಾಮನಾಥನಲ್ಲಿ ಭಾವ
ನಿರ್ಭಾವನಾದವಂಗೆ. ॥ ೯೭ ॥

೩೮೦

ಹರಿ ಬಂದ ವಿಧಿ, ಬ್ರಹ್ಮ ಬಂದ ಭವ, ಜಿನ ಬಂದ ಲಜ್ಜೆ.
ದೃಷ್ಟವ ಕಂಡೇಕೆ ಮಿಥ್ಯದಿಂದ ಹೋರುವರು?
ಆದಿ ವಸ್ತುವಿನ ಕಾಲುರಂಗು ವಿಷ್ಣು,
ಅರೆರಂಗು ಬ್ರಹ್ಮ, ಸಂದೇಹ ಮಾತ್ರ ಜಿನ.
ಇವರ ಭಂಗಿತವ ಹೇಳಲೇಕೆ?
ಇವರ ಸಂದೇಹದ ಮಂದಮತಿಯ ದಿಂಡೆಯತನದಿಂದ
ಹೋರುವ ಭಂಡರ ತಿಳಿ,
ನಾರಾಯಣಪ್ರಿಯ ರಾಮನಾಥನಲ್ಲಿ
ಗುಪ್ತಭಕ್ತರಪ್ಪ ಸತ್ಯವಂತರು. ॥ ೯೮ ॥

೩೮೧

ಹರಿ ಮಾಡಿವ ಭಕ್ತಿಗೆ ಕಡೆ ನಡು ಮೊದಲಿಲ್ಲ
ಜಗದ ಕಂಟಕ ಬಂದಲ್ಲಿ
ದಶಾವತಾರನಾಗಿ ಪಶುಪತಿಯ ಸೇವೆ ಮಾಡಿದ.
ಶಶಿಶೇಖರನ ಆಲಯದಲ್ಲಿ ಪತಿಭಕ್ತಿಯಾಗಿಪ್ಪ
ನಾರಾಯಣನ ಜಗವೇಷಮಂ ತಾಳಿ
ಇಂತಿವರೆಲ್ಲರೂ ಎನ್ನ ರಾಮನಾಥ
ಗೋವಿಂದಾ ಗೋವಿಂದಾ ಎನುತಿದ್ದರು. ॥ ೯೯ ॥

೩೮೨

ಹಾಸನಿಕ್ಕುವಾತನ ಕೈಯ ತೂತಿನ ಕೊಳವೆಯ
ನೂಲು ನುಂಗಿತ್ತು.
ಕಡ್ಡಿಯ ಸುತ್ತುವ ಕೂಸ ರಾಟೆಯ ಕೈ ನುಂಗಿತ್ತು.
ಉಂಕೆಯ ಮಾಡುವಾತನ ಕೈಯ ಕುಂಚಿಗೆಯ
ತುಂತುರು ನುಂಗಿತ್ತು.
ನೆಯ್ವ ಅಣ್ಣನ ಕೈಯ ನಳಿಗೆ ನುಂಗಿತ್ತು.
ಹಾಸಿನ ಕಡ್ಡಿಯ ಉಂಕೆಯ ನೆಯ್ವಾತನ ಬುದ್ಧಿಯ ಚಿತ್ತವ
ಏನೆಂದರಿಯದ ಕೂಸು ನುಂಗಿತ್ತು.
ನಾರಾಯಣಪ್ರಿಯ ರಾಮನಾಥನಲ್ಲಿ
ಐಕ್ಯಾನುಭಾವಿಯಾದ ಶರಣ. ॥ ೧೦೦ ॥

## ಗುರುಪುರದ ಮಲ್ಲಯ್ಯನ ವಚನ

೩೮೩

ಅವಿಚಾರತೆಯಿಂ ಲೋಕದ ಜಡಮಾನವರಿಗೆ
ಎರಗದಿಹುಮಳ್ಳೊಡೆ,
ಶಿವಲಿಂಗದ ಮಸ್ತಕದಲ್ಲಿ ಧರಿಸುವದೀ ಕ್ರಮವರಿದು.
ಧರಿಸಿದವರು ಶಿವತತ್ವದ ಮೂಲಜ್ಞಾನದ
ಸಂಭವಸಂಧಿಗಳೆನಿಸುವರಾ
ನಿಜಮಹಿಮರ ಚರಣಕೆ ಶರಣೆಂಬೆನು
ಸದ್ಗುರುವೆ, ಪುರದ ಮಲ್ಲಯ್ಯಾ. ॥ ೧ ॥

೩೮೪

ಎನ್ನ ಪಾದವೆ ಪದಶಿಲೆಯಾಗಿ
ಎನ್ನ ಕಾಲೆ ಕಡಹದ ಕಂಬಂಗಳಾಗಿ
ಎನ್ನ ತೋಳೆ ನಾಗವೇದಿಕೆಯಾಗಿ
ಎನ್ನ ಅಸ್ಥಿಯೆ ಸುತ್ತಳ ಜಂತಿಯಾಗಿ
ಎನ್ನ ಅಧರವೆ ಒಳಬಾಗಿಲಾಗಿ
ಎನ್ನ ಗುರುಕರುಣವೆ ಲಿಂಗವಾಗಿ
ಎನ್ನ ಅಂಗವೆ ರಂಗಮಧ್ಯವಾಗಿ
ಎನ್ನ ಹೃದಯಕಮಲವೆ ಪೂಜೆಯಾಗಿ
ಎನ್ನ ಕಿವಿಗಳೆ ಕೀರ್ತಿಮುಖವಾಗಿ
ಎನ್ನ ನೆನವ ನಾಲಗೆಯೆ ಘಂಟೆಯಾಗಿ
ಎನ್ನ ಶಿರವೆ ಸುವರ್ಣದ ಕಳಸವಾಗಿ
ಎನ್ನ ನಯನವೆ ಕುಂದದ ಜ್ಯೋತಿಯಾಗಿ
ಎನ್ನ ಚರ್ಮವೆ ನಿರ್ಮಲ ಹೊದಕೆಯಾಗಿ
ಎನ್ನ ನೆನಹೆ ನಿಮಗೆ ಉಪಾಹಾರವಾಗಿ
ಗುರುಪುರದ ಮಲ್ಲಯ್ಯನಿದ್ದನಾಗಿ! ॥ ೨ ॥

೩೮೫

ಗುರು ಭಕ್ತನಲ್ಲ, ವಿರಕ್ತನಲ್ಲ,
ನಿಶ್ಚಿಂತೆಯಲ್ಲ, ದುಶ್ಚಿಂತೆಯಲ್ಲ,
ದಿಟವೆಂಬುದಿಲ್ಲ, ಡಂಬುಳದೆಲ್ಲಾ,
ಏನೆಂಬೆ! ಎನ್ನ ಮನವೆಯ್ದೆ ಹೊಲ್ಲ.
ಎನಗೊಡೆಯರಿಲ್ಲ, ನಿಮ್ಮ ಬಿಡುವುದಿಲ್ಲ,
ಸದ್ಗುರುವೆ ನೀ ಕರುಣಿಸು ಪುರದ ಮಲ್ಲಯ್ಯಾ. ॥ ೩ ॥

೩೮೬

ಹೊತ್ತಿಂಗೊಂದು ಪರಿಯಹ ಮನವ ಕಂಡು
ದಿನಕ್ಕೊಂದು ಪರಿಯಹ ತನುವ ಕಂಡು
ಅಂದಂದಿಗೆ ಭಯದೋರುತ್ತಿದೆ.
ಒಂದು ನಿಮಿಷಕ್ಕನಂತವನೆ ನೆನೆವ ಮನವ ಕಂಡು
ಅಂದಂದಿಂಗೆ ಭಯವಾಗುತ್ತಿದೆ.
ಒಂದು ನಿಮಿಷಕ್ಕನಂತವನೆ ನೆನೆವ ಮನವ ಕಂಡು
ಅಂದಂದಿಂಗ ಭಯವಾಗುತ್ತಿದೆ.
ಈ ಮನ ನಿಮ್ಮ ನೆನೆಯಲೀಯದು,
ಮನ ಹಗೆಯಾದುದಯ್ಯಾ
ಸದ್ಗುರುವೆ ಪುರದ ಮಲ್ಲಯ್ಯಾ! ॥ ೪ ॥

## ಗುರುಬಸವೇಶ್ವರನ ವಚನ

೩೮೭

ಅಂಗದ ಹೊಲಬನರಿವಲ್ಲದೆ
ಲಿಂಗದ ನೆಲೆಯನರಿಯಬಾರುದು.
ಲಿಂಗದ ನೆಲೆಯನರಿವಲ್ಲದೆ
ನಿಜನಿರ್ಣಯವ ತಿಳಿಯಬಾರದು.
ನಿಜನಿರ್ಣಯವ ತಿಳಿದಲ್ಲದೆ ತನ್ನ ತಾನರಿಯಬಾರದು.
ಗುರುಕರುಣದಿಂದ ತನ್ನ ತಾನರಿದ ಶರಣಂಗೆ
ಅಂಗಕ್ಕೆ ಆಚಾರವಿಲ್ಲ, ಲಿಂಗಕ್ಕೆ ಕುರುಹಿಲ್ಲ.
ಗುರುಬಸವೇಶನೆಂಬುದಕ್ಕೆ ಕುರುಹು ಮುನ್ನಿಲ್ಲ. ॥ ೧ ॥

೩೮೮

ಗುರು ಪರಬ್ರಹ್ಮಮಗಣಿತಮಗೋಚರಂ.
ಗುರು ಪರಂ ಜ್ಞಾನಮಾನಂದರೂಪಂ.
ಗುರು ಪರಮತೇಜ ಬೀಜಾದಿ ಪಂಚಾಕ್ಷರಂ.
ಗುರು ಪಾದಕೋಟ್ಯಷ್ಟ ತೀರ್ಥಂಗಳಂ.
ಗುರು ವಚನರಚನ ಉಪದೇಶ ಮಂತ್ರಂ.
ಗುರು ಭಕ್ತಿ ಮುಕ್ತಿ ಮೋಕ್ಷ ಕಾರಣ ಇಹಪರಂ.
ಗುರು ಘನತರದ ಮಹಿಮೆಯನು ಗುರುಬಸವನೆ ಬಲ್ಲ. ॥ ೨ ॥

೩೮೯

ಮೋನವೇನೊ ಮೂಲಮಂತ್ರ ಮುಖದಲ್ಲಿರಲು?
ಆಹ್ವಾನವೇನೊ ನಿಜ ಪರಿಪೂರ್ಣ ತನ್ನೊಳಗಿರಲು
ಧ್ಯಾನವೇನೊ ಸಹಜಧ್ಯಾನವ ಬೆಳಗೊಳಗೊಂಡವಂಗೆ?
ಜಪವೆಂದೇನೊ ತಾನು ತಾನಾದವಂಗೆ
ಬಯಲನರಸುವ ಮರುಳರಂತೆ ಗುರುಬಸವ. ॥ ೩ ॥

# ಗುರುಭಕ್ತಯ್ಯನ ವಚನ

೩೯೦

ಅರ್ಪಿತವೆಂದಡೆ ಕಲ್ಪಿತವಾಯಿತ್ತು,
ಕಲ್ಪಿತವೆಂದಡೆ ಅರ್ಪಿತವಾಯಿತ್ತು.
ಅರ್ಪಿತವನು ಕಲ್ಪಿತವನು ಅದೆಂತರ್ಪಿತವೆಂಬೆ?
"ಶಿವಾತ್ಮಕ ಸುಖಂ ಜೀವೋ ಜೀವಾತ್ಮ ಚ ಸುಖಂ ಶಿವಃ।
ಶಿವಸ್ಯ ಜೀವಸ್ಯ ತುಷ್ಟಂ ಪ್ರಾಣಲಿಂಗಿಸ್ಥಲಂ ಭವೇತ್॥"
ಇಂತೆಂದುದಾಗಿ,
ಅರಿವರ್ಪಿತ ಮರಹು ಅನಾರ್ಪಿತ,
ಎನ್ನ ಸ್ವಾಮಿ ಘಂಟೇಶ್ವರಲಿಂಗಕ್ಕೆ. ॥ ೧ ॥

## ಗೋರಕ್ಷನ ವಚನ

೩೯೧

ಅರಗಿನ ತೇಜಿಯ ಮೇಲೆ
ಉರಿಯ ಹಿರಿಯರಸು ಮೂರ್ತಿಗೊಂಡಿರಲು
ಮಂಜಿನ ಪರಿವಾರ ಸಂದಣಿಸಿ ಸಂತೈಸಿ
ಅವರಂಗಕ್ಕೆ ಬಿಸಿಲಿನ ಜೋಡ ತೊಡಿಸಿ
ತಾ ತುರಂಗದ ಮೇಲೆ ಪಶುತಮವೆಂಬ ಖಂಡೆಯವ ಪಿಡಿದು
ಚಂಡಿಕಾಕಿರಣವ ಮೇಲೆ ಅಂಗೈಸಿ ಏರಲಾಗಿ ಫೌಜು ಬೆರಸಿತ್ತು.
ಉರಿಯರಸು ಎತ್ತಿದ ಖಂಡೆಯ ವರುಣನ ಕಿರಣದೊಳಗೆ
ಬಯಲಾಯಿತ್ತು.
ಮಂಜಿನ ಪರಿವಾರ ಆ ರಂಜನೆಯೊಳಡಗಿತ್ತು.
ಉರಿಯರಸು ವಾಯುವಿನ ಸಿರಿಯೊಳಗಾದ.
ಅರಗಿನ ಅಶ್ವ ಅರಸಿನ ತೊಡೆಯೊಳಗೆ ಹರಿಯಿತ್ತು.
ಇಂತೀ ದೊರೆಗೆ ಅರಿ ಇದಿರಿಲ್ಲಾ ಎಂದು
ಗೋರಕ್ಷಪಾಲಕ ಮಹಾಪ್ರಭು ಸಿದ್ಧಸೋಮನಾಥಲಿಂಗಕ್ಕೆ
ಇದಿರಿಲ್ಲಾ ಎನುತಿರ್ದೆ. ॥ ೧ ॥

೩೯೨

ಅರಿವನಕ್ಕು ಭೃತ್ಯಾಚಾರಿ
ಮೀರಿ ಮಿಕ್ಕು ಶರಣಪಥವ ಸೋಂಕು ತಾನಾಗಿದ್ದ ಸುಖವು
ಕೆಡುವನ್ನಕ್ಕ ಪ್ರಾಣಲಿಂಗಿ;
ಕೊಡಲಿಲ್ಲ ಕೊಡಲಿಲ್ಲ ಲಿಂಗಪ್ರಾಣಿಯಾದವಂಗೆ;
ಸಿದ್ಧಸೋಮನಾಥಲಿಂಗದಲ್ಲಿ ಅರುಹಿನವಗ್ರಹ ಕಾಣಾ! ॥ ೨ ॥

೩೯೩

ಅವಧಿಜ್ಞಾನ ಅಂತರಿಕ್ಷಜ್ಞಾನ ಪವನಜ್ಞಾನ
ಪರಸ್ವರೂಪಜ್ಞಾನ ಪರಬ್ರಹ್ಮಜ್ಞಾನ ಪರತತ್ವಜ್ಞಾನ
ಸ್ವಯಜ್ಞಾನ ಸ್ವಾನುಭಾವಜ್ಞಾನ ಸರ್ವಪರಿಪೂರ್ಣಜ್ಞಾನ
ದಿವ್ಯಜ್ಞಾನವೆಂದು ಸಂಕಲ್ಪಿಸುವಾಗ
ಆ ಆತ್ಮಕ್ಕೆ ಅದು ನಿಜವೊ, ಅದರ ಪರಿಭ್ರಮಣವೊ?
ಸಕಲ ಶಸ್ತ್ರಂಗಳಿಂದ ಕಡಿವಡಿದಂಗ ಆತ್ಮಬಿಡುವಲ್ಲಿ
ಹಲವು ಶಸ್ತ್ರದ ಭೇದವೊ?
ಅಂಗದ ಆಯದ ಗಾಯದ ಭೇದವೊ?
ಎಂಬುದ ತಿಳಿದು ಪದಪದಾರ್ಥಂಗಳ ಲಕ್ಷಿಸಿ ನಿರೀಕ್ಷಿಸಿ
ಆರೋಪಿಸಬೇಕು.
ಒಂದು ವಿಶ್ವವಾದಲ್ಲಿ, ವಿಶ್ವ ಒಂದಾದಲ್ಲಿ
ಉಭಯದಲ್ಲಿ ನಿಂದು ತಿಳಿದಲ್ಲಿ
ಗೋರಕ್ಷಪಾಲಕ ಮಹಾಪ್ರಭು ಸಿದ್ಧ ಸೋಮನಾಥಲಿಂಗವು
ಒಂದೆನಬೇಕು. ॥ ೩ ॥

೩೯೪

ಆವ ಬಗೆ ಭಾವ ಬಲ್ಲತನ ಅಳವಟ್ಟಲ್ಲಿ ರಾಗವಿರಾಗವೆಂಬುದಿಲ್ಲ.
ಸುಖ ಸುಮ್ಮಾನ ರುಜೆ ರೋಗ ತಾಗು ನಿರೋಧ ಬಂದಲ್ಲಿ
ಶೋಕ ಮೋಹಾದಿಗಳು ವರ್ತಿಸಿದಲ್ಲಿ
ಜ್ಯೋತಿಯ ಬುಡದಂತೆ;
ರಜ್ಜು ತೈಲ ಅಗ್ನಿ ಉಳ್ಳನ್ನಕ್ಕ
ಉರಿದು ಆ ಬುಡ ಹೊದ್ದದಂತೆ.
ಈ ಸಂಸಾರದ ಬುಡದಲ್ಲಿ
ನಾನಾ ವಿಕಾರತ್ರಯದ ಗುಣದಲ್ಲಿ
ನೀರಿನೊಳಗಿರ್ದು ಈಸುವಸಂತೆ
ಬಂಧ ಮೋಕ್ಷ ಕರ್ಮಂಗಳಲ್ಲಿ ದ್ವಂದ್ವಿತನಲ್ಲದೆ,
ನಿಂದ ನಿಜೈಕ್ಯಂಗೆ ಹಿಂದು ಮುಂದೆಂಬ ಬಂಧವಿಲ್ಲ.
ಗೋರಕ್ಷಪಾಲಕ ಮಹಾಪ್ರಭು ಸಿದ್ಧಸೋಮನಾಥ-
ಲಿಂಗವಾದವಂಗೆ. ॥ ೪ ॥

೩೯೫

ಕುಂಡಲಿಯೆಂಬ ಆಧಾರದಲ್ಲಿ
ಜಲ ತೇಜ ವಾಯುವೆಂಬ ತ್ರಿವಿಧ ಕೂಡಿ
ಕಮಂಡಲ ಹುಟ್ಟಿತ್ತು.
ಅದಕ್ಕೆ ಬಾಯಿ ಮೂರು ಹೆಡೆಯಾರು.
ಜೂಳಿಯೊಂದರಲ್ಲಿ ಉದಕವ ಕೊಳುತಿರಲಾಗಿ
ಆ ಹಸುವಿನ ತೃಷೆಯಡಗಿ ಬಯಕೆ ಸಲೆ ಬತ್ತಿದಲ್ಲಿ
ಮಹಾಗಣನಾಥನ ಐವತ್ತೆರಡು ಸರ ಹರಿದವು.
ಮೂವತ್ತಾರು ಮಣಿ ಕೆಟ್ಟವು;
ಇಪ್ಪತ್ತೈದು ಮಣಿ ಪುಂಜವಾಯಿತ್ತು.
ಆರು ನಾಯಕರತ್ನ ಎಲ್ಲಿ ಅಡಗಿತ್ತೆಂದರಿಯೆ.
ಮೂರು ರತ್ನವ ಕಂಡೆ:
ಒಂದು ಉಲಿವುದು, ಒಂದು ಉರಿವುದು,
ಒಂದು ಬೆಳಗು ನಂದಿಹುದು.
ಇಂತೀ ತ್ರಿವಿಧಂಗವ ಕಂಡು
ಈ ಅಂಗದ ಮಣಿಯ ಒಂದೊಂದ ಪೋಣಿಸಲಾರದೆ
ಈ ದಿನಮಣಿಯ ವಿರಳವ ತೋರಿಸಾ
ಗೋರಕ್ಷಪಾಲಕ ಮಹಾಪ್ರಭು ಸಿದ್ಧಸೋಮನಾಥ
ಲಿಂಗವೆ. ॥ ೫ ॥

೩೯೬

ನಾ ನಿನ್ನ ಕೇಳಿಹೆನೆಂದಡೆ
ನಾನಂಗಿ ನೀ ನಿರಂಗಿ.
ನಾ ನಿನಗೆ ಹೇಳಿಹೆನೆಂದಡೆ
ನಾ ಸಂಗಿ ನೀ ನಿಸ್ಸಂಗಿ.
ನಿನ್ನಂಗ ಎನ್ನಂಗದಲ್ಲಿ ಪ್ರೇರಿಸಿ
ನಿನ್ನಂಗ ಎನ್ನಂಗದಲ್ಲಿ ಪ್ರೇರಿಸಿ
ನಿನ್ನರಿವು ಎನ್ನ ಆತ್ಮದಲ್ಲಿ ನಿಂದು ಅರಿವಹನ್ನಕ್ಕ
ನನಗೂ ನಿನಗೂ ತತ್ತುಗೊತ್ತು.
ಗೋರಕ್ಷಪಾಲಕ ಮಹಾಪ್ರಭು
ಸಿದ್ಧಸೋಮನಾಥ ಲಿಂಗವು ಸರಿ ಹುದುಗು. ॥ ೬ ॥

೩೯೭

ಬ್ರಹ್ಮಾಂಡದಲ್ಲಿ ಒಂದು ಪಿಂಡ ಹುಟ್ಟಿ
ಕರ್ಮಾಂಡದಿಂದ ಬೆಳೆವುತ್ತಿದೆ ನೋಡಾ!

ವಸುದಳವೆಂಬ ತೆರಲಿವಿಡಿದು ನಡೆವುತ್ತಿರಲಾಗಿ,
ಮಹೀತಳಸ ಜಡೆ ಸೀದು ಮರೀಚಿಕನ ಶಿರ ಬೆಂದು
ರುದ್ರನ ತ್ರಿವಿಧ ಕಣ್ಣು ಮುಚ್ಚಿತ್ತು.
ಇಂತಿವು ನಿರ್ಧರವಾದಲ್ಲಿ ಅರಿಗೊಡಲಿಲ್ಲ.
ಗೋರಕ್ಷಪಾಲಕ ಮಹಾಪ್ರಭು ಸಿದ್ಧಸೋಮನಾಥ ಲಿಂಗಕ್ಕೆ
ಇದಿರಿಲ್ಲಾ ಎನುತಿರ್ದೆ. ॥ ೭ ॥

೩೯೮

ಬಿಸಿಲ ಕಹರು ಮಂಜಿನ ಮುಂಡಿಗೆಯ ನೆಟ್ಟು
ಮನೆ ಒಲೆಯದಂತೆ ಅನಲನ ತೊಲೆಯ ಹಾಕಿ
ಮಳೆಯ ಗಳು ಬೀಸಿ, ಕೆಂಡದ ಹಂಜರಗಟ್ಟು ಕಟ್ಟಿ,
ಹಿಂಡುಗಟ್ಟಿಗೆ ಗಳುವಿನ ಸಂದಿಯಲ್ಲಿ ಅಡಗಿತ್ತು.
ಅನಿಲನ ಹುಲ್ಲು ಹೊದಿಸಿ ಮನೆ ಹೊಲಬಾಯಿತ್ತು.
ನೆಲಗಟ್ಟು ಶುದ್ಧವಿಲ್ಲಾಯೆಂದು
ಗೋರಕ್ಷಪಾಲಕ ಮಹಾಪ್ರಭು ಸಿದ್ಧಸೋಮನಾಥ ಲಿಂಗವು
ಆ ಮನೆಗೆ ಒಕ್ಕಲು ಬಾರ. ॥ ೮ ॥

೩೯೯

ರಸವಾದಂಗಳ ಕಲಿತಲ್ಲಿ ಲೋಹಸಿದ್ಧಿಯಲ್ಲದೆ
ರಸಸಿದ್ಧಿಯಾದುದಿಲ್ಲ.
ನಾನಾ ಕಲ್ಪಯೋಗ ಅದೃಶ್ಯಕರಣಂಗಳ ಕಲಿತಲ್ಲಿ
ಕಾಯಸಿದ್ಧಿಯಲ್ಲದೆ ಆತ್ಮಸಿದ್ಧಿಯಾದುದುಂಟೆ?
ನಾನಾ ವಾಗ್ವಾದಂಗಳಿಂದ ಹೋರಿ
ಮಾತಿನ ಮಾಲೆಯಾಯಿತಲ್ಲದೆ
ಆತ್ಮನಿಹಿತವಾದುದಿಲ್ಲ.
ನೀ ನಾನೆಂದಲ್ಲಿ ನೀನು ನಾನಾದೆಯಲ್ಲದೆ
ನಾನು ನೀನಾದುದಿಲ್ಲ.
ಗೋರಕ್ಷಪಾಲಕ ಮಹಾಪ್ರಭು
ಸಿದ್ಧಸೋಮನಾಥ ಲಿಂಗವಾದೆಯಲ್ಲದೆ
ಲೀಯವಾಗಿ ಆ ಲಿಂಗನೇ ಆದುದಿಲ್ಲ. ॥ ೯ ॥

೪೦೦

ವಿಷಕ್ಕೆ ಅಂಜುವರಲ್ಲದೆ ಸರ್ಪಂಗೆ ಅಂಜುವರುಂಟೆ?
ಕೊಲುವ ವ್ಯಾಘ್ರಂಗೆ ಅಂಜುವರಲ್ಲದೆ
ಸುಲಿದ ಬಣ್ಣಕ್ಕೆ ಅಂಜುವರುಂಟೆ?
ಅರಿವು ಸಂಪನ್ನರಲ್ಲಿ ಇದಿರೆಡೆಯಡಗಬೇಕಲ್ಲದೆ
ಬರುಕಾಯದ ವರುಶನ ಬಿರುಬರಲ್ಲಿ ಉಂಟೆ?
ನೆರೆಯರಿವಿನ ಹೊಲಬು ಕಾಯಕಾಂಡ ಕರ್ಮಕಾಂಡಿಗಳಲ್ಲಿ
ಜ್ಞಾನಹೀನ ಪಾಷಂಡಿಗಳಲ್ಲಿ ಆವ ಭಾವದ ಮಾರ್ಗವನು
ನಿಧಾನಿಸಿ ಉಪೇಕ್ಷಿಸಲಿಲ್ಲ.
ಗೋರಕ್ಷಪಾಲಕ ಮಹಾಪ್ರಭು
ಸಿದ್ಧಸೋಮನಾಥ ಲಿಂಗವನರಿವವರಲ್ಲಿಯಲ್ಲದೆ. ॥ ೧೦ ॥

೪೦೧

ಒಟ್ಟಿನ ಲೆಪ್ಪದಲ್ಲಿ ಚಿತ್ರದ ಕರಚರಣಾದಿಗಳ ಮಾಡಿ
ತುಪ್ಪದ ಮಧುರದ ಸಾರವ ಕೂಡಿ
ಸುಟ್ಟು ಮೆದ್ದಲ್ಲಿ ಕಿಚ್ಚಿನಲ್ಲಿ
ಮತ್ತೆ ಕೈಕಾಲಿನ ಚಿತ್ರದ ಬಗೆಯುಂಟೆ?
ಇದು ನಿಶ್ಚಯ ವಸ್ತು ಸ್ವರೂಪು.
ಮರ್ತ್ಯದ ದೃಕ್ಕು ದೃಶ್ಯಕ್ಕೆ ನಿಶ್ಚಯವಾಗಿಹನು.
ಏಕಲಿಂಗ ನಿಷ್ಠೆವಂತರಲ್ಲಿ ಕಟ್ಟಳೆಯಾಗಿಹನು.
ಆತ್ಮಲಕ್ಷ ನಿರ್ಲಕ್ಷ
ಗೋರಕ್ಷಪಾಲಕ ಮಹಾಪ್ರಭು
ಸಿದ್ಧ ಸೋಮನಾಥ ಲಿಂಗವು. ॥ ೧೧ ॥

# ಘಟ್ಟಿವಾಳಯ್ಯನ ವಚನ

೪೦೨

ಅಂಗದಲ್ಲಿ ಅರ್ಪಿತವ ಮಾಡಿ ಪ್ರಸಾದಿ ನಾವೆಂಬವಂಗೆ
ಹಿಂಗದು ನೋಡಾ! ತನು ಸೂತಕ ಮನ ಸೂತಕ.
ಪ್ರಾಣದಲ್ಲಿ ಸಿಲುಕದು ತನುವಿನಲ್ಲಿರದು.
ಚಿಕ್ಕಯ್ಯಪ್ರಿಯ ಸಿದ್ಧಲಿಂಗ ಇಲ್ಲ ಇಲ್ಲ ನಿಲ್ಲು ಮಾಣು. ॥ ೧ ॥

೪೦೩

ಅಂಗವ ಬಂಧಿಸಿದಲ್ಲಿ ನಾ ನೊಂದುದಿಲ್ಲ.
ಅದು ಮಲದೇಹ, ಮಾಯೆಯ ಸೊಮ್ಮು.
ಲಿಂಗವ ತೆಗೆದೆಹೆನೆಂದಡೆ ಅದು ಜಗದ ಕುರುಹು;
ಅದು ನನ್ನದಲ್ಲ.
ಆ ಗುಣ ನಿಮ್ಮ ಸಂದೇಹಕ್ಕೊಳಗಾಯಿತ್ತು.
ಎನಗಿನ್ನಾವ ಉಭಯದ ಹಂಗಿಲ್ಲ.
ಚಿಕ್ಕಯ್ಯಪ್ರಿಯ ಸಿದ್ಧಲಿಂಗ ಇಲ್ಲ ಇಲ್ಲ ಎಂದೆ. ॥ ೨ ॥

೪೦೪

ಅಂಡಜ ಮುಗ್ಧೆಯ ಮಕ್ಕಳಿರಾ,
ಕೆಂಡದ ಮಳೆ ಕರೆವಲ್ಲಿ
ನಿಮ್ಮ ಹಿಂಡಿರು ಹಳುಹೊಕ್ಕು ಹೋದಿರಲ್ಲಾ!
ಜಂಗಮವೆಂಬುದಕ್ಕೆ ನಾಚಿರಿ.
ನಿಮ್ಮ ಕಂಗಳ ಹಿಂಡಿರ ತಿಂಬಳೆಂಬುದನರಿಯಿರಿ.
ಅವಳು ಒಮ್ಮೆ ತಿಂಬಳು ಒಮ್ಮೆ ಕರುಣಿಸಿ ಬಿಡುವಳು.
ಅವಳು ತಿಂದು ತಿಂದು ಉಗುಳುವ ಬಾಯೊಳಗಣದೆಲ್ಲಾ ಜಂಗಮವೆ?
ಲೋಕವೆಲ್ಲಾ ಅವಳು.

ಅವಳು ವಿರಹಿತವಾದ ಜಂಗಮವಾರೈ ಬಸವಣ್ಣ?
ಅವಳು ವಿರಹಿತವಾದ ಭಕ್ತರಾರೈ ಬಸವಣ್ಣ?
ಅವಳ ಮಕ್ಕಳು ನಿಸ್ನ ಕಯ್ಯಲ್ಲಿ
ಆರಾಧಿಸಿಕೊಂಬ ಜಂಗಮ ಕಾಣ್ಯೆ ಬಸವಣ್ಣಾ!
ಅವಳು ವಿರಹಿತವಾದ ಚಿಕ್ಕಯ್ಯಪ್ರಿಯ ಸಿದ್ಧಲಿಂಗನಲ್ಲದಿಲ್ಲ,
ನಿಲ್ಲು ಮಾಣು. ॥ ૩ ॥

೪೦೫

ಅಖಂಡಿತ ಅಪ್ರತಿಮ ಅದ್ವಯ ಸತ್ಯ ನಿತ್ಯ
ಸಚ್ಚಿದಾನಂದ ಸ್ವರೂಪಮಪ್ಪ ಜ್ಯೋತಿರ್ಲಿಂಗದೊಳಗೆ
ತಾನೆಂಬ ಕುರುಹಳಿದು ಅನನ್ಯ ಪರಿಪೂರ್ಣವಾಗಿಪ್ಪ
ಮಹಾಮಹಿಮಂಗೆ ತಾನೆಂಬುದಿಲ್ಲ, ಇದಿರೆಂಬುದಿಲ್ಲ,
ಏನೆಂಬುದು ಮುನ್ನವೇ ಇಲ್ಲ.
ಆ ಭಾವ ನಷ್ಟವಾದಲ್ಲಿ
ಚಿಕ್ಕಯ್ಯಪ್ರಿಯ ಸಿದ್ಧಲಿಂಗ ನಾನೂ ಇಲ್ಲ, ನೀನೂ ಇಲ್ಲ. ॥ ೪ ॥

೪೦೬

ಅರ್ತಿಗೆ ಕಟ್ಟಿದ ಲಿಂಗ ಕೈಯೊಳಗಾಯಿತ್ತು.
ನಿಶ್ಚಯದ ಲಿಂಗ ಆರ ಗೊತ್ತಿಗೂ ಸಿಕ್ಕದು.
ಆ ಘನಲಿಂಗ ಉಳ್ಳನ್ನಕ್ಕ ನಾ ಜಂಗಮ, ನೀವು ಜಂಗುಳಿಗಳು.
ಎನಗಿನ್ನಾವ ಭೀತಿಯಿಲ್ಲ.
ಚಿಕ್ಕಯ್ಯಪ್ರಿಯ ಸಿದ್ಧಲಿಂಗ ಇಲ್ಲ ಇಲ್ಲ ಎಂದೆ. ॥ ೫ ॥

೪೦೭

ಅನಿಮಿಷನ ಕೈಯ ಲಿಂಗವನಲ್ಲಮ ಕೊಂಡುದಿಲ್ಲಾಗಿ,
ಆದಿಯಲ್ಲಿ ಬಸವಣ್ಣಂಗೆ ಗುರುಲಿಂಗವಿಲ್ಲಾಗಿ,
ಬಸವ-ಚೆನ್ನಬಸವಂಗೆ ಕಾರಣವಿಲ್ಲಾಗಿ,
ಇವರಾರೆಂಬುದ ಕೇಳಿದ್ದು ಇಲ್ಲ ಇಲ್ಲಾ ಎಂದನು.
ಇವರಿಬ್ಬರ ಸಾಹಿತ್ಯ ಇಲ್ಲೆಂಬುದ ಕಂಡು
ಚಿಕ್ಕಯ್ಯಪ್ರಿಯ ಸಿದ್ಧಲಿಂಗ ಇಲ್ಲ ಇಲ್ಲ ಎಂದನು. ॥ ೬ ॥

೪೦೮

ಅಬ್ಧಿಯ ಘೋಷವೆದ್ದು
ನಿರ್ಝರ ನಿರ್ವೇಗದಿಂದ ಅಬ್ಬರಿಸಿ ಬರುವಾಗ
ಅದನೊಬ್ಬರು ಹಿಡಿದ[ರುಂಟೆ]?
ಆಕಾಶದ ಸಿಡಿಲು ಆರ್ಭಟದಿಂದ ಬಡಿವಲ್ಲಿ
ತಾಕು ತಡೆಯುಂಟೆ?
ಮಹಾದ್ಭುತವಾದ ಅಗ್ನಿಯ ಮುಂದೆ
ಸಾರವರತ ತೃಣಕಾಷ್ಠವಿ[ದ್ದುದುಂ]ಟೆ ?
ತಾ ಸರ್ವಮಯವಾದ ನಿಃಕಳಂಕ ನಿರಂಜನ ಐಕ್ಯಾನುಭಾವಿಗೆ
ಅಂಡ ಪಿಂಡ ಬ್ರಹ್ಮಾಂಡ ಅಬ್ಧಿ ಆಕಾಶ ಆತ್ಮನೆಂದುಂಟೆ?
ಚಿಕ್ಕಯ್ಯಪ್ರಿಯ ಸಿದ್ಧಲಿಂಗ ಇಲ್ಲ ಇಲ್ಲ ನಿಲ್ಲು ಮಾಣು.॥ ೭ ॥

೪೦೯

ಅಯ್ಯಾ, ಅಂತರಂಗದಲ್ಲಿ ಅಷ್ಟಮಲಂಗಳಿಗೆ ಮೋಹಿಸಿ,
ಬಹಿರಂಗದಲ್ಲಿ ಭಕ್ತಿ-ಜ್ಞಾನ-ವೈರಾಗ್ಯ-ಷಟ್ಸ್ಥಲದ ಸುದ್ದಿಯ ಹೇಳಿ,
ದಶಾವತಾರದಾಟವ ತೊಟ್ಟಂತೆ ಗುರುಮುಖವಿಲ್ಲದೆ
ವಿಭೂತಿ ರುದ್ರಾಕ್ಷಿ ಶಿವಲಿಂಗ ಲಾಂಛನವ ಧರಿಸಿ,
ಒಳಗೆ ಶುದ್ಧವಿಲ್ಲದೆ ಬರಿದೆ
ಶಿವಪ್ರಸಾದದ ಸುದ್ದಿಯ ಹೇಳುವವರಲ್ಲಿ
ಅಷ್ಟಾವರಣ ಪರಿಚಾರವಿಲ್ಲ ನೋಡ!
ತನ್ನಂತರಂಗ ಬಹಿರಂಗದಲ್ಲಿ ಚಿಜ್ಯೋತಿರ್ಲಿಂಗವೆಂಬ ರಮಣನ
ಸದ್ಗುರುಮುಖದಿಂ ಕೂಡಿ ಎರಡಳಿದು,
ಆ ಲಿಂಗದ ಚಿಚ್ಚೈತನ್ಯವೆ ನಿರಂಜನ ಜಂಗಮವೆಂದು
ಆ ಜಂಗಮವೆ ತಾನೆಂದರಿದು,
ತನ್ನ ಚಿತ್ಕಳೆಯ ಚಿದ್ವಿಭೂತಿ-ರುದ್ರಾಕ್ಷಿ-ಲಾಂಛನ,
ತನ್ನ ಪರಮಾನುಭಾವವೆ ಮಹಾಮಂತ್ರ,
ತನ್ನ ನಿಜಾನಂದವೆ ಪಾದೋದಕ-ಪ್ರಸಾದ,
ತನ್ನ ಸತ್ಯ ಸದಾಚಾರ ನಡೆನುಡಿಯೆ ಪರಮ ಕೈಲಾಸ!
ಇಂತು ಪ್ರಮಥರು ಆಚರಿಸಿದ ಭೇದವ ತಿಳಿಯದೆ
ಬರಿದೆ ಅಹಂಕರಿಸಿ
ಗುರುಸ್ಥಲ, ಚರಸ್ಥಲ, ಪರಸ್ಥಲ, ಶಿವಭಕ್ತಿ, ಶಿವಭಕ್ತ, ಶಿವಶರಣ,
ಶಿವಪ್ರಸಾದಿಗಳೆಂದು ವಾಗದ್ವೈತವ ನುಡಿವವರಲ್ಲಿ

ಪರತತ್ತ್ವಸ್ವರೂಪ ಚಿಕ್ಕಯ್ಯಪ್ರಿಯ ಸಿದ್ಧಲಿಂಗ
ಇಲ್ಲ ಇಲ್ಲ ಎಂದೆ! ॥ ೮ ॥

೪೧೦

ಅಯ್ಯಾ, ಅನಾದಿ ಭಕ್ತ ಜಂಗಮದ ವಿವರವೆಂತೆಂದಡೆ:
ಭಕ್ತನಂಗಮನಪ್ರಾಣಂಗಳೆಲ್ಲ ಭಸ್ಮ ಘುಂಟಿಕೆಯಂತೆ!
ಜಂಗಮದಂಗ ಮನಪ್ರಾಣಂಗಳೆಲ್ಲ ರುದ್ರಾಕ್ಷಿಯಮಣಿಯಂತೆ!
ಭಕ್ತನಂಗತ್ರಯಂಗಳು ಪಂಚಲೋಹದಂತೆ!
ಜಂಗಮದಂಗತ್ರಯಂಗಳು ಮೃತ್ತಿಕಾಭಾಂಡದಂತೆ!
ಭಕ್ತನಂಗತ್ರಯಂಗಳು ಭಂಗಾರದಂತೆ!
ಜಂಗಮದಂಗತ್ರಯಂಗಳು ಮೌಕ್ತಿಕದಂತೆ!
ಭಕ್ತನಂಗತ್ರಯಂಗಳಲ್ಲಿ ನಡೆನುಡಿ ತಪ್ಪಿದಡೆ
ಪ್ರಾಯಶ್ಚಿತ್ತವುಂಟಲ್ಲದೆ
ಜಂಗಮದಂಗತ್ರಯಂಗಳಲ್ಲಿ ನಡೆನುಡಿ ತಪ್ಪಿದಡೆ
ಪ್ರಾಣವೆ ಪ್ರಾಯಶ್ಚಿತ್ತವಲ್ಲದೆ ಪೂಜೆ ಆಚಾರಕ್ಕೆ
ಯೋಗ್ಯವಲ್ಲ ಕಾಣಾ!
ಚಿಕ್ಕಯ್ಯಪ್ರಿಯ ಸಿದ್ಧಲಿಂಗ ಇಲ್ಲ ಇಲ್ಲ ಎಂದೆ! ॥ ೯ ॥

೪೧೧

ಅಯ್ಯಾ, ಆದಿ ಅನಾದಿಯಿಂದತ್ತತ್ತ ಮೀರಿ ತೋರುವ
ನಿತ್ಯ ನಿರಂಜನ ಗುರು-ಲಿಂಗ-ಜಂಗಮ ಶಿವಶರಣರ
ಸತ್ಯ ಸನ್ಮಾರ್ಗದ ಗೊತ್ತಿನ ಮರ್ಯಾದೆಯನರಿಯದೆ
ಮರ್ತ್ಯದ ಜಡಜೀವಿಭವಿಪ್ರಾಣಿಗಳ ಹಾಂಗೆ
ಗುಹ್ಯಲಂಪಟಕಿಚ್ಚೈಸಿ ದಾಸಿ ವೇಶಿ ಸೂಳೆ ರಂಡೆ ತೊತ್ತು ಗೌಡಿಯರ
ಪಟ್ಟ ಉಡಿಕೆ ಸೋವಿಯೆಂದು ಮಾಡಿಕೊಂಡು ಭುಂಜಿಸಿ,
ಷಟ್ಸ್ಥಲ ಬ್ರಹ್ಮಾನುಭಾವವ ಕೇಳಿ ಹೇಳುವ
ಮೂಳ ಬೊಕ್ಕಿಯರ ಕಂಡು ಎನ್ನ ಮನ ನಾಚಿತ್ತು ಕಾಣೆ!
ಅಪ್ಪ ನೀಲವ್ವನ ಮೋಹದ ಮಗಳೆ!
ಅಪ್ಪ ಬಸವಣ್ಣನ ಸುಚಿತ್ತದ ಪು[ತ್ರಿಯೆ]!
ನಿಷ್ಕಳಂಕ ಸದ್ಗುರುಪ್ರಭುದೇವರ ಸತ್ಯದ ಸೊಸೆಯೆ!
ಅಣ್ಣ ಮಡಿವಾಳಪ್ಪನ ಭಾವ, ಚನ್ನಮಲ್ಲಿಕಾರ್ಜುನನರ್ಧಾಂಗಿಯೆ!
ಚಿಕ್ಕಯ್ಯಪ್ರಿಯ ಸಿದ್ಧಲಿಂಗನೊಡಹುಟ್ಟಿದವಳೆ!
ಎನ್ನಕ್ಕ ಮಹಾದೇವಿ ಕೇಳವ್ವ!
ಮರ್ತ್ಯದ ಜಡಜೀವಿ ಭ್ರಷ್ಟರ ಬಾಳಿವೆ ಎಂದೆ! ॥ ೧೦ ॥

೪೧೨

ಅರಿವರಿವಿನ ಮುಂದಣ ಅರಿವು ಅದೇನೊ?
ಅರಿವಿನ ಎರಡರ ಅರಿವು ನಿಃಪತಿ!
ಮಾಯೆಯ ಮುಂದಡಗಿತ್ತಲ್ಲಾ!
ಅರಿದಡೆ ಹಿಂದಾಯಿತ್ತು, ಮರೆದಡೆ ಮುಂದಾಯಿತ್ತು.
ಚಿಕ್ಕಯ್ಯಪ್ರಿಯ ಸಿದ್ಧಲಿಂಗ ಇಲ್ಲ ಇಲ್ಲ ನಿತ್ಯ ಸಾರಾ. ॥ ೧೧ ॥

೪೧೩

ಅರಿವಿಂಗೆ ಸಿಕ್ಕದುದ ನೆನೆಯಲಮ್ಮಬಹುದೆ ಅಯ್ಯಾ!
ನೆನಹಿಂಗೆ ಬಾರದುದ ಕಾಬುದು ಹುಸಿ.
ಮುಟ್ಟಿ ಪೂಜಿಸುವ ಮಾತು ಮುನ್ನವೇ ದೂರ.
ಚಿಕ್ಕಯ್ಯಪ್ರಿಯ ಸಿದ್ಧಲಿಂಗ ಇಲ್ಲ ಇಲ್ಲ, ನಿಲ್ಲು ಮಾಣು. ॥ ೧೨ ॥

೪೧೪

ಅರಿವೆಂಬ ಅಲಗಿಂಗೆ ಕುರುಹಿನ ಮೋಹಳ ನೋಡಾ!
ಒರೆ ಹರಿದು ಒಳಗನಿರಿಯಲು ಬಲ್ಲವರಿಲ್ಲ.
ಶಂಕೆ ಸಮ್ಯಕ್ಕಿಲ್ಲಾಗಿ ಅಂತಿಂತೆನಲಿಲ್ಲ.
ಅಂಕವ ಕಾಣದೆ ಬೇಳುವೆಗೊಳಗಾದಿರಲ್ಲಾ!
ನಿರ್ಲೇಪವಹ ಅಂಕಕ್ಕೆ ಹರಿವರಿವುದೆ ಗೆಲವು?
ಚಿಕ್ಕಯ್ಯಪ್ರಿಯ ಸಿದ್ಧಲಿಂಗ ಇಲ್ಲ ಇಲ್ಲವೆಂಬೆನು. ॥ ೧೩ ॥

೪೧೫

ಅವನಿ ಅಂಬರ ಉದಯಿಸದಂದು
ಒಂದು ತುಂಬಿದ ಕೊಡನ ಕಂಡೆ.
ಆ ಕೊಡನನೆತ್ತಿದವರಿಲ್ಲ, ಇಳುಹಿದವರಿಲ್ಲ.
ಆ ಕೊಡ ತುಳುಕಿದಲ್ಲಿ ಒಂದು ಬಿಂದು ಕೆಲಕ್ಕೆ ಸಿಡಿಯಿತ್ತ ಕಂಡೆ.
ಆ ಬಿಂದುವಿನಲ್ಲಿ ಅನಂತ ದೇವತಾಮೂರ್ತಿಗಳು ಹುಟ್ಟಿತ್ತ ಕಂಡೆ
ಇದು ಕಾರಣ, ಚಿಕ್ಕಯ್ಯಪ್ರಿಯ ಸಿದ್ಧಲಿಂಗದ
ಲೀಲಾಮೂಲವ ಕಂಡು ಇಲ್ಲ ಇಲ್ಲವೆನುತಿರ್ದೆನು. ॥ ೧೪ ॥

೪೧೬

ಅಷ್ಟವಿಧಾರ್ಚನೆ ಷೋಡಶೋಪಚಾರ ಹುಸಿ ಕಾಣಿರೇ.
ಗಾಣದೆತ್ತಿನಂತೆ ಮೆಟ್ಟಿದ ಹಜ್ಜೆಯ ಮೆಟ್ಟುವ
ಭಕ್ತನ ಪರಿಯ ನೋಡಾ!
ಕೊಂಬಲ್ಲಿ ಐದುವನು, ಕೊಡುವಲ್ಲಿ ನಾಲ್ಕುವನು
ಒಂಬತ್ತರಿಂದಲ್ಲಿ ಭಕ್ತಿಭಾಗಕ್ಕಿನ್ನೆಂತೋ?
ಮೂರ್ತಿವಿಡಿದು ಮೂರ್ತಿಯನರಿಯರು.
ಮಾರುವರು ಗುರುಲಿಂಗವನು ತ್ರಿವಿಧಕ್ಕೆ
ಚಿಕ್ಕಯ್ಯಪ್ರಿಯ ಸಿದ್ಧಲಿಂಗ ಇಲ್ಲ ಇಲ್ಲ. ॥ ೧೫ ॥

೪೧೭

ಅಸ್ಥಿಗತರು ಚರ್ಮಗತರು ರುಧಿರಗತರು ಮಾಂಸಗತರು
ಗತವಾದರೊ ಗತವಾದರೊ!
ಅತಿಶಯದ ಅನುಪಮದ ನಿಜವನರಿಯದೆ!
ಮನ ಮುಟ್ಟದ ಲಿಂಗವ ಉಳಿ ಮುಟ್ಟಬಲ್ಲುದೆ?
ಚಿಕ್ಕಯ್ಯಪ್ರಿಯ ಸಿದ್ಧಲಿಂಗ ಇಲ್ಲ ಇಲ್ಲ. ॥ ೧೬ ॥

೪೧೮

ಆ ಉದಯದಲ್ಲಿ ನಿಚ್ಚ ನಿಚ್ಚ ಹುಟ್ಟಿದ ಪ್ರಾಣಿ
ಅಸ್ತಮಾನದಲ್ಲಿ ನಿಚ್ಚ ನಿಚ್ಚ ಮರಣವಾಯಿತ್ತಲ್ಲಾ!
ಇದರಂತುವನರಿಯದೆ ಅಜ್ಞಾನಿಗಳಾಗಿ ಹೋದರಲ್ಲಾ! ಎಲ್ಲರು.
ಚಿಕ್ಕಯ್ಯಪ್ರಿಯ ಸಿದ್ಧಲಿಂಗ ಇಲ್ಲ ಇಲ್ಲ ನಿಲ್ಲು ಮಾಣು. ॥ ೧೭ ॥

೪೧೯

ಆಗಿ ಹೋಗದಿರ್ದಡೆ,
ಹೋಗಿ ಬಾರದಿರ್ದಡೆ,
ಸತ್ತು ಸಾಯದಿರ್ದಡೆ,
ಶಬುದ ನಿಃಶೂನ್ಯವ ಬಲ್ಲವರಾರು ಹೇಳಾ!
ಚಿಕ್ಕಯ್ಯಪ್ರಿಯ ಸಿದ್ಧಲಿಂಗ
ಉಂಟಿಲ್ಲೆಂಬೆಡೆಯ ಬಲ್ಲವರಾರು ಹೇಳಾ! ॥ ೧೮ ॥

೪೨೦

ಆಚಾರ್ಯ ಕುಟಿಲವ ಕೊಟ್ಟು ಹೋದನಲ್ಲಾ!
ಮಹೇಂದ್ರಜಾಲದೊಳಗೆ ಭ್ರಾಂತರಾದರೆಲ್ಲರು.
ಆಚಾರ್ಯನ ಸುಟ್ಟುರುಹಿದೆ, ಕುಟಿಲವ ಮೆಟ್ಟಿಯೊರಸಿದೆ!
ಎನಗೆ ಆಚಾರ್ಯನಿಲ್ಲದೆ ಹೋಯಿತು!
ಚಿಕ್ಕಯ್ಯಪ್ರಿಯ ಸಿದ್ಧಲಿಂಗ ಇಲ್ಲ ಇಲ್ಲ, ನಿಲ್ಲು ಮಾಣು.॥ ೧೯ ॥

೪೨೧

ಆಯತವಿಲ್ಲದ ಮಠದಲ್ಲಿ
ಅಗ್ನಿಯಿಲ್ಲದೆ ಬೋನವ ಮಾಡಿ
ಭಾವವಿಲ್ಲದೆ ಶಿವಕಾರ್ಯಂಗಳು
ಭೋಜನವಿಲ್ಲದೆ ಅರಿಸಿ ಕೊಟ್ಟಡೆ
ಆಪ್ಯಾಯನವಾರಿಗೂ ಅಡಸದಿರ್ದುದ ಕಂಡು
ಚಿಕ್ಕಯ್ಯಪ್ರಿಯ ಸಿದ್ಧಲಿಂಗ ಇಲ್ಲ ಇಲ್ಲಾ ಎಂದೆನು. ॥ ೨೦ ॥

೪೨೨

ಆರನೂ ಹಾರದ ಲಿಂಗವ ತೋರುವಾತ ಗುರುವಲ್ಲ.
ನೆಳಲಲಿಪಿಯ, ಕರಣಾದಿಗಳ ಲೀಯವ ಮುಂದೆ ಬಲ್ಲವರಾರೊ?
ಶಿಲೆಯ ಶಬುದದ ಉಲುಹಿನಂತುಟ ನಿಲಿಸಿ ತೋರಲು,
ರೂಪನಲ್ಲ.
ಕಲುಮನದ ಅಶುದ್ಧಕಾರಿಗಳಿಗಿನ್ನೆಂತೊ?
ನಾಟಕ ಜನಂಗಳೆಲ್ಲ ಕಂಡೆವೆನುತ ಕೋಟಲೆಗೊಳುತ್ತಿದ್ದರು.
ಈ ನೋಟದೊಳಗೆ ಚಿಕ್ಕಯ್ಯಪ್ರಿಯ ಸಿದ್ಧಲಿಂಗ
ಇಲ್ಲ ಇಲ್ಲ ಇಲ್ಲ ಇನ್ನೆಂತೊ? ॥ ೨೧ ॥

೪೨೩

ಆರು ಪರಿಯಲ್ಲಿ ಹೆಸರಿಟ್ಟುಕೊಂಡವರ ನೋಡ ಬಂದೆ!
ಆರೂಢವಿಲ್ಲದೆ ಲಿಂಗಾರ್ಚನೆಯ ಮಾಡುವರನೆನಬಂದೆ!
ಆರೂಢ ಲಿಂಗಾರ್ಚನೆಯ ಮಾಡಿ ಪ್ರಸಿದ್ಧಪ್ರಸಾದವ
ಗ್ರಹಿಸಲರಿಯದವರಿಗೆ
ರೂಢಿಯಲ್ಲಿ ಚಿಕ್ಕಯ್ಯಪ್ರಿಯ ಸಿದ್ಧಲಿಂಗ ಇಲ್ಲ
ಇಲ್ಲವೆನಬಂದೆ. ॥ ೨೨ ॥

೪೨೪

ಆಸೆಗಾಗಿ ವೇಷವ ಹೊತ್ತು ತಿರುಗುವ ವೇಷದ ಗಂಡ,
ಈಷಣತ್ರಯಕ್ಕಾಗಿ ಈಶನ ಪೂಜಿಸು ದಾಸರ ಗಂಡ,
ಇಷ್ಟನರಿದು ತನುವಿಗೆ ಆಸೆಯ ಮಾಡುವ
ಭಾಷೆವಂತರ ಗಂಡ.
ನಾನಂಜುವೆ ತ್ರಿವಿಧವ ಹಂಗಳಿದವರಿಗೆ,
ನಾನವರಿಗಿಳಿವ ಬಂಟ.
ಚಿಕ್ಕಯ್ಯಪ್ರಿಯ ಸಿದ್ಧಲಿಂಗ ಇಲ್ಲ ಇಲ್ಲ ಎಂದೆನು. ॥ ೨೩ ॥

೪೨೫

ಇರಿವ ಕೈದಿಂಗೆ ದಯ ಧರ್ಮದ ಮೊನೆ ಉಂಟೆ?
ಕಾಳೋರಗನ ದಾಡೆಯಲ್ಲಿ ಅಮೃತದ ಸುಧೆಯುಂಟೆ?
ಕೂಟವ ಕೂಡಿ ಸಮಯ ನೊಂದಲ್ಲಿ ಅಜಾತನ ಬಲ್ಲರೆ?
ಎನಗೆ ನಿಮ್ಮೊಳಗಿನ್ನೇತರ ಮಾತು?
ವೇಷಧಾರಿಗಳಲ್ಲಿ ನಿಮ್ಮ ಕೂಟಕ್ಕೆ ಹೊರಗು
ಚಿಕ್ಕಯ್ಯಪ್ರಿಯ ಸಿದ್ಧಲಿಂಗ ಇಲ್ಲ ಇಲ್ಲಾ ಎಂದೆ. ॥ ೨೪ ॥

೪೨೬

ಇರಿವುದು ಕಡಿವುದು ಕೊಲುವುದು
ಮಲದೇಹಿಗಳಿಗಲ್ಲದೆ ನಿರ್ಮಲದೇಹಿಗಳಿಗುಂಟೆ?
ಸಮಯ ಸಮುದ್ರದಂತಿರಬೇಕು.
ತಪ್ಪನರಸಿ ಶಿಕ್ಷಿಸುವನ್ನಬರ
ನರದೂತ ಕುಲಕ್ಕೆ ಪರಶಿವ ರೂಪುಂಟೆ?
ಆ ಪರವರಿಯ ನುಡಿದಡೆನಗೇನು?
ಚಿಕ್ಕಯ್ಯಪ್ರಿಯ ಸಿದ್ಧಲಿಂಗ ಇಲ್ಲ ಇಲ್ಲ ಎಂದೆ. ॥ ೨೫ ॥

೪೨೭

ಇಷ್ಟ ಬಾಹ್ಯವಾಯಿತ್ತೆಂದು ಸಮಯ ಒಪ್ಪದಿದೆ ನೋಡಾ!
ಅರಿವು ಬಾಹ್ಯವಾಗಿ ತ್ರಿವಿಧಕ್ಕೆ ಕಚ್ಚಾಡಲೇತಕ್ಕೆ?
ಚಿಕ್ಕಯ್ಯಪ್ರಿಯ ಸಿದ್ಧಲಿಂಗ ಇಲ್ಲ ಇಲ್ಲ ಎಂದೆ. ॥ ೨೬ ॥

೪೨೮

ಇಷ್ಟಲಿಂಗವ ತೆಕ್ಕೊಂಡಲ್ಲಿ ದೃಷ್ಟವಾಯಿತ್ತೆ ನಿಮಗೆ?
ಬಂಧಿಕಾರನ ಬಂಧನವ ಮಾಡೂದು
ಲಿಂಗದೇಹಿಗಳಿಗುಂಟೆ ಅಯ್ಯಾ.
ಜಗದಲ್ಲಿ ಉಂಡುಂಡು ಕೊಂಡಾಡುವವರಿಗೆ,
ಘನಲಿಂಗದ ಶುದ್ಧಿ ಏಕೆ?
ಚಿಕ್ಕಯ್ಯಪ್ರಿಯ ಸಿದ್ಧಲಿಂಗ ಇಲ್ಲ ಇಲ್ಲ ಎಂದೆ. ॥ ೨೭ ॥

೪೨೯

ಇಹವೆಂಬುದೇನೊ ತಾನೆಂಬುದನಳಿದ ಪರಮಗಂಭೀರಂಗೆ.
ಪರವೆಂಬುದೇನೊ ಪರಾತ್ಪರವೆಂಬುದೇನೊ?
ಇಹವೂ ಇಲ್ಲ ಪರವೂ ಇಲ್ಲ ಪರಾತ್ಪರವೂ ಇಲ್ಲ.
ಇದೇನು! ಏನೂ ಇಲ್ಲದ ಬಯಲು!
ಚಿಕ್ಕಯ್ಯಪ್ರಿಯ ಸಿದ್ಧಲಿಂಗ ಇಲ್ಲ ಇಲ್ಲ, ನಿಲ್ಲು ಮಾಣು. ॥ ೨೮ ॥

೪೩೦

ಉತ್ತರಕ್ಕೆ ನುಡಿವನ್ನಬರ ನಾನು ಚಿತ್ತದ ಕಲೆಯವನಲ್ಲ.
ಮದಮತ್ಸರಕ್ಕೆ ಹೋರುವನ್ನಬರ ನಾನು
ಕರಣೇಂದ್ರಿಯಂಗಳಿಗೆ ಹುತ್ತದ ಮೊತ್ತದವನಲ್ಲ.
ಮತ್ತೆ ಸಮಯದಲ್ಲಿ ಹೊತ್ತು ಹೋರಿಹೆನೆಂದಡೆ ನಾನು
ಸಂಸಾರದ ಕತ್ತಲೆಯವನಲ್ಲ.
ಎನ್ನ ನಿಶ್ಚಯದ ಗುಂಡು, ಎನ್ನ ಬಚ್ಚಬರಿಯ ಬಯಲಬೆಳಗು
ಚಿಕ್ಕಯ್ಯಪ್ರಿಯ ಸಿದ್ಧಲಿಂಗ ಇಲ್ಲ ಇಲ್ಲ ಎಂದೆ. ॥ ೨೯ ॥

೪೩೧

ಉತುಪಾತದ ಉತುಪತ್ಯದ ಬಹುಮುಖದ ಶಾಖೆಗಳೆಲ್ಲವೂ
ಮುಂದರಿಯದೆ ನಡೆಗೆಟ್ಟು ನಿಂದರಲ್ಲ.
ಹಿಂದರಿಯದೆ ಮುಂದರಿಯದೆ ಅಬ್ಬರದಬ್ಬರದವಂಗೆ
ಆರಿಗೆಯೂ ಅಳವಡದು ಭೀಕರ,
ನಿಷ್ಪತ್ತಿಗೆ ನಿರ್ಣಯ ಉಂಟು.
ಚಿಕ್ಕಯ್ಯಪ್ರಿಯ ಸಿದ್ಧಲಿಂಗ ಇಲ್ಲ ಇಲ್ಲ ಎಂದೆ. ॥ ೩೦ ॥

೪೩೨

ಉದುಮದಾಕ್ಷರದಲ್ಲಿ ಉರಿದು ಸಾವ ಪ್ರಾಣಿಗಳು
ಅಖಂಡ ಪರಿಪೂರ್ಣಜ್ಞಾನವನವರೆತ್ತ ಬಲ್ಲರೊ?
ಕುಲುಮೆಯಾಕಾರಕ್ಕೆ ಬಾಯಿಗೆ ಬಹವರೆಲ್ಲಾ
ಕಾಲನ ಕಮ್ಮಟಕ್ಕೆ ಗುರಿಯಾದರು.
ತತ್ವ ತೂರ್ಯಾತೀತದಿಂದತ್ತತ್ತಲಾದ ಅಘಟಿತ
ಚಿಕ್ಕಯ್ಯಪ್ರಿಯ ಸಿದ್ಧಲಿಂಗ ಇಲ್ಲ ಇಲ್ಲ ಎನುತಿದ್ದನು. ॥ ೩೧ ॥

೪೩೩

ಊರ್ಧ್ವಮುಖದ ಶಿವಾಲಯದೊಳಗೆ ಮಹಾದೇವರು.
ಆ ಮಹಾದೇವರ ಮುಂದಣ ನಂದಿಯ ನೋಟ
ವಿಪರೀತ ನೋಡಾ!
ಅದು ಬಂದು ಬಂದು ಪರಿವಾರದೇವತೆಗಳ
ಮೂಸಿಮೂಸಿ ನೋಡಿತ್ತು ನೋಡಾ!
ಆ ನಂದಿ ಆನಂದಲೀಲೆಯಾಡುತ್ತಿದ್ದುದು
ಆ ನಂದಿಯ ಆನಂದವ ಕಂಡು ಮಹಾದೇವರು ನಗುತ್ತಿರ್ದಡೆ
ಚಿಕ್ಕಯ್ಯಪ್ರಿಯ ಸಿದ್ಧಲಿಂಗ ಇಲ್ಲ ಇಲ್ಲ ಎಂದನು. ॥ ೩೨ ॥

೪೩೪

ಎಂಟರ ಸೆರಗಿನಲ್ಲಿಲ್ಲ, ಆರರ ಮೂರರಲ್ಲಿಲ್ಲ.
ನಾಲ್ಕರ ಐದರಲ್ಲಿಲ್ಲ, ಒಂಬತ್ತರೊಳಗೆ ಮುನ್ನಿಲ್ಲ.
ಅಳತೆಯ ಅಳೆಯಲಿಲ್ಲ, ಗುಣಿತವ ಗುಣಿಸಲಿಲ್ಲ.
ಸೆಣಸುವಡೆ ಪ್ರತಿಯಿಲ್ಲ.
ಅಪ್ರತಿಮ ಅಪ್ರತಿಮನನಿಂತು ಜಗದೊಳುಂಟೆಂದು
ಭ್ರಮಿಸುವ ಜನ ಮರುಳಿನ ವಾರ್ತೆಯ
ಚಿಕ್ಕಯ್ಯಪ್ರಿಯ ಸಿದ್ಧಲಿಂಗ ಇಲ್ಲ ಇಲ್ಲ ಇನ್ನೆಂತೊ? ॥ ೩೩ ॥

೪೩೫

ಎಂಬತ್ತು ನಾಲ್ಕು ಲಕ್ಷ ರತ್ನದ ವ್ಯವಹಾರಿಗಳು
ರತ್ನವ ಕೆಡಿಸಿ ಅರಸುತ್ತೈದಾರೆ ನೋಡಾ!
ರತ್ನ ಮಂಜಿನ ರಂಜನೆ, ಆಗರಕ್ಕೆ ಸಲ್ಲದು.

ಹುಟ್ಟಿ ಕೆಟ್ಟ ರತ್ನ ಕೆಟ್ಟ ಕೇಡಿಂಗಿನ್ನೆಂತೊ!
ಆಗುಹೋಗಿನ ನಿರ್ಣಯವನು ಸಾಗರ ನುಂಗಿತ್ತು.
ಚಿಕ್ಕಯ್ಯಪ್ರಿಯ ಸಿದ್ಧಲಿಂಗ ಇಲ್ಲ ಇಲ್ಲವೆಂದೆ. ॥ ೩೪ ॥

೪೩೬

ಎನಗೆ ಹಳ್ಳದ ಹೊಡೆಕೆಯೆ ಶಿವದಾರವಾಗಿ,
ಬೆಟ್ಟದ ಗುಂಡೆ ಲಿಂಗವಾಗಿ,
ಕಾಡಸೊಪ್ಪು ಹಾಕಿದ ಮಡಕೆಯ ಉದಕವೆ ಮಜ್ಜನವಾಗಿ
ಪೂಜಿಸುತ್ತಿದ್ದೆ.
ಬಸವನ ಮನೆಗೆ ಹೋಪ ವ್ರತಗೇಡಿಗಳ ನೋಡಿ
ಚಿಕ್ಕಯ್ಯಪ್ರಿಯ ಸಿದ್ಧಲಿಂಗ ಇಲ್ಲ ಇಲ್ಲ ಎನುತ್ತಿದ್ದೆ. ॥ ೩೫ ॥

೪೩೭

ಎಲೆ ನಾಥಾ, ಎಲೆ ನಾಥಾ,
ಅಂಗದಾಶ್ರಯವ ಮಾಡಿಕೊಂಡೆಯಲ್ಲಾ,
ಯಂತ್ರವಾಹಕ ಸಂಚನಾದೆಯಲ್ಲಾ.
ನಿನ್ನ ಸಂಚವ ಹರಿಬ್ರಹ್ಮಾದಿಗಳರಿಯರು,
ದಾನವ ಮಾನವರರಿಯರು, ಸಮಸ್ತ ಮೂರ್ತಿಗಳರಿಯರು,
ಸುಭಾಷಿತರು ಶಿವನಾಮಿಗಳರಿಯರು,
ಅಷ್ಟವಿಧಾರ್ಚಕರರಿಯರು, ವೇಷಭಾಷಿತರರಿಯರು,
ಸುಳುಹು ನಿಂದವರರಿಯರು,
ಜಡೆಯ ಮುಡಿಯ ಬೋಳರರಿಯರು,
ಆರ ತೊಟ್ಟವನೆ ಮೂರ ಸುಟ್ಟವನೆ ನಾಕನೆಂದವನೆ
ಎಂಟು, ಐದು, ಹತ್ತರಲ್ಲಿ ನಿತ್ಯನಾದೆಯಲ್ಲಾ!
ಶತಪತ್ರ ಪದದಲ್ಲಿ ನಿವಾಸಿಯಾದೆಯಲ್ಲಾ!
ಎನ್ನ ನಿನ್ನೆಡೆಗೆ ಏನೂ ಭೇದವಿಲ್ಲ ಸಲಿಸ,
ಚಿಕ್ಕಯ್ಯಪ್ರಿಯ ಸಿದ್ಧಲಿಂಗ ಇಲ್ಲ ಇಲ್ಲ. ॥ ೩೬ ॥

೪೩೮

ಎಲೆ ಪಂಚವಕ್ತ್ರ ನೀನೆನ್ನ ಸಂಚವ ಹಂಚಿಕೊ ಬಾರೋ!
ನಾ ನನ್ನ ಭಾಗವ ದೇವರಿಗೆ ಕೊಟ್ಟೆನು.
ನಿನ್ನ ಭಾಗವ ಕೊಂಡಡೆ ಎಮ್ಮ ದೇವರು ಕೊಂಡಾರು.

ಎಮ್ಮಿಂದ ಕೆಟ್ಟೆವೆನಬೇಡ ಕಂಡಯ್ಯಾ.
ಇವರಿಬ್ಬರ ಕಲಹದ ನಡುವೆ ಅಬ್ಬರವಾದಡೆ
ಚಿಕ್ಕಯ್ಯಪ್ರಿಯ ಸಿದ್ಧಲಿಂಗ ಇಲ್ಲ ಇಲ್ಲ ಎಂದೆನು. ॥ ೩೭ ॥

೪೩೯

ಏನಕ್ಕೆ ಆಯಿತ್ತು ಏನಕ್ಕೆ ಹೋಯಿತ್ತು
ಮತ್ತೇನಕ್ಕೆ ಉಂಟೆ?
ನೇಮಕ್ಕೆ ನಿಜ ನೆಲೆಗೊಳ್ಳದು.
ಚಿಕ್ಕಯ್ಯಪ್ರಿಯ ಸಿದ್ಧಲಿಂಗ ಇಲ್ಲ ಇಲ್ಲ. ॥ ೩೮ ॥

೪೪೦

ಏನೆಂದೂ ಎನಲಿಲ್ಲ ; ನುಡಿದು ಹೇಳಲಿಕ್ಕಿಲ್ಲ.
ನಿಜದಲ್ಲಿ ನಿಂದ ಚೆರಗ ಕುರುಹ ಹರಿವುದೆ ಮರುಳೆ?
ಹರಿದು ಹತ್ತುವುದೆ ಮರುಳೆ ಬಯಲು?
ಅದು ತನ್ನಲ್ಲಿ ತಾನಾದ ಬಯಲು; ತಾನಾದ ಘನವು.
ಇನ್ನೇನನರಸಲಿಲ್ಲ.
ಅದು ಮುನ್ನವೆ ತಾನಿಲ್ಲ.
ಚಿಕ್ಕಯ್ಯಪ್ರಿಯ ಸಿದ್ಧಲಿಂಗ ಇಲ್ಲ ಇಲ್ಲ. ॥ ೩೯ ॥

೪೪೧

ಒಂದು ಎರಡು ಮೂರು ನಾಲ್ಕು ಐದು
ಆರು ಏಳು ಎಂಟು ಒಂಬತ್ತು ಹತ್ತೆಂಬ ಮಾತು
ನಿಮಗೇಕೆ ಹೇಳಿರೆ.
ನಾದ ಮುನ್ನ ಉತ್ಪತ್ಯವೊ?
ಬಿಂದು ಮುನ್ನ ಉತ್ಪತ್ಯವೊ?
ನಾದ ಬಿಂದುವಿನ ಕುಳ ಸ್ಥಳಗಳ ಬಲ್ಲರೆ ನೀವು ಹೇಳಿರೆ.
ಈಡಾ ಪಿಂಗಳ ಸುಷುಮ್ನಾನಾಡಿಗಳ ಭೇದವ ಬಲ್ಲಡೆ,
ಚಿಕ್ಕಯ್ಯಪ್ರಿಯ ಸಿದ್ಧಲಿಂಗ ಇಲ್ಲ ಇಲ್ಲ , ನಿಲ್ಲು ಮಾಣು. ॥ ೪೦ ॥

೪೪೨

ಒಂದೆರಡು ಮೂರುವಿನ ಕುಂದು ಹೆಚ್ಚೆನಲಿಲ್ಲ.
ಸಂದೇಹವಳಿಯದೆ ಉಳಿದನು.

ನೊಂದು ನೋಯದ ನೋವು ಅಂದವಿಲ್ಲದ ಭೇದಿಗೆ ಇನ್ನೆಂತೊ!
ಅರಿಯದ ಮದ್ದನಾರನು ಬೇರೆ ಹೊರಗೇನೂ ಇಲ್ಲ ಇನ್ನೆಂತೊ!
ಮೂರು ಮಾತಿಂಗೆ ಸರಿ.
ಪ್ರತಿಯಿಲ್ಲದ ಪ್ರತಿಯ ಕಂಡೆನೆಂದು ಪದವಿಡುವವ ರೂಪನಲ್ಲ.
ಶ್ರುತಿಯಿಲ್ಲದ ಘನಕ್ಕಿನ್ನೆಂತೊ!
ಕಟ್ಟಾಳು ನಾಲ್ವರು ಬಿಟ್ಟಾಳು ಐವರ ದುಷ್ಟರೆಂದು
ಆರುವಿನ ದೆಸೆಯ ಹೊದ್ದ,
ಮುಟ್ಟನೇಳೆಂಟೊಂಬತ್ತರ ಸಂಗವನೊಲ್ಲ.
ಕೆಟ್ಟನಾ ಶರಣ, ಸಾಯದೆ ಸತ್ತನು!
ಮಡುವಿಲ್ಲದಗ್ಘವಣಿ ಕೊಡುವನಲ್ಲ ಶರಣ.
ಗಿಡುವೆಲ್ಲ ಪರಿಮಳ ಜ್ಞಾನಪುಷ್ಪ ಬಿಡದು.
ಚಿಕ್ಕಯ್ಯಪ್ರಿಯ ಸಿದ್ಧಲಿಂಗ ಇಲ್ಲ ಉಂಟೆಂದು
ಬಡಿವರು ಕೈಕಾಲ ಭ್ರಾಂತಳಿಯದವರು. ॥ ೪೧ ॥

೪೪೩

ಒಡೆದ ಮಡಕೆಗೆ ಸರಿಯಿಂದ ಸಂದು ಕೂಡುವುದೆ?
ದಗ್ಧವಾದ ಪಟ ಅಗಸರ ಕಲ್ಲಿಗೆ ಹೊದ್ದುವುದೆ?
ಬದ್ಧ ಭವಿಗಳೆಂದು ಬಿಟ್ಟ ಮತ್ತೆ ಸಮಯದ ಹೊದ್ದಿಗೆ ಏಕೆ?
ಚಿಕ್ಕಯ್ಯಪ್ರಿಯ ಸಿದ್ಧಲಿಂಗ ಇಲ್ಲ ಇಲ್ಲ ಎಂದೆ. ॥ ೪೨ ॥

೪೪೪

ಕಂಡು ಕಂಡು ಕಾಣಲುಂಟೆ ಅಯ್ಯಾ.
ಕೇಳಿ ಕಂಡಿಹೆನೆಂದಡೆ ಮನಸ್ಸು ನಾಚಿತ್ತು.
ನಾಚಿದ ಮನಸ್ಸಿಗೆ, ನೋಡಿದ ನೋಟಕ್ಕೆ
ಭಾವ ಬತ್ತಲೆಯಾಗದನ್ನಕ್ಕ
ಚಿಕ್ಕಯ್ಯಪ್ರಿಯ ಸಿದ್ಧಲಿಂಗ ಇಲ್ಲ ಇಲ್ಲ. ॥ ೪೩ ॥

೪೪೫

ಕಟ್ಟಿದ ಕೊಟ್ಟಿಗೆಯಲ್ಲಿ ಗುಬ್ಬಿ ಗೂಡನಿಕ್ಕದೆ?
ತೋಡಿದ ಬಾವಿಯಲ್ಲಿ ತೊತ್ತು ನೀರ ತಾರಳೆ?
ರಾಜಮಾರ್ಗದಲ್ಲಿ ಆರಾರೆಡೆಯಾಡರು?
ಅಂತೆ ಎನಗಿವರ ಭ್ರಾಂತಿಯಿಲ್ಲ.
ಚಿಕ್ಕಯ್ಯಪ್ರಿಯ ಸಿದ್ಧಲಿಂಗ ಇಲ್ಲ ಇಲ್ಲ ನಿಲ್ಲು ಮಾಣು.॥ ೪೪ ॥

೪೪೬

ಕರ್ಮವನಳಿದ ನಿರ್ಮಳಂಗೆ
ಭಾವಿಸುವ ಭಾವವಿಲ್ಲ.
ಇಲ್ಲೆಂಬುದು ಉಂಟೆಂಬುದು ತಾನೆ
ಚಿಕ್ಕಯ್ಯಪ್ರಿಯ ಸಿದ್ಧಲಿಂಗ ಇಲ್ಲ ಇಲ್ಲ, ನಿಲ್ಲು ಮಾಣು.
|| ೪೫ ||

೪೪೭

ಕಯ್ಯ ಲಿಂಗ ಕಯ್ಯಲ್ಲಿ ಮಯ್ಯ ಲಿಂಗ ಮಯ್ಯಲ್ಲಿ
ತಲೆಯ ಲಿಂಗ ತಲೆಯಲ್ಲಿ
ಮತ್ತೆ ಹೊಲಬನರಸಲೇತಕ್ಕೆ?
ಹೊಲಬುದಪ್ಪಿ ಬಿದ್ದಿರಿ ಮೂರರ ಬಲೆಯಲ್ಲಿ.
ಬಲುಹೇತಕ್ಕೆ, ಸಾಕು.
ಚಿಕ್ಕಯ್ಯಪ್ರಿಯ ಸಿದ್ಧಲಿಂಗ ಇಲ್ಲ ಇಲ್ಲ ಎಂದೆ. || ೪೬ ||

೪೪೮

ಕರವೂರ ನಿರಹಂಕಾರ-ಸುಜ್ಞಾನಿದೇವಿಯರ
ಬಸುರಲ್ಲಿ ಬಂದರೆನ್ನಬಹುದೆ ಪ್ರಭುದೇವರ?
ಮಂಡಗೆಯ ಮಾದಿರಾಜ-ಮಾದಲಾಂಬಿಕೆಯಮ್ಮನವರ
ಬಸುರಲ್ಲಿ ಬಂದರೆನ್ನಬಹುದೆ ಬಸವೇಶ್ವರನ?
ಅಕ್ಕನಾಗಲಾಂಬಿಕೆಯಮ್ಮನ ಬಸುರಲ್ಲಿ
ಬಂದರೆನ್ನಬಹುದೆ ಚೆನ್ನಬಸವೇಶ್ವರನ?
ಮೊರಡಿಯ ಮುದ್ದುಗೌಡ-ಸುಗ್ಗವ್ವೆಯ[ರ]
ಬಸುರಲ್ಲಿ ಬಂದರೆನ್ನಬಹುದೆ ಸಿದ್ಧರಾಮೇಶ್ವರನ?
ಇವರು ಒಬ್ಬರಿಂದಾದವರಲ್ಲ, ತಮ್ಮಿಂದ ತಾವಾದರು.
ಚಿಕ್ಕಯ್ಯಪ್ರಿಯ ಸಿದ್ಧಲಿಂಗ ಇಲ್ಲ ಇಲ್ಲ [ನಿಲ್ಲು] ಮಾಣು. || ೪೭ ||

೪೪೯

ಕಷ್ಟದೃಷ್ಟವ ಮುಟ್ಟುವಲ್ಲಿ ಮತ್ತೆ ಮೂವರ ಸಂಚವಿಲ್ಲಾಗಿ
ಅಟ್ಟಿ ಹರಿವ ಹರಿಯ ಹಿಡಿದುಕೊಡು

ಬಿಟ್ಟು ಕಳೆದೆನು ಬ್ರಹ್ಮನ;
ಕಟ್ಟಿಯಾಳಿದೆನು ರುದ್ರನ;
ಲಕ್ಷ್ಮೀ ಸರಸ್ವತಿ ಗೌರಿಯರ ಹೋಗೆಂದು ಕಳೆದೆನು.
ಚಿಕ್ಕಯ್ಯಪ್ರಿಯ ಸಿದ್ಧಲಿಂಗವಿಲ್ಲೆಂದು ಕಳೆದೆನು. ॥ ೪೮ ॥

೪೫೦

ಕಾಮನೆ ದೇವ, ಸುಮಾಯವೆ ನಿರವಯ.
ಕಾಮಯ್ಯ ಕಾಮೇಶ ಕಾಮನೆನ್ನ ಕರಸ್ಥಲದಲ್ಲಿಪ್ಪ.
ಕಾಮನೆನ್ನ ಪ್ರಾಣಲಿಂಗ, ಕಾಮನ ಪ್ರಸಾದವೆನಗೆ.
ಇದು ಕಾರಣ ಚಿಕ್ಕಯ್ಯಪ್ರಿಯ ಸಿದ್ಧಲಿಂಗ ಇಲ್ಲ ಇಲ್ಲ ಎಂಬೆನು.
॥ ೪೯ ॥

೪೫೧

ಕಾಯ ಜೀವವನರಿದೆನೆಂಬವರೆಲ್ಲರೂ
ಹೋದರಲ್ಲಾ ಹೊಲಬುದಪ್ಪಿ.
ಹೆಣ್ಣು ಹೊನ್ನು ಮಣ್ಣಿಗೆ ಹೋರಾಡುವ ಅಣ್ಣಗಳೆಲ್ಲರೂ
ಬಸವಣ್ಣನ ಮನೆಯ ಬಾಗಿಲಲಿ
ಬಂಧಿಕಾರರಾಗಿ ಕಾಯ್ದು ಕೊಂಡಿದ್ದು
ಆ ಹೆಣ್ಣು ಹೊನ್ನು ಮಣ್ಣು ತಮ್ಮ ಕಣ್ಣ ಮುಂದಕೆ ಬಾರದಿದ್ದಡೆ
ತಮ್ಮ ಮನದಲ್ಲಿ ನೊಂದು ಬೆಂದು ಕುದಿದು ಕೋಟಲೆಗೊಂಡು
ಮತ್ತೆಯೂ ತಾವು ಅರುಹಿರಿಯರೆಂದು
ಬೆಬ್ಬನೆ ಬೆರತುಕೊಂಡಿಪ್ಪವರಿಗೆ
ನಮ್ಮ ಚಿಕ್ಕಯ್ಯಪ್ರಿಯ ಸಿದ್ಧಲಿಂಗ ಇಲ್ಲ ಇಲ್ಲ ಎಂದೆ. ॥ ೫೦ ॥

೪೫೨

ಕಾಯವೆನ್ನ ಕಲ್ಪಿತವೆನ್ನ, ಅರಿವೆನ್ನ ಮರಹೆನ್ನ;
ಮಾಯಿಕ ನಿರ್ಮಾಯಿಕವೆನ್ನ;
ದೇವರೆನ್ನ ಭಕ್ತರೆನ್ನ ಬಯಲೆನ್ನ.
ಮುಂದೆ ಊಹಿಸುವುದಕ್ಕೆ ಒಡಲಿಲ್ಲವಾಗಿ
ನಿಂದ ನಿಲವು ತಾನೆ, ನಿರಾಳ.
ಚಿಕ್ಕಯ್ಯಪ್ರಿಯ ಸಿದ್ಧಲಿಂಗಾ,
ಮುಂದೆ ಒಂದೂ ಇಲ್ಲ, ನಿಲ್ಲು ಮಾಣು. ॥ ೫೧ ॥

೪೫೩

ಕಾಲನ ಕರೆದು ಕಪ್ಪೆಯ ಹೊಡೆದೆನು.
ಕಲ್ಪಿತವೆಂಬವನ ಸೊಸಲಕ್ಕರವ ತೊಡೆದೆನು.
ಇನ್ನೇನೋ ಇನ್ನೇನೋ?
ಮುಂದೆ ಬಯಲಿಂಗೆ ಬಯಲು ಸನ್ನೆದೋರುತ್ತಿದೆ!
ಹಿಂದಿಲ್ಲ ಮುಂದಿಲ್ಲ ; ಮತ್ತೇನೂ ಇಲ್ಲ.
ಚಿಕ್ಕಯ್ಯಪ್ರಿಯ ಸಿದ್ಧಲಿಂಗ ಇಲ್ಲ ಇಲ್ಲ. ॥ ೫೨ ॥

೪೫೪

ಕಾಳಾಗ್ನಿ ಕಂಠವಿಲ್ಲದಂದಿನ ಸರವು
ಕಾಳಾಗ್ನಿ ಶಬ್ದವಿಲ್ಲದಂದಿನ ಸರವು
ಶಕ್ತಿ ಸಂಪುಟವಾಗಿ ನುಡಿಯದಂದಿನ ಸರವು.
ಧೃತವನತಿಗಳದೆಯಲ್ಲಾ ಎಲೆ ಸರವೆ
ಪದವ ಪತ್ರವೆಂದೆಯಲ್ಲಾ,
ಪತ್ರಕ್ಕೆ ಗಣನಾಥನ ತಂದೆಯಲ್ಲಾ ಎಲೆ ಸರವೆ.
ನಿಜದಲ್ಲಿ ನಿಂದು ಸಹಜವಾದೆಯಲ್ಲಾ
ಅನಾಥನ ತಂದೆಯಾದೆಯಲ್ಲಾ!
ಚಿಕ್ಕಯ್ಯಪ್ರಿಯ ಸಿದ್ಧಲಿಂಗ ಇಲ್ಲ ಇಲ್ಲ ಎಂದೆ. ॥ ೫೩ ॥

೪೫೫

ಕಾಳು ದೇಹದೊಳಗೊಂದು ಕೀಳು ಜೀವ ಹುಟ್ಟಿತ್ತಾಗಿ
ಆಪ್ಯಾಯನವಡಗದು, ಸಂದೇಹ ಹಿಂಗದು
ಇದೇನೊ ಇದೇನೋ!
ಹಂದೆಗಳ ಮುಂದೆ ಬಂದು ಕಾಡುತಲಿದ್ದುದೆ
ಇದೇನೊ ಇದೇನೋ!
ಕಾಲಾಳು ಮೇಲಾಳುಗಳು ಬೇಳುವೆಗೊಳಗಾದರು
ಚಿಕ್ಕಯ್ಯಪ್ರಿಯ ಸಿದ್ಧಲಿಂಗ ಇಲ್ಲ ಇಲ್ಲ ಎಂಬರು. ॥ ೫೪ ॥

೪೫೬

ಕೂಟವ ಕೂಡಿಹೆನೆಂದಡೆ ಸಮಯದವನಲ್ಲ.
ಮಾಟವ ಮಾಡಿಹೆನೆಂದಡೆ ಹಿಂದುಮುಂದಣ ವಂಮುಗದವನಲ್ಲ.
ಸಮಯಕ್ಕೆ ಮುನ್ನವೆ ಅಲ್ಲ, ಆರಾದಡೂ ಎನಲಿ
ಚಿಕ್ಕಯ್ಯಪ್ರಿಯ ಸಿದ್ಧಲಿಂಗ ಇಲ್ಲ ಇಲ್ಲ ಎಂದೆ. ॥ ೫೫ ॥

೪೫೭

ಕೊಂಬಿನ ಮೇಲಣ ಬೇಡಂಗೆ ಶಿವರಾತ್ರಿಯನಿತ್ತನೆಂಬರು;
ಕಾಳಿದಾಸಂಗೆ ಕಣ್ಣನಿತ್ತನೆಂಬರು;
ಮಯೂರಂಗೆ ಮಯ್ಯನಿತ್ತನೆಂಬರು;
ಬಾಣಂಗೆ ಕಯ್ಯನಿತ್ತನೆಂಬುರು;
ಸಿರಿಯಾಳಂಗೆ ಮಗನನಿತ್ತನೆಂಬರು;
ಸಿಂಧುಬಲ್ಲಾಳರಾಯಂಗೆ ವಧುವನಿತ್ತನೆಂಬರು;
ದಾಸಂಗೆ ತವನಿಧಿಯನಿತ್ತನೆಂಬರು.
ಆರಾರ ಮುಖದಲ್ಲಿ ಇದೇ ವಾರ್ತೆ ಕೇಳಲಾಗದೀ ಶಬ್ದವನು.
ಲಿಂಗವಿತ್ತುದುಳ್ಳಡೆ ಅಚಳಪದವಾಗಬೇಕು.
ಚಿಕ್ಕಯ್ಯಪ್ರಿಯ ಸಿದ್ಧಲಿಂಗ ಇಲ್ಲ ಇಲ್ಲ!
ಅದು ನಿಲದ ವಾರ್ತೆ. ॥ ೫೬ ॥

೪೫೮

ಗಂಭೀರವೆಂದೆನ್ನದೆ, ಗಂಭೀರಕ್ಕೆ ತಲೆದೋರದೆ
ಶರಣ ಶಬುದ, ನಾಭಿಯ ಉಸುರ
ದಾಸೋಹಿಯ ಮಂತ್ರ ಭಿನ್ನವಿಲ್ಲದೆ ಇಲ್ಲೆಂದಿತ್ತಲ್ಲಾ!
ಆ ಭಾವವು ಕಿಂಚಿತ್ತು ಇಲ್ಲೆಂದಿತ್ತಾಗಿ
ಜನಿಕನ ಮಂದಿರದ ಕುತಾವಾಹಿಯನು ಇಲ್ಲೆಂದಿತ್ತಲ್ಲಾ!
'ಹಿತವಾಹಿತವಾಹಿತಂ ಹತವಾಗಿ ನಿತಂ ನಿತಂ'
ಚಿಕ್ಕಯ್ಯಪ್ರಿಯ ಸಿದ್ಧಲಿಂಗ ಇಲ್ಲ ಇಲ್ಲಾ ಎಂದಿತ್ತಲ್ಲಾ! ॥ ೫೭ ॥

೪೫೯

ಗ್ರಾಮ ಮಧ್ಯದೊಳಗೊಂದು ಹೋಮದ ಕುಳಿಯಿದ್ದಡೆ
ನೇಮವುಳ್ಳವರೆಲ್ಲ ಆಹುತಿಯನಿಕ್ಕಿದರು.
ಹೊಗೆ ಜಗವಾಗಿ ಜಗ ಹೊಗೆಯಾಗಿ ನಗೆಗೆಡೆಯಾಯಿತ್ತು ನೋಡಾ!
ನಗೆ ಹೊಗೆವರಿದಲ್ಲಿ ಹೊಗೆ ಜಗವಾದದೆ
ಚಿಕ್ಕಯ್ಯಪ್ರಿಯ ಸಿದ್ಧಲಿಂಗ ಇಲ್ಲ ಇಲ್ಲವೆಂದೆ. ॥ ೫೮ ॥

೪೬೦

ಗೋಕುಲರೆಲ್ಲರು ಕೂಡಿ
ಗೋಪತಿ ಅಣ್ಣನ ಮನೆಗೆ ಉಣ್ಣ ಬಂದರೆಲ್ಲರು.

ನಾ ವೀಸಕ್ಕೆ ಕೂಳ ಕೇಳೆ, ವೇಷಧಾರಿಗಳು
ಘಾಸಿ ಮಾಡಿದರೆನ್ನುವ ಜಗದೀಶ ನೀನೆ ಬಲ್ಲೆ,
ಚಿಕ್ಕಯ್ಯಪ್ರಿಯ ಸಿದ್ಧಲಿಂಗ ಇಲ್ಲ ಇಲ್ಲ ಎಂದೆ. ॥ ೫೯ ॥

೪೬೧

ಚಿಂತೆಯೆಂಬ ಹೂವಿನ ಗಿಡುವನು ನೋಡಿರೆ!
ಹೊಲಗೇರಿಯಲಿ ಬಿತ್ತುವನೆ ನೋಡಿರೆ!
ಜಲಶೇಖರನ ಉದಕವನೆರದಡೆ
ಆಸೆಯೆಂಬ ಹೂವ ಕೊಯ್ದು ಕಾಮಂಗೇರಿಸುವೆನು.
ಚಿಕ್ಕಯ್ಯಪ್ರಿಯ ಸಿದ್ಧಲಿಂಗ ಇಲ್ಲ ಇಲ್ಲ. ॥ ೬೦ ॥

೪೬೨

ಚಿತ್ತುವಿನ ವರ್ತನೆಯ ಬಿಟ್ಟ ಶರಣ ನಿತ್ಯನೇಮವನರಿಯ,
ಕರ್ತೃಭೃತ್ಯತ್ವವನೇನೆಂದು ಅರಿಯ,
ಎಂತೆಂದು ಅರಿಯ, ಎಂತಿದ್ದುದಂತೆಯೆಂಬುದ ಮುನ್ನವೆ ಅರಿಯ.
ಚಿಕ್ಕಯ್ಯಪ್ರಿಯ ಸಿದ್ಧಲಿಂಗ ಇಲ್ಲ ಇಲ್ಲ, ನಿಲ್ಲು ಮಾಣು.॥ ೬೧ ॥

೪೬೩

ಚಿನ್ನವ ಕೊಂಬಲ್ಲಿ ಅದರ ಬಣ್ಣವ ಕಂಡು
ಬಣ್ಣವಾಸಿಯ ಕುರುಹಿಟ್ಟು
ಅದು ತನಗೆ ಚೆನ್ನಾದಡೆ ಕೊಂಬ ಅಲ್ಲದೊಡೊಲ್ಲ.
ಇದಕ್ಕೆ ಗೆಲ್ಲ ಸೋಲವೇಕೆ?
ಚಿಕ್ಕಯ್ಯಪ್ರಿಯ ಸಿದ್ಧಲಿಂಗ ಇಲ್ಲ ಇಲ್ಲಾ ಎನುತಿರ್ದೆನು.॥ ೬೨ ॥

೪೬೪

ಜಂಗಮಕ್ಕೆ ಅರಿವ ಮರೆದಾಗಲೆ ಅಪಮಾನ ಹೋಯಿತ್ತು.
ಭಕ್ತಂಗೆ ಸತ್ಯ ಸದಾಚಾರವ ಬಿಟ್ಟಾಗಲೆ ಅಪಮಾನ ಹೋಯಿತ್ತು.
ಈ ಅಪಮಾನವಲ್ಲದೆ,
ದ್ವಾರ ಮಲಭಾಂಡಕ್ಕೆ ಹೋರಿಯಾಡುವರಿಗೇಕೆ ಚಿತ್ತಶುದ್ಧ?
ಚಿಕ್ಕಯ್ಯಪ್ರಿಯ ಸಿದ್ಧಲಿಂಗ ಇಲ್ಲ ಇಲ್ಲ ಎಂದೆ. ॥ ೬೩ ॥

೪೬೫

ಜಂಗಮಲಿಂಗವನೊಂದೆಂದು ಕಾಬಡೆ ಭಂಗವಿಲ್ಲದೆ
ಭರಿತಂಗೆ ಭವ ಹೊದ್ದಲಿಲ್ಲ.
ಗುರು ಐವರು, ಶಿಷ್ಯನೊಬ್ಬ ಅರುಹಿರಿಯರಿಗೆ ದೃಷ್ಟ
ಚಿಕ್ಕಯ್ಯಪ್ರಿಯ ಸಿದ್ಧಲಿಂಗ ಇಲ್ಲ ಇಲ್ಲ ನಿಲ್ಲೆಂದಿತ್ತು. ॥ ೬೪ ॥

೪೬೬

ಜಂಗಮವಾಗಿ ಜಂಗಮನ ಕೊಂದಾಗಲೆ ತನ್ನ ದೈವ ತನಗಿಲ್ಲ.
ಭಕ್ತನಾಗಿ ಭಕ್ತರ ಸ್ತುತಿ ನಿಂದ್ಯವ ಮಾಡಲಾಗಿಯೆ
ಸತ್ಯ ಸದಾಚಾರ ತನಗಿಲ್ಲ.
ದೇಹದ ವಿಹಂಗ ಮೃಗಗಳಂತೆ
ಕೊಡಲಿಯ ಕಾವು ಕುಲಕ್ಕೆ ಮಿತ್ತಾದಂತೆ
ಚಿಕ್ಕಯ್ಯಪ್ರಿಯ ಸಿದ್ಧಲಿಂಗ ಇಲ್ಲ ಇಲ್ಲ ಎಂದೆ. ॥ ೬೫ ॥

೪೬೭

ಜಂಗಮವಾಗಿ ಹುಟ್ಟಿದ ಮತ್ತೆ
ಹಿಂದಣ ಹಜ್ಜೆಯ ಮೆಟ್ಟಲುಂಟೆ?
ಜಂಗಮವೆಂಬ ಮಾತಿಂಗೊಳಗಾದಲ್ಲಿ
ಮೂರು ಮಲತ್ರಯವ ಹಿಂಗಿರಬೇಕು.
ಅನಂಗನ ಬಲೆಗೆ ಎಂದಿಗೂ ಸಿಲುಕದಿರಬೇಕು;
ಅದು ನಿಜದ ಸಂಗ.
ಚಿಕ್ಕಯ್ಯಪ್ರಿಯ ಸಿದ್ಧಲಿಂಗ ಈ ಗುಣ ಆರಿಗೂ ಇಲ್ಲ ಇಲ್ಲ
ಎಂದೆ. ॥ ೬೬ ॥

೪೬೮

ಜಲದೊಳಗಣ ಬೊಬ್ಬುಳಿಕೆ ಜಲ ಘಟ್ಟಿಗೊಂಡಲ್ಲಿ
ಅಡಗುವ ತೆರನ ಬಲ್ಲಡೆ ಬಲ್ಲೆ.
ಮಹೇಂದ್ರ ಜಾಲವು ಮರೀಚಿಕಾ ಜಲವು.
ಎಲ್ಲಿ ಹುಟ್ಟಿ ಎಲ್ಲಿ ಅಡಗುವ ತೆರನ ಬಲ್ಲಡೆ ಬಲ್ಲೆ.
ಮಹಾನಾದ ಸುನಾದ, ಸುನಾದಕ್ಕೆ ಕೈಗೈದು
ಆ ಸುನಾದವು ಮಹಾನಾದದೊಡನೆ ಮಥನಿಸಿ

ಇವೆರಡರ ಪ್ರಾಣ ಚೈತನ್ಯ ಒಂದಾಗಿ ಹುಟ್ಟಿ
ಅಡಗುವ ಭೇದವ ಬಲ್ಲನಾಗಿ,
ಚಿಕ್ಕಯ್ಯಪ್ರಿಯ ಸಿದ್ಧಲಿಂಗ ಇಲ್ಲ ಇಲ್ಲ ಎಂದುದಾಗಿ. ॥ ೬೭ ॥

೪೬೯

ಜೀವವೆಂಬುದಿಲ್ಲ, ಭಾವವೆಂಬುದಿಲ್ಲ, ಬಯಕೆಯೆಂಬುದಿಲ್ಲ.
ಮುಂದೆ ಪೂಜಿಸಿ ಕಂಡೆಹೆನೆಂಬುದಕ್ಕೆ ಮುನ್ನವೆ ಇಲ್ಲ.
ಪೂರ್ವ ಅಪೂರ್ವವೆಂಬುದಿಲ್ಲ.
ಇಪಾವ ಬಂಧನವೂ ಇಲ್ಲದ
ಅವಿರಳಂಗೆ ಒಂದರ ತೋರಿಕೆಯೂ ಇಲ್ಲ.
ಚಿಕ್ಕಯ್ಯಪ್ರಿಯ ಸಿದ್ಧಲಿಂಗ ಇಲ್ಲಾ ಇಲ್ಲ, ನಿಲ್ಲು ಮಾಣು. ॥ ೬೮ ॥

೪೭೦

ತನ್ನಿಂದ ಬಿಟ್ಟು ಗುರುವಿಲ್ಲ,
ತನ್ನಿಂದ ಬಿಟ್ಟು ಲಿಂಗವಿಲ್ಲ,
ತನ್ನಿಂದ ಬಿಟ್ಟು ಜಂಗಮವಿಲ್ಲ,
ತನ್ನಿಂದ ಬಿಟ್ಟು ಪ್ರಸಾದವಿಲ್ಲ,
ತನ್ನಿಂದ ಬಿಟ್ಟು ಪಾದೋಕವಿಲ್ಲ,
ತನ್ನಿಂದ ಬಿಟ್ಟು ಪರವಿಲ್ಲ,
ತನ್ನಿಂದ ಬಿಟ್ಟು ಇನ್ನೇನೂ ಇಲ್ಲ.
ಅನಾದಿಯೊಳಗಿಲ್ಲ, ಭೇದಾಭೇದದೊಳಗಿಲ್ಲ,
ಅದು ಇದು ಎಂಬುದಿಲ್ಲ,
ಇದಿರೆಂಬ ಬಯಕೆಯಿಲ್ಲ, ಆದ್ಯರ ಸಂಗವು ಇಲ್ಲ.
ಸುರಾಳ ನಿರಾಳವೆಂಬವು ತಾನೆ,
ತಾನೆ ಪರವಸ್ತುವೆಂಬುದಕ್ಕೆ ಮುನ್ನವೆಯಿಲ್ಲ.
ಚಿಕ್ಕಯ್ಯಪ್ರಿಯ ಸಿದ್ಧಲಿಂಗ ಇಲ್ಲ ಇಲ್ಲ, ನಿಲ್ಲು ಮಾಣು.॥ ೬೯ ॥

೪೭೧

ತನು ತನ್ನ ಕಾಣದು, ಮನ ತನ್ನನರಿಯದು.
ಏನಯ್ಯ ತನು ಕೆಟ್ಟು ಮನ ನಷ್ಟವಾಯಿತ್ತು.
ಅನಾಗತವೆಂದಡೆ ಅನಾಹತವಾಯಿತ್ತು.
ಜೀವರಾಶಿಗಳೆಲ್ಲಾ ನಡೆಗೆಟ್ಟುಹೋದವು.
ಚಿಕ್ಕಯ್ಯಪ್ರಿಯ ಸಿದ್ಧಲಿಂಗ ಇಲ್ಲ ಇಲ್ಲ ಇಲ್ಲೆಂಬೆನು. ॥ ೭೦ ॥

೪೭೨

ತನುವ ಮರೆಯಬೇಕೆಂದು ಗುರುವ ತೋರಿ,
ಮನವ ಮರೆಯಬೇಕೆಂದು ಲಿಂಗವ ತೋರಿ,
ಧನವ ಮರೆಯಬೇಕೆಂದು ಜಂಗಮವ ತೋರಿ,
ಲೇಸ ಮರೆದು ಕಷ್ಟಕ್ಕೆ ಕಡಿದಾಡುವ
ಭಾಷೆಹೀನರ ಕಂಡು ನಾಚಿಕೆಯಾಯಿತ್ತು
ಚಿಕ್ಕಯ್ಯಪ್ರಿಯ ಸಿದ್ಧಲಿಂಗ ಇಲ್ಲ ಇಲ್ಲ ಎಂದೆ. ॥ ೭೧ ॥

೪೭೩

ತಪವೆಂಬುದು ಬಂಧನ.
ನೇಮವೆಂಬುದು ತಗಹು.
ಶೀಲವೆಂಬುದು ಸೂತಕ.
ಕಟ್ಟಿನ ವ್ರತದ ಭಾಷೆಯೆಂಬುದು ನಗೆಗೆಡೆಯಾಯಿತ್ತು ನೋಡಾ!
ನಗೆಹೊಗೆವಣ್ಣದಲ್ಲಿ ಹೊಗೆ ಜಗವಾದಡೆ
ಚಿಕ್ಕಯ್ಯಪ್ರಿಯ ಸಿದ್ಧಲಿಂಗ ಇಲ್ಲ ಇಲ್ಲ,
ನಿಲ್ಲು! ಮಾಣು! ॥ ೭೨ ॥

೪೭೪

ತಮ್ಮ ಮಲವ ತಾವು ಮುಟ್ಟವು ಆವ ಜಾತಿಯು.
ತ್ರಿವಿಧ ಮಲಕ್ಕೆ ಹೊರಗಾಗಿ ಮತ್ತೆ ಮಲತ್ರಯಕ್ಕೆ ಬೀಳುವ
ಮಲಭಾಂಡದೇಹಿಗೆ
ಚಿಕ್ಕಯ್ಯಪ್ರಿಯ ಸಿದ್ಧಲಿಂಗ ಒಲವರವಿಲ್ಲ ಇಲ್ಲ ಎಂದೆ.॥ ೭೩ ॥

೪೭೫

ತಾನೆಂದಲ್ಲಿ ಓಯೆಂದುದದೇನೊ!
ಎಂದ ಸಂಕಲ್ಪವೆಲ್ಲಿಯಡಗಿತ್ತೊ!
ತಾನೆಂದು ಜಡವಿಡಿದ ಭೂತಪ್ರಾಣಗಳಿಗೆ ಲಿಂಗವೆಲ್ಲಿಯದೊ?
ಪೂಜಿಸಿ ಪೂಜಿಸಿ ಗತಿಗೆಟ್ಟರೆಲ್ಲರು.
ಗತಿಗೆಡದಲ್ಲಿಯೇ ಅಡಗಿತ್ತು!
ಚಿಕ್ಕಯ್ಯಪ್ರಿಯ ಸಿದ್ಧಲಿಂಗ ಇಲ್ಲ ಇಲ್ಲ, ನಿಲ್ಲು ಮಾಣು.॥ ೭೪ ॥

೪೭೬

ತೋರದೆ ತೋರಿದ ನೆಳಲಿನ ಬಿಂದುವ ನುಂಗಿ
ಬಾರದ ಬಯಲುವ ಕೂಡಿದ ಕಾರಣವೇನೊ?
ಬಂದುದ ಅಳಿದುದರಂದವ ಬಿಂದು ತಾನರಿಯದು.
ಅಮು ಭೂತಪ್ರಭೆಯಲ್ಲಿ ನಿಃಪತಿಯೆಂಬುದರಿಯ ಬಂದು,
ಆಶ್ರಯವಿಲ್ಲದೆ ನಿಂದುದು ನಿರವಯವು.
ಚಿಕ್ಕಯ್ಯಪ್ರಿಯ ಸಿದ್ಧಲಿಂಗ ಇಲ್ಲ ಇಲ್ಲಾ! ॥ ೭೫ ॥

೪೭೭

ದಗ್ಧವಾದ ಮರ ಇದ್ದಿಲಲ್ಲದೆ ಕಾಷ್ಠಕ್ಕೆ ಹೊದ್ದಿಗೆ ಉಂಟೆ?
ಕಿಗ್ಗಯ್ಯ ನೀರು ತಟಾಕಕ್ಕೆ ಹೊದ್ದಿದುದುಂಟೆ?
ಅರಿದು ಮರೆದವಂಗೆ ಸಮಯದ ಹೊದ್ದಿಗೆ ಏನು?
ಚಿಕ್ಕಯ್ಯಪ್ರಿಯ ಸಿದ್ಧಲಿಂಗ ಇಲ್ಲ ಇಲ್ಲ ಎಂದೆ. ॥ ೭೬ ॥

೪೭೮

ದೃಷ್ಟಿ ಕಷ್ಟವ ಮುಟ್ಟುವಲ್ಲಿ ಮೂವರ ಸಂಚವಿಲ್ಲಾಗಿ
ಅಟ್ಟಿ ಹರಿದು ಹರಿಯ ಹಿಮ್ಮಡಿಯ ಹಿಡಿದುಕೊಂಡು ಬಿಟ್ಟೆನು.
ಕಟ್ಟಿಯಾಳಿದೆ ರುದ್ರನೆಂಬನ,
ಗೌರಿ ಸರಸ್ವತಿ ಲಕ್ಷ್ಮಿಯ ಹೋಗೆಂದೆ,
ಬ್ರಹ್ಮನ ಕಳುಹಿದೆ.
ಚಿಕ್ಕಯ್ಯಪ್ರಿಯ ಸಿದ್ಧಲಿಂಗ ಇಲ್ಲ ಇಲ್ಲ ಎಂದೆ. ॥ ೭೭ ॥

೪೭೯

ನಮ್ಮವರು ಭಕ್ತರಲ್ಲ;
ನಮ್ಮವರಿಗೆ ದೇವರಿಲ್ಲ.
ನಮ್ಮವರು ಜಂಗಮಕ್ಕೆ ಮಾಡುವರಲ್ಲ;
ನಮ್ಮವರು ಜಂಗಮದ ಕೈಯಲ್ಲಿ ಮಾಡಿಸಿಕೊಂಬರು.
ನಮ್ಮವರು ನಮ್ಮವರು ಎಂಬ ಶಬ್ದ ಸತ್ತಿತ್ತು.
ನಮ್ಮವರಾದ ಪರಿಯ ನಾನಿನ್ನೇನ ಹೇಳುವೆ? ಇದು ಕಾರಣ,
ನಮ್ಮವರಿಗೆಯೂ ಇಲ್ಲ, ನನಗಂತೂ ಇಲ್ಲ.
ಚಿಕ್ಕಯ್ಯಪ್ರಿಯ ಸಿದ್ಧಲಿಂಗ ಇಲ್ಲ ಇಲ್ಲಾ! ॥ ೭೮ ॥

೪೮೦

ನಾದದೊಳಗಿಲ್ಲ, ಸುನಾದದೊಳಗಿಲ್ಲ.
ಆದಿಯೊಳಗಿಲ್ಲ, ಅನಾದಿಯೊಳಗಿಲ್ಲ.
ಭೇದಾಭೇದದೊಳಗಿಲ್ಲ.
ಅದು ಇದು ಎಂಬುದಿಲ್ಲ.
ಇದಿರೆಂಬ ಬಯಕೆಯಿಲ್ಲ.
ಆದ್ಯರ ಸಂಗವೂ ಇಲ್ಲ.
ಸುರಾಳ-ನಿರಾಳವೆಂಬ ಇವೆಲ್ಲವೂ ತಾನೆ.
ಚಿಕ್ಕಯ್ಯಪ್ರಿಯ ಸಿದ್ಧಲಿಂಗ ಇಲ್ಲ ಇಲ್ಲ, ನಿಲ್ಲು ಮಾಣು.॥ ೭೯ ॥

೪೮೧

ನಾನಾ ವೃಕ್ಷಂಗಳೊಳಗೆ ವಸ್ತು ತಾನೇ.
ನಾನಾ ಗಿರಿಪರ್ವತಂಗಳಲ್ಲಿಯೂ ತಾನೇ.
ಸಕಲ [ಸಮು]ದ್ರ ಆಕಾಶಾದಿ ಭುವನ
ಬ್ರಹ್ಮಾಂಡ ಪಿಂಡಂಗಳೆಲ್ಲವು ತಾನೆಂದರಿಯದೆ,
ಇದಿರಲ್ಲಿ ವಸ್ತು ಉಂಟೆಂಬ ಷಟ್‌ಸ್ಥಲಬ್ರಹ್ಮಿ ನೀ ಕೇಳಾ,
ಗಿರಿ... ನೆವುಂಟೆ? ಲಿಂಗವಾಗಿ ಸಂಗವನರಸಲುಂಟೆ?
ಬೆಳಗೆಂಬ ಸಂದೇಹನ... ದ್ವಂದ್ವದ ಪ್ರಸಂಗವೆಲ್ಲಿಯದು ಹೇಳಾ.
ನಿಂದ ನಿಲವೆ ತಾನಾದ ಅಬದ್ಧಂಗೆ
ನಿರಾಳ ಸುರಾಳವೆಲ್ಲಿಯದು ಹೇಳಾ.
ಚಿಕ್ಕಯ್ಯಪ್ರಿಯ ಸಿದ್ಧಲಿಂಗ ಇಲ್ಲ ಇಲ್ಲ, ನಿಲ್ಲು ಮಾಣು.॥ ೮೦ ॥

೪೮೨

ನಾ ನೀನೆಂಬುದಳಿದ ಪರಮಲಿಂಗೈಕ್ಯಂಗೆ
ಪರವೆಂಬುದಿಲ್ಲ, ಇಹವೆಂಬುದಿಲ್ಲ.
ಮರಹೆಂಬುದಿಲ್ಲ, ಅರಿವೆಂಬುದಿಲ್ಲ.
ಚಿಕ್ಕಯ್ಯಪ್ರಿಯ ಸಿದ್ಧಲಿಂಗ ಇಲ್ಲ ಇಲ್ಲ, ನಿಲ್ಲು ಮಾಣು.॥ ೮೧ ॥

೪೮೩

ನಾನೆಂದೆನಲಿಲ್ಲ, ನುಡಿದು ಹೇಳಲಿಕಿಲ್ಲ.
ತನ್ನಲ್ಲಿ ಬಯಲ ಘನವನು

ಹರಿದು ಹತ್ತುವುದೆ ತನ್ನಲ್ಲಿ ತಾನಾದ ಬಯಲ ಘನವನು?
ಇನ್ನೇನನರಸಲಿಲ್ಲ, ಅದು ಮುನ್ನ ತಾನಿಲ್ಲ
ಚಿಕ್ಕಯ್ಯಪ್ರಿಯ ಸಿದ್ಧಲಿಂಗ ಇಲ್ಲ ಇಲ್ಲ. ॥ ೮೨ ॥

೪೮೪

ನಾಮಾನಾಮವೆಂದು ನೀನು ನಾಮಕ್ಕೆ ಬಳಲುವೆ.
ನಾಮವಾವ ಸೀಮೆಯೊಳಗಿಪ್ಪುದು ಹೇಳಲೆ ಮರುಳೆ?
ನಾಮವೂ ಇಲ್ಲ ಸೀಮೆಯೂ ಇಲ್ಲ,
ಒಡಲೂ ಇಲ್ಲ ನೆಳಲೂ ಇಲ್ಲ,
ನಾನೂ ಇಲ್ಲ ನೀನೂ ಇಲ್ಲ ಏನೂ ಇಲ್ಲ,
ಚಿಕ್ಕಯ್ಯಪ್ರಿಯ ಸಿದ್ಧಲಿಂಗ ಇಲ್ಲ ಇಲ್ಲ ಎಂದುದಾಗಿ. ॥ ೮೩ ॥

೪೮೫

ನಿಜವನರಿದವಂಗೆ ಸತ್ಯವೂ ಇಲ್ಲ, ಅಸತ್ಯವೂ ಇಲ್ಲ;
ನಿತ್ಯವೂ ಇಲ್ಲ, ಅನಿತ್ಯವೂ ಇಲ್ಲ;
ಅದು ತಾ ಮುನ್ನವೆ ಇಲ್ಲ,
ಬಚ್ಚ ಬರಿಯ ನಿರಾಳ ತಾನೆ
ಚಿಕ್ಕಯ್ಯಪ್ರಿಯ ಸಿದ್ಧಲಿಂಗ ಇಲ್ಲ ಇಲ್ಲ,
ನೀವು ಬಯಲು. ॥ ೮೪ ॥

೪೮೬

ನಿನ್ನ ಪ್ರಾಣವಾದಡೆ ನಿನ್ನ ಹೇಳಿತ ಕೇಳದೆ?
ಲಿಂಗಪ್ರಾಣವಾದಡೆ ಅಂಗದಿಂದ ಅಳಿಯಲದೇಕೆ?
ನಿಜಪ್ರಾಣವಾದಡೆ ಪ್ರಾಣಭೀಕರವೇತಕ್ಕಯ್ಯಾ?
ಇಹಪ್ರಾಣದ ಪರಪ್ರಾಣದ ಭೇದ ನಿಮಗೇಕೆ?
ಪ್ರಾಣ ತಾರ್ಕಣೆಯ ಅನುವನು ಬಲ್ಲವರು ನೀವು ಹೇಳಿರೊ
ಚಿಕ್ಕಯ್ಯಪ್ರಿಯ ಸಿದ್ಧಲಿಂಗ ಇಲ್ಲ ಇಲ್ಲ ಏನೂ ಇಲ್ಲ. ॥ ೮೫ ॥

೪೮೭

ನಿರಾಳಲಿಂಗಕ್ಕೆ ನಿರೋಧ ಬಂದಿತ್ತಲ್ಲಾ!
ನಿರೂಪಿಂಗೆ ಭಂಗ ಹೊದ್ದಿತ್ತಲ್ಲಾ!

ದೇಹಾರವ ಮಾಡುವರಳಿದು
ದೇಹ ದೇಹಾರದೊಳಗಡಗದಿದೆಂತೊ?
ದೇಹಾರ ಆಹಾರವಾಗಿ ಅರ್ಪಿಸಲಿಲ್ಲದ ಪ್ರಸಾದಿ.
ಚಿಕ್ಕಯ್ಯಪ್ರಿಯ ಸಿದ್ಧಲಿಂಗ ಇಲ್ಲ ಇಲ್ಲದ ಹುಸಿಯಲ್ಲಿ. ॥ ೮೬ ॥

೪೮೮

ನೀರ ಕೊಳಗವ ಮಾಡಿ ನೆಳಲನಳೆದೆನೆಂಬ
ಗಾವಳಿಯ ನಾನೇನೆಂಬೆನಯ್ಯಾ.
ಸುಳಿದಳೆಯದ ಬೆಳಗಿನ,
ಅಳೆಯದ ರಾಶಿಯ ನರರು ಅಳೆವರಯ್ಯಾ.
ಅದು ಬಂದು ಆಶ್ರಯವಿಲ್ಲ, ನಿಂದು ನಿರವಯ.
ಚಿಕ್ಕಯ್ಯಪ್ರಿಯ ಸಿದ್ಧಲಿಂಗ ಇಲ್ಲ ಇಲ್ಲ. ॥ ೮೭ ॥

೪೮೯

ನೀರೊಳಗೆ ಕಿಚ್ಚೆದ್ದು ನೆಳಲ ಸುಟ್ಟಿತ್ತು!
ನೆಳಲ ಸುಟ್ಟ ಬೂದಿಯನಿಟ್ಟು ಕೊಂಡಡೆ ಭೂಮಿ ಸತ್ತಿತ್ತು!
ಆಕಾಶ ಹೊತ್ತಿತ್ತು! ದೇವನ ದೇವತ್ವ ಕೆಟ್ಟಿತ್ತು!
ದೇವಿಯ ಒಕತನ ಮುರಿಯಿತ್ತು!
ಕೇಳಬಾರದ ಠಾವಿನಲ್ಲಿ ಕಾಣಬಾರದ ಲಿಂಗ ಮೂರ್ತಿಗೊಂಡಿರೆ
ನೋಡಬಾರದ ಪೂಜೆಯಾಯಿತ್ತು!
ಚಿಕ್ಕಯ್ಯಪ್ರಿಯ ಸಿದ್ಧಲಿಂಗಾ
ಪ್ರಭುದೇವ[ರ] ನಿಲವ ಕಂಡು ಇಲ್ಲ ಇಲ್ಲವೆನುತಿರ್ದೆನು. ॥ ೮೮ ॥

೪೯೦

ನೀರೊಳಗೊಂದು ನೆಳಲು ಸುಳಿಯಿತ್ತು
ನೆಳಲೊಳಗೊಂದು ಹೊಳೆವ ಶಬ್ದವು
ಅದು ನೆಮ್ಮಲ್ಲ ಸೊಮ್ಮಲ್ಲ
ಅಮ್ಮಿದಡಾಯಿತ್ತು ನೆಮ್ಮಿದಡರಳಿಯಿತ್ತು
ಚಿಕ್ಕಯ್ಯಪ್ರಿಯ ಸಿದ್ಧಲಿಂಗ ಇಲ್ಲ ಇಲ್ಲ ಬಯಲು! ॥ ೮೯ ॥

೪೯೧

[ಪರಮಂ]ಗೆ ನಾನು ಮದವಳಿಗೆ.
ಆರುನೆಲೆಯ ಕರುಮಾಡವ ಮಾಡಿ,

ಎಂಟು ಗುಣವ ಸುನಿಗೆಯ ಮಾಡಿ,
ಎನ್ನ ನೊಸಲ ತಂಪಸೆರೆದು
ಚಿಕ್ಕಯ್ಯಪ್ರಿಯ ಸಿದ್ಧಲಿಂಗಪ್ರಭುವಿಂಗೆ
ನಮೋ ನಮೋ ಎನುತಿರ್ದೆನು [ಕಾಣಾ]. ॥ ೯೦ ॥

೪೯೨

ಪವನದ ಬಳಿಯಲಿ ಹರಿಯಲಿ ಹರಿಯಲಿ
ನೆನಹಿನ ಬಳಿಯಲಿ ಸುಳಿಯಲಿ ಸುಳಿಯಲಿ.
ತಾಗಿಲ್ಲದೆ ಬಾಗುವುದೆ?
ಉಂಟೆಂಬನ್ನಬರ ಬಳಸಲಿ.
ಎಲ್ಲವೂ ತೀದು, ಇಲ್ಲವೆಯಲ್ಲಿ
ಚಿಕ್ಕಯ್ಯಪ್ರಿಯ ಸಿದ್ಧಲಿಂಗ ಇನ್ನೇನ ಬಳಸಲುಂಟು? ॥ ೯೧ ॥

೪೯೩

ಪ್ರಾಣಲಿಂಗವ ಪರಲಿಂಗವ ಮಾಡಿ
ಇಷ್ಟಲಿಂಗವ ಪೂಜಿಸುವರ ಕಷ್ಟವ ನೋಡಾ!
ತೊಟ್ಟಿಲ ಶಿಶುವಿಂಗೆ ಜೋಗುಳವಲ್ಲದೆ
ಹೊಟ್ಟೆಯ ಶಿಶುವಿಂಗೆ ಜೋಗುಳವುಂಟೆ?
ಬಯಲಾಸೆ ಹಾಸ್ಯವಾಯಿತ್ತು-
ಚಿಕ್ಕಯ್ಯಪ್ರಿಯ ಸಿದ್ಧಲಿಂಗವಿಲ್ಲದ ಕಾರಣ! ॥ ೯೨ ॥

೪೯೪

ಪ್ರಾಣಲಿಂಗವೆಂದಡೆ ಹೇಳದೆ ಹೋಯಿತ್ತು.
ಲಿಂಗಪ್ರಾಣವೆಂದಡೆ ತನ್ನಲ್ಲೆ ಹಿಂಗಿತ್ತು.
ಅದನೇನೆಂಬೆನೇನೆಂಬೆನು,
ಮೂರು ಲೋಕವೆಲ್ಲ ತೊಳಲಿ ಬಳಲುತ್ತಿದೆ.
ಉಭಯಲಿಂಗ ನಾಮ ನಷ್ಟವಾದಡೆ
ಚಿಕ್ಕಯ್ಯಪ್ರಿಯ ಸಿದ್ಧಲಿಂಗ ಇಲ್ಲ ಇಲ್ಲ ಎಂಬೆ. ॥ ೯೩ ॥

೪೯೫

ಪುರಹರ ಕ್ಷೇತ್ರದಲ್ಲಿ ಪುರಪತಿಯೊಡನೆ ಸಂಪಾದನೆ.
ಮಹಾಪರಕ್ಷೇತ್ರದಲ್ಲಿ ಕ್ಷೇತ್ರಪತಿಯೊಡನೆ ಸಂಪಾದನೆ.

ಅಮರ ಮಧ್ಯಸ್ಥಾನದಲ್ಲಿ ಅಮರಪತಿಯೊಡನೆ ಸಂಪಾದನೆ.
ಮಹಾಮಧ್ಯದ ನೆಲೆಯೊಳು ಮಹಾಪತಿಯೊಡನೆ ಸಂಪಾದನೆ.
ಮಹಾ ಪರಾಪರ ಎಂದುದಾಗಿ
ಚಿಕ್ಕಯ್ಯಪ್ರಿಯ ಸಿದ್ಧಲಿಂಗ ಇಲ್ಲ ಇಲ್ಲ. ॥ ೯೪ ॥

೪೯೬

ಪೂಜಕರೆಲ್ಲರೂ ಪೂಜಿಸುತ್ತಿದ್ದರು.
ಭಾವುಕರೆಲ್ಲರೂ ಬಳಲುತ್ತಿದ್ದರು.
ದೇವ ದೇಹಾಕಾರವ ಮಾಡುತ್ತೈದಾನೆ,
ದೇವಿ ದೂಪ ನೈವೇದ್ಯವ ಮಾಡುತ್ತಿದ್ದಳು,
ಆನು ಚಿಕ್ಕಯ್ಯಪ್ರಿಯ ಸಿದ್ಧಲಿಂಗ ಇಲ್ಲ ಇಲ್ಲ ಎನುತ್ತಿದ್ದೆನು. ॥ ೯೫ ॥

೪೯೭

ಪೃಥ್ವಿ ಅಪ್ಪು ತೇಜ ವಾಯುವಾಕಾಶವೆಂಬ
ಪಂಚಭೂತ ವಿಕಾರತನುಗಳು ಲಿಂಗಪೂಜೆಯ
ಬೆಬ್ಬನೆ ಬೆರವರು ಉಪದೇಶಮಾರ್ಗ.
ತನುಮನಧನವ ಪ್ರಾಣಾದಿಗಳ ಗುರುಲಿಂಗಕ್ಕೆ
ಕೊಟ್ಟೆವೆಂಬರು ನೋಡಾ! ನಾಚಿಕೆಯಿಲ್ಲದ
ಹೇಸಿಗೆಗೆಟ್ಟ ಉನ್ಮತ್ತರು.
ಲಿಂಗವಿದ್ದುದಕ್ಕೆ ಫಲವೇನೋ ಅಂಗವಿಕಾರವಳಿಯದನ್ನಕ್ಕ,
ಇಂದ್ರಿಯ ಸಂಗ ಮರೆಯದನ್ನಕ್ಕ ಪ್ರಸಾದವ
ಕೊಂಡೆವೆಂಬರು ನೋಡಾ ಬಹುಭಾಷಿಗಳು.
ನಿಧಾನವಿದ್ದ ನೆಲ ನುಡಿವುದು.
ಭೂತವಿಡಿದ ಮನುಷ್ಯ ತನ್ನ ತಾ ಮರೆದಿಹ.
ಲಿಂಗವಿದ್ದುದಕ್ಕೆ ಪ್ರಮಾಣವೇನೋ
ನಡೆತತ್ವ ನುಡಿ ಸಿದ್ಧಾಂತವಾಗಬೇಕು.
ಪಂಚೇಂದ್ರಿಯಂಗಳ ಉನ್ಮತ್ತವಡಗಬೇಕು.
ಸದಾಚಾರವೆಂತಳವಡುವವು
ಸದಾಚಾರ ತನ್ನಲ್ಲಿ ಸಾಹಿತ್ಯವಾಗದನ್ನಕ್ಕ.
ಇಹಪರವನರಸುವ ಸಂದೇಹಿಗಳಿಗೆ
ಚಿಕ್ಕಯ್ಯಪ್ರಿಯ ಸಿದ್ಧಲಿಂಗ ಇಲ್ಲ ಇಲ್ಲ ನಿಲ್ಲು ಮಾಣು.॥ ೯೬ ॥

೨೯೮

ಬಂಧವಿಲ್ಲದ ಭಾವವಿಲ್ಲದ ಸಂದಿಲ್ಲದ ಸಮರಸವಿಲ್ಲದ,
ಸಾಧ್ಯವಿಲ್ಲದ ಭೇದ್ಯವಿಲ್ಲದ ಬೆಳಗಾದಿ ಬೆಳಗುಗಳೇನೂ ಇಲ್ಲದ,
ಉಳಿದ ಉಳುಮೆಯೆಂಬ ಹುಟ್ಟು ಹೊಂದಿಲ್ಲದ ನಿರಾಳ
ಸುರಾಳವಿಲ್ಲದ
ಇವೇನೂ ಏನೂ ಇಲ್ಲದ ಏಕೋಭರಿತ ತಾನೆಯಾಯಿತ್ತಾಗಿ
ಚಿಕ್ಕಯ್ಯಪ್ರಿಯ ಸಿದ್ಧಲಿಂಗ ಇಲ್ಲ ಇಲ್ಲ, ನಿಲ್ಲುಮಾಣು.॥ ೯೭ ॥

೨೯೯

ಬಯಲೊಳಗುಣ ಬಯಲ ನಿರ್ವಯಲ ನುಂಗಿತ್ತು.
ಬಯಲ ಬಯಲ ನಿರ್ವಯಲು;
ಮಹಾಬಯಲೊಳಗೆ ಬಯಲಾಗಿ ನಿರವಯಲಿಲ್ಲ.
ಚಿಕ್ಕಯ್ಯಪ್ರಿಯ ಸಿದ್ಧಲಿಂಗಇಲ್ಲ ಇಲ್ಲ, ನಿಲ್ಲು ಮಾಣು.॥ ೯೮ ॥

೩೦೦

ಬಸವ ಮಾಡಿಹನೆಂದು ಬಾಯಲ್ಲಿ ಬಸಿವ
ಲೊಳೆಯನರಿಯದೆ ಎಸಕದಿಂದ ಮಾಡುವ
ಹುಸಿಭಕ್ತಿಯನರಿಯದ ಈ ಕಿಸಿವಾಯರಿಗೇಕೆ?
ಚಿಕ್ಕಯ್ಯಪ್ರಿಯ ಸಿದ್ಧಲಿಂಗ ಇಲ್ಲ ಇಲ್ಲ ಎಂದೆನು. ॥ ೯೯ ॥

೩೦೧

ಬಾಯಕ್ಕಿಯ ಬೇಡುವರೆಲ್ಲರು
ಬವಪಾಯಿವಂತರ ನೋವ ಬಲ್ಲರೆ?
ಹಿಡಿವ ವಿಹಂಗೆ ಪಶುವಿನ ನೋವ ಬಲ್ಲದೆ?
ಇಂತೀ ದೆಸೆಯ ಕಂಡು ನಾನಂಜಿದೆ.
ಚಿಕ್ಕಯ್ಯಪ್ರಿಯ ಸಿದ್ಧಲಿಂಗ ಇಲ್ಲ ಇಲ್ಲ ಎಂದೆ. ॥ ೧೦೦ ॥

೩೦೨

ಭಕ್ತಿಯನರಿಯ ಭಾವವನರಿಯ,
ವಿಚಿತ್ರವನರಿಯ ಚಿತ್ರಾರ್ಥವನರಿಯ,
ತತ್ವವಿಚಾರವ ಮುನ್ನವೆ ಅರಿಯ.
ನಿತ್ಯ ನಿರಂಜನ ಪರವಸ್ತು ತಾನೆಯಾದ ಕಾರಣ

ತನ್ನಿಂದನ್ಯವಾಗಿ ಮುಂದೆ ತೋರುವ ತೋರಿಕೆ ಒಂದೂ ಇಲ್ಲ.
ನಿರಾಳ ನಿರವಯಲು ನಿರಾಕಾರ ಪರವಸ್ತು ತಾನಲ್ಲದೆ ಮತ್ತೇನೂ ಇಲ್ಲ.
ಚಿಕ್ಕಯ್ಯಪ್ರಿಯ ಸಿದ್ಧಲಿಂಗವೆಂಬುದಕ್ಕೆ
ಎಡೆಯೊಂದು ಇಲ್ಲ, ನಿಲ್ಲು ಮಾಣು. ॥ ೧೦೧ ॥

೫೦೩

ಭೂಮಿ ಘನವೆಂಬೆನೆ ಪಾದಕ್ಕೊಳಗಾಯಿತ್ತು
ಗಗನ ಘನವೆಂಬೆನೆ ಕಂಗಳೊಳಗಾಯಿತ್ತು.
ಮಹವು ಘನವೆಂಬೆನೆ ಮಾತಿಂಗೊಳಗಾಯಿತ್ತು.
ಘನ ಘನವೆಂಬುದಿನ್ನೆಲ್ಲಿಯದೆಲವೊ!
ಅರಿವಿಂಗಾಚಾರವಿಲ್ಲ, ಕುರುಹಿಂಗೆ ನೆಲೆಯಿಲ್ಲ,
ಚಿಕ್ಕಯ್ಯಪ್ರಿಯ ಸಿದ್ಧಲಿಂಗ ಇಲ್ಲ ಇಲ್ಲ ಎಂದೆನು. ॥ ೧೦೨ ॥

೫೦೪

ಮಜ್ಜನದ ಮಾರಿಯೆ ಪತ್ರೆಯ ತಾಪತ್ರಯ
ನಿ[ರ್ಮಾ]ಲ್ಯವ ಲಿಂಗಾರ್ಪಿತ ಮಾಡುವವನೇನೆಂಬೆ.
ರೂಪಿಲ್ಲದುದನೊಂದು ಶಾಪ ಬಂಧನಕ್ಕೆ ತಂದು
ಕೋಪದ ದೂಪದಾರತಿಯಾದ ತೆರನೆಂತೊ!
ಅದು ಬೇಕೆನ್ನದು, ಬೇಡೆನ್ನದು, ಸಾಕೆಂಬುದು ಮುನ್ನಿಲ್ಲವಾಗಿ.
ಈ ಪರಿಯ ಭ್ರಮಿತರಿಗೆ ಚಿಕ್ಕಯ್ಯಪ್ರಿಯ ಸಿದ್ಧಲಿಂಗ ಇಲ್ಲ ಇಲ್ಲ. ॥ ೧೦೩ ॥

೫೦೫

ಮನ್ಯ ಓಡಿ ಆಹಾ! ಮನ್ಯ ನಿಂದು
ಸರಹೆತ್ತ ಮನಕ್ಕೆ ಸರಾದಿವೊಡೆಯನಾಗಿ
ಸರಶಬ್ದದಾ ಮಥನದಾ ಮಥಂತಿ ಮಥನದಾಸರ
ಮಥನದಿಂದ ಲಿಂಗ ಉತ್ಪತ್ಯ, ಜಂಗಮ ಉತ್ಪತ್ಯ, ಅನುಭಾವ ಉತ್ಪತ್ಯ.
ಸರದಿಂದ ನಿರವಯ, ನಿರವಯದಿಂದ ಸರ.
ಸರವಯದಿಂದೆರಡರನ್ವಯದ ಆಧಾರವನು

ತನ್ನ ಹೃದಯಕ್ಕೆ ತಂದು ನಿಂದಿತ್ತೆ ನಿರವಯವು.
ಇಂತೆಂದಿತ್ತೆ ಚಿಕ್ಕಯ್ಯಪ್ರಿಯ ಸಿದ್ಧಲಿಂಗ ಇಲ್ಲ ಇಲ್ಲ. ॥ ೧೦೪ ॥

೫೦೬

ಮಹಾನಾದ ಕಳೆಯವೆ ಲಿಂಗಕ್ಕಾಶ್ರಯವಾಗಿ,
ಲಿಂಗ ಕಳೆಯವೆ ಹೃದಯಕ್ಕಾಶ್ರಯವಾಗಿ,
ಹೃದಯದ ಕಳೆಯವೆ ಜ್ಞಾನಕ್ಕಾಶ್ರಯವಾಗಿ,
ಜ್ಞಾನದ ಕಳೆಯವೆ ನಿತ್ಯಕ್ಕಾಶ್ರಯವಾಗಿ,
ನಿತ್ಯನಿರವಯ ಚಿಕ್ಕಯ್ಯಪ್ರಿಯ ಸಿದ್ಧಲಿಂಗ ಇಲ್ಲ ಇಲ್ಲ
ಎನುತ್ತಿದ್ದೆನು. ॥ ೧೦೫ ॥

೫೦೭

ಮಹಾದೇವ ಪತಕ್ಕೆಡೆಯಾಡುವನೆ?
ಮಹಾದೇವ ಪರಾಪರ ಪರಿಪೂರ್ಣನಾಗಿ
ಮಹಾಸಂಗ ಸುಸಂಗ ನಿಸ್ಸಂಗ.
ಚಿಕ್ಕಯ್ಯಪ್ರಿಯ ಸಿದ್ಧಲಿಂಗ ಇಲ್ಲ ಇಲ್ಲದ ನಿಸ್ಸಂಗ. ॥ ೧೦೬ ॥

೫೦೮

ಮಾಯೆ ಉಂಡವರೆಲ್ಲ ಮಹಂತ ಬೋದರು.
ದೇಹ ಉಂಡವರೆಲ್ಲ ದೇವರ ಪೂಜಿಸಿದರು.
ಪಂಕ್ತಿ ಉಂಡವರೆಲ್ಲ ಪಥಕ್ಕೊಳಗಾದರು.
ಸ್ಥಿರ ಉಂಡವರೆಲ್ಲ ಇರದೆ ಹೋದರು.
ಹಾಲುಂಡವರೆಲ್ಲ ಹಂಬಲಿಸುತ್ತೈದಾರೆ.
ನಾನು ಚಿಕ್ಕಯ್ಯಪ್ರಿಯ ಸಿದ್ಧಲಿಂಗ ಇಲ್ಲ ಇಲ್ಲ ಎಂದೆನು. ॥ ೧೦೭ ॥

೫೦೯

ಮುಂಡವ ಹೊತ್ತುಕೊಂಡು ಮಂಡಲಕ್ಕೆ ಬಂದಡೆ
ಮಂಡಲದ ಹೆಮ್ಮಕ್ಕಳು ಮುಂಡವ ನೋಡುತ್ತಿದ್ದರು,
ಇತ್ತ ತಾರು ಮಾಯಿತ್ತು ತೋರು ಮಾಯೆಯೆನುತ್ತ
ನೆರೆದು ಮುಂಡವ ಕೊಂಡಾಡುತ್ತಿದ್ದರು.

ಇದರ ತಲೆಯತ್ತ ಹೋಯಿತ್ತೆಂದಡಲ್ಲಿಯೇ ಅಡಗಿತ್ತು.
ಚಿಕ್ಕಯ್ಯಪ್ರಿಯ ಸಿದ್ಧಲಿಂಗ ಇಲ್ಲ ಇಲ್ಲೆಂದುದಾಗಿ. ॥ ೧೦೮ ॥

೫೧೦

ಮುಟ್ಟಿ ಭಕ್ತನು ಮುನ್ನಲ್ಲ, ಬಿಟ್ಟ ಸೂತಕಿ ಬಳಿಕಲ್ಲ.
ನೆಟ್ಟನೆ ತಾನಾಗಿ ಆದಿ ಅಂತ್ಯ ಇಲ್ಲಾಗಿ
ಶರಣನು ಮುಟ್ಟಿ ಅರ್ಘ್ಯವಣೆಯ ಕೊಡನು.
ಹುಟ್ಟಿ ಹೊಂದುವ ಹೂವಿನ ಕಷ್ಟದ ಪೂಜೆಯನು ಮಾಡನು.
ಮಾಡಿಸಿಕೊಳ್ಳಲಿಲ್ಲವಾಗಿ ಮುಟ್ಟುವ ಮೂರುತಿ
ಮತ್ತೆಯೂ ನಷ್ಟವೆಂಬುದನರಿಯರು ಸೃಷ್ಟಿಯಲ್ಲಿ.
ಚಿಕ್ಕಯ್ಯಪ್ರಿಯ ಸಿದ್ಧಲಿಂಗ ಉಂಟೆಂಬರು. ॥ ೧೦೯ ॥

೫೧೧

ಮುನ್ನವೇ ಆಚಾರಕ್ಕೆ ಹೊರಗು, ನಾನನಾಚಾರಿಯಾದ ಕಾರಣ,
ನಿಮ್ಮಂತಹವನಲ್ಲ.
ಸಮಯಕ್ಕೆ ಹೊರಗು ಜಗದೊಳಗು.
ಎನ್ನ ಅರಿಕೆ ಎನಗೆ, ನಿಮ್ಮ ಸಮಯ ನಿಮಗೆ.
ಓಗರವನಿಕ್ಕುವಾತನ ಮನೆಯ ಬಾಗಿಲು
ಮುಚ್ಚಿಹಿತು ಹೋಗಿರಣ್ಣಾ.
ಅನಾಚಾರಿಯ ಮುಖವ ಸದಾಚಾರಿಗಳು ನೋಡಿ ಕೆಡಬೇಡ,
ಕೀಳ ತೆಣಕಲಿಲ್ಲ.
ಚಿಕ್ಕಯ್ಯಪ್ರಿಯ ಸಿದ್ಧಲಿಂಗ ಇಲ್ಲ ಇಲ್ಲ ಎಂದೆ. ॥ ೧೧೦ ॥

೫೧೨

ಮೂರ ಬಿಟ್ಟವಂಗಲ್ಲದೆ ಸತ್ಯವ ಸಾಧಿಸಬಾರದು.
ಆರ ಬಿಟ್ಟವಂಗಲ್ಲದೆ ಆದಳಿಸಬಾರದು.
ಎಂಟ ಬಿಟ್ಟವಂಗಲ್ಲದೆ ಸಾಕಾರದ ಕಂಟಕವನರಿಯಬಾರದು.
ರಣದಲ್ಲಿ ಓಡಿ ಮನೆಯಲ್ಲಿ ಬಂಟತನವನಾಡುವನಂತೆ.
ಚಿಕ್ಕಯ್ಯಪ್ರಿಯ ಸಿದ್ಧಲಿಂಗ ಇಲ್ಲ ಇಲ್ಲ, ನಿಲ್ಲು ಮಾಣು. ॥ ೧೧೧ ॥

೫೧೩

ಮೇಲನರಿತಲ್ಲಿ ಕೀಳಿಲ್ಲ,
ಕೀಳನರಿತಲ್ಲಿ ಮೇಲಿಲ್ಲ.

ಮೇಲು ಕೀಳೆಂಬ ಬೋಳು ಮಾಡಿ
ಧೂಳಾಗಬಲ್ಲರೆ ಹೇಳಲಿಲ್ಲ, ಕೇಳಲಿಲ್ಲ.
ಚಿಕ್ಕಯ್ಯಪ್ರಿಯ ಸಿದ್ಧಲಿಂಗ ಇಲ್ಲ ಇಲ್ಲ,
ಮಿಗೆ ಮಿಗೆ ಬಯಲು. ॥ ೧೧೨ ॥

೫೧೪

ಯೋಗದ ಹೊಲಬ ಸಾಧಿಸಬಾರದು.
ಯೋಗವೆಂಟರ ಹೊಲಬಲ್ಲ.
ಯೋಗ ಒಂಬತ್ತರ ನಿಲವಲ್ಲ.
ಯೋಗವಾರರ ಪರಿಯಲ್ಲ.
ಧರೆಯ ಮೇಲಣ ಅಗ್ನಿ ಮುಗಿಲ ಮುಟ್ಟದಿಪ್ಪಡೆ ಯೋಗ.
ಮನದ ಕಂಗಳ ಬೆಳಗು ಸಸಿಯ ಮುಟ್ಟಿದೆನೆನ್ನದೆ
ಘನವ ಮನವನೊಳಕೊಂಡಡದು ಯೋಗ.
ವನಿತೆಯರರಿವರನು ಪತಿಯೊಮ್ಮೆ ಕೂಡಿ
ತಳುವಳಿದಿರಬಲ್ಲಡದು ಯೋಗ.
ಘನಮಹಿಮ ಪ್ರಭುವಿನ ಸಮರಸ ಯೋಗವ ಕಂಡು
ಚಿಕ್ಕಯ್ಯಪ್ರಿಯ ಸಿದ್ಧಲಿಂಗ ಇಲ್ಲ ಇಲ್ಲ ಎಂದನು. ॥ ೧೧೩ ॥

೫೧೫

ರುದ್ರದೇವ ಮಹಾದೇವ ಇವರಿಬ್ಬರೂ ಬೀಗರಯ್ಯಾ.
ಒಬ್ಬರು ಹೆಣ್ಣಿನವರು, ಒಬ್ಬರು ಗಂಡಿನವರು.
ಹಂದರವಿಕ್ಕಿತ್ತು, ಮದುವೆ ನೆರೆಯಿತ್ತು,
ಶೋಬನವೆಂದಲ್ಲಿಯೇ ಅಳಿಯಿತ್ತು.
ಚಿಕ್ಕಯ್ಯಪ್ರಿಯ ಸಿದ್ಧಲಿಂಗ ಇಲ್ಲ ಇಲ್ಲ ಎಂದನು. ॥ ೧೧೪ ॥

೫೧೬

ರೋಗಿಗೆ ಹಾಲು ಸಿಹಿಯಪ್ಪುದೆ?
ಗೂಗೆಗೆ ರವಿ ಲೇಸಪ್ಪುದೆ?
ಚೋರಗೆ ಬೆಳಗು ಗುಣವಪ್ಪುದೆ?
ಭವಸಾಗರದ ಸಮಯದಲ್ಲಿದ್ದವರು
ಸಿರ್ಭಾವನ ಭಾವವನೆತ್ತ ಬಲ್ಲರು?
ಚಿಕ್ಕಯ್ಯಪ್ರಿಯ ಸಿದ್ಧಲಿಂಗ ಇಲ್ಲ ಇಲ್ಲ ಎಂದೆ. ॥ ೧೧೫ ॥

೫೧೭

ಲಿಂಗ ಜಂಗಮ, ಜಂಗಮ ಲಿಂಗವೆಂಬ ನಿಂದೆಯ ಮಾತು
ಇಂತು ನೋಡಾ!
ಅಂದಂದಿಗೆ ಬರು ಶಬ್ದವಯ್ಯಾ,
ಉಭಯಕುಳ ಲಿಂಗವಿಡಿದಾಡುವವರಿಗೆ
ಚಿಕ್ಕಯ್ಯಪ್ರಿಯ ಸಿದ್ಧಲಿಂಗ ಇಲ್ಲ ಇಲ್ಲ ಎಂದುದಾಗಿ.॥ ೧೧೬ ॥

೫೧೮

ಲಿಂಗದಿಂದಲಾದ ಕಾಯವ ಹಿಂಗಿ ಹೋಹ ತೆರನಿನ್ನೆಂತೊ!
ಅಳಿಯಲಾಗದು ಕಾಯವ, ಉಳಿಯಲಾಗದು ಪ್ರಾಣವ.
ಚಿಕ್ಕಯ್ಯಪ್ರಿಯ ಸಿದ್ಧಲಿಂಗ ಇಲ್ಲ ಇಲ್ಲವೆಂಬ ಭಂಗ
ಹಿಂಗದಲ್ಲಾ. ॥ ೧೧೭ ॥

೫೧೯

ಲಿಂಗವೆನ್ನೆ ಲಿಂಗೈಕ್ಯವೆನ್ನೆ.
ಸಂಗವೆನ್ನೆ ಸಮರಸವೆನ್ನೆ.
ಆಯಿತ್ತೆನ್ನೆ ಆಗದೆನ್ನೆ, ನೀನೆನ್ನೆ.
ಚಿಕ್ಕಯ್ಯಪ್ರಿಯ ಸಿದ್ಧಲಿಂಗ
ಏನೆಂಬುದಕ್ಕೆ ಮುನ್ನವೆ ಇಲ್ಲ, ನಿಲ್ಲು [ಮಾಣು]. ॥ ೧೧೮ ॥

೫೨೦

ಲೀಲೆಗೆ ಹೊರಗಾದ ಲಿಂಗವೆ ಬಾರಯ್ಯಾ,
ಎನ್ನ ಅಂಗದೊಳಗಾಗು.
ಶ್ರುತ ದೃಷ್ಟ ಅನುಮಾನದಲ್ಲಿ ನೋಡುವವರಿಗೆಲ್ಲಕ್ಕೂ
ಅತೀತವಾಗು.
ಆಗೆಂಬುದಕ್ಕೆ ಮುನ್ನವೆ ಆ ಗುಂಡು
ಕಾಯದ ಕರಸ್ಥಲದಲ್ಲಿ ನಿರ್ಭಾವವಾಗಿ,
ಕಾಯವಡಗಿ, ಭಾವವೆಂಬ ಬಯಲಾಯಿತ್ತು,
ಚಿಕ್ಕಯ್ಯಪ್ರಿಯ ಸಿದ್ಧಲಿಂಗ ಇಲ್ಲ ಇಲ್ಲ ಎಂಬುದಕ್ಕೆ
ಮುನ್ನವೆ. ॥ ೧೧೯ ॥

೫೨೧

ವಾಙ್ಮನಕ್ಕೆ ಬಾರದ ಅಪ್ರತಿಮಲಿಂಗವ ಕೂಡಿ
ಅಚಲಾನಂದದೊಳಿಪ್ಪ ಪರಮ ನಿರ್ಲೇಪಿಗೆ ಭಾವವಿಲ್ಲ.
ಭಾವವಿಲ್ಲವಾಗಿ ಜ್ಞಾನವಿಲ್ಲ.
ಜ್ಞಾನವಿಲ್ಲವಾಗಿ ಚಿಕ್ಕಯ್ಯಪ್ರಿಯ ಸಿದ್ಧಲಿಂಗ ಇಲ್ಲ ಇಲ್ಲ, ನಿಲ್ಲು ಮಾಣು. ॥ ೧೨೦ ॥

೫೨೨

ವಾಯದ ರಾಸಿಗೆ ಮಾಯದ ಕೊಳಗ
ಅಳೆವುದು ನೆಳಲು, ಹೊಯಿವುದು ಬಯಲು.
ತುಂಬಿಹೆನೆಂದಡೆ ತುಂಬಲು ಬಾರದು.
ತುಂಬಿದ ರಾಸಿಯ ಕಾಣಲು ಬಾರದು.
ಅಳತೆಗೆ ಬಾರದು; ಹೊಯ್ಲಿಗೊಳಗಾಗದು.
ಚಿಕ್ಕಯ್ಯಪ್ರಿಯ ಸಿದ್ಧಲಿಂಗ ಇಲ್ಲ ಇಲ್ಲ, ಮಿಗೆ ಬಯಲು. ॥ ೧೨೧ ॥

೫೨೩

ವೇದ ಶಾಸ್ತ್ರ ಪುರಾಣಗಳಿಂದ ಅರಿದೆವೆಂಬ
ಷಟ್‌ಸ್ಥಲಜ್ಞಾನಿಗಳು ನೀವು ಕೇಳಿರಣ್ಣಾ.
ನೀವು ಅರಿವ ಪರಿಯೆಂತುಟು ಹೇಳಿರಣ್ಣಾ.
ನಿಮ್ಮ ಸಂದೇಹ ನಿಮ್ಮ ನಿಮ್ಮತಿಂದು ತೇಗುಗು.
ನಿಮ್ಮ ಸಂಕಲ್ಪ ನಿಮ್ಮ ಕೊಂದು ಕೂಗುಗು.
ಅರಿವು ಸಂಬಂಧಿಗಳಿಂದ ಅರಿದೆವೆಂಬಿರಿ.
ಹೇಳುವ ಗುರು ಸಂದೇಹಿ, ಕೇಳುವ ಶಿಷ್ಯ ಸಂದೇಹಿ,
ಎನ್ನ ಅರಿವು ಬೇರೆ, ನಿಮ್ಮಾಚಾರ ಬೇರೆಯಾಗಿಪ್ಪುದು.
ನೀವೆನಗೆ ಕರ್ತರಾದ ಕಾರಣ ನಾ ನಿಮಗೆ ತೆತ್ತಿಗನಾದ ಕಾರಣ
ನಿಮ್ಮ ಸಂದೇಹ ಸಂಕಲ್ಪ ನಿವೃತ್ತಿಯ ಮಾಡುವನು ಕೇಳಿರಣ್ಣಾ.
ಶ್ರೀಗುರುಸ್ವಾಮಿ ಕರುಣಿಸಿಕೊಟ್ಟ ಇಷ್ಟಲಿಂಗವು
ಆ ಲಿಂಗದ ವೃತ್ತ ಗೋಳಕ ಗೋಮುಖ
ಇಂತೀ ತ್ರಿವಿಧಸ್ಥಾನಂಗಳಲ್ಲಿ ಭಿನ್ನವಾಗಲು
ಲಿಂಗಧ್ಯಾನವಲ್ಲಿ ನಿಂದು ಲಿಂಗೈಕ್ಯರ ಸಂಗವಲ್ಲಿ
ಅಂಗವ ಬಯಲ ಮಾಡುವರು.

॥ಸಾಕ್ಷಿ॥
ಸರ್ವಾಂಗಲಿಂಗದೇಹಸ್ಯ ಲಿಂಗಭಿನ್ನ ವಿವರ್ಜಯೇತ್।
ತದ್ದೇಹ ಪರಿತ್ಯಾಗಃ ಮದ್ಭಕ್ತಸ್ಯ ಸುಲಕ್ಷಣಂ ॥
ಇಂತೆಂದುದಾಗಿ, ಇದಕ್ಕೆ ಸಂದೇಹಬೇಡ.
ಇನ್ನೊಂದು ಪರಿಯನ್ನು ಹೇಳಿಹೆನು ಕೇಳಿರಣ್ಣಾ.
ಅಖಂಡ ಪರಿಪೂರ್ಣಲಿಂಗವ ಶ್ರೀಗುರು ಕೈಯಲ್ಲಿ ಕೊಟ್ಟರೆ
ಶಕ್ತಿ ಸಂಪುಟದಿಂದ ಉತ್ಕೃಷ್ಟಮುಖದೆ ಅಂಗವ ಬಯಲು
ಮಾಡಬೇಕು.
ಇನ್ನೊಂದು ಪರಿಯನ್ನು ಹೇಳಿಹೆನು ಕೇಳಿರಣ್ಣಾ.
ವೃತ್ತಗೋ [ಳಕ] ಗೋಮುಖಂಗಳಲ್ಲಿ ಮಂತ್ರಯುಕ್ತವಾಗಿ
ಮಾಯಾಬಂಧಗಳಿಂದ ಬಂಧಿಸಿ
ಅಖಂಡ ಲಿಂಗವೆಂದು ಕರಸ್ಥಲಕ್ಕೆ ಕೊಟ್ಟನಯ್ಯಾ ಶ್ರೀಗುರು.
ಶಕ್ತಿ ಸಂಪುಟದಿಂದ ಉತ್ಕೃಷ್ಟವಾಯಿತ್ತೆಂದು
ಸಂದೇಹವ ಮಾಡುವ ಸ್ವಾಮಿದ್ರೋಹಿಗಳ ಮುಖವ
ನೋಡಲಾಗದು.
ಇದಕ್ಕೆ ಸಂದೇಹವಿಲ್ಲ. ಅದೆಂತೆಂದಡೆ:
ವಿಯೋಗಾಚ್ಛಿವಶಕ್ತಿಶ್ಚ ನ ಶಂಕಾ ವೀರಶೈವಾನಾಂ।
ಮನೋಬಂಧಂ ತಥಾ ಕುರ್ಯಾತ್ ಲಿಂಗ ಧಾರಯೇತ್ಸುಧೀಃ॥
ಇಂತೆಂದುದಾಗಿ,
ಮನೋರ್ಬಂಧಂಗಳಿಂದ ಬಂಧಿಸಿ ಆ ಲಿಂಗವನೆ ಧರಿಸೂದು.
ಭಕ್ತನಾದಡೂ, ಮಾಹೇಶ್ವರನಾದಡೂ, ಪ್ರಸಾದಿಯಾವಡೂ,
ಪ್ರಾಣಲಿಂಗಿಯಾದಡೂ, ಶರಣನಾದಡೂ, ಐಕ್ಯನಾದಡೂ
ಸಂದೇಹವಿಲ್ಲದೆ ಆ ಲಿಂಗವನು ಧರಿಸೂದು.
ಹಿಂಗಲ್ಲದೆ ಸಂದೇಹವುಂಟೆಂಬವರೆಲ್ಲರು
ಗುರುದ್ರೋಹಿಗಳು ಲಿಂಗದ್ರೋಹಿಗಳು ಜಂಗಮ ದ್ರೋಹಿಗಳು
ಪಾದೋದಕ ದ್ರೋಹಿಗಳು ಪ್ರಸಾದದ್ರೋಹಿಗಳು
ಇಂತಿವರಲ್ಲಿ ಚಿಕ್ಕಯ್ಯಪ್ರಿಯ ಸಿದ್ಧಲಿಂಗವು
ಸ್ವಪ್ನದಲ್ಲಿಯೂ ಸುಳಿಯನು. ॥೧೨೨॥

೫೨೪

ವೇಷವೆಂಬ ರುದ್ರನ ಪಾಶವ ಹೊತ್ತು
ಈಷಣತ್ರಯಕ್ಕೆ ತಿರುಗಾಡುವ ವೇಷಧಾರಿಗಳಿಗುಂಟೆ
ಮಹಾಜ್ಞಾನವ ಸಂಪತ್ತಿನ ಸಂಬಂಧ?

ಸ್ವಾದೋದಕದಲ್ಲಿ ಉಂಟೆ ಕ್ಷಾರದ ವಾರಿ?
ಸಮಯದಲ್ಲಿ ಉಂಟೆ ನಿಜ ಶರಣರ ನೆಲೆ?
ಎನಗಾವ ಭ್ರಮೆಯಿಲ್ಲ,
ಚಿಕ್ಕಯ್ಯಪ್ರಿಯ ಸಿದ್ಧಲಿಂಗ ಇಲ್ಲ ಇಲ್ಲ ಎಂದೆ. ॥ ೧೨೩ ॥

೫೨೫

ಶಿವ ಶಕ್ತಿಯಲ್ಲಿ ತೃಪ್ತರಾದವರು ನೀವು ಕೇಳಿರೆ.
ನಿಮ್ಮ ಗುರು ಶಕ್ತಿಯ ಮೇಲೆ ಸ್ವಾಯತವ ಮಾಡಿದನು.
ಶಿವನ ಮೇಲೆ ಸ್ವಾಯತವ ಮಾಡುವ ಗುರುವಿಲ್ಲ.
ಇಲ್ಲಿಯೆಲ್ಲಾ ಶಿವ ಶಕ್ತಿಯೆಂಬ ಶಬ್ದದೊಳಗಳಿಯಿತ್ತಲ್ಲಾ ಲೋಕವೆಲ್ಲಾ!
ಆಚಾರ್ಯನು ಕುಟಲವ ಕೊಟ್ಟು ಹೋದನಲ್ಲಾ ಲೋಕದ ಕೈಯಲ್ಲಿ!
ರೂಪಿಗಳು ಮಾಡಿದ ಶಬ್ದದೊಳಗಳಿಯಿತ್ತಲ್ಲಾ ಲೋಕವೆಲ್ಲಾ!
ಪಾಷಾಣ ದಂದುಗದ ಹೇಸಿಕೆಯೊಳಗೆ ಸತ್ತುದಲ್ಲಾ
ಲೋಕವೆಲ್ಲಾ!
ಕೇಳಲಾಗದೀ ಶಬ್ದವ.
ಶಿವನ ಕರೆದು ಸ್ವಾಯತವ ಮಾಡಿದೆನು.
ಶಕ್ತಿಯ ಕರೆದೆನ್ನ ಮಠಕ್ಕೆ ಕಾಯಕವ ಮಾಡಿಸಿದೆನು, ಇವರಿಬ್ಬರ
ಕೈಯಲ್ಲಿ
ಚಿಕ್ಕಯ್ಯಪ್ರಿಯ ಸಿದ್ಧಲಿಂಗ ಇಲ್ಲಇಲ್ಲ ಎಂದೆನಿಸಿದೆನು ॥ ೧೨೪ ॥

೫೨೬

ಸತ್ತವಂಗೆ ಸಾಹಿತ್ಯ; ಇದ್ದವಂಗೆ ದೇವರು.
ಬುದ್ಧಿವಂತನೆಂಬುವ ಪ್ರಸಾದಗುಡನು.
ಈ ಮೂವರು ಮೂರು ಸುಸರವಾಯಿತ್ತು, ನಾನಿನ್ನೇನ ಮಾಡುವೆ!
ನಾ ಮಾಡದ ಮುಖದಲ್ಲಿ ಶೂನ್ಯಕ್ಕೆ ನಿಂದುದು.
ಚಿಕ್ಕಯ್ಯಪ್ರಿಯ ಸಿದ್ದಲಿಂಗ ಇಲ್ಲ ಇಲ್ಲ ನಿಲ್ಲು ಮಾಣು. ॥ ೧೨೫ ॥

೫೨೭

ಸತ್ತ ಶವ ಕಿಚ್ಚ ಬಲ್ಲುದೆ?
ನಿಷ್ಠೆ ನಿಬ್ಬೆರಗಾದ ಕರ್ತೃ ಮರ್ತ್ಯರ ಬಲ್ಲನೆ?
ತೊಟ್ಟು ಬಿಟ್ಟ ಹಣ್ಣು ಮತ್ತೆ ಹತ್ತುವದೆ?
ಚಿಕ್ಕಯ್ಯಪ್ರಿಯ ಸಿದ್ಧಲಿಂಗ ಇಲ್ಲ ಇಲ್ಲ ನಿಲ್ಲು ಮಾಣು. ॥ ೧೨೬ ॥

೫೨೮

ಸರ್ಪಂಗೆ ಪಿಕಂಗೆ ಒಪ್ಪದ ಮನೆ ಉಂಟೆ?
ಎನಗಾ ಹೆಚ್ಚು ಕುಂದೆಂಬ ಮಿಥ್ಯದ ಭಾವವಿಲ್ಲ.
ಚಿಕ್ಕಯ್ಯಪ್ರಿಯ ಸಿದ್ಧಲಿಂಗ ಇಲ್ಲ ಇಲ್ಲ ಎಂದೆ. ॥ ೧೨೭ ॥

೫೨೯

ಸಬಳದ ತುದಿಯಲ್ಲಿ ಬಿರುದ ಕಟ್ಟಿ
ಆದರ ತಲೆವಿಡಿಯತೊಡಗಿದಡೆ
ನಾನಲ್ಲ ಸಬಳಕ್ಕೆ ಬಿರುದೆಂಬವನಂತೆ!
ಹಾಗೆಂದ ಮತ್ತೆ ತೊಡಗುವನೆಗ್ಗ.
ಚಿಕ್ಕಯ್ಯಪ್ರಿಯ ಸಿದ್ಧಲಿಂಗ ಇಲ್ಲ ಇಲ್ಲ ಎಂದೆನು.॥ ೧೨೮ ॥

೫೩೦

ಸರದ ಸಾರದ ನಿಸ್ಸಾರಾಯವ ನಿರುತವಲ್ಲೆಂದು
ಅರಿತು ಅರಿಯರು ಹಿರಿಯರೆನಿಸಿಕೊಂಬ ನರತರುಗಳು
ಇವರೆತ್ತ ಬಲ್ಲರು?
ಹಸಿವಿಲ್ಲದೆ ಮುನ್ನಲುಂಡ ಊಟವ
ನಸೆಯಿಲ್ಲದೆ ಆಪ್ಯಾಯನವರಿಯರು.
ಹುಸಿಯಲಿ ನುಸುಳುವರಿಗೆ ತನ್ನ ವಶಕೆ ತರಲಿನ್ನಿಲ್ಲವಿನ್ನೆಂತೊ?
ಭರಿತವೆಂಬರು ಭಾವಕ್ಕಿಂಬಿಲ್ಲ,
ಮರೆಯಲ್ಲಿ ಕುಲವ್ಯಸನ ಭ್ರಮೆಯವರರಿವಿನಲ್ಲಿ
ಚಿಕ್ಕಯ್ಯಪ್ರಿಯ ಸಿದ್ಧಲಿಂಗ ಇಲ್ಲ ಎಂಬರು. ॥ ೧೨೯ ॥

೫೩೧

ಸರಿವಿಡಿಯೆ ಗುರುವಿಡಿಯೆ.
ಗುರುವಿಡಿದು ಲಿಂಗವಿಡಿಯೆ.
ಪರಿವಿಡಿಯೆ ಈ ಲೋಕದ ಬಳಕೆವಿಡಿಯೆ.
ಇಲ್ಲವೆಯ ತಂದೆನು ಬಲ್ಲವರು ಬನ್ನಿ ಭೋ!
ಶರಣಸತಿ ಲಿಂಗಪತಿಯೆಂಬುದ ಕೇಳಿ
ಉಂಟಾದುದ ಇಲ್ಲೆನಬಂದೆ.
ಇಲ್ಲದುದ ಉಂಟೆನಬಂದೆ.
ಅಷ್ಟವಿಧಾರ್ಚನೆ ಷೋಡಶೋಪಚಾರವ ಮಾಡುವ ಕರ್ಮಿಗಳಿಗೆ

ನೆಟ್ಟನೆ ಗುರುವಿಲ್ಲೆನಬಂದೆ.
ಮುಟ್ಟಲರಿಯರು ಪ್ರಾಣಲಿಂಗವ.
ಅಟ್ಟಿ ಹತ್ತುವರೀ ಲೋಕದ ಬಳಕೆಯ
ಇಷ್ಟಲಿಂಗದ ಹಂಗು ಹರಿಯದ ಕಾರಣ
ಚಿಕ್ಕಯ್ಯಪ್ರಿಯ ಸಿದ್ಧಲಿಂಗವಿಲ್ಲೆನ ಬಂದೆ. ॥ ೧೩೦ ॥

೫೩೨

ಸರ್ವ ಲಯವು ತಾನೆ.
ಸರ್ವ ನಿಃಕಳಂಕ ಮಹಾಘನವಸ್ತುವು ತಾನೆ.
ನಿರ್ಮಳ ನಿರಾವರಣನು ತಾನೆ.
ನಿಗಮಾತೀತನು ತಾನೆ.
ನಿರಾಳ ಸುರಾಳವು ತಾನೆ.
ಚಿಕ್ಕಯ್ಯಪ್ರಿಯ ಸಿದ್ಧಲಿಂಗ ಇಲ್ಲ ಇಲ್ಲ. ॥ ೧೩೧ ॥

೫೩೩

ಸ್ಥಲನಲ್ಲ ಕುಳನಲ್ಲ ನಿಃಸ್ಥಲನಲ್ಲ!
ನಿರಾಧಾರ ನಿಶ್ಚಿಂತ ನಿಗಮಗೋಚರ ನಿಸ್ಸೀಮ ನಿರಾಲಂಬ
ಸರ್ವಶೂನ್ಯ ಸತ್ತು ಚಿತ್ತಾನಂದಾದಿಗಳಿಗೆ ನಿಲುಕುವನಲ್ಲ.
ತತ್ವಬ್ರಹ್ಮಾಂಡಾದಿ ಲೋಕಾಲೋಕಂಗಳ ಕಲ್ಪಿಸಿ ನುಡಿವವನಲ್ಲ.
ಇವೇನೂ ಇಲ್ಲದ ಚಿಕ್ಕಯ್ಯಪ್ರಿಯ ಸಿದ್ಧಲಿಂಗ ಇಲ್ಲ ಇಲ್ಲ, ನಿಲ್ಲು
ಮಾಣು. ॥ ೧೩೨ ॥

೫೩೪

ಸಾಧಕನವನೊಬ್ಬ ನೇತ್ರವಟ್ಟೆಯನುಟ್ಟುಕೊಂಡು
ಸೂತ್ರಧಾರಿಯನರಸುತ್ತ ಬಂದನಯ್ಯಾ!
ಕರೆಯಿರಯ್ಯಾ ಕರೆದು ತೋರಿಸಿರಯ್ಯಾ
ಕರೆಹಕ್ಕೆ ನೆರಹಕ್ಕೆ ಹೊರಗಾದವನು,
ಹೋಗೋ ಬಾರೋ ಎಂದಲ್ಲಿಯೆ ಅಡಗಿತ್ತು
ಚಿಕ್ಕಯ್ಯಪ್ರಿಯ ಸಿದ್ಧಲಿಂಗ ಇಲ್ಲ ಇಲ್ಲ. ॥ ೧೩೩ ॥

೫೩೫

ಸಾರಂಗದ ತುದಿಯಲ್ಲಿ ಧಾರೋದ್ರಿಜವ ತುಂಬಿದರು.
ಮೇರು ಮಂದಿರದ ಮೇಲೆ ಮನೆಯ ಮಾಡಿದರಾರೋ?
ತಿದಿಯ ಹರಿವೆ, ಮನೆಯ ಸುಡುವೆ,
ನಿಲುವೆ ಹೊಸ ಪರಿಯರಿಯಾ!
ಎನ್ನ ಪರಿಯ ಹಿಂದೆ ಕೇಳಿದ್ದು
ಮನೆಯೊಳಗಣ ಬೂದಿಯ ಭಸ್ಮವಾಗಿ ಧರಿಸಿ
ಚಿಕ್ಕಯ್ಯಪ್ರಿಯ ಸಿದ್ಧಲಿಂಗ ಇಲ್ಲ ಇಲ್ಲ ಎಂದೆನು. ॥ ೧೩೪ ॥

೫೩೬

ಸಾವಿರ ಪರಿಯಲಿ ಉದರವ ಹೊರೆವರೆ
ಸಾವರಲ್ಲದೆ ಸಮ್ಮಿಶ್ರರಾಗರಿದೇನೋ!
ಎಂತೆಂತು ಮಾಡಿದಡೆ ಅಂತಂತೆ ಲಯವು.
ಎಂತೆಂತು ನೋಡಿದಡೆ ಅಂತೆಂತು ಇಲ್ಲ.
ಇದೇನೊ ಇದೇನೋ! ಎಳಕುಳಿಜಾಲೆಯ ಕಳಾಕುಳ ಬಿಡಮು,
ಚಿಕ್ಕಯ್ಯಪ್ರಿಯ ಸಿದ್ಧಲಿಂಗ ಇಲ್ಲ ಇಲ್ಲದ ಕಾರಣ. ॥ ೧೩೫ ॥

೫೩೭

ಸ್ಥಾವರವಾಗಿ ಭೂಮಿಯಲ್ಲಿ ಪೂಜಿಸಿಕೊಂಬುದು ಶೈವಲಿಂಗ.
ಚರವಾಗಿ ಭೂಮಿಯಲ್ಲಿ ಪೂಜಿಸಿಕೊಂಬುದು ಇಷ್ಟಲಿಂಗ.
ಅರಿವಿನ ಮನದ ಕೊನೆಯಲ್ಲಿ ನಿತ್ಯನಿವಾಸವಾಗಿ
ಪೂಜಿಸಿಕೊಂಬುದು ವೀರಶೈವಲಿಂಗ
ಇಂತೀ ಲಿಂಗತ್ರಯದ ಆದಿ ಆಧಾರವನರಿಯದೆ
ಹೋದರಲ್ಲಾ ಹೊಲಬುದಪ್ಪಿ
ಇನ್ನಾರಿಗೆ ಹೇಳುವೆ, ಚಿಕ್ಕಯ್ಯಪ್ರಿಯ ಸಿದ್ಧಲಿಂಗ ಇಲ್ಲ ಇಲ್ಲ
ಎಂದೆ ॥ ೧೩೬ ॥

೫೩೮

ಸುಳಿದಡೆ ಒಡಲಿಲ್ಲ, ನಿಂದಡೆ ನೆಳಲಿಲ್ಲ,
ನಡೆದಡೆ ಗಮನವಿಲ್ಲ, ನುಡಿದಡೆ ಶಬ್ದವಿಲ್ಲ.

ದಗ್ಧಪಟನ್ಯಾಯದ ಹಾಗೆ, ಉಂಡಡೆ ಉಪಾಧಿಯಿಲ್ಲ
ಉಣ್ಣದಿದ್ದಡೆ ಕಾಂಕ್ಷೆಯಿಲ್ಲ.
ಯಥಾಲಾಭ ಸಂತುಷ್ಟನಾಗಿ
ಸ್ತುತಿಯಿಲ್ಲ ನಿಂದೆಯಿಲ್ಲ ನಂಟಿಲ್ಲ ಹಗೆಯಿಲ್ಲ
ಅರಿವಿಲ್ಲ ಮರಹಿಲ್ಲ ತಾನೆಂಬ ನೆನಹಿಲ್ಲವಾಗಿ
ಚಿಕ್ಕಯ್ಯಪ್ರಿಯ ಸಿದ್ಧಲಿಂಗ
ಮುಂದೆ ಏನೂ ಎನಲಿಲ್ಲ, ನಿಲ್ಲು ಮಾಣು. ॥ ೧೩೭ ॥

೫೩೯

ಸುಳುಹೆಂಬ ಸೂತಕವಡಗಿ,
ಅರಿವೆಂಬ ಮರಹು ನಷ್ಟವಾಗಿ,
ಅದು ಇದು ಎಂಬುದಿಲ್ಲ.
ಅದೇತರದೂ ಇಲ್ಲ.
ಚಿಕ್ಕಯ್ಯಪ್ರಿಯ ಸಿದ್ಧಲಿಂಗ ಇಲ್ಲ ಇಲ್ಲ, ನಿಲ್ಲು ಮಾಣು. ॥೧೩೮॥

೫೪೦

ಹಲವು ಬಣ್ಣದ ಹಕ್ಕಿ ಹಣ್ಣ ಮೆಲಬಂದಡೆ,
ಹಣ್ಣು ಹಕ್ಕಿಯ ನುಂಗಿ ಉಗುಳದಿನ್ನೆಂತೊ!
ಕಣ್ಣ ಕಾಣದ ಹಕ್ಕಿ ಹಣ್ಣ ಮೆಲಬಂದಡೆ,
ಹಣ್ಣು ಹಕ್ಕಿಯ ನುಂಗಿ ಉಗುಳದಿನ್ನೆಂತೊ!
ಸಣ್ಣ ಬಣ್ಣದ ಮಾತಿನ ಅಣ್ಣಗಳೆತ್ತ ಬಲ್ಲರೊ,
ಚಿಕ್ಕಯ್ಯಪ್ರಿಯ ಸಿದ್ಧಲಿಂಗ ಇಲ್ಲ ಇಲ್ಲವೆಂದುದಾಗಿ. ॥ ೧೩೯ ॥

೫೪೧

ಹಸಿದು ತಾರಕೆ ಊಟವ ಕೇಳಹೋದಡೆ
ಕೂಟವೆದ್ದು ಬಡಿದರು.
ಸಾಕಾರ ಮೊದಲು ಧಾತುಗೆಟ್ಟೆಯಲ್ಲಾ.
ಪರಶಿವ ಆತ್ಮನಾಗಿ ಇದೇತಕ್ಕೆ ಬಂದೆ ತನುವಿನಾಶೆಗಾಗಿ.
ಇವರಾಶೆಯ ಹೊಗದಿರು
ಚಿಕ್ಕಯ್ಯಪ್ರಿಯ ಸಿದ್ಧಲಿಂಗ ಇಲ್ಲ ಇಲ್ಲ ಎಂದೆನು. ॥ ೧೪೦ ॥

೫೪೨

ಹಸೆಯಿಲ್ಲದ ಹಂದರದಲ್ಲಿ ನಿಬ್ಬಣವಿಲ್ಲದ ಮದುವೆಯ ಮಾಡಿ
ಮದುವಣಿಗನಿಲ್ಲದೆ ಸೇಸೆಯ ತುಂಬಿ

ಕಳವಳಗೊಂಡಿತು ಜಗವೆಲ್ಲ
ನಿಬ್ಬಣಿಗರು ಮದವಣಿಗನನರಿಯದೆ ಅಬ್ಬರದೊಳಗಿದ್ದಡೆ
ಚಿಕ್ಕಯ್ಯಪ್ರಿಯ ಸಿದ್ಧಲಿಂಗ ಇಲ್ಲ ಇಲ್ಲ ಎಂದೆನು. ॥ ೧೪೧ ॥

೫೪೩

ಹಾದಿಯ ಬೆಳ್ಳನ ಕಳ್ಳರು ತಾಕಿದಡೆ
ಇನ್ನಾರಿಗೆ ಮೊರೆಗೊಡುವ?
ತಾ ಸತ್ತ ಮತ್ತೆ ತನ್ನನರಿದವಂಗೆ
ಇನ್ನಾರಿಗೂ ಮಿಥ್ಯವೇಕೆ?
ಚಿಕ್ಕಯ್ಯಪ್ರಿಯ ಸಿದ್ಧಲಿಂಗ ಇಲ್ಲ ಇಲ್ಲ ಎಂದೆನು. ॥ ೧೪೨ ॥

೫೪೪

ಹಿಂದೆ ಕೆಟ್ಟುದ ಮುಂದೆ ನೀನರಸುವೆ.
ಹಿಂದಕ್ಕೆ ನೀನಾರು ಹೇಳೆಲೆ ಮರುಳೆ!
ತಾ ಕೆಟ್ಟು ತನ್ನನರಸುವಡೆ ತಾನಿಲ್ಲ ತಾನಿಲ್ಲ.
ತಾನು ತಾನಾರೋ?
ಮುಂದಕ್ಕೆ ಮೊದಲಿಲ್ಲ, ಹಿಂದಕ್ಕೆ ಲಯವಿಲ್ಲ
ಚಿಕ್ಕಯ್ಯಪ್ರಿಯ ಸಿದ್ಧಲಿಂಗ ಇಲ್ಲ ಇಲ್ಲ ಬಯಲು. ॥ ೧೪೩ ॥

೫೪೫

ಹುಟ್ಟಿದ ಮರ ನೆಟ್ಟ ಕಲ್ಲು
ಮತ್ತೇತರ ಇಷ್ಟದ ಒತ್ತಿದ ಲಿಂಗಮುದ್ರೆ ಇರಲಿಕ್ಕೆ?
ಕಿತ್ತುಕೊಂಡವ ದ್ರೋಹಿ ಎಂಬರು.
ದೃಷ್ಟದಲ್ಲಿ ಜಂಗಮಭಕ್ತರ ಕೊಲುತ್ತ
ಇಂತೀ ಉರುಳುಗಳ್ಳರ ಭಕ್ತರು ಜಂಗಮವೆಂದಡೆ ಒಪ್ಪನಯ್ಯಾ,
ಚಿಕ್ಕಯ್ಯಪ್ರಿಯ ಸಿದ್ಧಲಿಂಗ ಇಲ್ಲ ಇಲ್ಲ ಎಂದೆ. ॥ ೧೪೪ ॥

೫೪೬

ಹೆಣ್ಣು ಹೊನ್ನು ಮಣ್ಣು ಕುರಿತು ಚರಿಸುವನ್ನಬರ ಉಭಯದ ಕೇಡು.
ವರ್ಮವನರಿಯದೆ ಮಾಡುವನ್ನಬರ ದ್ರವ್ಯದ ಕೇಡು.

ಇಂತೀ ಉಭಯದ ಭೇದವನರಿತು, ಚರಿಸಿ ಮಾಡಿ ಅರಿಯಬೇಕು,
ಚಿಕ್ಕಯ್ಯಪ್ರಿಯ ಸಿದ್ಧಲಿಂಗವನರಿಯಬಲ್ಲಡೆ. ॥೧೪೫॥

೫೪೭

ಹೆಣ್ಣು ಹೊನ್ನು ಮಣ್ಣಿಗೆ ಹೊಡೆದಾಡುವನ್ನಬರ
ಅರುಹಿರಿಯರು ಎಂತಪ್ಪರೊ?
ತ್ರಿವಿಧ ಮಲಕ್ಕೆ ತ್ರಿವಿಧ ಅಮಲದಿಂದ ಮಲ ಹರಿದಲ್ಲದೆ
ಚಿಕ್ಕಯ್ಯಪ್ರಿಯ ಸಿದ್ಧಲಿಂಗ ಇಲ್ಲ ಇಲ್ಲ ಎಂದೆ. ॥ ೧೪೬ ॥

೫೪೮

ಹೊರಗಣ ಮಲತ್ರಯಕ್ಕೆ ಒಳಗಣ ಅರಿವ ನೀಗಾಡಲೇತಕ್ಕೆ?
ಅಲ್ಪ ಸುಖಕ್ಕೆ ಮಚ್ಚಿ ಕುಕ್ಕುರನಂತೆ ಸಿಕ್ಕಿ ಸಾಯಲೇತಕ್ಕೆ?
ನಿಶ್ಚಯವಾಗಿ ತಾ ಬಂದ ಆದಿ ಅನಾದಿಯೆಂಬ ವಸ್ತುವ ತಿಳಿದು ನೋಡಿ
ಚಿಕ್ಕಯ್ಯಪ್ರಿಯ ಸಿದ್ಧಲಿಂಗವನರಿಯಬಲ್ಲಡೆ ಇಲ್ಲ ಇಲ್ಲ ಎಂದೆ.
॥೧೪೭॥

# ಚಂದಿಮರಸನ ವಚನ

೫೪೯

ಅಂಗದೊಳಗೆ ಲಿಂಗಸಾಗಿ ಬಂದ ಲಿಂಗವನೆಂತು ಪೂಜಿಸಿ
ಮುಕ್ತಿಯ ಪಡೆವೆನಯ್ಯಾ!
ಸೃಷ್ಟಿಯಲ್ಲಿ ಹುಟ್ಟಿ ನಷ್ಟವಹ
ಲಿಂಗವನೆಂತು ಮುಟ್ಟಿ ಪೂಜಿಸಿ
ಮುಕ್ತಿಯ ಪಡೆವೆನಯ್ಯಾ!
ಕಿಚ್ಚು ಕಿಚ್ಚ ಸುಡುವುದೆ ಅಯ್ಯಾ?
ಈ ಕಷ್ಟವ ಕಂಡು ಮುಟ್ಟಲಂಜಿ
ನಿಮ್ಮಲ್ಲಿಯೇ ನಿಂದೆ,
ಸಿಮ್ಮಲಿಗೆಯ ಚೆನ್ನರಾಮಾ. ॥ ೧ ॥

೫೫೦

ಅಂಗದ ಮೇಲೆ ಶ್ರೀಗುರು ಲಿಂಗ ಸಂಬಂಧವ ಮಾಡಿ
ಅಂಗಾಶ್ರಯವನಳಿದು ಲಿಂಗಾಶ್ರಯವ ಮಾಡಿದ ಬಳಿಕ
ಅಂಗಭೋಗಂಗಳ ಬಿಟ್ಟು, ಲಿಂಗ ಕ್ರಿಯೆಗಳನುಳ್ಳವರಾಗಿ
ಅಂಗಾರ್ಚನೆಯನತಿಗಳೆದು ಲಿಂಗಾರ್ಚನೆಯ ಮಾಡುತ್ತ,
ಅಂಗ ಮುಂತಲ್ಲವೆಂದು ಲಿಂಗ ಮುಂತಾಗಿಯೆ
ಎಲ್ಲ ಕ್ರೀಗಳನು ಗಮಿಸಿ ಸದ್ವ್ರತವನಾಚರಿಸುತ್ತ,
ನಿಜವೀರಶೈವ ಸಂಪನ್ನರಪ್ಪ ಭಕ್ತಜಂಗಮಾರಾಧ್ಯ
ಸ್ಥಳಂಗಳನುಳ್ಳವರಾಗಿರ್ದು
ಮತ್ತೆ ಮರಳಿ, ಅಂಗವನೆ ಆಶ್ರಯಿಸಿ,
ಅಂಗಭೋಗಂಗಳನು, ಅಂಗಾರ್ಪಿತ ಭುಂಜನೆಗಳನು
ಭಕ್ತ ಜಂಗಮಾರಾಧ್ಯ ಸ್ಥಳಂಗಳನ್ನುಳ್ಳವರಾಗಿರ್ದು
ಮತ್ತೆ, ಮರಳಿ, ಅಂಗವನೆ ಆಶ್ರಯಿಸಿ
ಅಂಗಭೋಗಂಗಳನು, ಅಂಗಕ್ರೀಗಳನು, ಅಂಗದರ್ಚನೆಗಳನು,

ಅಂಗ ಮುಂತಾದ ಗಮನಂಗಳನು, ಅಂಗಾರ್ಪಿತ ಭುಂಜನೆಗಳನು,
ಭಕ್ತ ಜಂಗಮಾರಾಧ್ಯರುಗಳು ಲಿಂಗವಿರಹಿತರಾಗಿ ಮಾಡಿದಡೆ
ಲಿಂಗವಿಲ್ಲ, ಲಿಂಗಾರ್ಚನೆಯಿಲ್ಲ, ಲಿಂಗಪ್ರಸಾದವಿಲ್ಲ.
ಲಿಂಗ ಮುಂತಾದ ಮುಕ್ತಿಗಮನ, ಇಹಪರದಲ್ಲಿಯೂ ಇಲ್ಲ.
ಇದನರಿದು, ಲಿಂಗಭೋಗವೇ ಭೋಗ,
ಲಿಂಗಾರ್ಚನೆಯೇ ಪೂಜೆ, ಲಿಂಗಾರ್ಪಿತವಾದುದೇ ಪ್ರಸಾದ,
ಲಿಂಗಮುಂತಾಗಿಯೇ ಎಲ್ಲ ಕ್ರೀಗಳನು ಮಾಡುವುದಯ್ಯಾ,
ಸಿಮ್ಮಲಿಗೆಯ ಚೆನ್ನರಾಮಾ. ॥ ೨ ॥

೫೫೧

ಅನಲನ ಬಣ್ಣದ ಉಲುಹಿನ ರೂಹಿನ ತೋರಿಕೆ
ನಿಶ್ಚಯ ದಿಟವೆಂದು ಎಳೆಯ ಕತ್ತಲೆ
ಹಳೆಯ ಬಣ್ಣದ ಬಳಿವಿಡಿದಾಡುವಿರಲ್ಲಾ!
ಭವಲೇಪ ಲೋಪವಿಲ್ಲವಾಗಿ
ಪುಣ್ಯಪಾಪ ಜನಿತರು ಹಿರಿಯರು
ಸಿಮ್ಮಲಿಗೆಯ ಚೆನ್ನರಾಮನೆಂಬ ಲಿಂಗದ ಹೆಸರಲ್ಲಿ
ಸಂತುಷ್ಟರಿವರು. ॥ ೩ ॥

೫೫೨

ಅರ್ಪಿತಂಗಳನಾರು ಮುಖದಲ್ಲಿ ಮಾಡಬಲ್ಲಡೆ
ಕಲ್ಪಿತಂಗಳು ಹೊದ್ದಲಮ್ಮವು.
ಅರ್ಪಿತವಳವಡದ ಭೇದ ಮರಳಿತ್ತು
[ಸಿ]ಮ್ಮಲಿಗೆಯ ಚೆನ್ನರಾಮನೆಂಬ ಲಿಂಗದಲ್ಲಿ. ॥ ೪ ॥

೫೫೩

ಅರಿಯದ ಗುರು ಅರಿಯದ ಶಿಷ್ಯಂಗೆ
ಅನುಗ್ರಹವ ಮಾಡಿದಡೇನಪ್ಪುದೆಲವೋ
ಅಂಧಕನ ಕೈಯ ಅಂಧಕ ಹಿಡಿದಂತೆ,
ಮುಂದೇನಪ್ಪುದು ಹೇಳೆಲೆ ಮರುಳೆ?
ಬರುಮಾತಿನ ರಂಜನೆಯನಾಡದಿರು
ಸಿಮ್ಮಲಿಗೆಯ ಚೆನ್ನರಾಮನೆಂಬ ಲಿಂಗವು ಹುಸಿಯ
ಹಸರದವನಲ್ಲ. ॥ ೫ ॥

೫೫೪

ಅರಿವುದೊಂದೆ ಎರಡಾಗಬಲ್ಲುದೊಂದೆ,
ಬೇರೆ ತೋರಬಲ್ಲುವದೊಂದೆ,
ತನ್ನ ಮರೆಯಬಲ್ಲುದದೊಂದೆ,
ತಾನಲ್ಲದನ್ಯವಿಲ್ಲೆಂದರಿದ ಅರಿವು ನೀನೆ,
ಸಿಮ್ಮಲಿಗೆಯ ಚೆನ್ನರಾಮಾ. ॥ ೬ ॥

೫೫೫

ಅಳಿವ ತೋರಿಕೆಗಾದಿಯಿಲ್ಲ,
ಕಳಿವ ಭ್ರಾಂತಿಗೆ ಲಕ್ಷ್ಯವಿಲ್ಲ.
ತಿಳಿವೆನಿನ್ನೇನ ಹೇಳಾ!
ಬೆಳಗ ತೋರಿಸುವ ಬೆಳಗೊಂದಿಲ್ಲವಾಗಿ
ಸ್ವಯಂಪ್ರಕಾಶ ಪರಿಪೂರ್ಣವಾದ
ನಿಜವು ನೀನೇ,
ಸಿಮ್ಮಲಿಗೆಯ ಚೆನ್ನರಾಮಾ. ॥ ೭ ॥

೫೫೬

ಆತ್ಮನೆಂತಪ್ಪಡೆ,
ನಿರವಯ ನಿರ್ಗುಣ ನಿರ್ವಿಕಾರ!
ನೋಡುವಡೆ,
ಕರ್ಮವ ಮಾಡುವವರಾರೊ?
ಅಲ್ಲಿ ಸಂಸಾರವಾರಿಗೆ ತೋರಿತ್ತೊ?
ಬಂಧ ಮೋಕ್ಷಗಳಾರಿಗೆ, ಎಲೆ ಅಯ್ಯಾ?
ನಿನ್ನ ನಿನ್ನಿಂದ ತಿಳಿದು ನೋಡಲು
ತಥ್ಯಮಿಥ್ಯಗಳೊಂದಕ್ಕೊಂದು ತಟ್ಟಲರಿವವೆ?
ಪುಸಿಮಾಯೆ ತೋರಿತ್ತು; ಸೋಜಿಗ, ಭ್ರಮೆ!
ದಿಟ ನೀನೆ, ಸಿಮ್ಮಲಿಗೆಯ ಚೆನ್ನರಾಮಾ! ॥ ೮ ॥

೫೫೭

ಆನೆಂಬುದಿಲ್ಲ, ತಾನು ತಾನೆಂಬುದಿಲ್ಲ.
ವಿಜ್ಞಾನಮಾನಂದ ಬ್ರಹ್ಮವೆಂಬುದಿಲ್ಲ, ಇಲ್ಲವೆಂಬುದಿಲ್ಲ.
ಸಿಮ್ಮಲಿಗೆಯ ಚೆನ್ನರಾಮನೆಂಬುದು ಮುನ್ನಿಲ್ಲ. ॥ ೯ ॥

೫೫೮

ಆವ ಕಾಲದೊಳಾದಡೂ ಆವ ದೇಶದೊಳಾದಡೂ
ತನ್ನ ಲಲಾಟಲಿಖಿತ ಪ್ರಾರಬ್ಧಕರ್ಮ ಉಂಡಲ್ಲದೆ ತೀರದು;
ದೈವತಾಪ್ರಾರಬ್ಧ ಭೋಗಿಸಿದಲ್ಲದೆ ಕ್ಷಯವಾಗದು;
ದೇವ ದಾನವ ಮಾನವರಿಗಾದಡೂ ನಿವಾರಿಸಬಾರದು.
ತನು ತಾನಲ್ಲ, ತನ್ನದಲ್ಲ.
ಇದು ಮಾಯೆಯೆಂದರಿದು ಸುಖಿಯಾದಾತ ನೀನೆ,
ಸಿಮ್ಮಲಿಗೆಯ ಚೆನ್ನರಾಮಾ! ॥ ೧೦ ॥

೫೫೯

ಅಶನದಲಾಯುಷ್ಯ ವ್ಯಸನದ ಬೀಜ
ನಟನೆಯನೇನುವ ನಟಿಸದಿರಾ!
ಆದುದೆ ಜನನ, ಮಾದುದೆ ಮರಣ,
ತೋರುವುದೆಲ್ಲವು ದಿವಸದ ವಿಸ್ತಾರ.
ಸಿಮ್ಮಲಿಗೆಯ ಚೆನ್ನರಾಮನೆಂಬ ಲಿಂಗ ಸಂಭ್ರಮ
ಜೀವರಿಗೆಲ್ಲಿಯದೊ? ॥ ೧೧ ॥

೫೬೦

ಇಂದುವಿನ ಬೆಳಗಿಂದ ಇಂದುವ
ಭಾನುವಿನ ಬೆಳಗಿಂದ ಭಾನುವ
ದೀಪದ ಬೆಳಗಿಂದ ದೀಪವ ಕಾಬಂತೆ
ತನ್ನ ಬೆಳಗಿಂದ ತನ್ನನೆ ಕಂಡಡೆ
ನಿನ್ನ ನಿಲವು ನೀನೇ,
ಸಿಮ್ಮಲಿಗೆಯ ಚೆನ್ನರಾಮಾ. ॥ ೧೨ ॥

೫೬೧

ಇಂದ್ರಜಾಲ ಗಾಂಧರ್ವನಗರಾದಿಗಳ ಭ್ರಮೆಯ
ಹುಸಿಯೆಂದು ಕಾಣಬಹುದಲ್ಲದೆ
ಪ್ರಮಾಣಿಸಬಾರದು.
ಸ್ತ್ರೀಯಲ್ಲ ಪುರುಷನಲ್ಲ ನಪುಂಸಕನಲ್ಲ ಆತ್ಮನೆಂದು

ಅರಿಯಬಹುದಲ್ಲದೆ ಕಾಣಿಸಬಾರದು.
ದೇಹಾದಿ ಗುಣಧರ್ಮ ಕರ್ಮಂಗಳು ತಾನಲ್ಲ,
ಇವು ತನ್ನವಲ್ಲವೆಂದು ತಿಳಿಯಬಹುದು.
ಅದು ಮಾಯಾಮಯ ಪ್ರಾರಂಭ ಕೆಡೆಕೆಡುಗು.
ನೀತಿ ಕ್ರಮದಿಂದ ಬೋಧ್ಯದೀಪ್ತಿ ತಾನೆಂದು
ಅರಿದರಿವು ನೀನೇ,
ಸಿಮ್ಮಲಿಗೆಯ ಚೆನ್ನರಾಮಂಗಾವ ದುಃಖವೂ ಇಲ್ಲ. ॥ ೧೩ ॥

೫೬೨

ಇಂದ್ರಿಯಂಗಳೊಡಗೂಡಿ ಬಹಿರ್ಮುಖನಾಗಿ
ವಿಷಯಂಗಳಲ್ಲಿ ಆಸಕ್ತಿಯುಳ್ಳವನು ಅಂತರ್ಮುಖ ರೂಪನಪ್ಪ,
ಪ್ರತ್ಯಗಾತ್ಮನನೆಂತೂ ಕಾಣಲರಿಯೆನು.
ಮೇರುಗಿರಿಯ ಕಂಡೆಹೆನೆಂದು ತೆಂಕಮುಖನಾಗಿ ನಡೆದು
ಮೇರುಗಿರಿಯ ಕಾಣಲರಿಯನೆಂತಂತೆ,
ಸಕಲ ವಿಷಯಾಸಕ್ತಿಯ ಬಿಟ್ಟು ನಿರ್ವಿಷಯಿಯಾಗಿ
ನಿಜದಲ್ಲಿ ನಿಂದ ನಿಲವು ನೀನೇ,
ಸಿಮ್ಮಲಿಗೆಯ ಚೆನ್ನರಾಮಾ. ॥ ೧೪ ॥

೫೬೩

ಇಲ್ಲದ ತನುವಿಲ್ಲೆಂಬುದಕ್ಕೆ
ಉಳ್ಳಾತನನುಂಟೆಂಬುದಕ್ಕೆ
ಶಾಸ್ತ್ರಪುರಾಣಾಗಮಂಗಳನೋದಿ ಕೇಳಿ ತಲ್ಲಣಗೊಂಬುದಕ್ಕೆ
ಕಾರಣವೇನೂ ಇಲ್ಲದುದಿಲ್ಲ, ಉಂಟಾದುದುಂಟು.
ಇಲ್ಲ ಉಂಟೆಂಬುದಕ್ಕೆ
ತೆರಹಿಲ್ಲದ ಸಚ್ಚಿದಾನಂದಮಪ್ಪ ನಿಜವು ನೀನೇ,
ಸಿಮ್ಮಲಿಗೆಯ ಚೆನ್ನರಾಮಾ. ॥ ೧೫ ॥

೫೬೪

ಇಹಪರವೆಂಬ ಇದ್ದೆಸೆಯಾಗಿರ್ದನ ಪರಿ ಹೊಸತು!
ನೆಯಿ ಹತ್ತದ ನಾಲಗೆಯಂತೆ,
ಹುಡಿ ಹತ್ತದ ಗಾಳಿಯಂತೆ,
ಕಾಡಿಗೆ ಹತ್ತದ ಆಲಿಯಂತೆ ಇರ್ದೆನಯ್ಯಾ!

ಸಿಮ್ಮಲಿಗೆಯ ಚೆನ್ನರಾಮನೆಂಬ ಲಿಂಗದಲ್ಲಿ
ಆಚರಿಸುತ್ತ ಆಚರಿಸುತ್ತ ಆಚರಿಸದಂತಿರ್ದೆ ನೋಡಯ್ಯಾ! ॥ ೧೬ ॥

೫೬೫

ಉಪ ಜೀವ್ಯೋಪಜೀವಕ ಶತ್ರು ಮಿತ್ರಾದಿ ಉದಾಸೀನ.
ಸ್ತುತಿ ನಿಂದೆ ಮಾನಾಪಮಾನ ಪ್ರಾರಬ್ಧ
ಸುಖದುಃಖ ಭೋಗೋಪಭೋಗಂಗಳನುಳ್ಳ ತನು ಉಳ್ಳನ್ನಕ್ಕ
ಆರಿಗಾವಡೂ ರಾಗದ್ವೇಷವೆತ್ತ ಹೋದಡೊ ಬೆನ್ನಬಿಡವಾಗಿ
ಇವ ಮಾಣಿಸಬಾರದು.
'ದೃಷ್ಟತ್ವೇನ ಅಹಂ ಮಮ' ಎಂದುದಾಗಿ
ಇಂತು ಕಾಮ ಕ್ರೋಧಾದಿಯೇ ಮಾಯೆ.
ಈ ಮಾಯೆಯನುಳಿದು ಸೋಹಂಭಾವದೊಳಿರೆ
ಆತ ನಿತ್ಯಮುಕ್ತನವ್ಯಕ್ತನಪ್ರಮೇಯ
ಪರಮಾನಂದನಪ್ಪ ನಿರವಯನಹ ನಿಜಗುಣ ನೀನೇ,
ಸಿಮ್ಮಲಿಗೆಯ ಚೆನ್ನರಾಮಾ. ॥ ೧೭ ॥

೫೬೬

ಆರತವಡಗಿತ್ತು, ಸಾರತ ಸವೆಯಿತ್ತು.
ಸಂಭ್ರಮ ಸ್ವೈರಗಾಯಿತ್ತು.
ನಚ್ಚಿಕೆ ನಾಚಿತ್ತು, ಮಚ್ಚಿಕೆ ಮರೆಯಿತ್ತು.
ನಿಷ್ಠೆ ನಿರ್ಭಾವಿಸಿ ನಿಸ್ಸಂದೇಹಕ್ಕೊಳಗಾಯಿತ್ತು.
ನಮ್ಮ ಸಿಮ್ಮಲಿಗೆಯ ಚೆನ್ನರಾಮನೆಂಬ ಲಿಂಗದಲ್ಲಿ
ಖಂಡಿತಪೂಜೆ ಭಂಡಾಯಿತ್ತು. ॥ ೧೮ ॥

೫೬೭

ಉಪನಿಷದ್ವಾಕ್ಯಮಪ್ಪ ಗುರುವಚನವ ಹೃದಯದಲ್ಲಿ ನಂಬದೆ,
ತಮ್ಮೊಳಿದ್ದ ಹಾಗೆ ಗಳಹುತಿಪ್ಪರಯ್ಯ.
ಆರೇನೆಂದ ಮಾತ ನೀ ಕೇಳಿದಡೆ ಕೆಡುವೆ.
ಎಲೆ ಮರುಳೆ 'ಅಂದೆನ್ನೈವಾ ನಿಯಮಸಾ' ಎಂಬುದು ವೇದ.
ಅನುಭವದಿಂದ ತಿಳಿದು ನೋಡಿ ನಂಬು.
ಸದ್ಗುರು ನೀನೆ, ಸಿಮ್ಮಲಿಗೆಯ ಚೆನ್ನರಾಮಾ. ॥ ೧೯ ॥

೫೬೮

ಉಳ್ಳ ರಜ್ಜುವಿನಲ್ಲಿ ತೋರಿತಿಲ್ಲದಹಿಯೆಂತಂತೆ
ನೋಡಿ ಅರಿದಂದು ಕೆಟ್ಟುದಲ್ಲ.
ನಾಮರೂಪು ಕ್ರಿಯಾಭೇದದಿಂ ತೋರುವ ಜಗವು
ಪರಮನಲ್ಲಿ ಎಂದಡೆ ಕೇಡಿಂಗಿಮ್ಮೆ ಕೇಡುಂಟೆ ಹೇಳಾ,
ಸಿಮ್ಮಲಿಗೆಯ ಚೆನ್ನರಾಮಾ. ॥ ೨೦ ॥

೫೬೯

ಎಂತು ಬಣ್ಣಿಸುವರಯ್ಯಾ ಲೋಕ ಸದುಹೃದಯರಲ್ಲದವರ!
ಇಂತಪ್ಪವರನಲ್ಲದೆ ಲೋಕ ಹೊಗಳಬಲ್ಲುದೆ? ಹೇಳಾ!
ತಮ್ಮ ತಮ್ಮ ಪರಿಗಳಲು ಇರದವರ ಮೆಚ್ಚುವರಾರೊ
ಈ ಲೋಕದೊಳಗೆ?
ಸಿಮ್ಮಲಿಗೆಯ ಚೆನ್ನರಾಮಾ. ॥ ೨೧ ॥

೫೭೦

ಎಕ್ಕಸಿಕ್ಕಗೆಡದವನೆ ಅದ್ವೈತಿ, ಆನೇನೆಂಬೆನಯ್ಯಾ.
ತಾನಲ್ಲದನ್ಯವಿಲ್ಲೆಂದರಿದ ನಿಜಗುಣ ಶಿವಯೋಗಿ
ಏನುವನು ತಾನರಿಯಬಲ್ಲನೆ ಹೇಳಾ.
ಇನ್ನು ಸ್ತುತಿ ನಿಂದೆಗೆಡೆಯುಂಟೆ?
ನಿಜಗುಣನಲ್ಲಿ ತಿಳಿದ ತಿಳಿವು ನೀನೇ,
ಸಿಮ್ಮಲಿಗೆಯ ಚೆನ್ನರಾಮಾ. ॥ ೨೨ ॥

೫೭೧

ಎಲುವು ತೊಗಲು ನರ ಮಾಂಸ ಪುರೀಷ
ಶ್ಲೇಷ್ಮ ರಕ್ತ ಶುಕ್ಲ ಕ್ರಿಮಿ ಕೊಕ್ಕರೆ
ಜರೆ ಮರಣ ಜಂತು
ಹಲವು ರೋಗಂಗಳ ತವರ್ಮನೆ
ನೋಡುವಡೆ ಪಾಪದ ಪುಂಜ
-ಇಂತೀ ಹೇಸಿಕೆಯೊಳಗೆ ಏತರ ಸುಖವನರಸುವೆ?
ಈ ಸುಖದಾಸೆಯ ವಿಚಾರಿಸಿ ನೋಡಿದಡೆ
ಸಕಲ ದುಃಖದಾಗರ, ನರಕದ ಪಾಕುಳ.

ಅಂಗನೆಯರಿಂತೆಂದು ತಿಳಿದು
ವಿರಕ್ತನಾದ ಪರಮ ಸೌಖ್ಯಾಂಗ ನೀನೇ,
ಸಿಮ್ಮಲಿಗೆಯ ಚೆನ್ನರಾಮಾ. ॥ ೨೩ ॥

೫೭೨

ಎಲುವಿನ ಹಂಜರ ಕರುಳಿನ ಜಾಳಿಗೆ
ಅಮೇಧ್ಯದ ಹುತ್ತ ಮೂತ್ರದ ಬಾವಿ
ಶ್ಲೇಷ್ಮದ ಕೆಸರು ಕೀವಿನ ಸೋನೆ
ನೆತ್ತರ ಮಡು ನಾಡಿಗಳ ಸುತ್ತುವಳ್ಳಿ
ನರವಿನ ನೇಣ ಜಂತ್ರ ಮಾಂಸದ ಘಟ್ಟಿ ತೆಪ್ಪ
ಕಿಸುಕುಳದ ಹೇಸಿಕೆ ಅತಿಹೇಯ ಮಲಿನ
ಅಸ್ಥಿ ರೋಮ ತೊಗಲ ಪಾಕುಳ
ಕ್ರಿಮಿಯ ಸಂಕುಳ ಬಲಿದಪರ ರೇತೋ ರಜಸ್ಸಿನಲ್ಲಿ ಜನಿತ
ಉತ್ಪತ್ತಿ ಸ್ಥಿತಿ ಲಯದ ಬೀಜ
ಆಧಿ ವ್ಯಾಧಿಯ ತವರುಮನೆ
ವಿಷಯದ ಭವ ದುಃಖದಾಗರ ಮೋಹದ ಬಲೆ
ತೋರಿ ಕೊಡುವ ತನು.
ಇದ ನೀನೆಂದು ನಿನ್ನದೆಂದು ಮಾಡಬಾರದ ಪಾಪಂಗಳ ಮಾಡಿ,
ಬಾರದ ಭವಂಗಳಲ್ಲಿ ಬಂದು, ದೇಹದಿಚ್ಛೆಗೆ ಸಂದು,
ಹೂಸಿ ಮೆತ್ತಿ ಹೊದಿಸಿದ ದೇಹದಂತುವ ಕಂಡು
ಮರುಗುವೆ ಮರುಳಮಾನವಾ!
ಅಘೋರ ನರಕದಲ್ಲಿಕ್ಕುವಾಗ
ಅಡ್ಡಬಪ್ಪವರಾರು ಹೇಳಾ?
ಅಹಂಮಮತೆಯ ಮರದು, ದೇಹದಿಚ್ಛೆಯ ಬಿಟ್ಟು
ಸೋಹಂ ಬ್ರಹ್ಮಾಸ್ಮಿ ಎಂದು ಕೇಡಿಲ್ಲದ ಸುಖವ
ಮಾಡಿಕೊ ಮರುಳೇ.
ಮೋಹ ಬೇಡ! ಕೆಡುವೆ!
ನಿನ್ನಲ್ಲಿ ನೀನೇ ತಿಳಿದು ನೋಡಾ!
ಸಿಮ್ಮಲ್ಲಿಗೆಯ ಚೆನ್ನರಾಮಾ. ॥ ೨೪ ॥

೫೭೩

ಏನೆಂದನಲಿಲ್ಲದ ಮಹಾಘನವು
ತನ್ನ ಲೀಲೆಯಿಂದ ತಾನೇ ಸ್ವಯಂಭುಲಿಂಗವಾಯಿತ್ತು!
ಆ ಲಿಂಗದಿಂದಾಯಿತ್ತು ಶಿವಶಕ್ತ್ಯಾತ್ಮಕ,

ಆ ಶಿವಶಕ್ತ್ಯಾತ್ಮಕದಿಂದಾದುದು ಆತ್ಮ
ಆತ್ಮನಿಂದಾದುದು ಆಕಾಶ,
ಆಕಾಶದಿಂದಾದುದು ವಾಯು,
ವಾಯುವಿನಿಂದಾದುದು ಅಗ್ನಿ,
ಅಗ್ನಿಯಿಂದಾದುದು ಅಪ್ಪು,
ಅಪ್ಪುವಿನಿಂದಾದುದು ಪೃಥ್ವಿ,
ಪೃಥ್ವಿಯಿಂದಾದುದು ಸಕಲ ಜೀವವೆಲ್ಲಾ.
ಇವೆಲ್ಲಾ ನಿಮ್ಮ ನೆನಹುಮಾತ್ರದಿಂದಾದವು
ಸಿಮ್ಮಲಿಗೆಯ ಚೆನ್ನರಾಮಾ. ॥ ೨೫ ॥

೫೭೪

ಕಂಗಳ ಮುಂದೆ ತೋರಿದ ಮಿಂಚು
ಮನದ ಮೇಲೆ ತಿಳಿಯಿತ್ತಿದೇನೊ!
ಕಳೆಯಬಾರದು ಕೊಳಬಾರದು
ಕಂಗಳ ಕತ್ತಲೆಯ, ಮನದ ಮಿಂಚುವ.
ಇದ ಬಲ್ಲವರನಲ್ಲೆನಿಸಿತ್ತು
ಸಿಮ್ಮಲಿಗೆಯ ಚೆನ್ನರಾಮನೆಂಬ ನಾಮದೊಡಕು. ॥ ೨೬ ॥

೫೭೫

ಕಂಗಳ ಮೊಲೆ ಕೂರ್ಮನ ಆಪ್ಯಾಯನ
ಉಂಬ ಭೇದವ ಬಲ್ಲವರಾರೊ? ಅರಿಯಬಾರದು.
ಘನವನರಿತ ಅಗಮ್ಯನ ನಿಲವನರಿಯಬಾರದು.
ಇದರನುವನವಗವಿಸಿ ತೆರಹಿಲ್ಲದಾತ
ನಮ್ಮ ಸಿಮ್ಮಲಿಗೆಯ ಚೆನ್ನರಾಮನೆಂಬ ಮಹಾಮಹಿಮನು.॥ ೨೭ ॥

೫೭೬

ಕಂಡುದ ಕೇಳಿದುದ ತಾಗಿತ ಸೋಂಕಿತ್ತ
ಕಾಯದ ಕೈಯಲ್ಲಿ ಲಿಂಗಾರ್ಪಿತವಾಯಿತ್ತೆಂದಡೆ ತಪ್ಪಿತ್ತು ನೋಡಾ!
ತಾನರಿವುತ್ತ ಕೊಡಲುಂಟೆ ಲಿಂಗಕ್ಕೆ?
ಸಿಮ್ಮಲಿಗೆಯ ಚೆನ್ನರಾಮನೆಂಬ ಲಿಂಗದಲ್ಲಿ
ಶರಣನಲ್ಲ ಆತ! ಸಂದೇಹಿ! ॥ ೨೮ ॥

೫೭೭

ಕಣ್ಣಯಿದ್ದ ಭಾವ ಕಾಲೆಯಿದ್ದವ ಬಲ್ಲವೆ ಮರುಳೆ!
ಮನವೆಯಿದ್ದದ ಘನವು ತನುವಿಂಗೆ ಸಿಲುಕುವುದೆ?
ಇದೆತ್ತಣ ಮಾತೊ?
.....ಡನೆಂದರಿದ ಬಳಿಕ
ಸಿಮ್ಮಲಿಗೆಯ ಚೆನ್ನರಾಮನೆಂಬ ಲಿಂಗವು
ಹೊರಗರಸಲಿಲ್ಲ ನಿಲ್ಲು. ॥ ೨೯ ॥

೫೭೮

ಕನಸಿನ ಸಹಸ್ರಾಕ್ಷನೆಚ್ಚತ್ತು ನೋಡಿ
ತನ್ನ ನಿಜವನರಿವಾಗ ಕೇಳೆಲೆ ಮರುಳೆ!
ದ್ವ್ಯಕ್ಷನಾಗಿ ಅರಿಯದೆ ಮೇಣು ಸಹಸ್ರಾಕ್ಷದಲ್ಲಿ ಅರಿದನೆ ಹೇಳಯ್ಯಾ?
ನಿರವಯ ನಿರವದ್ಯ ನಿರ್ವಿಕಾರ ನಿರಂಜನ
ಘನಾನಂದಾದ್ವಯ ಪರಿಪೂರ್ಣನಾಗಿ ತನ್ನನರಿವನಲ್ಲದೆ
ಮತ್ತೊಂದು ಪರಿಯಲ್ಲಿ ಅರಿಯಬಲ್ಲನೆ ಹೇಳಾ?
ಮುನ್ನಿನ ಪರಿಯಲ್ಲಲ್ಲದೆ, ಕೋಹಮ್ಮಿನೆಚ್ಚರಿಂದ
ಸೋಹಂ ಭಾವಾದಿಯಲ್ಲದೆ
ಜ್ಞಾತೃ ಜ್ಞಾನ ಜ್ಞೇಯ ವಿಹೀನನಾಗಿ
ತನ್ನನರಿದಡೆ ಅರಿದ, ಅಲ್ಲದಿದ್ದಡೆ ಅರಿಯದಾತನು.
ಇದು ತಪ್ಪದು ಸಿಮ್ಮಲಿಗೆಯ ಚೆನ್ನರಾಮನ ವಚನ. ॥ ೩೦ ॥

೫೭೯

ಕನಸಿನಲ್ಲಿ ಹುಟ್ಟಿದ ಕಂದಂಗೆ
ನೆನಸಿನಲ್ಲಿ ಜಾತಕರ್ಮವ ಮಾಡುವರೆ?
ಭ್ರಮೆಯಿಂದ ತೋರುವಹಂ ಮಮತೆಯ ಚಿಃಯೆಂದು
ತನ್ನನರಿದಂಗೆ ಕ್ರೀಯೆನಿಸಿ
ಏನೂ ಇಲ್ಲ ನಿನ್ನಲ್ಲಿ ನೋಡುವಡೆ.
ನಿಜಗುಣ ಸಕಲ ಕರ್ಮರಹಿತ
ಚಿನ್ಮಯ ಪರಿಪೂರ್ಣ ನೀನೇ,
ಸಿಮ್ಮಲಿಗೆಯ ಚೆನ್ನರಾಮಾ. ॥ ೩೧ ॥

೫೮೦

ಕನ್ನಡಿಯಲ್ಲಿ ತೋರುವ ಕಣ್ಣು ನೋಡುವ ಕಣ್ಣು ಕಾಬುದು ಹುಸಿ.
ಇದು ದಿಟದಂತೆ ತೋರಿದ ಬುದ್ಧಿ
ದರ್ಪಣದಲ್ಲಿ ತೋರುವ ಹುಸಿಯಂತೆರಡು ಜೀವನು.
ಈ ಜೀವನು ಶುದ್ಧ ಚಿದ್ರೂಪವ ಕಾಬ ಕೂಡುವ
ನಾನೀನೆಂಬುದು ಮಿಥ್ಯೆ, ಜೀವಭಾವಮಿಂತುಟು.
ನಾ ನಿರ್ವಾದವೆಂದು ತಿಳಿದ ಬುದ್ಧಿಯ ಭಾವ
ಸದಾನಂದಸ್ವರೂಪನಪ್ಪ ನಿಜಗುಣ ನೀನೇ,
ಸಿಮ್ಮಲಿಗೆಯ ಚೆನ್ನರಾಮಾ. ॥ ೩೨ ॥

೫೮೧

ಕರ್ಮಿ ಭಕ್ತ ಜ್ಞಾನಿ ಲೌಕಿಕವೆಂಬ ಚತುರಾಶ್ರಮಿಗಳಿಗೆ
ತ್ರಿಜಗದೊಳಗೆ ಶ್ರುತ್ಯಾನುಭವ ಸಿದ್ಧವಾಗಿಹುದು.
ಹಿಡಿದು ಸುಖವಿಲ್ಲ, ಬಿಟ್ಟು ದುಃಖವಿಲ್ಲ.
ನೆರೆಯರಿದು ವಿಷಯಂಗಳ ಬಿಟ್ಟಡೆ
ಪರಮಾನಂದವೆಂದೆಂದಿಗೂ ಸೋಹಂಭಾವವಹುದು.
ಈ ಸೋಹಂಭಾವದಲ್ಲಿ ನಿಂದಂದು
ಈ ದೇಹದ ಅಹಂಮಮತೆಯೆಂಬ ಜಡಮಾಯೆ ಉಳಿವುದೆ,
ಸಿಮ್ಮಲಿಗೆಯ ಚೆನ್ನರಾಮನಾಥನ ಭಾವಿಸಿ ನೋಡಿದಲ್ಲಿ! ॥ ೩೩ ॥

೫೮೨

ಕವಿ ಗಮಕಿ ವಾದಿ ವಾಗ್ಮಿಯೆಂಬವರ ಮಾತಿಂಗಿಲ್ಲ.
ಶಾಸ್ತ್ರಿಕರ ಶಾಸ್ತ್ರಕ್ಕಿಲ್ಲ,
ತರ್ಕಿಗಳ ತರ್ಕಕ್ಕಿಲ್ಲ.
ಶಬ್ದಿಕರ ಶಬ್ದ ನೆರೆಯವ ತೋರುವಡೆ ವಿಷಯವಾಗಿರದು.
ಅರಿವೊಡೆ ಅತರ್ಕ್ಯ,
ಅದು ನಿನ್ನಲ್ಲಿಯೆ ಅದೆ,
ಸಿಮ್ಮಲಿಗೆಯ ಚೆನ್ನರಾಮಾ. ॥ ೩೪ ॥

೫೮೩

ಕವಿ ಗಮಕಿ ವಾದಿ ವಾಗ್ಮಿಯೆಂಬ
ಮಾಯಾವೇಷ ಮತಕ್ಕೆ ದೂರ.

ಸಾಮುದ್ರಿಕರ ಶಬುದವು ನೆರೆಯವು.
ತಾರ್ಕಿಕರ ತರ್ಕಕ್ಕಿಲ್ಲ ಮತಿ ಮನುಗಳೆಂಬ
ಹಿರಿಯರರಿವಿನಲ್ಲಿ ನಿಲ್ಲು ನಿಲ್ಲು ಮಾಣು,
ಸಿಮ್ಮಲಿಗೆಯ ಚೆನ್ನರಾಮನೆಂಬ ಶಬುದವಿತ್ತು ಗಳಿಗೆ. ॥ ೩೫ ॥

೫೮೪

ಕಾಳಕೂಟ ಹಾಳಾಹಳ ವಿಷಂಗಳು
ಕುಡಿದವರನಲ್ಲದೆ ಮಿಕ್ಕವರನೇನನೂ ಮಾಡಲಮ್ಮವು!
ಸ್ತ್ರೀಯೆಂಬ ಕಡುನಂಜು ನೋಡಿದವರ, ನುಡಿಸಿದವರ,
ಕೇಳಿದವರ, ಕೂಡಿದವರ, ಗಡಣ ಸಂಗಮಾತ್ರದಿಂ
ಮಡುಹಿ ನರಕದಲ್ಲಿ ಕೆಡಹದೆ ಮಾಡಳು.
ದೇವ ದಾನವ ಮಾನವರನಾದಡು ಉಳಿಯಲೀಯಳು!
ಆವಂಗೆಯೂ ಗೆಲಬಾರದೀ ಮಾಯೆಯ!
ಗೆಲಿದಾತ ನೀನೆ ಸಿಮ್ಮಲಿಗೆಯ ದಾತ ನೀನೆ,
ಸಿಮ್ಮಲಿಗೆಯ ಚೆನ್ನರಾಮಾ! ॥ ೩೬ ॥

೫೮೫

ಕಿಚ್ಚು ದೈವವೆಂದು ಹವಿಯ ಬೇಳುವರು.
ಕಿಚ್ಚು ಹಾರುವರ ಮನೆಯ ಸುಡುವಾಗ
ಬಚ್ಚಲ ಕೆಸರ ಬೀದಿಯ ಧೂಳ ಚೆಲ್ಲಿ
ಬೊಬ್ಬಿರಿದೆಲ್ಲರ ಕರೆವರು.
ಸಿಮ್ಮಲಿಗೆಯ ಚೆನ್ನರಾಮನ ಮಂತ್ರ ತಪ್ಪಿದ ಬಳಿಕ
ವಂದಿಸುವುದ ಬಿಟ್ಟು ನಂದಿಸುತ್ತಿಪ್ಪರು. ॥ ೩೭ ॥

೫೮೬

ಕುರುಡ ಕಾಣನೆಂದು, ಕಿವುಡ ಕೇಳನೆಂದು
ಹೆಳವ ಹರಿಯನೆಂದು, ಮರುಳ ಬಯ್ದನೆಂದು,
ಪಿಶಾಚಿ ಹೊಯ್ದನೆಂದು ಮನಕತಬಡುವರೆ ಹೇಳಾ?
ತಾನರಿವುಳ್ಳಾತ ತತ್ತ್ವವನರಿಯದವರಲ್ಲಿ
ಗುಣದೋಷವನರಸುವರೆ ಹೇಳಾ,
ಸಿಮ್ಮಲಿಗೆಯ ಚೆನ್ನರಾಮಾ. ॥ ೩೮ ॥

೫೮೭

ಕೂರ್ಮನ ಗತಿಯ ಕುವಾಡ ಯೋಗವು
ಕುಹಕವಾದಿಗಳಿಗಳವಡದು.
ಉತ್ತಮಾಂಗವನು ಉರಸ್ಥಲದಲ್ಲಿ ಬೈಚಿಡುವ
ಬಯಕೆಯನಾರೈದು ನೋಡಾ!
ಅದನು ಆರಯ್ಯಲಚಲ ನೀನೇ,
ಸಿಮ್ಮಲಿಗೆಯ ಚೆನ್ನರಾಮನೆಂಬ ಲಿಂಗವು
ಎಂದೂ ಎಸಲಿಲ್ಲ! ॥ ೩೯ ॥

೫೮೮

ಕೋಕ ಪಿಂಗಳ ತಾರಾಗ್ರೀವ ಚಕ್ರಪಾಣಿ ಧನುರ್ಧಾರಕರೆಂಬ
ಅತಿರಮಣರು ಬಡಿದಾಡಿದರೈ.
ಉಸಿರಳಿದು ಉಸಿಕನೆ ಹೋದರು,
ಸಿಮ್ಮಲಿಗೆಯ ಚೆನ್ನರಾಮನೆಂಬ ಶಬುದವಿತ್ತು ಗಳಿಗೆ. ॥ ೪೦ ॥

೫೮೯

ಕೋಹಮೆಂಬುದು ಪ್ರಸನ್ನ ಭಾವ.
ತನ್ನನರಿಸುವ ಕತದಿಂದ ನಿರಹಂಕಾರ,
ಪರಮ ವಿರಹಿತ, ವಿಷರಹಿತ.
ಏನೂ ಹೊರೆಹೊದ್ದದ ಸನ್ಮಾತ್ರ ಚಿನ್ಮಯ ಪರಮಾನಂದ
ತಿಳಿದು ನೋಡುವಡೆ, ನಿಜಗುಣ ತಾನೇ,
ಸಿಮ್ಮಲಿಗೆಯ ಚೆನ್ನರಾಮಾ. ॥ ೪೧ ॥

೫೯೦

ಗಗನಾದಿ ಸಾಕಾರದಜ್ಞಾನಭಾವವನತಿಗಳೆದು
ಅರಿತ ಅರಿವಿಂದವೆ ನೋಡಿ, ಆ ಅರಿವನೆ ತಿಳಿದು,
ಏನೂ ಅರಿಯೆನೆಂಬುದೆ ನಿಂದ ನಿಲವು.
ಸಚ್ಚಿದಾನಂದ ನಿತ್ಯ ಪರಿಪೂರ್ಣ ನೀನೇ,
ಸಿಮ್ಮಲಿಗೆಯ ಚೆನ್ನರಾಮಾ. ॥ ೪೨ ॥

೫೯೧

ಗಣಂಗಳ ಬರವ ಕಂಡು ಕೈಮುಗಿದು ಅಂಜಲೇಬೇಕು.
ಶರಣೆನ್ನಲೊಲ್ಲದೀ ಮನವು.
ಅಳಿನ ಭಕ್ತಿಯನರಿಯರಾಗಿ ಶರಣೆನ್ನಲೊಲ್ಲದೀ ಮನವು.
ಅಳ್ದನೆಂದು ನಂಬಿ ನಂಬಲೊಲ್ಲದಾಗಿ,
ಸಿಮ್ಮಲಿಗೆಯ ಚೆನ್ನರಾಮನೆನ್ನಕಡೆ ನೋಡಿ ನಗುತಲಿದ್ದಾನೆ. ॥ ೪೩ ॥

೫೯೨

ಗಾಳಿ ಬೀಸುವಲ್ಲಿ ಕೀಳೆಲವೊ
ಬೀಸಣಿಗೆಯ ಉಸುರೆಂತು ಮೆರೆವುದು ಹೇಳಾ ಮರುಳೆ!
ನಿಸ್ಸಾಳ ಬಾರಿಸುವಲ್ಲಿ ಢವುಡೆ ತಂಬಟದ ದನಿ
ಎಂತು ಮೆರೆವುದು ಹೇಳಾ ಮರುಳೆ!
ಸಿಮ್ಮಲಿಗೆಯ ಚೆನ್ನರಾಮನೆಂಬ
ಸೀಮೆಯಿಲ್ಲದ ನಿಸ್ಸೀಮಂಗೆ
ಲಿಂಗ ಸಂಸಾರಿ ಸರಿಯಲ್ಲ ಹೇಳಾ ಮರುಳೆ! ॥ ೪೪ ॥

೫೯೩

ಗುಣ ಧರ್ಮ ಕರ್ಮಂಗಳನೇನೆಂದೂ ಅರಿಯೆ.
ಸಾಕಾರಾದಿ ಭೌತಿಕಂಗಳನೇನೆಂದೂ ಅರಿಯೆ.
ಅರಿವೆ ಮರವೆ ಎಂಬುದನರಿಯೆನೆಂದು
ಅರಿಯದ ನಿಜವು ನೀನೇ,
ಸಿಮ್ಮಲಿಗೆಯ ಚೆನ್ನರಾಮಾ. ॥ ೪೫ ॥

೫೯೪

ಗುಣ ದೋಷ ಕರ್ಮಂಗಳನೇನೆಂದು ಅರಿಯ.
ಈ ಜಗವೆಲ್ಲಾ ಮಾಯೆಯೆಂದು ಕಂಡನಭೇದ್ಯ.
ಸುಖಸ್ವರೂಪ ನಿಜಗುಣ ನೀನೆ,
ಸಿಮ್ಮಲಿಗೆಯ ಚೆನ್ನರಾಮಾ. ॥ ೪೬ ॥

೫೯೫

ಗುರು ಹೇಳಿದುದನೆರಡಿಲ್ಲದೆ ನಂಬಿ
ಶಿರದಲ್ಲಿ ಮನವಿರಿಸಿ

ಪೆರತೇನುವ ನೆಮ್ಮದೆ ನಿಂದಲ್ಲಿ
ನೀನೆ ಸಿಮ್ಮಲಿಗೆಯ ಚೆನ್ನರಾಮಾ! ॥ ೪೭ ॥

೫೯೬

ಗೋವಾದಿಯಾದ ಸಾಕಾರಾದಿ ಭೌತಿಕಂಗಳನತಿಗಳೆದು
ನಿರಾಕಾರ ಪ್ರಾಣಾದಿಯಾದ ಮನೇಂದ್ರಿಯಂಗಳ ನೆಲೆಗಳೆದು
ಅರಿವಿನರಿವಿಂದವೇ ನೋಡಿ,
ಅರಿವು ಮರವೆಗಳೆರಡನು ನೇತಿಗಳೆದು
ಏನೂ ಇಲ್ಲದೆ ಶೂನ್ಯವಾಗಿ ನಿಂದ ನಿಜಸ್ವರೂಪ ನೀನೇ,
ಸಿಮ್ಮಲಿಗೆಯ ಚೆನ್ನರಾಮಾ. ॥ ೪೮ ॥

೫೯೭

ಘನಗಂಭೀರ ಮಹಾ ವಾರುಧಿಯಲ್ಲಿ
ಫೇನ ತರಂಗ ಬುದ್ಬುದಂಗಳಾದವಲ್ಲದೆ ಬೇರಾಗಬಲ್ಲವೆ?
ಆತ್ಮನೆಂಬ ಅಂಬುಧಿಯಲ್ಲಿ
ಸಕಲ ಬ್ರಹ್ಮಾಂಡಕೋಟಿಗಳಾದವಲ್ಲದೆ ಬೇರಾಗಬಲ್ಲವೆ?
ಇದ ಬೇರೆಂಬ ಅರೆಮರುಳುಗಳ ನಾನೇನೆಂಬೆ?
ವಿಶ್ವವನರಿದು ನೋಡಲು
ಸಿಮ್ಮಲಿಗೆಯ ಚೆನ್ನರಾಮನೆಂಬ ಲಿಂಗ ಬೇರಿಲ್ಲ. ॥ ೪೯ ॥

೫೯೮

ಚತುರ್ವಿಧ ಪಾಥ್ಯತ್ವವೆಮಗುಂಟು.
ಸುರಾದಿ ಚೂಡಾಮಣಿಗಳೆಂಬ
ಜಾಣನೇರಿಸಿದಕೊಂಡು ನುಡಿವಂತುಟಲ್ಲ.
ಸುಜನಜನ ಮನೋಜನವೆನಿಸುವಂತುಟಲ್ಲ.
ಸಿಮ್ಮಲಿಗೆಯ ಚೆನ್ನರಾಮನೆಂಬ ಲಿಂಗವು ಅರಿವಿನಂತುಟಲ್ಲ.॥ ೫೦ ॥

೫೯೯

ಚತುರ್ವಿಂಶತಿಯೇ ದೇಹ,
ಪಂಚವಿಂಶಕನೇ ದೇಹಿ,
ಷಡ್‌ವಿಂಶಕನೇ ಆತ್ಮಕನು.
ಅರಿವಡೆ ಸಚ್ಚಿದಾನಂದಮಪ್ಪ ನಿಜವು ನೀನೆ,
ಸಿಮ್ಮಲಿಗೆಯ ಚೆನ್ನರಾಮಾ. ॥ ೫೧ ॥

೬೦೦

ಜನನಾದಿ ಇಲ್ಲದವ ಜನನಾದಿಯನೇಕೆ ಒಡಂಬಡುವೆ?
ಗುಣಕರ್ಮವಿಲ್ಲದವ ವಿಷಯಂಗಳನೇಕೆ ಒಡಂಬಡುವೆ?
ಬಂಧುವಿಲ್ಲದವ ಮೋಕ್ಷವನೇಕೆ ಒಡಂಬಡುವೆ?
ಸಿಮ್ಮಲಿಗೆಯ ಚೆನ್ನರಾಮಾ. ॥ ೫೨ ॥

೬೦೧

ಜಲದಲ್ಲಿ ಇಲ್ಲದೆ ಜಲದಲ್ಲಿ ತೋರುವ ತೆರೆಗಳನು
ಭೂತ ತಿಳಿದೆಡೆಯಲ್ಲಿಯೂ ಇಲ್ಲದಂತೆ ಪರಮನ ಪೊದ್ದದಂತೆ
ಆ ಪರಮನಲ್ಲಿಯೆ ತೋರುವ ಜಗವನು
ಭೂತಭ್ರಮೆಯಿಂದ ತಿಳಿದೆಡೆಯಲ್ಲಿಯೂ ಇಲ್ಲದೆ
ನೆನಸಿನ ವಾರಣಾಸಿಯಲ್ಲಿ ಕನಸಿನ ಕಟಕವ ಕಂಡಂತೆ
ಇದ್ದ ಮಹವೆಂಬ ತೋರಿಕೆಯ ಎಲ್ಲವನು ತಿಳಿವಚಲಿತ ನೀನೆ,
ಸಿಮ್ಮಲಿಗೆಯ ಚೆನ್ನರಾಮಾ. ॥ ೫೩ ॥

೬೦೨

ಜಾಣನಯ್ಯಾ ಸದ್ಗುರುವ ನಂಬುವಲ್ಲಿ.
ಜಾಣನಯ್ಯಾ ವಿಷಯಂಗಳ ಬಿಡುವಲ್ಲಿ.
ಜಾಣನಯ್ಯಾ ಅವಿದ್ಯವ ಗೆಲ್ಲುವಲ್ಲಿ.
ಜಾಣನಯ್ಯಾ ತನ್ನ ತಾನರಿವಲ್ಲಿ
ಜಾಣನಯ್ಯಾ ನಿಜಗುಣನ ಶ್ರೀಪಾದವ ಪಿಡಿವಲ್ಲಿ
ಜಾಣನಯ್ಯಾ ನಮ್ಮ ಸಿಮ್ಮಲಿಗೆಯ ಚೆನ್ನರಾಮಾ. ॥ ೫೪ ॥

೬೦೩

ಜ್ಞಾತೃ ಜ್ಞಾನ ಜ್ಞೇಯವೆಂಬ ಮಾತಿನ ಮಾತಿಲ್ಲದೆ
ಇವರ ಧಾತು ಕುಳಿಮುತ್ಪತ್ತಿಯನಾರು ಬಲ್ಲರೊ?
ಮನದ ಸಂಚಲವೆ ಜ್ಞಾತೃ,
ಪ್ರಾಣನ ಸಂಚಲವೆ ಜ್ಞಾನ,
ಭಾವದ ಸಂಚಲವೆ ಜ್ಞೇಯ.
ಇಂತೀ ಮನ ಪ್ರಾಣ ಭಾವಂಗಳು ಭೂತಧಾತುವಿನುತ್ಪತ್ತಿ,
ಮೊದಲುಗೆಟ್ಟಲ್ಲಿಯೆ ತುದಿಗೆ ಲಯ,

ನಡುವೆ ತೋರುವುದಾವುದೊ?
ಇದು ಕಾರಣ ಅರಿಯಲಿಲ್ಲದೆ ಇರವೆ ಅರಿವಿಂಗೆ ಅರಿವಾಗಿ
ಕುರುಹಿಂಗೆ ತೆರಪಾಗಿರ್ದುದನರಿವ ಪರಿ ಇನ್ನೆಂತೊ?
ಇದನರಿದೆವೆಂಬ ಅರೆಮರುಳುಗಳ
ಅರಿವಿಂಗೆ ಅಭೇದ್ಯನಾದ ನಿಜಗುಣ ನೀನೇ,
ಸಿಮ್ಮಲಿಗೆಯ ಚೆನ್ನರಾಮಾ! || ೫೫ ||

೬೦೪

ಜೀವಂಗೆ ಸ್ವಪ್ನದಂತೆ ದಿಟ ತೋರಿ
ಜೀವನೊಡನೆ ಕೆಡುವ ಸಂಸಾರವ ಪರಮನೆಂದೇಕೆನುಡಿವೆಯೊ?
ಪರಮನಾದಡೆ ಪರಮನಲ್ಲಿ ಪರಮರಾಗಿಯಾದಡು ಎನಗೆ
ಕಾಣಬಾರದು.
ದೋಷಪನ್ನಾರಿ ವೇದಾನುಭವವಿದು ಪ್ರತಿ ಚಿನ್ಮಯವಾಗಿಹುದು.
ಈ ನಿಷ್ಕಲಬಿಂಬ ದಿಟವಿದೆಂದು ತಿಳಿದ ತಿಳಿವು ನೀನೇ,
ಸಿಮ್ಮಲಿಗೆಯ ಚೆನ್ನರಾಮಾ. || ೫೬ ||

೬೦೫

ತನಗೆ ಜ್ಞಾತೃವಿಲ್ಲ ಜ್ಞೇಯವಿಲ್ಲೆನಲು
ಆರಿಗೆ ತೋರುವುದೊ? ಜಗವಿನ್ನಾರಿಗೆ ತೋರುವುದೋ?
ನಿನ್ನ ಮರುತನ ಜಗದ ಡಂಗುರ ನೋಡಾ!
ಇನ್ನಾರಿಗೆಯು ದೃಶ್ಯವಿಲ್ಲ.
ಐಕ್ಯಂತು ಭಾವ ದೃಷ್ಟಿ.
ಸಿಮ್ಮಲಿಗೆಯ ಚೆನ್ನರಾಮ ಸರ್ವವೈದ್ಯನು. || ೫೭ ||

೬೦೬

ತನ್ನ ತನ್ನಿಂದವೆ ತಿಳಿದು ನೋಡೆಲವೊ!
ತನ್ನ ತನ್ನಿಂದವೆ ಆನೆನ್ನದೆ, ಎನ್ನದೆನ್ನದೆ
ಅನ್ಯ ವಿಷಯಕ್ಕೆರಗದೆ ತನ್ನ ನಿಜಸುಖದಲ್ಲಿ ನಿಂದಂದು ತಾನೇ,
ಸಿಮ್ಮಲಿಗೆಯ ಚೆನ್ನರಾಮಾ. || ೫೮ ||

೬೦೭

ತನ್ನದಾದಡೇನೋ ಕನ್ನಡಿ ಅನ್ಯರದಾದಡೇನೋ ಕನ್ನಡಿ?
ತನ್ನ ರೂಪ ಕಂಡಡೆ ಸಾಲದೆ?

ಸದ್ಗುರು ಆವನಾದಡೇನೋ?
ತನ್ನನರುಹಿಸಿದಡೆ ಸಾಲದೆ?
ಸಿಮ್ಮಲಿಗೆಯ ಚೆನ್ನರಾಮಾ. ॥ ೫೯ ॥

೬೦೮

ತನ್ನ ಮರೆವಂದವ ಶ್ರೀ ಗುರುವಿನ ವಚನದಿಂ ತಿಳಿದು ನೋಡಯ್ಯಾ,
ಪರಬ್ರಹ್ಮತಾನಾದಂದು ತನ್ನ ತಾ ಮರೆವೆ ನೋಡಯ್ಯಾ.
ಇದನರಿದು ಸುಖಿಯಾದಾತ ನೀನೇ,
ಸಿಮ್ಮಲಿಗೆಯ ಚೆನ್ನರಾಮಾ. ॥ ೬೦ ॥

೬೦೯

ತನು ಕಿಂಕರನಾಗದೆ, ಮನಕಿಂಕರನಾಗದೆ,
ಇಂದ್ರಿಯ ಕಿಂಕರನಾಗದೆ,
ಆತ್ಮ ಕಿಂಕರನಾಗದೆ, ಶ್ರುತಿ ಕಿಂಕರನಾಗದೆ
ಇವೆಲ್ಲವ ನೆರೆ ತೊರೆದು ಏನು ಎನ್ನದೆ
ಮರ್ಯಾದೆ ತಪ್ಪದೆ ಸದ್ಗುರು ಕಿಂಕರನಾಗಿ
ಭವಗೆಟ್ಟು ಹೋದವರನೇನೆಂಬೆ ಹೇಳಾ,
ಸಿಮ್ಮಲಿಗೆಯ ಚೆನ್ನರಾಮಾ. ॥ ೬೧ ॥

೬೧೦

ತನುವೆಂಬುದು ನಿಮ್ಮ ನಿಜವ ಕಾಣಲೀಯದು.
ಮನವೆಂಬುದು ನಿಮ್ಮ ದಿಟವ ಕಾಣಲೀಯದು.
ಹಮ್ಮು ಬಿಮ್ಮು ಅನೃತ ಅಸತ್ಯ ಅವಿದ್ಯ
-ಈ ಪಂಚವಿಷಯ ಅಜ್ಞಾನಭಾವಕ್ಕೆ ಮೂಲವಯ್ಯಾ.
ಅರಿವು ನಿನ್ನೊಡಲಾಗಿ ಮರವೆಯ ಮರೆದೆನೆಂಬುದು ಮಿಥ್ಯ
ತಿಳಿದಳಿದುಳಿದ ಬಚ್ಚಬರಿಯರಿವು
ಸಚ್ಚಿದಾನಂದ ಸ್ವರೂಪ ನೀನೆ,
ಸಿಮ್ಮಲಿಗೆಯ ಚೆನ್ನರಾಮ. ॥ ೬೨ ॥

೬೧೧

ತಮ ತಮಗೆ ಜ್ಞಾತೃವಿಲ್ಲ ಜ್ಞಾನವಿಲ್ಲ ಜ್ಞೇಯವಿಲ್ಲೆನಲು
ಆರಿಗೆ ತೋರೂದೊ?

ಜಗವಿನ್ನಾರಿಗೆ ತೋರೂದೊ ನಿನ್ನ?
'ನಿಜಾನಂದಾನುಭಾವಸ್ಯ ಸರ್ವಸಾಕ್ಷಿಕ ಯೋಗಿನಃ' ಎಂದುದಾಗಿ
ಇಂತು ಶಬ್ದಾದಿ ಸಕಲ ವಿಷಯಂಗಳೊಳಗಾದ
ಜೀವನ್ಮನವೆ ಸರ್ವಸಾಕ್ಷಿಯಾಗಿ ನಿಲಬಲ್ಲಾತನೆ
ಸಿಮ್ಮಲಿಗೆಯ ಚೆನ್ನರಾಮ ತಾನೆ! ॥ ೬೩ ॥

೬೧೨

ತೃಷ್ಣೆಯ ಜೀವವೆಂಬ ಬೆಸುಗೆ ಬಿಡುವಲ್ಲಿ ವಶವಲ್ಲ ಅಸಾಧ್ಯ
ಬ್ರಹ್ಮಾದಿಗಳಿಗೆ ಆಳಿಗೊಂಡುದು ವಾಯು.
ವಾಯು ಕೇಳಿ ಅರಿವರನರಿವ ಮರಸಿತ್ತು
ಸಿಮ್ಮಲಿಗೆಯ ಚೆನ್ನರಾಮನೆಂಬ ಅವಧಾನ ಜನಿಸಿತ್ತಾಗಿ.॥ ೬೪ ॥

೬೧೩

ತಾನಿದಿರೆಂಬುದೊಂದು ಮಾಯೆ ತೋರಿತ್ತಾಗಿ ತಾನಲ್ಲ.
ಈ ತೋರುವುದು ಉಳುಮೆ.
ಜ್ಞಾನಾನಂದ ತಾನೆಂಬುದನಾರೂ ಅರಿಯರಲ್ಲಾ!
ನೋಡಲೇನೂ ಇಲ್ಲವಾಗಿ ನಿಜಸಿದ್ಧ ನೀನೇ,
ಸಿಮ್ಮಲಿಗೆಯ ಚೆನ್ನರಾಮಾ. ॥ ೬೫ ॥

೬೧೪

ತಾ ಸನ್ಮಾತ್ರನಾಗಿ ಅಸನ್ಮಾತ್ರನೆನಲುಂಟೆ?
ತಾ ಚಿನ್ಮಾತ್ರನಾಗಿ ಅಚಿನ್ಮಾತ್ರನೆನಲುಂಟೆ;
ತಾ ಸುಖರೂಪನಾಗಿ ಅಸುಖರೂಪನೆನಲುಂಟೆ?
ತಾ ನಿತ್ಯನಾಗಿ ಅನಿತ್ಯನೆನಲುಂಟೆ?
ತಾ ಪರಿಪೂರ್ಣನಾಗಿ ಅಪರಿಪೂರ್ಣನೆನಲುಂಟೆ?
ಏನೆಂಬೆನಯ್ಯಾ, ತತ್ವವನರಿಯದ ಮರುಳುಗಳ!
ತಿಳಿದು ನೋಡಿ ತಾನೆಂದು ಇದಿರೆಂದು ಏನೆಂದು ತೋರದ
ಸಚ್ಚಿದಾನಂದ ನಿತ್ಯ ಪರಿಪೂರ್ಣನು ನೀನೇ,
ಸಿಮ್ಮಲಿಗೆಯ ಚೆನ್ನರಾಮಾ. ॥ ೬೬ ॥

೬೧೫

ತಾನೆ ದೇವನೆಂಬ, ತಾನೆಲ್ಲ ಬಲ್ಲೆನೆಂಬ
ತಾನೇ ಅಹಂಬ್ರಹ್ಮನೆಂಬ

ಏನುವನೂ ಸಲಿಸದಿಪನಯ್ಯಾ.
ಏನುವಲ್ಲದ ಹುಸಿಯನೆ ನುಡಿವ(ನ)
ಜ್ಞಾನಿಯೆಂತೆಂಬೆ ಹೇಳಾ,
ಸಿಮ್ಮಲಿಗೆಯ ಚೆನ್ನರಾಮಾ. ॥ ೬೭ ॥

೬೧೬

ತಾಮಸ ಸಂಬಂಧ ಕನಿಷ್ಠಂಗೆ ಹುಸಿ ಜಾಗ್ರ ದಿಟದಂತೆ ತೋರುಗು.
ರಾಜಸ ಸಂಬಂಧ ಮಧ್ಯಮಂಗೆ ಹುಸಿ ತೂರ್ಯ ದಿಟದಂತೆ
ತೋರುಗು.
ಸಾತ್ವಿಕ ಸಂಬಂಧ ಉತ್ತಮಂಗೆ ದಿಟ ತಾನೆ ತಾನಾಗಿ
ನಿಜ ನಿತ್ಯವಾಗಿರ್ಪುದು, ಸಂದೇಹವಿಲ್ಲ.
ಇದು ಸಚ್ಚಿದಾನಂದ ನಿತ್ಯ ಪರಿಪೂರ್ಣ ತೂರ್ಯಾತೀತವಪ್ಪ ತತ್ತ್ವ
ಇಂತುಂಟೆಂದು ತಿಳಿದ ತಿಳಿವು ನೀನೇ,
ಸಿಮ್ಮಲಿಗೆಯ ಚೆನ್ನರಾಮಾ. ॥ ೬೮ ॥

೬೧೭

ತೋರುವಡೆ ವಿಷಯವಾಗಿರದು,
ಅದು ಅರಿಯಬಾರದಾಗಿ ಅರಿಯಬಾರದು,
ಅರಿಯಬಾರದಾಗಿ ಹೇಳಬಾರದು,
ಹೇಳಬಾರದಾಗಿ ಕಾಣಬಾರದು.
ಅದು ಅತರ್ಕ್ಯ, ಅದು ನಿನ್ನಲ್ಲಿಯೆ ಇದೆ.
ಅದ ಹೇಳಲಿಲ್ಲ ಕೇಳಲಿಲ್ಲ ಅರಿಯಲಿಲ್ಲ.
ಅದನೇನೆಂಬೆ ಹೇಳಾ,
ಸಿಮ್ಮಲಿಗೆಯ ಚೆನ್ನರಾಮಾ. ॥ ೬೯ ॥

೬೧೮

ತೋರುವುದೆಲ್ಲವ ಕಾಬಾತ ತಾನೆಂದು ನೋಡೆ
ತೋರುವುದ ಕಾಬವನು ಈ ತೋರಿಕೆಯೆ ಹುಸಿಯಾಗಿ
ಏನುವನೂ ಕಾಣದೆ ನಿಂದ ನಿಲುವು.
ಸಚ್ಚಿದಾನಂದಸ್ವರೂಪು ನೀನೇ,
ಸಿಮ್ಮಲಿಗೆಯ ಚೆನ್ನರಾಮಾ. ॥ ೭೦ ॥

೬೧೯

ದರ್ಪಣದಿಂದ ತನ್ನನರಿದಾತ ಮತ್ತೆ
ದರ್ಪಣಕ್ಕೆ ಕಿಂಕರನಾಗಬೇಕೆ?
ಶ್ರುತಿಯಿಂದ ತನ್ನನರಿದಾತ ಮತ್ತೆ
ಶ್ರುತಿಗೆ ಕಿಂಕರನಾಗಬೇಕೆ?
ಹೇಳಾ, ಎಲೆ ಮರುಳೆ ಜಡಪಿಂಡವೆ!
ನೀನು ನಿರವಯ ನಿರ್ಗುಣ ನಿತ್ಯ ಪರಿಪೂರ್ಣನಹೆ.
ಈ ಸಿಮ್ಮಲಿಗೆಯ ಚೆನ್ನರಾಮನ
ಅರಿವಿನೊಳಗಡಗಿದಡೆ ಶ್ರುತಿಗತೀತನಹೆ. ॥ ೭೧ ॥

೬೨೦

ದಶಪಂಚಕಳೆಯಿಂದ ಶಶಿಬಿಂದು ಉದಯವು.
ದಶಪಂಚವನು ನುಂಗಿ ದಶಪಂಚವನು ಉಗುಳಿತು.
ಅದರ ದೆಸೆಯನರಿಯದೆ ಹೋದರು.
ಅದು ಬೆಸಗೊಂಬವರಿಗೆ ತಾನು ವಿಷಮ.
ಸಿಮ್ಮಲಿಗೆಯ ಚೆನ್ನರಾಮನೆಂಬ ಲಿಂಗದ
ದೆಸೆಯನರಿಯದೆ ಹೋದರು. ॥ ೭೨ ॥

೬೨೧

ದೃಶ್ಯವ ಕಾಬ ದೃಷ್ಟನಾರೋ ಎಂದಡೆ
ದೃಶ್ಯ ದೃಷ್ಟಗಳನರಿವ ಅರಿವದು
ದೃಶ್ಯನೂ ಅಲ್ಲ ದೃಷ್ಟನೂ ಅಲ್ಲ.
ಅದೃಶ್ಯಭಾವ ದೃಷ್ಟಿ ಚಿನ್ಮಯ
ದರ್ಶನಾದಿ ಕ್ರಿಯೆಯಿಲ್ಲದ ಪರಿಪೂರ್ಣ ನೀನೇ,
ಸಿಮ್ಮಲಿಗೆಯ ಚೆನ್ನರಾಮಾ. ॥ ೭೩ ॥

೬೨೨

ದಾಸಯ್ಯನೆನಗೆ ಸಾಲೋಕ್ಯನಯ್ಯಾ.
ಚೆನ್ನಯ್ಯನೆನಗೆ ಸಾಮೀಪ್ಯನಯ್ಯಾ.
ಕಕ್ಕಯ್ಯನೆನಗೆ ಸಾರೂಪ್ಯನಯ್ಯಾ.
ಮಾಚಯ್ಯನೆನಗೆ ಸಾಯುಜ್ಯನಯ್ಯಾ.
ದಾಸಯ್ಯನೊಕ್ಕುದ ಕೊಂಡೆನು.
ಚನ್ನಯ್ಯನ ಮಿಕ್ಕುದ ಕೊಂಡೆನು.

ಕಕ್ಕಯ್ಯನುಂಡು ಮಿಕ್ಕುದ ಕಾದು ಕೊಂಡೆನು.
ಮಾಚಯ್ಯನ ಜ್ಞಾನಪ್ರಸಾದವ ಕೊಂಡೆನು.
ಪುರಾತರೊಳಗಾಗಿ ಬಸವಣ್ಣನ ಡಿಂಗರಿಗ
ಚನ್ನಬಸವಣ್ಣನ ಹಳೆಯನೆಂದು
ತಮ್ಮೊಕ್ಕುದನಿಕ್ಕಿ ಸಲಹಿದರು ಕಾಣಾ,
ಸಿಮ್ಮಲಿಗೆಯ ಚೆನ್ನರಾಮಾ. ॥ ೭೪ ॥

೬೨೩

ದಿಟದ ಚಂದ್ರನು ಅನೇಕ ಘಟದ ಜಲದೊಳಗೆ ಜನಿಸಿ
ಅನೇಕ ವ್ಯವಹಾರವಾದಂತೆ
ಜೀವನೆ ಜಗ, ಜಗವೆ ಜೀವನಾದ.
ಅದಿ ಅನಾದಿ ವಿಚಿತ್ರತರವಾದ ಮಾಯೆ.
ಈ ಮಾಯೆಯಿಂದ ತನಗೆ ತಾನೇ ಪ್ರತಿಬಿಂಬ.
ಆ ಮಾಯಾ ಪ್ರತಿಬಿಂಬವೆ ತನಗೆ ಸಂಸಾರ.
ಆ ಸಂಸಾರವನು ಆ ಪರಮಾತ್ಮನು ಕೂಡಿಯೂ ಕೂಡದೆ
ಆ ಘಟ ಜಲ ಚಂದ್ರಮನ ಹಾಂಗೆ ವರ್ತಿಸುತ್ತಿಹನು.
ಅದೆಂತೆಂದಡೆ:
"ಏಕ ಏವ ಹಿ ಭೂತಾತ್ಮಾ ಭೂತೇ ಭೂತೇ ವ್ಯವಸ್ಥಿತಃ।
ಏಕಧಾ ಬಹುಧಾಚೈವ ದೃಶ್ಯತೇ ಜಲಚಂದ್ರವತ್॥"ಎಂದುದಾಗಿ,
ಸಟೆಯ ಮಾಯೆಯ ಸಟೆಯೆಂದು
ಕಳೆಮುಳಿವ ಧೀರ ನೀನೇ,
ಸಿಮ್ಮಲಿಗೆಯ ಚೆನ್ನರಾಮಾ. ॥ ೭೫ ॥

೬೨೪

ದಿಟದಂತೆ ತನು ತನ್ನ ಹಾಂಗೆ ತೋರಿತ್ತಾಗಿ ದೃಷ್ಟ ದೋಷಭ್ರಾಂತಿ.
ಎನ್ನ ದಿಟದಂತೆ, ತನು ತನ್ನ ಹಾಂಗೆ ಇಂದ್ರಿಯಕ್ಕೆ ತೋರಿಹುದಾಗಿ.
ದರ್ಶನದೋಷ ಭ್ರಾಂತಿಯೆಂದು ತಾನು ತಾನೆಂದು ತಾ ನೆನೆಯದಿಹುದಾಗಿ.
ದೃಷ್ಟದೋಷ ಭ್ರಾಂತಿಯನೂಹಿಸಿ ಜೀವ ತನ್ನ ದಿಟವೆಂದು ಬಗೆದಹನಾಗಿ.
ತಾನೇನೂ ಎನ್ನ ಕನಸಿನ ಹಾಂಗೆ.
ಭ್ರಾಂತಿಯೇನನೂ ಭೂತಸಾದೃಶ್ಯವನೂ ತಿಳಿದಂದು ನಿಜಗುಣ.
ಈ ನಿಜವಲ್ಲಿ ಅರಿದಾಗ ಭೇದವೇನೂ ಇಲ್ಲವಾಗಿ

ನಿರ್ಮಾಯ ನಿಜಗುಣ ನೀನೇ,
ಸಿಮ್ಮಲಿಗೆಯ ಚೆನ್ನರಾಮಾ. ॥೭೬॥

೬೨೫

ದ್ವೀಪಾದ್ವೀಪವಿಲ್ಲದಲ್ಲಿಂದತ್ತತ್ತ,
ಕಾಲಕರ್ಮವಿಲ್ಲದಲ್ಲಿಂದತ್ತತ್ತ,
ಮಾಯಾಮೋಹವಿಲ್ಲದಲ್ಲಿಂದತ್ತತ್ತ,
ಏನೂ ಏನೂ ಇಲ್ಲದಲ್ಲಿಂದತ್ತತ್ತ,
ಆದಿಮೂವರಿಲ್ಲದಲ್ಲಿಂದತ್ತತ್ತ,
ಸಿಮ್ಮಲಿಗೆಯ ಚೆನ್ನರಾಮನೆಂಬ ಲಿಂಗವಿಲ್ಲದಲ್ಲಿಂದತ್ತತ್ತ! ॥೭೭॥

೬೨೬

ನಡೆಯೊಂದು ನುಡಿಯೊಂದು ಪರಿಯುಳ್ಳವ ತತ್ತ್ವವಿದನಲ್ಲ.
ಜಡಮತಿ ತನ್ನ ನಗುವವರನರಿಯ.
ಕರ್ಮವಿಲ್ಲ, ಭಕ್ತಿ ಜ್ಞಾನವಿಲ್ಲೆಂಬ,
ಒಮ್ಮೆಯೂ ವೈರಾಗ್ಯ ತನ್ನಲಿಲ್ಲ.
ಎಕ್ಕಸಿಕ್ಕರ ಪರಿಯಾಯದವದ್ವೈತಿ, ವಿಕಳ.
ಅಕ್ಕಟಕ್ಕಟಾ! ಎರಡರಿಂದಲೂ ಕೆಟ್ಟರು ನೋಡಾ!
ಸಿಮ್ಮಲಿಗೆಯ ಚೆನ್ನರಾಮನ ನಿಜವನರಿಯದೆ. ॥ ೭೮ ॥

೬೨೭

ನಾಯ ಕುನ್ನಿಯ ಕಚ್ಚಬೇಡ, ಬಗುಳಬೇಡವೆಂದಡೆ ಮಾಣ್ಬುದೆ?
ಹಂದಿಯನಶುದ್ಧವ ತಿನಬೇಡ, ಹೊರಳಬೇಡವೆಂದಡೆ ಮಾಣ್ಬುದೆ?
ನಯದಿ ಬುದ್ಧಿಗಲಿಸಿದಡೆ ಮಾಣ್ಬವೆ ತಮ್ಮ ಸಹಜವ?
ದುರ್ವಿಷಯಿಗೆ ಸದ್ಗುರು ಬೋಧೆಯಿಂದ ನಿರ್ವಿಷಯವಪ್ಪುದೆ ಹೇಳಾ,
ಸಿಮ್ಮಲಿಗೆಯ ಚೆನ್ನರಾಮಾ. ॥೭೯॥

೬೨೮

ನಿಜದಿಂದ ಕ್ಷತ್ರಿಯನೆಂದು
ನಿಜವನರಿಯದ ಕರ್ಣನ ವ್ಯಾಧಭಾವೆ ಬಿಡದಂತೆ
ತಾನು ತನ್ನ ನಿಜವನರಿದಡೂ
ಜಾತಿಯಾಶ್ರಮ ಗುಣಧರ್ಮ
ಜೀವಾದಿ ಭೇದಂಗಳೊಳಗಾದ

ಮಾಯಾಮಯಂಗಳೆಂಬ ಮುನ್ನಿನ ಭ್ರಮೆಗಳ
ಬಿಡಲರಿಯದ ಬಡ ಮನುಜರೆಲ್ಲರೂ
ನಿಜಗುಣನ ನಿಜಭಾವದಲೂ ನಿಲ್ಲದವಂಗೆ
ನಿಜಸುಖವು ಸಾಧ್ಯವಪ್ಪುದೆ ಹೇಳಾ,
ಸಿಮ್ಮಲಿಗೆಯ ಚೆನ್ನರಾಮಾ. ॥ ೮೦ ॥

೬೨೯

ನಿಜವಸ್ತುವೊಂದೆ,
ಎರಡಾಗಬಲ್ಲುದದೊಂದೆ,
ಬೇರೆ ತೋರಬಲ್ಲುದದೊಂದೆ,
ತನ್ನ ಮರೆಯಬಲ್ಲುದದೊಂದೆ,
ಆ ಮರವೆಯ ಬಲ್ಲುದದೊಂದೆ,
ತಾನಲ್ಲದನ್ಯವಿಲ್ಲೆಂದರಿದರಿವು ತಾನೇ,
ಸಿಮ್ಮಲಿಗೆಯ ಚೆನ್ನರಾಮಾ. ॥ ೮೧ ॥

೬೩೦

ನಿತ್ಯ ಪರಿಪೂರ್ಣನೆಂದು ಪ್ರತ್ಯಕ್ಷ ಶ್ರುತಿ ಸಾರುತ್ತಿರಲು
ಮತ್ತೆ ಪರಿಭಾವಿಸಲೇನುಂಟು ಹೇಳಾ?
ಕರೆವಡೆ ಬಂದಿತ್ತು, ಕಳೆದಡೆ ಹೋಯಿತ್ತು.
ಎಂಬ ಕರ್ಮಕೌಟಿಲ್ಯದಲ್ಲಿ ಬಂದವನಲ್ಲ.
ಪ್ರತಿ ವ್ಯತಿರಿಕ್ತ ಗತಿ ಬಿಡದು.
ಸಿಮ್ಮಲಿಗೆಯ ಚೆನ್ನರಾಮನೆಂಬ ಲಿಂಗವು
ಜಡರುಗಳಿಗೆಲ್ಲಿಯದೊ? ॥ ೮೨ ॥

೬೩೧

ನಿರವಯ ನಿರ್ಗುಣ ಪರಿಪೂರ್ಣಾದ್ವಯನಾಗಿ
ಕಾ ಎಂಬ ಕರ್ಮವಿಲ್ಲ ಮ ಎಂಬ ಮಂತ್ರವಿಲ್ಲ,
ಏನೂ ಇಲ್ಲ ನಿನ್ನಲ್ಲಿ.
ನೋಡುವಡೆ ನಿಜಗುಣ ನಿಜತತ್ವ ನೀನೇ,
ಸಿಮ್ಮಲಿಗಯ ಚೆನ್ನರಾಮನೆಂಬುದು ಮುನ್ನಿಲ್ಲ. ॥ ೮೩ ॥

೬೩೨

ನಿರಾಚರಣ ನಿರ್ಜನಿತ ನಿರ್ಲೇಪ
ನಿಃಕಪಟಿ ನಿರ್ವಚನೀಯನುಪಮಿಸಲಿಲ್ಲ ನಿಲ್ಲೋ!

ನಿರಾಳ ನಿರ್ಮಾಯ ನಿಸ್ಸಂಗಿ ನಿರ್ಲಿಖಿತ
ನಿರವಯನ ಅವಯವಕ್ಕೆ ತರಲಿಲ್ಲ ನಿಲ್ಲೋ!
ಸಿಮ್ಮಲಿಗೆಯ ಚೆನ್ನರಾಮನೆಂಬ
ಜಂಗಮಲಿಂಗವನು ಉಪಮಿಸಲಿಲ್ಲ ನಿಲ್ಲೋ!! ॥ ೮೪ ॥

೬೩೩

ನೀನಲ್ಲದುದ ನೀನೆಂಬೆ,
ನಿನಗಿಲ್ಲದುದ ನಿನ್ನದೆಂಬೆ,
ನೀನಲ್ಲದುದಿನ್ನಿಲ್ಲ ಕಾಣಾ!
ನಿನಗೇನೂ ಇಲ್ಲ, ಅಹಂಮಮತೆಯ ಬಿಟ್ಟು ನೋಡಾ,
ನೀನೇ ಸಿಮ್ಮಲಿಗೆಯ ಚೆನ್ನರಾಮಾ. ॥ ೮೫ ॥

೬೩೪

ನೆನೆದೆನೆಂಬಲ್ಲಿ ಎನ್ನ ಮನದಿಂದ ತೊಲಗಿಪ್ಪನೆ?
ಅರಿದೆನೆಂಬಲ್ಲಿ ಎನಗೆ ಆತಗೆ ಕಂಡರಿತವುಂಟೆ?
ಇಲ್ಲದ ಮಾತ ತಂದು ಅಲ್ಲಲ್ಲಿ ಆಡುವಿರಿ!
ನಿಮ್ಮ ಬಲ್ಲತನಕ್ಕೆ ನಾನಂಜುವೆ ಕಾಣಿರೊ!
ಸಲ್ಲದು! ನಿಮ್ಮ ಮಾತು ನಿಲ್ಲಲಿ!
ಸಿಮ್ಮಲಿಗೆಯ ಚೆನ್ನರಾಮನೆಂಬ ಲಿಂಗವು
ನಾನೆ ಕಾಣಾ! ಜಡನೆ! ॥ ೮೬ ॥

೬೩೫

ನಿಚ್ಚ ನಿಚ್ಚ ಮುಟ್ಟಿ ನಿಚ್ಚ ನಿಚ್ಚ ಅಗಲುವವ ಕಂಡು
ನಾಚಿತ್ತಯ್ಯಾ ಎನ್ನ ಮನ, ನಾಚಿತ್ತು.
ಸಂದಿಲ್ಲದಲ್ಲಿ ಸಂದ ಮಾಡಿದರು
ಸಿಮ್ಮಲಿಗೆಯ ಚೆನ್ನರಾಮನೆಂಬ ಲಿಂಗದಲ್ಲಿ
ಸಂಸಾರ ಸಂಬಂಧಿಗಳು. ॥ ೮೭ ॥

೬೩೬

ನಿಚ್ಚ ಕನಸಿನಲ್ಲಿ ಅಶ್ವಮೇಧ ಬ್ರಹ್ಮಹತ್ಯವ ಮಾಡಿದಡಂ
ಎಂತು ನಡೆದಡಂ ದೇವದತ್ತಂಗೆ ಗುಣದೋಷವುಂಟೆ?

ಸ್ವರ್ಗನರಕವುಂಟೆ ಹೇಳಾ? ಅದೆತ್ತಣ ಮಾತೊ!
ಕನಸು ತಾ ಮಿಥ್ಯೆಯಪ್ಪುದರಿಂ ಮಾಯಾಮಯ.
ಈ ಮಾಯೆಯನರಿದು ಹುಸಿ ಜೀವಭಾವದಿಂದ
ಏನ ಮಾಡಿದಡೇನೋ ಸಿಮ್ಮಲಿಗೆಯ ಚೆನ್ನರಾಮಾ. ॥ ೮೮ ॥

೬೩೭

ನೇಣ ಹಾವೆಂದು ಬಗೆದವನಂತೆ
ಇದೇ ಹಾದಿ ಆನೆಂದು ಬಗೆದು
ತನ್ನ ಭ್ರಮೆಯಿಂದ ಇಲ್ಲದ ಸಂಸಾರದ ಸಕಲ
ದುಃಖಕ್ಕೊಳಗಾದರಯ್ಯಾ.
ಆ ಭ್ರಮೆಯ ಹುಸಿಯೆಂದು ತಿಳಿದ ತಿಳಿವು ನೀನೇ,
ಸಿಮ್ಮಲಿಗೆಯ ಚೆನ್ನರಾಮಾ. ॥ ೮೯ ॥

೬೩೮

ನೇಣಿನಲ್ಲಿ ಹಾವನಿಲ್ಲೆಂದು ಹೇಳುವಂಗೆ
ಹಾವಿನಲ್ಲಿ ನೇಣು ಉಂಟಾಗಬಲ್ಲುದೆ ಹೇಳಾ?
ಶಿವನಿಂದನ್ಯವೇನೂ ಇಲ್ಲೆಂದು ಬೋಧಿಸುವಂಗೆ
ತನು ಕರಣೇಂದ್ರಿಯ ಶಬ್ದಾದಿ ವಿಷಯ
ಸಂಸಾರ ಸುಖದುಃಖಗಳಾಗಬಲ್ಲವೆ?
ಇಲ್ಲದುದ ಕಂಡೆ, ಉಂಟೆಂಬುದತರ್ಕ
'ನೇಹನಾ ನಾಸ್ತಿ ಕಿಂಚನ, ಏಕಮೇವ ನಿರಂತರಂ' ಎಂದುದು ವೇದ.
ಶಿವನಿಂದನ್ಯವೇನೂ ಇಲ್ಲ ಎಂದರಿದರಿವು ನೀನೇ,
ಸಿಮ್ಮಲಿಗೆಯ ಚೆನ್ನರಾಮಾ. ॥ ೯೦ ॥

೬೩೯

ನೆನೆವಾಗ ತನ್ನ ಮನದಿಂದಗಲಿಪ್ಪನೆಂಬಲ್ಲಿ
ಎನಗೆಯೂ ಆತ್ಮಂಗೆಯೂ ಕಂಡರಿವ ಠಾವುಂಟೆ?
ಇಲ್ಲದ ಮಾತ ಕೊಂಡುಬಂದಲ್ಲಲ್ಲಿಗೆ ಒಡವಿರಿಸಲ್ಲದದು.
ನಿಮ್ಮ ಬಲ್ಲತನಕ್ಕಾನಂಜುವೆ ಕಾಣಭೋ!
ಸಿಮ್ಮಲಿಗೆಯ ಚೆನ್ನರಾಮನೆಂಬ
ಲಿಂಗವಿಲ್ಲದವರಿಗಿಲ್ಲ ಬರುಮಾತೇನು. ॥ ೯೧ ॥

೬೪೦

ನೋಡಿದಡೆ ಕಾಣಬಾರದು,
ನೋಡದಿರ್ದಡೆ ಕಾಣಬಹುದು; ಇದು ಸೋಜಿಗ!
ಸತ್ತಲ್ಲ ಅಸತ್ತಲ್ಲ; ಅದು ತಾನೆ ಮಾಯೆ; ಹುಸಿ.
ಅಹಿ ರಜ್ಜುವಿನಿಂ ನೋಡಿದ ನೋಟ ತಾನೆ,
ಸಿಮ್ಮಲಿಗೆಯ ಚೆನ್ನರಾಮಾ! ॥ ೯೨ ॥

೬೪೧

ಪಂಚಭೂತದ ಸೂತಕದ ಬಳಿವಿಡಿದು
ಪ್ರಜ್ವಲಿಸುವ ಆತ್ಮಜ್ಯೋತಿಯೆಂಬ ಮಾತಿಸೊಳಗಲ್ಲ.
ನಾದ ಬಿಂದು ಕಳಾತೀತನೆಂದು ನುಡಿವರು.
ಹೆಸರಿಲ್ಲದ ಬಯಲ ತಮ್ಮ ತಮ್ಮ ಮುಖಕ್ಕೆ ಹೆಸರಿಟ್ಟು
ತಮ ತಮಗೆ ಕರತಳಾಮಳಕವೆಂಬರು.
ಅದರಾದಿಯಂತ್ಯವನರಿಯರು
ಎಂತು ಬಲ್ಲರು ಸಿಮ್ಮಲಿಗೆಯ ಚೆನ್ನರಾಮನೆಂಬ
ಶಬ್ದ ಉದ್ದೇಶಿಗಳು? ॥ ೯೩ ॥

೬೪೨

ಪಂಚಾಶತ್‌ಕೋಟಿ ವಿಸ್ತೀರ್ಣ ಭೂಮಂಡಲ
ಅಷ್ಟದಿಕ್ಕುಗಳೆಂಬವರೊಳಗಿಲ್ಲವಣ್ಣಾ.
ಗಗನಮಂಡಲದೊಳಗೆ ಬೆಳಗುವ
ರವಿಶಶಿಗಳುದಯದ ಬಳಿವಿಡಿದು ಸುಳಿವವರೊಳಗಲ್ಲ.
ಅಂತಿಂತಾಗದ ಮುನ್ನ ಇನ್ನೇನೂ ಇಲ್ಲ.
ಬೆಸಗೊಂಬಡೆ ಹೇಳುವೆ.
ನಿನ್ನ ವಶಕ್ಕೆ ಬಾರದು ಕೇಳು,
ಸಿಮ್ಮಲಿಗೆಯ ಚೆನ್ನರಾಮನೆಂಬ ಲಿಂಗದಲ್ಲಿಲ್ಲ,
ಬರಿಮಾತೇನು? ॥ ೯೪ ॥

೬೪೩

ಪಂಚೇಂದ್ರಿಯವೆಂಬ ಪಾಪಿಯ ಕೂಸು
ಸಂತವಿಡೆ ಸಂತವಿರದು ನೋಡಾ!

ಮುದ್ದಾಗಿ ಮರೆಸಿ ಬುದ್ಧಿಯ ನುಂಗಿತ್ತು.
ಹುಸಿಯ ನೇವರಿಸಿ ಮಸಿಮಣ್ಣ ಮಾಡಿತ್ತು.
ಸಿಮ್ಮಲಿಗೆಯ ಚನ್ನರಾಮನಲ್ಲಿ
ಲಿಂಗಸಂಗಿಗಳಲ್ಲದವರ. ॥ ೯೫ ॥

೬೪೪

ಪಡುವಣ ಹೆಣ್ಣ
ಮೂಡಣ ಮಣ್ಣ
ತೆಂಕ ಬಡಗಲ ಹೊನ್ನ
ಆಳುವ ಚಾಂಚೆಳಸಂಚೂರ ಪಂಚಾನನನ ಸಂಚಿಗವ...
ಸಿಮ್ಮಲಿಗೆಯ ಚೆನ್ನರಾಮನೊಲ್ಲ. ॥ ೯೬ ॥

೬೪೫

ಪರಮಂಗೆ ಪ್ರಕೃತಿಯ ಸಂಗದಿಂದ ಜೀವಭಾವ.
ಆ ಜೀವಂಗೆ ಅಂಗನೆಯರ ಸಂಗದಿಂದ
ರೌರವ ನರಕದಿಂದ ದುಃಖಹೇತು.
ದುಃಖಹೇತುವಿನಿಂದ ನಾನಾ ಯೋನಿಯ ಜನನ.
ಇದು ಕಾರಣ ನಾನಾ ಯೋನಿಯಲ್ಲಿ ಜನಿಸುವ
ಪ್ರಕೃತಿಯ ಸಂಗ ಬಿಡದವಂಗೆ ಮುಕ್ತಿಯೆಲ್ಲಿಯದು
ಸಿಮ್ಮಲಿಗೆಯ ಚೆನ್ನರಾಮಾ? ॥ ೯೭ ॥

೬೪೬

ಪರಮಾತ್ಮನಪ್ರತಿಲಹರಿಯಿಂದಅಂತರಾತ್ಮನುತ್ಪತ್ತ್ಯ.
ಅಂತರಾತ್ಮನಪ್ರತಿಲಹರಿಯಿಂದಜೀವಾತ್ಮನುತ್ಪತ್ತ್ಯ.
ಅಂತಪ್ಪಜೀವಾಂತರಾತ್ಮಾದಿಗಳುಅಂಗಪ್ರಾಣವಾದಲ್ಲಿ
ಒಂದೆಯೆನಿಸಿದರು.
ಆ ಒಂದೆಯೆಂಬ ತಾಮಸ ಜೀವನು
ಅಂಗನೆಯರಸಂಗಮೊದಲಾದನಾನಾದುಃಖಗಳಲ್ಲಿ ನೋವುತ್ತ,
ನಾನಾಯೋನಿಗಳಲ್ಲಿ ಜನಿಸುತ್ತ,
ರೌರವ ನರಕ ಆಳುತ್ತಮುಳುಗುತ್ತಲಿಹನು.
ಆ ಪರಮಾತ್ಮನು ಜೀವಾತ್ಮನ ಶಿರೋಮಧ್ಯದಲ್ಲಿರ್ದು

ನಾಹಂಎನ್ನದೆಸೋಹಂಎನ್ನುತ್ತ
ಸಿಮ್ಮಲಿಗೆಯಚನ್ನರಾಮನೆಂಬಅಖಂಡಲಿಂಗದೊಳಗೆನಿತ್ಯತ್ವವನೆಯ್ದಿ
ಎಡೆಬಿಡುವಿಲ್ಲದೆಪರಮಸಂತೋಷದೊಳಿದ್ದಿತ್ತು. ||೯೮||

೬೪೭

ಪೃಥ್ವಿ ಅಪ್ಪು ತೇಜ ವಾಯು ಆಕಾಶವೆಂಬಿವು
ಪಂಚ ಮಹಾಭೂತಂಗಳು.
ಪ್ರಾಣ ಅಪಾನ ವ್ಯಾನ ಉದಾನ ಸಮಾನವೆಂಬಿವು
ಪಂಚಪ್ರಾಣವಾಯುಗಳು.
ವಾಕ್ಕು ಪಾಣಿ ಪಾದ ಪಾಯು ಗುಹ್ಯವೆಂಬಿವು
ಪಂಚಕರ್ಮೇಂದ್ರಿಯಂಗಳು.
ಶ್ರೋತ್ರ ತ್ವಕ್ಕು ನೇತ್ರ ಜಿಹ್ವೆ ಘ್ರಾಣವೆಂಬಿವು
ಪಂಚಜ್ಞಾನೇಂದ್ರಿಯಂಗಳು.
ಮನ ಬುದ್ಧಿ ಚಿತ್ತ ಅಹಂಕಾರವೆಂಬಿವು ಅಂತಃಕರಣ
ಚತುಷ್ಟಯಂಗಳು.
ಇಂತು ಇಪ್ಪತ್ತು ನಾಲ್ಕು ತತ್ವಂಗಳು ಕೂಡಿ ದೇಹವಾಯಿತ್ತು.
ಭೂತೈಶ್ಚ ಪಂಚಭಿಃ ಪ್ರಾಣೈಶ್ಚ ಚತುರ್ದಶಭಿರಿಂದ್ರಿಯೈಃ।
ಚತುರ್ವಿಂಶತಿದೇಹಾನಿ ಸಾಂಖ್ಯಶಾಸ್ತ್ರವಿದೋ ವಿದುಃ॥
ಎಂದುದಾಗಿ, ಇಂತೀ ಇಪ್ಪತ್ತನಾಲ್ಕು ತತ್ತ್ವಂಗಳು ಕೂಡಿ
ಚೇಷ್ಟಿಸುವಾತನೇ ಜೀವಾತ್ಮನು.
ಅದೆಂತೆಂದಡೆ:
ಮನಶ್ಚತುರ್ವಿಂಶಕಂ ಚ ಜ್ಞಾತೃತ್ವಂ ಪಂಚವಿಂಶಕಂ।
ಆತ್ಮಾ ಷಡ್ವಿಂಶಕಶ್ಚೈವ ಪರಾತ್ಮಾ ಸಪ್ತವಿಂಶಕಃ॥
ಚತುರ್ವಿಧಂತು ಮಾಯಾಂಶಂ ನಿರ್ಗುಣಃ ಪರಮೇಶ್ವರಃ।
ಪಂಚವಿಂಶತಿ ತತ್ತ್ವಾನಿ ಮಾಯಾಕರ್ಮ ಗುಣಾಯತೇ
ವಿಷಯಾ ಇತಿ ಕಥ್ಯಂತೇ ಪಾಶಜೀವ ನಿಬಂಧನಾತ್
ಇಂತೆಂದುದಾಗಿ ಇಂತೀ ಪಂಚವಿಂಶತಿ ತತ್ತ್ವಂಗಳುತ್ಪತ್ತಿಯು
ನಿಮ್ಮ ನೆನಹುಮಾತ್ರದಿಂದಾದವಾಗಿ
ಇವರ ಗುಣಧರ್ಮಕರ್ಮಂಗಳು ನಿಮಗಿಲ್ಲ ನೋಡಾ,
ಸಿಮ್ಮಲಿಗೆಯ ಚೆನ್ನರಾಮಾ. || ೯೯ ||

೬೪೮

ಪ್ರಾಣ ಪ್ರಾರಂಭ ಪ್ರಾರಬ್ಧವಿಲ್ಲಾಗಿ
ಪರಚಿಂತೆ ಪರಬೋಧೆಯ ಪರಿಚಿತನಲ್ಲ.
ಉಸಿರ ಬೀಜದ ಪಸಿಯ ಬಣ್ಣದ ವಶವಿದನಾಗಿ, ವಶಗತನಲ್ಲ.
ನಿರಂತರ ಸ್ವತಂತ್ರ ಶರಣನು,
ಸಿಮ್ಮಲಿಗೆಯ ಚೆನ್ನರಾಮನೆಂಬ ಲಿಂಗ ಶಬ್ದಮುಗ್ಧವಾಗಿ. ॥೧೦೦॥

೬೪೯

ಫಣಿ ತನ್ನ ಹೆಡೆಯ ಮಣಿಯ ಕಂಡಹರೆಂದು ಕತ್ತಲೆಗೋಡಿತ್ತಯ್ಯಾ.
ಬಳಿ ಬಳಿಯಲ್ಲಿ ಬೆಳಗು ಬರುತ್ತಿರಲು
ತಾನಡಗುವ ಠಾವಿನ್ನೆಲ್ಲಿಯಯ್ಯಾ?
ತನ್ನರಿವಿನ ಕುರುಹಳಿಯದನ್ನಕ್ಕ
ಸಿಮ್ಮಲಿಗೆಯ ಚೆನ್ನರಾಮನೆಂಬ ಲಿಂಗವೆಲ್ಲಿಯದಯ್ಯಾ? ॥೧೦೧॥

೬೫೦

ಬಟ್ಟೆಗೊಂಡು ಹೋಗುತಿಪ್ಪ ಮನುಜನೊಬ್ಬ
ಹುಲಿ ಕಾಡುಗಿಚ್ಚು ರಕ್ಕಸಿ ಕಾಡಾನೆಗಳು
ನಾಲ್ಕೂ ದೆಸೆಯಲಟ್ಟುತ ಬರೆ
ಕಂಡು ಭಯದಿಂದ ಹೋಗ ದೆಸೆಯಿಲ್ಲದೆ
ಬಾವಿಯ ಕಂಡು ತಲೆಯನೂರಿ ಬೀಳುವಲ್ಲಿ
ಹಾವ ಕಂಡು ಇಲಿಗಡಿದ ಬಳ್ಳಿಯ ಹಿಡಿದು ನಿಲೆ
ಜೇನುಹುಳು ಮೈಯನೂರುವಾಗ
ಮೂಗಿನ ತುದಿಯಲೊಂದು ಹನಿ ಮಧು ಬಂದು ಬೀಳೆ
ಆ ಮಧುವ ಕಂಡು ಹಿರಿದಪ್ಪ ದುಃಖವೆಲ್ಲವೆಲ್ಲವ ಸೈರಿಸಿ
ನಾಲಗೆಯ ತುದಿಯಲ್ಲಿ ಆ ಮಧುವ ಸೇವಿಸುವಂತೆ
ಈ ಸಂಸಾರಸುಖ ವಿಚಾರಿಸಿ ನೋಡಿದಡೆ ದುಃಖದಾಗರ
ಇದನರಿದು ಸಕಲ ವಿಷಯಂಗಳಲ್ಲಿ ಸುಖವಿಂತುಟೆಂದು
ನಿರ್ವಿಷಯನಾಗಿ ನಿಂದ ನಿಲವು ನೀನೇ,
ಸಿಮ್ಮಲಿಗೆಯ ಚೆನ್ನರಾಮಾ. ॥೧೦೨॥

೬೫೧

ಬಲುಹಾಗಿ ತತ್ವವಡಸಿದಾತ ಸತ್ತನೆ?
ಕರಗುವ ತತ್ವುಂಜನೆಯ ಕರಣವ ತಪ್ಪಿಸಿ ಪ್ರವೇಶಿಸುವಾತ
ಸಂಚರಿಸುವ ತದ್ಘುಮೆಯಿಂದ ಬಯಲ ಕರಣಂಗಳಿಗೆಡೆ-
ಗೊಡುವ ಕತದಿಂ
ಪಂಚಮಹಾರೂಪನ ಅಹಂಭಾವದ ಜೀವನಿಂದ
ರಾಗಾದಿ ಮಲತ್ಯಾಗದಿಂದ, ಸಕಲ ಕರಣ ವ್ಯಾಪಾರದಿಂದ,
ಉತ್ತುಂಗ ಪದೋನ್ನತಿಯಿಂದ ಸಮವೆನೆ,
ಕರಣದೊಳಿಪ್ಪರಿವಿಂದೆ ಚೇಷ್ಟಿಸುವನಾಗಿ ಪ್ರಾಣಾದಿರೂಪನು.
ತಾ ನುಡಿದುದ ತಾನೆ ಕೇಳುವ, ಲೇಸೆಂಬುದ ಹಿಡಿವ,
ಮುಂದೆ ನೇತಿಗತಿಯ ಕರಣಂಗಳ ಕಾಬ,
ಹೊಲ್ಲಹದವ ಬಿಡುತ್ತ ಸೇವಿಸುವ,
ಸ್ವಚ್ಛಾಂಗ ಸುಖವಾಸನೆಗೆರಗುವ,
ಕರ್ಮೇಂದ್ರಿಯದ ಬುದ್ಧೀಂದ್ರಿಯಾನಂದ
ತಾನೆಂಬುದನಾರೂ ಅರಿಯರಯ್ಯಾ!
ನೋಡಲೇನದ ನಿಶ್ಚಯಿಸಿ ನಾ ಬಲ್ಲೆನೆಂಬ ಅರಿದು ಮರೆಯದಂತೆ
ರೂಪನಪ್ಪಿ ಸೋಹಮೆಂಬುದು ಜೀವ.
ಇಂತಪ್ಪ ಸರ್ವದೃಷ್ಟವನೊಳಕೊಂಡು.
ಪಂಚವಿಂಶತಿಯಾಗಿ ತೋರುವ ತೋರಿಕೆಯೆಲ್ಲಾ
ಹುಸಿಯೆಂದರಿದರಿವು ನಿಜತತ್ವ ನೀನೇ,
ಸಿಮ್ಮಲಿಗೆಯ ಚೆನ್ನರಾಮಾ. ॥ ೧೦೩ ॥

೬೫೨

ಬಲ್ಲೆವು ಬಲ್ಲೆವೆಂದೆಂಬರು,
ಬಯಲ ಭ್ರಮೆಗೆ ಬಳಲುತ್ತಿರ್ಪರು.
ಹಗಲುಗತ್ತಲೆ ಹಗಲುಗತ್ತಲೆ
ಹದಿರ ನುಡಿವ ಚದುರರಿಗೆಲ್ಲಾ ಹಗಲುಗತ್ತಲೆ.
ಬಲ್ಲವರನಲ್ಲೆನಿಸಿತ್ತು ಸಿಮ್ಮಲಿಗೆಯ ಚೆನ್ನರಾಮನೆಂಬ
ನಾಮದೊಡಕು. ॥ ೧೦೪ ॥

೬೫೩

ಬ್ರಾಹ್ಮಣ ಕ್ಷತ್ರಿಯ ವೈಶ್ಯ ಶೂದ್ರ
ಮನುಷ್ಯ ಸ್ತ್ರೀ ಪುನ್ನಕಾದಿ ಜಾತಿಪ್ರತ್ಯಯಂಗಳು
ಬಾಲಭಾವದೊಳೆಂತಂತೆ.
ತನ್ನ ನಿಜವನರಿಯದವನು
ಕೋಹಂಭಾವ ನಾಹಂಭಾವ ಸೋಹಂಭಾವಾದಿ
ಸಕಲ ಹಂಕ್ರಿಯಾಗದುಃಖವಿಲ್ಲದ
ಅಜನ ಪ್ರಮೇಯಜ್ಞಾನ ಚಿನ್ಮಾತ್ರಯೆಂಬ
ಸುಖಸ್ವರೂಪ ತಾನೇ.
ಪರಮನೆಂಬ ನಿಜವನರಿದಾತ,
ಮರೆಯನೆಂತಿರ್ದದಂ ಎಂತು ನಡೆವಡಂತೆ ಸಂತ,
ಸಿಮ್ಮಲಿಗೆಯ ಚೆನ್ನರಾಮನಾಶ್ರಯದಲ್ಲಿರ್ದ ಪರಮಾರೂಢ.
ಆತನ ಸದ್ಬೋಧೆ ಅವನ ಮಂತ್ರದಿಂದ
ಕೇಳಿ ಶುದ್ಧರಾಗಿ ಬದುಕಿ. ॥ ೧೦೫ ॥

೬೫೪

ಬೆಣ್ಣೆಯ ಬೆನಕಂಗೆ ಕೆಂಡಮುಂಡಲಿಗೆಯ ಉಪಹಾರ.
ಉಬ್ಬಸ ಉರಸುವುದೆ ಮೈಯಕ್ಕುವುದೆ?
ಅದೆಲ್ಲಿಯ ಮಾತು, ಹುಸಿ.
ಅದಲ್ಲ, ನಿಲ್ಲು ಎಲೆ ಜಡನೆ!
ಬೇರೆ ವಚಿಸಲಿಲ್ಲ,
ಸಿಮ್ಮಲಿಗೆಯ ಚೆನ್ನರಾಮನೆಂಬ ಶಬ್ದವಿತ್ತುಗಳಿಗೆ. ॥ ೧೦೬ ॥

೬೫೫

ಬೆಳಗಿನ ಬೀಜ ಮಹಾಬೆಳಗು
ಕತ್ತಲೆಯನೊಳಕೊಂಡು
ಕಣ್ದೆರೆವ ಪರಿಯ ನೋಡಾ!
ತಿಳಿವಡೆ ಬೆಳಗಲ್ಲ,
ಒಳಗೊಳಗೆ ಹೊಳೆವ ಕಳೆ ಇದೇನೊ!
ಇದೆಲ್ಲಿಂದ ಹುಟ್ಟಿ, ಇದೆಲ್ಲಿಂದ ತೋರಿತ್ತು!
ಅಲ್ಲಿಯೆ ಆಗಾಗಿ ಅಲ್ಲಿಯೇ ಬೆಳೆಯಿತ್ತು.

ಸಿಮ್ಮಲಿಗೆಯ ಚೆನ್ನರಾಮನೆಂಬ
ಮಹಾಘನಲಿಂಗದಲ್ಲಿಯೆ ಕಾಲೂರಿ ನಿಂದ
ಪರಿಯನೇನೆಂಬೆ! ॥ ೧೦೭ ॥

೬೫೬

ಬೆಳಗಿನ ಬೀಜವಿಡಿದು ಬೆಳೆದ ಕತ್ತಲೆ,
ಆ ಕತ್ತಲೆವಿಡಿದು ಬೆಳೆದ ಮೂವರು,
ದೃಷ್ಟದ ನಷ್ಟವ ವಿತ್ತವೆಂದು ಹಿಡಿದುಕೊಂಡೈದಾರೆ
ಆದಿವಾಸದೊಳಗಣ ಹಿರಿಯರೆಲ್ಲರು
ಸಾಧಾರಣ ಸಾರತರಾಗಿಯೆ ಹೋದರು,
ಸಿಮ್ಮಲಿಗೆಯ ಚೆನ್ನರಾಮನೆಂಬ ಲಿಂಗದ
ನಿಜವನರಿಯದೆ. ॥ ೧೦೮ ॥

೬೫೭

ಭಕ್ತರ ನಿರ್ಮಳ ಭಕ್ತಿ
ಏನೆಂದರಿಯದ ಯುಕ್ತಿಶೂನ್ಯನಪ್ಪ
ಅಹಂಕಾರಿ ಮರುಳನನೆಂತು ಗುರುವೆಂಬೆ?
ಪ್ರಕೃತಿಧರ್ಮವನಾತ್ಮಂಗೇರಿಸಿ ಕಾಬ
ಜಡ ನರನನೆಂತು ಗುರುವೆಂಬೆ?
ಭಾವಶುದ್ಧಿಯಾಗದೆ ಕೆಮ್ಮನೆ ತಪ್ಪುಗೊಂಬ
ಜಡ ನರನನೆಂತು ಗುರುವೆಂಬೆ?
ಶರಣರಲಿ ಗುಣದೋಷವನೇನುವರಸದೆ
ಸುಖವ ಮಾಡುವಾತನ ಗುರುವೆಂದು ನಂಬುವೆ
ಸಿಮ್ಮಲಿಗೆಯ ಚೆನ್ನರಾಮಾ. ॥ ೧೦೯ ॥

೬೫೮

ಭ್ರಮೆಯ ಭ್ರಮೆಯೆಂದುದಾಗಿ ಬೆನ್ನಿಲ್ಲ ಬಸುರಿಲ್ಲ
ನೆಲೆಯಿಲ್ಲದ ಕಾರಣ ಮೇಲಿಲ್ಲಿನ್ನೆಂತೊ!
ಉಂಟೆಂಬುದು ಮುನ್ನವೆ ಗುಂಟಕ್ಕೆ ತರಲಿಲ್ಲ.
ಇಲ್ಲೆಂಬುದು ಮುನ್ನವೆ ಸೊಲ್ಲಿಂಗೆ ಯುಕ್ತಿ ಎಯ್ದದು.
ಹುಟ್ಟು ನಷ್ಟವಿಲ್ಲ; ದೃಷ್ಟವುಳ್ಳ ಮಾತು!
ಸಿಮ್ಮಲಿಗೆಯ ಚೆನ್ನರಾಮನೆಂಬ ಲಿಂಗವಿಲ್ಲಿನ್ನೆಂತೊ! ॥ ೧೧೦ ॥

೬೫೯

ಮಣ್ಣ ಕಳೆದು ಮಡಕೆಯಿಲ್ಲ.
ಹೊನ್ನ ಕಳೆದು ತೊಡಿಗೆಯಿಲ್ಲ.
ತನ್ನ ಕಳೆದು ಜಗವಿಲ್ಲ; ತಾನೇ ತನ್ನಿಂದನ್ಯವಿಲ್ಲ.
ಸುಖ ದುಃಖ ಬಂಧಮೋಕ್ಷಗಳಿಲ್ಲದ
ನಾಹಂ ಎಂದೆನಲಿಲ್ಲ, ಕೋಹಂ ಎಂದೆನಲಿಲ್ಲ,
ಸೋಹಂ ಎಂದೆನಲಿಲ್ಲ.
ನುಡಿಗೆ ಎಡೆಯೆನಿಸಿ, ಏನೂ ಇಲ್ಲದ
ಸಚ್ಚಿದಾನಂದ ನಿತ್ಯಪರಿಪೂರ್ಣ ನೀನೇ,
ಸಿಮ್ಮಲಿಗೆಯ ಚೆನ್ನರಾಮಾ. ॥ ೧೧೧ ॥

೬೬೦

ಮನದ ಬೆಸನ ಕಂಗಳಲ್ಲಿ ಗರ್ಭವಾಗಿ
ಕೈ ಪ್ರಸೂತೆಯಾದ ಪ್ರಪಂಚನೇನೆಂಬೆ?
ಮಾಡಿದಡಾಯಿತ್ತು, ಮಾಡದಿರ್ದಲ್ಲಿ ಹೋಯಿತ್ತು.
ನಚ್ಚದಿರು ನಿಶ್ಚಯವಲ್ಲ,
ಸಿಮ್ಮಲಿಗೆಯ ಚೆನ್ನರಾಮನೆಂಬ ಲಿಂಗಸಂಸಾರಿ ನೀ
ಕೇಳಾ! ॥ ೧೧೨ ॥

೬೬೧

ಮನದಿಂದ ಸಂಸಾರ ಸುಖದುಃಖ ಮಾಯಾಮಯ
ಈ ಮನದ ವಿಷಯವಲ್ಲಿ ಕೂಡಲೀಯದೆ ನಿಮ್ಮಲ್ಲಿ ನಿಲಿಸಿ
ಆ ಮನ ತಾನು ತನ್ನ ನಿಜವಲ್ಲಿ ನಿಂದು ನೋಡೆ
ಆ ನೋಡುವ ನೋಟ ಉಳಿದಂದು
ಉಳಿದ ಪರಮಾನಂದ ನೀನೇ,
ತಿಳಿದು ನೋಡಾ, ಸಿಮ್ಮಲಿಗೆಯೆ ಚೆನ್ನರಾಮಾ. ॥ ೧೧೩ ॥

೬೬೨

ಮನವೇನ ಬಯಸಿತ್ತು
ಆ ಬಯಕೆಗಳನೇನು ಮನಕ್ಕೆ ಕುಡದೆ
ಅರಿವು ತಾನಾಗಿ ಸಂದೇಹವಳಿದು ನಿಂದ

ಸಕಲ ವಿಷಯಂಗಳ ಒಡಗೂಡದಾತ
ಸಿಮ್ಮಲಿಗೆಯ ಚೆನ್ನರಾಮ ತಾನೆ. ॥ ೧೧೪ ॥

೬೬೩

ಮನರಥದ ಮೇಲೆ ನಿಂದುದ ಭೇದಿಸಬಾರದಯ್ಯ,
ಸರಶಬ್ದವಾದಿಗಳು ಪರಿಯಿತನರಿಯರಾಗಿ.
ಹರಿವಿರಂಚಿಗಳಿಗೆ ತುರ್ಯವೆಲ್ಲಿಯದೊ?
ತನುಮುಖದ ತನುಭಾವಿಗಳಿವರು.
ಸಿಮ್ಮಲಿಗೆಯ ಚೆನ್ನರಾಮಲಿಂಗದಲ್ಲಿ
ವಾಗದ್ವೈತವ ನುಡಿವರಲ್ಲದೆ ನಿಜವೆಲ್ಲಿಯದು? ॥ ೧೧೫ ॥

೬೬೪

ಮುಟ್ಟದ ಮುನ್ನವೆ ಹುಟ್ಟಿ
ಪೆತ್ತಲ್ಲಿ ಸತ್ತುದು ನೋಡಾ!
ಅದು ಮಾಯದ ಕೃತಕದ ಗರ್ಭದ ನೆಳಲಿನ ಸುಳುಹು.
ಆದಲ್ಲಿ ಹೋಯಿತ್ತು ನೋಡಾ!
ಹೋದಾದಲ್ಲಿ ನಿಂದಿತ್ತು
ಸಿಮ್ಮಲಿಗೆಯ ಚೆನ್ನರಾಮನೆಂಬ ಲಿಂಗವು
ಲಿಂಗೈಕ್ಯರಲ್ಲಿ. ॥ ೧೧೬ ॥

೬೬೫

ಮುನ್ನವೆ ಮೂರರ ಹಂಬಲ ಹರಿದು
ಗುರು ಚರ ವಿರಕ್ತನಾದ ಬಳಿಕ
ಇನ್ನೂ ಮೂರರ ಜಿಹ್ವೆಯ ಹಂಬಲೇಕೆ?
ಆವಾವ ಜೀವಂಗಳು ತಮ್ಮವಲ್ಲದೆ ಮುಟ್ಟವಾಗಿ
ತೊಂಡ ಮಚ್ಚಿದ ಜೀವದನವಂತೆ,
ಊರೂರ ತಪ್ಪದೆ ಹರಿದು ಜೋಗಿಯ ಕೈಯ ಕೋಡಗದಂತೆ.
ಅಸ್ಯರಿಗೆ ಹಲುಗಿರಿದು ವಿರಕ್ತನೆನಿಸಿಕೊಂಬ
ಯುಕ್ತಿಹೀನರ ಕಂಡಡೆ ಎನ್ನ ಮನ ನಾಚಿತ್ತು
ಸಿಮ್ಮಲಿಗೆಯ ಚೆನ್ನರಾಮಾ. ॥ ೧೧೭ ॥

೬೬೬

ಮುನ್ನಿನ ಜನ್ಮದ ಭಕ್ತಿ ಹೋಯಿತ್ತಾಗಿ ಬಾರದು.
ಇನ್ನಹ ಜನ್ಮದ ಭಕ್ತಿ ಇಲ್ಲವಾಗಿ ಅದು ಬಾರದು.
ಇಂತೆರಡಿಲ್ಲಾಗಿ ಬೋಧಿಸಲಿಲ್ಲ.
ಈಗಲಿಷ್ಟಾಗಿಷ್ಟ ಮಿತ್ರ ಗುಣತ್ರಯ ಪ್ರಾರಬ್ಧಂಗಳು
ಭೋಗಿಸಿದಲ್ಲದೆ ಕೆಡವಾಗಿ ಭೃತ್ಯಾನುಭವ ಸಿದ್ಧವಯ್ಯ.
ತ್ಯಾಗ ಸಮೇತ ಮಾಡಿ ಸಕಲ ಭೇದವನೇನನೂ ಹೇಳಲರಿಯ
ನಿಜಗುಣಯೋಗಿ ತಾನಾಗಿ ಸಿಮ್ಮಲಿಗೆಯ ಚೆನ್ನರಾಮನಾಥ
ಇವೆಲ್ಲವ ಕನಸೆಂದು ಹುಸಿ ಮಾಡಿದ. ॥ ೧೧೮ ॥

೬೬೭

ಮೂದಲೆಯ ಮಾತು ಕೂದಲ ಕೀಲಿನಂತಲ್ಲದರಿಯಬಾರದು.
ಹೆಡತಲೆಯ ಮಾತು ಸಿಮ್ಮಲಿಗೆಯ ಚೆನ್ನರಾಮನೆಂಬ ಲಿಂಗದಲ್ಲಿ
ಲಿಂಗಾನುಭಾವಿಗಲ್ಲದರಿಯಬಾರದು. ॥ ೧೧೯ ॥

೬೬೮

ಯತಿಗಳ ವ್ರತಿಗಳ ಧೃತಿಗೆಡಿಸಿತ್ತು ಮಾಯೆ.
ಕಲಿಗಳ ಛಲಿಗಳ ಬಲುಹ ಮುರಿಯಿತ್ತು ಮಾಯೆ.
ಹರಿ ಬ್ರಹ್ಮ ರುದ್ರಾದಿಗಳೆಲ್ಲರ ತರಕಟ ಕಾಡಿತ್ತು ಮಾಯೆ.
ಹೋ! ಹೋ!! ಸಿಮ್ಮಲಿಗೆಯ ಚೆನ್ನರಾಮನೆಂಬ ಲಿಂಗದಲ್ಲಿ
ಮಾಯಾಮರ್ಕಟ ವಿಧಿಯೇ! ॥ ೧೨೦ ॥

೬೬೯

ಲೋಕಗತಿ ಬೇರೆ ತನ್ನ ಗತಿ ಬೇರೆ ನಿಜಗುಣನಿಗೆ,
ಜಡಾಜಡ ಕರ್ಮಭೇದದಿಂದ
ಲೋಕಕ್ಕೆ ಜ್ಞಾನಿ ಮರುಳು
ಜ್ಞಾನಿಗೆ ಲೋಕ ಮರುಳು.
ಈ ಭಾವಭೇದವ ತಿಳಿಯಲರಿದು ನೋಡಾ, ವಿಪರೀತಗತಿ.
ನೋಡುವಡೆ ನಿಜಗುಣ ತಾನೇ,
ಸಿಮ್ಮಲಿಗೆಯ ಚೆನ್ನರಾಮಾ. ॥ ೧೨೧ ॥

೬೭೦

ಲೋಕವ ತಾ ಹೇಸಿದ ಬಳಿಕ
ತನ್ನ ಲೋಕ ಹೇಸುವಂತಿರಬೇಕು.

ಲೋಕದ ಚಾರಿತ್ರ ಶೃಂಗಾರವ ತಾ ಹೇಸಿದ ಬಳಿಕ
ತನ್ನ ಚಾರಿತ್ರ ಶೃಂಗಾರವ ಲೋಕ ಕಂಡು ಹೇಸುವಂತಿರಬೇಕು.
ದೇಹಗುಣರಹಿತವಾದ ವಿರಕ್ತಿ
ಜ್ಞಾನಕ್ಕೆ ಇದೇ ಯುಕ್ತಿ.
ಈ ಯುಕ್ತಿಯ ತಿಳಿದಡೆ ಅದೇ ಮುಕ್ತಿ!
ಸಿಮ್ಮಲಿಗೆಯ ಚೆನ್ನರಾಮಾ. ॥ ೧೨೨ ॥

೬೭೧

ವಸುಧೆಯೊಳಗುಬ್ಬಸವಾದ ಪ್ರಾಣಿಗಳನೆಲ್ಲ
ವಶಕ್ಕೆ ತಂದು ಕಾವ ಗೋವ
ಹೇಮ ಹೇಮಿಗಳೆಲ್ಲರು ನಾಮ ಡಾವಣಿಗಳಾದರು;
ವಿಧಿಗೆ ಬಲಿಯನು ತೆತ್ತಾಡುತಿರ್ಪರು
ಸಿಮ್ಮಲಿಗೆಯ ಚೆನ್ನರಾಮನೆಂಬ ಲಿಂಗದ
ಸೀಮೆಯೊಳಗೆಲ್ಲರು. ॥ ೧೨೩ ॥

೬೭೨

ವ್ಯಾಸ ವಾಲ್ಮೀಕಿ ಶುಕನು
ಸುತಾಯ ದೇಹಭಾವವೆಂಬವರಿಗೆ ಜಾರಿಕೆ.
ಧಾರುಣಿಯ ಮೇಲಾದ ಪಾದವು ನಿಲ್ಲದು.
ಜಾರಿಕೆ ಅಳವುಗೆಟ್ಟಳವೆಯ ಆಳವೆಯು
ಸಿಮ್ಮಲಿಗೆಯ ಚೆನ್ನರಾಮನೆಂಬ ಶಬುದವಿತ್ತುಗಳಿಗೆ. ॥ ೧೨೪ ॥

೬೭೩

ವಿಧಿಯ ಮೀರಿ ಮೈದೋರುವ
ಮಂತ್ರ ತಂತ್ರ ಸಿದ್ಧರ ಕಾಣೆ.
ಕಾಲವಶ ಕರ್ಮವಶ ನಿಮ್ಮ ಮಂತ್ರ ತಂತ್ರ ಕಾವುದೆ?
ಸಿಮ್ಮಲಿಗೆಯ ಚೆನ್ನರಾಮಲಿಂಗದಲ್ಲಿ
ವಿಧಿ ಮುಟ್ಟುವನ್ನಕ್ಕ ವಿಜಯರಾಗಿ ಬದುಕಿರೊ. ॥ ೧೨೫ ॥

೬೭೪

ವಿಧಿ ನಿಷೇಧ ಜನನಿ ಜನಕ ಕುಲಗೋತ್ರ
ಜಾತಿ ಭೇದಾಭೇದ ಸ್ವರ್ಗನರಕಾದಿ ಭಯವೇನೂ ಇಲ್ಲ,
ಜಗವೇನೂ ಇಲ್ಲ.

"ಅತ್ರ ಪಿತಾ ಪಿತಾ ಭವತಿ ಮಾತಾ ಮಾತಾ
ಲೋಕಾ ಲೋಕಾ ದೇವೋದೇವ ವೇದೋವೇದ
ಬ್ರಾಹ್ಮಣೋ ಬ್ರಾಹ್ಮಣಶ್ಚಾಂಡಾಲೋ ಚಾಂಡಾಲಃ॥"
ಎಂದುದು ವೇದ.
ಅದು ತಾನೆ ತನ್ನಿಂದನ್ಯವಿಲ್ಲ.
ತೋರುವ ತೋರಿಕೆಯೆಲ್ಲ ಮಾಯೆಯೆಂದರಿದು
ಜ್ಞಾನಾನಂದ ಪರಿಪೂರ್ಣ ತಾನೆಂದರಿದು
ನೀನಾಗಿ ನಿಂದ ನಿಜಗುಣ ನೀನೇ,
ಸಿಮ್ಮಲಿಗೆಯ ಚೆನ್ನರಾಮಾ. ॥ ೧೨೬ ॥

೬೭೫

ವಿಷಮದಶ ಪವನವನು ವಶಕ್ಕೆ ತಂದು ನಿಲಿಸಿ
ಸುಷುಮ್ನ ಸುಸರದ ಊರ್ಧ್ವಪಥವನರಿದೆವೆಂದು
ರವಿಯ ನಾಲಗೆಯನಲಸ ಕೊನೆಯ ಲಂಬಿಕಾಸ್ಥಾನವಾಗಿ
ಶಶಿಯಮೃತವನುಂಡು ಸುಖಿಯಾದೆನೆಂಬರು.
ಇವರೆಲ್ಲರು ಉಪಾಧಿಯನರಿಯದೆ ಹೋದರು.
ಸಿಮ್ಮಲಿಗೆಯ ಚೆನ್ನರಾಮನೆಂಬ ಲಿಂಗದಲ್ಲಿ
ಬಯಲದ್ವೈತವ ನುಡಿವರು. ॥ ೧೨೭ ॥

೬೭೬

ವಿಷಯ ವಿರಕ್ತನಾಗಿ ದೃಢ ಭಕ್ತಿಯಿಂದ
ಸದ್ಗುರು ಚರಣಕ್ಕೆ ಶರಣಾಗತಿ ಹೊಕ್ಕು
ನಿರ್ಮಲನಾಗಿ ತತ್ಸನ್ನಿಧಿಯಲ್ಲಿ ನಿಂದು
ತನ್ನನರಿಯಲೆಂದು ಬಂದು,
ತಾನಾ ಅರಿವೆ ಮೈಯಾಗಿ,
ಅರಿಯೆ ನಾನೆನ್ನದೆಂಬ ಮರವೆಯನರಿವುದು.
ಸನ್ಮಾತ್ರ ತನು ತಾನಲ್ಲೆಂಬರಿವು ತಾನಲ್ಲವೆ?
ಚಿನ್ಮಯ ಚೋದ್ಯ ರೂಪನಲ್ಲವೆ?
ನಿರವಯ ನಿರ್ಗುಣ ತಾನೇತರಿಂದ
ನೋವವನಲ್ಲೆಂದವನಲಾನಂದಮಯ.
ಮಿಥ್ಯೆಯಿಂ ಕೆಡುವುದು ಸಕಲ ಜಗವು.
ಸತ್ಯವೆನಗೆ ಕೇಡಿಲ್ಲೆಂದರಿಯಲು ನಿತ್ಯಪದ.
ಸರ್ವಭಾವ ಹುಸಿ ತೋರದೆ

ನಿಂದ ನಿಲವದು ಪರಿಪೂರ್ಣಸತ್ಯ, ನಂಬು,
ನಿನ್ನ ನೀ ತಿಳಿದು ನೋಡೆ ನೀನೇ,
ಸಿಮ್ಮಲಿಗೆಯ ಚೆನ್ನರಾಮಾ. ॥ ೧೨೮ ॥

೬೭೭

ವೇದವಾವುದು, ವೇದ್ಯವಾವುದು?
ವೇದವಿಧಾನವಾವುದೆಂದರಿವವರು ನೀವು ಕೇಳಿರೆ!
ವೇದವೆಂಬುದು ಬರಿಯರಿವು.
ಮಹಾಲಿಂಗವನರಿದಾತನೆ ವೇದ್ಯನೆಂದು ಶಬ್ದಾದಿ ಸಕಲವಯ್ಯಾ.
ವೇದ ವೇದ್ಯರೂಪ ವೇದವಿದನು
ಸಿಮ್ಮಲಿಗೆಯ ಚೆನ್ನರಾಮಾ. ॥ ೧೨೯ ॥

೬೭೮

ಶಬ್ದಾದಿ ಸಕಲ ವಿಷಯಗುಣಂಗಳ ನೀ ರಾಗ ವಿರಾಗಕಾರಣವಾಗಿ
ಮನಸಾದಿ ಕರಣೇಂದ್ರಿಯಂಗಳೊಳಗಾದ ಜೀವನ
ನಿವಾರಣೆಯ ಮಾಡಯ್ಯಾ.
'ನಿಜಾನಂದಾನುಭಾವಸ್ಯ ಸರ್ವಸಾಕ್ಷಿಯಾನ್ ಯೋಗನಾಂ'
ಎಂದುದಾಗಿ,
ಇಂತು ಶಬ್ದಾದಿ ಸಕಲ ವಿಷಯಂಗಳೊಳಗಾದ
ಜೀವನ ಮನವೆ ಸರ್ವಸಾಕ್ಷಿಯಾಗಿ ನಿಲ್ಲಬಲ್ಲಾತನೆ
ಸಿಮ್ಮಲಿಗೆಯ ಚೆನ್ನರಾಮ ತಾನೆ. ॥ ೧೩೦ ॥

೬೭೯

ಶಾಂತಸುಖವಿರಲೊಲ್ಲದೆ ನೀನೇಕೆ ಭ್ರಮಿಸುವೆಯೊ?
ದೇಹಧರ್ಮ ಆರ ವಶವೂ ಅಲ್ಲ.
ದೇಹದಿಚ್ಛೆ ಪ್ರಾರಬ್ಧ ಉಂಡಲ್ಲದೆ ಹೋಗದು.
ತನುಧರ್ಮವಿಲ್ಲದಚಲ ನೀನೇ,
ಸಿಮ್ಮಲಿಗೆಯ ಚೆನ್ನರಾಮಾ. ॥ ೧೩೧ ॥

೬೮೦

ಶಿವಗಣಂಗಳ ಬರವ ಕಂಡು ಕೈಮುಗಿದು ಅಂಜಲೇಬೇಕು.
ಶರಣೆನ್ನಲೊಲ್ಲದೀ ಮನವು;
ಆಗಿನ ಭಕ್ತಿಯನರಿಯದು,

ಬಾಗಿ ಶರಣೆನ್ನಲೊಲ್ಲದೀ ಮನವು.
ಆಳ್ದನೆಂದು ನಂಬಿಯೂ ನಂಬದಾಗಿ,
ಸಿಮ್ಮಲಿಗೆಯ ಚೆನ್ನರಾಮನೆನ್ನ ಕೇಡ ನೋಡಿ
ನಗುತ್ತೈದಾನೆ. || ೧೩೨ ||

೬೮೧

ಶಿರವ ಸೀರೆಯ ಕರವ ಕಂಗಳ ಶಿಶುವನಿಕ್ಕಿಯೆರದರು.
ಭಾಷೆ ಬಳಸಿ ಪಂಗು ಪಳಸಿಹೋಯಿತ್ತು.
ಸಿಮ್ಮಲಿಗೆಯ ಚೆನ್ನರಾಮನೆಂಬ ಲಿಂಗಜಂಗಮಕ್ಕೆ
ಕೊಟ್ಟಿಹೆನೆಂಬ ಶಬ್ದ ಅಳಿವರುಳಿಯಿತು. || ೧೩೩ ||

೬೮೨

ಸಕಲ ಸಂಸಾರದ ಆಸುರತೆಯನರಿದು, ಅಹಂಮಮತೆಯನಳಿದು,
ಲೇಸಿದು ಹೊಲ್ಲೆಹವಿದು, ತತ್ವವಿದು ಅತತ್ವವಿದೆಂದರಿದು
ಏನುವನು ಸಂಪಾದಿಸದೆ ನಿಜಸುಖ ನೀನೇ
ನಿಜಗುಣರೂಪಾಗಿರ್ದ ಸುಖಮುಖದ ಪಿಕದಂತೆ
ಮೌನಿಯಾಗಿ ನಿಂದ ನಿಲುವು ನೀನೆ ನಿಜಗುಣ,
ಸಿಮ್ಮಲಿಗೆಯ ಚೆನ್ನರಾಮಾ. || ೧೩೪ ||

೬೮೩

ಸಂಕಲ್ಪವೆಂಬ ಸಂಕಲೆ ಹರಿಯಿತ್ತಲ್ಲಾ!
ಕಾಮವೆಂಬ ಕಂಭವ ಕಿತ್ತೀಡಾಡಿತ್ತಲ್ಲಾ!
ಮಾಯವೆಂಬ ಮಾವತಿಗನ ಮೀರಿತ್ತು
ಆಸೆಯೆಂಬ ಅಂಕುಶಕ್ಕೆ ನಿಲ್ಲದು.
ಮಾಯಾಪಾಶವೆಂಬ ಪಾಯದಳ ಅಂಜಿ ಓಡಿತ್ತು.
ಮದಗಜವೆಂಬ ಆನೆ ಅಳಿದ ಬಳಿಕ,
ಸಿಮ್ಮಲಿಗೆಯ ಚೆನ್ನರಾಮನೆಂಬ ಲಿಂಗದಲ್ಲಿ
ಆನೆ ಆನೆ ಎಂಬುದೇನೂ ಇಲ್ಲದೆ ಹೋಯಿತ್ತು. || ೧೩೫ ||

೬೮೪

ಸತ್ಯ ಜ್ಞಾನ ಪರಿಪೂರ್ಣಾನಂದ ಪರಮವಿದ್ಯೆಯದೇಕೊ?
ಜಡ ದುಃಖ ದೇಶಿಕ ಕಲ್ಪಿತ ಅಕಲ್ಪಿತ
ಅಲ್ಲಿ ಕಲ್ಪಿತ ಪರಮನ ಕಟ್ಟಿದ ನೋಡಾ,

ಪರಮ ಕಲ್ಪಿತನ ಕಟ್ಟಿದನೊ ಹೇಳಯ್ಯಾ.
ಅಲ್ಲಿ ಬಂಧವಾರಿಗೆ ಮೋಕ್ಷವಾರಿಗೆ ಹೇಳಯ್ಯಾ.
ನಿನ್ನಿಂದ ನಿನ್ನ ತಿಳಿದು ನೋಡು.
ತಥ್ಯಮಿಥ್ಯಗಳೊಂದನೊಂದು ಕಟ್ಟಲರಿದವೆ ಹೇಳು?
ಹುಸಿ ತೋರಿಕೆ ದಿಟತಾನೆ?
ಸಿಮ್ಮಲಿಗೆಯ ಚೆನ್ನರಾಮಾ. ॥ ೧೩೬ ॥

೬೮೫

ಸನ್ಮಣಿ ಎಂತು ಪೊದ್ದಿದಂತೆ ತೋರುತಿಪ್ಪುದು?
ನಿಜ ತನ್ನಂತೆ,
ಅನುಭವಿ ಅವರವರಂತೆ ತೋರುವ.
ತಾ ತನ್ನಂತೆ ಮತ್ತಾರಂತೆಯೂ ಆಗ.
ಸನ್ಮಾತ್ರ ಚಿನ್ಮಯ ಪರಮಾನಂದ
ತಿಳಿದು ನೋಡುವಡೆ ನಿಜಗುಣ ತಾನೇ,
ಸಿಮ್ಮಲಿಗೆಯ ಚೆನ್ನರಾಮಾ. ॥ ೧೩೭ ॥

೬೮೬

'ಸರ್ವಂ ಖಲ್ವಿದಂ ಬ್ರಹ್ಮ' ಎಂದುದು ವೇದ.
'ತ್ವಮೇವ ಬ್ರಹ್ಮ ನಾನ್ಯಾತೋಸ್ಮಿನ್' ಎಂದುದು ವೇದ.
'ನಾನ್ಯಾತೋಸ್ಮಿನ್ ದೃಷ್ಟಾ' ಎಂದುದು ವೇದ.
'ನಾನ್ಯತ್ ಕಿಂಚಿದ್ ವಿದ್ಯತೇ' ಎಂದುದು ವೇದ.
'ನ ಕರ್ಮಣಾ ಲಿಪ್ಯತೇ' ಎಂದುದು ವೇದ.
ತನ್ನಿಂದನ್ಯವೇನೂ ಇಲ್ಲವೆಂದರಿದರಿವು
ಸಚ್ಚಿದಾನಂದಸ್ವರೂಪಮಪ್ಪ ನಿಜವು ನೀನೆ,
ಸಿಮ್ಮಲಿಗೆಯ ಚೆನ್ನರಾಮಾ. ॥ ೧೩೮ ॥

೬೮೭

ಸಂಸಾರವೆಂಬ ಅತ್ತೆಗೆ ನಿರ್ಬುದ್ಧಿ ಸೊಸೆಯೊಬ್ಬಳು,
ಅಟ್ಟುಂಡೆಹೆನೆಂದು ಒಲೆಯ ಬೂದಿಯ ತೋಡುವನ್ನಕ್ಕ
ಒಳಗೊಂದು ಕಿಡಿಯಿದ್ದು ಕೈಬೆಂದು
ಮರಗುವಂತಾಯಿತ್ತಲ್ಲಾ ಎನಗೆ!
ನಿಸ್ಸಂಸಾರಿಯ ಒಡಲೊಲೆಯ ಬೂದಿಯ ಕೆಣಕುವನ್ನಕ್ಕ
ಒಳಗೊಂದು ಸುಜ್ಞಾನವೆಂಬ ಕಿಡಿಯಿದ್ದು

ಎನ್ನ ಮನದ ಕೈ ಬೆಂದು ಹೃದಯ ಮರಗುತ್ತಿದ್ದೇನೆ.
ಇದಕ್ಕೆ ಶೀತಾಳಮಂತ್ರವುಂಟೆ ಅಯ್ಯಾ!
ಎನ್ನ ಸಿಮ್ಮಲಿಗೆಯ ಚೆನ್ನರಾಮಲಿಂಗದಲ್ಲಿ
ನಿಜಗುಣ ಶರಣೆಂಬುದೆ ಇದಕ್ಕೆ ಶೀತಾಳಮಂತ್ರ. ॥ ೧೩೯ ॥

೬೮೮

ಸಂಸಾರ ಮಾಯೆ ಅತಿದುಃಖ ಪೊಲ್ಲೆಂದು,
ಆತ್ಮಜ್ಞಾನದಿಂದ ನಿತ್ಯಸುಖಿಯಪ್ಪುದೆ ಲೇಸೆಂದು,
ಅರಿದವಂಗಾದ ಪೊಲ್ಲೆಹವೇನು?
ಇದನೊಲ್ಲದವಂಗಾದ ಲೇಸೇನು ಹೇಳಾ!
ಈ ದೇಹದಲುಣಬೇಡಿದ ಇಷ್ಟ ಕರ್ಮ ಇದಾವ ದೇಹಿಗೆ
ಮಾದುದೊ?
ನಿನ್ನ ನೀನೇ ಭಾವಿಸಿ ತಿಳಿದು ನೋಡಾ,
ಸಿಮ್ಮಲಿಗೆಯ ಚೆನ್ನರಾಮನಿಕ್ಕಿದ
ಸಂಸಾರದ ತೊಡಕು ಬಿಡಿಸಬಾರದು! ॥ ೧೪೦ ॥

೬೮೯

ಸಂಸಾರವೆಂಬ ಹೇರಡವಿಯ ಅಂಧಕಾರದ,
ಜನ್ಮಪ್ರಥದ ಆಧಿವ್ಯಾದಿಗಳೆಂಬ ಗಿರಿದುರ್ಗ ಜಲದುರ್ಗಂಗಳ,
ಧನ ವನಿತೆ ವಿಷಯ ಮೃಗತೃಷ್ಣೆಯ ಬಳಿವಿಡಿದ
ರಾಗದ್ವೇಷದ ಕೊಳ್ಳೆವರಿಲುಗಳ,
ಖಗಮೃಗದ ಭಯದ,
ತಾಪತ್ರಯದ ಕಾಳುಗಿಚ್ಚಿನಲ್ಲಿ ಬೇವ ನರಗುರಿಗಳಾದ
ಸಾವ ಕೆಡುವ ಅಹಂಮಮತೆಯ ಪೊತ್ತು ನಡೆವ ಜೀವರಿಗೆ
ಭವಬಂಧನ ಹರಿದು ಗುರುಪದವಪ್ಪುದು
ನಿಜಗುಣನ ಶ್ರೀಪದವ ಶರಣುಗತಿ ಒಕ್ಕಡೆ, ನಿತ್ಯ ಸುಖಪೂರಿತ
ಸಿಮ್ಮಲಿಗೆಯ ಚೆನ್ನರಾಮ ತಾನಹ ನೆರೆ ನಂಬಿದಡೆ.॥ ೧೪೧ ॥

೬೯೦

ಸಮವೇದ್ಯನು ಮನವೇನ ಬಯಸಿತ್ತು?
ಆ ಬಯಕೆಯನೇನುವನು ಮನಕ್ಕೆ ಕೊಡದೆ
ಅರಿವು ತಾನಾಗಿ ನಿಮ್ಮ ಸಂದೇಹವಳಿದು ನಿಂದ

ಪರಮಾನಂದರೂಪು, ಸಕಲ ವಿಷಯಂಗಳ ಒಡಗೂಡದಾತ
ಸಿಮ್ಮಲಿಗೆಯ ಚೆನ್ನರಾಮಾ. ॥ ೧೪೨ ॥

೬೯೧

ಸಮುದ್ರದಿಂದಾದ ತೆರೆಗಳು ಸಮುದ್ರದೊಳಗಡಗುತ್ತ
ಆ ಸಮುದ್ರದೊಳಗೇ ಇಹವು.
ತೆರೆಗಳು ಬೇರೊಂದುದಕವೆ?
ನಿಮ್ಮಿಂದಲಾದ ಜಗವು ನಿಮ್ಮಲ್ಲಿಯೆ ಇದ್ದು
ನಿಮ್ಮಲ್ಲಿಯೆ ಅಡಗುವುದು.
ಬೇರೆ ಬೇರೆ ಕುಲವುಂಟೆ ಈ ಜಗಕ್ಕೆ?
ಅದೆಂತೆಂದಡೆ:
ಬ್ರಹ್ಮಬೀಜಂ ಜಗತ್‌ಸರ್ವಂ ಬ್ರಹ್ಮಣ್ಯೈವ ವಿವರ್ಧತೇ।
ಬ್ರಹ್ಮಣ್ಯೇವ ಲಯಂ ಯಾತಿ ಜಾತಿಭೇದಃ ಕಥಂ ಭವೇತ್॥
ಇಂತೆಂದುದಾಗಿ,
ಕುಲವೂ ಇಲ್ಲ ಛಲವೂ ಇಲ್ಲ.
ಮರೆಯ ನುಡಿಯನೊಪ್ಪುವನೆ?
ಸಿಮ್ಮಲಿಗೆಯ ಚೆನ್ನರಾಮ, ಬಿಡು ಜಡನೇ. ॥ ೧೪೩ ॥

೬೯೨

ಸಾಕಾರಸ್ವರೂಪಿ ಸಂಗನಬಸವಣ್ಣ ನೋಡಾ.
ನಿರಾಕಾರಸ್ವರೂಪಿ ಚನ್ನಬಸವಣ್ಣ ನೋಡಾ.
ನಿರ್ವಯಲ ಪರವಸ್ತುಸ್ವರೂಪಿ ಪ್ರಭುದೇವರು ನೋಡಾ.
ಇಂತೀ ಮೂವರ ಕಾರುಣ್ಯಪ್ರಸಾದವ ಕೊಂಡು
ಮೀರಿದ ಘನವಾದೆನು ಸಿಮ್ಮಲಿಗೆಯ
ಚೆನ್ನರಾಮನಲ್ಲಿ. ॥ ೧೪೪ ॥

೬೯೩

ಸಾವು ತಡವಲ್ಲ, ನರಕ ದೂರವಲ್ಲ,
ಕೆಮ್ಮನೆ ಕೆಡಬೇಡ.
ವಿಷಯವ ಬಿಡು, ಗುರುಭಕ್ತಿಯ ನಂಬು ಸುಖಿಯಪ್ಪೆ,
ಸಿಮ್ಮಲಿಗೆಯ ಚೆನ್ನರಾಮಾ. ॥ ೧೪೫ ॥

೬೯೪

ಸ್ಥಾಣು ಚೋರ ರಜ್ಜು ಸರ್ಪ ಮೃಗತೃಷ್ಣೆ ಕನಸು,
ಇಂದ್ರಜಾಲ ಗಂಧರ್ವನಗರವೆಂಬ ಭ್ರಮೆಗಳ
ಹುಸಿಯೆಂದರಿದವನು ಪ್ರಪಂಚ ಹೇಳಲರಿಯದಿರ್ದಡೆ
ದಿಟವಪ್ಪುದೆ?
ವಿಚಾರಿಸಿ ನೋಡಲು ಜಗ ಹುಸಿ, ದಿಟ ತಾನೆಂದರಿದಾತನ ಅರಿವು
ಕೆಡಲರಿವುದೆ ಹೇಳಾ, ಸಿಮ್ಮಲಿಗೆಯ ಚೆನ್ನರಾಮಾ. ॥೧೪೬॥

೬೯೫

ಸುರರಿಗೆ ನಿರಂತರ ಜಾಗ್ರ,
ಮರುಳುಗಳಿಗೆ ನಿರಂತರ ಸ್ವಪ್ನ,
ಅಚರಜೀವಿಗಳಿಗೆ ನಿರಂತರ ಸುಷುಪ್ತಿ,
ವರ ಯೋಗಿಗಳಿಗೆ ನಿರಂತರ ತುರ್ಯ.
ಸ್ಥೂಲ ಸೂಕ್ಷ್ಮ ಕಾರಣವ ಪ್ರಾಪ್ತಿಸುವ ತನು
ತನ್ನ ಮಾಯಾತನುವಾಗಿ ಮಾಯೆ ತೋರುತ್ತಿಪ್ಪುದು.
ಸಕಲ ತನುರಹಿತ ನೀನೆಂದು
ಸಕಲ ಮಾಯೆ ಹುಸಿಯೆಂದು
ತನ್ನ ತನ್ನಿಂದರಿದ ಪರಮಾರೂಢ ನೀನೇ,
ಸಿಮ್ಮಲಿಗೆಯ ಚೆನ್ನರಾಮಾ. ॥ ೧೪೭ ॥

೬೯೬

ಹತ್ತರ ಹಸುಗೆಯಲಜ್ಞಾದ ಪರಿಗಳ
ನೀವೆತ್ತ ಬಲ್ಲಿರೊ!
ಗಣಿತದ ಗುಣಿತವ ನಾಲ್ಕು ಬಂದಡೆ ಖಳ
ಐದು ಬಂದಡೆ ನಂದಿ, ಆರಾದಡೆ ಜಾಗರ,
ಏಳರಲ್ಲಿ ತಿಗ,
ಇದು ಜಾಣರೆಂಬವರಿಗೆ ಕನ್ನಡ,
ಸಿಮ್ಮಲಿಗೆಯ ಚೆನ್ನರಾಮನೆಂಬ ಲಿಂಗದಲ್ಲಿ
ಜೂಜುಕೊಳ್ಳದು. ॥ ೧೪೮ ॥

೬೯೭

ಹಾವ ಹೊತ್ತುಕೊಂಡು ಹೋಗುತ್ತ ಹಾವಾಡಿಗ
ನಡೆಯಲ್ಲಿ ಹಾವ ಕಂಡು ಮರಳುವ
ಗಾವಿಲತನವ ನೋಡಾ!
ತನ್ನಿಂದನ್ಯವೆಂದಡೆ ಭಿನ್ನ ವ್ಯತಿಕರವಾಯಿತ್ತು.
ತನ್ನ ಪರಮಾರ್ಥ ತನ್ನಲ್ಲಿ
ಸಿಮ್ಮಲಿಗೆಯ ಚೆನ್ನರಾಮನೆಂಬ ಲಿಂಗ
ಮಾಯಾಮರ್ಕಟ, ಜಡವೆ! ॥ ೧೪೯ ॥

೬೯೮

ಹಿರಿದಪ್ಪ ಮಾಯೆಯನೆಂತು ಕೆಡಿಸುವೆನೆಂದು
ಬೆಂಬೀಳದಿರು ಮರುಳೆ!
ಮಾಯೆ ದಿಟಕ್ಕಿಲ್ಲ; ಇಲ್ಲದುದನೆಂತು ಕೆಡಿಸುವಿರೊ?
ತನ್ನನರಿದಡೆ ಸಾಕು.
ಅರಿದೆನರಿಯೆನೆಂಬುದು ಮಾಯೆ.
ಈ ಮಾಯೆ ನಿನಗಿಲ್ಲ, ಚಿನ್ಮಯ ನೀನೇ,
ಸಿಮ್ಮಲಿಗೆಯ ಚೆನ್ನರಾಮಾ. ॥ ೧೫೦ ॥

೬೯೯

ಹುಸಿಯ ವ್ಯಾಧನು ನಿಜದಿಂದ ಕ್ಷತ್ರಿಯನೆಂದು ಬೋಧಿಸಲು
ಬೋಧೆ ದೊರಕೊಂಬುವಲ್ಲದೆ
ಎಲೆ ಕ್ಷತ್ರಿಯ ನೀ ವ್ಯಾಧನೆಂದು ಬೋಧಿಸಲು
ಬೋಧೆ ದೊರಕೊಂಬುದೆ ಹೇಳಾ!
ಜೀವ ಭೋಕ್ತೃ ನಿಜ ಪರಮನೆಂದೆನ್ನದೆ
ಪರಮನೆ ಹುಸಿ ಜೀವನೆ ದಿಟವೆಂದು ಬೋಧಿಸಲು
ಬೋಧೆ ದೊರಕೊಳ್ಳದು ನೋಡಾ!
ಜ್ಞಾತೃ ಜ್ಞಾನ ಜ್ಞೇಯಾದಿ ಜ್ಞಪ್ತಿ ಸುಖ ಪರಿಪೂರ್ಣನಲ್ಲ
"ಕೋಯಮಾತ್ಮಾನ್ಯತೋಸ್ತಿ ಯಸ್ಮಿನ್ನೇಕಮೇವಾ
ದ್ವಿತೀಯಂ ತತ್ವಮಸಿ"
ಎಂದುದು ವೇದ,
ಸಿಮ್ಮಲಿಗೆಯ ಚೆನ್ನರಾಮಾ. ॥ ೧೫೧ ॥

೨೦೦

ಹುಲ್ಲ ಮನುಷ್ಯನ ಕಂಡು ಹುಲ್ಲೆ ತಾ ಬೆದರುವಂತೆ
ಇಲ್ಲದ ಶಂಕೆಯನುಂಟೆಂಬನ್ನಕ್ಕ
ಅದಲ್ಲಿಯೇ ರೂಪಾಯಿತ್ತು.
ಹೇಡಿಗಳನೇಡಿಸಿ ಕಾಡಿತ್ತು
ಸಿಮ್ಮಲಿಗೆಯ ಚೆನ್ನರಾಮನೆಂಬ ಭಾವದ ಗಸಣಿ. ॥ ೧೫೨ ॥

೨೦೧

ಹೆಡತಲೆಯ ಮಾತ ಬಲ್ಲಡೆ ಪ್ರಸಾದಿ.
ನಡುನೆತ್ತಿಯ ಮರ್ಮವನರಿದಡೆ ಪ್ರಸಾದಿ.
ಕಂಗಳ ಮೊಲೆ ಕೂರ್ಮನ ಆಪ್ಯಾಯನವ ಬಲ್ಲಡೆ ಪ್ರಸಾದಿ.
ಅಂಗೇಂದ್ರಿಯವನೊಂದು ಮುಖವ ಮಾಡಬಲ್ಲಡೆ ಪ್ರಸಾದಿ.
ನಿರಂಜನ ಜಂಗಮನನಾರೋಗಿಸಬಲ್ಲಡೆ ಪ್ರಸಾದಿ.
ನಿರಾಲಂಬ ಪ್ರಣವಮನುಚ್ಚರಿಸಬಲ್ಲಡೆ ಪ್ರಸಾದಿ.
ಹ್ರೀಂ ಶಕ್ತ್ಯಾರೂಢನಾದ ಚರಪಾದಾಂಬುವ
ಹ್ಸೌಂಶಕ್ತಿ ಬದ್ಧನಾದ ಲಿಂಗಕ್ಕೆ ಶಾಂತಿಯ ಮಾಡಬಲ್ಲಡೆ ಪ್ರಸಾದಿ.
ಆಧಾರ ಬ್ರಹ್ಮದೊಳಗೆ ಅಡಗಿದ ಅಕ್ಷರವ ನೋಡಿ ಓದಬಲ್ಲಡೆ ಪ್ರಸಾದಿ.
ಭಾವವ ಕ್ರೀಯಲ್ಲಿ ತಂದು ಭಾವದಲ್ಲಿ ನೆಲೆಗೊಳಿಸಬಲ್ಲಡೆ ಪ್ರಸಾದಿ.
ಒಳಹೊರಗೆಂಬ ಭಾವಗೆಟ್ಟು ಸುಳುಹಿನ ಪ್ರಸಾದದ
ಕಳೆವೆಳಗ ನುಂಗಿದ ಲಿಂಗಕ್ಕೆ ಅರ್ಪಿಸಿ ಸುಖಿಸಬಲ್ಲಡೆ ಪ್ರಸಾದಿ.
ಸ್ಥಾವರವ ಜಂಗಮದೊಳಡಗಿಸಿ
ಜಂಗಮವ ಸ್ಥಾವರವ ಮಾಡಬಲ್ಲಡೆ ಪ್ರಸಾದಿ.
ಇದು ಕಾರಣ ನಿಜಗುಣನೆಂಬ ಮಹಾಜಂಗಮ
ನಿಜಾನಂದವೆಂಬ ಒಕ್ಕುಮಿಕ್ಕ ಘನಪ್ರಸಾದವ ಕೊಟ್ಟನಾಗಿ
ಸಿಮ್ಮಲಿಗೆಯ ಚೆನ್ನರಾಮನೆಂಬ ಲಿಂಗವೆನ್ನ
ಹಿಂಗದಾಲಿಂಗಿಸಿದನಾಗಿ ಪ್ರಸಾದಿಯಾದೆ. ॥ ೧೫೩ ॥

೨೦೨

ಹೆರದ ಮುನ್ನವೆ ಹುಟ್ಟಿ
ಹೆತ್ತಲ್ಲಿಯೆ ಸತ್ತುದ ನೋಡಾ!
ಅದು ಮಾಯದ ಕೃತಕದ ಗರ್ಭದ ನೆಳಲಿನ ಸುಳುಹು.

ಆದಲ್ಲಿ ಆಯಿತ್ತು, ಹೋದಲ್ಲಿ ಹೋಯಿತ್ತು.
ಸಿಮ್ಮಲಿಗೆಯ ಚೆನ್ನರಾಮನೆಂಬ ಲಿಂಗೈಕ್ಯವು. ॥ ೧೫೪ ॥

೭೦೩

ಹೇಳಿದ್ದ ಕೇಳಲೊಂದು ಶಬುದವಾಯಿತ್ತಯ್ಯ.
ತೋರಿದ್ದ ಹಿಡಿಯಲೊಂದು ರೂಪಾಯಿತ್ತಯ್ಯ.
ನೆಚ್ಚಿಸ ಮಚ್ಚಿಕೆ ಅದು ನಿಶ್ಚಿಂತವೆಂತಪ್ಪುದು?
ಸಿಮ್ಮಲಿಗೆಯ ಚೆನ್ನರಾಮಲಿಂಗನೆಂಬನ್ನಕ್ಕ. ॥ ೧೫೫ ॥

೭೦೪

ಹೊತ್ತುವ ಘುಸಿಮಾಡಲರಿಯದೆ ದುಃಖ ದುರ್ಮತಿ ಬಿಡದು.
ಮತ್ತೆ ಸಂಸಾರಿಯಲರಸಲದೇನುಂಟು?
ಜೀವನವೇನವನ ಜೀವನವೇನು?
ಪ್ರಾರಬ್ಧಕ್ಕೆ ಪರಿಯಾಯವ ಮಾಡಿ
ಬಿಟ್ಟಿಯ ನಡೆವನ ಜೀವನವೇನವನ ಜೀವನವೇನು?
ಆಗಮ ನಿಗಮವನರಿಯದೆ ನಿರ್ಬುದ್ಧಿ
ಸಿಮ್ಮಲಿಗೆಯ ಚೆನ್ನರಾಮನೆಂಬ ಲಿಂಗದ ಬಾಧೆಗೆ
ಭಾಜನವಾದವನ ಜೀವನವೇನು? ॥ ೧೫೬ ॥

೭೦೫

ಪಂದಿ ಹೈನವಲ್ಲ! ಸಂಸಾರಿ ಜಂಗಮವಲ್ಲ
ಸಂಸಾರಿ ಜ್ಞಾನಿಗೂ ನಿರಾಭಾರಿ ಹೆಡ್ಡತನಕ್ಕೂ ಸರಿಯೆನ್ನಬಹುದೆ?
ಸಿಮ್ಮಲಿಗೆಯ ಚೆನ್ನರಾಮಾ! ॥ ೧೫೭ ॥

## ಜಗಳಗಂಟ ಕಾಮಣ್ಣನ ವಚನ

೨೦೬

ಅಯ್ಯಾ, ತನ್ನ ತಾನರಿದಡೆ ತನ್ನರುಹೆ ಗುರು;
ಆ ಅರಿದ ನಿಶ್ಚಯವೆ ಲಿಂಗ;
ಆ ಅರುಹಿನ ನಿಶ್ಚಯ ನಿಷ್ಪತ್ತಿಯೆ ಜಂಗಮ;
ಇಂತೀ ತ್ರಿವಿಧವು ಒಂದಾದಡೆ ಕಾಮೇಶ್ವರಲಿಂಗವು ತಾನೆ!
ಇಂತು ಪ್ರಮಥರ ಸಚ್ಚಿದಾನಂದಲೀಲೆಯ
ಅರಿದಾನಂದಿಸ! ಸಂಗನ ಬಸವೇಶ್ವರ! ॥ ೧ ॥

೨೦೭

ಒಂದಲ್ಲ ಪತ್ತಲ್ಲ ನೂರಲ್ಲ ಸಹಸ್ರವಲ್ಲ
ಲಕ್ಷವಲ್ಲ ಕೋಟಿಯಲ್ಲ
ನಾನಾ ಯೋನಿಯಲ್ಲಿ ಬಂದುದಕ್ಕೆ ಕಡೆಯಿಲ್ಲ.
ಬಂದ ಬರವ ನಿಂದ ನಿಲವ ತಿಳಿದಡೆ,
ತಂದೆ ಕಾಮೇಶ್ವರ ಬೇರಿಲ್ಲಾ. ॥ ೨ ॥

೨೦೮

ಸಾವ ದೇವರನೊಲ್ಲೆ ಭಾವವಳಿಯದ ಭಕ್ತಿಯನೊಲ್ಲೆ,
ಆವಾವ ಪರಿಯಲ್ಲು ವಿಧಿಯನೊಲ್ಲೆ,
ಕಾಮೇಶ್ವರನೆಂಬುದನೊಂದನೆ ಬಲ್ಲೆ. ॥ ೩ ॥

೨೦೯

ಕಾಮ ನಿಃಕಾಮವಾದವರ ತೋರಾ।
ನೇಮವಳಿದು ನಿತ್ಯರಾದವರನಲ್ಲದೊಲ್ಲೆ,
ಅಂಗದ ಗುಣಾವಳಿಯ ಲಿಂಗದಲ್ಲಿದ್ದವರನಲ್ಲದೊಲ್ಲೆ,
ಕಾಮೇಶ್ವರಾ. ॥ ೪ ॥

## ಜೇಡರ ದಾಸಿಮಯ್ಯನ ವಚನ

೭೧೦

ಅಂಗಲಿಂಗದ ಒಳಗೆ ಲಿಂಗಕಂಗಳು ಬೆಳಗು,
ಹಿಂಗಲಾವುದೆ ಹೇಳು ಅಜ್ಞಾನವ!
ಸಂಗಸುಖಮಥನದ ಅಸಂಗದಿಂದದನರಿದು
ಹಿಂಗಲಿಕೆ ಹೆಸರೇನು? ರಾಮನಾಥ. ॥ ೧ ॥

೭೧೧

ಅಂತರಂಗ ಬಹಿರಂಗದಲ್ಲಿ
ಸರ್ವಾಚಾರ ಸಂಪತ್ತಿನ ಆಚರಣೆಯನರಿಯದ
ಮೂಢಾತ್ಮಂಗೆ ಲಿಂಗಾಂಗ ಸಮರಸವ ಹೇಳಿ
ಸರ್ವಾಂಗ ಸ್ನಾನಧೂಳನ ನಾಲ್ವತ್ತೆಂಟು ಸ್ಥಾನಂಗಳಲ್ಲಿ ಧಾರಣ
ಕ್ರಿಯಾಭಸಿತವ ಧರಿಸುವ ನಿರ್ಣಯವ ಹೇಳಿ
ಅಂತರಂಗದ ಜಪವ ಹೇಳುವನೊಬ್ಬ
ಆಚಾರದ್ರೋಹಿ ನೋಡಾ, ರಾಮನಾಥ. ॥ ೨ ॥

೭೧೨

ಅಂಬಲಿ ಅಳ್ಳೆಯಾಗಿ, ತುಂಬೆಯ ಮೇಲೋಗರವಾಗಿ,
ಉಂಬ ಸದುಭಕ್ತನ ಮನೆಯಾಗಿ,
ಲೋಕದ ಡಂಭಕರ ಮನೆ ಬೇಡ, ರಾಮನಾಥ ॥ ೩ ॥

೭೧೩

ಅಗ್ನಿ ಸುಡಲಲ್ಲದೆ ಸುಳಿಯಲರಿಯದು
ವಾಯು ಸುಳಿವುದಲ್ಲದೆ ಸುಡಲರಿಯದು

ಆ ಅಗ್ನಿ ವಾಯುವ ಕೂಡಿದಲ್ಲದೆ ಅಡಿಯಿಡಲರಿಯದು
ಈ ಪರಿಯಂತೆ ನರರರಿವರೆ ಕ್ರಿಯಾಜ್ಞಾನಭೇದವ?
ರಾಮನಾಥ ॥ ೪ ॥

೭೧೪

ಅಚ್ಚ ಶಿವೈಕ್ಯಂಗೆ ಹೊತ್ತಾರೆ ಅಮವಾಸೆ;
ಮಟ್ಟ ಮಧ್ಯಾಹ್ನ ಸಂಕ್ರಾಂತಿ;
ಮತ್ತೆ ಅಸ್ತಮಾನ ಪೌರ್ಣಮಿ ಹುಣ್ಣಿಮೆ;
ಭಕ್ತನ ಮನೆಯ ಅಂಗಳವೆ ವಾರಣಾಸಿ ಕಾಣಾ!
ರಾಮನಾಥ. ॥ ೫ ॥

೭೧೫

ಅಡಗ ತಿಂಬರು; ಕಣಕದ ಅಡಿಗೆಯಿರಲಿಕೆ.
ಕುಡಿವರು ಸುರೆಯ! ಹಾಲಿರಲಿಕೆ.
ಹಡಮುಂಬ ವೇಶಿಯನೊಲ್ಲದೆ ಪೆರರ ಮಡದಿಗಳುಪುವ
ಸತ್ತ ನಾಯ ತಿಂಬ ಹಡ್ಡಿಗರನೇನೆಂಬೆನೈ!
ರಾಮನಾಥ. ॥ ೬ ॥

೭೧೬

ಅಡಗಿನೊಳಗಣ ಹಾಲು ಅಡಗಿಪ್ಪ ಭೇದವನು
ಬೆಡಗಪ್ಪ ತುಪ್ಪದ ಕಂಪಿನ ಪರಿಯಂತೆ.
ಎಲೆ ಮೃಡನೆ! ನೀನು ಪ್ರಾಣ ಪ್ರಕೃತಿಗಳೊಳಗೆ
ಅಡಗಿಹ ಭೇದವ ಲೋಕದ ಜಡರೆತ್ತ ಬಲ್ಲರೈ!
ರಾಮನಾಥ. ॥ ೭ ॥

೭೧೭

ಅಡವಿ ಅರಣ್ಯದಲಿ ಮಡಿವನಕ ತಪವಿದ್ದು
ಮಡಿವಾಗ ಮೃಡನ ಮರದಡೆ,
ತುಂಬಿದ ಸಕ್ಕರೆಯ ಮಡುವಿನೊಳಗೊಕ್ಕಂತೆ!
ರಾಮನಾಥ. ॥ ೮ ॥

೭೧೮

ಅಡವಿಯಂಗಡಿಯಕ್ಕು, ನಡುಗಡಲು ನೆಲೆಯಕ್ಕು.
ತೊಡಕುವ ಮಾರಿಯಪಮೃತ್ಯ
ಶಿವಭಕ್ತರ ಒಡಲು ನಿನ್ನೊಡಲೆಂದು
ಮುಟ್ಟಲಮ್ಮವು ಕಾಣಾ! ರಾಮನಾಥ. ॥ ೯ ॥

೭೧೯

ಅಣುರೇಣು ಮಧ್ಯದ ಪ್ರಣವದಾಧಾರ
ಭುವನಾಧೀಶನೊಬ್ಬನೆಯಯ್ಯ.
ಇದೆ ಪರಿಪೂರ್ಣವೆಂದೆನ್ನದನ್ಯ ದೈವವ ಸ್ಮರಿಸುವ
ಭವಿಯನೆಂತು ಭಕ್ತನೆಂಬೆನೈ? ರಾಮನಾಥ. ॥ ೧೦ ॥

೭೨೦

ಅರ್ಥವುಂಟೆಂದು ಅಹಂಕರಿಸಿ ಮಾಡುವನ ಭಕ್ತಿ
ತೊತ್ತಿನ ಕೂಟ, ತೊರೆಯನ ಮೇಳದಂತೆ.
ತನು-ಮನ-ಧನದಲ್ಲಿ ವಂಚನೆಯುಳ್ಳ
ಪ್ರಪಂಚಿಯ ಮನೆಯ ಕೂಳು
ಶುನಕನ ಬಾಯ ಎಲುವ ಪ್ರತಿಶುನಕ ತಿಂದಂತೆ ಕಾಣಾ!
ರಾಮನಾಥ. ॥ ೧೧ ॥

೭೨೧

ಅನ್ಯಜಾತಿಯ ಮನೆಯ ಅನ್ನಪಾನಾದಿಗಳು
ತನ್ನ ಉದರದಲ್ಲಿ ಇಕ್ಕುವವ ಶಿವದ್ರೋಹಿ, ಶಿವವಂಚಕನು.
ಅವ ನಿಮ್ಮ ಓ ಎನಿಸಿವಡೆ ಎನಿಸಲಿ
ಅವನ ಎನ್ನತ್ತ ತಾರದಿರಾ, ರಾಮನಾಥ. ॥ ೧೨ ॥

೭೨೨

ಅನುಭಾವವಿಲ್ಲದೆ ಈ ತನು ಎಳತಟವಾದುದಯ್ಯಾ.
ಅನುಭಾವವೀ ತನುವಿಂಗೆ ಆಧಾರ.
ಅನುಭಾವರ ಅನುಭಾವವನು
ಮನವಾರೆ ವೇದಿಸಿದವರಿಗೆ ಜನನವಿಲ್ಲ ಕಾಣಾ!
ರಾಮನಾಥ. ॥ ೧೩ ॥

೭೨೩

ಅನುಭಾವವಿಲ್ಲದ ಭಕ್ತಿ ತಲೆಕೆಳಗಾದುದಯ್ಯಾ.
ಅನುಭಾವ ಭಕ್ತಿಗಾಧಾರ; ಅನುಭಾವ ಭಕ್ತಿಗೆ ನೆಲೆವನೆ.
ಅನುಭಾವ ಉಳ್ಳವರ ಕಂಡು
ತುರ್ಯ ಸಂಭಾಷಣೆಯ ಬೆಸಗೊಳ್ಳದಿದ್ದಡೆ
ನರಕದಲ್ಲಿಕ್ಕಯ್ಯಾ! ರಾಮನಾಥ. ॥ ೧೪ ॥

೭೨೪

ಅರುಹ ಅರಿಯಲೆಂದು
ಕುರುಹ ಕೈಯಲಿ ಕೊಟ್ಟ!
ಅರುಹನೆ ಮರದು ಕುರುಹನೆ ಹರಿದ!
ಈ ಕುರುಂಬರಿಗಿನ್ನೆತ್ತಣ ಮುಕ್ತಿಯೊ? ರಾಮನಾಥ. ॥ ೧೫ ॥

೭೨೫

ಆಡಬಾರದ ಬಯಲು
ನೋಡಬಾರದ ಬಯಲು
ನುಡಿಯಬಾರದ ಬಯಲು
ಹಿಡಿಯಬಾರದ ಬಯಲು
ಈ ಒಡಲಿಲ್ಲದ ಬಯಲೊಳಗೆ ಅಡಗಿರ್ದ ಭೇದವ
ಈ ಲೋಕದ ಜಡರೆತ್ತ ಬಲ್ಲರೈ? ರಾಮನಾಥ. ॥ ೧೬ ॥

೭೨೬

ಆಚಾರಸಹಿತವಿದ್ದಡೆ ಗುರುವೆಂಬೆ.
ಆಚಾರಸಹಿತವಿದ್ದಡೆ ಲಿಂಗವೆಂಬೆ.
ಆಚಾರಸಹಿತವಿದ್ದಡೆ ಜಂಗಮವೆಂಬೆ.
ಸದಾಚಾರಸಹಿತವಿರದೆ
ಅನ್ಯದೈವ ಭವಿಮಾಟಕೂಟವ ಮಾಡುವನ ಮನೆಯಲ್ಲಿ
ಲಿಂಗಾರ್ಚನೆಯ ಮಾಡಿದನಾದಡೆ
ನಿಮಗಂದೆ ದೂರವಯ್ಯಾ, ರಾಮನಾಥ. ॥ ೧೭ ॥

೭೨೭

ಆದಿ ಆರರ ಭೇದ
ತನುಗುಣ ಮೂವತ್ತಾರ ಮೀರಿ
ತೋರಿದುದ ತೋರಿ ಮತ್ತೆ ಆರೂಢವಾದರೆ
ಮೇಲೆ ನಿನ್ನಿಚ್ಛೆ ಕಾಣಾ! ರಾಮನಾಥ. ॥ ೧೮ ॥

೭೨೮

ಆದಿ ಪ್ರಕೃತಿಯ ಮಕ್ಕಳು ಅಂದಿನವರು
ಆದಿ ಪ್ರಕೃತಿಯ ಮಕ್ಕಳು ಇಂದಿನವರು
ಆದಿಪ್ರಕೃತಿಯ ಜೀವ ಪ್ರಕೃತಿಯ
ಭೇದವ ಬಲ್ಲವರ ಪಾದವೆ ಗತಿಯೆನಗೆ
ರಾಮನಾಥ. ॥ ೧೯ ॥

೭೨೯

ಆಸೆ ಪರಿಣಾಮಕ್ಕೆ ಬೇಸತ್ತು ಹೋಯಿತ್ತು.
ಆಶ್ರಯದ ನಿದ್ರೆ ಕೆಟ್ಟಿತ್ತು.
ಗ್ರಾಸ ಮೆಲ್ಲನಾಯಿತ್ತು.
ಸ್ತ್ರೀಯರ ಮೇಲಣ ಇಚ್ಛೆ ಕೆಟ್ಟಿತ್ತು.
ಈಶ್ವರ! ನಿಮ್ಮ ಪಾದಾಂಬುಜ ಸೇವೆಯಿಂದ ಕಾಣಾ!
ರಾಮನಾಥ. ॥ ೨೦ ॥

೭೩೦

ಇಂತೆಂದ ಭೂಮಿಯ; ಇಂತೆಂದ ಗಗನವ.
ಇಂತೆಂದ ಸಪ್ತಸಾಗರವ.
ಇಂತೀ ಲೋಕದೊಳಗೆ ತಿಂಥಿಣಿಯಾಗಿಪ್ಪ
ಅಚಿಂತನನವರಾರು ಬಲ್ಲರೈ ರಾಮನಾಥ. ॥ ೨೧ ॥

೭೩೧

ಇಂದಿಂಗೆಂತು ನಾಳಿಂಗೆಂತೆಂದು ಚಿಂತಿಸಲೇಕೆ?
ತಂದಿಕ್ಕುವ ಶಿವಂಗೆ ಬಡತನವೆ? ರಾಮನಾಥ. ॥ ೨೨ ॥

೭೩೨

ಇತ್ತ ಬಾ ಎನ್ನದವನ ಹತ್ತೆ ಹೊದ್ದಲು ಬೇಡ.
ಇತ್ತ ಬಾ ಎಂಬ ಸದ್ಭಕ್ತನ ಮನೆಯ ಬಾಗಿಲ
ಹತ್ತಿಪ್ಪೆ ಕಾಣಾ! ರಾಮನಾಥ. ॥ ೨೩ ॥

೭೩೩

ಇರುಹೆಯ ತೆರನೇನು ನೆರೆ ಛಲವಿಲ್ಲದೆ
ಮಾಡಿದವನ ಭಕ್ತ ಇರುಹೆಯಿಂದ ಕರಕಷ್ಟ ಕಾಣಾ!
ರಾಮನಾಥ. ॥ ೨೪ ॥

೭೩೪

ಇಳೆ ನಿಮ್ಮ ದಾನ, ಬೆಳೆ ನಿಮ್ಮ ದಾನ.
ಸುಳಿದು ಬೀಸುವ ವಾಯು ನಿಮ್ಮ ದಾನ.
ನಿಮ್ಮ ದಾನವನುಂಡು ಅನ್ಯರ ಹೊಗಳುವ
ಕುನ್ನಿಗಳನೇನೆಂಬೆ, ರಾಮನಾಥ. ॥ ೨೫ ॥

೭೩೫

ಇಳೆಯನಾಧಾರ ಮಾಡಿ, ಜಳವ ಜೀವನ ಮಾಡಿ
ಒಳಗಿಪ್ಪ ಭೇದವನು
ವಾಯುವ ಕಂಬವ ಮಾಡಿ, ನಳನ ಚಂದ್ರಮನ ಮಡಗಿ
ಆಕಾಶವನು ಗಳನೆ ಮುಚ್ಚಿದ ಬೆಳಗಿಗೆ
ಆನು ಬೇಡಿಕೊಂಬೆ, ರಾಮನಾಥ. ॥ ೨೬ ॥

೭೩೬

ಈಶ!ನಿಮ್ಮ ಪೂಜಿಸಿದ ಬಳಿಕ
ಅನ್ಯ ದೈವಂಗಳಿಗೆ ಹೇಸಲೇ ಬೇಕು.
ಹೇಸದೆ ಅನ್ಯದೈವಕ್ಕೆ ಆಸೆ ಮಾಡಿದಡೆ
ಅವ ನಮ್ಮ ಈಶ್ವರಂಗೆ ಹೊರಗು.
ದೋಷರಹಿತ ಭಕ್ತರು ಅವಂಗೆ ಕುಲವೆಂದು
ಕೂಸ ಕೊಟ್ಟು ಕೂಡುಂಡಡೆ
ಮೀಸಲ ಬೋನವ ನಾಯಿ ಮುಟ್ಟಿದಂತೆ ಕಾಣಾ!
ರಾಮನಾಥ. ॥ ೨೭ ॥

೭೩೭

ಈಶನ ಶರಣರು ವೇಶಿಯ ಹೋದಡೆ
ಮೀಸಲೋಗರವ ಹೊರಗಿರಿಸಿದಡೆ
ಹಂದಿ ಮೂಸಿ ನೋಡಿದಂತೆ ರಾಮನಾಥ. ॥ ೨೮ ॥

೭೩೮

ಉಂಕೆಯ ನಿಗುಚಿ ಸರಿಗೆಯ ಸಮಗೊಳಿಸಿ
ಸಮಗಾಲನಿಕ್ಕಿ ಅಣೆಯೇಳ ಮುಟ್ಟದೆ
ಹಿಡಿದ ಲಾಳಿಯ ಮುಳ್ಳು ಕಂಡಿಕೆಯ ನುಂಗಿತ್ತು.
ಈ ಸೀರೆಯ ನೆಯ್ದವ ನಾನೊ ನೀನೋ?
ರಾಮನಾಥ. ॥ ೨೯ ॥

೭೩೯

ಉಣ್ಣೆ ಕೆಚ್ಚಲ ಹತ್ತಿ ಉಂಬುದೆ ನೊರೆವಾಲ?
ಪುಣ್ಯಕ್ಷೇತ್ರದಲ್ಲಿ ಹುಟ್ಟಿ ಉಣ್ಣದವನು
ಆ ಉಣ್ಣೆಯಿಂದ ಕರಕಷ್ಟ ! ರಾಮನಾಥ. ॥ ೩೦ ॥

೭೪೦

ಉರಿವ ತೃಣದ ಮೇಲೆ ಪುಣ್ಯವ ತಂದಿರಿಸಿದಡೆ
ಆ ತೃಣವನ್ನು ಆ ಕೆಂಡ ನುಂಗುವಂತೆ
ಗುರುಚರಣದ ಮೇಲೆ ತನುತೃಣವನಿರಿಸಿದಡೆ
ಆ ತನುವೆಲ್ಲ ಲಿಂಗಮಯ ಕಾಣಾ! ರಾಮನಾಥ. ॥ ೩೧ ॥

೭೪೧

ಉಳುವನ ಹೆಳೆವನ ಉಳುವವನ ಕೊಲುವ
ಬೇಡನ, ಹಿಳಿಲನಿಕ್ಕಿ ಕರದುಂಬ ಭಕ್ತನ
ಒಳುಹನೇನೆಂಬೆ, ರಾಮನಾಥ. ॥ ೩೨ ॥

೭೪೨

ಊರ ಮಾಡುವನ ಭಕ್ತಿ ಮೂರದ ಹೊಲನಂತೆ
ದೂರದಿಂ ಬಂದು ಅದು ನಿಂದು
ಮುಂದೆ ಸಾಗರವಾಗಲರಿಯದು, ರಾಮನಾಥ. ॥ ೩೩ ॥

೭೪೩

ಎಡರಡಸಿದಲ್ಲಿ ಮೃಡ! ನಿಮ್ಮ ನೆನವರು.
ಎಡರಡಸಿದ ವಿಪತ್ತು ಕಡೆಯಾಗಲೊಡನೆ
ಮೃಡ! ನಿಮ್ಮನೆಡಹಿಯೂ ಕಾಣರು! ರಾಮನಾಥ. ॥ ೩೪ ॥

೭೪೪

ಎಣ್ಣೆಯಿದ್ದು ಎಳ್ಳು ನನೆಯದ ಭೇದವ
ಕಿಚ್ಚಿದ್ದು ಕಲ್ಲು ಸಿಡಿಯದ ಭೇದವ
ಕಾಮವಿದ್ದು ಕನ್ನೆಯನನುಭವಿಸದ ಭೇದವ
ಪರವಿದ್ದು ಪ್ರಾಣನ ಪ್ರಕೃತಿಯ ಪರಿಯದ ಭೇದವ
ನರರೆತ್ತ ಬಲ್ಲರೈ? ರಾಮನಾಥ. ॥ ೩೫ ॥

೭೪೫

ಎಂಜಲ ತಿಂಬರೆ ಅಂಜದೆ ಅಳುಕದೆ ತಿನಬೇಕು.
ಅಂಜುತ ಅಳುಕುತ ತಿಂದರೆ
ಅದು ನಂಜಿನಂತಕ್ಕು ಕಾಣಾ! ರಾಮನಾಥ. ॥ ೩೬ ॥

೭೪೬

ಎತ್ತಪ್ಪೆ ಶರಣಂಗೆ, ತೊತ್ತಪ್ಪೆ ಶರಣಂಗೆ
ಭೃತ್ಯನಾಗಿ ಸದ್ಭಕ್ತರ ಮನೆಯ ಬಾಗಿಲ ಕಾಯ್ದಿಪ್ಪ ಸೊಣಗನಪ್ಪೆ.
ಕರ್ತಾರ!ನಿನಗೆ ಕರವೆತ್ತಿ ಹೊಡವಡುವ
ಭಕ್ತರ ಮನೆಯ ಹಿತ್ತಿಲ ಬೇಲಿಯಾಗಿಪ್ಪೆನಯ್ಯಾ,
ರಾಮನಾಥ. ॥ ೩೭ ॥

೭೪೭

ಎತ್ತನೇರಿದ ಕರ್ತನೊಬ್ಬನೆ ಜಗಕ್ಕೆಲ್ಲ
ಎತ್ತು ಬೆಳೆದ ಧಾನ್ಯವನುಂಬ
ದೇವರ್ಕಳೆಲ್ಲ ನಿಮ್ಮ ತೊತ್ತಿನ ಮಕ್ಕಳು ಕಾಣಾ!
ರಾಮನಾಥ. ॥ ೩೮ ॥

೭೪೮

ಎತ್ತು ನಿಮ್ಮ ದಾನ; ಬಿತ್ತು ನಿಮ್ಮ ದಾನ.
ಸುತ್ತಿ ಹರಿವ ಸಾಗರವೆಲ್ಲ ನಿಮ್ಮ ದಾನ.
ನಿಮ್ಮ ದಾನವನುಂಡು ಅನ್ಯರ ಹೊಗಳುವ
ಕುನ್ನಿಗಳನೇನೆಂಬೆ ಹೇಳ? ರಾಮನಾಥ. ॥ ೩೯ ॥

೭೪೯

ಎನ್ನ ನಾನರಿವುದಕ್ಕೆ ಮುನ್ನ ಎಲ್ಲಿದ್ದೆಯಯ್ಯ?
ಎನ್ನೊಳಗೆ ಇದ್ದೆಯಯ್ಯ!
ಎನ್ನ ನಾನರಿಯಲು ಮುಂದೆ ಬಂದು ಗುರುರೂಪಾಗಿ
ಎನ್ನೊಳಗೆ ಅಡಗಿದ್ದೆಯಲ್ಲ! ರಾಮನಾಥ. ॥ ೪೦ ॥

೭೫೦

ಎನ್ನೊಡಲಾದಡೆ ಎನ್ನಿಚ್ಛೆಯಲ್ಲಿರದೆ?
ನಿನ್ನೊಡಲಾದಡೆ ನಿನ್ನಿಚ್ಛೆಯಲ್ಲಿರದೆ?
ಅದು ಎನ್ನೊಡಲೂ ಅಲ್ಲ, ನಿನ್ನೊಡಲೂ ಅಲ್ಲ.
ಅದು ನೀ ಮಾಡಿದ ಜಗದ ಬಿನ್ನಾಣದೊಡಲು ಕಾಣಾ!
ರಾಮನಾಥ. ॥ ೪೧ ॥

೭೫೧

ಎಳ್ಳಿಲ್ಲದ ಗಾಣದಲ್ಲಿ ಎಣ್ಣೆಯುಂಟೆ?
ಜಳ್ಳ ತೂರಿದಲ್ಲಿ ಬತ್ತವುಂಟೆ?
ಕಳ್ಳ ಹಾದರಿಗರ ಸಂಪಾದನೆ
ಹೊಳ್ಳ ಕುಟ್ಟಿ ಕೈ ಹೊಟ್ಟೆಯಾದಂತೆ ಕಾಣಾ!
ರಾಮನಾಥ. ॥ ೪೨ ॥

೭೫೨

ಒಂದರಿವು ಒಂದು ನಡೆ ಒಂದು ಸ್ಥಾನದೊಳಗೆ ಒಂದು
ಮುಂದೆ ಪ್ರಸಾದದಂತುವನರಿದಡೆ
ನಿಶ್ಚಿಂತ ಪರಶಿವನು, ರಾಮನಾಥ. ॥ ೪೩ ॥

೭೫೩

ಒಂದಾಗಿಹವೈದು ಭೂತ
ಚಂದ್ರ ಸೂರ್ಯರು ನಂದಿವಾಹನ ನಿಮ್ಮ ತನುವಲ್ಲವೆ?
ನಿಂದು ನೋಡಲು ಜಗವಂದ್ಯನಾಗಿಪ್ಪೆ,
ಇನ್ನು ನಿಂದಿಸುವೆನಾರನಯ್ಯ? ರಾಮನಾಥ. ॥ ೪೪ ॥

೭೫೪

ಒಕ್ಕುದು ಪ್ರಸಾದವಲ್ಲ, ಮಿಕ್ಕುದು ಪ್ರಸಾದವಲ್ಲ.
ಪತ್ತೆ ಕರೆದಿಕ್ಕಿದುದು ಪ್ರಸಾದವಲ್ಲ.
ತರ್ಕೈಸಿ ನಿಮ್ಮುವನಪ್ಪಿಕೊಂಡಡೆ
ಅದು ನಿಶ್ಚಯಪ್ರಸಾದ ಕಾಣಾ! ರಾಮನಾಥ. ॥ ೪೫ ॥

೭೫೫

ಒಡಲಿಚ್ಚೆಗೆ ಭವಿಯ ಒಡಗೂಡಿಕೊಂಡು ಉಂಡು
ಹಡಿಕೆಯ ತಿಂದ ನಾಯಿ ಮುಂದುಡೆ ಬಗುಳುವಂತೆ!
ಮೃಡನಿಲ್ಲದವನ ಮನೆಯ ಕೂಳು
ಹೊಲೆಯರ ಮನೆಯ ಅಡಗಿಂದ ಕರಕಷ್ಟ ಕಾಣಾ!
ರಾಮನಾಥ. ॥ ೪೬ ॥

೭೫೬

ಒಡಲುಗೊಂಡವ ನಾನು; ಪ್ರಾಣವಿಡಿದವ ನೀನು.
ಎನ್ನೊಡಲ ಸಂಚುವ ನೀ ಬಲ್ಲೆ!
ನಿನ್ನ ಪ್ರಾಣದ ಸಂಚುವ ನಾ ಬಲ್ಲೆ!
ಇದು ಕಾರಣ,
ಇದು ಎನ್ನೊಡಲಲ್ಲ ನಿನ್ನೊಡಲು.
ನಿನ್ನ ಪ್ರಾಣವೆನ್ನಲ್ಲಿ ಅಡಗಿದ ಭೇದವ
ನೀ ಬಲ್ಲೆ, ನಾ ಬಲ್ಲೆನ್ನೈ, ರಾಮನಾಥ. ॥ ೪೭ ॥

೭೫೭

ಒಡಲುಗೊಂಡವ ಹಸಿವ; ಒಡಲುಗೊಂಡವ ಹುಸಿವ
ಒಡಲುಗೊಂಡವನೆಂದು

ನೀನೆನ್ನ ಜಡಿದೊಮ್ಮೆ ನುಡಿಯದಿರ!
ನೀನೆನ್ನಂತೆ ಒಮ್ಮೆ ಒಡಲುಗೊಂಡು ನೋಡ!
ರಾಮನಾಥ. ॥ ೪೮ ॥

೭೫೮

ಒಡಲುಗೊಂಡೆನಾಗಿ ಮೃಡ! ನಿಮಗೆ ಹಗೆಯಾದೆನಯ್ಯ.
ಆನು ಒಡಲುಗೊಂಡಡೇನು?
ಕಡಲೊಳಗಣ ಬೊಬ್ಬುಳಿಕೆ ಕಡಲೊಳಗೆ ಅಳಿವಂತೆ
ಎನ್ನ ಒಡಲಳಿದು ಹೋದಡೇನು?
ಪ್ರಾಣ ನಿಮ್ಮ ಎಡೆಯಲಡಗುವದಯ್ಯಾ,
ರಾಮನಾಥ. ॥ ೪೯ ॥

೭೫೯

ಒಡಲೊಳಗಣ ಕಿಚ್ಚು ಒಡಲ ಸುಡದ ಭೇದವ
ಕುಡಿದ ಉದಕದಲ್ಲಿ ಆ ಕಿಚ್ಚು ನಂದದ ಭೇದವ
ಮೃಥ! ನೀ ಪ್ರಾಣ ಪ್ರಕೃತಿಯೊಳಗೆ ಅಡಗಿದ ಭೇದವ
ಲೋಕದ ಜಡರೆತ್ತ ಬಲ್ಲರೈ? ರಾಮನಾಥ. ॥ ೫೦ ॥

೭೬೦

ಒಡೆಯರನೊಡಗೊಂಡು ಬಂದು
ಕೈಗಡಿಗೆಯ ನೀರ ಕಯ್ಯಲ್ಲಿ ಕೊಟ್ಟು
'ಒಡೆಯರೆ! ಕಾಲ ತೊಳಕೋ!'
ಎಂಬುವನ ಮನೆಗೆ ಅಡಿಯಿಡಲಾಗದಯ್ಯಾ ಮೃಡಶರಣರು.
ಒಡಲಿಚ್ಛೆಗೆ ಬಡಮನವ ಮಾಡಿ
ಹೊಕ್ಕುಂಬವರ ಎನ್ನೆಡೆಗೆ ತೋರದಿರಾ, ರಾಮನಾಥ. ॥ ೫೧ ॥

೭೬೧

ಒರತೆಗಳ ಕಂಡಿಂತು ಕೆಲರೀ ಬಾವಿಯ ತೋಡೆಂಬರು!
ಅರವಟಿಗೆ ಛತ್ರವು ತಮ್ಮದೆಂಬರು!
ಎಲೆ ಪಯಿರ್ರೈದದಿರೆ, ಸುರಿವ ಮಳೆ ಸುರಿಸದಿದ್ದಡೆ,
ಅವರೇತರಲ್ಲಿ ನೀಡುವರಯ್ಯಾ! ರಾಮನಾಥ. ॥ ೫೨ ॥

೭೬೨

ಒಲವಸವಿಲ್ಲದ ಭಕ್ತಿ, ಲವಲವಿಕೆಯಿಲ್ಲದ ಪೂಜೆ,
ಸಲೆ ನಿಮ್ಮ ನಂಬಿಯೂ ನಂಬದವನ ಬಾಳುವೆ,
ಹೊಲೆಯರ ನಾಯ ಹುಲುಸರವಿಯಿಂದ ಕರಕಷ್ಟಕಾಣ!
ರಾಮನಾಥ. ॥ ೫೩ ॥

೭೬೩

ಒಳಗರಿದ ಭಕ್ತನ ಒಳಗಾದ ಲಿಂಗವು
ಒಳಗಾದ ಲಿಂಗದೊಳಗಾದ ಭಕ್ತನ
ಹೊರಗಾದ ಲಿಂಗವ ಒಳಗೆ ತಂದಿರಿಸಿ
ಆ ಭಕ್ತನ ತನುವಿನ ವಳೆಯವನಿನ್ನೇನ ಹೇಳುವೆ!
ರಾಮನಾಥ. ॥ ೫೪ ॥

೭೬೪

ಕಂಚುಮುಟ್ಟು ಕಲ್ಲುಗುಂಡುಗಳೇರುವಣ್ಣಗಳು ನೀವು ಕೇಳಿರೆ!
ಘಂಟೆಯ ನುಡಿಸಿ ಶಿವನನುಂಟುಮಾಡಿಕೊಂಡಿಹೆನೆಂಬಿರಿ.
ಆ ಘಂಟೆಯ ಧ್ವನಿಗೆ ಒಂದು ಗೋಟಡಕೆಯ ಸೋಲ,
ಗುರು ರಾಮನಾಥನು. ॥ ೫೫ ॥

೭೬೫

ಕಡಿಗಳ ಹದಿನೆಂಟನೊಡಗೂಡಿ ಸಂದಿಸಿ
ತೊಡಚಿ ಕಟ್ಟಿದೆ ನರರ ಬಂಧನವಲ್ಲಿ.
ಈ ತೊಡಹದ ನಾಯ ನಿಚ್ಚ ನೀನಿಕ್ಕಿ
ಕೆಡಿಸಿದೆಯಯ್ಯಾ, ರಾಮನಾಥ. ॥ ೫೬ ॥

೭೬೬

ಕಡುಭಸಿತವ ಪೂಸಿ,
ಮುಡಿಯಲ್ಲಿ ಲಿಂಗವ ಧರಿಸಿ,
ಮಂತ್ರಮೂರ್ತಿಯ ಮನವಾರೆ ಪೂಜಿಸಿ,
ಭಕ್ತಿ ವೇಷವ ಹೊತ್ತು ಭಕ್ತನೆನಿಸಿದ ಬಳಿಕ
ಭವಿಯ ಮನೆಯನ್ನವ

ನಾಯಡಗು, ನರರು ಹೇಸಿದ ಅಮೇಧ್ಯವೆಂದೆ ಕಾಣಬೇಕು.
ಹೀಗಲ್ಲದೆ ಒಡಲಿಚ್ಛೆಗೆ ತುಡುಗಣಿ ನಾಯಂತೆ
ಒಡಲ ಹೊರೆವವರ ಮೆಚ್ಚ,ನಮ್ಮ ರಾಮನಾಥ. ॥ ೫೭ ॥

೭೬೭

ಕಡೆಗೀಲಿಲ್ಲದ ಬಂಡಿ ಹೊಡೆಗೆಡೆಯದೆ ಮಾಣ್ಬುದೆ?
ಕಡೆಗೀಲು ಬಂಡಿಗಾಧಾರ.
ಈ ಕಡುದರ್ಪವೇರಿದ ಒಡಲೆಂಬ ಬಂಡಿಗೆ
ಮೃಢಭಕ್ತರ ನುಡಿಗಡಣವೆ ಕಡೆಗೀಲು ಕಾಣಾ!
ರಾಮನಾಥ. ॥ ೫೮ ॥

೭೬೮

ಕಣ್ಣು ಮೀಸಲು ಶಿವನ; ಕೈ ಮೀಸಲು ಶಿವನ.
ಕಾಲು ಮೀಸಲು ಶಿವನ; ನಾಲಗೆ ಮೀಸಲು ಶಿವನ.
ಕಿವಿ ಮೀಸಲು ಶಿವನ; ನಾಸಿಕ ಮೀಸಲು ಶಿವನ.
ತನು ಮನವೆಲ್ಲಾ ಮೀಸಲು ಶಿವನ.
ಈ ಮೀಸಲು ಬೀಸರವಾಗದಂತಿರ್ದಡೆ
ಆತನೇ ಜಗದೀಶ ಕಾಣಾ! ರಾಮನಾಥ. ॥ ೫೯ ॥

೭೬೯

ಕತ್ತೆ ಬಲ್ಲುದೆ ಕಸ್ತುರಿಯ ವಾಸನೆಯ?
ತೊತ್ತು ಬಲ್ಲಳೆ ಗುರುಹಿರಿಯರುತ್ತಮರೆಂಬುದ?
ಭಕ್ತಿಯನರಿಯದ ವ್ಯರ್ಥಜೀವಿಗಳು
ನಿಮ್ಮವರನೆತ್ತ ಬಲ್ಲರೈ? ರಾಮನಾಥ. ॥ ೬೦ ॥

೭೭೦

ಕರಸ್ಥಲದ ಜ್ಯೋತಿಯಿದು.
ಕರುವಿಟ್ಟ ಎರಕವಿದು.
ಇದರ ನೆಲೆಯ ತಿಳಿದು ನೋಡಿದಡೆ ನಿಜದಾನಂದವು.
ಹೊಲಬುದೋರದ ನಿಸ್ಸಂಗದ ಹೊಲಬನರಿದು
ಕೂಡಿದಾತನೆ ಶರಣ ಕಾಣಾ! ರಾಮಾನಾಥ. ॥ ೬೧ ॥

೭೭೧

ಕರಸ್ಥಲವೆಂಬ ದಿವ್ಯ ಭೂಮಿಯಲ್ಲಿ
ಮಹಾಘನಲಿಂಗ ನಿಕ್ಷೇಪವಾಗಿದೆ!
ಈ ದಿವ್ಯ ನಿಕ್ಷೇಪವ ಸಾಧಿಸುವಡೆ
ಅಂಜನಸಿದ್ಧಿಯಿಲ್ಲದೆ ಸಾಧಿಸಬಾರದು.
ಲಿಪಿಯಿಲ್ಲದೆ ತೆಗೆವಡಸವಳ.
ಆ ಲಿಪಿಯ ವ್ರಯವ ಷಟ್‌ತತ್ವದ ಮೇಲೆ ನಿಶ್ಚಯಿಸಿ.
ಆ ನಿಶ್ಚಯದೊಳಗೆ ಈ ನಿಕ್ಷೇಪದ ಕರ್ತೃವಿನ ಹೆಸರೋದಿತ್ತು.
ತಿಳಿಯಲೋದುವನ್ನಬರ ಆತ
ನಮ್ಮ ಹೆತ್ತಯ್ಯನೆಂಬ ಹೆಸರೋದಿತ್ತು.
ಆ ಓದಿಕೆಯ ಕಡೆಯಕ್ಕರದೊಳಗೆ ಅಂಜನಸಿದ್ಧಿ ಹೇಳಿತ್ತು.
ಅದಾವ ಪರಿಕ್ರಮದ ಅಂಜನವೆಂದಡೆ
ಅದೆಮ್ಮ ಹೆತ್ತಯ್ಯ ಜಗದ್ವಿಲಾಸ ತದರ್ಥವಾಗಿ
ಆ ತನ್ನ ಮೂಲಶಕ್ತಿ ಸಂಭೂತವಾದುದು.
ಅಲ್ಲಿ ಹುಟ್ಟಿದ ದಿವ್ಯ ಚಿತ್ಕಳೆಯಿಂದೊಗೆದ ದಿವ್ಯಭಸಿತವೆಂದಿತ್ತು.
ಆ ದಿವ್ಯ ಭಸಿತವೆಂಬ ದಿವ್ಯಾಂಜನವ ತಳೆದುಕೊಂಡು
ಅತಿ ವಿಶ್ವಾಸದಿಂದ ನಾನೆನ್ನ ಹಣೆಯೆಂಬ ಕಣ್ಣಿಂಗೆಚ್ಚಿ
ಸರ್ವಾಂಗವ ತೀವಲೊಡನೆ
ಕರಸ್ಥಲದೊಳಗಣ ನಿಕ್ಷೇಪ ಕಣ್ದೆರವಾಯಿತ್ತು.
ಆ ಕಣ್ದೆರವಾದ ನಿಕ್ಷೇಪವ ಮುಟ್ಟಹೋದಡೆ
ಅಲ್ಲಿ ನಮ್ಮ ಹೆತ್ತಯ್ಯನ ಹೊಳಹ ಕಂಡು ತಳವೆಳಗಾದೆ ಕಾಣಾ!
ರಾಮನಾಥ. ॥ ೬೨ ॥

೭೭೨

ಕರಿಯನಿತ್ತಡೆ ಒಲ್ಲೆ, ಸಿರಿಯನಿತ್ತಡೆ ಒಲ್ಲೆ.
ಹಿರಿದಪ್ಪ ರಾಜ್ಯವನಿತ್ತಡೆ ಒಲ್ಲೆ.
ನಿಮ್ಮ ಶರಣರ ಸೂಳ್ನುಡಿಯ ಒಂದರೆಘಳಿಗೆಯಿತ್ತಡೆ
ನಿನ್ನನಿತ್ತೆ ಕಾಣಾ! ರಾಮನಾಥ. ॥ ೬೩ ॥

೭೭೩

ಕಲಿವೀರ ಕಡಿವಲ್ಲಿ, ಬಲುವಿಷವು ಸುಡುವಲ್ಲಿ
ನೆಲೆಗೆಟ್ಟು ಮೊರೆಯೊ! ಎಂಬಲ್ಲಿ

ನಿಮ್ಮ ತಲೆಗಾದು ರಕ್ಷಿಸಿದ ಸುಲಭನನರಿಯಿರೆ ಹೊಲೆಯರಿರ!
ಸಲೆ ನಂಬಿ ಬದುಕಿರೊ, ರಾಮನಾಥನ. ॥ ೬೪ ॥

೭೭೪

ಕಷ್ಟಜಾತಿಗಳು ಲಿಂಗವ ಮುಟ್ಟಿ ಪೂಜಿಸಲಾಗದು.
ಮುಟ್ಟಿದಡೆ ಮುಟ್ಟಿದಂತಿರಬೇಕು.
ನಿಮ್ಮ ಮುಟ್ಟಿಯೂ ಹಿಂದಣ ಕುಲವ ಕೂಡಿದರಾದಡೆ
ಮುಂದೆ ಹೊಲೆಯರ ಮನೆಯ
ಹುಳಿತ ನಾಯ ಬಸುರಲಿ ಬಪ್ಪದು ತಪ್ಪದು ಕಾಣಾ!
ರಾಮನಾಥ. ॥ ೬೫ ॥

೭೭೫

ಕಳದೊಳಗಣ ಕಳವೆಯನೊಕ್ಕುವರೊಳಗದೆ ಶಿವಲಿಂಗ
ಮುಕ್ಕಣ್ಣ! ನೀನೊಲಿದ ಸದ್ಭಕ್ತನ ಅಕ್ಕುಲಿಜನೆಂದಡೆ
ಅಕ್ಷಯನರಕದಲ್ಲಿಕ್ಕುವ ಕಾಣಾ! ರಾಮನಾಥ. ॥ ೬೬ ॥

೭೭೬

ಕಾಯ ನಿಮ್ಮ ದಾನ; ಜೀವ ನಿಮ್ಮದಾನ.
ಕಾಯ ಜೀವ ಉಳ್ಳಲ್ಲಿಯೇ ನಿಮ್ಮ ಪೂಜಿಸದ
ನಾಯಿಗಳನೇನೆಂಬೆ ಹೇಳ? ರಾಮನಾಥ. ॥ ೬೭ ॥

೭೭೭

ಕೀಳು ಡೋಹರ ಕಕ್ಕ; ಕೀಳು ಮಾದರ ಚೆನ್ನ.
ಕೀಳು ಓಹಿಲದೇವ; ಕೀಳು ಉದ್ಭಟಯ್ಯ.
ಕೀಳಿಂಗಲ್ಲದೆ ಪಯನು ಕರೆಯದು ಕಾಣಾ!
ರಾಮನಾಥ. ॥ ೬೮ ॥

೭೭೮

ಕುಲಛಲವ ಬಿಟ್ಟು ನಿಮ್ಮನೊಲಿಸಿದ ಶರಣರಿಗೆ
ತಲೆವಾಗುವೆ ನಾನು ಕುಲಜರೆಂದು.

ಬೆಬ್ಬನೆ ಬೆರತು ನಿಮ್ಮನೊಲಿಸಿದ ಶರಣರಿಗೆ
ತಲೆವಾಗದವನ ತಲೆ ಶೂಲದ ಮೇಲಣ ತಲೆ ಕಾಣಾ!
ರಾಮನಾಥ. ॥ ೬೯ ॥

೭೦

ಕುಲಸ್ವಾಮಿ ನಿಮ್ಮವ ಒಲಿವುದ ಕಂಡಡೆ
ತಲೆವಾಗುವೆ ಕಾತ ಕಳವೆಯಂತೆ
ಕುಲಜ ನಾನೆಂದು ತಲೆವಾಗದಿದ್ದಡೆ ಸಲೆ
ಶೂಲದ ತಲೆಯಯ್ಯಾ, ರಾಮನಾಥ. ॥ ೭೦ ॥

೭೧

ಕುಲಸ್ವಾಮಿ ನೀ ನಿಂದ ಹಜ್ಜೆಯಲ್ಲದೆ
ನಾನೊಂದು ಹೆಜ್ಜೆಯನಿಡೆನಯ್ಯ; ಎನಗೊಂದು ಹಜ್ಜೆಯಿಲ್ಲ.
ನಿನ್ನ ಹೆಜ್ಜೆ ಎನ್ನ ಹೆಜ್ಜೆ ಒಂದಾದ ಭೇದವ
ಜಗದನ್ಯಾಯಿಗಳೆತ್ತ ಬಲ್ಲರೈ? ರಾಮನಾಥ. ॥ ೭೧ ॥

೭೨

ಕೆಡಹಿದ ಚಿನ್ನದ ಎಡೆಯಣ ಮಣ್ಣುವ
ಹೆಡೆಗೆದುಂಬಲಾ ಚಿನ್ನದೋರಿ
ಮೃಡ! ನಿಮ್ಮ ಶರಣರ ಎಡೆಗಳನರಿದ ಬಳಿಕ
ಉಡುಗಿದ ಮಣ್ಣೇಕೆ? ರಾಮನಾಥ. ॥ ೭೨ ॥

೭೩

ಖಂಡಿತವಿಲ್ಲದ ಅಖಂಡಿತ ನೀನೆ.
ನಿಮ್ಮ ಕಂಡವರುಂಟೆ? ಹೇಳಯ್ಯ.
ಕಂಡೆನೆಂಬವರೆಲ್ಲ ಬಂಜೆಯ ಮಕ್ಕಳು
ನೀ ನಿಂದ ಹಜ್ಜೆಯ ಕೆಳಗೆ
ಒಂದು ಬಿಂದು ಹುಟ್ಟಿ ಬೆಳಗುವ ಛಂದವ ಕಂಡು
ಕಣ್ದೆರೆದೆ ಕಾಣಾ! ರಾಮನಾಥ. ॥ ೭೩ ॥

೭೮೩

ಗಂಡನುಳ್ಳಮ್ಮನ ಗೌರಿಯೆಂದು ಕಂಡಡೆ
ಭೂಮಂಡಳಕ್ಕೆ ಅರಸಾಗಿ ಹುಟ್ಟುವನಾತನು.
ಗಂಡನುಳ್ಳಮ್ಮನ ಕಂಡು ಒಡವೆರದಾತ
ನರಕದಲ್ಲಿ ದಿಂಡುಗೆಡದಿಪ್ಪನೈ, ರಾಮಾನಾಥ. ॥ ೭೪ ॥

೭೮೪

ಗಂಡ ಭಕ್ತನಾಗಿ, ಹೆಂಡತಿ ಭವಿಯಾದಡೆ
ಉಂಡ ಊಟ ಇಬ್ಬರಿಗೂ ಸರಿಭಾಗ!
ಸತ್ತ ನಾಯ ತಂದು ಅಟ್ಟದ ಮೇಲಿಳುಹಿ
ಒಬ್ಬರೊಪ್ಪಚ್ಚಿಯ ಹಂಚಿಕೊಂಡು ತಿಂಬಂತೆ!
ರಾಮನಾಥ. ॥ ೭೫ ॥

೭೮೫

ಗಿರಿಗಳೆಲ್ಲ ಕೂಡಿ ಮೇರುಗಿರಿಗೆ ಸರಿಯಾಗಬಲ್ಲವೆ?
ತರುಗಳೆಲ್ಲ ಕೂಡಿ ಕಲ್ಪತರುವಿಗೆ ಸರಿಯಾಗಬಲ್ಲವೆ?
ಸರಿಯಿಲ್ಲ ನೋಡಾ
ನಮ್ಮ ಭಕ್ತರಿಗೆ ನರರು ಸುರರು ಸರಿಯಲ್ಲ ನೋಡಾ!
ಪರುಷಕ್ಕೆ ಪಾಷಾಣ ಸರಿಯೆ?
ಮರುಜವಣಿಗೆ ಔಷಧ ಸರಿಯೇ?
ಇದು ಕಾರಣ, ಶಿವಭಕ್ತರ್ಗೆ ಲೋಕದವರು ಸರಿಯೆಂದರೆ
ನರಕ ತಪ್ಪದಯ್ಯಾ, ರಾಮಾನಾಥ. ॥ ೭೬ ॥

೭೮೬

ಗುರು ಕರುಣಿಸಲು ಸಂಸಾರ ವಿಷಯ ಕೆಟ್ಟಿತ್ತು.
ಮಾಯಾ ಪ್ರಪಂಚು ಬಿಟ್ಟಿತ್ತು.
ಮುಂದಣ ಹುಟ್ಟರತು ಹೋಯಿತ್ತು.
ನೆಟ್ಟಗೆ ಗುರುಪಾದವ ಮುಟ್ಟಿ ಭವಗೆಟ್ಟೆನು ಕಾಣಾ!
ರಾಮನಾಥ. ॥ ೭೭ ॥

೭೮೭

ಗುರು ನಿರೂಪವ ಮರದು
ಪರವಧುವ ನೆರವರು; ಪರವಧುವನಳುಪುವರು.
ಗುರುವಿಲ್ಲವವರಿಗೆ! ಪರವಿಲ್ಲವವರಿಗೆ!
ಇಂತಪ್ಪ ನರಕಿಗಳನೆನಗೊಮ್ಮೆ ತೋರದಿರಾ,
ರಾಮನಾಥ. ॥ ೭೮ ॥

೭೮೮

ಗುರುಭಕ್ತನಾದಲ್ಲಿ ಘಟಧರ್ಮವಳಿದು
ಲಿಂಗಭಕ್ತನಾದಲ್ಲಿ ಮನಸಂಚಲ ನಿಂದು
ಜಂಗಮಭಕಿಯಲ್ಲಿ ಧನದಾಸೆಯಳಿದು
ತ್ರಿವಿಧಾಂಗ ಸಲೆ ಸಂದು ತ್ರಿಕರಣ ಶುದ್ಧನಾಗಿದ್ದವಂಗೆ
ಮರ್ತ್ಯ ಕೈಲಸವೆಂಬ ಕಾಳುಮಾತಿಲ್ಲ
ಆತ ನಿಶ್ಚಿಂತ ನಿಜಮುಕ್ತನಯ್ಯಾ, ರಾಮನಾಥ. ॥ ೭೯ ॥

೭೮೯

ಗುರು ಲಿಂಗ ಒಂದೆಂಬರು.
ಗುರು ಲಿಂಗ ಒಂದಾದ ಠಾವ ತಿಳಿದು ನೋಡಿರೆ.
ಗುರು ಕಾರುಣ್ಯವಾದ ಬಳಿಕ
ಅಂಗದ ಮೇಲೆ ಲಿಂಗವಿರಬೇಕು.
ಲಿಂಗವಿಲ್ಲದ ಗುರುಕಾರುಣ್ಯವು
ಬತ್ತಿದ ಕೆರೆಯಲ್ಲಿ ತಾವರೆಯ ಬಿತ್ತಿದಂತೆ ಕಾಣಾ!
ರಾಮನಾಥ. ॥ ೮೦ ॥

೭೯೦

ಘಟದೊಳಗೆ ತೋರುವ ಸೂರ್ಯನಂತೆ
ಸರ್ವರಲ್ಲಿ ಶಿವನ ಚೈತನ್ಯವಿಪ್ಪುದು.
ಇದ್ದರೇನು? ಅದ ಕೂಡುವರೆ
ಗುರುವಿನಿಂದಲ್ಲದಾಗದು ಕಾಣಾ! ರಾಮನಾಥ. ॥ ೮೧ ॥

೭೯೧

ಘಟವನೊಡದು ಬಯಲ ನೋಡಲದೇಕೆ?
ಘಟದೊಳಗಿಪ್ಪುದೆ ಬಯಲೆಂದರಿವಡೆ ಸಾಲದೆ?
ಪಟವ ಹರಿದು ತಂತುವ ನೋಡಲದೇಕೆ?
ಆ ಪಟವೆ ತಂತುವೆಂದರಿವಡೆ ಸಾಲದೆ?
ಕಟಕವ ಮುರಿದು ಕಾಂಚನವ ನೋಡಲದೇಕೆ?
ಆ ಕಟಕವೆ ಕಾಂಚನವೆಂದರಿದಡೆ ಸಾಲದೆ?
ತನ್ನನಳಿದು ಘನದ ನೋಡಲದೇಕೆ?
ತಾನೆ ಘನವೆಂದರಿದಡೆ ಸಾಲದೆ? ಹೇಳಾ! ರಾಮನಾಥ. ॥೮೨॥

೭೯೨

ಚಿನ್ನದೊಳಗಣ ಬಣ್ಣವ ಆ ಚಿನ್ನ ತನ್ನ ತಾನರಿವುದೆ?
ಕಬ್ಬು ರುಚಿಸಬಲ್ಲುದೆ ತನ್ನ ತಾನೆ?
ಈ ಪರಿಯಂತೆ ನರರರಿವರೆ ಕ್ರಿಯಾಜ್ಞಾನ ಭೇದವ?
ರಾಮನಾಥ. ॥ ೮೩ ॥

೭೯೩

ಜಂಬೂದ್ವೀಪವನೆಲ್ಲ ತಿರಿಗಿವಡೇನು?
ಜಂಬುಕ ಶಂಭುದ್ಯಾನದಲ್ಲಿ ಸೈವೆರಗಪ್ಪುದೆ?
ಕುಂಭಿನಿಯ ತಿರಿಗಿ ಕೋಟಿ ತೀರ್ಥವ ಮಿಂದಡೇನು?
ಶಂಭು! ನಿಮ್ಮಲ್ಲಿ ಸ್ವಯವಾಗದವನು
ಕುಂಭಿನಿಯ ತಿರಿಗಿದ ಡೊಂಬನಂತೆ ಕಾಣಾ!
ರಾಮನಾಥ. ॥ ೮೪ ॥

೭೯೪

ಜಗದೊಳಗಣ ಮನುಜರು ಸೋಗೆಗನಂತಿಪ್ಪರು.
ಸೋಗೆಗನಾಡಿಸುವ ಓಜೆ ಬೇರ್ರೆ.
ಸೋಗೆಗಳನೀಡಾಡಿ ಓಜ ತಾ ಹೋದರ್ರೆ
ಸೋಗೆಗ ನುಡಿಯಬಲ್ಲದೆ? ರಾಮಾನಾಥ. ॥ ೮೫ ॥

೭೯೫

ಜ್ವರ ಪೀಡಿಸಿದ ಮನುಜರಿಗೆ ನೊರವಾಲು ಸೊಗಸುವದೆ ?
ಭವಜನ್ಮದಲ್ಲಿ ಬರುವ ಕ್ರೂರಮಿರ್ಗಗಳಿಗೆ

ಶಿವಾಚಾರವ ಹೇಳಿದಡೆ
ಹಗೆಯ ಮಾಡುವರು ಕಾಣಾ! ರಾಮನಾಥ. ॥ ೮೬ ॥

೭೯೬

ಜ್ವರ ಬಡಿದ ಬಾಯಿಗೆ ಸೊರೆವಾಲು ಉರಸುವದೆ?
ನರಕದಲ್ಲಿ ಬೀಳುವ ಮನುಜರಿಗೆ
ಶಿವಭಕ್ತಿಯೆಂಬುದು ಕಿರುಗಹಿ ಕಾಣಾ!ರಾಮನಾಥ. ॥ ೮೭ ॥

೭೯೭

ತನು ತನ್ನ ದೆಸೆಯಲೇಸು ದಿನವಿರ್ದಡೇನು?
ಮನ ತನ್ನ ಪರಿದತ್ತ ಪರಿದ ಬಳಿಕ.
ಕೆನೆಯಿಲ್ಲದ ಮೊಸರ ಕಡೆದಡೆ
ಅಲ್ಲಿ ಒಂದು ಹನಿ ತುಪ್ಪವಿಲ್ಲ ಕಾಣಾ!ರಾಮನಾಥ. ॥ ೮೮ ॥

೭೯೮

ತನ್ನೊಳಗಣ ಅರಿವು ತನ್ನಲ್ಲಿಯೇ ತೋರಿದಲ್ಲದೆ
ಅನ್ಯರಲ್ಲಿ ತೋರಬಲ್ಲುದೆ?
ತನ್ನಲ್ಲಿ ತಾನೆ ಇದ್ದಿತ್ತು.
ತನ್ನ ತಾನೆ ಪಕ್ವಕ್ಕೆ ಬಂದು
ತನ್ನಲ್ಲಿ ಹುಟ್ಟಿದ ನೆನಹಿನ ಬಿನ್ನಾಣವನೇನೆಂಬೆನಯ್ಯಾ
ರಾಮನಾಥ. ॥ ೮೯ ॥

೭೯೯

ತಲೆಯಿಲ್ಲದ ಗುರು, ಕಾಲಿಲ್ಲದೆ ನಿಂದ ನೋಡ!
ಒಡಲಿಲ್ಲದ ಶಿಷ್ಯನಾದ ಪರಿಯ ನೋಡ!
ಗುರುವಿನ ಒಡಲ ಬಗೆದು ಹುಟ್ಟಿದಾತ
ಒಡನೆ ಗುರುಸಹಿತ ನಿಂದ ನಿಲವನೇನೆಂಬೆನಯ್ಯಾ!
ರಾಮನಾಥ. ॥ ೯೦ ॥

೮೦೦

ತಾಯ ಗರ್ಭದ ಶಿಶು ತಾಯ ಕುರುಹನರಿಯದು.
ಆ ತಾಯಿ ಶಿಶುವಿನ ಕುರುಹನೆಂದೂ ಅರಿಯಳು.

ಮಾಯಾಮೋಹದಲ್ಲಿಪ್ಪ ಭಕ್ತರು ದೇವರನರಿಯರು.
ಆ ದೇವರು ಆ ಭಕ್ತರನೆಂದೂ ಅರಿಯನು ಕಾಣಾ!
ರಾಮನಾಥ. ॥ ೯೧ ॥

೬೦೧

ತೀವಿ ಕುಳ್ಳಿರ್ದ ಸಭೆ ಈಯಬಲ್ಲುದೆ ದಾನವ?
ಸಾವರೆ ಸಂಗ್ರಾಮಕ್ಕೆ ಹೋದವರೆಲ್ಲ?
ಇರಿಯಬಲ್ಲರೆ ನೂರಕ್ಕೊಬ್ಬ ಸಹಸ್ರಕ್ಕೊಬ್ಬ.
ಹುಣಿಸೆಯ ಹೂವೆಲ್ಲ ಕಾಯಾಗಬಲ್ಲುದೆ?
ರಾಮನಾಥ. ॥ ೯೨ ॥

೬೦೨

ತೊಡೆಯಲ್ಲಿ ಮುದ್ರೆಯನೊತ್ತಿದಡೇನು?
ಅದು ನಡೆಯಲ್ಲಿ ಶುಚಿಯಾಗಬಲ್ಲುದೆ?
ಮಡಿಲಲ್ಲಿ ಲಿಂಗವ ಕಟ್ಟಿದಡೇನೊ?
ಲೋಕದ ಅಜ್ಞಾನಿತನ ಬಿಡುವುದೆ?
ನಡೆ ನುಡಿ ಸತ್ಯಸದಾಚಾರಿಗಳು
ಎಡೆಯೆಡೆಗೊಬ್ಬರು ಕಾಣಾ! ರಾಮನಾಥ. ॥ ೯೩ ॥

೬೦೩

ದರುಶನ ತಪ್ಪುಕ ಪ್ರಥಮ ಪಾತಕ.
ಪರುಶನ ತಪ್ಪುಕ ದ್ವಿತೀಯ ಪಾತಕ.
ಗುರು ತಪ್ಪುಕ ತೃತೀಯ ಪಾತಕ.
ಪಾರದ್ವಾರಿ ಚತುರ್ಥ ಪಾತಕ.
ಮಾಂಸಾಹಾರಿ ಪಂಚಮ ಮಹಾ ಪಾತಕ.
ಈ ಅಯ್ವರೊಡನೆ ನುಡಿಯಲಿಲ್ಲಯ್ಯ,
ರಾಮನಾಥ. ॥ ೯೪ ॥

೬೦೪

ದಾಸನ ಕುಲವಾದಾತ ಈಶಂಗಲ್ಲದೆ ಶರಣೆನ್ನ.
ಆಸೆ ಮಾಡ, ನೋಡ ಅನ್ಯದೈವಂಗಳಿಗೆ.

ದೇಶದ ಪಿಶಾಚಿಗಳಿಗೆ ಆಶೆ ಮಾಡ ನೋಡ!
ಆಶೆ ಮಾಡಿದನಾದಡೆ ಅವ ದಾಸನ ಕುಲವಲ್ಲ
ಅವ ಅನ್ಯಕುಲ ಕಾಣಾ! ರಾಮನಾಥ. ॥ ೯೫ ॥

೮೦೫

ದಾಸಿ ವೇಶಿ ಮದ್ದು ಮಾಂಸ ಸುರೆ ಭಂಗಿ ಹೊಗೆ
ಅನ್ಯದೈವ ಭವಿಸಂಗ-ಇಷ್ಟುಳ್ಳನ್ನಕ್ಕ ಅವ ಭಕ್ತನಲ್ಲ, ಜಂಗಮನಲ್ಲ.
ಅವರಿಬ್ಬರ ಮೇಳಾಟವೆಂತೆಂದಡೆ
ಹೀಪಂದಿ ಹಡಿಕೆಯ ತಿಂದು
ಅವು ಒಂದರ ಮೋರೆಯನೊಂದು
ಮೂಸಿದಂತೆ ಕಾಣಾ! ರಾಮನಾಥ. ॥ ೯೬ ॥

೮೦೬

ದೇಹಗೊಂಡು ಹುಟ್ಟಿದವರು
ಒಪ್ಪಚ್ಚಿ ದೇಹಾರವ ಮಾಡುವಿರಯ್ಯ.
ದೇಹಾರವ ಮಾಡಿ ಲಿಂಗಾರ್ಪಿತವ ಮಾಡದೆ
ಆಹಾರವ ಕೊಂಡಡೆ
ಕೋಳಿ ಹುಳವನಾಯ್ದು ತಿಂದಂತೆ ಕಾಣಾ! ರಾಮನಾಥ. ॥೯೭॥

೮೦೭

ಧರಣಿಯ ಪಸರಿಸಿ, ಉರಗನನಡಿಯಿಟ್ಟು
ಶರಧಿಯೇಳಕ್ಕೆ ಎರವನೊಕ್ಕುಡಿತೆ ಉದಕವ
ಹರಿಯಜ ಸುರರಿಗೆ ಪರಿಪರಿಯ ಲೋಕವ ಕೊಟ್ಟು
ಅರಿದಂತಿರ್ದ ಕಾಣಾ! ರಾಮನಾಥ. ॥ ೯೮ ॥

೮೦೮

ಧರ್ಮವನೆತ್ತುವವರ ಮಹಾಧರ್ಮಿಗಳೆಂದೆಂಬಿರಿ.
ನಿಮ್ಮ ಧರ್ಮವನಾರು ಅರಿದವರಿಲ್ಲ!
ಧರ್ಮಗಳಿನಿಕ್ಕಿ ಉತ್ತ ಭೂಮಿಯೆ ಡೊಣೆ
ನೀನೆಮ್ಮನೆಲ್ಲರ ನೋಡಿ ಸಲಹಿದ್ದೈ, ರಾಮನಾಥ. ॥ ೯೯ ॥

೮೦೯

ನಂಬಿ ನಚ್ಚಿದೆನೆಂದು ಮನವನಿಂಬುಗೊಡದಿರು.
ಕಾಯದ ಮಾಯದ ಕಪಟ ಕರ್ಮ ಸಂಸಾರಕ್ಕೆ
ತನು ಮನ ಧನದಲ್ಲಿ ನೆನಹುಳ್ಳವರ
ಕನಸಿನಲ್ಲಿ ಅರಿಯ, ನಮ್ಮ ರಾಮನಾಥ. ॥ ೧೦೦ ॥

೮೧೦

ನಂಬಿದ ಚೆನ್ನನ ಅಂಬಲಿಯನುಂಡ.
ಕೆಂಬಾವಿಯ ಭೋಗಯ್ಯನ ಹಿಂದಾಡಿಹೋದ.
ಕುಂಭದ ಗತಿಗೆ ಕುಕಿಲಿರಿದು ಕುಣಿದ.
ನಂಬದೆ ಕರೆದವರ ಹಂಬಲನೊಲ್ಲನೆಮ್ಮ ರಾಮನಾಥ. ॥ ೧೦೧ ॥

೮೧೧

ನಡೆ ನೋಟ ಸೊಲ್ಲೆಡೆಯಲ್ಲಿ ಒಂದು ಕಿಚ್ಚು.
ಮಡದಿ ಪುರುಷರೆಡೆಯಲ್ಲಿ ಒಂದು ಕಿಚ್ಚು.
ತಡದುಂಬೆಡೆಯಲ್ಲಿ ಒಂದು ಕಿಚ್ಚು.
ಪಡೆದರ್ಥ ಕೆಟ್ಟೆಡೆಯಲ್ಲಿ ಒಂದು ಕಿಚ್ಚು.
ಕೂಡಿದ ವ್ಯಾಮೋಹದೆಡೆಯಲ್ಲಿ ಒಂದು ಕಿಚ್ಚು.
ಇಂತೀ ಐದು ಕಿಚ್ಚನಿಕ್ಕಿ
ಬಾಯಲ್ಲಿ ಮಣ್ಣಹೊಯಿದು ಕೆಡಿಸಿದೆ! ರಾಮನಾಥ.॥ ೧೦೨ ॥

೮೧೨

ನಾನೊಂದು ಸುರಗಿಯನೇನೆಂದು ಹಿಡಿವೆನು?
ಏನ ಕಿತ್ತೇನನಿರಿವೆನು?
ಜಗವೆಲ್ಲಾ ನೀನಾಗಿಪ್ಪೆ ಕಾಣಾ!ರಾಮನಾಥ. ॥ ೧೦೩ ॥

೮೧೩

ನಿಜವುಂಡ ನಿರ್ಮಲದವಲೊದಗಿನ ಜ್ಯೋತಿಯನು
ಮರಳಿ ಪ್ರಸಾದರೂಪು ತಾನಾಗಿ
ನಿಜ ನಿಂದು ಬ್ರಹ್ಮಾಂಡ ಬೆಳಗಿ ತೋರುತ್ತದೆ
ಮಹಾಪ್ರಸಾದಿಯಲ್ಲಿ ರಾಮನಾಥ. ॥ ೧೦೪ ॥

೮೧೪

ನಿಡಿದೊಂದು ಕೋಲುವನು ಕಡಿದು ಎರಡ ಮಾಡಿ
ಅಡಿಯ ಹೆಣ್ಣ ಮಾಡಿ, ಒಡತಣದ ಗಂಡ ಮಾಡಿ
ನಡುವೆ ಹೊಸದಡೆ ಹುಟ್ಟಿದ ಕಿಚ್ಚು ಹೆಣ್ಣೊ ಗಂಡೊ?
ರಾಮನಾಥ. ॥ ೧೦೫ ॥

೮೧೫

ನಿಷ್ಠೆಯುಳ್ಳ ಭಕ್ತ ನಟ್ಟಡವಿಯಲ್ಲಿದ್ದಡೇನು?
ಅದು ಪಟ್ಟಣವೆಂದೆನಿಸೂದು!
ನಿಷ್ಠೆಯಿಲ್ಲದ ಭಕ್ತ ಪಟ್ಟಣದಲ್ಲಿದ್ದಡೂ
ಅದು ನಟ್ಟಡವಿ ಕಾಣಾ! ರಾಮನಾಥ. ॥ ೧೦೬ ॥

೮೧೬

ನೀನೀಶನೀಯದೆ ಮಾನಿಸನೀವನೆ?
ನೀನೀಸುವ ಕಾರಣ ಮಾನಿಸನೀವನು.
ಆ ಮಾನಿಸನ ಹೃದಯದೊಳು ಹೊಕ್ಕು
ನೀನೀಸುವ ಕಾರಣದಿಂದ
ನೀನೆ ಶರಣೆಂಬೆನಯ್ಯಾ, ರಾಮನಾಥ. ॥ ೧೦೭ ॥

೮೧೭

ನೆರೆದರೆ ಗಣಂಗಳು! ಹರದಡೆ ಕಂಚುಗಾರರು!
ಲಿಂಗವ ಮಾರಿ ಉಂಬ ಭಂಗಾರರು!
ತಮ್ಮ ತಳಿಗೆಯ ಕೊಂಡು ಹೋಗಿ
ಅನ್ಯರ ಮನೆಯಲುಂಬ ಕುನ್ನಿಗಳನೇನೆಂಬೆ?
ರಾಮನಾಥ. ॥ ೧೦೮ ॥

೮೧೮

ನೆರೆ ನಂಬಿ-ಕರೆವಡೆ ನರಿ ಕುದುರೆಯಾಗಿ ಹರಿವೆ?
ಜಗವೆಲ್ಲಾ ಅರಿಯಲು ತೊರೆಯೊಳಗೆ ಬಿದ್ದ ಲಿಂಗ
ಕರೆವಡೆ ಬಂದುದು ಕರಸ್ಥಲಕ್ಕೆ.
ನಂಬದೆ ಕರೆವವರ ಹಂಬಲನೊಲ್ಲನೆಮ್ಮ
ರಾಮನಾಥ. ॥ ೧೦೯ ॥

೮೧೯

ಪರವಧುವ ನೆರೆಯದೆ; ಪರಧನವ ತುಡುಕದೆ.
ಪರದೈವದಿಚ್ಚೆವಡೆಯದೆ
ಗುರು ಲಿಂಗ ಜಂಗಮಕ್ಕೆ ವರದಾಸನಾದಾತನೆ
ಧರೆ ಮೂರಕ್ಕೆ ಗುರುವಾಗಿಪ್ಪನೈ, ರಾಮನಾಥ. ॥ ೧೧೦ ॥

೮೨೦

ಪ್ರಾಣನ ಕಳೆ ಪ್ರಕೃತಿಯಲ್ಲಿ ಅಡಗಿ
ಪ್ರಕೃತಿಯ ಕಳೆ ಪ್ರಾಣನಲ್ಲಿ ಅಡಗಿ
ಲಿಂಗವೆಂದರಿದು ಅಂಗೈಸಿ ಅನುಭವಿಸಬಲ್ಲವರ
ಲಿಂಗಿ ಸಾನಪ್ಪೆನೈ, ರಾಮನಾಥ. ॥ ೧೧೧ ॥

೮೨೧

ಬಂದುದನರಿದು ಬಳಸುವಳು
ಬಂದುದ ಪರಿಣಾಮಿಸುವಳು
ಬಂಧು ಬಳಗವ ಮರಸುವಳು
ದುಗ್ಗಳೆಯ ತಂದು ಬದುಕಿದೆನು ಕಾಣಾ!
ರಾಮನಾಥ. ॥ ೧೧೨ ॥

೮೨೨

ಬಯಲ ಬಣ್ಣವ ಮಾಡಿ;
ಸ್ವಯವ ನಿಲವ ಮಾಡಿ
ಸುಳಿವಾತನ ಬೆಡಗ ಬಲ್ಲವರಾರೈ? ರಾಮನಾಥ! ॥ ೧೧೩ ॥

೮೨೩

ಬರು ಸಠಗನ ಭಕ್ತಿ ದಿಟವೆಂದು ನಚ್ಚಲು ಬೇಡ.
ಮಠದೊಳಗಣ ಬೆಕ್ಕು ಇಲಿಯ ಕಂಡು
ಪುಟನೆಗೆದಂತಾಯಿತ್ತು ಕಾಣಾ! ರಾಮನಾಥ. ॥ ೧೧೪ ॥

೮೨೪

ಬಿಂದುವಿನೊಳಗೆ ನಾದ ಪೊಂದಿರ್ದ ಭೇದವನು
ಲಿಂಗದೊಳಗೆ ಶರಣ ಸಂದಿರ್ದ ಭೇದವನು
ಲೋಕದ ಸಂದೇಹಿಗಳೆತ್ತ ಬಲ್ಲರೈ! ರಾಮನಾಥ. ॥ ೧೧೫ ॥

೮೨೫

ಬೆಕ್ಕು ನಾಯಿ ಶಿವಭಕ್ತರೊಕ್ಕು ಮಿಕ್ಕುದ ಕೊಂಡಡೆ
ಸದಾಚಾರಿಯಾಗಬಲ್ಲುದೆ? ಭೃತ್ಯಾಚಾರಿಯಾಗಬಲ್ಲುದೆ?
ಜಂಗಮಲಿಂಗದಲ್ಲಿ ನಂಬುಗೆಯಿಲ್ಲದೆ
ಒಕ್ಕು ಕೊಂಡ ಪ್ರಸಾದ
ಬೆಕ್ಕು ನಾಯಿ ತಿಂದಂತೆ ಕಾಣಾ! ರಾಮನಾಥ. ॥ ೧೧೬ ॥

೮೨೬

ಭಂಜಿಸಿಹೆನೆಂದೆಂಬೆ ಹಲಬರು
ಭಂಜನೆಗೆ ಸಿಲುಕುವವು ಪ್ರಾಣಿಗಳಲ್ಲದೆ
ಲಿಂಗವು ಭಂಜನೆಗೆ ಸಿಲುಕುವನೆ? ತಾತ್ಪರ್ಯಕ್ಕಲ್ಲದೆ.
ಆ ಲಿಂಗದೆಂಜಲ ತಿಂದು ವೈಸಿಕವ ಮಾಡಿದಡೆ
ಅದು ನಂಜಾಗಿ ಕಾಡುವದು ಕಾಣಾ! ರಾಮಾನಾಥ.॥ ೧೧೭ ॥

೮೨೭

ಭಕ್ತನ ಮಠವೆಂದು ಭಕ್ತ ಹೋದಡೆ
ಆ ಭಕ್ತ ಭಕ್ತಂಗೆ ಅಡಿಯಿಟ್ಟು ಇದಿರೆದ್ದು ನಡೆದು
ಪೊಡೆಗೆಡೆದು ಒಡಗೊಂಡು ಬಂದು
ವಿಭೂತಿ ವೀಳ್ಯವನ್ನಿಕ್ಕಿ ಪಾದಾರ್ಚನೆಯಂ ಮಾಡಿಸಿ
ಒಕ್ಕುದ ಕೊಂಡು ಓಲಾಡುತ್ತಿಪ್ಪುದೆ ಭಕ್ತಿ.
ಹೀಂಗಲ್ಲದೆ ಬೆಬ್ಬನೆ ಬೆರತು, ಬಿಬ್ಬನೆ ಬೀಗಿ
ಅಹಂಕಾರಭರಿತನಾಗಿಪ್ಪವನ ಮನೆಯ
ಲಿಂಗಸನುಮತರು ಹೊಗರು ಕಾಣಾ! ರಾಮನಾಥ. ॥೧೧೮॥

೮೨೮

ಭಕ್ತಿಯ ಬಲ್ಲವರಿಗೆ ಸತ್ಯ ಸದಾಚಾರವ ಹೇಳಿದಡೆ
ನಂಬುವರು, ನಚ್ಚುವರು, ಮಚ್ಚುವರು.
ಭಕ್ತಿಯ ಹೊಲಬನರಿಯದ ವ್ಯರ್ಥರಿಗೆ
ಸತ್ಯ ಸದಾಚಾರವ ಹೇಳಿದಡೆ
ಕಚ್ಚುವರು, ಬಗುಳುವರು ಕಾಣಾ! ರಾಮನಾಥ. ॥ ೧೧೯ ॥

೮೨೯

ಭಕ್ತಿಯ ಬಲ್ಲವರು ನಚ್ಚಿ ಮೆಚ್ಚಿ ಮನವನೊಚ್ಚತಗೊಡುವರು.
ಭಕ್ತಿಯನರಿಯದ ಬಲುಪಾಪಿ ಜೀವಿಗಳು
ಕಚ್ಚುವರು ಬಗುಳುವರು, ರಾಮನಾಥ. ॥ ೧೨೦ ॥

೮೩೦

ಭವಿಯ ಕಳೆದು ಭಕ್ತನಾದ ಬಳಿಕ
ಭವಿ ನಂಟನೆಂದು ಹೊಗಿಸಲಾಗದು.
ನಂಟುತನಕ್ಕೆ ಆತ್ಮನಿಚ್ಛೆಗೆ ಅಳುಪಿ ಭವಿಯೊಡನುಂಡಡೆ
ಹಂದಿಯ ಬಾಯ ತುತ್ತ ನಾಯಿ ಸೆಳತಿಂದಂತೆ ಕಾಣಾ!
ರಾಮನಾಥ. ॥ ೧೨೧ ॥

೮೩೧

ಭವಿಯ ಮನೆಯ ಅನ್ನ ಸವಿಯಾಯಿತ್ತೆಂಬ ಭಕ್ತಂಗೆ ಭವಿಪಾಕ ನರಕ.
ಆಗಳಂತೆ ಭವಿಗೆ ಮಾಡಿದ ಹುಳುಗುಂಡ ಭಕ್ತಂಗಪ್ಪುದು ತಪ್ಪದು
ಆ ಭವಿಗೆ ಭವಂ ನಾಸ್ತಿ ಕಾಣಾ! ರಾಮನಾಥ. ॥ ೧೨೨ ॥

೮೩೨

ಮಂಡೆಯ ಬೋಳಿಸಿಕೊಂಡು
ಮಡಿದು ಗೋಸಿಯ ಕಟ್ಟಿವಡೇನು?
ಕಂಡಕಂಡವರಿಗೆ ಕಯ್ಯೊಡ್ಡಿ ಬೇಡುವ
ಭಂಡರನೊಲ್ಲನೆಮ್ಮ ರಾಮನಾಥ. ॥ ೧೨೩ ॥

೮೩೩

ಮಡದಿಯ ಪ್ರಾಣಕ್ಕೆ ಮೊಲೆ ಮುಡಿ ಇದ್ದಿತ್ತೆ?
ಒಡೆಯನ ಪ್ರಾಣಕ್ಕೆ ಇದ್ದಿತ್ತೆ ಯಜ್ಞೋಪವೀತ?
ಕಡೆಯಲ್ಲಿದ್ದ ಅಂತ್ಯಜನು ಹಿಡಿದಿದ್ದನೆ ಹಿಡಿಗೋಲ?
ನೀ ತೊಡಕಿಕ್ಕಿದ ತೊಡಕನೀ ಲೋಕದ ಜಡರೆತ್ತ ಬಲ್ಲರೈ
ರಾಮನಾಥ. ॥ ೧೨೪ ॥

೮೩೪

ಮಣಿಗಣ ಸೂತ್ರದಂತೆ ತ್ರಿಜಗೆಯ ನೀನಿಪ್ಪೆಯಯ್ಯ.
ಎಣಿಸುವಡೆ ತನ್ನ ಭಿನ್ನ ಆತ್ಮನೊಬ್ಬನೆ.
ಅಣುರೇಣು ಮಧ್ಯದಲ್ಲಿ ಗುಣಭರಿತ ನೀನೆಂದು
ಮಣಿಯುತಿರ್ಪೆನಯ್ಯಾ, ರಾಮನಾಥ. ॥ ೧೨೫ ॥

೮೩೫

ಮಣಿವಡೆ ಶಿವಭಕ್ತ ಮಣಿಯ ಕಟ್ಟಲೆ ಬೇಕು.
ಮಣಿಯದಿರ್ದಡೇನು? ಶಬುದಗುಂಡಿಗೆ!
ಫಣಾಮಣಿದೇವರ ಮಣಿಮಕುಟದಲದೆ,
ಅದು ಮಣಿಯಲ್ಲದೇನು? ಹೇಳು! ರಾಮನಾಥ. ॥ ೧೨೬ ॥

೮೩೬

ಮನಮುಟ್ಟಿ ನೆನವಲ್ಲಿ ತನು ನಿಮ್ಮದಾಯಿತ್ತು.
ತನುಮುಟ್ಟಿ ಅಪ್ಪಿ, ಮನಮುಟ್ಟಿ ನೆರದು
ವನಿತೆಯರ ಕೂಟಕ್ಕೆ ತೆರಪಿಲ್ಲವಾಯಿತ್ತು.
ಜನನ ಮರಣದ ಬಾಧೆ ಹರಿಯಿತ್ತು.
ಈಶ್ವರ! ನಿಮ್ಮ ಪಾದಸೇವೆಯಿಂದ ಕಾಣಾ!
ರಾಮನಾಥ. ॥ ೧೨೭ ॥

೮೩೭

ಮನೆಯಲ್ಲಿ ಅಟ್ಟೆನೆಂದಡೆ ಹೊಟ್ಟೆ ತುಂಬಿಮದುಂಟೆ?
ಕೈಮುಟ್ಟಿ ಉಣ್ಣದನ್ನಕ್ಕರ!

ತಾನು ವಚನಾಗಮದ ಪ್ರಸಂಗವ ಬಲ್ಲೆನೆಂದಡೆ
ಬಲ್ಲವರಾರೂ ಇಲ್ಲವೆಂದಡೆ
ಆತ ತನ್ನ ನುಡಿಗೆ ಸಿಲುಕುವನೆ?
ಇಲ್ಲ ಕಾಣಾ! ರಾಮನಾಥ. ॥ ೧೨೮ ॥

೮೩೮

ಮಹಾಘನವಪ್ಪ ಬೋನವನು
ಒಂದನುವಿನ ಪರಿಯಾಣದಲ್ಲಿ ಹಿಡಿದು
ಗುರುಲಿಂಗವು ಒಳಗಾದ ಲಿಂಗವಾರೋಗಣೆಯ ಮಾಡಿ
ಮಿಕ್ಕುದು ಪ್ರಸಾದವೆ? ಅಲ್ಲಲ್ಲ.
ಮಹಾಘನವಪ್ಪ ಲಿಂಗವ ಒಂದನುವಿನಲ್ಲಿ ತಂದಿರಿಸಿದ ಆತನ
ಮನವೆ ಪ್ರಸಾದ ಕಾಣಾ! ರಾಮನಾಥ. ॥ ೧೨೯ ॥

೮೩೯

ಮಾಡಿದ ಕರ್ಮವನೂಡಯ್ಯ ಎನ್ನ ಮನದಣಿವನ್ನಕ್ಕ.
ಬೇಡೆನ್ನೆನು, ಮಾರ್ಕೊಳ್ಳೆನು.
ಎಲೆ ರೂಢಿಗೀಶ್ವರನ ಕೂಡುವೆನು ನೀರಡಸಿದಂತೆ,
ರಾಮನಾಥ. ॥ ೧೩೦ ॥

೮೪೦

ಮರನೊಳಗಣ ಮಂದಾಗ್ನಿಯ ಉರಿಯದಂತಿರಿಸಿದೆ
ನೊರೆವಾಲೊಳಗೆ ತುಪ್ಪವ ಕಂಪಿಲ್ಲದಂತಿರಿಸಿದೆ
ಶರೀರದೊಳಗಾತ್ಮನನಾರು ಕಾಣದಂತಿರಿಸಿದೆ
ನೀ ಬೆರಸುವ ಭೇದಕ್ಕೆ ಬೆರಗಾದೆನಯ್ಯ!
ರಾಮನಾಥ. ॥ ೧೩೧ ॥

೮೪೧

ಮಾಡಿದಲ್ಲದೆ ಮನೆಯೊಳಗಾಗದು ಬಯಲು
ಕಣ್ಣು ಕಂಡಲ್ಲದೆ ಪರವಾಗದು
ಮನ ಪರವೆಂದಲ್ಲದೆ ಪರವಾಗದು
ಈ ಪರಿಯ ನರರೆತ್ತ ಬಲ್ಲರೈ? ರಾಮನಾಥ. ॥ ೧೩೨ ॥

೮೪೨

ಮಾರಿಯ ಪೂಜಿಸಿ, ಮಸಣಕ್ಕೆ ಹೋಗಿ
ಗೋರಿಗೊಳಿಸಿ ಕುರಿಯ ಕೊರಳನೆ ಕೊಯ್ದುಂಬ
ಕ್ರೂರಕರ್ಮಿಗಳನವರ ಶಿವಭಕ್ತರೆನಬಹುದೆ?
ಆರೈಯದೆ ಅವನ ಮನೆಯಲುಂಡ ಭಕ್ತ
ಅಘೋರನರಕಕ್ಕಿಳಿವ ಕಾಣಾ! ರಾಮನಾಥ. ॥ ೧೩೩ ॥

೮೪೩

ಮುಂಡೆಗೆ ಮುಡಿಕಟ್ಟೇಕೊ?
ಗುಂಡಂಗೇಕೊ ಗುರುಪದ ಭಕ್ತಿ?
ಚಂಡಿಕೆಯ ತಲೆಯ ಚಾಂಡಾಲಂಗೆ
ಅಖಂಡಿತ ಲಿಂಗದ ಅನುವೇಕೆ? ಹೇಳ! ರಾಮನಾಥ. ॥ ೧೩೪ ॥

೮೪೪

ಮಳೆಯ ಮೇಲಣ ಕಲ್ಲು ಜಗದೆರೆಯನಾಗಬಲ್ಲುದೆ?
ಮೆಳೆ ಶಿವಭಕ್ತನಾಗಬಲ್ಲುದೆ?
ನಿಮ್ಮ ತನುಮನಧನವನರಿಯದಿದ್ದಡೆ
ಸದುಭಕ್ತರಹರೆ? ರಾಮನಾಥ. ॥ ೧೩೫ ॥

೮೪೫

ಮೊಲೆ ಮುಡಿ ಬಂದಡೆ ಹೆಣ್ಣೆಂಬರು.
ಗಡ್ಡ ಮೀಸೆ ಬಂದಡೆ ಗಂಡೆಂಬರು.
ನಡುವೆ ಸುಳಿವ ಆತ್ಮನು
ಹೆಣ್ಣೂ ಅಲ್ಲ ಗಂಡೂ ಅಲ್ಲ ಕಾಣಾ! ರಾಮನಾಥ. ॥ ೧೩೬ ॥

೮೪೬

ವಿಷಯದ ಪಿತ್ತ ತಲೆಗೇರಿದಲ್ಲಿ
ವಿವೇಕವೆಂಬ ದೃಷ್ಟಿ ನಷ್ಟವಾಗಿ
ಪಶುಪತಿಯ ನೆನಹುಗೆಟ್ಟು ಮತಿಮಂದನಾದಲ್ಲಿ
ಮಂತ್ರ ನೆನಹುಂಟೆ! ಹೇಳ! ರಾಮನಾಥ. ॥ ೧೩೭ ॥

೮೪೭

ವೇಶಿಯ ಎಂಜಲ ತಿಂದು
ಈಶ್ವರಪ್ರಸಾದವ ಭುಂಜಿಸಿದಡೆ
ಓಸರಿಸಿತ್ತಯ್ಯ ಲಿಂಗವು ಆ ದ್ರೋಹಿಗೆ!
ಭಾಷೆ ತಪ್ಪುವನು! ಭವದಲ್ಲಿ ಬಳಲುವನೆಂದವನ ಕಂಡು
ಹೇಸಿ ಕಡೆಗೆ ತೊಲಗಿದೆನು ಕಾಣಾ! ರಾಮನಾಥ. ‖ ೧೩೮ ‖

೮೪೮

ವೇಷದ ಕೂಡೆ ವಾಸಿಗೆ ಹೋರುವವನು ಈಶ್ವರದ್ರೋಹಿ.
ವೇಷವ ಈಶ್ವರನೆಂದು ತಿಳಿಯದವ
ಪಾಶಕ್ಕೆ ಸಿಕ್ಕದ ಪಶುವಿನಂತೆ ಕಾಣ, ರಾಮನಾಥ. ‖ ೧೩೯ ‖

೮೪೯

ವೇಷವನೂ ವೇಶಿಯನೂ ಸರಿಯೆಂಬೆ.
ವೇಷವು ಲೋಕವ ಹಾರುವದು.
ವೇಶಿಯೂ ಲೋಕವ ಹಾರುವಳು.
ವೇಷವ ಹೊತ್ತು ಲೋಕವ ಹಾರದಿರ್ದಡೆ
ಆತನ ಈಶ್ವರನೆಂಬೆ ಕಾಣಾ! ರಾಮನಾಥ. ‖ ೧೪೦ ‖

೮೫೦

ವೇಷವ ಪಲ್ಲಣಿಸುವ ಹಿರಿಯಣ್ಣಂಗೇನು?
ವೇಷವ ಹೊತ್ತು ದೋಷದಲ್ಲಿ ನಡೆವ ರಾಶಿಮಾ (ನವ)
ವೇಷಗಳ್ಳರ ಕಂಡು ವೇಶಿಯೆಂದ, ರಾಮನಾಥ. ‖ ೧೪೧ ‖

೮೫೧

ವೇಷವ ಹೊತ್ತ ಹಿರಿಯರು ಈಶ್ವರಧ್ಯಾನದಲ್ಲಿರಬೇಕು.
ವೇಷವ ತೋರಿ ಗ್ರಾಸಕ್ಕಾಗಿ ಆಸೆಮಾಡಿ
ಲೋಗರ ಮನೆಯ ಕಾದು
ಗ್ರಾಸವ ಪಡೆದು ಉದರವ ಹೊರೆವ ವೇಷವು
ವೇಶಿಯಿಂದವು ಕರಕಷ್ಟ! ರಾಮನಾಥ. ‖ ೧೪೨ ‖

೮೫೨

ವೇಷವ ಹೊತ್ತು ದೋಷದಲ್ಲಿ ನಡೆದಡೆ
ದೋಷಕ್ಕೆ ವೇಷ ಭಂಡ.
ಮೊವಲೆ ವೇಷವ ಕಂಡು ಲೇಸೆಂದು ಕೊಂಡಾಡುವ ದೋಷಿಗಳ
ನರಕದಲ್ಲಿಕ್ಕುವ ಕಾಣಾ! ರಾಮನಾಥ. ॥ ೧೪೩ ॥

೮೫೩

ವೇಷಕ್ಕೆ ಅಂಜುವೆ ದೋಷಕ್ಕೆ ಹೇಸುವೆ!
ಈಶ್ವರನಾಗಿ ಎನ್ನ ಕೈಯಲ್ಲಿ ತನ್ನ ಆರಾಧಿಸಿಕೊಳಲೊಲ್ಲದೆ
ಹದಿನೆಂಟು ಜಾತಿಯ ಹೇಸಿಕೆಯ ಕೂಳ ತಿಂಬವರನೇನೆಂಬೆನೈ,
ರಾಮನಾಥ. ॥ ೧೪೪ ॥

೮೫೪

ಶರಧಿಯ ಮೇಲೆ ಧರೆಯ ಕರಗದಂತಿರಿಸಿದೆ!
ಅಂಬರಕ್ಕೆ ಗಡಿಗೆ ಬೋದಿಗೆಯಿಲ್ಲದಂತಿರಿಸಿದೆ!
ಎಲೆ ಮೃಡನೆ! ನೀನಲ್ಲದೆ ಉಳಿದ ದೈವಂಗಳಿಗಹುದೆ?
ರಾಮನಾಥ. ॥ ೧೪೫ ॥

೮೫೫

ಶಿವಪೂಜೆಯೆತ್ತ, ವಿಷಯದ ಸವಿಯೆತ್ತ;
ಆ ವಿಷಯದ ಸವಿ ತಲೆಗೇರಿ ಶಿವಪೂಜೆಯ ಬಿಟ್ಟು
ವೇಶಿಯರ ಎಂಜಲ ಹೇಸದೆ ತಿಂಬ
ದೋಷಿಗಳನೇನೆಂಬೆನೈ, ರಾಮನಾಥ. ॥ ೧೪೬ ॥

೮೫೬

ಶಿವಭಕ್ತನು ಹೋಗಿ ತನ್ನೊಡಲಿಚ್ಛೆಗೆ ಭವಿಯ
ಮನೆಯಲುಂಡನಾದಡೆ
ಮಡಕೆಯ ಕೂಳ ತಿಂದ ತುಡುಗಣಿ ನಾಯಂತೆ ಆ ಭಕ್ತ.
ಮೃಢ! ನೀನಿಲ್ಲದ ಮನೆಯ ಕೂಳು
ಹೊಲೆಯರ ಮನೆಯ ಅಡಗಿನಿಂದ ಕರಕಷ್ಟ ಕಾಣಾ,
ರಾಮನಾಥ. ॥ ೧೪೭ ॥

೮೫೭

ಶಿವಭಕ್ತರು ತಮ್ಮ ನಿಜ ಕೈಲಾಸಕ್ಕೆ ಹೋದಡೆ
ಅವರರಸಿಯ ಪಾರ್ವತಿಯ ಸತಿಯೆಂದು ಕಾಣಬೇಕು.
ಅಲ್ಲಿ ಅನುಸರಣೆಯ ಕೊಟ್ಟು ಬೆರಸಿ
ಮಾತನಾಡುವ ನರಕಿಗಳನೇನೆಂಬೆ, ರಾಮನಾಥ. ॥ ೧೪೮ ॥

೮೫೮

ಶ್ರೀ ಗುರು ಲಿಂಗ ಜಂಗಮಕ್ಕೆ
ಅರ್ಥ ಪ್ರಾಣಾಭಿಮಾನವ ಕೊಟ್ಟು
ಅಹಂಕಾರವಳಿದಿಜಹಂತು ಪುರಾತನರ ಮನೆಯಲ್ಲಿ
ಎತ್ತಾಗಿ ಹುಟ್ಟಿಸಯ್ಯಾ,
ತೊತ್ತಾಗಿ ಹುಟ್ಟಿಸಯ್ಯಾ,
ಬಾಗಿಲ ಕಾಯ್ದಿಪ್ಪಂತೆ ಸೊಣಗನಾಗಿ ಹುಟ್ಟಿಸಯ್ಯಾ,
ಜಂಗಮಲಿಂಗವೇ ಶಿವನೆಂದು ನಂಬಿ ನಮಸ್ಕರಿಸುವ
ಪುರಾತನರ ಮನೆಯ ಬೇಲಿಯಾಗಿ ಹುಟ್ಟಿಸಯ್ಯಾ,
ರಾಮನಾಥ. ॥ ೧೪೯ ॥

೮೫೯

ಸಣ್ಣ ನನೆಯೊಳಗಣ ಪರಿಮಳವ
ಹೊರಸೂಸಿ ಇದಿರಿಂಗೆ ಅರುಹಿಸಬಲ್ಲುದೆ ವಾಯು?
ಕೊಡಗೂಸಿನೊಳಗಣ ಮೊಲೆ ಮುಡಿಯ
ಹಡೆದ ತಾಯಿ-ತಂದೆಗಳೆಂದಡೆ
ಕಾಣಿಸಿಕೊಡಬಲ್ಲರೆ ಕಾಬವರ ಕಣ್ಣಿಗೆ?
ಪಕ್ವಕ್ಕಲ್ಲದೆ ಪರಿಣಾಮ ಕಾಣಿಸದು ಕಾಣಾ!
ರಾಮನಾಥ. ॥ ೧೫೦ ॥

೮೬೦

ಸತ್ಯದ ನುಡಿ ತೀರ್ಥ, ಭಕ್ತಿಯ ನಡೆ ತೀರ್ಥ,
ಮುಕ್ತಿಯ ಪ್ರಸಂಗ ಉಳ್ಳಡೆ ತೀರ್ಥ,
ಹರಿವ ನದಿ ಎತ್ತಣಾ ತೀರ್ಥ! ರಾಮನಾಥ. ॥ ೧೫೧ ॥

೮೬೧

ಸತಿಪತಿಗಳೊಂದಾದ ಭಕ್ತಿ ಹಿತವಾಗಿಪ್ಪುದು ಶಿವಂಗೆ.
ಸತಿಪತಿಗಳೊಂದಾಗದವನ ಭಕ್ತಿ
ಅಮೃತದೊಳು ವಿಷ ಬೆರೆದಂತೆ ಕಾಣಾ! ರಾಮನಾಥ. ॥ ೧೫೨ ॥

೮೬೨

ಸತಿಯರ ಸಂಗವನು ಅತಿಶಯ ಗ್ರಾಸವನು
ಪೃಥ್ವಿಗೀಶ್ವರನ ಪೂಜೆಯನು
ಅರಿವುಳ್ಳಡೆ ಪೆರರ ಕೈಯಿಂದ ಮಾಡಿಸುವರೆ! ॥ ೧೫೩ ॥

೮೬೩

ಸರ್ಪನೂ ಕೂರ್ಮನೂ ದಿಕ್ಕರಿಗೆಳೆಂಟೂ
ಭೂಮಿಯ ಪೊತ್ತಿರ್ದಪರೆಂದು
ಅನಿಶಾ ಹೊತ್ತಿಪ್ಪವರಿಗೆ ಅತ್ತಲಾಧಾರ ಇತ್ತಲಾಧಾರ.
ಉತ್ತರಗುಡುವವರಿಗೆ ಇಕ್ಕುವೆ ಮುಂಡಿಗೆಯ.
ಎತ್ತುವರುಳ್ಳಡೆ ತೋರಿರೈ, ರಾಮನಾಥ. ॥ ೧೫೪ ॥

೮೬೪

ಸರ್ವಜ್ಞಾನಿಗಳಾಗಿ ಅಚ್ಚುಗ ಬಡುವಡೆ,
ಹಬ್ಬಿದ ಪಾಪದ ಫಲ ಉಂಬಡೆ,
ಒಬ್ಬುಳ್ಳವನೆ ಬಿತ್ತಿ ಆ ಒಬ್ಬುಳ್ಳವನೆ ಬೆಳೆವಡೆ,
ಕಬ್ಬುನ ಹುಳಿವಡೆ ಇನ್ನೇವೆ, ರಾಮನಾಥ. ॥ ೧೫೫ ॥

೮೬೫

ಸ್ವಸ್ತಿಕಾಸನದಲ್ಲಿದ್ದು ಅತ್ತಿತ್ತ ಚಲಿಸದೆ
ನೆಟ್ಟೆಲುವ ನೆಟ್ಟನೆ ಮಾಡಿ,
ಅಧೋವಾಯುವನೂರ್ಧ್ವಮುಖಕ್ಕೆ ತಂದು,
ಕಂಠ ಸಂಕೋಚದಿಂದ ಊರ್ಧ್ವವಾಯುವ ನಿಲ್ಲೆಂದು ನಿಲಿಸಿ,
ಮನವ ತೊಡರಿಸಿ,
ಉನ್ಮನಿಯ ಸ್ಥಾನದಲ್ಲಿ ಬಂಧವನವಂ ಮಾಡಿ,

ಅಂತರ್ಬಾಹ್ಯ ವ್ಯಾಪಾರವಳಿದು ನಿಂದುದೆ ಯೋಗ,
ರಾಮನಾಥ. ॥ ೧೫೬ ॥

೮೬೬

ಸಾಗರದೊಳಗಣ ಕಿಚ್ಚಿನ ಸಾಕಾರದಂತೆ,
ಸಸಿಯೊಳಗಣ ಫಲಪುಷ್ಪ ರುಚಿಯ ಪರಿಮಳದಂತೆ,
ಮನದ ಮರೆಯ ಮಾತು
ನೆನಹಿನಲ್ಲಿ ಅರಿದು, ನಾಲಗೆಯು ನುಡಿವಾಗಲಲ್ಲದೆ
ಕಾಣಬಾರದು, ಕೇಳಬಾರದು
ಒಂದಂಗದೊಳಗಡಗಿದ ನೂರೊಂದರ ಪರಿ,
ರಾಮನಾಥ. ॥ ೧೫೭ ॥

೮೬೭

ಸಾಸಿವೆಯಷ್ಟು ಭಕ್ತಿಯಳ್ಳನ್ನಕ್ಕ
ವೇಶಿಯ ಮುಟ್ಟಿದಡೆ
ಹೊಲೆಯರ ಮನೆಯ ಮುರುಹ ಹೊರಗಿರಿಸಿದಡೆ
ಹಂದಿ ಬಂದು ಮೂಸಿ ಮೇದಂತೆ ಕಾಣಾ !ರಾಮನಾಥ. ॥ ೧೫೮ ॥

೮೬೮

ಸೊಡರು ಕೆಟ್ಟಡೆ ದೃಷ್ಟಿಯಡಗಿಪ್ಪ ಭೇದವನು
ಒಡಲು ಕೆಟ್ಟಡೆ ಜೀವವಾವೆಡೆಯಲಡಗೂದು?
ಈ ಮರೆಯೆಡೆಯಣ ಭೇದವ ಭೇದಿಸಬಲ್ಲಡೆ
ಪೊಡವಿಗೆ ಗುರುವಪ್ಪನೆಂದು
ಮುಡಿಗೆಯನಿಕ್ಕಿದೆ ಪರಸಮಯಕ್ಕೆಂದು, ರಾಮನಾಥ.॥ ೧೫೯ ॥

೮೬೯

ಹಂದಿ ಶ್ರೀಗಂಧವನೆಂದೂ ಒಲ್ಲದು.
ಕುಂದದೆ ಹರಿವುದು ಅಮೇಧ್ಯಕ್ಕೆ.
ಶಿವಭಕ್ತನಾಗಿರ್ದು ಹಿಂದ ಬೆರಸಿದಡೆ
ಆ ಹಂದಿಗಿಂದವು ಕರಕಷ್ಟ ಕಾಣಾ! ರಾಮನಾಥ. ॥ ೧೬೦ ॥

೮೭೦

ಹಂದಿ ಶ್ರೀಗಂಧವ ಹೂಸಿದಡೇನು?
ಗಂಧರಾಜನಾಗಬಲ್ಲುದೆ?
ನವಿಲು ನಲಿಯಿತ್ತೆಂದಡೆ
ಕಾಕೋಳಿ ಪುಚ್ಚವ ತರಕೊಂಡಂತೆ
ಕರ್ಮಿಗಳ ಭಕ್ತಿ!
ಹೊರವೇಷದ ವಿಭೂತಿ ರುದ್ರಾಕ್ಷಿಯ ಹೂಸಿದಡೇನು
ತೆರನನರಿದು ಮರವೆಯ ಕಳದು
ಮಾತಿನಂತೆ ನೀತಿಯುಳ್ಳಡೆ
ಅವರ ಅಜಾತರೆಂಬೆ ಕಾಣಾ! ರಾಮನಾಥ. ॥ ೧೬೧ ॥

೮೭೧

ಹರ ತನ್ನ ಭಕ್ತರ ತಿರಿವಂತೆ ಮಾಡುವ
ಒರದು ನೋಡುವ ಮಿಸುನಿಯ ಚಿನ್ನದಂತೆ.
ಅರದು ನೋಡುವ ಚಂದನದಂತೆ.
ಅರಿದು ನೋಡುವ ಕಬ್ಬಿನ ಕೋಲಿನಂತೆ.
ಬೆದರದೆ ಬೆಚ್ಚದೆ ಇರ್ದಡೆ
ಕರವಿಡಿದೆತ್ತಿಕೊಂಬ, ನಮ್ಮ ರಾಮನಾಥನು. ॥ ೧೬೨ ॥

೮೭೨

ಹರಿದ ಗೋಣಿಯಲೊಬ್ಬ ಕಳವೆಯ ತುಂಬಿದ.
ಇರುಳೆಲ್ಲಾ ನಡೆದನಾ ಸುಂಕಕಂಜಿ.
ಕಳವೆಯೆಲ್ಲಾ ಹೋಗಿ ಬರಿಗೋಣಿ ಉಳಿಯಿತ್ತು!
ಅಳಿಮನದವನ ಭಕ್ತಿ ಇಂತಾಯಿತ್ತು! ರಾಮನಾಥ. ॥ ೧೬೩ ॥

೮೭೩

ಹಸ್ತಾಬ್ಜ ಮಥನದಿಂದೊತ್ತಿ ಭಸ್ಮವ ಮಾಡಿ
ಮತ್ತೆ ಪಂಚಾಕ್ಷರಿಯ ಜಪಾವಳಿಯ
ಚಿತ್ತ ಶ್ರೋತ್ರದೊಳು ಮತ್ತೆ ಧಾರೆಯನೆರೆಯೆ
ಸತ್ಯವದು ನಿನ್ನಂತೆ, ರಾಮನಾಥ. ॥ ೧೬೪ ॥

೮೭೪

ಹಸಿವಿನಲ್ಲಿ ವಿಷಯದಲ್ಲಿ ಭವಿಯ ಬೆರಸಿದೆನಾದಡೆ
ಅವ ವಿಷಮಾಕ್ಷ! ನಿಮಗೆ ದೂರ.
ದಶ ಶತಕೋಟಿ ವರುಷ ನರಕದೊಳಗಿಪ ಕಾಣಾ!
ರಾಮನಾಥ. ॥ ೧೬೫ ॥

೮೭೫

ಹಸಿವಿಲ್ಲದ ಬೊಂಬೆಗೆ ತೃಷೆಯಿಲ್ಲದ ನೀರೆರೆದು
ಮಸಕವಿಲ್ಲದ ಮಾತ ಮನದಲ್ಲಿ ಹೇಳಿ
ಹೆಸರಿಲ್ಲದೆ ಕರೆದಡೆ ಓ! ಎಂದವ ನೀನೊ ನಾನೋ!
ರಾಮನಾಥ. ॥ ೧೬೬ ॥

೮೭೬

ಹಸಿವೆಂಬ ಹೆಬ್ಬಾವು ಬಸುರ ಬಂದು ಹಿಡಿದಡೆ
ವಿಷವೇರಿತ್ತಯ್ಯಾ ಆಪಾದಮಸ್ತಕಕ್ಕೆ.
ಹಸಿವಿಗನ್ನವನಿಕ್ಕಿ ವಿಷವನಿಳುಹಬಲ್ಲಡೆ
ವಸುಧೆಯೊಳಗೆ ಆತನೆ ಗಾರುಡಿಗ ಕಾಣಾ!
ರಾಮನಾಥ. ॥ ೧೬೭ ॥

೮೭೭

ಹಾಸೇಕೆ ಹೊರಸೇಕೆ? ಲೇಸೇಕೆ ಹೊಲ್ಲೆಪವೇಕೆ?
ನಿಮ್ಮ ಸಾತ್ವಿಕರಿದಿರಲ್ಲಿ ನಾನೇಕೆ?
ಸರಿಹೊರಸು ನಿಮ್ಮ ಸರಿಪಂತಿಯೆಂಬ ಹೇಸಿಕೆಯುಂಟೆ?
ರಾಮನಾಥ. ॥ ೧೬೮ ॥

೮೭೮

ಹಿರಿದಪ್ಪ [ಆ] ಹಾರವ ಕೊಂಡು
ಸ್ವರವು ಬಿಂದುವಿನಿಚ್ಛೆಯಲ್ಲಿ ಹರಿದಾಡುವವರು ಯೋಗಿಗಳೆ?
ಅಲ್ಲಲ್ಲ ನಿಲ್ಲು!
ಸ್ವರವು ಸುಸ್ವರವಾಗಿ
ಬಿಂದು ತರಹರವಾಗಿರಬಲ್ಲಾತನೆ ಯೋಗಿ ಕಾಣಾ!
ರಾಮನಾಥ. ॥ ೧೬೯ ॥

೮೭೯

ಹೂವಿನೊಳಗಣ ಕಂಪ ಹೊರಸೂಸಿ ಸುಳಿವ ಅನಿಲನಂತೆ
ಅಮೃತದೊಳಗಣ ರುಚಿಯ ನಾಲಿಗೆಯ ತುದಿಯಲ್ಲಿ
ಅರಿವನ ಚೇತನದಂತೆ
ನಿಲವಿಲ್ಲದ ರೂಪ ಕಳೆಯಲ್ಲಿ ವೇದಿಸುವವನ ಪರಿ!
ರಾಮನಾಥ. ॥ ೧೭೦ ॥

೮೮೦

ಹೆಂಬೇಡಿಗೆ ಹಿಡಿಯಬಹುದೆ ಹೇಳಿಗೆಯೊಳಗಣ ಹಾವ?
ತೊರೆಯಬಹುದೆ ಹೊನ್ನು ಹೆಣ್ಣು ಮಣ್ಣ
ನಿನ್ನನರಿಯದ ನರಗುರಿಗಳಿಗೆ! ರಾಮನಾಥ. ॥ ೧೭೧ ॥

೮೮೧

ಹೆಣ್ಣ ಕಂಡು ಹೆಚ್ಚಿ ಹೆಕ್ಕಳಬಡುವಂತೆ
ಕಣ್ಣಿಟ್ಟು ನೋಡಿರೋ ಶಿವಲಿಂಗದೇವನ
ಕರಣದಿಚ್ಛೆಗೆ ಹರಿದು, ನರಕದಲ್ಲಿ ನೆರಮು
ಬರುದೊರೆ ಹೋಗದೆ ಮರೆಯದೆ ಪೂಜಿಸಿ,
ನಮ್ಮ ರಾಮನಾಥನ. ॥ ೧೭೨ ॥

೮೮೨

ಹೇಳಬಲ್ಲಡೆ ಬೋಳು ಕೇಳಬಲ್ಲಡೆ ಬೋಳು
ಹೇಳಲು ಕೇಳಲು ಅರಿಯದಿದ್ದಡೆ
ಇವೆಲ್ಲ ಜಾಳು ಬೋಳು ಕಾಣಾ! ರಾಮನಾಥ. ॥ ೧೭೩ ॥

೮೮೩

ಹೇಳಿತ್ತ ಕೇಳುವನ ಕೀಳಿನೊಳಗಿರೆ ಲೇಸು!
ಹೇಳಿತ್ತ ಕೇಳದ ಕಡುಮೂರ್ಖನ
ಕೋಣೆಯಲ್ಲಿರಲಾಗದು! ರಾಮನಾಥ. ॥ ೧೭೪ ॥

೮೮೪

ಹೊಲಬನರಿಯದ ಗುರು
ಸುಲಭನಲ್ಲದ ಶಿಷ್ಯ
ಕೆಲಬಲನ ನೋಡದುಪದೇಶ
ಅಂಧಕನ ಲಾಭ ಹೊಕ್ಕಂತೆ ಕಾಣಾ! ರಾಮನಾಥ. ॥ ೧೭೫ ॥

೮೮೫

ಹೊಲೆಯರ ಬಾವಿಯಲೊಂದು ಎಲು ನಟ್ಟಿದ್ದಡೆ
ಹೊಲೆಯೆಂಬುದು ಲೋಕವೆಲ್ಲ.
ಹಲವೆಲುವಿದ್ದ ಬಾಯಿ ಒಲವರವ ನುಡಿವಡೆ
ಹೊಲೆಯರ ಬಾವಿಯಿಂದ ಕರಕಷ್ಟ ಕಾಣಾ! ರಾಮನಾಥ. ॥ ೧೭೬ ॥

## ಜೋದರ ಮಾಯಣ್ಣನ ವಚನ

೮೮೬

ಎನ್ನ ಪ್ರಾಣ ಮನ ಬುದ್ಧಿ ಚಿತ್ತಂಗಳು ನಿಮ್ಮ ತೊತ್ತಿರಯ್ಯಾ.
ಸತ್ವ ರಜ ತಮಂಗಳು ನಿಮ್ಮ ಭೃತ್ಯರಯ್ಯಾ.
ಅಂತಃಕರಣ ಚತುಷ್ಟಯಂಗಳು ನಿಮ್ಮ ಮಂತ್ರಿಗಳಯ್ಯಾ.
ಪಂಚೇಂದ್ರಿಯಂಗಳು ನಿಮ್ಮ ಪಡಿಹಾರರಯ್ಯಾ.
ಅರಿಷಡ್ವರ್ಗಂಗಳು ನಿಮ್ಮ ಲೆಂಕರಯ್ಯಾ.
ಸಪ್ತಧಾತುಗಳು ನಿಮ್ಮ ಬಾಣಸಿಗರಯ್ಯಾ.
ಅಷ್ಟಮದಂಗಳು ನಿಮ್ಮ ದಳವಾಯಿಗಳಯ್ಯಾ.
ನವರಸಂಗಳು ನಿಮ್ಮ ಭಂಡಾರಿಗಳಯ್ಯಾ.
ದಶವಾಯಗಳು ನಿಮ್ಮ ಛತ್ರ ಚಾಮರ ಸೀಗುರಿಗಳಯ್ಯಾ.
ಷೋಡಶಕಳೆಗಳು ನಿಮ್ಮ ರಾಣಿವಾಸವಯ್ಯಾ.
ಶಂಭು ಸೋಮನಾಥಲಿಂಗ,
ನಿಮಗೆನ್ನ ಕಾಯ ಮುಂತಾಗಿ ಬಾಹತ್ತರ
ಡಿಂಗರಿಗರಯ್ಯಾ! ॥ ೧ ॥

೮೮೭

ಕಾಮ ಹೊದ್ದಲಮ್ಮದು ಬಲ್ಲಾಳನ ನೆನೆದಡೆ
ಕ್ರೋಧ ಹೊದ್ದಲಮ್ಮದು ಪುರಾತನರ ನೆನೆದಡೆ
ಇವಾವೂ ಹೊದ್ದಲಮ್ಮವು
ಶಂಭು ಸೋಮನಾಥಲಿಂಗ ಶರಣೆಂಬವಂಗೆ! ॥ ೨ ॥

೮೮೮

ನಡೆಯಿಂದ ನುಡಿ ಗಡಣೆಸಿತ್ತು ಮನವೆ
ಬೆಡಗು ಬಿನ್ನಾಣವನಾಡದಿರು ಮನವೆ.
ಎನ್ನೊಡೆಯ ಶಂಭು ಸೋಮನಾಥಲಿಂಗ ಭಾಷೆ ಪರಿಪಾಲಕನಾಗಿ
ಹಿಡಿದುದ ಬಿಡೆನೆಂಬ ನುಡಿಗೊರೆಯಾದುದನರಿಯಾ. ॥ ೩ ॥

೮೮೯

ಮುನ್ನ ಪರಸತಿ ಪಾರ್ವತಿಯೆಂದು
ನಡೆಸಿತ್ತು ನುಡಿಸಿತ್ತು ಗುರುವಚನ.
ಬಳಿಕ ಎನ್ನ ಶರಣಸತಿಯೆಂದು
ನಡೆಸಿತ್ತು ನುಡಿಸಿತ್ತು ಗುರುವಚನ.
ಇನ್ನು ಸತಿಯರೆಲ್ಲಾ ಗುರುಸತಿಯರೆಂದು
ನಡೆಸಿತ್ತು ನುಡಿಸಿತ್ತು ಗುರುವಚನ.
ನಡೆದುದು ತಪ್ಪದೆ ನುಡಿದುದು ಹುಸಿಯದೆ
ನಡೆಸಿತ್ತು ನುಡಿಸಿತ್ತು ಗುರುವಚನ.
ಅಚ್ಚಿಗವಿಲ್ಲದೆ ಮಚ್ಚಿದ ಮನವನು
ನಿಶ್ಚಿಂತ ಮಾಡಿತ್ತು ಗುರುವಚನ.
ಶಂಭು ಸೋಮನಾಥಲಿಂಗ
ಸಂಗ ಸುಸಂಗವ ಮಾಡಿತ್ತು ಗುರುವಚನ. ॥ ೪ ॥

೮೯೦

ಲಿಂಗಭ್ರಮೆ ಲಿಂಗವಿಕಳಗೊಂಡು
ಲಿಂಗ ಜಂಗಮವೆಂಬೆ,
ಜಂಗಮ ಲಿಂಗವೆಂಬೆ,
ಪ್ರಸಾದವ ನೈವೇದ್ಯವೆಂಬೆ,
ಶಂಭು ಸೋಮನಾಥಲಿಂಗಾ,
ನೀವು ರುಚಿಸುವ ಕಾರಣ. ॥ ೫ ॥

## ಡಕ್ಕೆಯ ಬೊಮ್ಮಣ್ಣನ ವಚನ

೮೯೧

ಅಂಗವುಂಟಾದಲ್ಲಿ ಲಿಂಗವನರಿಯಬೇಕು.
ಲಿಂಗವುಂಟಾದಲ್ಲಿ ಚೇತನ ಭೂತಹಿತವನರಿಯಬೇಕು.
ಆ ಅರಿವು ನೆಲೆಗೊಂಡಲ್ಲಿ ಒಳಗು ಹೊರಗ ವಿಚಾರಸಲಿಲ್ಲ.
ಮಹಾರ್ಣವ ಬಲುಜಲವನಿಂಬಿಟ್ಟುಕೊಂಡಂತೆ.
ಶರಣತತಿಯಲ್ಲಿ ಲಿಂಗಕುಲದಲ್ಲಿ ಜಂಗಮಪದದಲ್ಲಿ ಗುರುಸ್ಥಲವಲ್ಲಿ
ಕಂಗಳ ಮುಂದೆ ಮಹೇಂದ್ರಜಾಲ ನಿಂದಂತೆ,
ನಿಂದ ನಿಲವೆ ಸದ್ಭಕ್ತನಿರವು;
ಕಾಲಾಂತಕ ಭೀಮೇಶ್ವರಲಿಂಗದ ನಿಜವಾಸದ ಬೆಳಗು. ॥ ೧ ॥

೮೯೨

ಅಂಗವೆಂಬ ಮೊರದಲ್ಲಿ ವಿಕಾರವೆಂಬ ಕೋಣನನೇರಿ
ತಾಯಿ ಬಂದವಳಯ್ಯಾ ಮೂರು ಮುಖವಾಗಿ.
ಮೂರು ಮುಖದವ್ವೆಯ ಬಾಗಿಲಲ್ಲಿ
ಬಾಧೆಬಡುವರೆಲ್ಲರೂ ಹೋದರು ಹೊಲಬುದಪ್ಪಿ
ಕಾಲಾಂತಕ ಭೀಮೇಶ್ವರಲಿಂಗವನರಿಯದೆ. ॥ ೨ ॥

೮೯೩

ಅಂಗಸ್ಥಲವಾರು ಲಿಂಗಸ್ಥಲ ಮೂರು ಪ್ರಾಣಲಿಂಗಸ್ಥಲ ಎರಡು
ಕೂಡಿ ಏಕಾದಶವಾಯಿತ್ತು.
ದಶಗುಣವೊಂದರಲ್ಲಿ ಅಡಗಿ
ಕಾಲಾಂತಕ ಭೀಮೇಶ್ವರಲಿಂಗವೆಂಬ ನಾಮವಾಯಿತ್ತು. ॥ ೩ ॥

೮೯೪

ಅರ್ಚಿಸಿ ಪೂಜಿಸುವುದಕ್ಕೆ ಅಂಗವಾಗಿ,
ಮನ ನೆನೆವುದಕ್ಕೆ ಘನತರವಾಗಿ,

ಪೂಜಿಸುವುದಕ್ಕೆ ಪುಣ್ಯಮೂರ್ತಿಯಾಗಿ,
ಭಾವ ನೆನೆವುದಕ್ಕೆ ಭವಗೇಡಿಯಾಗಿ,
ಉಭಯದಂಗವ ತಾಳಿ ನಿಂದ ಕಾಲಾಂತಕ ಭೀಮೇಶ್ವರ
ಲಿಂಗವು ತಾನೆ. ॥ ೪ ॥

೮೯೫

ಅಪ್ಪುಮಯವೆಲ್ಲವು ಶಕ್ತಿರೂಪು;
ಅಸ್ಥಿಮಯವೆಲ್ಲವು ವಸ್ತುರೂಪೆಂಬರು.
ಆ ಅಪ್ಪುಮಯದಲ್ಲಿ ಅಸ್ಥಿ ಬಲಿದು ಗಟ್ಟಿಗೊಂಡ ಮತ್ತೆ,
ವಸ್ತುಮಯ ಏತರಿಂದಾಯಿತ್ತು?
ಇದರ ಬಿನ್ನಾಣದ ಬೆಡಗ ಅಹುದೆನಬಾರದು,
ಅಲ್ಲಾಯೆಂದೆನಬಾರದು.
ಉದಕದ ಬಹುವರ್ಣದಂತೆ,
ಮಾರುತನ ಜೀವದಂತೆ,
ಅನಲನ ಕಾಲು ನಾಲಗೆಯಂತೆ,
ಹೆರೆಹಿಂಗದ ಮಾಯೆ ಭಾವಿಸಿದಲ್ಲಿಯೆ ನಿಂದಿತ್ತು.
ಕಾಲಾಂತಕ ಭೀಮೇಶ್ವರಲಿಂಗವೆಂದಲ್ಲಿ ಹೆರೆಹಿಂಗಿತ್ತು
ಮಾಯೆ. ॥ ೫ ॥

೮೯೬

ಅಪ್ಪುವಿನಿಂದ ಸಕಲ ಮಯವೆಲ್ಲವು ಕಲ್ಪಿಸಿ,
ಅಪ್ಪುವಿನಿಂದ ಮಲ ನಿರ್ಮಲವೆಂಬುದಾಯಿತ್ತು.
ವಸ್ತುವಿನಿಂದ ರೂಪು ನಿರೂಪೆಂಬುದಾಯಿತ್ತು.
ಜಲದಿಂದಾದ ಪಂಕವ ಜಲ ತೊಳೆದು ನಿರ್ಮಲವಾದಂತೆ,
ನಿರೂಪು ಸ್ವರೂಪನಾಗಿ ಸ್ವರೂಪು ನಿರೂಪನಾಗಿ ಉಭಯವು ನೀನಾಗಿ,
ನಾ ಕಂಡು ನುಡಿವುದಕ್ಕೆ ಎನಗೊಂದೆಡೆಯಿಲ್ಲ,
ಕಾಲಾಂತಕ ಭೀಮೇಶ್ವರಲಿಂಗವು ನೀನೆಯಾಗಿ. ॥ ೬ ॥

೮೯೭

ಅರಿವುಳ್ಳವಂಗೆ ಆರನರಿದೆಹೆನೆಂಬುದೆ ಮಾಯೆ.
ಮೂರ ಮರೆದು ಬೇರೊಂದ ಕಂಡೆಹೆನೆಂಬುದೆ ಮಾಯೆ.

ನುಡಿಯ ಸುಡಿವವರಲ್ಲಿ ಎಡೆ ಮಾತನಾಡಿ
ಬೇರೊಂವೆಡೆವುಂಟೆಂಬುದೆ ಮಾಯೆ.
ಘಟಮಟವೆಂಬ ಮನೆಯಲ್ಲಿ ಮರವೆಯೆಂಬ ಮಾರಿಯ ಹೊತ್ತು
ಭವವೆಂಬ ಬಾಗಿಲಲ್ಲಿ ತಿರುಗಾಡುತ್ತಿದ್ದೇನೆ.
ಡಕ್ಕೆಯ ಡಾವರಕ್ಕೆ ಸಿಕ್ಕಿ ನೊಂದೆನು.
ಇದರಚ್ಚುಗವ ಬಿಡಿಸು,
ಕಾಲಾಂತಕ ಭೀಮೇಶ್ವರಲಿಂಗ. ॥ ೭ ॥

೬೯೮

ಅಲಗಿನ ಮೊನೆ ಆಯದಲ್ಲಿ ಬಿದ್ದ ಮತ್ತೆ
ನೆಲೆಗೊಳ್ಳಬಲ್ಲುದೆ ಪ್ರಾಣ?
ಅರಿದು ಮಾಡುವ ಮಾಟ ಅನುಸರಣೆಯಾದಲ್ಲಿ
ಅಲಗು ಜಾರಿ ಒರೆ ತಾಗಿದಂತೆ.
ಭಕ್ತಿ ಬರುಮೊರೆ ಹೋಯಿತು
ಕಾಲಾಂತಕ ಭೀಮೇಶ್ವರಲಿಂಗಕ್ಕೆ ದೂರವಾಯಿತ್ತು. ॥ ೮ ॥

೬೯೯

ಅಶನ ಹಸಿದು ಮನುಷ್ಯರ ನುಂಗುವಾಗ
ಅಸು ಆರಿಗೆಂದು ಪ್ರಮಾಣಿಸಬಹುದೆ?
ಉದಕದೊಳಗೆ ಮುಳುಗುತ್ತ ತಾ ಗತಿಗೆಡುತ್ತ
ಆಸೆ ವೆಸೆಯನರಿಯದೆ ಲಘುವಿನ ಮೇಲೆ
ಸಾಗುತಿರ್ಪ ಸಾಧನೆವಂತರ ಸಾಗಿಸಿ ಬದುಕು;
ಕ್ರೀ ನಿಃಕ್ರೀಯೆಂಬುಭಯವ ಘಟಿಸಿ ಬದುಕು,
ಕಾಲಾಂತಕ ಭೀಮೇಶ್ವರಲಿಂಗ ॥ ೯ ॥

೭೦೦

ಅಹಂಕಾರವರತು ಗುರುವಾಗಿ,
ಜಗವರತು ಲಿಂಗವಾಗಿ,
ತ್ರಿವಿಧವರತು ಜಂಗಮವಾಗಿ,
ಸಕಲೇಂದ್ರಿಯದ ಲಂಪಟವರತು ಭಕ್ತನಾಗಿ
ಸಂಸಾರವೆಂಬ ಗಡಬಡೆಯಲ್ಲಿ ಸಿಲುಕದೆ,
ಆವ ಸ್ಥಲದಲ್ಲಿ ನಿಂದು ನೋಡಿದಡೂ ಭಾವಶುದ್ಧವಾಗಿ

ಗುರುವಿಂಗೆ ಗುರುವಾಗಿ, ಲಿಂಗಕ್ಕೆ ಲಿಂಗವಾಗಿ
ಜಂಗಮಕ್ಕೆ ಜಂಗಮವಾಗಿ
ಭಕ್ತರ ಯುಕ್ತಿಯ ಮಾರಿಕೊಂಡಿಪ್ಪ ಸದ್ಭಕ್ತ
ಕಾಲಾಂತಕ ಭೀಮೇಶ್ವರಲಿಂಗವು ತಾನೆ. ॥ ೧೦ ॥

೬೦೧

ಆತ್ಮನಂಗ ಪೃಥ್ವಿಯಂತಿರ್ಪುದೊ?
ಆತ್ಮನಂಗ ಅಪ್ಪುವಿನಂತಿರ್ಪುದೊ?
ಆತ್ಮನಂಗ ವಾಯುವಿನಂತಿರ್ಪುದೊ?
ಆತ್ಮನಂಗ ಆಕಾಶದಂತಿರ್ಪುದೊ?
ಪಂಚಭೂತಿಕಂಗಳ ಮೀರಿ ಬೇರೊಂದು ನೆಲೆಯಾಗಿರ್ಪುದೊ?
ತತ್ವಮಸಿಯೆಂಬಲ್ಲಿ ಪಶುಪತಿ ನೀನಾದೆಯಲ್ಲಾ,
ಕಾಲಾಂತಕ ಭೀಮೇಶ್ವರಲಿಂಗವೆ. ॥ ೧೧ ॥

೬೦೨

ಆತ್ಮವುಳ್ಳನ್ನಕ್ಕ ಘಟ ವೈಭವವಾಗಿದ್ದಿತ್ತು.
ವಸ್ತು ಕಳೆ ಉಳ್ಳನ್ನಕ್ಕ ಶಿಲಾಮೂರ್ತಿ ಲಿಂಗ ಕಳೆಯಾಯಿತ್ತು.
ಗಂಧವಿಲ್ಲದಿರೆ ಚಂದನವೆಂಬ ನಾಮವಡಗಿ
ಸ್ಥಾವರವೆಲ್ಲವು ಸರಿಯಾಯಿತ್ತು.
ಕಳೆಯಿಲ್ಲದಿರೆ ಮಾಡಿದ ಗೂಡು ಸರಿ,
ನಿಂದ ಶಿಲೆಯೂ ಸರಿಯಾಯಿತ್ತು.
ವಿಶ್ವಾಸದೆರಕ ಕಳಾಮೂರ್ತಿಯ ಬೆಳಗು ಒಡಗೂಡಲಾಗಿ
ಕಾಲಾಂತಕ ಭೀಮೇಶ್ವರಲಿಂಗವಾಯಿತ್ತು. ॥ ೧೨ ॥

೬೦೩

ಆರು ದರುಶನ ಹದಿನೆಂಟು ಜಾತಿವೊಳಗಾದ ಜೀವಸಂಗಳಿಗೆ,
ಕುಡಿವ ನೀರು, ಬೇಯಿಸುವ ಬೆಂಕಿ, ಅಡಗುವ ಧರೆ ಒಂದೆನಬಹುದೆ?
ಸುಕ್ಷೇತ್ರ ವಾಸಂಗಳಲ್ಲಿ ಮೌಕ್ತಿಕರತ್ನ ಮಲಯಜ ಹಿಮಜಲ
ಮುಂತಾದ ಅಚೇತನ ಚೇತನ ವಸ್ತು ಕುಂಭಿನಿಯಲ್ಲಿ
ವಿಶೇಷ ವಾಸಂಗಳಲ್ಲಿ ಹುಟ್ಟಿದುದ ಕಂಡುಕೊಂಡು,
ಮತ್ತೆ ಮನೆಮಾರಿ ಒಡೆಯಂಗೆ ಸರಿಯಿಲ್ಲಾ ಎಂದು

ಅಕ್ಕನ ಕೊಂಡು ಬಂದು ಡಕ್ಕೆಯ ಬಾರಿಸುತ್ತಿದ್ದೇನೆ,
ಕಾಲಾಂತಕ ಭೀಮೇಶ್ವರಲಿಂಗವಲ್ಲದೆ ಇಲ್ಲಾ ಇಲ್ಲಾ
ಎಂದು. ॥ ೧೩ ॥

೬೦೪

ಆವ ಸ್ವಕಾಯದಿಂದಾದಡು ಆಗಲಿ
ಭಾವಶುದ್ಧವಾಗಿ ಮಾಡುವ ಜಂಗಮ ಪೂಜೆ,
ಸೂರ ಹುಲ್ಲು ಚುಳುಕೋದಕ ನೇಮ ಕ್ರೀ ತಪ್ಪದೆ ಮಾಡುವುದೆ
ದೇವಪೂಜೆ.
ಆವ ಪ್ರಸಂಗ ಬಂದಡೆ ಖಂಡಸಿ ನುಡಿವುದೆ ಪಂಡಿತನಿರವು.
ತ್ರಿವಿಧ ಬಂದು ಮುಂದಿರಲಿಕ್ಕೆ
ಆದರಂದವ ನೋಡದಿಪ್ಪುದೆ ನಿಸ್ಸಂಗ ಸುಸಂಗಿಯ ಇರವು.
ಇಂತೀ ವಿಚಾರವನರಿದಲ್ಲಿ ಡಕ್ಕೆಯ ದನಿ ಹೊರಗಾಯಿತ್ತು.
ಕಾಲಾಂತಕ ಭೀಮೇಶ್ವರಲಿಂಗವು ಒಳಗಾಯಿತ್ತು. ॥ ೧೪ ॥

೬೦೫

ಇಕ್ಕಿಕ್ಕುವ ಠಾವಿನಲ್ಲಿ ಮಕ್ಕಳಂತೆ ತಳಿಗೆಯ ತೆಗೆಯದೆ,
ಕೊಟ್ಟಪ ಕೊಟ್ಟಪರೆಂದು ಭಟ್ಟರಂತೆ ಅಟ್ಟಳಿಗೊಳಗಾಗದೆ,
ಕೊಂಬ ತೆರದಲ್ಲಿ ಕೊಂಡು ಭಕ್ತಿಯಿಂದ ಬಂದ ತೆರದಲ್ಲಿ ಅನುಕರಿಸಿ,
ಪ್ರಸಂಗವ ಕಂಡಕಂಡವರಲ್ಲಿ ಕೊಂಡಾಡದೆ,
ಈ ಗುಣ ಹಿಂಗಿ ನಿಂದುದು ಗುರುಚರ ಭಾವ,
ಆತ ತಾನೆ ಕಾಲಾಂತಕ ಭೀಮೇಶ್ವರಲಿಂಗವು. ॥ ೧೫ ॥

೬೦೬

ಇಕ್ಷುದಂಡದ ಸಂಪರ್ಕದಲ್ಲಿ ದುತ್ತೂರ ಪಾಮರ ತರು ಬೆಳೆಯಲಿಕ್ಕೆ
ಆ ಇಕ್ಷುದಂಡದ ಸಾರವ ಸಾಗಿಸಬಲ್ಲುದೆ?
ಮದೋನ್ಮತ್ತನಲ್ಲಿ ಶ್ರುತಿ ಸ್ಮೃತಿ ತತ್ವ
ಸರ್ವಸಾರಯುಕ್ತಿಯ ಲೇಖ ವಿದ್ದಡೇನು?
ಕ್ರೀ ಶುದ್ಧತೆಯಿಲ್ಲದವನ ವಾಚಾಯುಕ್ತಿ
ಮೃತ್ತಿಕೆಯ ತೆಪ್ಪವ ಮಚ್ಚಿ ಕೆಟ್ಟವನಿರವಾಯಿತ್ತು.
ಕಾಲಾಂತಕ ಭೀಮೇಶ್ವರಲಿಂಗವನರಿಯದವನ ಯುಕ್ತಿ. ॥ ೧೬ ॥

೬೦೭

ಈಶ್ವರನು ಅಲಂಕೃತರೂಪಾಗಿ ಜಗವ ತಾಳಿ ಬಂದಲ್ಲಿ
ಮಾಯೆಯೆಂಬ ಶಕ್ತಿ ಜ್ಯೋತಿ ಕಾಣದ ಮರೆಯಲ್ಲಿ
ತಮವಡಗಿಪ್ಪ ಭೇದವದಂತೆ.
ಚಿತ್ತಶುದ್ಧವಿಲ್ಲದವರ ಕರ್ತೃ ಭೃತ್ಯ ಸಂಬಂಧ ಉಭಯಕ್ಕೂ ಸರಿ.
ಅರಿದು ಮಾಡುವಲ್ಲಿ ಅವನ ಅನುವನರಿದು ಮಾಡಿಸಿಕೊಂಬಲ್ಲಿ
ಲಾಗಿನ ಪಶುವಿನಂತೆ ಉಭಯಗುಣ ಭೇದ.
ಉಭಯಸ್ಥಲ ನಿರತ ಕಾಲಾಂತಕ ಭೀಮೇಶ್ವರಲಿಂಗವು ತಾನೆ. ॥೧೭॥

೬೦೮

ಉಕ್ಕುದ ಕೊಂಬನ್ನಬರ ಭೃತ್ಯಾಚಾರ ಭಕ್ತಂಗೆ.
ಉಕ್ಕುದನಿಕ್ಕಿದಲ್ಲಿ ಅವನ ಅರ್ಥ ಪ್ರಾಣ ಅಭಿಮಾನಕ್ಕೆ ತಪ್ಪುವನಾದಡೆ
ಕರ್ತೃತ್ವ ಮೊದಲೆ ಕೆಟ್ಟಿತ್ತು,
ಜಂಬುಕಫಲದ ನೇಮವ ಹಿಡಿದಂತಾಯಿತ್ತು,
ಆದರಂಗವ ಕಂಡು ನಿಂದಿಸಿದ ಭಕ್ತಂಗೆ.
ಬಾಗಿಲ ಪೂಜಿಸಿದ ಜಾರೆ ಲಕ್ಷಣದಂತಾಗಬೇಡ.
ನೆರೆ ನಂಬು ಏನ ಹಿಡಿದಲ್ಲಿ,
ಕಾಲಾಂತಕ ಭೀಮೇಶ್ವರಲಿಂಗವನರಿಯಬಲ್ಲಡೆ. ॥೧೮॥

೬೦೯

ಉದಕವ ಬೆರೆಸಿದ ಕುಂಪಟಿಯಂತೆ,
ಬಹುಗಂಧವ ಕೂಡಿದ ವಾಯುವಿನಂತೆ,
ಗುಣ ದೋಷಂಗಳ ವಿಚಾರಿಸದಿಪ್ಪುದು ಸದ್ಭಕ್ತನಿರವು,
ಮಾಡುವ ಭೇದ ಸ್ಥಲ; ಸರಮೃತ್ತಿಕೆಯಲ್ಲಿ ಒಸರಲಿಲ್ಲದೆ ನಿಂದಂತೆ;
ಈಶ್ವರನ ಶರಣರಿಗೆ ಭಕ್ತಿಯ ಮಾಡುವ ದಾಸೋಹದ ಸದ್ಭಕ್ತನ ಇರವು.
ಅದು ಸುಕ್ಷೇತ್ರವಾಸ, ಕಾಲಾಂತಕ ಭೀಮೇಶ್ವರಲಿಂಗನ
ತೆರಪಿಲ್ಲದ ಸುಖವಾಸ. ॥೧೯॥

೬೧೦

ಉಪ್ಪಿನ ನೀರಿಂಗೆ ಪುನನಾಮ ಬಪ್ಪುದಲ್ಲದೆ
ಮುತ್ತಿನ ನೀರಿಂಗೆ ಪುನನಾಮವುಂಟೆ?

ಪೂರ್ವವನಳಿದು ಪುನರ್ಜಾತನಾದಲ್ಲಿ ಮತ್ತೆ ಲೌಕಿಕವ
ಬೆರಸಬಹುದೆ ?
ರುಂದಿಯ ಫಳದಂತೆ ಸಂದೇಹ ನಾಮವಾಯಿತ್ತು.
ಭಕ್ತಜಂಗಮವಾಗಿ ಮರ್ತ್ಯರು ಎನ್ನವರೆಂದಡೆ
ಕರ್ತೃತ್ವ ಭಕ್ತಿಯಿತ್ತಲೆ ಉಳಿಯಿತ್ತು.
ಕಾಲಾಂತಕ ಭೀಮೇಶ್ವರಲಿಂಗನು ಅವರಿಗೆ
ಕತ್ತಲೆಯಾಗಿರ್ಪನು. ॥ ೨೦ ॥

೯೧೧

ಉರಿಯ ಶ್ರೇಷ್ಠಕ್ಕೆ ವಾಯುವೆ ಪ್ರಾಣ,
ಉರಿಯ ನಂದಿಸುವುದಕ್ಕೆ ವಾಯುವೆ ಯಮ.
ಉಭಯವನರಿದು ಮರೆವುದಕ್ಕೆ ಆತ್ಮನೆ ಬೀಜ.
ಆತ್ಮನ ಆತ್ಮನನರಿವುದಕ್ಕೆ ಕಾಲಾಂತಕ ಭೀಮೇಶ್ವರ ಲಿಂಗವೆ
ಪ್ರಾಣ. ॥ ೨೧ ॥

೯೧೨

ಎಂದಿದ್ದು ಶರೀರ ಹುಸಿಯೆಂಬುದನರಿದ ಮತ್ತೆ,
ತ್ರಿವಿಧಕ್ಕೆ ಕೊಂಡಾಡಲೇತಕ್ಕೆ ?
ಇದಿರಿಟ್ಟು ಮಾಡುವ ಮಾಟದಲ್ಲಿ
ಶ್ರುತ ದೃಷ್ಟ ಅನುಮಾನದಲ್ಲಿ ಅರಿದ ಮತ್ತೆ
ಗುರುವಿಂಗೆ ತನು, ಲಿಂಗಕ್ಕೆ ಮನ, ಜಂಗಮಕ್ಕೆ ಧನವ ಕೊಟ್ಟು
ನಿರ್ಮುಕ್ತನಾಗಿರ್ಪ ಭಕ್ತನೆ ಕಾಲಾಂತಕ ಭೀಮೇಶ್ವರಲಿಂಗವು
ತಾನೆ. ॥ ೨೨ ॥

೯೧೩

ಎನ್ನ ಮನವೆ ಬಸವಣ್ಣನು.
ಎನ್ನ ಬುದ್ಧಿಯೆ ಚನ್ನಬಸವಣ್ಣನು.
ಎನ್ನ ಚಿತ್ತವೆ ಸಿದ್ಧರಾಮಯ್ಯನು.
ಎನ್ನ ಅಹಂಕಾರವೆ ಮಡಿವಾಳಯ್ಯನು.
ಎನ್ನ ಕ್ಷಮೆಯೆ ನಿಜಗುಣದೇವರು.
ಎನ್ನ ದಮೆಯೆ ಘಟ್ಟಿವಾಳಯ್ಯನು.

ಎನ್ನ ಶಾಂತಿಯೆ ಅಜಗಣ್ಣನು.
ಎನ್ನ ಸೈರಣೆಯೆ ಪ್ರಭುದೇವರು.
ಎನ್ನ ಹರುಷವೆ ಏಳುನೂರೆಪ್ಪತ್ತು ಅಮರಗಣಂಗಳು.
ಇಂತಿವರ ಕರುಣದಿಂದಲಾನು ಬದುಕಿದೆನಯ್ಯಾ,
ಕಾಲಾಂತಕ ಭೀಮೇಶ್ವಲಿಂಗವೆ. ॥ ೨೩ ॥

೯೧೪

ಕವಿಯ ಹುಗತೆ, ಗಮಕಿಯ ಸಂಚ,
ವಾದಿಯ ಚೊಕ್ಕೆಹ, ವಾಗ್ಮಿಯ ಚೇತನ,
ಇಂತೀ ಚತುಷ್ಪಯದಲ್ಲಿ ಯುಕ್ತಿವಂತನಾದಡೇನು?
ಭಕ್ತಿಯನರಿಯಬೇಕು, ಸತ್ಯದಲ್ಲಿ ನಡೆಯಬೇಕು,
ವಿರಕ್ತಿಯಲ್ಲಿ ವಿಚಾರಿಸಿ ನಿಲ್ಲಬೇಕು.
ಈ ಗುಣ ಡಕ್ಕೆಯ ಬೊಮ್ಮನ ಭಕ್ತಿ
ಕಾಲಾಂತಕ ಭೀಮೇಶ್ವರಲಿಂಗವನರಿವವನ ಸದ್ಭಕ್ತಿ
ಯುಕ್ತಿ. ॥ ೨೪ ॥

೯೧೫

ಕಾಯಕ್ಕೆ ಲಿಂಗವ ಸಾಹಿತ್ಯವ ಮಾಡುವಾಗ
ಕರಣಂಗಳು ಮುಂಚು, ಕಾಯ ಹಿಂಚಾಗಿರಬೇಕು.
ಆತ್ಮನನರಿವಾಗ ಕುರುಹಿನ ಭಾವವೆಲ್ಲಿದ್ದಿತ್ತು?
ಅಂಗ ನಿರಂಗವ ಕೂಡಿ ಸಂಘಟಿಸುವಾಗ
ಚಂದನ ಗಂಧದಂತೆ ಕ್ರೀ ಜ್ಞಾನ ಭೇದ.
ಅದರಂಗವ ತಿಳಿದಲ್ಲಿ ಕಾಲಾಂತಕ ಭೀಮೇಶ್ವರ
ಲಿಂಗವನರಿದುದು. ॥ ೨೫ ॥

೯೧೬

ಕಾಯನೆಂಬ ಡಕ್ಕೆ, ಕ್ರೀ ಭಾವವೆಂಬ ಹೊದಕೆ.
ಅರಿವೆಂಬ ನೇಣಿನಲ್ಲಿ ಸ್ಥೂಲಸೂಕ್ಷ್ಮವೆಂಬ ಹೊಡೆಚೆಂಡು ಕಟ್ಟಿ
ಹೊಯ್ಯುತ್ತಿದೆ ಡಕ್ಕೆ, ಕಾಲಾಂತಕಭೀಮೇಶ್ವರಲಿಂಗವಲ್ಲದಿಲ್ಲಾ
ಎಂದು. ॥ ೨೬ ॥

೯೧೭

ಕಾಯವೆಂಬ ಡಕ್ಕೆಯ ಮೇಲೆ
ಜೀವವೆಂಬ ಹೊಡೆಚೆಂಡು ಬೀಳೆ
ತ್ರಿವಿಧವ ತಾ ತಾಯೆಂಬ ಆಸೆ ಹಿಂಡಿ ಡಿಂಡಿಯೆನುತ್ತಿದೆ.
ಇಂತೀ ಉಲುಹಿನ ಭೇಥವಲ್ಲಿ
ಹೊಲಬುದಪ್ಪದೆ ಗೆಲಬೇಕು ಕಾಲವೆಂಬ ಮಾರಿಯ,
ಕಾಲಾಂತಕ ಭೀಮೇಶ್ವರಲಿಂಗವನರಿಯಬಲ್ಲಡೆ. ॥ ೨೭ ॥

೯೧೮

ಕಾಲ ಮೇಲೆ ಬಂದ ಮಾರಿ ಕಾಡುತ್ತಿದೆ ಜಗವೆಲ್ಲವ.
ಕಾಲವೆಂಬ ಕಾಯವನರಿದು,
ಮನವೆಂಬ ಮಾರಿಯ ಭವಗೆಡಿಸಿ
ನಾ ತಂದೆ ಜ್ಞಾನಶಕ್ತಿಯ.
ಆ ಶಕ್ತಿಯ ಧರ್ಮವಲ್ಲಿ ಮುಕ್ತಿಯ ಗಳಿಸಬಲ್ಲಡೆ
ಕಾಲಾಂತಕ ಭೀಮೇಶ್ವರಲಿಂಗವು ಅವರವರಂಗಕ್ಕೆ
ಹಿಂಗದಿಪ್ಪನು. ॥ ೨೮ ॥

೯೧೯

ಕಾಲವಂಚಕನಾಗಿ ಗುರುವಿಂಗೆ ಮಾಡಲಿಲ್ಲ.
ಕರ್ಮವಂಚಕನಾಗಿ ಲಿಂಗಕ್ಕೆ ಮಾಡಲಿಲ್ಲ.
ಧನವಂಚಕನಾಗಿ ಜಂಗಮಕ್ಕೆ ಮಾಡಲಿಲ್ಲ. ತ್ರಿವಿಧ ನಿರತಂಗೆ,
ಮನ ವಚನ ಕಾಯ ತ್ರಿಕರಣವಲ್ಲಿ ಶುದ್ಧವಾಗಿರ್ಪ ಸದ್ಭಕ್ತ
ಕಾಲಾಂತಕ ಭೀಮೇಶ್ವರಲಿಂಗವು ತಾನೆ. ॥ ೨೯ ॥

೯೨೦

ಕ್ರಿಯಾಶಕ್ತಿ ಬ್ರಹ್ಮಂಗೆ ಹಿಂಗಿ,
ಇಚ್ಛಾಶಕ್ತಿ ವಿಷ್ಣುವಿಂಗೆ ಹಿಂಗಿ,
ಜ್ಞಾನಶಕ್ತಿ ರುದ್ರಂಗೆ ಹಿಂಗಿ,
ಉತ್ಪತ್ತಿ ಸ್ಥಿತಿ ಲಯವೆಂಬುದಕ್ಕೆ
ಮಾಯಾದೇವಿವೊಂದೆ ಗೊತ್ತಾಗಿ
ಬಲ್ಲ ಬಲ್ಲವರೆಲ್ಲರ ತನ್ನಲ್ಲಿಯೇ ಅಡಗಿಸುತ್ತ
ಅರಿವವರಿಗೆ ದೇವಿಯಾಗಿ,
ಮರೆವವರಿಗೆ ಮಾರಿಯಾಗಿ,

ಮೊರದೊಳಗೆ ಕೊಂಡು ಬಂದಿದ್ದೇನೆ.
ಮೊರಕ್ಕೆ ಮೂರು ಗೋಟು,
ತಾಯಿಗೆ ಅಯಿದು ಬಾಯಿ,
ಬೇಡುವಾತನ ಬಾಯಿವೊಂದೆಯಾಯಿತ್ತು.
ಡಕ್ಕೆಯ ದನಿಯ ಕೇಳಿ ಬೆಚ್ಚುವುದಕ್ಕೆ ಮುನ್ನವೆ
ಕಾಲಾಂತಕ ಭೀಮೇಶ್ವರಲಿಂಗವನರಿಯಿರಣ್ಣಾ. ॥ ೩೦ ॥

೯೨೧

ಕೈ ಕೈದ ಹಿಡಿದು ಕಾದುವಾಗ,
ಕೈದೊ ಕೈಯೊ ಮನವೊ?
ಅಂಗ ಲಿಂಗ ಸಂಬಂಧದಲ್ಲಿ ಸಂಬಂಧಿಸುವಾಗ,
ಅಂಗವೊ ಲಿಂಗವೊ ಆತ್ಮನೋ?
ಈ ಮೂರಂಗವನರಿದಲ್ಲಿ ಕಾಲಾಂತ ಭೀಮೇಶ್ವರ
ಲಿಂಗನರಿದುದು. ॥ ೩೧ ॥

೯೨೨

ಜಂಗಮವೆಂದು ಭಕ್ತನಾಶ್ರಯಕ್ಕೆ ಹೋದಲ್ಲಿ
ಉಪಾಧಿಕನಂಗೀಕರಿಸಿ ಮಜ್ಜನ ಭೋಜನ ಪರಿಮಳಂಗಳಲ್ಲಿ ಕೀಳಾಗಿ
ಪೂಜಿಸುವಲ್ಲಿ ಮೇಲಾದ ಪರಿಯಿನ್ನೆಂತಯ್ಯಾ?
ಆತ ಮಾಡುವುದಕ್ಕೆ ಮುನ್ನವೆ ಬೇಡದಿಪ್ಪುದೆ ವಸ್ತುಗುಣ.
ಆತ ಕಾಡುವುದಕ್ಕೆ ಮುನ್ನವೆ ಮಾಡುತ್ತಿಪ್ಪುದೆ ಭಕ್ತಿಗುಣ.
ಉಭಯದಾರೈಕೆಯನರಿದು ಆರೈದಾಗಲೆ ಉಭಯಸ್ಥಲ ನಿರುತ.
ಆ ಗುಣವಾದಲ್ಲಿ ಉಭಯ ಏಕೀಕರವಾಯಿತ್ತು.
ಕಾಲಾಂತಕ ಭೀಮೇಶ್ವರಲಿಂಗವನರಿದಲ್ಲಿ. ॥ ೩೨ ॥

೯೨೩

ಜಲದಲ್ಲಿ ಕದಡಿ ಎಯ್ದುವ ಮಣ್ಣಿಂಗೆ ಜಲವೆ ಕಾಲಾದಂತೆ,
ಆ ಜಲ ನಿಲೆ ಮಣ್ಣು ಮುನ್ನಿನ ಅಂಗವ ಬೆರಸಿದಂತೆ.
ಆ ಕುರುಹಿಂಗೆ ಅರಿವೆ ಆಶ್ರಯವಾಗಿ,
ಆ ಅರಿವಿಂಗೆ ಕುರುಹಿನ ವಾಸ ಅವಗವಿಸಿದ ಮತ್ತೆ,
ಬೇರೊಂದೆಡೆಯಿಲ್ಲ, ಕಾಲಾಂತಕ ಭೀಮೇಶ್ವರಲಿಂಗವು
ತಾನೆ. ॥ ೩೩ ॥

೯೨೪

ಜಾಗ್ರಾವಸ್ಥೆಯಲ್ಲಿ ಸುಳಿಹುದೋರಿದ ಶಕ್ತಿ
ಸ್ವಪ್ನಾವಸ್ಥೆಗೆ ತಲೆದೋರಿದ ಮತ್ತೆ
ಬೇರೊಂದುಭಯಕ್ಕೆ ಕಟ್ಟುಂಟೆ?
ಆಸೆಯೆಂಬುದೆ ಮಾರಿ, ನಿರಾಸೆಯೆಂಬುದೆ ದೇವಪದ.
ದೇವನ ನೆನೆದು ಕಾಯಕವ ಮಾಡಿದಲ್ಲಿ ಆವ ಪದಕ್ಕೂ ಸುಖ,
ಕಾಲಾಂತಕ ಭೀಮೇಶ್ವರಲಿಂಗವ ಕುರಿತು ಮಾಡಿದಲ್ಲಿ. ॥ ೩೪ ॥

೯೨೫

ತನಗೆ ಇದಿರಿಟ್ಟು ಕಾಬುದೆಲ್ಲವು ತನಗೆ ಅನ್ಯದೈವ.
ತಾ ಕುರುಹಳಿದು ತನಗೆ ಅನ್ಯವೆಂಬುದೊಂದಿಲ್ಲವಾಗಿ
ಅದು ತನಗೆ ಭಿನ್ನವಿಲ್ಲದ ದೈವ.
ಅಹಂಕಾರವೆಂಬ ಆತ್ಮಘಟದ ಮಾರಿಯ ಹೊತ್ತು
ಉಲುವೆಂಬ ಡಕ್ಕೆಯ ಹಿಡಿದು
ಭವಭವವೆಂಬ ಬಾಗಿಲಲ್ಲಿ ತಿರುಗಾಡುತ್ತಿದ್ದೇನೆ,
ಡಕ್ಕೆಯ ದನಿಯ ಬಿಡಿಸು,
ಕಾಲಾಂತಕ ಭೀಮೇಶ್ವರಲಿಂಗ. ॥ ೩೫ ॥

೯೨೬

ತನ್ನ ಪರಿಸ್ಪಂದವ ಸಾಕುವುದಕ್ಕೆ
ಗುರು ಲಿಂಗಜಂಗಮಕ್ಕೆಂದು ಬೇಡಿ ಒಡಲ ಹೊರೆವ ಪರಿ.
ಇನ್ನೆಂತುಂಟಯ್ಯಾ?
ಗುರುವಿಂಗೆಂದಲ್ಲಿ ಅಂಗದಾಸೆಯಿಲ್ಲದೆ,
ಲಿಂಗಕ್ಕೆಂದಲ್ಲಿ ಸಂದು ಸಂಶಯವಿಲ್ಲದೆ,
ಜಂಗಮಕ್ಕೆಂದಲ್ಲಿ ಇಂದು ನಾಳೆಯೆಂಬ
ಸಂದೇಹವ ಹರಿದು ಮಾಡುವನ ಇರವೆ
ಷಡುಸ್ಥಲ ಬ್ರಹ್ಮಮೂರ್ತಿ.
ಆತ ಇಹದಲ್ಲಿ ಸುಖಿ, ಪರದಲ್ಲಿ ಪರಿಣಾಮಿ,
ಆತ ಕಾಲಾಂತಕಲಿಂಗವು ತಾನೆ. ॥ ೩೬ ॥

೯೨೭

ತನುವೆಂಬಂಗವ ತಾಳಿ ಬಂದಾಗವೆ
ಮನವೆಂಬ ಮಾರಿ ಒಡಲ ಹೊಕ್ಕಿತ್ತು.
ಉಭಯದೊಡಲ ಕೊಂಡು ಬಂದೆ.
ಬಲದ ಕೈಯಲ್ಲಿ ಜಗ ಪೂಜಿಸುವ ಶಕ್ತಿ.
ಎನ್ನ ಮನದ ಕೊನೆಯಲ್ಲಿ
ಕಾಲಾಂತಕ ಭೀಮೇಶ್ವರಲಿಂಗವಲ್ಲದಿಲ್ಲಾ ಎಂಬ ಭಾಷೆ.॥ ೩೭ ॥

೯೨೮

ತನುವೆಂಬ ಮೊರದಲ್ಲಿ ಮಾಯಾಗುಣವೆಂಬ ಮಾರಿಯ ಹಿಡಿದು
ರಾಜಸ ತಾಮಸವೆಂಬ ಬಾಳು ಬಟ್ಟಲು ಕೈಯಲ್ಲಿ.
ಪ್ರಳಯ ಸಂಹಾರವೆಂಬ ಬಳೆಯ ಕೈಯಲಿಕ್ಕಿ,
ಅಂಗದ ಮನೆಯ ಬಾಗಿಲಲ್ಲಿ ಕೊಂಡು ಬಂದಿದೇನೆ.
ಬಲ್ಲವರಿಕ್ಕಿ, ಅರಿಯದವರೆಲ್ಲರೂ ಸುಮ್ಮನಿರಿ.
ಡಕ್ಕೆಯ ಉಲುಹಡಗುವುದಕ್ಕೆ ಮುನ್ನವೆ ನಿಶ್ಚೈಸಿ,
ನಿಜತತ್ವವನರಿ, ಕಾಲಾಂತಕ ಭೀಮೇಶ್ವರ
ಲಿಂಗವನರಿಯಬಲ್ಲಡೆ. ॥ ೩೮ ॥

೯೨೯

ತರುವಾಗಿ ಹುಟ್ಟಿ ವಾಯುವಿಗೆ ಎಡೆಗೊಡದಿರಬಹುದೆ?
ತನುವೆಂಬುದ ಹೊತ್ತು ಲಿಂಗವ ಪೂಜಿಸದಿರಬಹುದೆ?
ಅಂಗವಿಲ್ಲದ ಸಂಗವಂಟೆ? ಸಂಗವಿಲ್ಲದ ಸುಖವುಂಟೆ?
ಸುಖವಿಲ್ಲದ ಕಳೆ ರಸವುಂಟೆ?
ಇಂತೀ ಅಂಗದಲ್ಲಿದ್ದಂತೆ ಲಿಂಗವನರಿದು,
ಲಿಂಗದಲ್ಲಿದಂತೆ ಸಕಲ ಪ್ರಪಂಚಿಕವ ಮುರಿದು ನಿಂದಲ್ಲಿ
ಕಾಲಾಂತಕ ಭೀಮೇಶ್ವರಲಿಂಗವು ತಾನೆ. ॥ ೩೯ ॥

೯೩೦

ತಾ ತಂದ ತನುವೆಲ್ಲವು ದೋಷ,
ಆ ತನುವಿನಲ್ಲಿ ಬಂದ ಮನವೆಲ್ಲವು ಪ್ರಕೃತಿ.
ಅದಕ್ಕೆ ಇದಿರಿಟ್ಟು ತೋರಿದ ತ್ರಿವಿಧ ಮೂರ್ತಿಯ

ಪರುಷ ಪಾಷಾಣವನಿದಿರಿಟ್ಟಂತೆ
ತಮ ಜ್ಯೋತಿಯನಿದಿರಿಟ್ಟಂತೆ
ಅರಿವು ಮರವೆಯನರಿವುದಕ್ಕೆ ಇದಿರಿಟ್ಟು ಕುರುಹ ಕೊಂಡು ಬಂದೆ.
ಮರೆಯದಿರಕ್ಕನ, ಮರವೆಯಲ್ಲಿ ಡಕ್ಕೆ ಧಿಕ್ಕರಿಸುತ್ತದೆ.
ಕಾಲಾಂತಕ ಭೀಮೇಶ್ವರಲಿಂಗವನರಿಂಪ ಹೇಳಿ. ॥ ೪೦ ॥

೬೩೧

ತಾನರಿಯದೆ ಮಾಡಿದ ದೋಷಕ್ಕೆ ತನಗೆ ಅಘೋರವಿಲ್ಲ.
ಅದು ಜಗದ ಹುದುಗು.
ತಾನರಿದು ಅಲ್ಲ ಅಹುದೆಂದು ಎಲ್ಲರಿಗೆ ಹೇಳಿ
ಪರಧನದಲ್ಲಿ ಪರಸತಿಯಲ್ಲಿ ಅನ್ಯರ ನಿಂದೆಯಲ್ಲಿ ವ್ರತಾಚಾರ
ಭಂಗಿತರಲ್ಲಿ
ಇದನರಿದು ಅನುಸರಣೆಯ ಮಾಡಿದಡೆ
ಕುಂಭೀನರಕದಲ್ಲಿ ಹಿಂಗದಿರ್ಪನು.
ಕಾಲಾಂತಕ ಭೀಮೇಶ್ವರಲಿಂಗಕ್ಕೆ ಸ್ವಪ್ನದಲ್ಲಿ ದೂರಸ್ಥನು. ॥ ೪೧ ॥

೬೩೨

ತುಂಬಿದ ಹರುಗುಲದಲ್ಲಿ ಒಬ್ಬಂಬಿಗನ ಆಸೆಯಿಂದ
ಬೆಂಬಳಿಯಲ್ಲಿ ಹೋಹರಂತೆ
ಸಕಲೇಂದ್ರಿಯವೆಂಬ ಅಂಗದ ಹರಿಗುಲದಲ್ಲಿ
ಲಿಂಗವೆಂಬ ಅಂಬಿಗನ ದೆಸೆಯಲ್ಲಿ ಹೋಹ ಬೆಂಬಳಿಯ
ತೋರಯ್ಯಾ,
ಕಾಲಾಂತಕ ಭೀಮೇಶ್ವರಲಿಂಗವೆ. ॥ ೪೨ ॥

೬೩೩

ತ್ರಿವಿಧ ದೇವ ಕುಲಜಾತಿಗಾದಡೂ ಆಗಲಿ
ಪಂಡಿತ ವಿದಗ್ಧ ಜಾಣ ಗಾಂಭೀರ ಸಂಪದನಾದಡೂ ಆಗಲಿ
ಯಾಚಕತನದಲ್ಲಿ ಘಾತಕತನದಿಂದ ಬೇಡುವುದೆ ಜೀವನ.
ಆ ಜೀವನವ ಮರೆದು ಒರಗಿದುದೆ ಮಾರಿ.
ಆ ಮರವೆಯ ಹರಿದುದೆ ಕಾಲಾಂತಕ ಭೀಮೇಶ್ವರ
ಲಿಂಗವು. ॥ ೪೩ ॥

೯೩೪

ದಿವಕ್ಕೆ ಪರಬ್ರಹ್ಮ, ರಾತ್ರಿಗೆ ಕೌಗ್ರ ಬ್ರಹ್ಮ
ಅಧರಪಾನ ಒಳಗಾಗಿದ್ದ ಬಹು ಚೇಷ್ಟೆಗಳಲ್ಲಿ
ಸಂಚಾರಿಸುತ್ತ ಇಪ್ಪುದು ದೇವಪದಕ್ಕೆ ಹೊರಗು.
ಕಾಲಾಂತಕ ಭೀಮೇಶ್ವರಲಿಂಗವು ಒಪ್ಪದ ಭಾವ. ॥ ೪೪ ॥

೯೩೫

ದೇಹವುಳ್ಳನ್ನಕ್ಕ ಲಿಂಗಪೂಜೆಯ ಮಾಡಬೇಕು.
ಅಂಜಿಕೆ ಉಳ್ಳನ್ನಕ್ಕ ಅಂಗ ಸುಯಿಧಾನಿಯಾಗಿರಬೇಕು.
ಗಡಿತಡಿಗೆ ಉಕ್ಕಡದ ಎಚ್ಚರಿಕೆಯಂತೆ ಅರಿದು ಪೂಜಿಸುವುದು
ಕಾಲಾಂತಕ ಭೀಮೇಶ್ವರಲಿಂಗವ. ॥ ೪೫ ॥

೯೩೬

ಧ್ಯಾನದಿಂದ ವಸ್ತು, ವಿಷಯದಿಂದ ಮೋಹ, ಭಾವಶುದ್ಧದಿಂದ ಗುರು,
ದ್ವಂದ್ವವಳಿದು ನಿಂದುದು ಲಿಂಗ,
ತ್ರಿವಿಧದ ಸಂದನಳಿದು ಸಲೆ ಸಂದುದು ಜಂಗಮ.
ಈ ಸ್ಥಲದ ಅಂಗವನರಿದು ಉಭಯ ಭಂಗವಿಲ್ಲದೆ
ಸುಸಂಗದಿಂದ ಮಾಡುವುದು ಭಕ್ತಿಸ್ಥಲ.
ನಿಶ್ಚಯವಾಗಿ ನಿಂದುದು ಕಾಲಾಂತಕ ಭೀಮೇಶ್ವಲಿಂಗಕ್ಕೆ
ನಿಶ್ಚೈಸಿದ ಉಭಯ ಭಾವ. ॥ ೪೬ ॥

೯೩೭

ನಾಡೆಲ್ಲರೂ ಮುಟ್ಟಿ ಪೂಜಿಸುವುದು ಸಿರಿದೇವಿ.
ಸತ್ಯರೆಲ್ಲರೂ ಮುಟ್ಟಿ ಪೂಜಿಸುವುದು ಮೂದೇವಿ.
ನಾ ಮೊರದಲ್ಲಿ ಹೊತ್ತಾಡುವುದು ಉರಿಮಾರಿ.
ಸಿರಿ ಉರಿ ಮೂದೇವಿ ಮೊರದ ಗೋಟಿಗೊಳಗಾಯಿತ್ತು.
ಡಕ್ಕೆಯ ದನಿಗೆ ಮುನ್ನವೆ ಸಿಕ್ಕದಿರು
ಕಾಲಾಂತಕ ಭೀಮೇಶ್ವರಲಿಂಗವನರಿಯಬಲ್ಲಡೆ. ॥ ೪೭ ॥

೯೩೮

ನಾರಿಕೇಳ ಹುಟ್ಟಿದ ಸುಜಲವ ಅಲ್ಲಿಗೆ ಎಯ್ದಿಸಿ ಎರೆದವರಿಲ್ಲ
ಅದು ಬಲಿದು ಅಲ್ಲಿಯೇ ಅರತಾಗ ಬೇರೊಂದು ಕೊಂಡುದಿಲ್ಲ.
ಅಪ್ಪುವರತು ತುಪ್ಪ ತನ್ನಲ್ಲಿಯೆ ಒದಗಿದಂತೆ
ನಿಶ್ಚೈಸಿದ ಮನ ವಸ್ತುವಿನಲ್ಲಿ ಕೂಡಿ
ಕಾಯದ ಕರಂಡದಲ್ಲಿ ಕರಣಂಗಳರತು
ಜೀವ ಕೆಟ್ಟು ಪರಮನಾದಂತೆ.
ಈ ಭೇದವನರಿದು ಕಾಲನ ಗೆದ್ದು
ಕಾಲಾಂತಕ ಭೀಮೇಶ್ವರಲಿಂಗವು ತಾನಾದನು. ॥ ೪೮ ॥

೯೩೯

ಪರ್ಣದ ಮರೆಯ ಫಲದಂತೆ,
ಬಣ್ಣದ ಮರೆಯ ಬಂಗಾರದಂತೆ,
ತಂತು ಚರ್ಮಂಗಳಲ್ಲಿ ತೋರುವವನ ಗತಿಯಂತೆ.
ಕಾಯದಲ್ಲಿ ಸುಳುಹುದೋರುತ್ತ.
ಭಾವದಲ್ಲಿ ಪರವನಾಚರಿಸುತ್ತ
ಕಾಯದ ಮರೆಯಲ್ಲಿ ತಿರುಗಾಡುವ ಭಾವಶುದ್ಧಾತ್ಮ ಉಭಯಕ್ಕೆ
ಕಾಲಾಂತಕ ಭೀಮೇಶ್ವರಲಿಂಗವು ಅವರ ಬಾಗಿಲಲ್ಲಿ
ಬಳಸಾಡುತಿಪ್ಪನು. ॥ ೪೯ ॥

೯೪೦

ಪಾಪ ಪುಣ್ಯವಿಲ್ಲಾ ಎಂದು ನೀಕರಿಸಿ ನಡೆಯಬಹುದೆ
ದಿವರಾತ್ರೆ ಉಳ್ಳನ್ನಕ್ಕ?
ಉತ್ತಮ ಕನಿಷ್ಠ ಮಧ್ಯಮವೆಂಬುದನರಿವನ್ನಕ್ಕ
ಕಾಲ ವೇಳೆಯನರಿದು ಶಿವಲಿಂಗಾರ್ಚನೆಯ ಮಾಡಬೇಕು.
ವಾರ ನೇಮ ಸ್ಥಿತಿ ಲಗ್ನಂಗಳಲ್ಲಿ ಪರಶರಣರಿಂದ
ಪರಿಹರಿಸಿಕೊಳ್ಳಬೇಕು. ಅದೆಂತೆಂದಡೆ:
ತನ್ನ ಒಡಲೆಂಬನ್ನಕ್ಕ, ತನ್ನ ಗುರುವೆಂಬನ್ನಕ್ಕ, ತನ್ನ ಜಂಗಮವೆಂಬನ್ನಕ್ಕ,
ಶೀತ ಉಷ್ಣ ಮೃದು ಕಠಿಣಂಗಳನರಿವನ್ನಕ್ಕ,
ಕಾಲಾಂತಕ ಭೀಮೇಶ್ವರಲಿಂಗವೆಂದು ಪೂಜಿಸಬೇಕು. ॥ ೫೦ ॥

೯೪೧

ಪಾಷಾಣ ಘಟ್ಟಿಯಾದಲ್ಲಿ ಪ್ರಭೆ ಪ್ರಜ್ವಲಿಸಿತ್ತು.
ಪಾಷಾಣದ ಘಟವಡಗಲಾಗಿ ಪ್ರಭೆ ಪ್ರಕಟಿಸುವುದಿಲ್ಲ.

ಕ್ರೀ ಭಿನ್ನವಾದಲ್ಲಿ ಜ್ಞಾನಕ್ಕೆ ಸುಳುಹಿಲ್ಲ
ಅದು ಮುಕುರವ ತೊಡೆದ ಮಲದಂತೆ.
ಮಲಕ್ಕೆ ಬೆಳಗುಂಟೆ ಮುಕುರಕ್ಕಲ್ಲದೆ
ಮುಕುರಕ್ಕೆ ಛಾಯೆ, ಮಲಕ್ಕೆ ತಮ;
ಉಭಯದೊದಗನರಿದಲ್ಲಿ ಇಷ್ಟ ಪ್ರಾಣ ಮುಕ್ತಿ.
ಅಂಗದ ಮೊರದ ಮಾರಿಯ ಹೊತ್ತು ಬಂದವನ ಯುಕ್ತಿ
ಕಾಲಾಂತಕ ಭೀಮೇಶ್ವರಲಿಂಗವನರಿವುದಕ್ಕೆ ಇಕ್ಕಿದ
ಗೊತ್ತು. ॥ ೫೧ ॥

೯೪೨

ಪೃಥ್ವಿಯೆ ಬೀಜವ ನುಂಗಿದಡುತ್ಪತ್ತಿಯಾಗಬಲ್ಲುದೆ?
ಶಿಶುವೆ ಬಸುರಿನಲ್ಲಿ ತಾಯ ಅಸುವ ನುಂಗಿದ ಮತ್ತೆ
ಶಿಶು ತಾಯ ಉಭಯನಾಮವಡಗಿತ್ತು.
ಕ್ರೀಯೆ ತಾಯಿ, ಅರಿವೆ ಶಿಶುವಾಗಿ
ಮೂರು ಮೊರದ ಗೋಟಿನಲ್ಲಿ ತಿರುಗಾಡುತ್ತಿದ್ದೇನೆ
ಆ ಮರವೆಗೆ ತೆರನ ಹೇಳಾ,
ಕಾಲಾಂತಕ ಭೀಮೇಶ್ವರಲಿಂಗವೆ. ॥ ೫೨ ॥

೯೪೩

ಬಂದ ಬಂದವರೆಲ್ಲರೂ ತಾವು ಬಂದಂಗದಲ್ಲಿ ಸುಖಿಗಳು.
ಕಂಡಕಂಡವರೆಲ್ಲರೂ ತಾವು ನಿಂದ ಲಿಂಗದಲ್ಲಿಯೆ ಸುಖಿಗಳು.
ತನು ಕಾಯಕ ಮನ ಲಿಂಗದಾಸೋಹ ಜಂಗಮದಲ್ಲಿ
ನಾನೆಂಬುದನಳಿದು ಮಾಡುವುದು.
ಕಾಯಕವೇನಾದಡೂ ಆಗಲಿ,
ಆ ಗುಣ ಕಾಲಾಂತಕ ಭೀಮೇಶ್ವರಲಿಂಗಕ್ಕೆ ಅರ್ಪಿತ. ॥ ೫೩ ॥

೯೪೪

ಬ್ರಹ್ಮಂಗೆ ಅಂಡವ ಕೊಟ್ಟು,
ವಿಷ್ಣುವಿಂಗೆ ಪಿಂಡವ ಕೊಟ್ಟು
ರುದ್ರಂಗೆ ಪ್ರಾಣವ ಕೊಟ್ಟು,
ನೀ ಹೊದ್ದದಿದ್ದ ಪರಿಯ ಹೇಳಾ
ಕಾಲಾಂತಕ ಭೀಮೇಶ್ವರಲಿಂಗವೆ. ॥ ೫೪ ॥

೬೪೫

ಬ್ರಹ್ಮಂಗೆ ಸರಸ್ವತಿಯಾಗಿ ಬೆನ್ನಲ್ಲಿ ಬಂದಳು ಮಾಯೆ.
ವಿಷ್ಣುವಿಂಗೆ ಲಕ್ಷ್ಮಿಯಾಗಿ ಭವಕ್ಕೆ ತಿರುಗಿದಳು ಮಾಯೆ.
ರುದ್ರಂಗೆ ಉಮಾದೇವಿಯಾಗಿ ಶಿರ ತೊಡೆಯಲ್ಲಿ ಕಾಡಿದಳು
ಮಾಯೆ.
ಎಳ್ಳಿಗೆ ಎಣ್ಣೆ, ಮುಳ್ಳಿಗೆ ಮೊನೆಯಾಗಿ, ಹೂವಿಗೆ ಗಂಧವಾಗಿ,
ಅವರವರಂಗದಲ್ಲಿ ಹಿಂಗದ ಪ್ರತಿರೂಪಾಗಿ
ಸಂದಿಲ್ಲದೆ ಕಾಡುತ್ತಿದ್ದಾಳೆ ಮಾಯೆ.
ಡಕ್ಕೆಯ ಉಲುಪಡಗುವುದಕ್ಕೆ ಮುನ್ನವೆ ನಿಶ್ಚೈಸಿಕೊಳ್ಳಿ,
ಕಾಲಾಂತಕ ಭೀಮೇಶ್ವರಲಿಂಗವನರಿಯಬಲ್ಲಡೆ. ॥ ೫೫ ॥

೬೪೬

ಬ್ರಹ್ಮಪ್ರಳಯವಾದಲ್ಲಿ ತಾ ಕೆಟ್ಟುದಿಲ್ಲ ಮಾರಿ.
ವಿಷ್ಣು ಮರಣವಹಲ್ಲಿ ತಾ ಸತ್ತುದಿಲ್ಲ ಮಾರಿ.
ರುದ್ರ ಯುಗ ಜುಂಗಂಗಳ ಗೆಲುವಲ್ಲಿ ಮಾಯೆ
ಮನಸಿಜನ ಮನವೆಲ್ಲಿತ್ತು ಅಲ್ಲಿದ್ದಳು.
ಇಂತೀ ತ್ರಿವಿಧ ಮೂರ್ತಿಗಳಲ್ಲಿ
ಮರವೆಯ ದೆಸೆಯಿಂದ ಮಾರಿಯಾಯಿತ್ತು.
ಆ ಮಾರಿಯ ಹೊತ್ತು ಭವದ ಬಾಗಿಲಲ್ಲಿ ತಿರುಗಾಡುತ್ತಿದ್ದೇನೆ.
ಡಕ್ಕೆಯ ಉಲುಹಡಗುವುದಕ್ಕೆ ಮೊದಲೆ
ಭಕ್ತಿ ಮುಕ್ತಿಯನರಿದು ನಿಶ್ಚಯರಾಗಿ
ಕಾಲಾಂತಕ ಭೀಮೇಶ್ವರಲಿಂಗವನರಿಯಬಲ್ಲಡೆ. ॥ ೫೬ ॥

೬೪೭

ಬ್ರಹ್ಮಾಂಡದಲ್ಲಿ ತೋರುವ ಗುಣ ಅಂಡದಲ್ಲಿ ಕಲೆನಿಲುವಂತೆ,
ಅಂಡದಲ್ಲಿ ಜನಿಸುವ ಗುಣ ಪಿಂಡದಲ್ಲಿ ಪ್ರಮಾಣಿಸುವಂತೆ,
ಪಿಂಡದಲ್ಲಿ ಪ್ರಮಾಣಿಸುವ ಗುಣ ಸರ್ವಚೇತನದಲ್ಲಿ
ಚೇತರಿಸುವಂತೆ,
ಚೈತನ್ಯಾತ್ಮಕ ನೀನೇ, ಕಾಲಾಂತಕ ಭೀಮೇಶ್ವರಲಿಂಗವು
ತಾನೆ. ॥ ೫೭ ॥

೯೪೮

ಬೆಂದ ಮಣ್ಣಿನಂತೆ, ವಿಚ್ಛಂದವಾದ ಪಯ ಅನ್ನದಂತೆ,
ತಂತ್ರವ ಜಾರಿದ ಸೂತ್ರದಂತೆ, ಚೇತನವಿಲ್ಲದ ಡಿಂಬಂಗಳಂತೆ,
ಏತಕ್ಕೂ ಸುಳುಹಿಲ್ಲದೆ ನಿಂದ ನಿಲವು
ಕಾಲಾಂತಕ ಭೀಮೇಶ್ವರಲಿಂಗವನರಿದುದು. ॥ ೫೮ ॥

೯೪೯

ಭಕ್ತನ ಭಕ್ತ, ಮಾಹೇಶ್ವರನ ಮಾಹೇಶ್ವರ, ಪ್ರಸಾದಿಯ ಪ್ರಸಾದಿ,
ಪ್ರಾಣಲಿಂಗಿಯ ಪ್ರಾಣಲಿಂಗಿ, ಶರಣನ ಶರಣ, ಐಕ್ಯನ ಐಕ್ಯ.
ಒಳಗಿನ ಸ್ಥಲವ ಹೊರಹೊಮ್ಮುವಾಗ
ಬಿಂಬಕ್ಕೆ ಬಿಂಬದ ಪ್ರತಿಬಿಂಬವ ಕಾಬಂತೆ.
ಅದರ ಸಂಗವ ಘಟಿಸಿದಲ್ಲಿ ಷಡುಸ್ಥಲ ಬ್ರಹ್ಮವಾಯಿತ್ತು
ಕಾಲಾಂತಕ ಭೀಮೇಶ್ವರಲಿಂಗವನರಿದಲ್ಲಿ. ॥ ೫೯ ॥

೯೫೦

ಭಕ್ತನಾಗಿದ್ದಲ್ಲಿ ಪೃಥ್ವಿಯಂಗವೆ ಮಾಯೆ.
ಮಾಹೇಶ್ವರನಾಗಿದ್ದಲ್ಲಿ ಅಪ್ಪುವಿನಂಗವೆ ಮಾಯೆ.
ಪ್ರಸಾದಿಯಾಗಿದ್ದಲ್ಲಿ ಅಗ್ನಿಯಂಗವೆ ಮಾಯೆ.
ಪ್ರಾಣಲಿಂಗಿ ಶರಣೈಕ್ಯನೆಂಬಲ್ಲಿ
ಭಾವದ ಕಲೆಯ ವಿಚಾರಿಸುವುದೆ ಮಾಯೆ.
ಕಾಯದ ಭಾವವುಳ್ಳನ್ನಕ್ಕ
ಮರವೆಯೆಂಬ ಮಾರಿಯ ಹೊತ್ತು ತಿರುಗಾಡುತ್ತಿದ್ದೇನೆ
ಮಾರಿಯ ಮರಣದಲ್ಲಿ ಮರವೆಯ ಮಾಡದೆ ಎನ್ನನಾರೈದುಕೊ,
ಕಾಲಾಂತಕ ಭೀಮೇಶ್ವರಲಿಂಗ. ॥ ೬೦ ॥

೯೫೧

ಭಕ್ತಸ್ಥಲ ಸಂಗನ ಬಸವಣ್ಣಂಗಾಯಿತ್ತು.
ಮಾಹೇಶ್ವರ ಸ್ಥಲ ಮಡಿವಾಳಯ್ಯಂಗಾಯಿತ್ತು.
ಪ್ರಸಾದಿಸ್ಥಲ ಚನ್ನಬಸವಣ್ಣಂಗಾಯಿತ್ತು.
ಪ್ರಾಣಲಿಂಗಿಸ್ಥಲ ಚಂದಯ್ಯಂಗಾಯಿತ್ತು.
ಶರಣಸ್ಥಲ ಘಟ್ಟಿವಾಳಯ್ಯಂಗಾಯಿತ್ತು.

ಐಕ್ಯಸ್ಥಲ ಅಜಗಣ್ಣಂಗಾಯಿತ್ತು.
ಇಂತೀ ಷಡುಸ್ಥಲಬ್ರಹ್ಮಿಗಳೆಲ್ಲರೂ
ಎನ್ನಂಗದ ಮೊರದ ಮಾರಿಯ ಸಂಗಾತದಲ್ಲೈದಾರೆ.
ಆರಂಗವ ಮೂರು ಸಂಗವ ತೋರಿಕೆಯ ತೋರಾ,
ಕಾಲಾಂತಕ ಭೀಮೇಶ್ವರಲಿಂಗವೆ. || ೬೧ ||

೯೫೨

ಭ್ರಾಮಕವಲ್ಲಿ ಮಾಡದೆ, ಆಧ್ಯತನಕ್ಕೆ ಮಚ್ಚದೆ
ಸ್ತುತಿ ನಿಂದೆಗಳ ಗುರುಲಿಂಗ ಜಂಗಮದಲ್ಲಿ ವಿಚಾರಿಸದೆ
ತಾ ಮಾಡುವ ದ್ರವ್ಯಕ್ಕೆ ವಿಶ್ವಾಸದ ಚಿತ್ತಕ್ಕೆ
ಉಭಯವನರಿದು ಮಾಡುವ ಭಕ್ತನ ಬಾಗಿಲೆ
ಕಾಲಾಂತಕ ಭೀಮೇಶ್ವರಲಿಂಗದ ಆಶ್ರಯ. || ೬೨ ||

೯೫೩

ಭೂರಿ ಅವಾರಿಗಳಲ್ಲಿ ಮಾಡುವುದೆ ರಾಜತ್ವ.
ಆ ಠಾವಿನಲ್ಲಿ ಕೂಡಿ ಆಡುವುದೆ ಸಮಯಭೇದ.
ರಾಜಸವನರಿವನ್ನಕ್ಕ ತಾಮಸದಲ್ಲಿ ಪೂಜಿಸಿಕೊಳಬೇಕು.
ಆ ಗುಣ ವಿಷವ ಕಡೆದು ಅಮೃತವ ಕಾಬಂತೆ.
ಉಭಯದ ಸಿಕ್ಕು, ಕಾಲಾಂತಕ ಭೀಮೇಶ್ವರಲಿಂಗವನು
ಒಪ್ಪದ ಭಕ್ತಿ. || ೬೩ ||

೯೫೪

ಮತ್ತಾರನೂ ನುಡಿಯದೆ ತಾನಾರೈದು ಮಾಡುವ ಪರಿಯಿನ್ನೆಂತು?
ಸಜ್ಜನ ಶರಣರಲ್ಲಿ ಭಕ್ತಿ, ಅಸಜ್ಜನ ದುರ್ವೃತ್ತರಲ್ಲಿ ಧಿಕ್ಕಾರ.
ಬಿಡುಮುಡಿಯಲ್ಲಿ ನಿಜತತ್ವವನರಿದು ಮಾಡುವುದು
ಮಾಡಿಸಿಕೊಂಬುದು
ಕಾಲಾಂತಕ ಭೀಮೇಶ್ವರಲಿಂಗಕ್ಕೆ ಸಮರ್ಪಿತ. || ೬೪ ||

೯೫೫

ಮರವೆಗೆ ಅರಿವು ಸಂಬಂಧವಹಲ್ಲಿ
ಮನ ತುಂಬಿದ ತಮಕ್ಕೆ ಜ್ಯೋತಿ ಒಂದೆ ಅವಗವಿಸಿದಂತೆ,

ಪ್ರಕೃತಿ ಚಿತ್ತವನರಿವುದಕ್ಕೆ ಮತ್ತಗಜವ ಹಾರೆಯಲ್ಲಿ ಒತ್ತೆ,
ಮೇಲಿದ್ದವನ ಚಿತ್ತನರಿದಡಗುವಂತೆ
ಸಂಸಾರಯುಕ್ತಿಯನರಿವವನ ಮಥನ.
ಲೋಹ ಘನವಾಗಿ, ಸಿದ್ಧಿಯ ಸಾರ ಅಲ್ಪವಾಗಿ ವೇಧಿಸುವಂತೆ
ಘನ ಶೈಲಕ್ಕೆ ಅಂಗುಲದೊಳಗಡಗಿದ ಕುಲಿಶದಂತೆ,
ಮರೆದಲ್ಲಿ ಅರಿದು ಎಚ್ಚತ್ತು ಅರಿವವನ ವಿವರ;
ಪೂಜಿಸಿ ಪುಣ್ಯವನರಿವ ಭಾವಶುದ್ಧಾತ್ಮನ ಭಾವಸ್ಥಲ;
ಕಾಲಾಂತಕ ಭೀಮೇಶ್ವರಲಿಂಗವನರಿವುದಕ್ಕೆ ಉಭಯ ನಾಮ
ತೆರನಿಲ್ಲದ ತೆರ. ॥ ೬೫ ॥

೯೫೬

ಮರೆದವರ ಮನದಲೆಲ್ಲವೂ ಮಾರಿ.
ಅರಿದವರ ಮನದಲೆಲ್ಲವೂ ಸ್ವಯಂಜ್ಯೋತಿ.
ಡಕ್ಕೆಯ ದನಿ ಉಳ್ಳನ್ನಕ್ಕ ನಿಶ್ಚೈಸಿಕೊಳ್ಳಿ,
ಕಾಲಾಂತಕ ಭೀಮೇಶ್ವರಲಿಂಗವನರಿವುದಕ್ಕೆ. ॥ ೬೬ ॥

೯೫೭

ಮರೆಯಲ್ಲಿದ್ದ ಸಂಚ ತೆರ ದರುಶನವಾಗಲಾಗಿ
ಆಶ್ಚರಿಯೆಂಬುದು ಬಿಟ್ಟಿತ್ತು.
ಅಂಗದ ಮೇಲಣ ಲಿಂಗ ನೆಸಹಿಂಗೆ ನಿಲಲಾಗಿ ಕುರುಹೆಂಬ
ಭಾವವಡಗಿತ್ತು.
ಸರ್ವೇಂದ್ರಿಯಂಗಳು ಹಿಂಗಿ
ಏಕಭಾವ ಸಲೆಸಂದು ಉಭಯದಂಗ ಲೇಪವಾದುದು
ಕಾಲಾಂತಕ ಭೀಮೇಶ್ವರಲಿಂಗ ದ್ವಂದ್ವವಳಿದು ನಿಂದ
ಸ್ಥಲ. ॥ ೬೭ ॥

೯೫೮

ಮಲ ಅಮಲವೆಂಬ ಉಭಯವ ವಿಚಾರಿಸುವಲ್ಲಿ,
ಕ್ರೀ ನಿಃಕ್ರೀಯೆಂದು ಭಾವಿಸುವಲ್ಲಿ,
ಅಳಿವುದೇನು ಉಳಿದೇನು ಎಂಬುದ ತಾನರಿದಲ್ಲಿ,
ಅಂಗದ ಮೇಲೊಂದು ಲಿಂಗವುಂಟೆಂದು

ಮನವ ಮೇಲೊಂದು ಲಿಂಗವುಂಟೆಂದು
ಭಿನ್ನಭಾವದಿಂದ ಕಾಬಲ್ಲಿ
ಅಂಗಕ್ಕೂ ಮನಕ್ಕೂ ಲಿಂಗವೊಂದಲ್ಲದೆ,
ಆತ್ಮ ಹಲವಿಲ್ಲ ಲಿಂಗ ಕೆಲವಿಲ್ಲ.
ಗಿಂಡೆಯ ಉದಕ ಉಭಯ ಸಂಧಿಯಲ್ಲಿ ಬಾಹಂತೆ,
ತುಂಬುವ ಘಟವೊಂದು ಸೂಸುವ ಜೂಳಿ ಬೇರಾದಂತೆ,
ಅಂಗ ಪ್ರಾಣಲಿಂಗ ಸಂಬಂಧಯೋಗ ಸಂಭವವಾದಲ್ಲಿ
ಕಾಲಾಂತಕ ಭೀಮೇಶ್ವಲಿಂಗವು ತಾನೆ. ॥ ೬೮ ॥

೯೫೯

ಮಹಾಕಾಳಾಂಧರ ಹಿಂಗಿ ಕಾಲಂಗಳಹಾಗ
ಮಾಯಾಂಗನೆ ಮಹಾದೇವನ ಮರೆದವರಿಗೆ ಮಾರಿಯಾದಳು.
ಸತ್ಕ್ರೀಸಜ್ಞಾನಯುಕ್ತಿಯಿಂದ
ಸದಾಶಿವನನರಿಯಲಾಗಿ ಉಮಾದೇವಿಯಾದಳು.
ಇಂತೀ ಗುಣವ ಮರೆದಡೆ ಮಾಯೆಯಾಗಿ
ಅರಿದಡೆ ಸ್ವಯವಾಗಿ ತನ್ನಲ್ಲಿ ಅನ್ಯಭಿನ್ನವಿಲ್ಲದೆ
ಡಕ್ಕೆಯ ಉಲುಹಡಗುವುದಕ್ಕೆ ಮೊದಲೆ
ಕಾಲಾಂತಕ ಭೀಮೇಶ್ವರಲಿಂಗವನರಿಯಬೇಕು. ॥ ೬೯ ॥

೯೬೦

ಮಾತ ಅಲೇಖದ ಮೇಲಕೆ ಕುರುಹಿಟ್ಟಲ್ಲದೆ
ನೀತಿಲಕ್ಷಣವ ಕಾಣಬಾರದು.
ಚಿತ್ತ ತಾ ಪೂಜಿಸುವ ವಸ್ತುವಿನಲ್ಲಿ ಲಕ್ಷಿಸಿಯಲ್ಲದೆ
ಮೇಲಣ ಅಲಕ್ಷವ ಕಾಣಬಾರದು.
ಕಾಬನ್ನಕ್ಕ, ಉಭಯದ ಆಚರಣೆ ತಾನುಳ್ಳನ್ನಕ್ಕ,
ಕಾಲಾಂತಕ ಭೀಮೇಶ್ವರಲಿಂಗವ ಪೂಜಿಸಬೇಕು. ॥ ೭೦ ॥

೯೬೧

ಮಾಯಾಗುಣ ರೂಪಾದಲ್ಲಿ ಮಲಕ್ಕೊಡಲಾಯಿತ್ತು
ಮಲಸ್ವರೂಪವಾಗಿ ನಿಂದಲ್ಲಿ
ಬಲವಂತರೆಲ್ಲರು ಮಲದ ಬೆಂಬಳಿಯಲ್ಲಿ ಮರುಳಾದರು.

ಮರುಳಾಟದಲ್ಲಿ ಮಾರಿ ಒಲವರವಾಗಿ
ಮನ ಶುದ್ಧವಿಲ್ಲದವರ ಮನೆ ಮನೆಯಲ್ಲಿ
ತನುವಿಕಾರವನಾಡಿಸುತ್ತೈದಾಳೆ.
ಮಾರಿಯ ಮುರಿದು ದಾರಾವತಿಯ ಕೆಡಿಸಿ
ಕೈಯ ಡಕ್ಕೆಯ ಗತಿಯ ಹಿಂಗಿ
ಮಾಯೆಯ ಬಾಗಿಲ ಭ್ರಾಂತಿಯ ಬಿಟ್ಟಲ್ಲಿ
ಕಾಲಾಂತಕ ಭೀಮೇಶ್ವರಲಿಂಗವನರಿದುದು. ॥ ೭೧ ॥

೯೬೨

ಮೂರವಸ್ಥೆಯಲ್ಲಿ ತೋರುವುದು ಸತ್ವಗುಣ.
ಆರವಸ್ಥೆಯಲ್ಲಿ ತೋರುವುದು ರಜೋಗುಣ.
ಏಳವಸ್ಥೆಯಲ್ಲಿ ತೋರುವುದು ತಮೋಗುಣ.
ಇಂತೀ ತ್ರಿವಿಧಾವಸ್ಥೆಯಲ್ಲಿ ತೋರುವವೆಲ್ಲವೂ ಅಪ್ಪುವಿನ ಸಂಚಾರಗುಣ.
ಸತ್ವ ರಜ ತಮಂಗಳಲ್ಲಿ ನಿಶ್ಚೈಸಿ ನಿಂದುದು
ಕಾಲಾಂತಕ ಭೀಮೇಶ್ವರಲಿಂಗದಲ್ಲಿ ಸಲೆ ಸಂದುದು. ॥ ೭೨ ॥

೯೬೩

ರತ್ನ ಪಾಷಾಣದ ಕುಲದಲ್ಲಿದ್ದು ಸ್ವಜಾತಿಗೆ ಸಿಕ್ಕದಂತೆ,
ಗಂಧ ಕುಸುಮದಲ್ಲಿದ್ದು ಅದರೊಳಗೆ ಬಂಧಿತವಾಗದಂತೆ,
ವಾಯು ಸಕಲ ಚೇತನದೊಳಗಿದ್ದು
ರೂಪಿಂಗೊಡಲಿಲ್ಲದೆ ಅಲೆಯಲಿಕ್ಕೆ ಉಂಟಾಗಿ,
ಆ ತೆರದಂತೆ, ಹಿಡಿವಲ್ಲಿ ಬಿಡುವಲ್ಲಿ ಒಡಗೂಡುವ ಸುಖವನರಿತಡೆ;
ಕಾಲಾಂತಕ ಭೀಮೇಶ್ವರಲಿಂಗವು ತಾನೆ. ॥ ೭೩ ॥

೯೬೪

ರಸೇಂದ್ರಿಯ ಗಂಧೇಂದ್ರಿಯ ರೂಪೇಂದ್ರಿಯ
ಶಬ್ದೇಂದ್ರಿಯ ಸ್ಪರ್ಶನೇಂದ್ರಿಯ
ಪಂಚೇಂದ್ರಿಯಂಗಳಲ್ಲಿ ಸಲೆ ಸಂದು
ಒಂದರ ಗುಣವ ಒಂದರಿಯದಂತೆ
ಮತ್ತೆ ಏಕೇಂದ್ರಿಯವೆಂದು ಸಂಧಿಸಿ ಅರ್ಪಿಸುವ ಪರಿಯಿನ್ನೆಂತೊ?
ಆ ಗುಣದ ಸಂಗವನರಿದಲ್ಲಿ

ಇಂದ್ರಿಯಂಗಳ ಮುಖದಲ್ಲಿ ಲಿಂಗವನರಿದುದು.
ಹುಟ್ಟಿನ ದೆಸೆಯಿಂದ ಹಸ್ತಕ್ಕೆ ಬಂದು
ಮತ್ತೆ ಜಿಹ್ವೆ ಅರಿದಂತೆ ಅರ್ಪಿತದ ಭೇದ.
ಇಷ್ಟ ಪ್ರಾಣಸಂಗ ಕಾಲಾಂತಕ ಭೀಮೇಶ್ವಲಿಂಗವನರಿವುದಕ್ಕೆ
ಅರ್ಪಿತ ಅವಧಾನಿಯ ಇರವು. ॥ ೭೪ ॥

೯೬೫

ಲಿಂಗಕ್ಕೆ ಮಲಿನವಾದಲ್ಲಿ ಒರಸಿ ತೊಳೆದಡೆ ದೋಷವ ಕಟ್ಟಬಹುದೆ?
ಗುರು ಚರ ಭಕ್ತರಲ್ಲಿ ಭ್ರಾಮಕದಿಂದ ಮರೆದಿರೆ
ಅರುಪಲಿಕ್ಕೆ ದೂಷಣೆ ಉಂಟೆ?
ತನ್ನಂಗದ ಕಲೆವ ತಾ ಹಿಂಗಿಸುವುದಕ್ಕೆ ನಿಂದೆ ಗುಣದೋಷಂಗಳುಂಟೆ?
ಇದು ಕಾರಣದಲ್ಲಿ ಒಡೆಯನ ಹರವರಿ ಬಂಟಂಗೆ ಲಾಭವಹಂತೆ,
ಉಭಯಕ್ಕೆ ಕೇಡಿಲ್ಲದಿರ್ಪ ಭಕ್ತಿ ಸತ್ಯ.
ಕಾಲಾಂತಕ ಭೀಮೇಶ್ವರಲಿಂಗನು ಉಭಯದ
ತಪ್ಪನೊಪ್ಪನಾಗಿ. ॥ ೭೫ ॥

೯೬೬

ಲಿಂಗ ಪ್ರಾಣವಾದಲ್ಲಿ ಜಾಗ್ರ ಸ್ವಪ್ನ ಸುಷಪ್ತಿಯಲ್ಲಿ ಉಭಯಭ್ರಾಂತಿಲ್ಲದೆ
ದೃಷ್ಟದಲ್ಲಿ ಕಂಡುದಕ್ಕೆ ಆ ಜ್ಞಾನದಲ್ಲಿ ಭಾವಿಸುವುದಕ್ಕೆ
ಆ ಜ್ಞಾನ ಉಭಯದೋರದೆ ಸ್ವಯವಾದುದು.
ಉಭಯಗುಣ ನಾಸ್ತಿ ಪ್ರಾಣಲಿಂಗ ಸಂಬಂಧ
ಕಾಲಾಂತಕ ಭೀಮೇಶ್ವರಲಿಂಗದಲ್ಲಿ. ॥ ೭೬ ॥

೯೬೭

ಲೇಸೆನಿಸುವ ವಸ್ತುವ ಬೈತಿಡುವುದಕ್ಕೊಂದಾಶ್ರಯ ಬೇಕು.
ಮನ ಘನವನಾಶ್ರಯಿಸುವುದಕ್ಕೆ, ಅನುವನರಿದು ನೆಮ್ಮುವುದಕ್ಕೆ,
ಚಿದ್ಘನಲಿಂಗವೆಂಬ ಕುರುಹು ಬೇಕು.
ಇದರಿಂದ ಬೇರೆ ಕಾಬ ಅರಿವಿಲ್ಲ.
ಆ ಕುರುಹೆ ಅರಿವಿಗೆ ಆಶ್ರಯವಾದ ಕಾರಣ,
ಕಾಲಾಂತಕ ಭೀಮೇಶ್ವರಲಿಂಗವು
ಕುರುಹುಗೊಂಡಿತ್ತು. ॥ ೭೭ ॥

೯೬೮

ವಿಶ್ವತೋಮುಖ ಲಿಂಗವೆಂದರಿದಲ್ಲಿ ಪಂಚವಕ್ತ್ರವೆಂದು ನುಡಿಯಲಿಲ್ಲ.
ಪರಿಪೂರ್ಣವೆಂದರಿದಲ್ಲಿ ಕಾಲವೇಳೆಯೆಂದು ಪ್ರಮಾಣಿಸಲಿಲ್ಲ.
ಜ್ಯೋತಿಯ ಬೆಂಬಳಿಯಲ್ಲಿ ಜ್ಯೋತಿ ಬರಲಾಗಿ
ಅದೇತರ ತನುವೆಂದು ಲಕ್ಷಿಸಲಿಲ್ಲ,
ಕಾಲಾಂತಕ ಭೀಮೇಶ್ವರಲಿಂಗವನರಿದಲ್ಲಿ. ॥ ೭೮ ॥

೯೬೯

ಶರಣಸತಿ ಲಿಂಗಪತಿಯಾದಲ್ಲಿಯೆ ಕಾಯಗುಣ ನಿಂದಿತ್ತು
ಆತ್ಮಸತಿ ಅರಿವು ಪುರುಷನಾದಲ್ಲಿಯೇ ಜೀವಗುಣ ನಿಂದಿತ್ತು.
ನೀನೆಂಬುದ ಭಾವಿಸಿ ಮಾಡಿದಾಗವೆ ಕಾಯಕ ಶುದ್ಧವಾಯಿತ್ತು.
ಕಾಲಾಂತಕ ಭೀಮೇಶ್ವರಲಿಂಗಕ್ಕೆ ಸಲೆ ಸಂದಿತ್ತು. ॥ ೭೯ ॥

೯೭೦

ಶಿಲೆ ಭಾವ ಹಿಂಗಿ ಕುರುಹಾಯಿತ್ತು, ಕಾರುಕನ ಕೈಯಲ್ಲಿ,
ಪಾಷಾಣ ಭಾವ ಹಿಂಗಿ ಕಳೆಯಾಯಿತ್ತು, ಆಚಾರ್ಯನ ಕೈಯಲ್ಲಿ.
ಕಳೆ ನೆಲೆಯಾಯಿತ್ತು, ಪೂಜಿಸುವಾತನ ಚಿತ್ತದಲ್ಲಿ.
ಚಿತ್ತ ವಸ್ತುವಿನಲ್ಲಿ ಬೆರೆದು ಕಾಲಾಂತಕ
ಭೀಮೇಶ್ವರಲಿಂಗವಾಯಿತ್ತು ॥ ೮೦ ॥

೯೭೧

ಶ್ವೇತಾಂಗ ಬಹುವರ್ಣವ ಬೆರಸಿದಂತೆ
ಆತ್ಮನೊಂದಾಗಿ ಪ್ರಕೃತಿ ಹಲವ ಧರಿಸಿದಂತೆ
ತಾ ಬಂದ ಗುಣವನರಿದು,
ಇದ್ದ ಇರವಿನ ಸದ್ವರ್ತನೆಯಿಲ್ಲದೆ
ಆಚರಣೆಗೆ ಅನುಸರಣೆಯಿಲ್ಲದೆ
ಅರಿವನರಿದು ಅಮಂಗಲಕ್ಕೊಳಗಾಗದೆ
ನಿರ್ಮಲತರಂಗವನೆಯ್ದಿ ಸಂದುದು
ಕಾಲಾಂತಕ ಭೀಮೇಶ್ವರಲಿಂಗದಂಗ. ॥ ೮೧ ॥

೯೭೨

ಷಡುಸ್ಥಲದಲ್ಲಿ ಕಂಡೆಹೆನೆಂದಡೆ ಕ್ರೀ ಶುದ್ಧತೆಯಿಲ್ಲ.
ತ್ರಿವಿಧ ಸ್ಥಲದಲ್ಲಿ ಕಂಡೆಹೆನೆಂದಡೆ ಭಾವಶುದ್ಧವಿಲ್ಲ.
ಇದು ಮೀರಿ ಬೇರೊಂದನರಿದೆಹೆನೆಂದಡೆ ಆರರಿವಿಂಗೆ ಕುರುಹಿಲ್ಲ.
ಈ ತೆರನನರಿವಡೆ ಅರಿವು ಕುರುಹು ಏಕವಾಯಿತ್ತು
ಕಾಲಾಂತಕ ಭೀಮೇಶ್ವರಲಿಂಗವನರಿಯಲಾಗಿ. ॥ ೮೨ ॥

೯೭೩

ಸಂಜೀವನದ ನೆಳಲಲ್ಲಿ ನಿಲಲಾಗಿ ಅಂಗದ ಆಪ್ಯಾಯನವರತಂತೆ
ಸಿದ್ಧರಸದಲ್ಲಿ ಪ್ರಸಿದ್ಧರಸ ಕೂಡೆ
ಅದ ಹೊದ್ದಿಹ ಗುಣವೆಲ್ಲವು ಹೇಮವಾವಂತೆ
ಮಾಡುವ ಮಾಟ ನಿಜವಾಗಿ, ಪೂಜಿಸುವ ದೃಷ್ಟವಾಗಿ,
ಸುಗಂಧವ ಮಂದಿರದಲ್ಲಿ ಸಂಧಿಸಿದಂತೆ
ಉಭಯ ಭಾವಕ್ಕೆ ಮಾಟಕೂಟಕ್ಕೆ ಚಿತ್ತಕ್ಕೆ ಭಿನ್ನವಿಲ್ಲದೆ ನಿಂದುದು
ಕಾಲಾಂತಕ ಭೀಮೇಶ್ವರಲಿಂಗವ ಸಲೆ ಸಂದಿಲ್ಲದೆ
ಅರಿದುದು. ॥ ೮೩ ॥

೯೭೪

ಸಕಲ ಸ್ಥಾವರ ಸಕಲ ಬುದ್ಬುದಂಗಳಲ್ಲಿ
ಸಕಲ ಚರಾದಿಗಳಲ್ಲಿ, ಸಕಲ ಅಂಡಪಿಂಡಗಳಲ್ಲಿ
ತೋರುವ ತೋರಿಕೆ, ಕಾಣದ ಅಚ್ಚರಿಯ ಕಂಡೆ ಕಾಣೆನೆಂಬುದು
ಒಂದೆ ಭಾವ.
ಆ ಭಾವದ ಭ್ರಮೆಯಡಗಿ ಇಷ್ಟಲಿಂಗದಲ್ಲಿ ಅರ್ಚನೆ ಪೂಜನೆ
ಭಾವಲಿಂಗವಲ್ಲಿ ಭ್ರಮೆಯಡಗಿ
ಉಭಯಕ್ಕೆ ಠಾವಿಲ್ಲದೆ ತಲೆದೋರದೆ ನಿಂದುದು
ಕಾಲಾಂತಕ ಭೀಮೇಶ್ವರಲಿಂಗವೆಂಬುದಕ್ಕೆ
ಪ್ರಮಾಣವಾಯಿತ್ತು. ॥ ೮೪ ॥

೯೭೫

ಸತಿಯ ಗುಣವ ಪತಿ ನೋಡಬೇಕಲ್ಲದೆ
ಪತಿಯ ಗುಣವ ಸತಿ ನೋಡಬಹುದೆ ಎಂಬರು.

ಸತಿಯಿಂದ ಬಂದ ಸೋಂಕು ಪತಿಗೆ ಕೇಡಲ್ಲವೆ?
ಪತಿಯಿಂದ ಬಂದ ಸೋಂಕು ಸತಿಯ ಕೇಡಲ್ಲವೆ?
ಒಂದಂಗದ ಕಣ್ಣು ಉಭಯದಲ್ಲಿ ಒಂದು ಹಿಂಗಲಿಕ್ಕೆ
ಭಂಗವಾರಿಗೆಂಬುದ ತಿಳಿದಲ್ಲಿಯೆ
ಕಾಲಾಂತಕ ಭೀಮೇಶ್ವರಲಿಂಗಕ್ಕೆ ಸಲೆ ಸಂದಿತ್ತು. ॥ ೮೫ ॥

೯೭೬

ಸರವಿ ಮಚ್ಚಿದ ವಾಯುಘೋಷನ ಇರವಿನಂತೆ,
ಗುಮತಿಯಲ್ಲಿದ್ದ ಅಸಿಯ ಮರೆಯಂತೆ,
ಬೇರಿನ ಮರೆಯಲ್ಲಿದ್ದ ವಿಷನಾಭಿಯಂತೆ,
ನೋಡಿದಡೆ ಭಕ್ತನಾಗಿ, ಒಳಹೊಕ್ಕು ವಿಚಾರಿಸಿದಲ್ಲಿ ಭವಿಯಾಗಿ,
ಸುಣ್ಣದ ಮಣ್ಣಿನಂತೆ, ಅಹಿ ಫಳದ ರೇಖೆಯಂತೆ,
ಕಪಟಕ್ಕೊಳಗಾಗಿ ಇಪ್ಪುದು ಭಕ್ತಿಸ್ಥಲವೆ?
ಮಧುರ ಚೂರ್ಣದಂತೆ ತನ್ಮಯವಾಗಿಪ್ಪುದೆ ಸದ್ಭಕ್ತನಿರವು,
ಕಾಲಾಂತಕ ಭೀಮೇಶ್ವರಲಿಂಗದ ನಿಜ ತತ್ವವಾಸ. ॥ ೮೬ ॥

೯೭೭

ಸ್ಥೂಲ ಸೂಕ್ಷ್ಮ ಕಾರಣಮಯಂಗಳಲ್ಲಿ,
ಇಷ್ಟ ಪ್ರಾಣ ಭಾವಂಗಳಲ್ಲಿ,
ಉಚಿತವನರಿದು ಕೂಡುವುದೆ ಯೋಗ.
ಆ ಯೋಗವ ಪ್ರಯೋಗಿಸಿ ನಿಂದುದೆ
ಕಾಲಾಂತಕ ಭೀಮೇಶ್ವರಲಿಂಗವು ಉಭಯವನಳಿದ
ಭಾವ. ॥ ೮೭ ॥

೯೭೮

ಸೌಭಾಗ್ಯದಿಂದ ಮಾಡುವರೆಲ್ಲರೂ ಸಂತೋಷಭಾವಿಗಳು.
ಭಕ್ತಿಯಿಂದ ಮಾಡುವರೆಲ್ಲರೂ ತ್ರಿವಿಧಭಾವಿಗಳು.
ಒಂದೆಂದು ಹಿಂಗಿ ಮಾಡುವನ್ನಬರ ರುದ್ರನ
ಉರಿಗೊಡಲಾಯಿತ್ತು,
ಬಂದುದ ನೇತಿಗಳೆಯದೆ ಬಾರದುದಕ್ಕೆ ದೋಟಿಯನಿಕ್ಕದೆ

ಬಂದುದಕ್ಕೆ ಮನಮುಕ್ತನಾಗಿ ಸಂದುದು
ಕಾಲಾಂತಕ ಭೀಮೇಶ್ವರಲಿಂಗಕ್ಕರ್ಪಿತವಾಯಿತ್ತು. ॥ ೮೮ ॥

೯೨೯

ಹಲವು ಸಂಸರ್ಗದಿಂದ ಬಂದ ಜಲ ನಿಲವಾಗಿ
ಒಂದು ಠಾವಿನಲ್ಲಿ ನದಿ ನಾಮವಾಯಿತ್ತು.
ನಾನಾಭಾವಂಗಳಲ್ಲಿ ನೊಂದು ಬಂದ ಜೀವ
ಒಂದು ನೆಲೆಯಲ್ಲಿ ನಿಂದು ಸಂದೇಹವ ಬಿಡಲಾಗಿ
ಪರಮನಾಯಿತ್ತು.
ಪ್ರಕಾಶವ ಕಂಡು ಕಾಲಾಂತಕ ಭೀಮೇಶ್ವರಲಿಂಗವೆಂಬ
ನಾಮವಾಯಿತ್ತು. ॥ ೮೯ ॥

೯೮೦

ಹುಸಿದು ಮಾಡಿದವರುಂಟು.
ಅಸಿಯಲ್ಲಿ ದೆಸೆಗೆಡಿಸಿ ಮಾಡಿದವರುಂಟು.
ಪಶುಗಳ ಕೊಂದು ಪಿಸಿತವ ಮಾರಿ ಮಾಡಿದವರುಂಟು.
ಅದು ತನ್ನಯ ಅಸುವಿಂಗಲ್ಲದೆ,
ಅದು ತನ್ನಯ ಶಿಶುವಿಂಗಲ್ಲದೆ,
ಅದು ತನ್ನಯ ವಿಷಯದ ಲಂಪಟದ ಶಕ್ತಿಗಲ್ಲದೆ
ದೇವಂಗೆಂದು ಕುರಿತು ಆವ ಕಾಯಕವ ಮಾಡಿದಡೂ
ಕಾಲಾಂತಕ ಭೀಮೇಶ್ವರಲಿಂಗಕ್ಕೆ ಅರ್ಪಿತವು. ॥ ೯೦ ॥

# ಡೋಹರ ಕಕ್ಕಯ್ಯನ ವಚನ

೯೮೧

ಆಸೆಯಾಮಿಷವಳಿದು ಹುಸಿ ವಿಷಯಂಗಳೆಲ್ಲಾ ಹಿಂಗಿ,
ಸಂಶಯ ಸಂಬಂಧ ನಿಸ್ಸಂಬಂಧವಾಯಿತ್ತಯ್ಯಾ,
ಎನ್ನ ಮನದೊಳಗೆ ಘನಪರಿಣಾಮವ ಕಂಡು
ಮನ ಮಗ್ನವಾಯಿತ್ತಯ್ಯಾ,
ಅಭಿನವ ಮಲ್ಲಿಕಾರ್ಜುನಾ,
ಪ್ರಭುದೇವರ ಕರುಣದಿಂದಾನು ಬದುಕಿದೆನು. ॥ ೧ ॥

೯೮೨

ಎನೆಗೆ ಗುರುಸ್ಥಲವ ತೋರಿದಾತ ಸಂಗನ ಬಸವಣ್ಣನು.
ಎನಗೆ ಲಿಂಗಸ್ಥಲವ ತೋರಿದಾತ ಚನ್ನಬಸವಣ್ಣನು.
ಎನಗೆ ಜಂಗಮಸ್ಥಲವ ತೋರಿದಾತ ಸಿದ್ಧರಾಮಯ್ಯನು.
ಎನಗೆ ಪ್ರಸಾದಿಸ್ಥಲವ ತೋರಿದಾತ ಬಿಬ್ಬಬಾಚಯ್ಯನು.
ಎನಗೆ ಪ್ರಾಣಲಿಂಗಿಸ್ಥಲವ ತೋರಿದಾತ ಚಂದಯ್ಯನು.
ಎನಗೆ ಶರಣಸ್ಥಲವ ತೋರಿದಾತ ಸೊಡ್ಡಳ ಬಾಚರಸನು.
ಎನಗೆ ಐಕ್ಯಸ್ಥಲವ ತೋರಿದಾತ ಅಜಗಣ್ಣನು.
ಎನಗೆ ನಿಜಸ್ಥಲವ ತೋರಿದಾತ ಪ್ರಭುದೇವರು.
ಇಂತೀ ಸ್ಥಲಗಳ ಕಂಡು
ಏಳ್ನೂರೆಪ್ಪತ್ತು ಅಮರಗಣಂಗಳ ಶ್ರೀಪಾದಕ್ಕೆ ಶರಣೆಂದು
ಬದುಕಿದೆನು ಕಾಣಾ! ಅಭಿನವ ಮಲ್ಲಿಕಾರ್ಜುನಾ. ॥ ೨ ॥

೯೮೩

ಎನ್ನ ಕಷ್ಟಕುಲದ ಸೂತಕ
ನಿಮ್ಮ ಹಸ್ತ ಮುಟ್ಟಿದಲ್ಲಿ ಹೋಯಿತ್ತು!
ಶುಕ್ಲಶೋಣಿತದಿಂದಲಾದ ಸೂತಕ

ನಿಮ್ಮ ಮುಟ್ಟಲೊಡನೆ ಬಯಲಾಯಿತ್ತು!
ತಟ್ಟಿದ ಮುಟ್ಟಿದ ಸುಖಂಗಳನೆಲ್ಲವ
ಲಿಂಗಮುಖಕ್ಕೆ ಅರ್ಪಿಸಿದೆನಾಗಿ
ಎನ್ನ ಪಂಚೇಂದ್ರಿಯಂಗಳು ಬಯಲಾದುವು!
ಎನ್ನ ಅಂತರಂಗದಲ್ಲಿ ಜ್ಞಾನಜ್ಯೋತಿಯೆಡೆಗೊಂಡುದಾಗಿ
ಒಳಗೂ ಬಯಲಾಯಿತ್ತು!
ಸಂಸಾರ ಸಂಗದ ಅವಸ್ಥೆಯ ಮೀರಿದ ಕ್ರೀಯಲ್ಲಿ
ತರಪರವಾಯಿತ್ತಾಗಿ ಬಹಿರಂಗ ಬಯಲಾಯಿತ್ತು!
ಅಭಿನವ ಮಲ್ಲಿಕಾರ್ಜುನಾ,
ನಿಮ್ಮ ಮುಟ್ಟಿದ ಕಾರಣ ನಾನೂ ಬಯಲಾದೆ! ॥ ೩ ॥

೯೮೪

[ಎನ್ನ ಕಷ್ಟ] ಕುಲದಲ್ಲಿ ಹುಟ್ಟಿಸಿದೆಯಯ್ಯಾ, ಎಲೆ ಲಿಂಗ ತಂದೆ.
ಕೆಟ್ಟೆನಯ್ಯಾ, ನಿಮ್ಮ ಮುಟ್ಟಿ [ಯೂ ಮುಟ್ಟದಿ]ಹನೆಂದು
ಎನ್ನ ಕೈ ಮುಟ್ಟದಿರ್ದಡೆ ಮನ ಮುಟ್ಟಲಾಗದೆ?
ಅಭಿನವ ಮಲ್ಲಿಕಾರ್ಜುನಾ. ॥ ೪ ॥

೯೮೫

ನೆನೆಯಲರಿಯೆ ನಿರ್ಧರಿಸಲರಿಯೆ ಮನವಿಲ್ಲವಾಗಿ.
ಭಾವಿಸಲರಿಯೆ ಬೆರಸಲರಿಯೆ ಭಾವ ನಿರ್ಭಾವವಾಯಿತ್ತಾಗಿ.
ಧ್ಯಾನ ಮೌನವನರಿಯೆ ಧ್ಯಾನಾತೀತ ತಾನೆಯಾಯಿತ್ತಾಗಿ.
ಜ್ಞಾತೃ ಜ್ಞಾನ ಜ್ಞೇಯಂಗಳೆಲ್ಲವ ಮೀರಿ
ಅಭಿನವ ಮಲ್ಲಿಕಾರ್ಜುನನಲ್ಲಿ ಪರಮ ಸುಖಿಯಾಗಿರ್ದೆ.॥ ೫ ॥

೯೮೬

ಎನ್ನ ಕಷ್ಟ ಕುಲದಲ್ಲಿ ಹುಟ್ಟಿದೆನೆಂಬ ಕರ್ಮವ ಕಳೆದು
ಮುಟ್ಟಿ ಪಾವನವ ಮಾಡಿ
ಕೊಟ್ಟನಯ್ಯಾ ಎನ್ನ ಕರಸ್ಥಲಕ್ಕೆ ಲಿಂಗವ!
ಆ ಲಿಂಗ ಬಂದು ಸೋಂಕಲೊಡನೆ
ಎನ್ನ ಸರ್ವಾಂಗದ ಅವಲೋಹವಳಿಯಿತ್ತಯ್ಯಾ!
ಎನ್ನ ತನುವಿನಲ್ಲಿ ಗುರುವ ನೆಲೆಗೊಳಿಸಿದ,
ಎನ್ನ ಮನದಲ್ಲಿ ಜಂಗಮವ ನೆಲೆಗೊಳಿಸಿದ,

ಎನ್ನ ಅರುಹಿನಲ್ಲಿ ಪ್ರಸಾದವ ನೆಲೆಗೊಳಿಸಿದ!
ಇಂತೀ ತ್ರಿವಿಧ ಸ್ಥಾನವ ಶುದ್ಧವ ಮಾಡಿ
ಚತುರ್ವಿಧಸಾರಾಯಸ್ಥಲವ ಸಂಬಂಧವ ಮಾಡಿದ
ಸಂಗನ ಬಸವಣ್ಣನ ಕರುಣದಿಂದ
ಪ್ರಭುದೇವರ ಶ್ರೀಪಾದವ ಕಂಡು ಬದುಕಿದೆನು ಕಾಣಾ!
ಅಭಿನವ ಮಲ್ಲಿಕಾರ್ಜುನಾ. ॥ ೬ ॥

# ತಳವಾರ ಕಾಮಿದೇವಯ್ಯನ ವಚನ

೬೮೭

ಎತ್ತಾಗಿದ್ದು ಹೆಗಲ ಕೊಡೆನೆಂದಡೆ ನಿಶ್ಚಯವೆ?
ತೊತ್ತಾಗಿದ್ದು ಹೇಳಿದುದ ಕೇಳೆನೆಂದಡೆ ಮೆಚ್ಚುವರೆ?
ಭಕ್ತನಾಗಿದ್ದು ಭಾರಣೆಯನಾದರಿಸದಿದ್ದಡೆ ಅದು ಅಚ್ಚಿಗವೆಂದೆ,
ಕಾಮಹರಪ್ರಿಯ ರಾಮನಾಥಾ. ॥ ೧ ॥

೬೮೮

ಕಾಲವಂಚಕನಾಗಿ ಜಂಗಮಕಿಕ್ಕಿದಡೆ ಕರ್ಮವೆ ತಿಂಬುದು.
ಉಪಚರಿಸಿಕೊಂಬವನಾಗಿ ತ್ರಿಸಂಧಿಯಲ್ಲಿ ಲಿಂಗಪೂಜೆಯ ಮಾಡಿದಡೆ
ಅದು ಹಸಿವಿಲ್ಲದ ಗ್ರಾಸ, ಅಸಮಾಕ್ಷನ ಮುಟ್ಟದು.
ಇವು ಹುಸಿಯಲ್ಲವೆಂದೆ,
ಕಾಮಹರಪ್ರಿಯ ರಾಮನಾಥಾ. ॥ ೨ ॥

೬೮೯

ಮನವನೊಪ್ಪಿಸುವ ಠಾವಿನಲ್ಲಿ ಹೆಣ್ಣ ಬೇಡಿದಡೆ ನೋಯಲೇಕೆ?
ಧನವನೊಪ್ಪಿಸುವ ಠಾವಿನಲ್ಲಿ ನಿಷ್ಠುರ ಬಂದಡೆ ತಾಳಬೇಕು.
ತನುವನೊಪ್ಪಿಸುವ ಠಾವಿನಲ್ಲಿ ಅಸಿಯಲ್ಲಿ ಕುಸಿಕಿರಿವಡೆ
ಹುಸಿಯೆನ್ನದಿರ್ದಡೆ ಇವೆಲ್ಲವೂ ಕಸರಜದ ಗುಣ,
ಭಕ್ತಿಯ ಸತ್ವದ ನಿತ್ಯತ್ವವಿಲ್ಲೆಂದೆ,
ಕಾಮಹರಪ್ರಿಯ ರಾಮನಾಥಾ. ॥ ೩ ॥

೬೯೦

ಮನೆಯನೊಪ್ಪಿಸಿ ಕೊಟ್ಟುವಂಗೆ ಹಿಂದೆಸೆಯ ಹಂಗೇಕೆ?
ಮಾಡಿಹೆನೆಂಬ ಮಾಟವುಳ್ಳವಂಗೆ ಅವರಿವರಾಡಿಹರೆಂಬ
ಸಂದೇಹವೇಕೆ?

ಗುಡಿಯ ಕಟ್ಟಿದ ಮತ್ತೆ ಹಡಹಲ್ಲದೆ ಅವರಡಿಯನರಸಲೇಕೆ?
ಕಾಮಹರಪ್ರಿಯ ರಾಮನಾಥಾ. ॥ ೪ ॥

೯೯೧

ಮೂರ ಮುದುಡಿಸಿ ಆರನಡಗಿಸಿ
ಎಂಟ ಗಂಟಿಕ್ಕಿ ನಾಲ್ಕು ಸೆರಗ ಹಾಸಿ
ಎರಡರಲ್ಲಿ ಬಂಧಿಸಿ ಒಂದುಗೂಡಿ
ಮಂಡೆಯ ಮೇಲೆತ್ತಿದವಂಗೆ ಮತ್ತೆ ಅವು ಹಿಂಗುವ ಠಾವಿಲ್ಲ,
ಕಾಮಹರಪ್ರಿಯ ರಾಮನಾಥಾ. ॥ ೫ ॥

೯೯೨

ವ್ಯವಹಾರವ ಮಾಡಿದಲ್ಲಿ ಲಾಭವ ಕಾಣದಿರ್ದಡೆ
ಆ ವ್ಯವಹಾರವೇತಕ್ಕೆ?
ಗುರುಲಿಂಗ ಜಂಗಮಕ್ಕೆ ಖ್ಯಾತಿಗೆ ಮಾಡಿವಡೆ
ಮೊದಲು ತಪ್ಪಿ ಲಾಭವನರಸುವಂತೆ,
ಕಾಮಹರಪ್ರಿಯ ರಾಮನಾಥಾ. ॥ ೬ ॥

೯೯೩

ಹಸಿವು ಮುಂತಾಗಿ ಬಹಾತನ ಮನೆಯೊದವ ಬಲ್ಲನೆ?
ವಿಷಯವಾವರಿಸಿದಾತ ಸ್ತುತಿ ನಿಂದ್ಯಾದಿಗಳ ಬಲ್ಲನೆ?
ಖ್ಯಾತಿಕ ಲಾಭಕ್ಕೆ ಮಾಡುವಾತ ಭ್ರಾಂತಳಿದಿರಬಲ್ಲನೆ?
ಇಂತಿವನರಿದು ಮಾಡುವ ಭಕ್ತರು
ಆಪ್ಯಾಯನಕ್ಕೆ ಅನ್ನ ಆಶಕಂಗೆ ಹೊನ್ನು ವಿಷಯಾದಿಗೆ ಹೆಣ್ಣು
ಇಚ್ಫೆಯನರಿದು ಒದಗಿದಲ್ಲಿ ಕೊಟ್ಟು
ಈ ತ್ರಿವಧಕುಚಿತವೆಂದವರನರಿಯಬೇಕು
ಕಾಮಹರಪ್ರಿಯ ರಾಮನಾಥಾ. ॥ ೭ ॥

೯೯೪

ಹಾವರವನಾಡುವನೆ ಸದ್ಭಕ್ತ?
ಹಾದಿಯ ಕಟ್ಟುವನೆ ನಿಜಶರಣ?

ಹಸುಗೊಲೆಯ ಕೊಲುವನೆ ಅಸುವಿನ ಕಲೆಯ ಬಲ್ಲವ?
ಇಂತಿವರ ನೀ ಬಲ್ಲೆ, ನಾನರಿಯೆ
ಕಾಮದಹನಪ್ರಿಯ ರಾಮನಾಥಾ. ॥ ೮ ॥

೯೯೫

ಹಾದರ ಹಸುಗೊಲೆ ವಿಷಯಂಗಳಲ್ಲಿ ಆದರಿಸಬೇಕು.
ಬಲ್ಲವರಲ್ಲಿದ್ದು ಸಾಧನೆಯಾಯಿತ್ತು.
ಎಲ್ಲರೂ ಕಲಿತ ಕಲಿಕೆಯಲ್ಲಿ ಇದನು ಭೇದಿಸಲರಿಯೆ
ಕಾಮಹರಪ್ರಿಯ ರಾಮನಾಥಾ. ॥ ೯ ॥

೯೯೬

ಹುಟ್ಟುವ ಜೀವಿಗಳೆಲ್ಲರೂ ಹಲವು ತೆರದ ಘಟದಲ್ಲಿ ಬಂದು
ತಮ್ಮ ಕ್ಷುತ್ತುವ ಕೊಂಬಂತೆ
ಮರ್ತ್ಯದಲ್ಲಿ ಬಂದವರೆಲ್ಲರೂ ನಿಶ್ಚಯರಪ್ಪರೆ?
ಬಚ್ಚತ ಹರಿಯಜ ರುದ್ರರು ಮೊದಲಾದವರೆಲ್ಲರೂ
ಸಿಕ್ಕಿದರೇಕೆ ಮಾಯೆಗೆ?
ಇದರಚ್ಚಿಗವ ಕಂಡು ನಾನು ಭಕ್ತನೆಂದಡೆ ತಪ್ಪ ಸಾಧಿಸುವ
ಕಾಮಹರಪ್ರಿಯ ರಾಮನಾಥಾ. ॥ ೧೦ ॥

# ತುರುಗಾಹಿ ರಾಮಣ್ಣನ ವಚನ

೯೯೭

ಅಂಗಕ್ಕೆ ಲಿಂಗ ಆಚಾರ, ಲಿಂಗಕ್ಕೆ ಸರ್ವಕ್ರಿಯಾಸಂಬಂಧ ಆಚಾರ.
ಆ ಆಚಾರಕ್ಕೆ ಸರ್ವಗುಣ ವಿಚಾರದಿಂದೆ ಬೀಜ ನಿರ್ವಿಜನರಿದು
ಕಾಬುದು ಕಾಣಿಸಿಕೊಂಬ ಉಭಯವ ವೇದಿಸಿ
ಪರುಷ ಲೋಹವ ಗ್ರಹಿಸಿದಂತೆ ವಿಭೇದಕ್ಕೆ ಒಡಲಲ್ಲದೆ
ನಿಂದ ನೆಲೆ, ಲಿಂಗ ಪ್ರಾಣದ ಕೂಟ; ಇದು ವಿಶುದ್ಧಿ
ಗೋಪತಿನಾಥ ವಿಶ್ವೇಶ್ವರಲಿಂಗದಲ್ಲಿ ನಿಷ್ಪತ್ತಿಯಾದ ನಿರ್ವೇದ. ॥ ೧ ॥

೯೯೮

ಅಯ್ಯಾ, ಏಸನಹುದೆಂಬೆ, ಏನನಲ್ಲಾ ಎಂಬೆ.
ಕಾಯವುಳ್ಳನ್ನಕ್ಕ ಕರ್ಮ ಬಿಡದು,
ಜೀವವುಳ್ಳನ್ನಕ್ಕ ಕಾರ್ಪಣ್ಯ ಕೆಡದು.
ಆರ ಕೇಳಿ ಆರಿಗೆ ಹೇಳಿಹೆನೆಂದಡೂ ಭಾವದ ಭ್ರಮೆ ಬಿಡದು.
ಮಹಾಸಮುದ್ರವನೀಜುವವನಂತೆ ಕರ ಕಾಲು ಆಡುವನ್ನಕ್ಕ
ಜೀವಭ್ರಮೆ ನಿಂದಲ್ಲಿ ನಿಂದಿತ್ತು.
ಭಾವಭ್ರಮೆ ಒಂದನರಿತು ಒಂದನರಿದೆಹೆನೆಂಬನ್ನಕ್ಕ
ಬಂದಿತ್ತು ದಿನ, ಅಂಗವ ಹರಿವುದಕ್ಕೆ.
ಈ ಸಂದೇಹದ ಸಂದಿಯಲ್ಲಿ ಕೆಡಹದೆ
ನಿಜದಂಗವ ತೋರು ಗೋಪತಿನಾಥ ವಿಶ್ವೇಶ್ವರ ಲಿಂಗ. ॥ ೨ ॥

೯೯೯

ಅರಿದೆಹೆನೆಂಬನ್ನಕ್ಕ ಆ ತುರಿಯ
ಕಂಡೆಹೆನೆಂಬನ್ನಕ್ಕ ಆ ತುರಿಯ
ಕಂಡೆನು ಎಂಬಲ್ಲಿ ಸಂದೇಹದ ಸಂದು
ಆತುರವೆಂಬ ಅರಿಕೆ ತುರಿಯವೆಂಬ ಮೋಹ

ಕಂಡೆನು ಎಂಬ ಸಂದೇಹದ ಸಂದು ನಿಂದಲ್ಲಿ
ಅದು ನಿಜದುಳುಮೆ;
ಗೋಪತಿನಾಥ ವಿಶ್ವೇಶ್ವರಲಿಂಗವೆ ಪ್ರಮಾಣು. ॥ ೩ ॥

೧೦೦೦

ಆತ್ಮಂಗೆ ಕಾಯವೆ ರೂಪು.
ಆ ಕಾಯಕ್ಕೆ ಆತ್ಮನೆ ಹಾಹೆ.
ಆ ಹಾಹೆಗೆ ಅರಿವೇ ಬೀಜ.
ಆ ಬೀಜಕ್ಕೆ ಗೋಪತಿನಾಥ ವಿಶ್ವೇಶ್ವರಲಿಂಗವೆ ನಿರ್ವೀಜ.॥ ೪ ॥

೧೦೦೧

ಆವಾವ ಭೇದಂಗಳಿಂದ ಬಂದಡೂ ಕಾವುದೊಂದೆ ಭೇದ.
ಹೆಣ್ಣು ಹೊನ್ನು ಮಣ್ಣು ಕಾವಲ್ಲಿ ಸಜ್ಜನಂಗಲ್ಲದೆ ಅಶಕ್ಯ ನೋಡಾ.
ಅವ ಕಾವಲ್ಲಿಯಾದಡೂ ಭಾವಶುದ್ಧವಾಗಿರಬೇಕು.
ಈ ಗುಣ ಅರಿವಿನ ಕುರುಹಿನ ಹಾದಿ;
ತುರುಗಾಹಿ ರಾಮನ ಪಥ.
ಗೋಪತಿನಾಥ ವಿಶ್ವೇಶ್ವರಲಿಂಗವನರಿವುದಕ್ಕೆ ಸುಪಥದ
ಪಥ. ॥ ೫ ॥

೧೦೦೨

ಇದಿರಿಡುವ ಪೂಜೆ ವಾಗ್ಬ್ರಹ್ಮದ ಷಡುಸ್ಥಲದ ಸೋಪಾನ
ಅಡಿಯ ಮೆಟ್ಟಿ ಅಡಿವಿಡಿವನ್ನಕ್ಕ
ಗೋಪತಿನಾಥ ವಿಶ್ವೇಶ್ವರಲಿಂಗವು
ಉಭಯನಾಮವಾಗಿಪ್ಪನು. ॥ ೬ ॥

೧೦೦೩

ಉತ್ಪತ್ತ್ಯವೆಂಬ ಪಶುವಿನ ಮೇಲೆ
ಸ್ಥಿತಿಯೆಂಬ ವೃಷಭ ಏರಿತ್ತಲ್ಲಾ.
ಸ್ವಸ್ಥಾನವಾಗಿ ಸುಖದ ಸುಗ್ಗಿಯಿಂದ
ಬಿಂದು ನಿಂದು ಕರು ಹುಟ್ಟಿತ್ತಲ್ಲಾ.
ಕರು ಉದಯವಾಗಿ ಕರಿಗೊಂಡಡೆ ಲಲ್ಲೆಯಿಂದ ಕ್ಷೀರ.
ಅವು ಒಲ್ಲದಿದ್ದಡೆ ಓರೆಯಾಯಿತ್ತಲ್ಲಾ.

ಇಂತೀ ಅರಿವು ಕರಿಗೊಂಡ ಭೇದ.
ಇಂತೀ ಅರಿದು ಬರುದೊರೆವೋದ ಭೇಧ.
ಇಂತೀ ಜ್ಞಾನ ನೇತ್ರಸೂತ್ರ ಗೋಪತಿನಾಥ ವಿಶ್ವೇಶ್ವರಲಿಂಗವಲ್ಲಿ
ತುರುಗಾಹಿ ರಾಮಣ ಮಾತು. ॥ ೭ ॥

೧೦೦೪

ಉದಯದಲ್ಲಿ ಬ್ರಹ್ಮನ ಕಾವೆ
ಮಧ್ಯಾಹ್ನಕ್ಕೆ ವಿಷ್ಣುವ ಕಾವೆ
ಅಸ್ತಮಯದಲ್ಲಿ ರುದ್ರನ ಕಾವೆ.
ಕತ್ತಲೆಯಾದ ಮತ್ತೆ ತಮ್ಮ ತಮ್ಮ ಮಂದೆಗೆ ಹೊಡೆದು
ಈ ಕಾವ ಕಟ್ಟಿಗೆಯ ಇನ್ನೆಂದಿಗೆ ಬಿಡುವೆ?
ಗೋಪತಿನಾಥ ವಿಶ್ವೇಶ್ವರಲಿಂಗವು ನಷ್ಟವಹನ್ನಕ್ಕ
ಎನ್ನ ಕೈಯ ಕಟ್ಟಿಗೆ ಬಿಡದು. ॥ ೮ ॥

೧೦೦೫

ಏರಿದ ವಾಜಿ ಓಹೋ ಎಂದು ಕರೆದೋರಿದಲ್ಲಿ
ನಿಂದಿತ್ತು ವಾಹನ ವಾಹಕನ ಹೃದಯವನರಿತು.
ವಸ್ತುವ ಮುಟ್ಟಿ ಆಡುವ ಚಿತ್ತ ನಿಜವಸ್ತುವಿನ ಗೊತ್ತನರಿಯದೆ
ತನ್ನ ಇಚ್ಛೆಯಲ್ಲಿ ಹರಿದಾಡುತ್ತಿದೆ ನೋಡಾ!
ಇದಕ್ಕೆ ಒಂದು ಕಟ್ಟಣೆಯ ಗೊತ್ತ ಲಕ್ಷಿಸಿ
ಕಟ್ಟುವಡೆವಂತೆ ಮಾಡು
ಗೋಪತಿನಾಥ ವಿಶ್ವೇಶ್ವರಲಿಂಗ. ॥ ೯ ॥

೧೦೦೬

ಕಂಗಳ ದೃಷ್ಟದಿಂದ ನಿಷ್ಠೆಯನರಿತು,
ನಿಷ್ಠೆ ನಿಜದಲ್ಲಿ ನಿಂದು ಅರಿವು ಕಂಗೊಂಡಲ್ಲಿ
ಗೋಪತಿನಾಥ ವಿಶ್ವೇಶ್ವರಲಿಂಗವು ದೃಷ್ಟವಾಯಿತ್ತು. ॥ ೧೦ ॥

೧೦೦೭

ಕರೆವ ಹಸುವ ಉಳುವ ಬೆನ್ನತ್ತ
ಮೊಲೆವುಂಬ ಕರುವ ಕುರುಹನರಿಯದೆ ಕಾಯಬಹುದೆ,
ಈ ತ್ರಿವಿಧವಿಲ್ಲದೆ ಗುರುವಿನ ಇರವ

ಲಿಂಗದ ಮೂರ್ತಿಧ್ಯಾನವ
ಅರಿವಿನ ಮರೆದೊರಗುವ ಕಲೆಯ
ಚಲನೆ ನಿಂದಲ್ಲಿ ಆತ್ಮಲಿಂಗ ಭೇದ, ಪ್ರಾಣ ಸಂಬಂಧವಪ್ಪುದು.
ಗೋಪತಿನಾಥ ವಿಶ್ವೇಶ್ವರಲಿಂಗವನರಿವುದಕ್ಕೆ ಇದೇ
ಪ್ರಮಾಣು. ॥ ೧೧ ॥

೧೦೦೮

ಕಾಯನೂ ಬಿಲ್ಲನೂ ಕೂಡೆ ಹಿಡಿದು ಎಸೆಯಬಹುದೆ?
ಕ್ರೀಯನೂ ನಿಃಕ್ರೀಯನೂ ಕೂಡಿ ವೇದಿಸಿ ನಡೆಯಬಹುದೆ?
ಕಾಯಿ ಹಣ್ಣಾಹನ್ನಕ್ಕ ಶಾಖೆಯ ಸಂಗ ಬೇಕು.
ಹಣ್ಣುನೆರೆ ಬಲಿದು ರಸ ತುಂಬಿದ ಮತ್ತೆ ತೊಟ್ಟಿಗೆ ಬಿಡುಗಡೆ.
ಜ್ಞಾನ ರಸ ಕ್ರೀ ಮಲ ತನ್ನೊಳಗಿದ್ದು ತನ್ನ ಸ್ವಾದು ಬೇರಾದಂತೆ.
ಕ್ರೀ ಸಂಬಂಧ ಜ್ಞಾನಸಂಬಂಧ ಉಭಯವ ವಿಚಾರಿಸಲಿಕ್ಕಾಗಿ
ನಿರವಯದಿಂದೊದಗಿದ ಸಾವಯವನರಿತು
ನಿಃಕ್ರೀಯಿಂವಕೀವೊಡಲುಗೊಂಡುದ ಕಂಡು
ಆದಿ ವಸ್ತುವಿಗೆ ಅನಾದಿ ವಸ್ತು ಬೀಜವಾದುದನರಿದು
ನೀರಿಗೆ ಸಾರಬಂದು ರಸವಾದ ತೆರನಂತೆ
ತಿಲ ಮರಳಿ ಹೊರಳಿ ಬೆಳೆವಲ್ಲಿ
ಆ ರಸ ಬೇರಿಲೊ ಕೊನರಿಲೊ ಕುಸುಮದಲೊ ಕಾಯಲೊ?
ಈ ಸರ್ವಾಂಗದೊಳಡಗಿ ಇದ್ದ ಠಾವ ಬಲ್ಲಡೆ ಕ್ರೀಜ್ಞಾನ ಸಂಬಂಧಿ.
ಆದು ವಾರಿಯ ಸಾರದಿಂದ ಸಾಕಾರ ಬಲಿದು
ನಿರಾಕಾರದ ಈ ಗುಣದಲ್ಲಿ ಒಂದರಿಂದ ಒಂದನರಿದೆಹೆನೆಂದಡೆ
ಸಂದೇಹ ಮೊದಲಾದ ಸಂಶಯವರ್ತಕ ವಸ್ತುವಿನಲ್ಲಿ ವರ್ತಿಸಿ
ವಸ್ತು ಆ ವಸ್ತುವ ಗರ್ಭೀಕರಿಸಿ ನಿಶ್ಚಯವಾದ ನಿಜ ಕ್ರೀ ನಿಃಕ್ರೀ ನಿರ್ವಾಹ
ಗೋಪತಿನಾಥ ವಿಶ್ವೇಶ್ವರಲಿಂಗವನರಿತಲ್ಲಿ. ॥ ೧೨ ॥

೧೦೦೯

ಕಾಲವೇಳೆಯನರಿದು ತೃಣ ವಾರಿ
ನೆಳಲನರಿದು ರಕ್ಷಿಸಿ ಕಾವನಿರವು.
ಪಿಂಡ ಪ್ರಾಣ ಆರೋಗ್ಯಂಗಳಲ್ಲಿ ನಿಂದು
ಆತ್ಮನ ನಿಜಸ್ವಸ್ಥವನರಿದು
ಕ್ರೀಯಲ್ಲಿ ಶುದ್ಧ ಪೂಜೆಯಲ್ಲಿ ನಿಷ್ಠೆ

ನೆಲೆಯನರಿದಲ್ಲಿ ತ್ರಿವಿಧದ ಬಿಡುಗಡೆ.
ಆತ್ಮನ ಬಿಡುವ ಅವಸಾನವನರಿಯಬೇಕು
ಗೋಪತಿನಾಥ ವಿಶ್ವೇಶ್ವರಲಿಂಗವನರಿವುದಕ್ಕೆ. ॥ ೧೩ ॥

೧೦೧೦

ಕಾವುದು ಹುಟ್ಟುವುದು ಮೀರಿದಡೆ ಹೊಡೆವುದು.
ಗಣ್ಣೆನ ಕೋಲ ಹಿಡಿದು ಗೋವ ಕಾವುತ್ತಿರಲಾಗಿ,
ಕಾವಗಣ್ಣೆನಲ್ಲಿ ಕರ್ಮವಡಗಿ,
ಕಟ್ಟುವ ಕಗ್ಗಣ್ಣೆನಲ್ಲಿ ಧರ್ಮವಡಗಿ,
ಮೀರುವಗಣ್ಣೆನಲ್ಲಿ ವರ್ಮವಡಗಿ,
ತ್ರಿವಿಧವನೊಳಕೊಂಡ ಕೋಲು ಗೋವಿನ ಬೆನ್ನಿನಲ್ಲಿ ಲಯವಾಯಿತ್ತು,
ಗೋಪತಿನಾಥ ವಿಶ್ವೇಶ್ವರಲಿಂಗವನರಿಯಲಾಗಿ. ॥ ೧೪ ॥

೧೦೧೧

ಕ್ರೀಯನೆ ಭಾವಿಸಿಹೆನೆಂದಡೆ ಮೃತ್ತಿಕೆಯ
ಸಾಕಾರವ ತೊಳೆದು ನಿರ್ಮಳವನರಸುವಂತೆ.
ಶೂನ್ಯದಲ್ಲಿ ವಿಶ್ರಮಿಸಿ ಕಂಡೆಹೆನೆಂದಡೆ ಕೆಂಗಳಿಗೆಟ್ಟದು
ಕೈಮುಟ್ಟದು, ಆತ್ಮಂಗೆ ಅಗೋಚರ
ಇಂತೀ ಉಭಯವನೊಡಗೂಡಿ ಕಂಡೆಹೆನೆಂದಡೆ
ಕ್ರೀಗೆ ಅಂಗ ನಿಲ್ಲದು; ಆತ್ಮಂಗೆ ಸಲ್ಲದು.
ಉಭಯದಾಟ ಕೂಡಿ ನಿನ್ನರಿವನ್ನಕ್ಕ ಕಲ್ಪಿತಾಂತರ ಕೂಟವಾಗುತ್ತಿದೆ.
ಇದರಚ್ಚುಗವ ಬಿಡಿಸು ಗೋಪತಿನಾಥ ವಿಶ್ವೇಶ್ವರಲಿಂಗ. ॥ ೧೫ ॥

೧೦೧೨

ಕ್ರೀ ಶುದ್ಧತೆಯಾದಲ್ಲಿ ಭಾವ ಶುದ್ಧವಾಗಿಪ್ಪುದು.
ಭಾವಶುದ್ಧವಾಗಿಪ್ಪಲ್ಲಿ ಸರ್ವೇಂದ್ರಿಯಂಗಳು ಏಕೇಂದ್ರಿಯವಾಗಿ
ಚಿತ್ತಶುದ್ಧ ಸಿದ್ಧಿಯಾದಲ್ಲಿ ಸರ್ವಜ್ಞಾನ ಸಂಪನ್ನನಪ್ಪನು.
ಆ ಗುಣ ನಿಜನೆಲೆಯಾದಲ್ಲಿ
ಗೋಪತಿನಾಥ ವಿಶ್ವೇಶ್ವರಲಿಂಗ ವಚಿಚ್ಚಂತಿಪ್ಪನು. ॥ ೧೬ ॥

೧೦೧೩

ಕೋ ಬಾ ಎಂದಲ್ಲಿ ಆತ್ಮನ ಭೇದ,
ಅಂಬಾ ಎಂದಲ್ಲಿ ಅರಿವಿನ ಭೇದ,

ಧಾ ಎಂದು ನಕ್ಕಿರಿದಲ್ಲಿ ಚಿದಾತ್ಮನ ಭೇದ.
ಇಂತೀ ಗುಣದ ಪಶು ಅಸುವಿನ ಬಲೆಯ ಕಾಯ್ದೊಪ್ಪಿಸಬೇಕು,
ಗೋಪತಿನಾಥ ವಿಶ್ವೇಶ್ವರಲಿಂಗಕ್ಕೆ. ॥ ೧೭ ॥

೧೦೧೪

ಕೋಲೊಂಪರಲ್ಲಿ ಹಲವು ಕುಲದ ಗೋವುಗಳ ಚಲಿಸದೆ ನಿಲಿಸುವಂತೆ
ಏಕಚಿತ್ತನಾಗಿ ಸರ್ವವಿಕಾರಂಗಳ ಕಟ್ಟುವಡೆದು,
ಇಂದ್ರಿಯಂಗಳ ಇಚ್ಛೆಯಲ್ಲಿ ತ್ರಿವಿಧವ ಹಿಡಿದಿರುವರ ಸಂದಿಯಲ್ಲಿ ನುಸುಳದೆ
ವಸ್ತುವಿನ ಅಂಗದಲ್ಲಿಯೆ ತನ್ನಂಗ ತಲ್ಲೀಯವಾಗಿಪ್ಪುದೆ ಮಹಾ ನಿಜದ ನೆಲೆ.
ಗೋಪತಿನಾಥ ವಿಶ್ವೇಶ್ವರಲಿಂಗವನರಿವುದಕ್ಕೀಇದೆ ಬಟ್ಟೆ. ॥ ೧೮ ॥

೧೦೧೫

ಗುರುಸ್ಥಲ ಲಿಂಗಸ್ಥಲ ಜಂಗಮಸ್ಥಲ ಭಕ್ತಿಸ್ಥಲ
ಮಹೇಶ್ವರಸ್ಥಲ ಪ್ರಸಾದಿಸ್ಥಲ ಪ್ರಾಣಲಿಂಗಿಸ್ಥಲ ಶರಣಸ್ಥಲ ಐಕ್ಯಸ್ಥಲ
ಇಂತೀ ನವಗುಣಸ್ಥಲಂಗಳಲ್ಲಿ ಸಾಧಕ ಮೂರು
ಸಾಧ್ಯ ಮೂರು ಅಸಾಧ್ಯ ಮೂರು.
ಸಾಧಕದಿಂದ ಸಾಧ್ಯ, ಸಾಧ್ಯದಿಂದ ಅಸಾಧ್ಯ
ಅಸಾಧ್ಯದಿಂದ ಭೇದಕತ್ವ
ಇಂತೀ ದಶಗುಣಸಿದ್ಧಿ.
ಸಿದ್ಧಿಯಾದಲ್ಲಿ ಮೂವತ್ತಾರು ಭೇದ ಇಪ್ಪತ್ತೈದು ತತ್ವ
ನೂರುಸ್ಥಲ ಪ್ರಮಾಣು.
ಒಂದು ಸ್ಥಲದಲ್ಲಿ ನಿಂದು ಐಕ್ಯವಾಗಲಾಗಿ
ಬೀಜದೊಳಗಣ ಫಲ ಪರ್ಣ ಅಂಕುರ ವಿಭೇದವಿಲ್ಲದೆ ಅಡಗಿದಂತೆ.
ಈ ಗುಣ ಸರ್ವಸ್ಥಲ ಸಂಪೂರ್ಣವ ಐಕ್ಯಬೀಜ ನಾಮ
ಗೋಪತಿನಾಥ ವಿಶ್ವೇಶ್ವರಲಿಂಗದಲ್ಲಿ ಉಭಯವಳಿದ ನಿರ್ಬೀಜ. ॥ ೧೯ ॥

೧೦೧೬

ಜೀವಕುಳವಳಿಯಿತ್ತು, ಜ್ಞಾನಕುಳ ಉಳಿಯಿತ್ತು.
ಭವಪಾಶ ಹರಿಯಿತ್ತು, ಅಜ್ಞಾನ ಹಿಂಗಿತ್ತು.
ಎಲೆ ಗೋಪತಿನಾಥ ವಿಶ್ವೇಶ್ವರಲಿಂಗಾ,
ನಿನ್ನತ್ತ ಮನವಾಯಿತ್ತೆನಗೆ
ಕೃಪೆಮಾಡು ಕೃಪೆಮಾಡು ಶಿವಧೋ ಶಿವಧೋ. ॥ ೨೦ ॥

೧೦೧೭

ಜ್ಞಾನನೇತ್ರ ಮುಸುಕ ತೆಗೆದು ಮುಂದಕ್ಕೆ ಅದೇನ ಕಾಬುದು ?
ಕಾಬುದು ಕಾಣಿಸಿಕೊಂಬುದು ನಿಜ ತಾನಾದಲ್ಲಿ
ಗೋಪತಿನಾಥ ವಿಶ್ವೇಶ್ವರಲಿಂಗವು ಉಭಯನಾಮವಿಲ್ಲ. ॥ ೨೧ ॥

೧೦೧೮

ತತ್ವಂಗಳ ಗೊತ್ತ ಗುಟ್ಟೆಂದು ಬಿಡಬಾರದು
ಇಷ್ಟಲಿಂಗದ ಪೂಜೆಯ ಆತ್ಮನ ಗೊತ್ತನರಿತೆನೆಂದು
ಮರೆಯಲಾಗದು.
ಪಾಪ ಪುಣ್ಯವಿಲ್ಲಾ ಎಂದು ನೀಕರಿಸಿ ನಡೆಯಲಾಗದು.
ಈ ಗುಣ ಅಂಗವನರಿವನ್ನಕ್ಕ ಒಂದೂ ಇಲ್ಲಾ ಎಂದು ಬಿಡಬಹುದೆ ?
ನಾನೆಂಬುದ ಇದೇನೆಂದು ಅರಿವನ್ನಕ್ಕ
ಶ್ರುತಕ್ಕೆ ದೃಷ್ಟ, ದೃಷ್ಟಕ್ಕೆ ಅನುಮಾನ, ಅನುಮಾನಕ್ಕೆ ನಿಶ್ಚಯ.
ನಿಶ್ಚಯ ನಿಜವಾದಲ್ಲಿ, ಗೋಪತಿನಾಥ ವಿಶ್ವೇಶ್ವರಲಿಂಗನ
ಕ್ರಿಯಾನಿರ್ವಾಹ. ॥ ೨೨ ॥

೧೦೧೯

ದೃಷ್ಟಿಯ ದೃಷ್ಟದಿಂದ ಮೋಹದ ಲವಲವಿಕೆ.
ಮೋಹದ ಲವಲವಿಕೆಯಿಂದ ಸ್ಪರ್ಶನದ ಉಭಯದ ಕೂಟ
ಏಕವಾದಲ್ಲಿ
ಹಿಂದಣ ಕುರುಹು ಮುಂದಣ ಲಕ್ಷ್ಯ ಅಲಕ್ಷ್ಯನಾಗಿ
ದಂಪತಿ ದ್ವಂದ್ವವಿಲ್ಲದೆ, ನಿಜವೆಂಬ ಕುರುಹು ಅರಿಕೆದೋರದೆ
ಅವಿರಳ ನಾಮಶೂನ್ಯವಾದುದು
ಗೋಪತಿನಾಥ ವಿಶ್ವೇಶ್ವರಲಿಂಗವು ಹೃತ್ಕಮಲದಲ್ಲಿ
ವಿಶ್ರಾಂತಿಯಾದ ಇರವು. ॥ ೨೩ ॥

೧೦೨೦

ನೀನು ಅಂಗದಲ್ಲಿ ಕಡಿಮುದ ಬಿಟ್ಟು
ಬಿಟ್ಟು ನೋಡಿ ನಿನ್ನ ಕುರುಹ ಕಾಣೆ.
ನೀನು ಕರ್ಣದಲ್ಲಿ ಹೇಳಿಮುದ ನೆನೆದು ನೆನೆದು ಮನದಲ್ಲಿ ನಿಲ್ಲೆ.
ನೀ ಬಿಡೆಂಮುದ ಬಿಟ್ಟೆ, ನೀ ಹಿಡಿಯೆಂಮುದ ಹಿಡಿದೆ.
ನೀ ಅರಿಯೆಂಮುದ ಮುಖಗುರುಹ ಕಾಣೆ.
ನಿನ್ನರಿಕೆ ಇನ್ನೆಂದಿಗೆ?
ಈ ಘಟವ ಬಿಡುವುದಕ್ಕೆ ಮೊದಲೆ
ನಿನ್ನಡಿಯ ಗುಡಿಯ ತೋರು
ಗೋಪತಿನಾಥ ವಿಶ್ವೇಶ್ವರಲಿಂಗಾ. ॥ ೨೪ ॥

೧೦೨೧

ನೆನಹೆ ಲಿಂಗವಾದ ಮತ್ತೆ ಮುಟ್ಟುವುದಕ್ಕೆ ಮಸ್ತಕವಿಲ್ಲ.
ಮಾಡುವಾತ ಪರ್ಮಜ್ಞನಾದಲ್ಲಿ
ಇಕ್ಕಿಹೆ ಕೊಟ್ಟಿಹೆನೆಂಬುದು ನಷ್ಟವಾಯಿತ್ತು.
ಅರಿಮು ಚರಿಸುವ ವಿರಕ್ತಂಗೆ ತಥ್ಯಮಿಥ್ಯವಳಿದಲ್ಲಿ ಹೊಕ್ಕಿಹೆ ಹೊರಟಿಹೆ
ಇದಿರ ಚಿತ್ತವನರಿದೆಹೆನೆಂಬ ಗೊತ್ತುಗೆಟ್ಟಿತ್ತು.
ಇಂತೀ ಭೇದಂಗಳ ಭೇದಿಸಿ ವಿಭಾಗಿಸದೆ
ವಾಯುವಿನ ಕೈಯ ಗಂಧದಂತೆ ನಾಸಿಕಕ್ಕೆ ವಾಸನೆ ತೋರಿ
ಹಿಡಿದೆಹೆನೆಂದಡೆ ಬುಡ ಸಿಕ್ಕದೆ
ತ್ರಿವಿಧ ಭಕ್ತಿ ಸನ್ನದ್ಧನಾಗಿಪ್ಪ ಸದ್ಭಕ್ತನ ಶ್ರೀಪಾದವೆ
ಗೋಪತಿನಾಥ ವಿಶ್ವೇಶ್ವರಲಿಂಗವಿಪ್ಪ ಆಲಯ. ॥ ೨೫ ॥

೧೦೨೨

ನೆವದಿಂದ ಶರಣರ ಬಾಗಿಲಲ್ಲಿ ಹೋಗಿ
ಕಟ್ಟಿದ ಹಸು ಕೂಡಿದ ಎತ್ತು ಬಿಡಿರೊ ಎಂದು ಕೂಗುತ್ತಿದ್ದೇನೆ.
ಎನ್ನ ಕೂಗಿನ ದನಿಯಿಂದ ಮಹಾಶರಣರ ಸತಿ ಬಂದು
ಕಟ್ಟಿದ ಹಸುವ ಬಿಟ್ಟು, ಕೂಡಿದ ಎತ್ತ ಕಡಹಿ
ನಾಳೆ ಕೊಡಿಯೆಂದು ಹೊಡೆವುತ್ತಿದ್ದೇನೆ
ಗೋಪತಿನಾಥ ವಿಶ್ವೇಶ್ವರಲಿಂಗದಡಿಗಾಗಿ. ॥ ೨೬ ॥

೧೦೨೩

ಪರಬ್ರಹ್ಮದಿಂದ ಅಪರವ ಕಾಬುದು
ಅಪರದಿಂದ ಪರಾಪರವ ಧ್ಯಾನಿಸುವುದು.
ಧ್ಯಾನ ತದ್ಧ್ಯಾನವಾದಲ್ಲಿ ಮೂರ್ತಿಯ ನಿಜ ನಿಃಕಲಲೀಯ
ಅದು ತ್ರಿವಿಧ ನಾಮನಷ್ಟ, ತ್ರಿವಿಧಾತ್ಮಸೂತಕ ನಾಶನ
ಗೋಪತಿನಾಥ ವಿಶ್ವೇಶ್ವರಲಿಂಗವು ಅವಿರಳ ಸಂಬಂಧಿ.॥ ೨೭ ॥

೧೦೨೪

ಪ್ರಥಮ ಮೂಲದಲ್ಲಿ ನಿರಾಕಾರವಸ್ತು ಸಾಕಾರವಾಯಿತ್ತು.
ಆಚಾರಕ್ಕೋಸ್ಕರವಾಗಿ ವಸ್ತು ಅನಾಚಾರಿಯಾದ.
ಅನಾಹತ ಸಂಸಿದ್ಧ ಆಗಲಾಗಿ ವಿಚಾರಮುಖದಿಂದ
ಆಚಾರ್ಯನಾದ.
ಆ ಮರದ ಶಾಖೆಯ ತೊಡಪಿಂದ ಆ ಮರದ ಫಲದ
ಕೈಗೆ ತಾಹಂತೆ
ಈ ಗುಣ ಕ್ರೀ ನಿಃಕ್ರೀಯೆಂಬ ಉಭಯವಿವರದ ಭೇದ.
ಉಭಯಕ್ಕೆ ಒಂದು ಶುದ್ಧವಾದಲ್ಲಿ ಒಂದಲ್ಲಿ ಒಂದು ಸಂದಿತ್ತು.
ಈ ಗುಣ ಕ್ರೀ ನಿಃಕ್ರೀಲೇಪ, ಏಕಸ್ಥಲ ಐಕ್ಯನ ಕೂಟ
ಗೋಪತಿನಾಥ ವಿಶ್ವೇಶ್ವರಲಿಂಗದ ಒಳಗಿನಾಟ. ॥ ೨೮ ॥

೧೦೨೫

ಬಂದಿತ್ತು ದಿನ ಬಸವಣ್ಣ ಕಲ್ಲಿಗೆ
ಚನ್ನಬಸವಣ್ಣ ಉಳುವೆಯಲ್ಲಿಗೆ
ಪ್ರಭು ಅಕ್ಕ ಕದಳಿದ್ವಾರಕ್ಕೆ
ಮಿಕ್ಕಾದ ಪ್ರಮಥರೆಲ್ಲರೂ ತಮ್ಮ ಲಕ್ಷ್ಯಕ್ಕೆ
ನಾ ತುರುವಿನ ಬೆಂಬಳಿಯಲ್ಲಿ ಹೋದ ಮರೆಯಲ್ಲಿ
ಅಡಗಿಹರೆಲ್ಲರು ಅಡಗಿದುದ ಕೇಳಿ ನಾ
ಗೋಪತಿನಾಥ ವಿಶ್ವೇಶ್ವಲಿಂಗದಲ್ಲಿಯೆ ಉಡುಗುವೆನು.॥ ೨೯ ॥

೧೦೨೬

ಬೆಳೆದು ಬೆಳೆಯಿಸಿಕೊಂಬುದು
ನೀರೊ ನೆಲನೊ ಬೀಜವೊ ಎಂಬುದ ತಿಳಿದು,

ಕರ್ಮವರ್ಮ ಕೂಟಂಗಳ ಆಟವನರಿತು
ವರ್ತನಕ್ಕೆ ಕ್ರೀ ಸತ್ಯಕ್ಕೆ ಜ್ಞಾನ
ಜ್ಞಾನಕ್ಕೆ ಸರ್ವಜೀವದ ವ್ಯಾಪಾರ ಭೇದ.
ಅದು ಸಂಪದ ಸಂಬಂಧ ತತ್ವ
ಗೋಪತಿನಾಥ ವಿಶ್ವೇಶ್ವರಲಿಂಗದ ಕ್ರಿಯಾನಿರ್ವಾಹ. ॥ ೩೦ ॥

೧೦೨೭

ಭಾವವುಳ್ಳನ್ನಕ್ಕ ಭ್ರಮೆಯ ಬೀಜ.
ಭ್ರಮೆ ನಿಭ್ರಮೆಯಹನ್ನಕ್ಕ ಪೂಜೆಯ ವೃಷ್ಟ.
ಪುಣ್ಯದ ಬೀಜ ಸುಖದ ಬೆಳೆ ಸಾಧನ ಸಂಪತ್ತು.
ಇಂತೀ ಕ್ರೀ ಸಾಧ್ಯವಹನ್ನಕ್ಕ ಅಸಾಧ್ಯದ ಸಂಬಂಧ.
ವಿರಳ ಅವಿರಳವೆಂಬ ಕಲೆ ಕಳೆಯಲ್ಲಿ ಕಲೆದೋರದೆ ನಿಂದುದು
ಗೋಪತಿನಾಥ ವಿಶ್ವೇಶ್ವರಲಿಂಗವು ವಿಶ್ವನಾಮ ನಷ್ಟವಾದ
ಭೇದ. ॥ ೩೧ ॥

೧೦೨೮

ಮೂರು ಬೆಟ್ಟದ ತಪ್ಪಲಿನ ಮಧ್ಯದಲ್ಲಿ
ಆಡುವ ಹಿಡಿದು ಮೇಯಿಸುತ್ತಿರಲಾಗಿ,
ಅಡ್ಡ ಬೆಟ್ಟದಲ್ಲಿ ದೊಡ್ಡಹುಲಿ ಹುಟ್ಟಿ ಹಾಯಿತ್ತು ಹಸುವ;
ಉದ್ದಿಹ ಬೆಟ್ಟವಲ್ಲಿ ಭದ್ರಗಜ ಬಂದು ಹೊಯ್ಯಿತ್ತು ಎತ್ತ;
ಮಧ್ಯವ ಬೆಟ್ಟದಲ್ಲಿ ಹುಟ್ಟಿದ ತೋಳ ಹಿಡಿಯಿತ್ತು ಕರುವಿನ
ಕೊರಳ
ಹುಲಿ ಗಜ ತೋಳನ ಉಡು ನುಂಗಿತ್ತ ಕಂಡೆ
ಗೋಪತಿನಾಥ ವಿಶ್ವೇಶ್ವರಲಿಂಗವನರಿಯಲಾಗಿ. ॥ ೩೨ ॥

೧೦೨೯

ವರ್ತುಳ ವಾಯುವಲ್ಲಿ ಎದ್ದ ತೃಣ ಪರ್ಣ ಕುಂಪಟಿ
ಮುಂತಾದವನೆಲ್ಲವನು ದಂಡ ಸಾಕಾರ ಮುಂತಾಗಿ ತೋರಿ
ಸಂಚಾರ ನಿಂದ ಮತ್ತೆ ಅವು ಮುನ್ನಿನ ಸಂಚದಂತೆ ನಿಂದವು.
ನಿರವಯ ವಸ್ತುವನೊಡಗೂಡಿದ ಕ್ರೀವಸ್ತು ವಸ್ತುಕವಾಗಲಾಗಿ
ಮುಂಚಿ ಮುಟ್ಟುವ ಕ್ರೀ ಮುನ್ನಿನ ಸಂಚದಲ್ಲಿಯೆ ಅಡಗಿದವು.

ಇದು ಕ್ರೀಜ್ಞಾನ ನಿರ್ವಾಹ ಭಾವ
ಗೋಪತಿನಾಥ ವಿಶ್ವೇಶ್ವರಲಿಂಗವು ನಿರ್ವಾಹನಾದ
ಆಟ. ॥ ೩೩ ॥

೧೦೩೦

ಶಕ್ತಿ ಸಮೇತವಾಗಿ ಇಹನ್ನಕ್ಕ ಬಿಂದುವಿನ ಸತ್ವ
ಕೂಟಸ್ಥಬಿಂದು ಜಾರಿದಲ್ಲಿ ನಿಂದಿತ್ತು ಸತ್ವ
ಅರಿವು ಮುಖದಿಂದ ಕ್ರಿಯಾಶಕ್ತಿಯ ಕೂಟ
ಅರಿವು ಜಾರಿದಲ್ಲಿ ಮರೆದು ಹೋಯಿತ್ತು ಕ್ರಿಯಾಭೇದ.
ನಾಸರಿವುದಕ್ಕೆ ಅರಿವ ತೋರು
ನೋಡುವುದಕ್ಕೆ ಕುರುಪ ತೋರು
ನಾನಡುಗುವುದಕ್ಕೆ ಗುಡಿಯ ತೋರು
ಗೋಪತಿನಾಥ ವಿಶ್ವೇಶ್ವರಲಿಂಗಾ. ॥ ೩೪ ॥

೧೦೩೧

ಶಾಸ್ತ್ರ ಪ್ರಮಾಣವೆಂಬ ಬೆಟ್ಟದಲ್ಲಿ
ವಾಚಾರಚನೆಯೆಂಬ ಹುಲಿ ಹುಟ್ಟಿ,
ಅರಿದೆನೆಂಬ ಹಿರಿದಪ್ಪ ಬೆಟ್ಟದಲ್ಲಿ
ಗೆಲ್ಲ ಸೋಲವೆಂಬ ಮತ್ತಗಜ ಹುಟ್ಟಿ,
ಮೊನೆ ಮುಂಬರಿದು ಹರಿದ ಬೆಟ್ಟದಲ್ಲಿ
ಪರಿಭ್ರಮಣದ ತೋಳ ಹುಟ್ಟಿ,
ಹುಲಿ ಹುಲ್ಲೆಯ ಕೋಡಿನಲ್ಲಿ ಸತ್ತು
ಗಜ ಅಜನ ಮೆಲುಕಿನಲ್ಲಿ ಸಿಕ್ಕಿ,
ತೋಳ ಉಡುವಿನ ಕಣ್ಣಿನೊಳಡಗಿತ್ತು.
ತುರುವಿನ ಮಂದೆ ಬರಿಕೆಯಿವುತ್ತಿದೆ
ಗೋಪತಿನಾಥ ವಿಶ್ವೇಶ್ವರಲಿಂಗವನರಿತೆಹೆನೆಂದು. ॥ ೩೫ ॥

೧೦೩೨

ಶ್ರೀಗುರುವಿನ ಸಂದರ್ಶನಕ್ಕೆ ಹೋದಲ್ಲಿ
ಮೂರ್ತಿಧ್ಯಾನದಿಂದ ಮಹಾಪ್ರಸಂಗವ
ಮಹಾಪ್ರಸಾದವೆಂದು ಕೈಕೊಂಡು,

ಆ ಗುಣ ಗುರುಭಕ್ತಿ ಸಾಧನ.
ಶಿವಲಿಂಗ ಪೂಜೆಯ ಮಾಡುವಲ್ಲಿ
ಪರಾಕು ಪರಿಭ್ರಮಣ ಪ್ರಕೃತಿಭಾವ
ಪಗುಡಿ ಪರಿಹಾಸಕರ ವಾಗ್ವಾದಿಗಳ ಕೂಡದೆ
ಕಂಗಳಲ್ಲಿ ಹೆರೆಹಿಂಗದೆ,
ಭಾವದಲ್ಲಿ ಬೈಚಿಟ್ಟುಕೊಂಡು
ಹೆರೆಹಿಂಗದಿರವು ಶಿವಲಿಂಗಪೂಜಕನ ಭಾವ
ಜಂಗಮ ಸೇವೆಯ ಮಾಡುವಲ್ಲಿ
ಇಷ್ಟ ಕಾಮ್ಯ ಮೋಕ್ಷಂಗಳನರಿತು
ಅಶನ ವಿಷಯ ರೋಷ ಆಸಕರನರಿತು
ವರ್ಮಕ್ಕೆ ವರ್ಮ, ಧರ್ಮಕ್ಕೆ ಮುಕ್ತಿ,
ವೈಭವಕ್ಕೆ ಖ್ಯಾತಿ ಲಾಭಂಗಳನರಿತು
ಮಾಡಿದ ದ್ರವ್ಯ ಕೇಡಿಲ್ಲದಂತೆ ಅಡಗಿಪ್ಪುದು ಜಂಗಮಭಕ್ತಿ.
ಇಂತೀ ತ್ರಿವಿಧಭಕ್ತಿಯಲ್ಲಿ ನಿರತ ಸ್ವಯ ಸನ್ನದ್ಧನಾಗಿಪ್ಪ
ಭಕ್ತನ ಪಾದದ್ವಯವೆ, ಗೋಪತಿನಾಥ ವಿಶ್ವೇಶ್ವರಲಿಂಗವಿಪ್ಪ
ಸಜ್ಜಾಗೃಹ. ॥ ೩೬ ॥

೧೦೩೩

ಶ್ರುತದಲ್ಲಿ ಕೇಳಿ ದೃಷ್ಟದಲ್ಲಿ ಕಂಡು
ಅನುಮಾನದಲ್ಲಿ ಅರಿದು ಮತ್ತೆ
ಉಪದೃಷ್ಟದಲ್ಲಿ ಅನ್ಯಭಿನ್ನವ ಮಾಡಿ ಕೇಳಲೇತಕ್ಕೆ?
ತಾನರಿದ ಕಲೆಯ ಇದಿರಲ್ಲಿ ದೃಷ್ಟವ ಕೇಳಲೇತಕ್ಕೆ?
ಇದು ಪರಿಪೂರ್ಣಭಾವ,
ಗೋಪತಿನಾಥ ವಿಶ್ವೇಶ್ವರಲಿಂಗದಲ್ಲಿ ಉಭಯವಳಿದ
ಕೂಟ. ॥ ೩೭ ॥

೧೦೩೪

ಶ್ವೇತ ಪೀತ ಕಪೋತ ಕೃಷ್ಣ ಗೌರ ಮಾಂಜಿಷ್ಟ
ಕಪಿಲಿ ಕರ್ಬುರ ಅಳಗು ಬೊಟ್ಟಳಗ
ಇಂತೀ ದಶವರ್ಣದ ಪಸುನಾಮದ ಆಸುವನರಿತು
ಸಂಜ್ಞೆ ಗರ್ಜನೆ ತಾಡನೆ ತ್ರಿವಿಧ ಭೇದಂಗಳಿಂದ
ಕಾದೊಪ್ಪಿಸಬೇಕು ಗೋಪತಿನಾಥ ವಿಶ್ವೇಶ್ವರ ಲಿಂಗಕ್ಕೆ. ॥ ೩೮ ॥

೧೦೩೫

ಸ್ಥಲಂಗಳನರಿದು ಆಚರಿಸುವಲ್ಲಿ
ಮೂರನರಿದು ಮೂರ ಮರೆದು ಮೂರವೇದಿಸಿ
ಐದ ಕಾಣಿಸಿಕೊಂಡು ಆರರ ಅರಿಕೆ ಹಿಂಗಿ
ಮತ್ತಿಪ್ಪತ್ತೈದರ ಭೇದವಡಗಿ
ಮತ್ತೊಂದರಲ್ಲಿ ಕಂಡೆಹೆನೆಂಬ ಸಂದು ಸಲೆ ಸಂದು
ಒಂದಿ ಒಂದಾಹನ್ನಕ್ಕ ಗೋಪತಿನಾಥ ವಿಶ್ವೇಶ್ವರಲಿಂಗವೆಂಬ
ಉಭಯನಾಮ ಬಿಡದು. ॥ ೩೯ ॥

೧೦೩೬

ಸ್ಥಲಕ್ಕೆ ಸೂಕ್ಷ್ಮ, ಸೂಕ್ಷ್ಮಕ್ಕೆ ಕಾರಣ,
ಕಾರಣಕ್ಕೆ ಬಿಂದು ವಿಸರ್ಜನವಿಲ್ಲದ ಅಕಾರ್ಯ
ಅದು ಶೂನ್ಯದೊಳಗಣ ನಿಶ್ಶೂನ್ಯ
ಗೋಪತಿನಾಥ ವಿಶ್ವೇಶ್ವರಲಿಂಗವು ಉಭಯವಳಿದ
ನಿರ್ಲೇಪ. ॥ ೪೦ ॥

೧೦೩೭

ಹಸುವ ಕಾವಲ್ಲಿ ದೆಸೆಯನರಿತು,
ಎತ್ತ ಕಾವಲ್ಲಿ ಪೃಥ್ವಿಯನರಿದು,
ಕರುವ ಕಟ್ಟುವಲ್ಲಿ ಗೊತ್ತ ಕಂಡು
ಧನವ ಕಾವಲ್ಲಿ ಸಜ್ಜನನಾಗಿ,
ಜೀವಧನವ ಕಂಡಲ್ಲಿ ಮನ ಮುಟ್ಟದೆ,
ಇಂತೀ ಭೇದೇಂದ್ರಿಯಂಗಳ ತುರುಮಂದೆಯಲ್ಲಿ
ಕರು ಕಡುಸು ಎತ್ತು ಹಸುವಿನಲ್ಲಿ ಚಿತ್ರದ ವರ್ಣವನರಿಯಬೇಕು
ಗೋಪತಿನಾಥ ವಿಶ್ವೇಶ್ವರಲಿಂಗವನರಿವುದಕ್ಕೆ. ॥ ೪೧ ॥

೧೦೩೮

ಹಸುವಿಂಗೆ ಆರು ಬಾಯಿ, ಎತ್ತಿಂಗೆ ಮೂರು ಬಾಯಿ
ಕರುವಿಂಗೆ ಒಂದು ಬಾಯಲ್ಲಿ ನಾನಾವರ್ಣದ ಹುಲ್ಲ ಮೇದು
ನೀರಡಸಿ ನೆಟ್ಟಾಲೆ ನಿಂದುವು ಕಣ್ಣು.
ಕರು ಸತ್ತ ಮತ್ತೆ ಹಸುವಿನ ಹಂಗಿಲ್ಲ.

ಗೋಪತಿನಾಥ ವಿಶ್ವೇಶ್ವರಲಿಂಗಕ್ಕೆ
ಕರುವಿನ ಹರಣ ಹೋಹುದಕ್ಕೆ ಮುನ್ನವೆ
ಒಡಗೂಡಿ ಶುದ್ಧಿಯನೊಪ್ಪಿಸಬೇಕು. ॥ ೪೨ ॥

೧೦೩೯

ಹಸುವಿಂಗೆ ಸಂಜ್ಞೆ, ಎತ್ತಿಂಗೆ ಮುಟ್ಟು, ಕರುವಿಂಗೆ ಲಲ್ಲೆ.
ಇಂತೀ ತ್ರಿಗುಣವ ಇರವ, ತ್ರಿಗುಣಾತ್ಮಕ ಭೇದವ,
ತ್ರಿಗುಣ ಭಕ್ತಿಯ ಮುಕ್ತಿಯ, ತ್ರಿಗುಣ ಘಟಾದಿಗಳ,
ತ್ರಿಗುಣ ಮಲ ನಿರ್ಮಲಂಗಳ,
ತ್ರಿಗುಣ ಸ್ವಯ ಚರ ಪರಂಗಳಲ್ಲಿ
ತ್ರಿವಿಧ ಶಕ್ತಿ ತ್ರಿವಿಧ ಮುಕ್ತಿ
ಇಂತೀ ತ್ರಿವಿಧಂಗಳೊಳಗಾಗಿ
ಉತ್ಪತ್ಯ ಸ್ಥಿತಿ ಲಯ ತ್ರಿವಿಧದ ಹೆಚ್ಚು ಕುಂದನರಿತು,
ಎತ್ತು ಹಸುವಿನ ಸಂಗದಿಂದ ಕರುವಾದ ತೆರನನರಿತು
ಇಂತೀ ಒಂದರಲ್ಲಿ ಒಂದು ಕೂಡಲಿಕ್ಕೆ
ಬಿಂದು ನಿಂದು ಕುರುಹಾದುದ ಕಂಡು
ನೆನೆದು ನೆನೆಸಿಕೊಂಬುದದೇನೆಂದು ತಿಳಿದು,
ಇಂತೀ ಅಂಡ ಪಿಂಡಗಳಲ್ಲಿ ನಿರಾತ್ಮನು ಆತ್ಮನಾಗಿ,
ನಾನಾರೆಂಬುದ ತಾನರಿತು ತಿಳಿದಲ್ಲಿ
ತುರುಮಂದೆಯೊಳಗಾಯಿತ್ತು.
ಇದು ಗೋಪತಿನಾಥನ ಕೂಟ,
ವಿಶ್ವನಾಥಲಿಂಗನ ಲೀಲಾಭಾವದಾಟ. ॥ ೪೩ ॥

೧೦೪೦

ಹಸುವಿಂಗೆ ಹರವರಿ, ಎತ್ತಿಂಗೆ ಕಟ್ಟುಗೊತ್ತು,
ಕರುವಿಂಗೆ ವಿಶ್ವತೋಮುಖವಾಗಿ
ಹರಿವುತ್ತಿಪ್ಪ ಕರುವಿನ ಅರಿವ
ಗೋಪತಿನಾಥ ವಿಶ್ವೇಶ್ವರಲಿಂಗದಲ್ಲಿ ಕಟ್ಟುವಡೆಯಬೇಕು. ॥ ೪೪ ॥

೧೦೪೧

ಹಸುವಿಂಗೊಂದು ಕಚ್ಚು, ಎತ್ತಿಂಗೆರಡು ಕಚ್ಚು,
ಕರುವಿಂಗೆ ಮೂರು ಕಚ್ಚು.

ಇಂತಿವ ನೋಡಿ ಮೇಯಿಸಿಕೊಂಡು
ತೊಂಡುಹೋಗದಂತೆ ಕಾಯಿದೊಪ್ಪಿಸಬೇಕು
ಗೋಪತಿನಾಥ ವಿಶ್ವೇಶ್ವರಲಿಂಗದರಿಕೆಯಾಗಿ. ॥ ೪೫ ॥

೧೦೪೨

ಹಸುವಿಗೆ ಹಾಗ, ಎತ್ತಿಗೆ ಹಣವಡ್ಡ,
ಕರುವಿಗೆ ಮೂರು ಹಣ, ಎಮ್ಮೆಕೋಣ ಕುಲವ ನಾ ಕಾಯಲಿಲ್ಲ.
ಅವು ಎನ್ನ ತುರುವಿಗೆ ಹೊರಗು.
ತೊಂಡು ಹೋಗದಂತೆ ಕಾದೊಪ್ಪಿಸುವೆ
ಗೋಪತಿನಾಥ ವಿಶ್ವೇಶ್ವರಲಿಂಗಕ್ಕೆ. ॥೪೬॥

## ತೆಲುಗೇಶ ಮಸಣಯ್ಯನ ವಚನ

೧೦೪೩

ಅಖಂಡಿತವ ಕಂಡೆನೆಂಬ;
ಕಂಡಡೆ ಖಂಡಿಯಾಗಿ ಬ್ರಹ್ಮಾಂಡವಿರಬೇಕು.
ಓದಿದೆನೋದಿದೆನೆಂದೆಂಬೆ
ನಿನ್ನ ಓದು ವಾದಿಂಗೆ ಹೋಯಿತ್ತು.
ಅರಿದೆನರಿದೆನೆಂದೆಂಬೆ
ಅರಿದುದನೆಲ್ಲವನರಿದೆ, ಅರಿಯದುದಕ್ಕೆಂತೊ?
ನವನಾಳವನು ಕಟ್ಟಿ ವಿಕಳನಾಗಲುಬೇಡ.
ಬಳಸಿ ಬಟ್ಟೆಯ ಕಾಣದೆ ಬಾಯ ಬಾಗಿಲ ಹೊದ್ದೆ.
ಮಕ್ಕಳ ತೊಟ್ಟಿಲ ಮೇಲೆ ಕಟ್ಟಿದ ಕೆಂಪಿನ ಹಣ್ಣ
ಪಟ್ಟಿರ್ದು ನಿಲುಕಲು ಬಾರದು
ನೇಹ ನೆಲೆಗೊಳ್ಳದಾಗಿ ನಿಜಭಾವ ನಿಜರೂಪು ನಿಜಭುಜ ವಿಜಯನು
ಗಜಬಜೆಯಿಲ್ಲದ ಮನಕ್ಕೆ ಸಹಜವ ತೆಲುಗೇಶ ತೋರಿದ. ॥ ೧ ॥

೧೦೪೪

ಕಾಮ ಸನ್ನಿಧನಾಗಿ ತಾ ಚೆಲುವನಾದಡೆ
ಕಾಮಿನೀಜನವೆಲ್ಲಾ ಮೆಚ್ಚಬೇಕು.
ದಾನಗುಣದವನಾಗಿ ಕರೆದೀವನಾದಡೆ
ಯಾಚಕಜನವೆಲ್ಲಾ ಮೆಚ್ಚಬೇಕು.
ವೀರನಾದಡೆ ವೈರಿಗಳು ಮೆಚ್ಚಬೇಕು.
ಖೂಳನಾದಡೆ ತನ್ನ ತಾ ಮೆಚ್ಚಿಕೊಂಬ.
ಎನ್ನ ದೇವ ತೆಲುಗೇಶ್ವರನಲ್ಲಿ ತಾನು ಭಕ್ತನಾದಡೆ
ದೇವರು ಮೆಚ್ಚಿ ಜಗವು ತಾ ಮೆಚ್ಚುವದು. ॥ ೨ ॥

೧೦೪೫

ಗುರು ಕರುಣವ ಹಡೆದುದಕ್ಕೆ ಚಿಹ್ನವಾವುದೆಂದಡೆ:
ಅಂಗದ ಮೇಲೆ ಲಿಂಗಸ್ವಾಯತವಾಗಿರಬೇಕು.
ಅಂಗದ ಮೇಲೆ ಲಿಂಗ ಸ್ವಾಯತವಿಲ್ಲದೆ
ಬರಿದೆ ಗುರುಕರಣವಾಯಿತ್ತೆಂದಡೆ ಅದೆಂತೊ?
ಲಿಂಗವಿಹೀನವಾಗಿ ಗುರುಕರುಣವುಂಟೆ? ಇಲ್ಲ.
ಆ ಮಾತ ಕೇಳಲಾಗದು.
ಇದು ಕಾರಣ, ಲಿಂಗಧಾರಣವುಳ್ಳುದೆ ಸದಾಚಾರ,
ಇಲ್ಲದಿರೆ, ಅನಾಚಾರವೆಂಬೆನಯ್ಯಾ ತೆಲುಗೇಶ್ವರಾ. ॥ ೩ ॥

೧೦೪೬

ತಲೆಯ ಮೇಲೆ ತಲೆಯುಂಟೆ?
ಗಳದಲ್ಲಿ ವಿಷವುಂಟೆ?
ಹಣೆಯಲ್ಲಿ ಕಣ್ಣುಂಟೆ?
ದೇವರೆಂಬವರಿಗೆಂಟೊಡಲುಂಟೆ?
ತಂದೆ ಇಲ್ಲದವರುಂಟೆ?
ತಾಯಿ ಇಲ್ಲದವರುಂಟೆ?
ಎಲೊ! ನಿನ್ನ ನೊಸಲಲ್ಲಿ ನೇಸರು ಮೂಡದೆ?
ಶಂಭು ತೆಲುಗೇಶ್ವರಾ,
ನಿನಗಲ್ಲದುಳಿದ ದೈವಂಗಳಿಗುಂಟೆ ಕಾಲೊಳು ಕಣ್ಣು? ॥ ೪ ॥

೧೦೪೭

ಧರೆ ಗಿರಿಯನಂಬರವ ಕರಕಿರಣನ ಪ್ರಭೆಯ,
ಸುರಿವ ಮಳೆ ಉರಿವಗ್ನಿ ಮಾರುತನನು,
ಹರಿವಿರಂಚಿಗಳ ಕುಬೇರ ಇಂದ್ರ ಚಂದ್ರಾಮರರನು,
ಹರನು ಹಡದಲ್ಲಿ ನೆರವಾದವರೊಳರೆ?
ಕರಕಷ್ಟದ ಮಾನವರು ಪರಪುಟ್ಟದ ಮರಿಯಂತೆ
ಹರನ ದಾನವನುಂಡು ಬೇರೆ ಪರದೈವವುಂಟೆಂದು ಬೆಸಕೈವರು.
ಎರಡೇಳು ಲೋಕಕ್ಕೆ ಪರಮಪ್ರಭು
ತೆಲುಗೇಶ್ವರನೊಬ್ಬನೇ ಎಂದೆನ್ನದವನ ಬಾಯಲ್ಲಿ
ಪಾಕುಳ. ॥ ೫ ॥

೧೦೪೮

ಬ್ರಹ್ಮಾಂಡಕೋಟಿಗಳುರುಳಿ ಬೀಳುವಲ್ಲಿ
ಕಾಕೆಯ ಹಣ್ಣೊಂದು ಒಬ್ಬ ಮೆಲಿದನಾ ಶರಣನು.
ಮುಗಿಲ ಮುಟ್ಟುವವನ ಉದ್ದವ ನೋಡಿರೆ!
ಗಗನವ ನುಂಗುವವನ ಬಾಯಗಲವ ನೋಡಿರೆ!! ಎಂಬಂತೆ
ಇಂತಪ್ಪ ಶರಣರು ತೆಲುಗೇಶ್ವರಾ ನಿಮ್ಮವರು. ॥ ೬ ॥

೧೦೪೯

ಹಳದಿಯ ಸೀರೆಯನುಟ್ಟು,
ಬಳಹದೋಲೆಯ ಕಿವಿಯಲಿಕ್ಕಿ
ಮೊಳಡಂಗಯ ಪಿಡಿದು, ಗುಲಗಂಜಿ ದಂಡೆಯ ಕಟ್ಟಿ
ತುತ್ತುರುತುರು ಎಂಬ ಕೊಳಲ ಬಾರಿಸುತ
ಅಪಳ ಚಪಳನೆಂಬ ಉಲಿವ ಗಂಟೆಯ ಕಟ್ಟಿ
ತುತ್ತುರು ಜಂಗುಳಿ ದೈವಗಳನೆಲ್ಲವ ಹಿಂಡುಮಾಡಿ
ಕಾವ ನಮ್ಮ ಶಂಭು ತೆಲುಗೇಶ್ವರನು ಮನೆಯ
ಗೋವಳನೀತ. ॥ ೭ ॥

# ದಶಗಣ ಸಿಂಗಿದೇವಯ್ಯನ ವಚನ

೧೦೫೦

ಪೂರ್ವಕರ್ಮವ ಕೆಡಸಿದನೆನ್ನ ಗುರು
ಉಭಯ ಕರ್ಮವ ಬಿಡಿಸಿ ತೋರಿದ ಶರಣರ.
ಅವರಿಂದ ಬದುಕಿದೆನು.
ತೋರಿದ ಸದುಭಕ್ತರ;
ಅವರಿಂದ ಬದುಕಿದೆನು.
ನಾಚಯ್ಯಪ್ರಿಯ ಮಲ್ಲಿನಾಥಯ್ಯಾ,
ಗುರುವಿಂದ ಬದುಕಿದೆನು, ನಿಮ್ಮ ಹಂಗೇನು? ॥ ೧ ॥

೧೦೫೧

ಮುಂಚಿದೆನಯ್ಯಾ ಪರಬ್ರಹ್ಮವ
ಮುಂಚಿದೆನಯ್ಯಾ ಸಾಲೋಕ್ಯ ಸಾಮೀಪ್ಯ
ಸಾರೂಪ್ಯ ಸಾಯುಜ್ಯ ಪದವಿಯ,
ಮುಂಚಿದೆನಯ್ಯಾ ನಾಚಯ್ಯಪ್ರಿಯ ಮಲ್ಲಿನಾಥಾ
ನಿಮ್ಮಿಂದ. ॥ ೨ ॥

೧೦೫೨

ಸತಿ ಸುತ ಮಾತಾಪಿತರಿಗೆಂದು ಪಡೆದಡೆ ನಿಮ್ಮಾಣೆ ಕಂಡಯ್ಯಾ.
ಮಾನವರ ಸೇವೆಯ ಮಾಡಿದಡೆ ನಿಮ್ಮಾಣೆ ಕಂಡಯ್ಯಾ.
ನೀವಲ್ಲದನ್ಯಕ್ಕೆರಗಿದಡೆ ನಿಮ್ಮಾಣೆ ಕಂಡಯ್ಯಾ.
ಎನ್ನ ಸತಿಯಲ್ಲದನ್ಯ ಸತಿಗಳುಪಿದಡೆ ನಿಮ್ಮಾಣೆ ಕಂಡಯ್ಯಾ.
ತನು ಮನ ಧನ ವಂಚನೆಯಾವಡೆ
ನಾಚಯ್ಯಪ್ರಿಯ ಮಲ್ಲಿನಾಥಯ್ಯಾ,ನಿಮ್ಮಾಣೆ ಕಂಡಯ್ಯಾ.॥ ೩ ॥

೧೦೫೩

ಹೆಂಡಿರೆನ್ನದ ಮಕ್ಕಳೆನ್ನದ ತೊತ್ತಿರೆನ್ನದ
ಬಂಟರೆನ್ನದ ಹಗೆಗಳೆನ್ನದ ತಪ್ಪೆನ್ನದಯ್ಯಾ.
ಜಾಗ್ರತ ಸ್ವಪ್ನ ಸುಷುಪ್ತಿಯಲ್ಲಿ ತಪ್ಪೆನ್ನದಯ್ಯಾ.
ನಾಚಯ್ಯಪ್ರಿಯ ಮಲ್ಲಿನಾಥಯ್ಯಾ,
ನೀನಿರ್ದವರ ನೀನೆನ್ನದ ತಪ್ಪೆನ್ನದಯ್ಯಾ. ॥ ೪ ॥

# ದಸರಯ್ಯನ ವಚನ

೧೦೫೪

ಉದುರಿ ಬೀಳುವನ್ನಕ್ಕ ನಿನ್ನ ಹಂಗು
ಉದುರಿ ಬಿದ್ದಲ್ಲಿ ಎನ್ನೊಡವೆ
ನಾ ಪೂಜಿಸದನ್ನಕ್ಕ ದೇವ.
ಎನ್ನ ಪೂಜೆಗೊಳಗಾದಲ್ಲಿ ನೀ ಭಕ್ತ, ನಾ ನಿತ್ಯ.
ಇಂತೀ ಸರ್ವರ ದಯವಸ್ತು ಬೀಜವಲಾ.
ಸರ್ವಮಲತ್ರಯದೂರ,
ಸರ್ವಾಂಗ ಸಂತೋಷನಿಗರ್ವಿ
ದಸರೇಶ್ವರಲಿಂಗವು ತಥ್ಯಮಿಥ್ಯದವನಲ್ಲಾ.* ॥ ೧ ॥

೧೦೫೫

ಎಲ್ಲವನರಿದಲ್ಲಿ,
ಕಡೆಯಲ್ಲಿ ಕೊಲ್ಲಬೇಕೆಂಬುದೊಂದು ವೇದ ಉಂಟೆ?
ಶಾಸ್ತ್ರವನೆಲ್ಲವ ಕಲಿತಲ್ಲಿ ಗೆಲ್ಲ ಸೋಲಕ್ಕೆ
ಹೋರಬೇಕೆಂದು ಕಡೆಯಲ್ಲಿ ಒಂದು ಸೊಲ್ಲುಂಟೆ?
ಪುರಾಣವನೆಲ್ಲವನೋದಿದಲ್ಲಿ ಸರ್ವಜೀವವ
ಕೊಲ್ಲು ಕೊರೆ ಎಂಬುದೊಂದು ದಳ್ಳುರಿಯುಂಟೆ?
ಶ್ರುತಿಯ ಕೇಳುವಲ್ಲಿ ಸ್ಮೃತಿಯನಂಗೀಕರಿಸುವಲ್ಲಿ
ಸರ್ವಹತವ ಮಾಡಬೇಕೆಂಬುದೊಂದು ಗತಿಯುಂಟೆ?
ಇಂತೀ ಆತ್ಮನಲ್ಲಿ ಸರ್ವಭೂತ ಹಿತವುಳ್ಳಂಗೆ
ಆತ ಅತೀತ ಸ್ವಯವಸ್ತು ದಸರೇಶ್ವರಲಿಂಗವು. ॥ ೨ ॥

---

* ಈ ವಚನ ದಸರಯ್ಯನದು. ಇದು ಸಂಕೀರ್ಣವಚನ ಸಂಪುಟ ೪ ರಲ್ಲಿ 'ಸರ್ವೇಶ್ವರ ಲಿಂಗ' ಅಂಕಿತದ ಅಜ್ಞಾತ ವಚನಾಕಾರನ ವಚನವಾಗಿ ತಪ್ಪಾಗಿ ಸೇರ್ಪಡೆಯಾಗಿದೆ.

೧೦೫೬

ಎಲು ನರ ಚರ್ಮ ಮಜ್ಜೆ ಮಾಂಸದೊಳಗಾದ
ಕ್ರಿಮಿ ಎನ್ನಂಗದೊಳು ಹುಟ್ಟಿ,
ಮಲ ಹುಣ್ಣು ಉಗುಳುಗಳಲ್ಲಿ ಬೀಳುವುವ ಕಂಡು
ಅವ ನಾ ರಕ್ಷಿಸಿದೆನೆ?
ಅವು ಬೀಳಬೇಕೆಂದು ನಾ ಶಿಕ್ಷಿಸಿದೆನೆ?
ಇಂತೀ ಜೀವದ ದೃಷ್ಟವ ಕಂಡು
ಎನಗಿದೆತ್ತಣ ಸರ್ವ ಜೀವದಯ
ಈ ರಕ್ತದ ಲೇಪವ ಬಿಡಿಸಾ,
ಕಲ್ಲು ಮಣ್ಣು ಮರನಂತೆ
ಚೆನ್ನ ದಸರೇಶ್ವರಲಿಂಗಾ. ॥ ೩ ॥

೧೦೫೭

ಒಂದನಹುದೆನಬೇಡ, ಒಂದನಲ್ಲಾ ಎನಬೇಡ.
ಉಭಯ ಉಳ್ಳನ್ನಕ್ಕ ಬಹುದುಃಖದ ಒಡಲು.
ಅಮೃತವ ಕುಡಿಯ ಕೊಟ್ಟು ವಿಷವ ಕುಡಿದೆನೆನಬೇಡ
ವಿಷವ ಕುಡಿಯ ಕೊಟ್ಟು ಅಮೃತವ ಕುಡಿದೆನೆನಬೇಡ.
ಆ ಗುಣ ತಮ್ಮಲ್ಲಿಯೆ ದೃಷ್ಟವಾಗಿ
ಪ್ರವವನರಿದು ಹಂದೆಯ ಹೊರಬೇಡ.
ಇಂತೀ ಗುಣವ ನಿನ್ನ ನೀ ಕೇಳಿ ತಿಳಿದಡೆ
ನಿನಗದು ಅನ್ಯಭಿನ್ನವಿಲ್ಲ, ಅದು ತನ್ಮಯಮೂರ್ತಿ
ದಸರೇಶ್ವರಲಿಂಗವು. ॥ ೪ ॥

೧೦೫೮

ನುಡಿವಲ್ಲಿ ಕಿಂಕಲವನರಿದು,
ಕರವ ಬೀಸುವಲ್ಲಿ ತುಷಾರ ಕೀಟವನರಿದು,
ಅಡಿಯಿಡುವಲ್ಲಿ ಪೊಡವಿಯಲ್ಲಿ
ಹೊರಹೊಮ್ಮಿದ ಜೀವನ ಚೇತನಾದಿಗಳನರಿದು
ಮತ್ತೆ, ನೀಡುವಲ್ಲಿ ಹಿಡಿವಲ್ಲಿ,
ಮತ್ತೊಂದ ಒಡಗೂಡುವಲ್ಲಿ, ಒಡಗೂಡಿ ಬಿಡುವಲ್ಲಿ

ಸರ್ವದಯಕ್ಕೆ ಪಡಿಪುಚ್ಚವಿಲ್ಲದಿರಬೇಕು.
ಇಂತೀ ಸಡಗರದ ಚಿತ್ತ ದಸರೇಶ್ವರಲಿಂಗವನೊಡಗೂಡುವ
ಭಕ್ತಿ. ॥ ೫ ॥

೧೦೫೯

ಪೃಥ್ವಿಯ ಅಂಶಿಕ ಅಂಗವಾಗಿ,
ಅಪ್ಪುವಿನ ಅಂಶಿಕ ಶುಕ್ಲ ಶೋಣಿತವಾಗಿ,
ತೇಜದ ಅಂಶಿಕ ಹಸಿವಾಗಿ,
ವಾಯುವಿನಂಶಿಕ ಜೀವಾತ್ಮನಾಗಿ,
ಆಕಾಶದ ಅಂಶಿಕ ಬ್ರಹ್ಮರಂಧ್ರವಾಗಿ,
ಇಂತೀ ಐದರ ಗುಣವುಳ್ಳನ್ನಕ್ಕ ಗೆಲ್ಲ ಸೋಲ ಬಿಡದು.
ಇವನಲ್ಲಿಗಲ್ಲಿಯೆ ಇಂಬಿಟ್ಟು
ಇಂತೀ ಲಲ್ಲೆಯ ಬಿಡಿಸಯ್ಯಾ.
ಎನ್ನಲ್ಲಿ ನಿಮಗೆ ಖುಲ್ಲತನ ಬೇಡ.
ಅದು ಎನ್ನ ಸೋಂಕಲ್ಲ,
ಅದು ನಿನ್ನ ಸೋಂಕು ದಸರೇಶ್ವರಲಿಂಗಾ. ॥ ೬ ॥

೧೦೬೦

ಸರ್ವಜೀವಂಗಳ ಕೊಲುವಲ್ಲಿ,
ಜೀವ ಜೀವನ ಕೈಯಲ್ಲಿ ಸಾವಲ್ಲಿ
ಆ ಕೊಲೆಗೆ ಒಲವರ ಬೇಡ.
ಆ ಕೊಲೆಯ ಕೊಲುವಲ್ಲಿ ಅದು ಹೊಲೆಯೆಂದು
ಆ ಜೀವವ ಬಿಡೆಂದು ಒಲವರ ಬೇಡ.
ಅದು ಕೊಲುವ ಜೀವದ ನೋವು, ಸಾವ ಜೀವದ ದಯ.
ಆ ಉಭಯದ ಹೊಲಬ ತಿಳಿದು
ಮನದ ನೀರಿನಲ್ಲಿ ಮಜ್ಜನವ ಮಾಡಿ
ಚಿತ್ತದ ಗಿಡುವಿನ ಪುಷ್ಪವ ಹರಿದು
ಹೊತ್ತಿಗೊಂದು ಪರಿಯಾದ ಚಂದನದ ಗಂಧವನಿಟ್ಟು
ತಥ್ಯಮಿಥ್ಯವಳಿದ ಅಕ್ಷತೆಯ ಲಕ್ಷಿಸಿ,
ಸುಗುಣ ದುರ್ಗುಣವೆಂಬ ಉಭಯದ ಹಗಿನವ ತೆಗೆದು,
ನಿಜ ಸುಗಂಧದ ಧೂಪವನಿಕ್ಕಿ,
ನಿತ್ಯಾನಿತ್ಯವೆಂಬ ನಟ್ಟಾಲಿಯ ದರ್ಪಣವ ಕಿತ್ತು,

ಮತ್ತಮಾ ಕಂಗಳ ತೆಗೆದ ದರ್ಪಣವ ತೋರುತ್ತ,
ಪೂರ್ವ ಪಶ್ಚಿಮ ನಷ್ಟವಾದ ಸತ್ತಿಗೆಯ ಹಿಡಿದು
ದುರ್ವಾಸನೆಯೆಂಬ ಉಷ್ಣವ ಪರಿಹರಿಸುವುದಕ್ಕೆ
ಸುಮತೆಯೆಂಬ ಆಲವಟ್ಟವನೆ ತಿರುಹುತ್ತ,
ಉತ್ತರ ಪೂರ್ವಕ್ಕೆ ಉಭಯವಲ್ಲಾಡದ ಚಾಮರವ ಢಾಳಿಸುತ್ತ,
ಇಂತೀ ವರ್ತನಂಗಳಲ್ಲಿ ಸತ್ಯಸಾಕ್ಷಿಯಾಗಿ
ಭಕ್ತಿ ಜ್ಞಾನ ವೈರಾಗ್ಯವೆಂಬೀ ಇಷ್ಟವ ಮಾಡಿ
ನಿಜ ನಿಶ್ಚಯುವ ಬೆಳಗಿನ ಆರತಿಯನೆತ್ತಿ ನೋಡುತ್ತಿರಬೇಕು
ದಸರೇಶ್ವರಲಿಂಗವ. ॥ ೭ ॥

೧೦೬೧

ಸರ್ವಜೀವ ನಿನ್ನ ಹಾಹೆ ಎಂಬೆನೆ? ಅದು ಭಿನ್ನಭಾವ
ತ್ರಿಗುಣಾತ್ಮಕರುಂಟು, ಅದು ನಿನಗನ್ಯವೆಂಬೆನೆ?
ಆ ತ್ರಿಗುಣಾತ್ಮಕರು ನಿನ್ನ ತಿಲಾಂಶ.
ಇಂತೀ ಸರ್ವಭೂತಕ್ಕೆ ನಿನ್ನ ದಯ.
ಎನಗಿದೇಕೆ ಗೆಲ್ಲ ಸೋಲವೆಂಬ ಖುಲ್ಲತನ,
ಎಲ್ಲ ಜೀವಕ್ಕೂ ಸರಿ.
ಅರುಣೋದಯದಂತೆ ಎನ್ನ ಚಿತ್ತದಲ್ಲಿ ಸರ್ವಜೀವಕ್ಕೆ ಎಲ್ಲಕ್ಕೂ
ದಯವ ಮಾಡು,
ಚೆನ್ನ ದಸರೇಶ್ವರಲಿಂಗಾ. ॥ ೮ ॥

೧೦೬೨

ಸರ್ವಮಯ ನಿನ್ನ ಬಿಂದುವಾದಲ್ಲಿ
ಆವುದನಹುದೆಂಬೆ, ಆವುದನಲ್ಲಾಯೆಂಬೆ?
ಸರ್ವಚೇತನ ನಿನ್ನ ತಂತ್ರಗಳಿಂದ ಆಡುವವಾಗಿ
ಇನ್ನಾವುದ ಕಾಯುವೆ, ಇನ್ನಾವುದ ಕೊಲುವೆ?
ತರುಲತೆ ಸ್ಥಾವರ ಜೀವಂಗಳೆಲ್ಲಾ
ನಿನ್ನ ಕಾರುಣ್ಯದಿಂದೊಗೆದವು.
ಆರ ಹರಿದು ಇನ್ನಾರಿಗೆ ಅರ್ಪಿಸುವೆ?
ತೊಟ್ಟು ಬಿಡುವನ್ನಕ್ಕ ನೀ ತೊಟ್ಟುಬಿಟ್ಟ ಮತ್ತೆ
ನೀ ಬಿಟ್ಟರೆಂದು ಎತ್ತಿ ಪೂಜಿಸುತಿರ್ದೆ
ದಸರೇಶ್ವರನೆಂದು. ॥ ೯ ॥

೧೦೬೩

ಸರ್ವವನರಿದಲ್ಲಿ ಸರ್ವಜ್ಞನಾದಲ್ಲಿ
ಇದಿರೆಲ್ಲಿ ತಾನೆಲ್ಲಿ? ಅದು ತನ್ನ ಭಿನ್ನ ಭಾವ
ಅನ್ಯರಲ್ಲಿ ಎಮ್ಮುವ ತೋರಿ
ಆ ಗುಣ ತನ್ನನೆ ಅನ್ಯವೆನಿಸೂದು.
ತನ್ನ ಶಾಂತಿ ಅನ್ಯರಲ್ಲಿ ತೋರಿ, ಅಲ್ಲಿ ಭಿನ್ನಭಾವವಿಲ್ಲದಿರೆ
ಅವರನ್ಯರಲ್ಲ ಎಂಬುವುದು ತನ್ನ ಗುಣ.
ಅನ್ಯವಿಲ್ಲವೆಂಬುದನರಿತು ತನ್ನೊಪ್ಪದ ದರ್ಪಣದಲ್ಲಿ ತೋರುವಂತೆ
ಇದಕ್ಕೆ ಕರ್ಕಶವಿಲ್ಲ
ದಸರೇಶ್ವರಲಿಂಗವನರಿವುದಕ್ಕೆ. ॥ ೧೦ ॥

## ದಾಸೋಹದ ಸಂಗಣ್ಣನ ವಚನ

೧೦೬೪

ಅಂಗದಲ್ಲಿ ಲಿಂಗ ವೇಧಿಸಬೇಕೆಂಬಲ್ಲಿ
ಅಂಗಕ್ಕೂ ಲಿಂಗಕ್ಕೂ ಏನು ಸಂಬಂಧ?
ಅಂಗದ ಮೇಲೆ ವಿಷವ ತೊಡೆಯಲಿಕ್ಕಾಗಿ
ಚರ್ಮ ಹಿಂಗದೆ ಆತ್ಮಂಗೆ ಲಹರಿ ಕೊಂಡುದುಂಟೆ?
ಇಂತೀ ಅಂಗ ಲಿಂಗದಲ್ಲಿ ಅರ್ಚನೆ ಆವರಿಸಿ ಆತ್ಮ ಸ್ಥಿರಕರಿಸಿ
ಶಂಭುವಿನಿಂದಿತ್ತ ಸ್ವಯಂಭುವಿನಿಂದತ್ತ ಅತಿಬಳ ನೋಡಾ,
ಮಾತುಳಂಗ ಮಧುಕೇಶ್ವರನು. ॥ ೧ ॥

೧೦೬೫

ಅಗ್ನಿಯ ಕಳೆ ಐದು ಗುಣ, ಜ್ಯೋತಿಯ ಕಳೆ ಹಲವು ಗುಣ.
ರತ್ನದ ಕಳೆ ನವಗುಣ, ಚಿತ್ತದ ಕಳೆ ವಿಶ್ವತೋಮುಖಿ.
ಸುಚಿತ್ತದ ಕಳೆ ಏಕಜ್ಯೋತಿಯಾಗಿಪ್ಪುದ ತಿಳಿದು
ಇಷ್ಟದ ಲಕ್ಷ್ಯದಲ್ಲಿ ಬೈಚಿಟ್ಟಾತ ಪ್ರತ್ಯಕ್ಷ ಪರಮಸುಖಿ.
ಮರ್ತ್ಯ ಕೈಲಾಸವೆಂಬ ಗುಟ್ಟಿನ ಕೊಳಕಿಲ್ಲ.
ಶಂಭುವಿನಿಂದಿತ್ತ ಸ್ವಯಂಭುವಿನಿಂದತ್ತ ಅತಿಬಳ ನೋಡಾ,
ಮಾತುಳಂಗ ಮಧುಕೇಶ್ವರನು. ॥ ೨ ॥

೧೦೬೬

ಆಡುವ ಮಡಕೆಯ ತೋರಿ ಶಿಶುವಿನ ಹಸುವ
ಅಡಗಿಸುವವಳಂತೆ,
ಬರಿದೆ ಗುಮ್ಮನಿದೆಯೆಂದು ಶಿಶುವ ಬೆದರಿಸಿ
ಹಸುಳೆಯ ಅಡಗಿಸುವವಳಂತೆ,
ಎನ್ನ ಗಸಣೆಗಾರದೆ ಗುರುಚರವೆಂಬ ಬರಿಯ ಇರವ ತೋರಿ,

ನೀನು ಎಲ್ಲಿ ಅಡಗಿದೆ? ನಿನ್ನ ಕುರುಹ ತ್ರಿದಿಧದಲ್ಲಿಯೂ ಕಾಣೆ.
ಅದು ನಿನ್ನ ಗನ್ನವೊ? ಎನ್ನ ವಿಶ್ವಾಸದ ಹೀನವೊ?
ಉಭಯವೂ ನಿನ್ನ ಕೇಡು.
ಆಳಿನ ಅಪಮಾನ ಆಳ್ದಂಗೆ ತಪ್ಪದು.
ನೀನೆ ಕೆಡುವೆ, ನಿನ್ನೊಳಗೆ ಮುನ್ನವೆ ನಾ ನಷ್ಟ.
ಶಂಭುವಿನಿಂದಿತ್ತ ಸ್ವಯಂಭುವಿನಿಂದತ್ತ ಅತಿಬಳ ನೋಡಾ,
ಮಾತುಳಂಗ ಮಧುಕೇಶ್ವರನು. ॥ ೩ ॥

೧೦೬೭

ಅತ್ತಲಿಂದ ಬಂದವನ ಇತ್ತಳವ ಕಂಡು,
ಇತ್ತಲಿಂದ ಹೋದವನ ಅತ್ತಳವ ಕಂಡು,
ಇದೆತ್ತಣ ಸುದ್ದಿಯೆಂದು ನಾ ಕೇಳಲಾಗಿ,
ಕತ್ತೆ ಸತ್ತಿತ್ತು, ಕುದುರೆ ಹರಿಯಿತ್ತು,
ಬೇಹಾರ ನಷ್ಟವಾಯಿತ್ತು.
ಮಧುಕೇಶ್ವರಲಿಂಗವೇ ಎಂದು ಬಾಯಾರುವ ಚಿತ್ತ
ಬಟ್ಟಬಯಲಾಯಿತ್ತು! ॥ ೪ ॥

೧೦೬೮

ಅರ್ಪಿತವಾದುದು ಮುಟ್ಟದೆ,
ಅನರ್ಪಿತದಲ್ಲಿ ಮುಟ್ಟನರಿದು,
ದೃಷ್ಟವ ಕಂಡು ಅರ್ಪಿಸುತ
ಕಾಯದಿಂದ ಬಂದ ಕರ್ಮಾರ್ಪಿತ,
ಭಾವದಿಂದ ಬಂದ ಭೇದಸ್ವರೂಪು,
ಇಂತೀ ಕಾಯವ ಜೀವನರಿದಲ್ಲಿ ದೃಷ್ಟ ತನ್ನಷ್ಟವಾಮದು
ಉಭಯ ಅರ್ಪಿತದ ದೃಷ್ಟ.
ಶಂಭುವಿನಿಂದಿತ್ತ ಸ್ವಯಂಭುವಿನಿಂದತ್ತ ಅತಿಬಳ ನೋಡಾ,
ಮಾತುಳಂಗ ಮಧುಕೇಶ್ವರನು. ॥ ೫ ॥

೧೦೬೯

ಅಪ್ಪುಮಯದಿಂದಾದ ಶರೀರ ಹುಟ್ಟುವಲ್ಲಿ
ಅಪ್ಪು ಕೊಡನೊಡೆದು ಉತ್ಪತ್ಯವಾದುದು ಪಿಂಡದ ಭೇದ.

ಆ ಪಿಂಡ ನಷ್ಟವನೆಯ್ದುವಲ್ಲಿ ಉಂಗುಷ್ಟ ಮುಂತಾದ ಅಡಿ
ತೊಡೆಗಳಲ್ಲಿ
ಅಪ್ಪು ಆವರ್ಜಿಸಿ ಚೇತನ ನಷ್ಟವಾಗಿ,
ಇದು ದೃಷ್ಟ ಪಿಂಡದಿ ಮರಣ.
ಈ ಉಭಯದ ಜನನ ಮರಣವ ತಾನರಿತು,
ಜಗದಂತೆ ಹುಟ್ಟದೆ ಜಗದಂತೆ ಹೊಂದದೆ,
ಶ್ರೀಗುರುವಿನ ಕರಕಮಲದಲ್ಲಿ ಅಂತಃಕರಣ ಆನಂದ
ಅಶ್ರುಜಲ ಉಣ್ಮೆ
ಹುಟ್ಟಿದ ಪಿಂಡ ಗುರು ಕರಜಾತ.
ಇಂತಪ್ಪ ಲಿಂಗಮೂರ್ತಿ ಧ್ಯಾನದಿಂದ ಬೆಳೆದು,
ತ್ರಿವಿಧ ಪ್ರಸಾದವ ಸ್ವೀಕರಿಸಿ
ಸರ್ವಜ್ಞಾನ ಸಂಪನ್ನನಾಗಿ ಪಿಂಡದ ಅಳಿವನರಿವಲ್ಲಿ
ಸಂಚಿತದ ಸುಖ, ಪ್ರಾರಬ್ಧದ ಶಂಕೆ, ಆಗಾಮಿಯ ಆಗು
ಇಂತೀ ತ್ರಿವಿಧ ಭೇದವ ಕಂಡು
ತ್ರಿವಿಧ ಮಲಕ್ಕೆ ಮನವನಿಕ್ಕದೆ ಇವು ಮುನ್ನ ತನ್ನವಲ್ಲ,
ಇನ್ನು ನನ್ನವಲ್ಲ ಎಂಬುದ ತಿಳಿದು,
ಸತಿ-ಸುತ-ಪಿತ-ಜನನಿ-ಬಂಧು ಮುಂತಾದ ವರ್ಗಂಗಳನರಿತು,
ಇವು ತಾವು ಬಟ್ಟೆಯೆಂಬುದ ತಿಳಿದು ಲೌಕಿಕಕ್ಕೆ ಮನವಿಕ್ಕದೆ,
ಆತ್ಮಂಗೆ ಉಚಿತ ವೇಳೆ ಬಂದಲ್ಲಿ
ಗುರುವಿನಲ್ಲಿ ವಿಶ್ವಾಸ, ಲಿಂಗದಲ್ಲಿ ಮೂರ್ತಿಧ್ಯಾನ,
ಜಂಗಮದಲ್ಲಿ ಪ್ರಸನ್ನ ಪ್ರಸಾದವ ಕೈಕೊಂಡು,
ಹುಸಿಯ ಮೃತ್ತಿಕೆಯಲ್ಲಿ ಸರಳು ಸುರಿದಂತೆ,
ತನ್ನ ಇಷ್ಟದಲ್ಲಿ ಚಿತ್ತ ಹೊರೆಯಿಲ್ಲದೆ ಹರಿದು,
ಎರವಿಲ್ಲದೆ ಕೂಡಿ ಬೆರೆದುದೆ ಸಾವಧಾನಿಯ ಸಂಬಂಧ.
ಶಂಭುವಿನಿಂದಿತ್ತ ಸ್ವಯಂಭುವಿನಿಂದತ್ತ ಅತಿಬಳ ನೋಡಾ,
ಮಾತುಳಂಗ ಮಧುಕೇಶ್ವರನು. ॥ ೬ ॥

೧೦೭೦

ಅಪ್ಪುವಿನ ಉತ್ಕಟದ ಮಣಿಯಂತೆ
ಚಿತ್ರದ ಎಸುಗೆಯ ಲಕ್ಷಣದಂತೆ
ಸೂತ್ರದ ಲೆಪ್ಪದ ಭಿತ್ತಿ ಕಡೆಗಾಣಿಸಿದಂತೆ
ದೀಪದ ಮೊತ್ತ ಕೆಟ್ಟು ಮೃತ್ತಿಕೆಯ ಘಟ ಒಪ್ಪವಿದ್ದಂತೆ

ರಾಜ ಚಿತ್ರದ ಗೃಹ ಹೊತ್ತಿ ಬೆಂದು ಭಸ್ಮಗುಪ್ಪೆಯಿದ್ದಂತೆ
ಇದು ಕ್ರಿಯಾಪಥ ಮುಕ್ತನ ಭೇದ.
ಅರಿದು ಮರೆದವನ ಚಿತ್ತದ ಗೊತ್ತು.
ಷಟ್ಕರ್ಮ ವಿರಕ್ತನ ನಷ್ಟ,
ಸರ್ವಗುಣಿ ಸಂಪನ್ನನ ಮುಟ್ಟಿನ ಭೇದ;
ನಿರುತ ಸ್ವಯ ಸಂಗದ ಕೂಟ,
ಈ ಗುಣ ಸಾವಧಾನಿಯ ಬೇಟ,
ಸರ್ವಾಂಗಲಿಂಗಿಯ ಕೂಟ.
ಶಂಭುವಿನಿಂದಿತ್ತ ಸ್ವಯಂಭುವಿನಿಂದತ್ತ ಅತಿಬಳ ನೋಡಾ,
ಮಾತುಳಂಗ ಮಧುಕೇಶ್ವರನು. ॥ ೭ ॥

೧೦೭೧

ಅರಿಕೆ ಉಳ್ಳನ್ನಕ್ಕ ಅರಿವು,
ಅರಿವು ಉಳ್ಳನ್ನಕ್ಕ ಕುರುಹು,
ಕುರುಹು ಉಳ್ಳನ್ನಕ್ಕ ಸತ್ಕ್ರೀ ಮಾರ್ಗಂಗಳು.
ಆ ದೆಸೆಯಿಂದ ತ್ರಿವಿಧಸ್ಥಲ ರೂಪಾದವು.
ಇಂತೀ ತ್ರಿವಿಧ ತ್ರಿವಿಧದಿಂದ ಷಡುಸ್ಥಲ ರೂಪಾಗಿ
ಮೂಲ ಮೊಳೆಯೊಂದರಲ್ಲಿ ಹಲವು ಶಾಖೆ ಹೊಲಬಾದಂತೆ,
ಇದು ನಿಜವಸ್ತುವಿನ ವಸ್ತುಕ.
ಈ ಗುಣ ನಿರ್ಭಾವ ಭಾವವಾದ ಸಂಬಂಧ.
ಇದು ವರ್ತಕ ಭಕ್ತಿಯ ಭಿತ್ತಿ.
ಉತ್ತರ ಪೂರ್ವದಲ್ಲಿ ಬೆರಸಿ ನಿರುತ್ತರವಾದ ಸಂಬಂಧ.
ಶಂಭುವಿನಿಂದಿತ್ತ ಸ್ವಯಂಭುವಿನಿಂದತ್ತ ಅತಿಬಳ ನೋಡಾ,
ಮಾತುಳಂಗ ಮಧುಕೇಶ್ವರನು. ॥ ೮ ॥

೧೦೭೨

ಆತ್ಮಂಗೆ ಜೀವ ಪರಮನೆಂದು ವಿಭೇದವ ತಿಳಿವಲ್ಲಿ
ಆ ಅರಿವಿಂಗೆ ಆವ ಠಾವಿನ ಕುರುಹು?
ಸಂಪುಟದ ಘಳಿಗೆಯಂತೆ ಮಡಿಕೆಯ ಭೇದ.
ಜೀವ ಪರಮನ ಉಭಯದ ಯೋಗ.
ಮುಕುರದ ಒಳ ಹೊರಗಿನಂತೆ ಘಟವೊಂದು.
ದ್ರವ್ಯವೇಕವ ಮಾಡುವ ಕುಟಿಲದಿಂದ ಉಭಯ ಭಿನ್ನವಾಯಿತ್ತು.

ಈ ಗುಣ ಜೀವ ಪರಮನ ನೆಲೆ.
ಇದಾವ ಠಾವಿನ ಅಳಿವು ಉಳಿವು?
ಈ ಗುಣವ ಭಾವಿಸಿ ತಿಳಿದಲ್ಲಿ ಸ್ವಾನುಭಾವ ಸಂಗ
ಸಾವಧಾನದ ಕೂಟ, ಜ್ಞಾನನೇತ್ರ ಸೂತ್ರ.
ಶಂಭುವಿನಿಂದಿತ್ತ ಸ್ವಯಂಭುವಿನಿಂದತ್ತ ಅತಿಬಳ ನೋಡಾ,
ಮಾತುಳಂಗ ಮಧುಕೇಶ್ವರನು. ॥ ೯ ॥

೧೦೭೩

ಆತ್ಮನು ಘಟದಲ್ಲಿಪ್ಪ ಸೂತ್ರವ ಯೋಗಿಗಳು ಭೇದಿಸಿ ಕಂಡು
ಧ್ಯಾನ ಧಾರಣ ಸಮಾಧಿಯಿಂದ ಆತ್ಮನ ಕಟ್ಟುವಡೆದೆನೆಂದು
ನುಡಿದ ದಿಟ್ಟರ ನೋಡಾ.
ಆತ್ಮ ಕಟ್ಟುವಡೆದ ಮತ್ತೆ ನಿಧಾನಿಸುವುದೇನು ಧಾರಣದಲ್ಲಿ?
ಎಡೆ ತಾಕುವದೇನು ಸಮಾಧಿಯಲ್ಲಿ?
ಸಮಾಧಾನದಿಂದ ಸಮಾಧಿಯಲ್ಲಿಪ್ಪುದೇನು ಎಂಬುದ ತಾನರಿತಲ್ಲಿ
ಯೋನಿಯ ಯೋಗವೆನಲೇತಕ್ಕೆ?
ಈಡಾ ಪಿಂಗಳವೆಂಬ ಎರಡು ದಾರಿಯಲ್ಲಿ
ಸುಷುಮ್ನಾನಾಳಕ್ಕೆ ಏರಿದ ಮತ್ತೆ
ಆತ್ಮನು ಮತ್ತೆ ಮತ್ತೆ ನಾಡಿನಾಡಿಗಳಲ್ಲಿ ದ್ವಾರದ್ವಾರಂಗಳಲ್ಲಿ
ಭೇದಿಸಿ ವೇದಿಸಲೇತಕ್ಕೆ?
ಬೀಜದ ತಿರುಳು ಸತ್ತ ಮತ್ತೆ
ಎಯ್ದೆ ನೀರಹೊಯ್ದಡೆ ಸಾಗಿಸಿ ಬೆಳೆದುದುಂಟೆ?
ಆತ್ಮಯೋಗಿಯಾದಲ್ಲಿ ನೇತ್ರ ಶ್ರೋತ್ರ ಘ್ರಾಣ ತ್ವಕ್ಕು ಜಿಹ್ವೆ
ಎಂದಿನ ನಿಹಿತದಂತೆ ಆಡಬಹುದೆ?
ಅದು ಯೋಗವಲ್ಲ, ಇವ ಕಲಿತೆಹನೆಂಬ ಬಲು ರೋಗವಲ್ಲದೆ,
ಇದು ಮೀಸಲುಗವಿತೆ, ಇದು ಘಾತಕರುಗಳಿಗೆ ಅಸಾಧ್ಯ.
ಶಂಭುವಿನಿಂದಿತ್ತ ಸ್ವಯಂಭುವಿನಿಂದತ್ತ ಅತಿಬಳ ನೋಡಾ,
ಮಾತುಳಂಗ ಮಧುಕೇಶ್ವರನು. ॥ ೧೦ ॥

೧೦೭೪

ಆರುಸ್ಥಲ ವರ್ಣಿಸುವಲ್ಲಿ
ಭಕ್ತಂಗೆ ಮಾಹೇಶ್ವರಂಗೆ ಪ್ರಸಾದಿಗೆ ಪ್ರಾಣಲಿಂಗಿಗೆ ಶರಣ
ಐಕ್ಯಂಗೆ.
ಸ್ಥಲವಾರು ಲಿಂಗವೊಂದೆ; ವರ್ಣವಾರು ಪಟವೊಂದೆ;

ಅಕ್ಷರವಾರು ಬೀಜವೊಂದೆ; ದಳವಾರು ಆತ್ಮವೊಂದೆ.
ಇಂತೀ ಭೇದಂಗಳು ಭಿನ್ನವಾಗಿ: ನಿಚ್ಚಣಿಗೆಯ ಮೆಟ್ಟಿನಂತೆ,
ಮೊದಲು ತುದಿಯಾದಿಯಾಗಿ ತುದಿಕಡೆಯಾದಿಯಾಗಿ
ಎಡೆತಾಕುವ ತೆರದಂತೆ, ಸ್ಥಲವೆರಡು ಆಚರಣೆ ನಾಲ್ಕು.
ಇಂತೀ ಭೇದವಾರರಲ್ಲಿ ಷಡುಸ್ಥಲ ಸಂದು,
ಸಂಗನ ಬಸವಣ್ಣ ಚನ್ನಬಸವಣ್ಣನಿಂದ
ಪ್ರವಾಹವಾಗಿ ಭಕ್ತಿ ರೂಪಾಯಿತ್ತು.
ಶಂಭುವಿನಿಂದಿತ್ತ ಸ್ವಯಂಭುವಿನಿಂದತ್ತ ಅತಿಬಳ ನೋಡಾ,
ಮಾತುಳಂಗ ಮಧುಕೇಶ್ವರನು. ॥ ೧೧ ॥

೧೦೭೫

ಆಹಾ ಆಶ್ಚರಿಯವೆಂಬುದಕ್ಕೆ ಮುನ್ನವೆ,
ಹೋ ಹೋ ಹೋಯಿತ್ತೆಂಬುದಕ್ಕೆ ಮುನ್ನವೆ,
ನಿಜವಸ್ತುವಿನ ಠಾವನರಿದು ವ್ಯವಧಾನದಿಂದ
ಸಾವಧಾನ ಸಂಬಂಧಿ ತಾನೆ.
ಶಂಭುವಿನಿಂದಿತ್ತ ಸ್ವಯಂಭುವಿನಿಂದತ್ತ ಅತಿಬಳ ನೋಡಾ,
ಮಾತುಳಂಗ ಮಧುಕೇಶ್ವರನು. ॥ ೧೨ ॥

೧೦೭೬

ಇಂತೀ ಪಿಂಡಸ್ಥಲ ಪಿಂಡಜ್ಞಾನಸ್ಥಲ ಜ್ಞಾನ ಉದಯ ಸ್ಥಲ
ಜ್ಞಾನ ದಿವ್ಯ ಪರಿಪೂರ್ಣಸ್ಥಲ.
ಈ ಗುಣ ಸಂಗನಬಸವಣ್ಣನ ಕ್ರೀ ಚನ್ನಬಸವಣ್ಣನ ಜ್ಞಾನ,
ಪ್ರಭುದೇವರ ಅರಿವು, ನಿಜಗುಣನ ನಿಃಕಲ,
ಅಜಗಣ್ಣನ ಐಕ್ಯ, ಸಿದ್ಧರಾಮತಂದೆಯ ಶ್ರದ್ಧೆ,
ಮರುಳಶಂಕರನ ನಿಜ, ಘಟ್ಟಿವಾಳಯ್ಯನ ದಿಟ್ಟತನ,
ಅಕ್ಕಗಳ ಪರಮ ನಿರ್ವಾಣ
ಇಂತೀ ಪ್ರಮಥಶಕ್ತಿ ಭಕ್ತಿಯೊಳಗಾದ
ಶರಣಸಂಕುಳಕ್ಕೆ ನಮೋನಮಃ ಎಂಬೆನು.
ಶಂಭುವಿನಿಂದಿತ್ತ ಸ್ವಯಂಭುವಿನಿಂದತ್ತ ಅತಿಬಳ ನೋಡಾ,
ಮಾತುಳಂಗ ಮಧುಕೇಶ್ವರನು. ॥ ೧೩ ॥

೧೦೭೭

ಇಷ್ಟಲಿಂಗಪ್ರಾಣಿಗಳೆಂದು ಅರ್ಚಿಸಿ ಪೂಜಿಸಿ ಮತ್ತೆ,
ನಿಜವಸ್ತು ಬೇರುಂಟೆಂದು ಆತ್ಮಂಗೆ ಗೊತ್ತ ಬೇರೆ ಅರಸುವಲ್ಲಿ
ಇಷ್ಟಲಿಂಗದ ವಿಶ್ವಾಸ ಇತ್ತಲೆ ಉಳಿಯಿತ್ತು.
ಆ ಗುಣ ವರ್ತನ ಹಾನಿ ಗುರುಕೊಟ್ಟ ವಸ್ತುವಿಗೆ ದೂರ,
ಶಂಭುವಿನಿಂದಿತ್ತ ಸ್ವಯಂಭುವಿನಿಂದತ್ತ ಅತಿಬಳ ನೋಡಾ,
ಮಾತುಳಂಗ ಮಧುಕೇಶ್ವರನು. ॥ ೧೪ ॥

೧೦೭೮

ಈ ಸಂಸರ್ಗದಲ್ಲಿ ಹುಟ್ಟಿದ ಶಿಶುವೆಂದು
ಮಾಯಾಮೋಹದಿಂದ ಲಾಲಿಸಿ,
ಸಕಲ ಸುಖಭೋಗಂಗಳಲ್ಲಿ ಪಾಲಿಸಿ,
ವಸ್ತು ವಸ್ತ್ರ ಮುಂತಾದ ರತ್ನಮೌಕ್ತಿಕಂಗಳ ಗಳಿಸಿ
ನಿಕ್ಷೇಪಿಸಿಪ್ಪವರಿಂದ ಕಡೆಯೆ?
ತನ್ನ ಕರಕಮಲದಲ್ಲಿ ಹುಟ್ಟಿದ ಶಿಶುವಿಂಗೆ
ಶಿವಜ್ಞಾನದಿಂದ ಬಂದ ಶಿಷ್ಯಂಗೆ
ಶಿವಶ್ರದ್ಧೆ ಮೋಹ ಹೀಗಿರಬೇಕು.
ಶಂಭುವಿನಿಂದಿತ್ತ ಸ್ವಯಂಭುವಿನಿಂದತ್ತ ಅತಿಬಳ ನೋಡಾ,
ಮಾತುಳಂಗ ಮಧುಕೇಶ್ವರನು ॥ ೧೫ ॥

೧೦೭೯

ಉಪೇಕ್ಷೆಯುಳ್ಳನ್ನಕ್ಕ ಭಕ್ತನಲ್ಲ.
ಹಿತಶತ್ರುವಾಗಿಪ್ಪನ್ನಕ್ಕ ಮಾಹೇಶ್ವರನಲ್ಲ.
ಪರದ್ರವ್ಯಭಕ್ಷಿತ ಪ್ರಸಾದಿಯಲ್ಲ.
ಪ್ರಜ್ಞಾಹೀನ ಪ್ರಾಣಲಿಂಗಿಯಲ್ಲ.
ಕುಚಿತ್ತ ಅಪಸರೆಯ ಕ್ಷಣಿಕ ಶರಣನಲ್ಲ.
ಉಪಮಾ ಭೇದ ಗುಪ್ತಪಾತಕ ಐಕ್ಯನಲ್ಲ.
ಇಂತೀ ಷಡುಸ್ಥಲಂಗಳ ಸ್ಥಾನ ವಿವರಂಗಳನರಿತು
ಸ್ಥಲನಿರ್ವಾಹಿಯಾಗಿ ತತ್ವದ ಮುಖದಿಂದ ನಿತ್ಯ ಅನಿತ್ಯವ
ತಿಳಿದು
ಪರತತ್ವದ ಗೊತ್ತಿನಲ್ಲಿ ನಿಜ ನಿರವಯವಪ್ಪ ಆತ್ಮನ
ಬೆಚ್ಚಂತೆ ಬೈಚಿಟ್ಟು

ತತ್ಕಾಲ ಉಚಿತವನರಿದು ಕಾಂತಿ ನಷ್ಟವಾಗಿ ಕಳವಳಿಸಿ ಕಂಗೆಡದೆ
ಕುರುಹಿನ ಲಕ್ಷ್ಯದಲ್ಲಿ ಚಿತ್ತ ಸಮೂಹದಲ್ಲಿ ಎಚ್ಚರಿಕೆ
ನಿಜವಸ್ತುವಿನಲ್ಲಿ ಚಿತ್ತು ಲೇಪವಾದುದು
ಸಾವಧಾನ ಸಂಬಂಧಿಯ ಸಂಬಂಧ.
ಶಂಭುವಿನಿಂದಿತ್ತ ಸ್ವಯಂಭುವಿನಿಂದತ್ತ ಅತಿಬಳ ನೋಡಾ,
ಮಾತುಳಂಗ ಮಧುಕೇಶ್ವರನು. ॥ ೧೬ ॥

೧೦೮೦

ಉರಿಯ ಗಿರಿಯಲ್ಲಿ ಕರ್ಪುರದ ತರು ಹುಟ್ಟಿ, ಉರಿ ನಷ್ಟವಾಗಿ,
ಆ ತರುವಿನಲ್ಲಿ ಬೆಂಕಿಯ ಹಣ್ಣು ಹುಟ್ಟಿ,
ಅಪ್ಪುವಿನ ಪಕ್ಷಿ ಬಂದು ಮೆಟ್ಟಿ ಕುಟುಕಲಾಗಿ,
ಆ ಹಣ್ಣಿನ ತೊಟ್ಟಿನೊಳಡಗಿತ್ತು ಹಕ್ಕಿ.
ಮಧುಕೇಶ್ವರಲಿಂಗ ಎತ್ತ ಹೋದನೆಂದರಿಯೆ. ॥ ೧೭ ॥

೧೦೮೧

ಎಂಟು ಯೋಗ ಆರು ಭೇದ ಮೂರು ಬಟ್ಟೆ ಐದು ಮುಟ್ಟು
ಈರೈದು ಹಾದಿ ಹದಿನಾರು ಸಂಗ ನಾಲ್ಕು ಮೆಟ್ಟು ಎರಡು
ಸಂಚಾರ
ಒಂದರ ಕಟ್ಟಿನಲ್ಲಿ ಮುಟ್ಟುಮಾಡಿ ನಿಲಿಸಿ,
ದೃಷ್ಟದ ಇಷ್ಟದಲ್ಲಿ ಬೈಚಿಟ್ಟು,
ಅವರವರ ಸ್ವಸ್ಥಾನದ ಕಟ್ಟಣೆಯಲ್ಲಿ ವಿಶ್ರಮಿಸಿ
ಆ ಚಿತ್ತವ ಆ ಚಿತ್ತು ಒಡಗೂಡಿ ಇಪ್ಪುದೆ ಕ್ರಿಯಾಪಥ
ಲಿಂಗಾಂಗಯೋಗ.
ಇದನರಿಯದೆ ಮಾಡುವ ಯೋಗವೆಲ್ಲವು ತನ್ನಯ ಭವರೋಗ,
ಶಂಭುವಿನಿಂದಿತ್ತ ಸ್ವಯಂಭುವಿನಿಂದತ್ತ ಅತಿಬಳ ನೋಡಾ,
ಮಾತುಳಂಗ ಮಧುಕೇಶ್ವರನು. ॥ ೧೮ ॥

೧೦೮೨

ಏತರ ದೊಣ್ಣೆಯಲ್ಲಿ ಹೊಯ್ದಡೂ ಪೂಸನಪ್ಪನು.
ಆವ ಪರಿಯಲ್ಲಿ ಸವೆದು ಮಾಡಿದಡೂ ವಸ್ತುವಿಗೆ ಲೇಸಪ್ಪುದು.
ಶ್ವೇತನ ಪುಷ್ಪದಂತೆ, ಭಾಸುರನ ಕಿರಣದಂತೆ,

ಪರುಷ ಕ್ರೋಧದಿಂದ ಉರವಣೆಯಲ್ಲಿ ಲೋಹವ ಬೆರಸಿದಂತೆ,
ಕ್ಷುಧೆ ಅಡಸಿದವಂಗೆ ಪಾಲ್ಗಡಲ ತಡಿಯಲ್ಲಿ ತಳಿದವನಂತೆ,
ಆವ ಪರಿಯಲ್ಲಿ ಸವೆದಡೂ ವಸ್ತು ಭಾವಕೆಂದಲ್ಲಿ ಶಿವಾರ್ಪಣ
ಸಂಬಂಧ.
ಶಂಭುವಿನಿಂದಿತ್ತ ಸ್ವಯಂಭುವಿನಿಂದತ್ತ ಅತಿಬಳ ನೋಡಾ,
ಮಾತುಳಂಗ ಮಧುಕೇಶ್ವರನು. ॥ ೧೯ ॥

೧೦೮೩

ಕಂಡಡೇನು ನುಡಿ ಅಡಗಿದ ಮತ್ತೆ
ವಾಚಾರಚನೆಯನರಿಯಬಹುದೆ?
ತಾ ಕರೆವಡೇನು, ಅನ್ಯರ ಮಾತ ಕೇಳದ ಮತ್ತೆ?
ಇಂತೀ ಕ್ರೀಯಲ್ಲಿ ವಸ್ತುಭಾವದಲ್ಲಿ ನಿಶ್ಚಯ,
ಉಭಯಸ್ಥಲ ಪರಿಪೂರ್ಣ.
ಶಂಭುವಿನಿಂದಿತ್ತ ಸ್ವಯಂಭುವಿನಿಂದತ್ತ ಅತಿಬಳ ನೋಡಾ,
ಮಾತುಳಂಗ ಮಧುಕೇಶ್ವರನು. ॥ ೨೦ ॥

೧೦೮೪

ಕಂಡ ಮತ್ತೆ ಕಂಡುದ ಕಾಣುವುದಕ್ಕೆ ಮುನ್ನವೇ ಕಾಣದುದ
ಉಭಯ ದೃಷ್ಟವ ಕಡೆಗಾಣಿಸಿ ಕಂಡುದ ಕಾಣದಲ್ಲಿ ಎಯ್ದಿಸಿ
ಕಾಣದುದ ಕಂಡಲ್ಲಿ ನಿಕ್ಷೇಪಿಸಿ
ಅದು ಉರಿ ಕರ್ಪುರದ ಇರವಿನಂತೆ ಆದುದು ಇಷ್ಟಲಿಂಗ
ಆತ್ಮದೃಷ್ಟಕೂಟ.
ಶಂಭುವಿನಿಂದಿತ್ತ ಸ್ವಯಂಭುವಿನಿಂದತ್ತ ಅತಿಬಳ ನೋಡಾ,
ಮಾತುಳಂಗ ಮಧುಕೇಶ್ವರನು. ॥ ೨೧ ॥

೧೦೮೫

ಕಂಡುದ ಬಿಟ್ಟು ಕಾಣದುದ ಕಂಡೆಹೆನೆಂದಡೆ
ಅಂಡ ಪಿಂಡಕ್ಕೆ ಹೊರಗಾದವಂಗಲ್ಲದೆ ಸಾಧ್ಯವಲ್ಲ
ಅದು ಅಣೋರಣಿಯೊಳಗಣ ಮಹಾರೇಣು.
ಶಂಭುವಿನಿಂದಿತ್ತ ಸ್ವಯಂಭುವಿನಿಂದತ್ತ ಅತಿಬಳ ನೋಡಾ
ಮಾತುಳಂಗ ಮಧುಕೇಶ್ವರನು. ॥ ೨೨ ॥

೧೦೮೬

ಕಕ್ಷೆ ಭಕ್ತನ ಸೋಂಕು.
ಮುಖಸಜ್ಜೆ ಮಾಹೇಶ್ವರನ ಸೋಂಕು.
ಕರಸ್ಥಲ ಪ್ರಾಣಲಿಂಗಿಯ ಸೋಂಕು,
ಉತ್ತಮಾಂಗ ಶರಣನ ಸೋಂಕು.
ಅಮಳೋಕ್ಯ ಐಕ್ಯನ ಸೋಂಕು.
ಭಕ್ತಂಗೆ ಆಚಾರಲಿಂಗ, ಮಾಹೇಶ್ವರಂಗೆ ಸದಾಚಾರಲಿಂಗ,
ಪ್ರಸಾದಿಗೆ ವಿಚಾರಲಿಂಗ, ಪ್ರಾಣಲಿಂಗಿಗೆ ಸರ್ವವ್ಯವಧಾನ ಸನ್ನದ್ಧಲಿಂಗ,
ಶರಣಂಗೆ ಅವಿರಳ ಸಂಪೂರ್ಣಲಿಂಗ, ಐಕ್ಯಂಗೆ ಪರಮ ಪರಿಪೂರ್ಣಲಿಂಗ
ಇಂತೀ ಆರುಸ್ಥಲ ಷಟ್ಕರ್ಮ ಷಡ್ವಿಧಲಿಂಗ ಭೇದಂಗಳಲ್ಲಿ
ಮುಂದಣ ವಸ್ತುವೊಂದುಂಟೆಂದು ಸಂಗವ ಮಾಡುವುದಕ್ಕೆ
ಆರಂಗದ ಪಥಗೂಡಿ ಕಾಬಲ್ಲಿ ವಸ್ತುವನೊಡಗೂಡುವುದೊಂದೆ ಭೇದ.
ಇಂತೀ ಸ್ಥಲವಿವರ ಕೂಟಸಂಬಂಧ.
ಏಕಮೂರ್ತಿ ತ್ರಿವಿಧಸ್ಥಲವಾಗಿ, ತ್ರಿವಿಧಮೂರ್ತಿ ಷಡುಸ್ಥಲವಾಗಿ
ಮಿಶ್ರಕ್ಕೆ ಮಿಶ್ರ ತತ್ವಕ್ಕೆ ತತ್ವ ಬ್ರೊಮ್ಮಕ್ಕೆ ಪರಬ್ರಹ್ಮವನರಿತಡೂ,
ಹಲವು ಹೊಲಬಿನ ಪಥದಲ್ಲಿ ಬಂದಡೂ
ಪಥ ಹಲವಲ್ಲದೆ ನಗರಕ್ಕೆ ಒಂದೆ ಒಲಬು.
ಇಂತೀ ಸ್ಥಲವಸ್ತುನಿರ್ವಾಹ.
ಶಂಭುವಿನಿಂದಿತ್ತ ಸ್ವಯಂಭುವಿನಿಂದತ್ತ ಅತಿಬಳ ನೋಡಾ,
ಮಾತುಳಂಗ ಮಧುಕೇಶ್ವರನು. ॥ ೨೩ ॥

೧೦೮೭

ಕಣ್ಣಿನಿಂದ ನಡೆದು, ಕಾಲಲ್ಲಿ ಮುಟ್ಟಿ ಕಂಡು
ನಾಸಿಕದ ಓಹರಿಯಲ್ಲಿ ದೇಶಿಕನಾಗಿ
ಕರ್ಣದ ನಾದದಲ್ಲಿ ಗರ್ಭವುದಿಸಿ,
ನಾಲಗೆಯ ತೊಟ್ಟಿಲಲ್ಲಿ ಮರೆದೊರಗಿ
ಅರಿವುತ್ತ ಕರದ ಕಮ್ಮಟವಲ್ಲಿ ಬೆಳೆವುತ್ತ ನಲಿವುತ್ತ
ಶಂಭುವಿನಿಂದಿತ್ತ ಸ್ವಯಂಭುವಿನಿಂದತ್ತ ಅತಿಬಳ ನೋಡಾ,
ಮಾತುಳಂಗ ಮಧುಕೇಶ್ವರನು. ॥ ೨೪ ॥

೧೦೮೮

ಕರಣಂಗಳ ನಿವೃತ್ತಿಯ ಮಾಡಿ ಲಿಂಗವ ಕಂಡೆಹೆನೆಂಬಲ್ಲಿ
ಮುಂದೆ ಅರಿದು ಕಾಣಿಸಿಕೊಂಬ ಕುರುಹು ಅದೆಂತುಟಯ್ಯಾ?
ಆ ಕರಣವೆ ಮೊದಲು ಆ ಕುರುಹು ಹಿಂಗೆ
ಆ ಕುರುಹಿಂದೆ ಇಂದ್ರಿಯಂಗಳು ಸಲೆಸಂದು,
ನೀರಸಟ್ಟಿ ಮುಂದಳ ಸಾರ ಸವಿಯ ಫಲ ಭೋಗಂಗಳ
ಬೆಳೆವಂತೆ,
ಇದು ಲಿಂಗವ್ಯವಧಾನಿಯ ಸಂಬಂಧ,
ಇಂದ್ರಿಯ ಲಿಂಗ ಮುಖಂಗಳಿಂದ
ಲಿಂಗ ಇಂದ್ರಿಯ ಮುಖದಿಂದ.
ಗಂಧ ಕುಸುಮದಂತೆ ಇಂದ್ರಿಯ ಕುರುಹಿನ ಭೇದ.
ಈ ದ್ವಂದ್ವ ಉಳ್ಳನ್ನಕ್ಕ ದೃಕ್ಕಿಂಗೆ ದೃಷ್ಟಿಯಿಂದ ಕಾಣಿಸಿಕೊಂಬಂತೆ
ಅರಿವು ಕುರುಹಿನ ಭೇದ.
ಶಂಭುವಿನಿಂದಿತ್ತ ಸ್ವಯಂಭುವಿನಿಂದತ್ತ ಅತಿಬಳ ನೋಡಾ,
ಮಾತುಳಂಗ ಮಧುಕೇಶ್ವರನು. ॥ ೨೫ ॥

೧೦೮೯

ಕಾಯದ ಗುಣವನರಿಯದೆ ಕರ್ಮಯೋಗವ ಮಾಡಬಹುದೆ?
ಕರ್ಮದ ಗುಣವನರಿಯದೆ ಆತ್ಮಯೋಗವ ಮಾಡಬಹುದೆ?
ಆತ್ಮನ ಗುಣವನರಿಯದೆ ವರ್ಮಯೋಗವ ಕಾಣಬಹುದೆ?
ನೀರಿನಿಂದಲಾದ ಕೆಸರ ನೀರಿಂದಲೆ ತೊಳೆವಂತೆ,
ಮುಳ್ಳು ಮುಳ್ಳಿನಿಂದವೆ ಕಳೆವಂತೆ,
ಕರ್ಮದಿಂದ ಸತ್ಕರ್ಮ ವರ್ಮದಿಂದ
ನಿಜವರ್ಮ ಸೂಜಿಯ ಮೊನೆಯ ದಾರದಂತೆ
ಇದು ಲಿಂಗ ಒಡಗೂಡಿದ ಕ್ರಿಯಾಪಥಯೋಗ.
ಶಂಭುವಿನಿಂದಿತ್ತ ಸ್ವಯಂಭವಿನಿಂದತ್ತ ಅತಿಬಳ ನೋಡಾ,
ಮಾತುಳಂಗ ಮಧುಕೇಶ್ವರನು. ॥ ೨೬ ॥

೧೦೯೦

ಕಾಲಿಗೆ ಕಣ್ಣು ಹುಟ್ಟಿ ಬಾಯಿ ಬಸುರಾಗಿ ಕಿವಿಯಲ್ಲಿ ಹುಟ್ಟಿ
ಕೈಯಲ್ಲಿ ಬೆಳವುತ್ತಿದೆ ನೋಡಾ ಆ ಶಿಶು!

ಉ ಎಂದಲ್ಲಿ ಉಪಮೆಗೆ ಬಾರದು,
ಉಗ್ಗೆಂದಲ್ಲಿ ಹೊಂದದು ಜಗವ.
ಅಂಬಳಿಕ್ಕುವುದಕ್ಕೆ ಮೊದಲೆ ಕಂಬಳಿಯ ಮುಸುಕಿಟ್ಟು
ಈ ತ್ರಯದ ಬೆಂಬಳಿಯಲ್ಲಿಯೆ ಲೀಯ.
ಇದು ಜ್ಞಾನಪಿಂಡೈಕ್ಯ.
ಶಂಭುವಿನಿಂದಿತ್ತ ಸ್ವಂಭುವಿನಿಂದತ್ತ ಅತಿಬಳ ನೋಡಾ,
ಮಾತುಳಂಗ ಮಧುಕೇಶ್ವರನು. ॥ ೨೭ ॥

೧೦೯೧

ಕಾಲು ಮೂರು, ಬಸುರು ನಾಲ್ಕು, ಕೈ ಐದು,
ತಲೆ ಎಂಟು, ಬಾಯಿ ಒಂಬತ್ತು, ಕಿವಿ ಆರು, ಕಣ್ಣು
ಮೂವತ್ತೆರಡು.
ಇಂತೀ ಪಿಂಡಕ್ಕೆ ಐವತ್ತೊಂದು ಕಳೆ.
ಆ ಜೀವಕ್ಕೆ ಪರಮನೊಂದೆ ಕಳೆ.
ಈ ಗುಣ ಜ್ಞಾನಪಿಂಡದ ಭೇದ.
ಶಂಭುವಿನಿಂದಿತ್ತ ಸ್ವಯಂಭವಿನಿಂದತ್ತ ಅತಿಬಳ ನೋಡಾ,
ಮಾತುಳಂಗ ಮಧುಕೇಶ್ವರನು. ॥ ೨೮ ॥

೧೦೯೨

ಕ್ರಿಯಾಶಕ್ತಿಗೆ ಘಟ ಕ್ರೀಪತಿಯಾಗಿ
ಇಚ್ಛಾಶಕ್ತಿಗೆ ಆತ್ಮ ಸಂಬಂಧ ಪತಿಯಾಗಿ
ಜ್ಞಾನಶಕ್ತಿಗೆ ಚಿದಾದಿತ್ಯ ಚಿತ್ಪ್ರಕಾಶ ಪತಿಯಾಗಿ
ಇಂತೀ ತ್ರಿವಿಧ ಶಕ್ತಿಗೆ ಅವರವರ ತದ್ಭಾವಕ್ಕೆ
ಭಾವಾಜ್ಞನಾದೆಯಲ್ಲಾ ಭಕ್ತಿ ಕಾರಣವಾಗಿ.
ಶಂಭುವಿನಿಂದಿತ್ತ ಸ್ವಯಂಭುವಿನಿಂದತ್ತ ಅತಿಬಳ ನೋಡಾ,
ಮಾತುಳಂಗ ಮಧುಕೇಶ್ವರನು. ॥ ೨೯ ॥

೧೦೯೩

ಕುಂಭದಲ್ಲಿ ಬೆಂದ ಅಶನಕ್ಕೆ ಒಂದಗುಳಲ್ಲದೆ
ಹಿಂಗಿ ಹಿಂಗಿ ಹಿಸುಕಲುಂಟೆ?

ಗುರುತಪ್ಪುಕನ ಲಿಂಗಬಾಹ್ಯವ ಜಂಗಮನಿಂದಕನ
ಆಚಾರ ಭ್ರಷ್ಟನ ಜ್ಞಾನಹೀನನ
ಅರಿತು ಕಂಡು ಕೂಡಿದಡೆ,
ತನ್ನವನೆಂದು ಅಂಗೀಕರಿಸಿದಡೆ,
ಖಂಡವ ಬಿಟ್ಟು ಮತ್ಸ್ಯಕ್ಕೆ ಹರಿದ ಜಂಬುಕನಂತೆ ಆಗದೆ?
ಸದಾಚಾರದಲ್ಲಿ ಸಂದಿರಬೇಕು,
ಕಟ್ಟಾಚಾರದಲ್ಲಿ ನಿಂದಿರಬೇಕು.
ಶಂಭುವಿನಿಂದಿತ್ತ ಸ್ವಂಭುವಿನಿಂದತ್ತ ಅತಿಬಳ ನೋಡಾ,
ಮಾತುಳಂಗ ಮಧುಕೇಶ್ವರನು. ॥ ೩೦ ॥

೧೦೯೪

ಕುಸುಮ ಕ್ರೀ ಗಂಧ ನಿಃಕ್ರೀಯೆಂದಲ್ಲಿ
ಕುಸುಮವನಗಲಲಿಕ್ಕಾಗಿ ಒಡಗೂಡಿದ ಗಂಧ ಹಸುಕಾಗದೆ ?
ಗಂಧ ಸ್ವಯಂಭುವಾದಡೆ ಕುಸುಮವ ಹಿಸುಕಿದಲ್ಲಿಯೇ
ಒಡಲುಗೊಂಡುದು ನೊಂದಿತ್ತೆಂದು ತಾ ಸ್ವಯವಾಗಿ
ಎಂದಿನಂತಿದ್ದಿತ್ತೆ?
ಇದು ಕ್ರೀಜ್ಞಾನ ಭೇಧ, ಸ್ವಾನುಭಾವ ಶುದ್ಧ.
ಶಂಭುವಿನಿಂದಿತ್ತ ಸ್ವಯಂಭುವಿನಿಂದತ್ತ ಅತಿಬಳ ನೋಡಾ,
ಮಾತುಳಂಗ ಮಧುಕೇಶ್ವರನು. ॥ ೩೧ ॥

೧೦೯೫

ಗಂಧವ ಬಂಧಿಸಿ ಹಿಡಿದೆಹೆನೆಂದಡೆ ಆ ಗಂಧದ
ಅಂಗವಿಲ್ಲದೆ ನಿಂದುದುಂಟೆ ಸುಗಂಧ ?
ಈ ಶಿವಲಿಂಗವನರಿಯದ ಆತ್ಮನು ಮುಂದೆ ಏತರಿಂದ
ಸಂಧಿಸುವುದು ?
ಇದು ಲಿಂಗಾಂಗಿಯ ಸಾವಧಾನ ಸಂಬಂಧ.
ನಿಳಯದ ಬಾಗಿಲು ತಿಳುವಳ.
ಲಿಂಗಮೂರ್ತಿಯ ತದ್ಧ್ಯಾನ ಶುದ್ಧ ಲೇಪವಾದುದು
ತತ್ಕಾಲ ಸಂಬಂಧಿಯ ಸಂಬಂಧ.
ಶಂಭುವಿನಿಂದಿತ್ತ ಸ್ವಯಂಭುವಿನಿಂದತ್ತ ಅತಿಬಳ ನೋಡಾ,
ಮಾತುಳಂಗ ಮಧುಕೇಶ್ವರನು. ॥ ೩೨ ॥

೧೦೯೬

ಗುರುವನರಿದಲ್ಲಿ ಮೂರನರಿದು ಐದ ಬಿಡಬೇಕು.
ಲಿಂಗವನರಿದಲ್ಲಿ ಆರನರಿದು ಮೂರ ಬಿಡಬೇಕು.
ಜಂಗಮವನರಿದಲ್ಲಿ ಮೂವತ್ತಾರನರಿದು ಇಪ್ಪತ್ತೈದ ಬಿಡಬೇಕು.
ಇಂತೀ ತ್ರಿವಿಧವನೊಡಗೂಡಿ,
ನಾನಾ ಸ್ಥಲಂಗಳ ಶತ ಕುರುಹಿನಲ್ಲಿ ಗತಮಾಡಿ
ಒಂದು ಎಂಬ ಸಂದೇಹ ಬಿಟ್ಟಿತ್ತು.
ಆ ಸಂದೇಹವುಂಟೆಂಬ ಸಂಧಿಯಲ್ಲಿ ಗುರುವಿಂಗೆ ಎರಡಡಿ
ಲಿಂಗಕ್ಕೆ ಮೂರಡಿ, ಜಂಗಮಕ್ಕೆ ಆರಡಿ,
ಇಂತೀ ತ್ರಿವಿಧದಲ್ಲಿ ಸ್ಥಲಂಗಳನರಿತು
ಗುರುವಿನ ಭವಪಾಶಮಂ ಕೆಡಿಸಿ, ಲಿಂಗದ ತ್ರಿವಿಧದ ಬೇರ ಕಿತ್ತು
ಜಂಗಮದ ಸರ್ವಸಂಗವ ಮಾಡುವ ಜಂಗುಳಿ ಜಂಘೆಯ ಮುರಿದು,
ಮೂರನವಗವಿಸಿ ನಿಂದ ಪರಮಭಕ್ತಂಗೆ
ಶಂಭುವಿನಿಂದಿತ್ತ ಸ್ವಯಂಭುವಿನಿಂದತ್ತ ಅತಿಬಳ ನೋಡಾ,
ಮಾತುಳಂಗ ಮಧುಕೇಶ್ವರಲಿಂಗಕ್ಕಿಂದತ್ತ
ನಮೋ ನಮೋ ಎನುತ್ತಿದ್ದೆನು. ॥ ೩೩ ॥

೧೦೯೭

ಗುರುವಿಂಗೊಂದು ಲಿಂಗಕ್ಕೆರಡು ಜಂಗಮಕ್ಕೆ ಮೂರು ಸತಿ ಸಂದಲ್ಲಿ,
ಗುರು ಸತ್ತು ಲಿಂಗ ಚಿತ್ತು ಜಂಗಮ ಆನಂದವೆಂದಲ್ಲಿ,
ಹಿಂಗದವು ಮೂರು ನಿಜವಸ್ತು ಒಂದರಲ್ಲಿ.
ಆ ಒಂದು ಸಂಗನಬಸವಣ್ಣನಲ್ಲಿ ಅಡಗಿ
ಚನ್ನಬಸವಣ್ಣನಲ್ಲಿ ತಲ್ಲೀಯವಾಯಿತ್ತು.
ಶಂಭುವಿನಿಂದಿತ್ತ ಸ್ವಯಂಭುವಿನಿಂದತ್ತ ಅತಿಬಳ ನೋಡಾ,
ಮಾತುಳಂಗ ಮಧುಕೇಶ್ವರನು. ॥ ೩೪ ॥

೧೦೯೮

ಗುರುವೈದು ಬಂದು ಮೂರು ಲಘುವಾರರಿಂದ ಹುಟ್ಟಿದ ಅಂಡ ಪಿಂಡ.
ಆ ಪಿಂಡದ ಪಿಂಡಕ್ಕೆ ಗುರು ಇಪ್ಪತ್ತೈದು, ಬಿಂದು ಮೂವತ್ತಾರು,

ಲಘು ಐವತ್ತೊಂದರಲ್ಲಿ ಕೂಡಿದ ನಾದವೊಂದು.
ಅದು ನೇಮಾಕ್ಷರಲೇಪ, ತ್ರಿಕರಣ ಲೊಪ, ಜ್ಞಾನಪಿಂಡವೈಕ್ಯ.
ಶಂಭುವಿನಿಂದಿತ್ತ ಸ್ವಯಂಭುವಿನಿಂದತ್ತ ಅತಿಬಳ ನೋಡಾ,
ಮಾತುಳಂಗ ಮಧುಕೇಶ್ವರನು. ॥ ೩೫ ॥

೧೦೯೯

ಗುರುಸ್ವರೂಪನಾಗಿ ಬಂದು ಬ್ರಹ್ಮನ ಉತ್ಪತ್ಯವ ಕೆಡಿಸಿ
ಮಾಂಸಪಿಂಡವ ಕಳೆದು ಮಂತ್ರಪಿಂಡದಿಂದ ಪ್ರತಿಷ್ಠೆಯ ಮಾಡಿ
ನಾನಾ ಕ್ರೀ ವರ್ತನಕ್ಕೆ ಹೊಲಬನಿಟ್ಟುಕೊಟ್ಟು
ನಿನ್ನ ಕರಕಮಲದಲ್ಲಿ ಜ್ಯೋತಿರ್ಮಯವಪ್ಪ
ನಿನ್ನ ನಿಜಾತ್ಮದರಿವ ಆ ಕುರುಹಿನಲ್ಲಿ ಬೈಚಿಟ್ಟು
ನಿಜಲಿಂಗವ ಮಾಡಿ ಎನ್ನ ಕೈಯಲ್ಲಿ ಕೊಟ್ಟೆ.
ಆ ಲಿಂಗಸ್ವರೂಪು ನೀನಾಗಿ ಬಂದು ಹೃತ್ಕಮಲದಲ್ಲಿ ನಿಂದು
ಕರಣ ನಾಲ್ಕು ಮದವೆಂಟು ಇಂದ್ರಿಯವೈದು ವಿಷಯವಾರು
ಇಂತಿವರೊಳಗಾದ ಸರ್ವೇಂದ್ರಿಯವ ಕೆಡಿಸಿ
ತ್ರಿಗುಣಾತ್ಮಕದ ತ್ರಿಶಕ್ತಿ ಭೇದವ ತ್ರಿಮಲದ ಘೋಷವ ಕೆಡಿಸಿ
ನಿಶ್ಚಯಪದದಿಂದ ಹೃತ್ಕಮಲವಾಸಿಯಾದೆ;
ಆ ಗುಣದಿಂದ ನಾ ಸಾಫಲ್ಯನಾದೆ.
ಜಂಗಮಮೂರ್ತಿಯಾಗಿ ಬಂದು
ಎನಗೆ ದೀಕ್ಷಾಗುರು ಶಿಕ್ಷಾಗುರು ಮೋಕ್ಷಾಗುರುವಾಗಿ
ಶುದ್ಧ ಸಿದ್ಧ ಪ್ರಸಿದ್ಧಮಂ ತೋರಿ
ಎನ್ನ ಭವಭೇದನಮಂ ಮಾಡಿದೆ.
ಇಂತೀ ತ್ರಿವಿಧಮೂರ್ತಿ ಭಕ್ತಿ ವಿಷಯದಿಂದ
ಬಸವಣ್ಣ ಚನ್ನಬಸವಣ್ಣಗೋಸ್ಕರವಾಗಿ ಕ್ರಿಯಾಸಂಬಂಧಿಯಾದೆ.
ಶಂಭುವಿನಿಂದಿತ್ತ ಸ್ವಯಂಭುವಿನಿಂದಿತ್ತ ಅತಿಬಳ ನೋಡಾ,
ಮಾತುಳಂಗ ಮಧುಕೇಶ್ವರನು. ॥ ೩೬ ॥

೧೧೦೦

ಜಗಭಗದ ಊರ್ಧ್ವದಲ್ಲಿ ಮೋಹನದ ಗೊಟ್ಟಿ ಹುಟ್ಟಿತ್ತು.
ಗೊಟ್ಟಿಯ ಪೂರ್ವದಲ್ಲಿ ಕಮಲವರಳಿತ್ತು.
ಕಮಲ ಹೃತ್ಕಮಲದಲ್ಲಿ ಬಿಂದು ವ್ಯಂಜನದಿಂದ
ಗುರುಲಿಂಗ ರೂಪಾಗಿ ಪುಲ್ಲಿಂಗ ಚರಿಸಿತ್ತು,

ನಪುಂಸಕಲಿಂಗವಡಗಿತ್ತು.
ಬಿಂದುವಿನಿಂದ ನಾದ, ಆ ಸುನಾದದಿಂದ ಕಳೆ,
ಆ ಕಳೆಯ ಕಾಂತಿಯಿಂದ ಜಗ.
ಇಂತೀ ಜಗದ ಉತ್ಪತ್ಯದಲ್ಲಿ ಹುಟ್ಟದೆ ಸ್ಥಿತಿಗೊಳಗಲ್ಲದೆ
ಲಯಕ್ಕೆ ಹೊರಗಾಗಿ ಅರಿದುದು ಸ್ವಾನುಭಾವ ಸಂಬಂಧ
ಇದು ಪಿಂಡ, ಪಿಂಡಜ್ಞಾನ.
ಶಂಭುವಿನಿಂದಿತ್ತ ಸ್ವಯಂಭುವಿನಿಂದತ್ತ ಅತಿಬಳ ನೋಡಾ,
ಮಾತುಳಂಗ ಮಧುಕೇಶ್ವರನು. ॥ ೩೭ ॥

೧೧೦೧

ಜಲವ ಕಾಣದ ಬೋದನಂತೆ
ನೋಡುತ್ತ ಗರಿಯ ಹಿಡಿದ ಅಂಟಿನಂತೆ
ಹಿಡಿದೊಡವೆಯ ಬಿಡಲಾರದೆ ಬೇವುತ್ತ
ಅಡಿವಜ್ಜೆಯ ಮೆಟ್ಟಿ ಬಿಡಲಾರದೆ ಅಡಿಗಡಿಗೆ ಎಡತಾಕುತ್ತ
ಕೂಪರ ಕೈಯಿಂದ ಘಾತಕತನದಿಂದ ವ್ಯಾಪರಿಸುತ್ತ
ಸುಡು ಅದೇತರ ವಿರಕ್ತಿ !
ಮಾತಿನ ಮಾಲೆಯ ಪೂಸತ್ವ !
ಇದ ನಿಹಿತಲಿಂಗಾಂಗಿಗಳೊಪ್ಪರು.
ಶಂಭುವಿನಿಂದಿತ್ತ ಸ್ವಯಂಭುವಿನಿಂದತ್ತ ಅತಿಬಳ ನೋಡಾ,
ಮಾತುಳಂಗ ಮಧುಕೇಶ್ವರನು. ॥ ೩೮ ॥

೧೧೦೨

ತನಗೆ ಉಂಟಾಗಿ ಶಿಷ್ಯನ ಮನೆಗೆ ಹೋಗಿ
ಕಟ್ಟಳೆಯ ವರುಷಕ್ಕೆ ತಪ್ಪದೆ
ಅಂಗವಸ್ತ್ರವೆಂದು ಲಿಂಗವಸ್ತ್ರವೆಂದು ಕನಕ ಪರಿಮಳವೆಂದು
ಅಂದಣ ಛತ್ರ ಚಾಮರ ಕರಿ ತುರಗಂಗಳೆಂದು
ಇವು ಬಂದುದಿಲ್ಲ ಎಂದು ಸಂದಣಿ ಲಂದಣಗಾರರ ಕೈಯಲ್ಲಿ ಹೇಳಿಸಿ
ಅವು ಬಾರದಿರೆ ತಾ ಸಂಧಿಸಿ ಸೂಚಿಸುವ ಲಿಂಗ ಲಿಂಗಮಾರಿಗೆ
ಗುರುಸ್ಥಲ ಎಂದಿಗೂ ಇಲ್ಲ.
ಶಂಭುವಿನಿಂದಿತ್ತ ಸ್ವಯಂಭುವಿನಿಂದತ್ತ ಅತಿಬಳ ನೋಡಾ,
ಮಾತುಳಂಗ ಮಧುಕೇಶ್ವರನು. ॥ ೩೯ ॥

೧೧೦೩

ತನು ಮೂರು ಆತ್ಮವಾರು ಜೀವವೆರಡು
ಜ್ಞಾನ ಎಂಬತ್ತನಾಲ್ಕು ಲಕ್ಷ
ಪರಮನೊಂದೆ ಭೇದ.
ಇಂತೀ ತ್ರಿವಿಧ ತನು ವರ್ಣಂಗಳಲ್ಲಿ ವಿಶ್ವಮಯವಾಗಿ
ಸರ್ವ ಜೀವಂಗಳೆಲ್ಲವೂ ತಮ್ಮ ನೆಲ ಹೊಲದಲ್ಲಿ
ಆಹಾರ ವ್ಯವಹಾರ ವಿಷಯಂಗಳಿಂದ
ಉತ್ಪತ್ಯ ಸ್ಥಿತಿ ಲಯಂಗಳಿಂದ
ಕಲ್ಪಾಂತರಕ್ಕೊಳಗಾಗಿಪ್ಪುದು ಬ್ರಹ್ಮಾಂಡಪಿಂಡ.
ಇಂತಿವ ಕಳೆದುಳಿದು ಜ್ಞಾನಪಿಂಡ ಉದಯವಾದಲ್ಲಿ
ಸರ್ವ ಘಟಪಟಾದಿಗಳ ಸೋಂಕು ಸರ್ವ ಚೇತನದ ವರ್ಮ
ಸರ್ವ ಜೀವದ ಕ್ಷುದೆ, ಸರ್ವಾತ್ಮಂಗಳಲ್ಲಿ ದಯ
ಕ್ರೂರಮೃಗ ಅಹಿ ಚೋರ ಹಗೆ ಇಂತಿವು ಮುನಿದಲ್ಲಿ
ಸಂತತ ಭೀತಿಯಿಲ್ಲದೆ ಸಂತೈಸಿಕೊಂಡು ಸರ್ವಾತ್ಮಕ್ಕೆ
ಸಂತೋಷವ ಮಾಡುವುದೆ ಜ್ಞಾನ ಪಿಂಡೋದಯ.
ಶಂಭುವಿನಿಂದಿತ್ತ ಸ್ವಯಂಭುವಿನಿಂದತ್ತ ಅತಿಬಳ ನೋಡಾ,
ಮಾತುಳಂಗ ಮಧುಕೇಶ್ವರನು ॥ ೪೦ ॥

೧೧೦೪

ತನುಧರ್ಮವ ಕಂಡು ಮನಧರ್ಮವನರಿದು,
ಅರಿವಿನ ವಿವೇಕದಿಂದ ಭೃತ್ಯರನೊಡಗೂಡುವನೆ ಗುರು ಚರಮೂರ್ತಿ.
ಆತ ಪರಮ ವಿರಕ್ತ, ಪರಾಪರದಿಂದತ್ತ
ಶಂಭುವಿನಿಂದಿತ್ತ ಸ್ವಯಂಭುವಿನಿಂದತ್ತ ಅತಿಬಳ ನೋಡಾ,
ಮಾತುಳಂಗ ಮಧುಕೇಶ್ವರನು. ॥ ೪೧ ॥

೧೧೦೫

ತಮದ ಗುರಿಯ ಜ್ಯೋತಿಯ ಕುಡಿವೆಳಗಿನ ಸರದಲ್ಲಿ ಎಸಲಿಕ್ಕಾಗಿ,
ಗುರಿಯಲ್ಲಿಯೆ ಸರ ಪರಿಹರಿಸಿ
ಆ ಸರದಲ್ಲಿಯೆ ತಮ ಪರಿಹರಿಸಿತ್ತು.

ಲಕ್ಷ್ಯದಲ್ಲಿಯೆ ಚಿತ್ತ, ಚಿತ್ತದಲ್ಲಿಯೆ ಲಕ್ಷ್ಯ ಅಲಕ್ಷ್ಯವಾಯಿತ್ತು.
ಶಂಭುವಿನಿಂದಿತ್ತ ಸ್ವಯಂಭುವಿನಿಂದತ್ತ ಅತಿಬಳ ನೋಡಾ,
ಮಾತುಳಂಗ ಮಧುಕೇಶ್ವರನು. ॥ ೪೨ ॥

೧೧೦೬

ತಾನಿರಿಸಿದ ಕಡವರವೆಂದಡೆ ಸಾಕ್ಷಿಯಿಲ್ಲದೆ
ಕುರುಹನರಿಯದೆ ಅಗೆಯಬಹುದೆ?
ಸಕಲ ವೇದ ಶಾಸ್ತ್ರ ಪುರಾಣ ಆಗಮಂಗಳ ತಾ ಬಲ್ಲನೆಂದಡೆ
ಕ್ರೀಯಿಲ್ಲದೆ ಜ್ಞಾನಹೀನವಾಗಿ ಭಾವಶುದ್ಧವಿಲ್ಲದೆ
ಮತ್ತೇನುವಸರಿಬಲ್ಲನೆ?
ಇದು ಕಾರಣದಲ್ಲಿ ಕ್ರೀಗೆ ಪೂಜೆ, ಅರಿವಿಂಗೆ ತ್ರಿವಿಧದ
ಬಿಡುಗಡೆ,
ಆ ಬಿಡುಗಡೆಯ ಅಡಿಯಮೆಟ್ಟಿದ ಶರಣ
ಉಂಡುಪವಾಸಿ ಬಳಸಿ ಬ್ರಹ್ಮಚಾರಿ.
ಪಳುಕಿನ ವರ್ತಿಯಂತೆ, ತಿಲರಸ ಅಪ್ಪುವಿನಂತೆ,
ಹೊದ್ದಿಯೂ ಹೊದ್ದದ ನಿಜಲಿಂಗಾಂಗಿಯ ಯೋಗ.
ಶಂಭುವಿನಿಂದಿತ್ತ ಸ್ವಯಂಭುವಿನಿಂದತ್ತ ಅತಿಬಳ ನೋಡಾ,
ಮಾತುಳಂಗ ಮಧುಕೇಶ್ವರನು. ॥ ೪೩ ॥

೧೧೦೭

ತ್ರಿವಿಧ ಕ್ರೀಯಿಂದ ಭೇದವನರಿತು ಮಾಡುವುದು ಭಕ್ತಿಸ್ಥಲ.
ಚತುರ್ವಿಧ ಫಲಪ್ರಾಪ್ತಿಯ ಅನುಭವಿಸದೆ
ನಿಶ್ಚಯ ವಸ್ತುವ ಕಾಬುದು ಮಾಹೇಶ್ವರಸ್ಥಲ.
ಪಂಚೇಂದ್ರಿಯಂಗಳಲ್ಲಿ ಸಂಚಿತದಲ್ಲಿ ಬಂದುದನರಿದು
ಲಿಂಗಾರ್ಪಿತದಿಂದ ಕೊಂಬುದು ಪ್ರಸಾದಿಸ್ಥಲದಂಗದ ಇರವು.
ಷಡಾಧಾರಂಗಳಿಂದ ಸುಳಿದ ಸೂಕ್ಷ್ಮದ ಆತ್ಮನ ನೆಲೆಯನರಿದು
ಕೂಡುವ ಕೂಟ ಪ್ರಾಣಲಿಂಗಿಸ್ಥಲದ ಇರವು.
ಸುಖದುಃಖವೆಂಬ ಉಭಯವನಳಿದು
ಬೆರಗು ನಿಬ್ಬೆರಗಾದುದು ಶರಣಸ್ಥಲದ ಇರವು.
ಸುಗಂಧ ಗಂಧವ ಅಗ್ನಿಯಲ್ಲಿ ಸಂಬಂಧಿಸಿ
ಅಂಗ ಅಗ್ನಿಯೊಳಡಗಿ ಗಂಧ ಧೂಮದಲ್ಲಿ ತಲೆದೋರಿ
ಧೂಮ ಹಿಂಗೆ ಆ ಗಂಧ ಅಲ್ಲಿಯೇ ಅಡಗಿದಂತೆ ನಿಂದುದು
ಐಕ್ಯಸ್ಥಲ.

ಇಂತೀ ಷಡುಸ್ಥಲ ತ್ರಿಕರಣ ಶುದ್ಧಾತ್ಮಂಗಲ್ಲದೆ ಸಾಧ್ಯವಲ್ಲ
ನೋಡಾ!
ಶಂಭುವಿನಿಂದಿತ್ತ ಸ್ವಯಂಭುವಿನಿಂದತ್ತ ಅತಿಬಳ ನೋಡಾ,
ಮಾತುಳಂಗ ಮಧುಕೇಶ್ವರನು. ॥ ೪೪ ॥

೧೧೦೮

ತ್ರಿವಿಧ ಪ್ರಸಾದವ ಸ್ವೀಕರಿಸುವಲ್ಲಿ
ತನ್ನ ಸತ್ಪಾತ್ರವಲ್ಲದುದ ಲಿಂಗಕ್ಕೆ ಅರ್ಪಿಸಿಕೊಂಡಹೆನೆನಲಿಲ್ಲ.
ಗುರು ಪ್ರಸಾದ ಬಂದಿತ್ತೆಂದು ತನ್ನ ಕ್ರೀ ಮೀರಿ ಮುಟ್ಟಲಿಲ್ಲ.
ಜಂಗಮ ಪ್ರಸಾದವ ಉಭಯ ಪ್ರಸಾದದಲ್ಲಿ ಕೂಡಿ
ತನ್ನ ಕ್ರೀ ಹೊರೆಯಾಗಿ ಕೊಳ್ಳಲಿಲ್ಲ.
ಇಂತೀ ತ್ರಿವಿಧ ಪ್ರಸಾದದ ಭೇದ
ಭಕ್ತಿ ವರ್ತಕಂಗೆ ಶುದ್ಧವಾದಲ್ಲಿ ಲಿಂಗ ಪ್ರಸಾದ.
ಮಾಹೇಶ್ವರ ವರ್ತಕಂಗೆ ತನು-ಮನ ಶುದ್ಧವಾದಲ್ಲಿ ಗುರು
ಪ್ರಸಾದ.
ಪ್ರಸಾದಿಸ್ಥಲ ವರ್ತಕಂಗೆ ತ್ರಿವಿಧಮಲತ್ರಯ ದೂರಸ್ಥನಾಗಿ
ಮನ-ವಚನ-ಕಾಯ ತ್ರಿಕರಣದಲ್ಲಿ ಶುದ್ಧಾತ್ಮನಾಗಿ
ಆಯಾ ಉಚಿತದಲ್ಲಿ ಜಂಗಮ ಪ್ರಸಾದ ಬರಲಿಕ್ಕಾಗಿ
ಸ್ವಯ ಸತ್ಕ್ರೀ ತಪ್ಪದೆ ತನ್ನ ದೃಷ್ಟಕ್ಕೆ
ಕೊಟ್ಟು ಕೊಂಬುದು ಮಹಾಪ್ರಸಾದಿಯ ಪ್ರಸನ್ನ.
ಈ ರಚನೆ ಮಹಾಪ್ರಮಥರ ಪ್ರಸಾದ.
ಶಂಭುವಿನಿಂದಿತ್ತ ಸ್ವಯಂಭುವಿನಿಂದತ್ತ ಅತಿಬಳ ನೋಡಾ
ಮಾತುಳಂಗ ಮಧುಕೇಶ್ವರನು. ॥ ೪೫ ॥

೧೧೦೯

ತುಂಬಿ ಕುಸುಮದ ಬಂಡುಂಡಂತೆ
ಕುಸುಮದಂಗ ಹರಿಯದೆ
ಸುಗಂಧ ಆತ್ಮನಲ್ಲಿ ತುಂಬಿ ತುಂಬಿದ್ದಂತೆ
ಕುಂಡಲಿ ಕೀಟಕನ ತಂದು ಮೃತ್ತಿಕೆಯ ಮಂದಿರದಲ್ಲಿ ಇರಿಸಿ
ಆ ಬೆಂಬಳಿಯಲ್ಲಿ ಝೇಂಕರಿಸಲಾಗಿ
ಅದು ತನ್ನ ಭೀತಿಯಿಂದ ಮತ್ತೆ ಬಂದಿತ್ತಲ್ಲಾ ಎಂದು
ತಾ ಸತ್ತೆಹೆನೆಂಬ ಸಂದೇಹದಿಂದ ಮೂರ್ಛೆ ಕರಿಗೊಂಡು
ಕೀಟಕನಂಗವಳಿದು ಕುಂಡಲಿಯಾದ ತೆರದಂತೆ

ಈ ಗುಣ ಅಂಗಲಿಂಗ ಮೂರ್ತಿಧ್ಯಾನ ನಿಂದಲ್ಲಿ
ಪ್ರಾಣಲಿಂಗಸಂಬಂಧ.
ಅದು ತದ್ಭಾವ ನಿಜವಾದಲ್ಲಿ ಲಿಂಗಪ್ರಾಣಯೋಗ.
ಉಭಯದ ಸಂದಸಳಿದು ಸಂಬಂಧ ಸಂಬಂಧಾವಾದಲ್ಲಿ
ಆ ವಸ್ತು ವಸ್ತುಲೇಪ
ಶಂಭುವಿನಿಂದಿತ್ತ ಸ್ವಯಂಭುವಿನಿಂದತ್ತ ಅತಿಬಳ ನೋಡಾ,
ಮಾತುಳಂಗ ಮಧುಕೇಶ್ವರನು. ॥ ೪೬ ॥

೧೧೧೦

ತೊಟ್ಟುಬಿಡುವ ವೇಳೆಯನರಿದ ಮತ್ತೆ
ದೋಟಿಯನಿಕ್ಕಲೇತಕ್ಕೆ?
ತನ್ನ ಕೃತ್ಯದ ಭಕ್ತಿಯ ಮಾಡುತ್ತಿದ್ದ ಮತ್ತೆ
ಒಂದು ದಿನ ತಪ್ಪಲಿಕ್ಕಾಗಿ ಕುಪ್ಪಳಿಸಿ ಬೇಯಲೇತಕ್ಕೆ?
ಇದು ಗುರುಸ್ಥಲಕೆ ನಿಶ್ಚಯವಲ್ಲ;
ಇದು ಶಿಲೆಯ ಮಾರಿಯ ಹದಹು;
ವ್ಯಾಧನ ವೇಷ, ಮೂಷಕನ ವಾಸದ ತಪ್ಪಿನ ಪಥ
ಆತ ಸದ್ಗುರುಜಾತನಲ್ಲ.
ಶಂಭುವಿನಿಂದಿತ್ತ ಸ್ವಯಂಭುವಿನಿಂದತ್ತ ಅತಿಬಳ ನೋಡಾ,
ಮಾತುಳಂಗ ಮಧುಕೇಶ್ವರನು. ॥ ೪೭ ॥

೧೧೧೧

ದೀಕ್ಷಾಗುರುವಾಗಿ ಬಂದು ಬ್ರಹ್ಮನ ಉತ್ಪತ್ಯವ ತೊಡೆದೆ,
ಶಿಕ್ಷಾಗುರುವಾಗಿ ಬಂದು ಆತ್ಮನ ಪ್ರಕೃತಿಯ ಕೆಡಿಸಿದೆ;
ಮೋಕ್ಷಗುರುರಾಗಿ ಬಂದು ತ್ರಿವಿಧ ಮಲವ ಕೆಡಿಸಿ ಮುಕ್ತನ
ಮಾಡಿದೆ.
ಎನ್ನ ಲೀಲೆಗೆ ಗುರು ರೂಪಾಗಿ, ಸುಲೀಲೆಗೆ ಲಿಂಗರೂಪಾಗಿ,
ನಿಜಲೀಲೆಗೆ ಜಂಗಮರೂಪಾಗಿ,
ಇಂತೀ ತ್ರಿವಿಧ ರೂಪಾಗಿ ಭಿನ್ನನಾದೆಯಲ್ಲಾ, ಭಕ್ತಿ ಕಾರಣನಾಗಿ.
ಶಂಭುವಿನಿಂದಿತ್ತ ಸ್ವಯಂಭುವಿನಿಂದತ್ತ ಅತಿಬಳ ನೋಡಾ,
ಮಾತುಳಂಗ ಮಧುಕೇಶ್ವರನು. ॥ ೪೮ ॥

೧೧೧೨

ದೃಕ್ಕು ಸಕಲವನವಗವಿಸುವನ್ನಕ್ಕ,
ಶ್ರೋತ್ರ ಶಬ್ದವ ವೇಧಿಸುವನ್ನಕ್ಕ,
ಕ್ರೀ ಶೂನ್ಯವೆನಲೇತಕ್ಕೆ?
ಭಾವಿಸಿಹೆನೆಂಬನ್ನಕ್ಕ ಕ್ರೀ ಅರಿದೆಹೆನೆಂಬನ್ನಕ್ಕ ಸೂತಕ.
ಕುಕ್ಕುಳಗುದಿವುದ ಹುಟ್ಟಿನಲ್ಲಿ ತೆಗೆದಿಕ್ಕುವಂತೆ,
ಅದು ದೃಷ್ಟಕ್ಕೆ ದೃಷ್ಟ, ನಿಶ್ಚಯಕ್ಕೆ ನಿಜ.
ಈ ಗುಣ ಉಭಯಸ್ಥಲ ನಿರ್ವಾಹ.
ಶಂಭುವಿನಿಂದಿತ್ತ ಸ್ವಯಂಭುವಿನಿಂದತ್ತ ಅತಿಬಳ ನೋಡಾ,
ಮಾತುಳಂಗ ಮಧುಕೇಶ್ವರನು. ॥ ೪೯ ॥

೧೧೧೩

ದೃಷ್ಟದ ಜ್ಯೋತಿಯ ನಂದಿಸಬೇಕಲ್ಲದೆ
ಪರಂಜ್ಯೋತಿಯ ಬಂಧಿಸಿ ನಂದಿಸಿ ಕೆಡಿಸಿಹೆನೆಂದಡೆ
ಕೆಟ್ಟುದುಂಟೆ ಆ ಬೆಳಗು?
ಈ ಗುಣ ಇಷ್ಟಲಿಂಗವನಿರಿವುದಕ್ಕೆ ದೃಷ್ಟ
ಮನ ಇಷ್ಟದಲ್ಲಿ ವಿಶ್ರಮಿಸಿದ ಲಕ್ಷ್ಯ.
ಶಂಭುವಿನಿಂದಿತ್ತ ಸ್ವಯಂಭುವಿನಿಂದತ್ತ ಅತಿಬಳ ನೋಡಾ,
ಮಾತುಳಂಗ ಮಧುಕೇಶ್ವರನು. ॥ ೫೦ ॥

೧೧೧೪

ಧ್ಯಾನವಿಲ್ಲದೆ ಲಿಂಗವ ನಿಧಾನಿಸಬಹುದೆ?
ಲಿಂಗವಿಲ್ಲದೆ ಧ್ಯಾನಕ್ಕೆ ಸಂಗ ಸನ್ಮತವುಂಟೆ?
ಈ ಗುಣ ಶ್ರುತ ದೃಷ್ಟ ಕೂಡಿ ಅನುಮಾನಕ್ಕೆ ಒಳಗಾದಂತೆ.
ಈ ಗುಣ ಅಂಗಲಿಂಗ ಆತ್ಮಲಿಂಗ ಸಂಗ ಸುಸಂಗಿಯ ಸಂಗ,
ಉಭಯಸ್ಥಲ ಸಂಬಂಧ.
ಶಂಭುವಿನಿಂದಿತ್ತ ಸ್ವಯಂಭುವಿನಿಂದತ್ತ ಅತಿಬಳ ನೋಡಾ,
ಮಾತುಳಂಗ ಮಧುಕೇಶ್ವರನು. ॥ ೫೧ ॥

೧೧೧೫

ನಸುಗಾಯವಡೆದವನಂತೆ ನೋವುಣ್ಣದೆ,
ಸತ್ಕ್ರೀವಂತನಂತೆ ಸಂದೇಹವಿಲ್ಲದೆ,

ಖಳನಿಚ್ಚಟನಂತೆ ಆತ್ಮಕ್ಕೆ ಸಂದು ಸಂಶಯುವಿಲ್ಲದೆ,
ನೆರೆ ಅರಿದವನಂತೆ ಮರವೆಯ ಕುರುಹಿಗೆ ಬಾರದೆ,
ಲಿಂಗದಲ್ಲಿ ಕರಿಗೊಂಡವನಂತೆ ಕೊಟ್ಟೆಹೆ ಕೊಂಡೆಹೆನೆಂಬ
ಸೂತಕವಿಲ್ಲದೆ,
ಬೊಮ್ಮವನರಿದವನಂತೆ ಅವರಿವರಲ್ಲಿ ಸುಮ್ಮಾನದ ಸುಖವ
ನುಡಿಯದೆ,
ಘಟಕರ್ಮ ಯೋಗಿಯಂತೆ ಆ ದೇಹ ಇಂದ್ರಿಯಂಗಳಿಲ್ಲದೆ,
ಲಿಂಗಸಂಗಿಯಂತೆ ಭಾವಸರ್ವರ ಸಂಗ ಮಾಡದೆ
ಇಂತೀ ಸರ್ವಗುಣಸಂಪನ್ನ ನವಬ್ರಹ್ಮ.
ಶಂಭುವಿನಿಂದಿತ್ತ ಸ್ವಯಂಭುವಿನಿಂದತ್ತ ಅತಿಬಳ ನೋಡಾ,
ಮಾತುಳಂಗ ಮಧುಕೇಶ್ವರನು. ॥ ೫೨ ॥

೧೧೧೬

ನಾ ನೀನೆಂಬನ್ನಕ್ಕ ಕ್ರೀಯ ಮಾಡುತ್ತಿರಬೇಕು.
ನಾನೀನೆಂಬುದಳಿದ ಮತ್ತೆ ಅದು ಅವಿರಳ ಸ್ವರೂಪು;
ನಾಮ ಶೂನ್ಯ ನಾಸ್ತಿ.
ಶಂಭುವಿನಿಂದಿತ್ತ ಸ್ವಯಂಭುವಿನಿಂದತ್ತ ಅತಿಬಳ ನೋಡಾ,
ಮಾತುಳಂಗ ಮಧುಕೇಶ್ವರನು. ॥ ೫೩ ॥

೧೧೧೭

ನೋಡುವರೆಲ್ಲರು ಆಡಬಲ್ಲರೆ?
ಮಾತನಾಡುವರೆಲ್ಲರು ಲಿಂಗಾಂಗಯೋಗ ಬಲ್ಲರೆ?
ಸಾಧನೆಯ ಮಾಡುವ ಬಾಲರೆಲ್ಲರೂ ಕಳನಹೊಕ್ಕು ಕಾದಬಲ್ಲರೆ?
ಈ ಮಾತಿನ ಮಾಲೆಯ ಸಂಸಾರದ ತೂತ ಯೋಗಿಗಳೆಲ್ಲರೂ
ಲಿಂಗಾಂಗ ನಿಹಿತ ಯೋಗವ ಬಲ್ಲರೆ?
ಶಂಭುವಿನಿಂದಿತ್ತ ಸ್ವಯಭುವಿನಿಂದತ್ತ ಅತಿಬಳ ನೋಡಾ,
ಮಾತುಳಂಗ ಮಧುಕೇಶ್ವರನು. ॥ ೫೪ ॥

೧೧೧೮

ಪಂಚಭೌತಿಕದಿಂದತ್ತ ಪಂಚಭೌತಿಕ ಒಳಗಾದುದರಿಂದಿತ್ತ,
ಕುರುಹಿಲ್ಲದೆ ದೇವರೆನಿಸಿಕಂಡವರಾರಯ್ಯಾ?
ಅಪೂರ್ವವಸ್ತುವ ಕಂಡೆಹೆನೆಂದಡೂ ಕಟ್ಟುವುದಕ್ಕೊಂದಂಗ,
ಇರಿಸುವುದಕ್ಕೊಂದು ಆಶ್ರಯ.

ಈ ಗುಣ ತೆರನನರಿಯಬೇಕು.
ಅರಿವೆ ವಸ್ತು, ಕುರುಹಿಲ್ಲಾ ಎಂದು ನುಡಿವ ಬರುಬರ
ಕಾಳ್ಗೆಡೆವರ ಅವರನೊಡಗೂಡ.
ಶಂಭುವಿನಿಂದಿತ್ತ ಸ್ವಯಂಭುವಿನಿಂದತ್ತ ಅತಿಬಳ ನೋಡಾ,
ಮಾತುಳಂಗ ಮಧುಕೇಶ್ವರನು. ॥ ೫೫ ॥

೧೧೧೯

ಪೃಥ್ವಿಯ ಅಂಶಿಕ ಶರೀರ ದರ್ಪಗೆಡುವುದ ಕಂಡು,
ಅಪ್ಪುವಿನ ಅಂಶಿಕ ಶುಕ್ಲ ಶೋಣಿತ ಜಲ ಕುಪ್ಪಳಿಸುವುದ ಕಂಡು,
ತೇಜದ ಅಂಶಿಕ ಅಗ್ನಿ ಡಾವರವಿಲ್ಲಮುದ ಕಂಡು,
ವಾಯುವಿನ ಅಂಶಿಕ ಸರ್ವಾಂಗದಲ್ಲಿ ವೇದಿಸದೆ
ನಾಡಿಗಳಲ್ಲಿ ಭೇದಿಸದೆ
ಆತ್ಮನು ಗಾಢವಿಲ್ಲದುದ ಕಂಡು,
ಆಕಾಶವನವಗವಿಸುವ ಆಲಿಸೂತ್ರ ಓಸರಿಸುವುದ ಕಂಡು,
ಮತ್ತಿನ್ನೇತರ ಅರಿವು?
ಇಂತಿವು ದೃಷ್ಟವಿದ್ದಂತೆ ನಷ್ಟವನೆಯ್ದುವುದಕ್ಕೆ ಮುನ್ನವೆ,
ತನ್ನಯ ಲಕ್ಷ್ಯದ ಇಷ್ಟದಲ್ಲಿ ಚಿತ್ತವನನುಕರಿಸಿ ಸುಚಿತ್ತನಾದವ
ಸಾವಧಾನಿ.
ಶಂಭುವಿನಿಂದಿತ್ತ ಸ್ವಯಂಭುವಿನಿಂದತ್ತ ಅತಿಬಳ ನೋಡಾ,
ಮಾತುಳಂಗ ಮಧುಕೇಶ್ವರನು. ॥ ೫೬ ॥

೧೧೨೦

ಪೃಥ್ವೀತತ್ವದಿಂದ ಭಕ್ತಿರೂಪು,
ಅಪ್ಪು ತತ್ವದಿಂದ ಮಾಹೇಶ್ವರರೂಪು,
ತೇಜ ತತ್ವದಿಂದ ಪ್ರಸಾದಿ ರೂಪು,
ವಾಯು ತತ್ವದಿಂದ ಪ್ರಾಣಲಿಂಗಿ ರೂಪು,
ಆಕಾಶ ತತ್ವದಿಂದ ಶರಣ ರೂಪು,
ಇಂತೀ ಪಂಚತತ್ವವನವಗವಿಸಿ ಮಹದಾಕಾಶ
ಅವಕಾಶವಾದುದು ಐಕ್ಯನ ಅಂತರಿಕ್ಷೆ.
ನಿರ್ಮುಕ್ತ ಸ್ವಯಸ್ವಾನುಭಾವದಿಂದ ಸಾವಧಾನವನರಿವುದು
ಷಟ್ಕರ್ಮನಾಶನ ಸಂಬಂಧ.

ಶಂಭುವಿನಿಂದಿತ್ತ ಸ್ವಯಂಭುವಿನಿಂದತ್ತ ಅತಿಬಳ ನೋಡಾ,
ಮಾತುಳಂಗ ಮಧುಕೇಶ್ವರನು || ೫೭ ||

೧೧೨೧

ಪೃಥ್ವೀತತ್ವದೊಳಗಾದವೈದು,
ಅಪ್ಪು ತತ್ವದೊಳಗಾದವೈದು,
ತೇಜ ತತ್ವದೊಳಗಾದವೈದು,
ವಾಯು ತತ್ವದೊಳಗಾದವೈದು,
ಆಕಾಶತತ್ವದೊಳಗಾದವೈದು,
ಇಂತೀ ಇಪ್ಪತ್ತೈದು ತತ್ವವನವಗವಿಸಿದ ಮೂಲತತ್ವವೈದು,
ಇಂತೀ ಮೂವತ್ತಕ್ಕೆ ವಿಭೇದದಿಂದ ಸಾಧನೆಗೊಳಗಾದವಾರು.
ಇಂತೀ ಮೂವತ್ತಾರು ತತ್ವಂಗಳ ನಿಶ್ಚೈಸಿ ಕಂಡು,
ನಿತ್ಯಾನಿತ್ಯವ ತಿಳಿದು,
ಭಕ್ತಿ ಜ್ಞಾನ ವೈರಾಗ್ಯಗಳೆಂಬಿವ ನಿಶ್ಚೈಸಿ,
ಲಿಂಗ ನಿಜತತ್ವದಲ್ಲಿ ಆತ್ಮನ ಸಂಘಟ್ಟವ ಮಾಡಿ,
ಉಚಿತದ ಸಂದನರಿದು ಅಳಿವುದು ಸಾವಧಾನಿಯ ಸಂಬಂಧ.
ಶಂಭುವಿನಿಂದಿತ್ತ ಸ್ವಯಂಭುವಿನಿಂದತ್ತ ಅತಿಬಳ ನೋಡಾ,
ಮಾತುಳಂಗ ಮಧುಕೇಶ್ವರನು. || ೫೮ ||

೧೧೨೨

ಪ್ರಥಮ ಮೂರು, ಆಶ್ರಯ ನಾಲ್ಕು, ಸ್ಥಲವಾರು,
ಯೋಗವೆಂಟು, ಸಂಯೋಗವೆರಡು, ವಿಯೋಗವೊಂದು,
ವಿಭೇದವೆರಡು, ಭೇದವೊಂದು, ಅರಿಕೆಯೆರಡು
ಅರಿದುದೊಂದು
ಆಕಾಶ ಮೂರು ಅವಾಕಾಶವೆರಡು, ಮಹದಾಕಾಶ ನಾಲ್ಕು.
ಇಂತಿವೆಲ್ಲವು ಮಹಾಪ್ರಕಾಶದ ಪ್ರಭೆ ಪ್ರಜ್ವಲವಾಗಿ
ಉಭಯನಾಮರೂಪ ತಾಳ್ದು,
ವಂಶ ಮೂರರಲ್ಲಿ ಅಳವಟ್ಟು ಸ್ಥಲವಾರರಲ್ಲಿ ಬೆಳೆದು,
ಕುಳವೆಂಟರಲ್ಲಿ ಪಲ್ಲೈಸಿ ಕುಳ ನಾಲ್ಕರಲ್ಲಿ ಒಕ್ಕಿ,
ಫಲ ಮೂರರಲ್ಲಿ ಅಳೆದು ಪಗ ಒಂದರಲ್ಲಿ ತುಂಬಿತ್ತು.
ಇಂತೀ ವಿವಿಧ ಸ್ಥಲಂಗಳ ಹೊಲಬನರಿತು
ವರ್ತಕಕ್ಕೆ ಕ್ರೀ ಶುದ್ಧ, ಅರಿವಿಂಗೆ ಬಿಡುಗಡೆ ಶುದ್ಧ

ಬಿಡುಗಡೆ ಎರಡು ಏಕವಾದಲ್ಲಿ ಸ್ಥಲ ನಿರ್ವಾಹ.
ಶಂಭುವಿನಿಂದಿತ್ತ ಸ್ವಯಂಭುವಿನಿಂದತ್ತ ಅತಿಬಳ ನೋಡಾ.
ಮಾತುಳಂಗ ಮಧುಕೇಶ್ವರನು. ॥ ೫೯ ॥

೧೧೨೩

ಪ್ರಸಾದಕ್ಕೆಂದು ಮುಯ್ಯಾಂತು ಕೈವೊಡ್ಡಿ ಬಾಯಿದೆರೆವಲ್ಲಿ
ಘೃತ ಫಳ ಮಧುರ ರಸ ಮೃಷ್ಟಾನ್ನವೆಂದು ಚಿತ್ತದಲ್ಲಿ
ಕಲೆದೋರಿ,
ಜಿಹ್ವೆಯ ಲಂಪಟಕ್ಕೆ ಕೈಯಾಂತು ಬಾಯಿಬಿಟ್ಟು ಕೊಂಡಡೆ,
ಸಮ್ಮಗಾರನ ತಿತ್ತಿಯ ಪೋಷಣ ಪ್ರಸಾದಿಗೆ ನಿಶ್ಚಯವಲ್ಲ.
ಶಂಭುವಿನಿಂದಿತ್ತ ಸ್ವಯಂಭುವಿನಿಂದತ್ತ ಅತಿಬಳ ನೋಡಾ,
ಮಾತುಳಂಗ ಮಧುಕೇಶ್ವರನು. ॥ ೬೦ ॥

೧೧೨೪

ಬರಡು ಕರೆವಾಗ ಈಯಿತ್ತೆ?
ಆ ಕೊರಡು ಚಿಗುರುವಲ್ಲಿ ಹುಟ್ಟಿತ್ತೆ?
ಆಗ ತೃಣ ಸುಡಿವಲ್ಲಿ ಆತ್ಮ ಜೀವಿಸಿತ್ತೆ?
ಆಗ ಕಾಷ್ಠವೇಷವೆದ್ದು ನಡೆವಲ್ಲಿ ಅರಿವು ಕರಿಗೊಂಡಿತ್ತೆ?
ಇಂತಿವು ವಿಶ್ವಾಸದ ಹಾಹೆ.
ಗುರುಚರದಲ್ಲಿ ಗುಣ, ಶಿವಲಿಂಗ ರೂಪಿನಲ್ಲಿ
ಸಲಕ್ಷಣವನರಸಿದಲ್ಲಿಯೆ ಹೋಯಿತ್ತು ಭಕ್ತಿ.
ಈ ಗುಣ ತಪ್ಪದೆಂದು ಸಾರಿತ್ತು ಡಂಗುರ.
ಶಂಭುವಿನಿಂದಿತ್ತ ಸ್ವಯಂಭುವಿನಿಂದತ್ತ ಅತಿಬಳ ನೋಡಾ,
ಮಾತುಳಂಗ ಮಧುಕೇಶ್ವರನು. ॥ ೬೧ ॥

೧೧೨೫

ಬೇರಿನ ಬಣ್ಣ ನೋಡ ನೋಡಲಿಕ್ಕೆ ಹಬೆಗೆ ಹಾರುವ ತೆರದಂತೆ
ಪಂಕದ ಸಾರ ಕಿರಣಕ್ಕೆ ಏವಂಕದಲ್ಲಿಯೆ ಅಡಗಿದಂತೆ
ಈ ಘಟ ಸಂಕೇತದಲ್ಲಿದ್ದ ಆತ್ಮನು ಆ ಗುಣ ಏವಂಕದಲ್ಲಿಯೆ
ಅಡಗಿದ ಮತ್ತೆ ಠವಣೆಗೆ ಸಂದುಂಟೆ?
ಇದು ಅಂಗಲಿಂಗ ಸಂಬಂಧ, ಲಿಂಗಾಂಗ ಸಂಯೋಗ.

ಶಂಭುವಿನಿಂದತ್ತ ಸ್ವಯಂಭುವಿನಿಂದಿತ್ತ ಅತಿಬಳ ನೋಡಾ,
ಮಾತುಳಂಗ ಮಧುಕೇಶ್ವರನು. ॥ ೬೨ ॥

೧೧೨೬

ಬೇವಿನ ಮರನನೇರಿ ಬೆಲ್ಲವ ಮೆದ್ದಡೆ ಕಹಿಯಾದುದುಂಟೆ?
ಕಾಳೋರಗನ ಹೆಡೆಯ ಮೆಟ್ಟಿ ಹಾಲ ಕುಡಿದಡೆ
ಹಾಲಾಹಲ ಒಡಲನೇರಿದುದುಂಟೆ?
ಸಂಜೀವನದ ಫಲವ ಕಂಡು ಚಪ್ಪರಿದಲ್ಲಿ ಆತ್ಮಕ್ಕೆ ಸಲೆ
ಸಂದುದುಂಟೆ?
ಇಂತೀ ಅವಗುಣವನರಸದೆ ಗುಣಜ್ಞ ತಾನಾದ ಮತ್ತೆ
ಅವಗುಣ ವೇಷದಲ್ಲಿ ಅಡಗಿತ್ತು, ಸದ್ಗುಣ ವಸ್ತುವಿನಲ್ಲಿ ಹೊದ್ದಿತ್ತು.
ಇಂತೀ ಗುರುವಿನ ಇರವ ವಿಚಾರಿಸಿದಲ್ಲಿ ಭಕ್ತಿ ಹಾರಿತ್ತು,
ಸತ್ಯ ಜಾರಿತ್ತು, ವಿರಕ್ತಿ ತೂರಿತ್ತು.
ಶಂಭುವಿನಿಂದಿತ್ತ ಸ್ವಯಂಭುವಿನಿಂದತ್ತ ಅತಿಬಳ ನೋಡಾ,
ಮಾತುಳಂಗ ಮಧುಕೇಶ್ವರನು. ॥ ೬೩ ॥

೧೧೨೭

ಭಕ್ತಂಗೆ ಮೂರು ಗುಣ, ಮಾಹೇಶ್ವರಂಗೆ ಆರು ಗುಣ,
ಪ್ರಸಾದಿಗೆ ಎಂಟು ಗುಣ, ಪ್ರಾಣಲಿಂಗಿಗೆ ಹತ್ತು ಗುಣ,
ಶರಣಂಗೆ ಹದಿನಾರು ಗುಣ, ಐಕ್ಯಂಗೆ ಐವತ್ತೆರಡು (ಗುಣ).
ಸರನಾದು ಭೇದ ನಿಂದಲ್ಲಿ ಒಂದೆ ಗುಣ ಸಂದಿತ್ತು.
ಇದು ಕ್ರಿಯಾಸ್ಥಲ ನಿರ್ವಾಹ.
ಸಂಗನ ಬಸವಣ್ಣನ ಆದಿ, ಚನ್ನಬಸವಣ್ಣನ ಅನಾದಿ
ಶರಣ ಸಂತತಿಯ ಸಂಬಂಧ ಮಾರ್ಗ.
ಶಂಭುವಿನಿಂದಿತ್ತ ಸ್ವಯಂಭುವಿನಿಂದತ್ತ ಅತಿಬಳ ನೋಡಾ,
ಮಾತುಳಂಗ ಮಧುಕೇಶ್ವರನು. ॥ ೬೪ ॥

೧೧೨೮

ಭಕ್ತನ ಕ್ರೀ, ಮಾಹೇಶ್ವರನ ನಿಶ್ಚಯ, ಪ್ರಸಾದಿಯ ನಿಷ್ಠೆ,
ಪ್ರಾಣಲಿಂಗಿಯ ಯೋಗ, ಶರಣನ ನಿಬ್ಬೆರಗು, ಐಕ್ಯದ ನಿರ್ಲೇಪ.
ಇಂತೀ ಆರುಸ್ಥಲವನವಗವಿಸಿ ಕಲೆದೋರದೆ ನಿಂದುದು
ವಿರಕ್ತನ ಏಕಸ್ಥಲದಾಟ, ನಿಜತತ್ವದ ಕೂಟ!

ಶಂಭುವಿನಿಂದಿತ್ತ ಸ್ವಯಂಭುವಿನಿಂದತ್ತ ಅತಿಬಳ ನೋಡಾ,
ಮಾತುಳಂಗ ಮಧುಕೇಶ್ವರನು. ॥ ೬೫ ॥

೧೧೨೯

ಭಕ್ತ ಮಾಹೇಶ್ವರ ಪ್ರಸಾದಿ ಈ ತ್ರಿವಿಧ ಒಂದೆ ಬೀಜ;
ತಲೆವಿಡಿಯಿಲ್ಲ
ಪ್ರಾಣಲಿಂಗಿ ಶರಣ ಐಕ್ಯ ಇಂತೀ ತ್ರಿವಿಧ ಒಂದೇ ಬೀಜ;
ತಲೆವಿಡಿಯಿಲ್ಲ.
ವಸ್ತು- ವಸ್ತುಕದಂತೆ, ಶಿಲೆ-ಕಾಂತಿಯಂತೆ,
ಕುಸುಮ-ಗಂಧವಂತೆ, ಪತಿ-ಸತಿಯಂತೆ ಭಕ್ತಿ ಘಟ;
ಅರಿವೆ ವಸ್ತುಸ್ವರೂಪವಾಗಿ ಷಡಸ್ಥಲವನವಗವಿಸಿ ನಿಂದ ಸ್ವರೂಪ;
ಬಸವಣ್ಣ ಚನ್ನಬಸವಣ್ಣ ಶರಣತತಿ ಮುಂತಾದ
ಸಿದ್ಧಾಂತ ಉಭಯಸ್ಥಲ ನಿರ್ವಾಹ.
ಶಂಭುವಿನಿಂದಿತ್ತ ಸ್ವಯಂಭುವಿನಿಂದತ್ತ ಅತಿಬಳ ನೋಡಾ,
ಮಾತುಳಂಗ ಮಧುಕೇಶ್ವರನು. ॥ ೬೬ ॥

೧೧೩೦

ಭಕ್ತಿಸ್ಥಲ ಮೂರು, ಮಾಹೇಶ್ವರಸ್ಥಲ ನಾಲ್ಕು,
ಪ್ರಸಾದಿಸ್ಥಲ ಐದು, ಪ್ರಾಣಲಿಂಗಿಸ್ಥಲ ಆರು,
ಶರಣಸ್ಥಲವೆರಡು, ಐಕ್ಯಸ್ಥಲ ಒಂದು,
ಭಕ್ತಂಗೆ ಮೂರು ಗೊತ್ತು, ಮಾಹೇಶ್ವರಂಗೆ ನಾಲ್ಕು ಗೊತ್ತು,
ಪ್ರಸಾದಿಗೆ ಐದು ಗೊತ್ತು, ಪ್ರಾಣಲಿಂಗಿಗೆ ಆರು ಗೊತ್ತು,
ಶರಣಂಗೆ ಎರಡು ಗೊತ್ತು, ಐಕ್ಯಂಗೆ ಒಂದು ಗೊತ್ತಾಗಿ
ಸಂಬಂಧಿಸಿ ಷಡುಸ್ಥಲ ರೂಪಾದಲ್ಲಿ ಒಂದು ಸ್ಥಲಕ್ಕೆ ಆರು ಸ್ಥಲ
ಹೊರೆ ಹೊರೆಯಾಗಿ ಮಿಶ್ರವಾಗಿ ಸ್ಥಲಂಗಳು ಚರಿಸುವಲ್ಲಿ
ನೂರೊಂದು ಸ್ಥಲಂಗಳಲ್ಲಿ ಆರೋಪಿಸಿ ನಿಂದುದು ಮೂರೆ
ಭಕ್ತಿಸ್ಥಲ,
ಸಂದುದು ನಾಲ್ಕೆ ಮಾಹೇಶ್ವರಸ್ಥಲ,
ಕೊಂಡುದು ಐದೆ ಪ್ರಸಾದಿಸ್ಥಲ,
ಗಮನವಿಲ್ಲದೆ ನಿಜದಲ್ಲಿ ನಿಂದುದಾರೆ ಪ್ರಾಣಲಿಂಗಿಸ್ಥಲ,
ಸ್ತುತಿ-ನಿಂದೆಗೆಡೆಯಿಲ್ಲದೆ ನಿಂದುದೆರಡೆ ಶರಣಸ್ಥಲ,
ನಿರ್ನಾಮವಾಗಿ ಭಾವಕ್ಕೆ ಭ್ರಮೆಯಿಲ್ಲದುದೊಂದೆ ಐಕ್ಯಸ್ಥಲ.

ಇಂತೀ ಭಿನ್ನ ವರ್ಣಂಗಳಲ್ಲಿ ವರ್ಣಸ್ವರೂಪನಾದೆಯಲ್ಲಾ,
ಶಂಭುವಿನಿಂದಿತ್ತ ಸ್ವಯಂಭುವಿನಿಂದತ್ತ ಅತಿಬಳ ನೋಡಾ,
ಮಾತುಳಂಗ ಮಧುಕೇಶ್ವರನು. ॥ ೬೭ ॥

೧೧೩೧

ಭಕ್ತಸ್ಥಲವ ತಾಳ್ದ ಮತ್ತೆ ತ್ರಿವಿಧದಲ್ಲಿ ಆವ ಸೋಂಕು ಬಂದಡೂ
ಗುರುಚರಪರದಲ್ಲಿ ಶ್ರುತದಿಂದ ಕೇಳಿ ದೃಷ್ಟದಿಂದ ಕಂಡು,
ಅನುಮಾನದಿಂದ ವಿಚಾರಿಸಿಕೊಂಡರಿದಡೂ
ವೃಶ್ಚಿಕದಿಂದ ನೊಂದ ಚೋರನಂತೆ ಬಾಯಿ ಮುಚ್ಚಿದಂತಿರಬೇಕು.
ಮಾಹೇಶ್ವರಸ್ಥಲವ ತಾಳ್ದಲ್ಲಿ
ಆವ ವ್ರತಹಿಡಿದಡೂ
ತಪ್ಪಿದವರ ಕಂಡಲ್ಲಿ, ಗುರುಲಿಂಗಜಂಗಮದ ನಿಂದೆಯ ಕೇಳಿ ಕಂಡಲ್ಲಿ,
ತನ್ನ ಅನುವಿಂಗೆ ಬಾರದೆ ಆಚಾರಕ್ಕೆ ಓಸರಿಸಿದವರ ಕಂಡಲ್ಲಿ,
ತನ್ನ ಸ್ಥಲಕ್ಕೆ ಊಣಯವೆಂದು ಕೇಳಿದಲ್ಲಿ
ಕೇಳಿದ ತೆರನ ತನ್ನ ತಾನರಿದಲ್ಲಿ,
ಇದಿರಿಗೆ ಆಜ್ಞೆ ತನಗೆ ಸಾವಧಾನ ಕಡೆಯೆಂಬುದನರಿತುದು
ವಿಶ್ವಲಿಂಗ ಮಾಹೇಶ್ವರಸ್ಥಲ.
ಪ್ರಸಾದಿಸ್ಥಲವ ತಾಳ್ದಲ್ಲಿ,
ಶುದ್ಧವೆನ್ನದೆ ಸಿದ್ಧವೆನ್ನದೆ ಪ್ರಸಿದ್ಧವೆನ್ನದೆ
ಉಚಿತದಲ್ಲಿ ಚಿಕಿತ್ಸೆ ಜುಗುಪ್ಸೆಯೆನ್ನದೆ
ಕಾಲರುದ್ರನಂತೆ ದಾವಾನಳನಂತೆ
ಪೂರ್ಣಚಂದ್ರ ಮಹಾರ್ಣಸಿಂಧುವಿನ ತೆರದಂತೆ
ನೂತನ ಇನನ ಹೋದ ಕಳೆಯಂತೆ ಬಂದುದ ನಿಂದುದ ಬಹುದ ಸಂದಿತ್ತು.
ಸಾಕುಬೇಕೆನ್ನದೆ ಕರುಣದಿಂದ ಬಂದಡೆ ಕರುಣದಿಂದ ಸಾಕೆಂದು ನಿಂದಡೆ,
ಪ್ರಸಾದವ ಕೊಂಡಲ್ಲಿ ಉಕ್ಕಳ ಉಬ್ಬಸ ತಬ್ಬಿಬ್ಬು ಹೋಗಿ,
ವೃದ್ಧಿಗೆ ಎಡೆಯಿಲ್ಲದೆ,
ಭಾಗೀರಥಿಯಂತೆ ತುಂಬಿತ್ತೆಂದು ಸೂಸದೆ ಇಲ್ಲಾ ಎಂದು ಹಿಂಗದೆ
ಎಂದಿನಂತೆ ತುಂಬಿದಂತೆ ಇಪ್ಪ ನಿಜಪ್ರಸಾದಿಯ ನಿಜದಂಗಸ್ಥಲ.

ಪ್ರಾಣಲಿಂಗಿಸ್ಥಲವ ತಾಳ್ದಲ್ಲಿ,
ಬಿತ್ತುಳಿದ ಕಾರ್ಪಾಸದ ಹಿಕ್ಕಿದ ಮಧ್ಯದಲ್ಲಿ ಕಿಚ್ಚು ಮುಟ್ಟದಂತೆ
ಪೃಥ್ವಿಯ ಪಿಪೀಲಿಕ ಮೃತ್ತಿಕೆಯ ಮುಟ್ಟಲಿಕ್ಕಾಗಿ,
ಅಪ್ಪು ಒಡಗೂಡಿಯೆ ತಿಟ್ಟ ನಿಂದಂತೆ,
ಕರ್ಪೂರದ ವೃಕ್ಷಕ್ಕೆ ಬುಡದಿಂದ ಕಿಚ್ಚು ಹತ್ತಿದಂತೆ,
ಮಧುಮಕ್ಷಿಕದ ಚಿತ್ತವಿದ್ದಂತೆ,
ಆಯುಃಕಾಂತ ಲೋಹಕ್ಕೆ ಆತ್ಮಭಾವವಿದ್ದಂತೆ,
ಕೂರ್ಮನ ಶಿಶುವಿನ ಸ್ನೇಹವಿದ್ದಂತೆ,
ಈ ಗುಣ ಸದ್ಭಾವದಲ್ಲಿ ಪ್ರಾಣಲಿಂಗಿಸ್ಥಲ.
ಶರಣಸ್ಥಲವ ತಾಳ್ದಲ್ಲಿ,
ಮದಗಜದಂತೆ ಬಿದಿರಿನ ಪಟುಭಟನಂತೆ ಮಸಗಿದ ಮಾರುತನಂತೆ
ಘನಸಿಂಧು ಎಸಗಿದ ಉದ್ಭವದಂತೆ ಕಾಲಸಂಹಾರ ಲೀಲೆಯಾದಂತೆ
ತಾನಿರೆಂಬ ಭಾವವ ಮರೆದು ನಿಶ್ಚಲ ನಿಜವಾದುದು ಶರಣಸ್ಥಲ.
ಐಕ್ಯಸ್ಥಲವ ತಾಳ್ದಲ್ಲಿ,
ಶಕ್ತಿಯಲ್ಲಿ ನಿಂದ ಅಪ್ಪುವಿನಂತೆ, ಬಿಂದುವನೊಳಕೊಂಡ ರಜ್ಜುವಿನಂತೆ
ರಜ್ಜುವನೊಳಕೊಂಡ ಋತುಕಾಲದ ಸುರಂಗದ ನಿರಂಗದಂತೆ.
ಸುಗಂಧವ ಕೊಂಡೊಯ್ದು ಸಂಚಾರ ಹೋಗ ಹೋಗಲಿಕ್ಕಾಗಿ
ಸುಗಂಧದಂಗವಡಗಿದಂತೆ ವಿದ್ಯುಲ್ಲತೆಯ ಕುಡಿವೆಳಗಿನಂತೆ
ನಿರವಯದ ಗರ್ಜನೆಯಂತೆ,
ವಿಷರುಹದ ಭದ್ರದ ಸುವರ್ಣದ ನಿರ್ಝರದ ನಿರವಯದಂತೆ,
ಅಂಬುಧಿಯೊಳಗಡಗಿದ ಸೂಕ್ಷ್ಮ ಸಮಸಂಗದ ಘಟದಂತೆ,
ಮಂಜಿನಪದ ಬಿಸಿಲಂಗದ ನಾಮದಲ್ಲಿ ಇಂಗಿ ಹೋದಂತೆ,
ಈ ನಿರಂಗ ನಿಶ್ಚಯವಾದಲ್ಲಿ ಐಕ್ಯಸ್ಥಲ.
ಇಂತೀ ಆರುಸ್ಥಲವನರಿದು ಮೂರುಸ್ಥಲದಲ್ಲಿ ನಿಂದು,
ಉಭಯಸ್ಥಲ ಕೂಡಿ ಎರಡಳಿದ ಉಳುಮೆ ಪರಿಪೂರ್ಣವಸ್ತು
ಬಂಧಮೋಕ್ಷ ಕರ್ಮಂಗಳಿಂದತ್ತ
ಶಂಭುವಿನಿಂದಿತ್ತ ಸ್ವಯಂಭುವಿನಿಂದತ್ತ ಅತಿಬಳ ನೋಡಾ,
ಮಾತುಳಂಗ ಮಧುಕೇಶ್ವರನು. ॥ ೬೮ ॥

೧೧೩೨

ಮರ್ಕಟನ ಉಚಿತ, ವಿಹಂಗನ ಪವನ, ಪಿಪೀಲಿಕನ ಧ್ಯಾನ,
ತ್ರಿವಿಧಾತ್ಮನ ಭೇದ, ಸ್ಥೂಲದ ವಿವರ,
ಸೂಕ್ಷ್ಮದ ಸುಳುಹ, ಕಾರಣದ ಚೋದ್ಯ.
ಇಂತೀ ತ್ರಿವಿಧ ವಿವರಂಗಳಲ್ಲಿ ತತ್ವಮಸಿ ಎಂಬ ಭಿತ್ತಿಯ ವಿಚಾರಿಸಿ
ಶ್ರುತದಲ್ಲಿ ಕೇಳದುದ ದೃಷ್ಟದಲ್ಲಿ ಕಂಡುದ
ಅನುಮಾನದಲ್ಲಿ ಅರಿದುದ
ಭಿನ್ನವಿಲ್ಲದೆ ಚಿನ್ಮಯಮೂರ್ತಿ ತಾನಾಗಿ ಕರ್ಮಕ್ರೀಯಲ್ಲಿಯೆ ಲೋಪ.
ಶಂಭುವಿನಿಂದಿತ್ತ ಸ್ವಯಂಭುವಿನಿಂದತ್ತ ಅತಿಬಳ ನೋಡಾ,
ಮಾತುಳಂಗ ಮಧುಕೇಶ್ವರನು. ॥ ೬೯ ॥

೧೧೩೩

ಮರ್ಕಟನ ಲಾಗು ಶಾಖೆಯುಳ್ಳನ್ನಕ್ಕ,
ವಿಹಂಗನ ಪಥ ಬಯಲುಳ್ಳನ್ನಕ್ಕ,
ಪಿಪೀಲಿಕನ ಜ್ಞಾನ ಮಧುರರಸವುಳ್ಳನ್ನಕ್ಕ,
ಇಂತೀ ತ್ರಿವಿಧ ಗುಣ ಇದಿರುಳ್ಳನ್ನಕ್ಕ
ಇಂತೀ ವಸ್ತು ಉಂಟಾಗಿ ದೃಷ್ಟ ಇದಿರಿಟ್ಟವು.
ಉರಿ ಕರ್ಪುರವ ಸುಡಲಿಕ್ಕೆ ಘಟದ ತಿಟ್ಟವಳಿದಂತೆ
ವಸ್ತು ದೃಷ್ಟದ ಅಂಗದಲ್ಲಿ ಬಂದು ಪ್ರತಿಷ್ಠೆಯಾಗಲಾಗಿ
ಘಟದ ಸರ್ವೇಂದ್ರಿಯಂಗಳು ಅಲ್ಲಿಯೇ ನಷ್ಟ.
ಶಂಭುವಿನಿಂದಿತ್ತ ಸ್ವಯಂಭುವಿನಿಂದತ್ತ ಅತಿಬಳ ನೋಡಾ,
ಮಾತುಳಂಗ ಮಧುಕೇಶ್ವರನು. ॥ ೭೦ ॥

೧೧೩೪

ಮಂಜರಿ ನುಂಗಿದ ಚೂಡ ತನ್ನ ಕಾಲವೇಳೆಗೆ
ನಿಂದು ಕೂಗಿಮದುಂಟೆ?
ಲಿಂಗವನರಿದ ಚಿತ್ತ ಸಂಸಾರದ ಸಂದಣಿಯಲ್ಲಿ ಮುಳುಗುವುದೆ?
ಈ ದ್ವಂದ್ವವನರಿದು ಯೋಗ ಸಂಬಂಧಿಯಾಗಿರಬೇಕು.
ಶಂಭುವಿನಿಂದಿತ್ತ ಸ್ವಯಂಭುವಿನಿಂದತ್ತ ಅತಿಬಳ ನೋಡಾ,
ಮಾತುಳಂಗ ಮಧುಕೇಶ್ವರನು. ॥ ೭೧ ॥

೧೧೩೫

ಮಣ್ಣಿನಲ್ಲಿ ಹುಟ್ಟಿದ ಹೊನ್ನು, ಕಲ್ಲಿನಲ್ಲಿ ಹುಟ್ಟಿದ ರನ್ನ,
ಚಿಪ್ಪಿನಲ್ಲಿ ಹುಟ್ಟಿದ ಮುತ್ತು, ವೃಕ್ಷದಲ್ಲಿ ಹುಟ್ಟಿದ ಗಂಧ
ಅವು ತಮ್ಮ ಸ್ವಸ್ಥಾನಂಗಳ ಮೀರಿ
ಪರಸ್ಥಾನಂಗಳಲ್ಲಿ ನಿಂದು ಪ್ರಾಪ್ತಿಯನೆಯ್ದುವಂತೆ,
ಪಿಂಡ ಅಂಡದಲ್ಲಿ ಹುಟ್ಟಿ ಅಂಡವನತಿಗಳೆದು ನಿಜ
ಪಿಂಡವಾದಂತೆ,
ಗುರುವಿನ ಕರಕಮಲದಲ್ಲಿ ಹುಟ್ಟಿ ,
ಲಿಂಗಮೂರ್ತಿಯ ಸರ್ವಾಂಗದಲ್ಲಿ ಬೆಳೆದು
ಜಂಗಮವಪ್ಪ ನಿರಂಗ ಪ್ರಸಾದದಲ್ಲಿ ಬೆರೆದು ಅವಿರಳನಾದವಂಗೆ
ಬಂಧ ಮೋಕ್ಷ ಕರ್ಮಂಗಳ ಬೆಂಬಳಿಗೆ ಸಲ್ಲ!
ಅದು ನಿರಂಗವಸ್ತು.
ಶಂಭುವಿನಿಂದಿತ್ತ ಸ್ವಯಂಭುವಿನಿಂದತ್ತ ಅತಿಬಳ ನೋಡಾ,
ಮಾತುಳಂಗ ಮಧುಕೇಶ್ವರನು. ॥ ೭೨ ॥

೧೧೩೬

ಮರಾಳನ ಗದಕ ತೇಜಿಯ ಚಿತ್ತ ಪನ್ನಗನ ವಳಿ ಹೊಳಹಿನಂತೆ
ಘಟಾತ್ಮನ ಭೇದ.
ಇದು ನಿರುತ ಸ್ವಯಾನುಭಾವದಿಂದ ಸಂಬಂಧಿಸಿ
ಉರಿ ಲೋಹದ ಯೋಗದಂತೆ ಆಗದೆ,
ಉರಿ ಕರ್ಪೂರದಿರವಿನಂತೆ ಆಗಬೇಕು.
ಇದು ಸಾವಧಾನ ಸಂಬಂಧ.
ಶಂಭುವಿನಿಂದಿತ್ತ ಸ್ವಯಂಭುವಿನಿಂದತ್ತ ಅತಿಬಳ ನೋಡಾ,
ಮಾತುಳಂಗ ಮಧುಕೇಶ್ವರನು. ॥ ೭೩ ॥

೧೧೩೭

ಮಾಂಸ ಪಿಂಡತ್ರಯ, ಸೂಕ್ಷ್ಮ ಪಿಂಡತ್ರಯ, ಕಾರಣ ಪಿಂಡತ್ರಯ
ಇಂತಿವ ಶೋಧಿಸಿ, ಲಿಂಗವ ಸಾಗಿಸಿ ದೀಕ್ಷೆಯ ಮಾಡಬೇಕು.
ಇದು ಸದ್ಗುರು ಮೂರ್ತಿಯ ತೆರ.
ಶಂಭುವಿನಿಂದಿತ್ತ ಸ್ವಯಂಭುವಿನಿಂದತ್ತ ಅತಿಬಳ ನೋಡಾ,
ಮಾತುಳಂಗ ಮಧುಕೇಶ್ವರನು. ॥ ೭೪ ॥

೧೧೩೮

ಮಾರುತನ ಮನೆಯಂತೆ ಉದಕ ಮುಕುರದ ಬಿಂಬದಂತೆ
ರತ್ನಕಾಂತಿಯ ಕಳೆಯಂತೆ ಪಾವಕದ ಪ್ರಥಮ ಬೀಜದಂತೆ
ಸುವರ್ಣವನೊಡಗೂಡಿದ ಸುವಳಿಯಂತೆ
ಮರೀಚಿಕವ ಕೂಡಿದ ವರುಣದಂತೆ
ಸುನಾದವನೊಳಕೊಂಡ ಬಯಲಿನಂತೆ
ಇಂತೀ ನಾಮ ರೂಪು ಪಿಂಡಜ್ಞಾನ ಭೇದ.
ಶಂಭುವಿನಿಂದಿತ್ತ ಸ್ವಯಂಭುವಿನಿಂದತ್ತ ಅತಿಬಳ ನೋಡಾ,
ಮಾತುಳಂಗ ಮಧುಕೇಶ್ವರನು. ॥ ೭೫ ॥

೧೧೩೯

ಮುತ್ತಿನ ನೀರಿನಂತೆ, ರತ್ನದ ಬೆಂಕಿಯಂತೆ,
ಸುರಚಾಪದಂತೆ, ಶರಧಿಯ ಹೊಳೆಯಂತೆ,
ವರವಳಿದ ಶಿಲಾಮೂರ್ತಿಯಂತೆ,
ದೃಷ್ಟವಿದ್ದು ನಷ್ಟವಪ್ಪುದು ನಿಜ ನಿಷ್ಠೆವಂತನ ಸಾವಧಾನ ಸಂಬಂಧ.
ಶಂಭುವಿನಿಂದಿತ್ತ ಸ್ವಯಂಭುವಿನಿಂದತ್ತ ಅತಿಬಳ ನೋಡಾ,
ಮಾತುಳಂಗ ಮಧುಕೇಶ್ವರನು. ॥ ೭೬ ॥

೧೧೪೦

ಮೂಲಾಧಾರ ಮುಂತಾದ ಷಡಾಧಾರಂಗಳಲ್ಲಿ
ಆಶ್ರಯವರ್ಣ ದಳವರ್ಣ ಭಾವವರ್ಣ ಆತ್ಮವರ್ಣ
ಅಕ್ಷರವರ್ಣ ಸ್ಥಲವರ್ಣಂಗಳ ಕಲ್ಪಿಸಿ,
ಭೇದಕ್ರೀಯಿಂದ ಅರಿಯಬೇಕಾಗಿ
ಕ್ರೀ ಮೂರು, ಸ್ಥಲವಾರು, ತತ್ವವಿಪ್ಪತ್ತೈದು,
ಕಥನ ಮೂವತ್ತಾರು, ಪ್ರಸಂಗ ನೂರೊಂದರಲ್ಲಿ ನಿರ್ವಾಹ.
ಈ ಏಕವಸ್ತು ತ್ರಿಗುಣಾತ್ಮಕವಾದ ಸಂಬಂಧ.
ಇಂತಿವನರಿತೆಹೆನೆಂದು ಒಂದಕ್ಕೊಂದು ಸಂದನಿಕ್ಕದೆ
ಗುರುವಿನ ಕಾರುಣ್ಯವನರಿತು, ಲಿಂಗದಲ್ಲಿ ಚಿತ್ತವ ಮೂರ್ತಿಗೊಳಿಸಿ
ಜಂಗಮದಲ್ಲಿ ಸತ್ವಕ್ಕೆ ತಕ್ಕ ಸಾಮರ್ಥ್ಯದಲ್ಲಿ ಭಕ್ತಿಯನೊಪ್ಪಿ
ನಿಶ್ಚಯನಾಗಿಪ್ಪುದೆ ಭಕ್ತಿಯ ಅಂಗಕ್ಕೆ ಇಕ್ಕಿದ ಗೊತ್ತು ವಿಶ್ವಸ್ಥಲ ನಿರ್ವಾಹ.

ಶಂಭುವಿನಿಂದಿತ್ತ ಸ್ವಯಂಭುವಿನಿಂದತ್ತ ಅತಿಬಳ ನೋಡಾ,
ಮಾತುಳಂಗ ಮಧುಕೇಶ್ವರನು. ॥ ೭೭ ॥

೧೧೪೧

ಮೆಟ್ಟಿದ ಪಂಕವ ಅಪ್ಪುವಿನಿಂದಲ್ಲದೆ ನೀಗಬಾರದು.
ಮಾಡುವ ಕ್ರೀಯ ಅರಿವಿನ ದೆಸೆಯಿಂದಲ್ಲದೆ
ಬಿಡುಮುಡಿಯನರಿಯಬಾರದು.
ಮಹಾನಿಜತತ್ವದ ಬೆಳಗ ಮಹಾಶರಣ ಸಂಸರ್ಗದಲ್ಲಿ ಅಲ್ಲದೆ
ಅರಿದು ಹರಿಯಬಾರದು.
ಶಂಭುವಿನಿಂದತ್ತ ಸ್ವಯಂಭುವಿನಿಂದತ್ತ ಅತಿಬಳ ನೋಡಾ,
ಮಾತುಳಂಗ ಮಧುಕೇಶ್ವರನು. ॥ ೭೮ ॥

೧೧೪೨

ಯೋಗವೆಂಬುದೇನು ಲಕ್ಷ್ಯದೊಳಗೆ ಅಲಕ್ಷ್ಯವಡಗಿಪ್ಪುದು;
ಇಷ್ಟದಲ್ಲಿ ಅಭೀಷ್ಟವಡಗಿಪ್ಪುದು; ಸ್ಥೂಲದಲ್ಲಿ ಸೂಕ್ಷ್ಮವಡಗಿಪ್ಪುದು;
ಅರಿದಲ್ಲಿ ಆ ಅರಿಕೆ ಅಡಗಿಪ್ಪುದು, ವಸ್ತುಕದಲ್ಲಿ ಆ ವಸ್ತು ಅಡಗಿ,
ರಂಜನೆಯಲ್ಲಿ ನಿರಂಜನ ಕುರುಹುಗೊಂಡು
ಆ ರಂಜನೆ ರಂಜಿಸುವಂತೆ,
ತಾನರಿವ ಕುರುಹಿನಲ್ಲಿ ನಿಜದರಿವು ಕರಿಗೊಂಡು
ಇಷ್ಟಲಿಂಗಕ್ಕೆ ದೃಷ್ಟಾತ್ಮಲೇಪವಾಗಿ ಇದು ಕ್ರಿಯಾ ಲಿಗಾಂಗಯೋಗ.
ನಿಜವನರಿಯದೆ ಕುಟಿಲ ಘಟಂಗಳಿಂದ ಅಂಬಿಕಾ ಹಠ
ಘಟಯೋಗಿಗಳೆಲ್ಲರು
ಭವಸಾಗರದ ಸಟೆಯೋಗಿಗಳು.
ಶಂಭುವಿನಿಂದಿತ್ತ ಸ್ವಯಂಭುವಿನಿಂದತ್ತ ಅತಿಬಳ ನೋಡಾ,
ಮಾತುಳಂಗ ಮಧುಕೇಶ್ವರನು. ॥ ೭೯ ॥

೧೧೪೩

ಲಿಂಗಕ್ಕೆ ನೈವೇದ್ಯ ಸಕಲ ಪದಾರ್ಥ ಬಂದಿರಲಿಕ್ಕಾಗಿ
ಕಂಗಳು ತುಂಬಿ ನೋಡಿ ಕೈ ತುಂಬ ಮುಟ್ಟಿ,
ಲಿಂಗಾರ್ಪಿತಕ್ಕೆ ಮೊದಲೆ ಕ್ಷುಧೆಯಾವರಿಸಿ ಮನ ನೆಟ್ಟಿತ್ತಾದಡೆ,
ಆ ಗುಣ ಲಿಂಗಾರ್ಪಿತವಲ್ಲ, ಕ್ರೀಗೆ ಸಲ್ಲ,
ಪ್ರಮಥರೊಳಗಲ್ಲ, ಪ್ರಸನ್ನನೊಪ್ಪ.
ಶಂಭುವಿನಿಂದಿತ ಸ್ವಯಂಭುವಿನಿಂದತ್ತಅತಿಬಳ ನೋಡಾ,
ಮಾತುಳಂಗ ಮಧುಕೇಶ್ವರನು. ॥ ೮೦ ॥

೧೧೪೪

ಲಿಂಗ ಸಹಿತವಾಗಿ ಸರ್ವಗುಣಂಗಳ ಭೋಗಿಸಬೇಕೆಂಬಲ್ಲಿ
ಲಿಂಗಕ್ಕೆ ಕೊಟ್ಟು ತಾ ಕೊಂಬ ತೆರನಾವುದು?
ಹೆಣ್ಣ ಕೊಡುವಲ್ಲಿ ತನ್ನಯ ವಿಕಾರವೊ ಲಿಂಗದ ಸುಖವೊ?
ಹೊನ್ನ ಹಿಡಿವಲ್ಲಿ ತನ್ನಯ ಬಯಕೆಯೊ ಲಿಂಗದ ಭೋಗವೊ?
ಮಣ್ಣ ಹಿಡಿವಲ್ಲಿ ತನ್ನಯ ಬೆಳೆಯೊ ಲಿಂಗದ ಇರವೊ?
ಇಂತೀ ತ್ರಿವಿಧದ ಬಿಡುಮುಡಿಯನರಿತು,
ಹೆಣ್ಣ ಬೆರಸಿದಲ್ಲಿ ಹೆಣ್ಣಿಗೆ ವಿಷಯಸುಖ ತೋರಿ
ತನಗೆ ಆ ವ್ಯಾಪಾರ ಹಿಂಗಿ ನಿಂದ ನಿಜದುಳುಮೆ ಲಿಂಗಸುಖ.
ಹೊನ್ನು ತನ್ನ ತಾ ಬಂದಲ್ಲಿ ಮುಟ್ಟಿ ಕೊಟ್ಟೆನೆಂಬುದನರಿಯದೆ
ಅದು ದೃಷ್ಟದಿಂದ ಬಂದುದ, ತನ್ನಷ್ಟವೆಂಬುದನರಿದಿಪ್ಪಾತನೆ ನಿಸ್ಪೃಹ.
ಮಣ್ಣ ಅಡಿವಿಡಿದು ಹಿಡಿದಲ್ಲಿ ಕರ್ಮರುಗಳಂತೆ ಕಾದರೆ
ಅವು ಮುನ್ನಿನಂತೆ ಇರಲಿ ಎಂಬುದು ಪರಮ ನಿರ್ವಾಣ.
ಇಂತೀ ತ್ರಿವಿಧ ಮಲಂಗಳಲ್ಲಿ ಅಮಲನಾಗಿ ಸರ್ವಗುಣ ಸಂಪನ್ನನಾದುದು
ಲಿಂಗ ಭೋಗೋಪಭೋಗಿಯ ಅಂಗನಿರತ,
ಸ್ವಯಾನುಭಾವಿಯ ಲಿಂಗಾಂಗ ಯೋಗ ಸಂಬಂಧ.
ಶಂಭುವಿನಿಂದಿತ್ತ ಸ್ವಯಂಭುವಿನಿಂದತ್ತ ಅತಿಬಳ ನೋಡಾ,
ಮಾತುಳಂಗ ಮಧುಕೇಶ್ವರನು. ॥ ೮೧ ॥

೧೧೪೫

ಲಿಂಗಸ್ವರೂಪಕ್ಕೆ ಪಂಚಸೂತ್ರ ಲಕ್ಷಣವನರಿತು
ವರ್ತುಳ ಖಂಡಿಕಾದಂಡ ಗೋಮುಖ
ಗೋಳಕಾಕಾರವಪ್ಪ ಲಿಂಗಮೂರ್ತಿಯಿಂದ
ಶಶಿ ರವಿ ಪವನ ಪಾವಕ ಆತ್ಮ ಮುಂತಾದ ಭೇದಂಗಳನರಿದು
ಪಂಚಸೂತ್ರದಿಂದ ಪ್ರಯೋಗಿಸಿ,
ಅಚೇತನವಪ್ಪ ಶಿಲೆಯ ಕುಲವಂ ಹರಿದು,
ತಾ ಶುಚಿರ್ಭೂತನಾಗಿ ಆ ಇಷ್ಟಲಿಂಗವ ತನ್ನ ಕರಸ್ಥಲದಲ್ಲಿ ಮೂರ್ತಿಗೊಳಿಸಿ
ತನು ಕರಗಿ ಮನ ಝೊಂಪಿಸಿ ಪುಳಕಿತದಿಂದ ಆನಂದಾಶ್ರು ಉಣ್ಮೆ
ನಿಧಾನಿಸಿ ನಿಕ್ಷೇಪವ ಕಾಬವನಂತೆ
ಬಯಲ ಬಂದಿವಿಡಿವವನಂತೆ

ಶಿಲೆಯಲ್ಲಿ ರಸವ ಹಿಳಿವವನಂತೆ
ರತ್ನದ ಕಳೆಯ ಗಂಟನಿಕ್ಕಿ ಕಟ್ಟಿ ತಾಹವನಂತೆ
ಮುತ್ತಿನೊಳಗಡಗಿದ ಅಪ್ಪುವಿನ ವಿಶಾಳದಿಂದ
ಶೋಧಿಸಿ ಮುಚ್ಚಿತಾಹವನಂತೆ
ಜ್ಯೋತಿಗೆ ಪ್ರತಿಹಣತೆಯಿಂದ ಆ ಬೆಳಗ ಮುಟ್ಟಿಸಿ ಕಾಹವನಂತೆ,
ಇಂತೀ ನಿರವಯದ ಸುವಸ್ತುವಿನ ಪ್ರಯೋಗದಿಂದ
ದಿವ್ಯಪ್ರಕಾಶವ ತನ್ನ ಕರತಳಾಮಳಕದಂತೆ
ಮೂರ್ತಿಗೊಂಡಿದ್ದ ಶಿವಲಿಂಗಮೂರ್ತಿಗೆ
ಧ್ಯಾನದ ಕೈಯಿಂದ ಆ ಸ್ವರೂಪಕ್ಕೆ ಮೂರ್ತಿಗೊಳಿಸಿ
ಷೋಡಶಕಳೆಯಿಂದ ಉಪಚರಿಸಿ
ನವಕಳಶ ಪ್ರಯತ್ನ ಪ್ರಯೋಗವ ಮಾಡಿ
ಚತುರ್ವಿಧ ಆಚಾರ್ಯರ ಕೂಡಿ
ಅಷ್ಟದೆಸೆಗಳಲ್ಲಿ ಕರ್ತೃಕಳಶ ನಾಲ್ಕು, ಭೃತ್ಯಕಳಶ ನಾಲ್ಕು,
ಶ್ರೀಗುರುಕಳಶ ಮಧ್ಯದಲ್ಲಿ ನಾಲ್ಕು
ವರ್ಣಕ್ರೀ ಮುಂತಾದ ಪ್ರಾಣಲಿಂಗವೆಂದು
ಉಪೇಕ್ಷಿಸಿ ಧಾರಣವ ಮಾಡುವಲ್ಲಿ
ಗುರು ನಾನೆಂಬುದ ಮರೆದು ಅಹಂಕಾರವ ತೊರೆದು
ಆತ್ಮತೇಜವ ಹರಿದು ಮುಂದಣ ತ್ರಿವಿಧ ಸೇವೆಯ ತೋರಿ
ಮಂತ್ರಾಭಿಷೇಕ ತೀರ್ಥಮಂ ತಳೆದು
ಶ್ರೀವಿಭೂತಿಯಲ್ಲಿ ಸರ್ವಾಂಗ ಧೂಳಿತವಂ ಮಾಡಿ
ತ್ರಿಕರಣ ಶುದ್ಧವಂ ಮಾಡಿ ಕಪಾಲಕ್ಕೆ ಕರವನಿಟ್ಟಲ್ಲಿ ಪರುಷರಸ
ಪಾಷಾಣ ಲೋಹದ ಮೇಲೆ ಬಿದ್ದಂತೆ
ಸಂಜೀರಿದಂಗೆ ಸಂಜೀವನ ಸಂಧಿಸಿದಂತೆ
ಇಂತೀ ಕಪಾಲಕ್ಕೆ ಕರವನಿಟ್ಟು ಕರ್ಣಕ್ಕೆ ಮಂತ್ರವ ಹೇಳಿದಲ್ಲಿ
ಹುಸಿ ಕೊಲೆ ಕುಹಕ ಪಾರದ್ವಾರ ಚೋರತ್ವ ಪಿಸುಣತನವಂ ಬಿಟ್ಟು
ಅರುವತ್ತುನಾಲ್ಕು ಶೀಲ, ಐವತ್ತೆರಡು ನೇಮ,
ಮೂವತ್ತರೊಳಗಾದ ನಿತ್ಯಕೃತ್ಯ, ಆರುಸ್ಥಲದೊಳಗಾದ ಆಚಾರ,
ಇಪ್ಪತ್ತೈದರೊಳಗಾವ ತತ್ತ್ವ -ಇಂತಿವರೊಳಗಾದವರಲ್ಲಿ
ಸತ್ವಕ್ಕೆ ತಕ್ಕ ಸಾಮರ್ಥ್ಯದಲ್ಲಿ ನಿಶ್ಚೈಸಿ ನಡೆಯೆಂದು
ಲಿಂಗಧಾರಣವ ಮಾಡುವದಿದು ಗುರುದೀಕ್ಷಾ ನಿರ್ವಾಹ.
ಶಂಭುವಿನಿಂದಿತ್ತ ಸ್ವಯಂಭುವಿನಿಂದತ್ತ ಅತಿಬಳ ನೋಡಾ,
ಮಾತುಳಂಗ ಮಧುಕೇಶ್ವರನು. ॥ ೮೨ ॥

೧೧೪೬

ಲಿಂಗಾಂಗವಾದ ಭೋಗ ಭೋಜ್ಯಂಗಳ ತೆರನೆಂತುಟೆಂದಡೆ:
ಆವುದ ಕೂಡಿದಲ್ಲಿಯೂ ಬಿಂದು ತಿಲಸಾರದಂತಿರಬೇಕು.
ಆವುದ ಬೆರಸಿದಲ್ಲಿಯೂ ಮುಕುರದ ಬಿಂಬದ ಪ್ರತಿಬಿಂಬದಂತೆ
ಸಂಗ ತೋರಿ ಅಂಗವಳಿದಿರಬೇಕು.
ಇದು ಲಿಂಗಾಂಗಿಯ ಮುಟ್ಟು, ಸುಸಂಗಿಯ ನಿರತ
ಸ್ವಯಾಂಗಿಯ ಉಭಯದ ಮುಟ್ಟು.
ಶಂಭುವಿನಿಂದಿತ್ತ ಸ್ವಯಂಭುವಿನಿಂದತ್ತ ಅತಿಬಳ ನೋಡಾ,
ಮಾತುಳಂಗ ಮಧುಕೇಶ್ವರನು. ॥ ೮೩ ॥

೧೧೪೭

ವಾದ್ಯಕ್ಕೆ ಬಂಧವಲ್ಲದೆ ನಾದಕ್ಕೆ ಬಂಧವುಂಟೆ?
ಅರಿವಿಂಗೆ ಬಂಧವಲ್ಲದೆ ಅರುಹಿಸಿಕೊಂಬವಂಗೆ ಬಂಧವುಂಟೆ?
ಅರಿದೆಹೆನೆಂಬ ಭ್ರಮೆ ಅರುಹಿಸಿಕೊಂಡಹೆನೆಂಬ ಕುರುಹು
ಉಭಯ ನಾಸ್ತಿಯಾದಲ್ಲಿ ಭಾವಶುದ್ಧವಿಲ್ಲ.
(ಶಂಭುವಿನಿಂದಿತ್ತ ಸ್ವಯಂಭುವಿನಿಂದತ್ತ ಅತಿಬಳ ನೋಡಾ),
ಮಾತುಳಂಗ ಮಧುಕೇಶ್ವರನು. ॥ ೮೪ ॥

೧೧೪೮

ವಿಷ ಚರದಲ್ಲಿ ಉಂಟು, ವಿಷ ಸ್ಥಾವರದಲ್ಲಿ ಉಂಟು.
ನಿರ್ವಿಷ ಚರದಲ್ಲಿ ಉಂಟು, ನಿರ್ವಿಷ ಸ್ಥಾವರದಲ್ಲಿ ಉಂಟು.
ಇದಿರಿಟ್ಟು ಕಾಬಲ್ಲಿ ಉಂಟು ದೃಷ್ಟ.
ಅಲ್ಲಿ ಇಲ್ಲದಿರೆ ತನ್ನಲ್ಲಿ ಉಂಟು ದೃಷ್ಟ.
ಆ ಗುಣ ನೀರಿನೊಳಗೆ ಬೆರೆದೆಯ್ದುವ ತಿಳಿವಳಿಯ
ಕುಂಪಟೆಯಂತೆ.
ವಾರಿಯಂಗವೆ ತನ್ನ ಚರಾಂಗವಾಗಿ ಇದು ಸದ್ಭಾವಕ್ರಿಯಾಂಗಸ್ಥಲ.
ಶಂಭುವಿನಿಂದಿತ್ತ ಸ್ವಯಂಭುವಿನಿಂದತ್ತ ಅತಿಬಳ ನೋಡಾ,
ಮಾತುಳಂಗ ಮಧುಕೇಶ್ವರನು. ॥ ೮೫ ॥

೧೧೪೯

ವಿಷ ತನ್ನೊಳಗಾದಡೂ ತನ್ನ ಕೇಡು,
ವಿಷದೊಳಗು ತಾನಾವಡೂ ತನ್ನ ಕೇಡು.

ಕರ್ಕಸದ ನಡುವೆ ಹುಟ್ಟಿದ ಕಂಬದಂತೆ.
ಇಂತಿವನರಿದು ಮಾಡಿ ನೀಡಿ ವೃಥಾ ನಿರರ್ಥಕ್ಕೆ ಹೋಗಬೇಡ.
ಹುತ್ತಕ್ಕೆ ಹಾಲನೆರೆದಲ್ಲಿ ಸರ್ಪ ಕುಡಿಯಿತ್ತೆ ಆ ಹಾಲ?
ಅದು ತಮ್ಮ ಕೃತ್ಯದ ಕಟ್ಟಣೆಗೆ ಸರ್ಪನೊಪ್ಪಿ ಕಾಟವ ಬಿಟ್ಟಿತೆ?
ಅದು ತಮ್ಮ ಚಿತ್ತದ ದರ್ಪದ ತೆರ.
ಇಂತೀ ವಿಶ್ವಾಸದಿಂದ ಶಿವಭಕ್ತಿಯನೊಪ್ಪುಗೊಂಬ,
ಇದು ವಿಶ್ವಾಸಿಯ ಸ್ಥಲ.
ಶಂಭುವಿನಿಂದಿತ್ತ ಸ್ವಂಭುವಿನಿಂದತ್ತ ಅತಿಬಳ ನೋಡಾ,
ಮಾತುಳಂಗ ಮಧುಕೇಶ್ವರನು. ॥ ೮೬ ॥

೧೧೫೦

ವಿರಕ್ತಂಗೆ ವಿಷಯವುಂಟೆ?
ಶರಣಂಗೆ ತಥ್ಯಮಿಥ್ಯವುಂಟೆ?
ಮಹದೊಡಗೂಡಿ ಮಹಾತ್ಮೆಯನಳಿದವಂಗೆ
ಗಾಂಭೀರ ಗರ್ವಕ್ಕೆ ಎಡೆದೆರವುಂಟೆ?
ಆತನಿರವು ದಗ್ಧಪಟದಂತೆ,
ದಪ್ಪದಲ್ಲಿ ಸೊಂದ ರಜ್ಜುವಿನ ತೆರದಂತೆ,
ನಿರವಯದಲ್ಲಿ ತೋರಿ ತೋರುವ
ಮರೀಚಿಕಾ ಜಲದ ತೆರೆಯ ಹೊಳಹಿನ ವಳಿಯಂತೆ.
ರೂಪಿಂಗೆ ದೃಷ್ಟವಾಗಿ ಹಿಡಿವೆಡೆಯಲ್ಲಿ
ಅಡಿಯಿಲ್ಲದೆ ವಸ್ತುವನೊಡಗೂಡಬೇಕು.
ಆತ ಹಿಡಿದುದು ಹಿಡಿಕೆಯಲ್ಲ, ಮುಟ್ಟಿಂಗೊಳಗಲ್ಲ.
ಅಂಬರದ ವರ್ಣ ಎವೆ ಹಳಚುವುದಕ್ಕೆ ಮುನ್ನವೆ
ಥಂದವಳಿದಂತೆ.
ಇದು ಲಿಂಗಾಂಗಿಯ ಮುಟ್ಟು,
ಸರ್ವಗುಣ ಸಂಪನ್ನನ ತೊಟ್ಟು,
ದಿವ್ಯಜ್ಞಾನಿಯ ತಟ್ಟು.
ಶಂಭುವಿನಿಂದಿತ್ತ ಸ್ವಯಂಭುವಿನಿಂದತ್ತ ಅತಿಬಳ ನೋಡಾ,
ಮಾತುಳಂಗ ಮಧುಕೇಶ್ವರನು. ॥ ೮೭ ॥

೧೧೫೧

ಶಿಲೆಯೊಳಗೆ ಪಾವಕನಿಪ್ಪ ತೆರನಂತೆ
ಕಡೆ ನಡು ಮೊದಲೆನ್ನದೆ

ಎಲ್ಲಿ ಮುಟ್ಟಿದಲ್ಲಿ ಕಿಡಿ ಪಲ್ಲೈಸುವಂತೆ
ಸರ್ವಾಂಗಲಿಂಗವಾದ ಶರಣಂಗೆ ಆವ ಗುಣದಲ್ಲಿ ನೋಡಿದಡೂ,
ಅಲ್ಲಿಯೆ ಲಿಂಗ ಮುಂಚು.
ತನಗೆ ಅನ್ಯ ಭಿನ್ನವೆಂಬ ಮುಟ್ಟಿನ ಸೂತಕ ಕಟ್ಟಿನ ಭಾವವಿಲ್ಲ.
ಹಣ್ಣಿನಲ್ಲಿ ವಿಷ ವೇಧಿಸಲಿಕ್ಕಾಗಿ ಹಣ್ಣು ಸಾವುದೆ
ಹಣ್ಣಿನ ರಸವ ಕೊಂಡವನಲ್ಲದೆ?
ಈ ಗುಣ ಸರ್ವಾಂಗಲಿಂಗಿಯ ಸಂಬಂಧ.
ಶಂಭುವಿನಿಂದಿತ್ತ ಸ್ವಯಂಭುವಿನಿಂದತ್ತ ಅತಿಬಳ ನೋಡಾ,
ಮಾತುಳಂಗ ಮಧುಕೇಶ್ವರನು. ॥ ೮೮ ॥

೧೧೫೨

ಶ್ರೀಗುರು ಕುರುಹು ಕೊಟ್ಟು, ಕುರುಹಿನ ಬೆಂಬಳಿಯಲ್ಲಿ
ಅರಿಯೆಂದು ಹೇಳಲಿಕ್ಕಾಗಿ
ಆ ಉಭಯವ ಮರೆದು ಬೇರೊಂದರಿವಿನ ಮುಖದಲ್ಲಿ
ಒಡಗೂಡಿಹೆನೆಂಬ ಅಡಗಗಳ್ಳರ ನೋಡಾ.
ಕುರಿ ನಾಯಿ ವತ್ಸ ಮೊದಲಾಗಿಯೂ ತಮ್ಮ ಒಡೆಯನ
ಇಂತೀ ಗುಣವನರಿಯದ ಬಡಿವ ಬಾಯವರನೊಡಗೂಡ.
ಶಂಭುವಿನಿಂದಿತ್ತ ಸ್ವಯಂಭುವಿನಿಂದತ್ತ ಅತಿಬಳ ನೋಡಾ,
ಮಾತುಳಂಗ ಮಧುಕೇಶ್ವರನು. ॥ ೮೯ ॥

೧೧೫೩

ಷಡ್ಭಾವಲಿಂಗ ಷಡುವರ್ಣಭೇದ,
ಷಡುಸ್ಥಲಕ್ರೀ, ಷಟ್ಕರ್ಮಯುಕ್ತಿ,
ಇಂತೀ ಸ್ಥಲವಿವರಂಗಳೆಲ್ಲವೂ ಪರವಸ್ತುವಿನ
ಮೂಲಾಂಕುರ ಲಿಂಗಮೂರ್ತಿ.
ಆ ವಸ್ತು ತ್ರಿಗುಣಾತ್ಮಕವಾಗಿ ತ್ರಿವಿಧಲಿಂಗ ಸ್ವರೂಪದಿಂದ,
ಉಭಯವ ಕೂಡಿಕೊಂಡು ಉಮಾಮಹೇಶ್ವರತ್ವದಿಂದ,
ಭಕ್ತಿ ಕಾರಣನಾಗಿ ತತ್ವಂಗಳ ಗರ್ಭೀಕರಿಸಿಕೊಂಡು ಗೊತ್ತನಿಟ್ಟು
ಸ್ಥಲಂಗಳ ವ್ಯಕ್ತೀಕರಿಸಿ ಆರಾರ ವಿಶ್ವಾಸಂಗಳಲ್ಲಿ
ಮನೋಮೂರ್ತಿಯಾಗಿ ಗುರುವಿಂಗೆ ಇಹಪರವೆಂಬ
ಉಭಯವನರಿಪಿ,
ಲಿಂಗಕ್ಕೆ ಕಳಾಸ್ವರೂಪವೆಂಬ ಕಳೆಯನಿಂಬಿಟ್ಟು,

ಜಂಗಮಕ್ಕೆ ಪರಮ ನಿರ್ವಾಣವೆಂಬ ಪರಮಪದಮಂ ಲಕ್ಷಿಸಿ,
ಸ್ಥಲಕ್ಕೆ ಸ್ಥಲಜ್ಞನಾಗಿ, ನಿಸ್ಥಲಕ್ಕೆ ಪರಿಪೂರ್ಣನಾಗಿ,
ಇಂತೀ ಇದಿರೆಡೆಯಿಲ್ಲದ ವಸ್ತು ನೀನಲ್ಲಾ.
ಶಂಬುವಿನಿಂದಿತ್ತ ಸ್ವಯಂಭುವನಿಂದತ್ತ ಅತಿಬಳ ನೋಡಾ,
ಮಾತುಳಂಗ ಮಧುಕೇಶ್ವರನು. ॥ ೯೦ ॥

೧೧೫೪

ಸಂಚದ ಸರಾಗದಂತೆ, ಮಿಂಚಿನ ಕುಡಿವೆಳಗಿನ ಸಂಚಾರದಂತೆ,
ಉರಿಯ ನಾಲಗೆಯ ದ್ರವದ ತರಂಗದಂತೆ,
ಪನ್ನಗನ ಜಿಹ್ವೆಯ ನಿಳಿವಳಿಯಂತೆ,
ಚಮತ್ಕಾರದ ಅಸಿಯ ಗುಣಮೊನೆಯಂತೆ,
ಅಶ್ವಪರ್ಣದ ಅಗ್ರದ ಬಿಂದುವಿನ ಅಂದದಾತ್ಮನ ತಿಳಿದು,
ಸರ್ವೇಂದ್ರಿಯದಲ್ಲಿ ಮುಂಚುವುದಕ್ಕೆ ಮುನ್ನವೆ
ಆತ್ಮನ ಉಚಿತವನರಿದು,
ರಸ ಬೆಂಕಿಯಲ್ಲಿ ಬೆರೆದಂತಾಗಬೇಕು;
ಈ ಗುಣ ಸಾವಧಾನಿಯ ಸಂಬಂಧ.
ಶಂಭುವಿನಿಂದಿತ್ತ ಸ್ವಯಂಭುವಿನಿಂದತ್ತ ಅತಿಬಳ ನೋಡಾ,
ಮಾತುಳಂಗ ಮಧುಕೇಶ್ವರನು. ॥ ೯೧ ॥

೧೧೫೫

ಸತ್ತು ಚಿತ್ತುವಿನಿಂದ, ಚಿತ್ತು ಆನಂದದಿಂದ,
ತ್ರಿವಿಧ ಭೇದ ಮುಕ್ತಿಯ ಗೊತ್ತು,
ಮುಕ್ತಿ ನಿರ್ಮುಕ್ತವಾದುದು ನಿಜವಸ್ತುವಿನ ಗೊತ್ತು;
ಅದು ನಿಶ್ಚಯದ ಪದ.
ಶಂಭುವಿನಿಂದಿತ್ತ ಸ್ವಯಂಭುವಿನಿಂದತ್ತ ಅತಿಬಳ ನೋಡಾ,
ಮಾತುಳಂಗ ಮಧುಕೇಶ್ವರನು. ॥ ೯೨ ॥

೧೧೫೬

ಸರ್ಪ ಮುಟ್ಟಿದಡೇನು ವಿಷ ತಪ್ಪಿದ ಮತ್ತೆ?
ಲೌಕಿಕ ವರ್ತನವಾದಡೇನು ಚಿತ್ತ ವಸ್ತುವಿನಲ್ಲಿ ಮುಟ್ಟಿದ ಮತ್ತೆ?
ತ್ರಿವಿಧವ ಮುಟ್ಟಿ ಪೂಜಿಸಿದಡೇನು

ತ್ರಿವಿಧ ಮಲತ್ರಯಕ್ಕೆ ಕಚ್ಚಿ ಕಡಿದಾಡಿದ ಮತ್ತೆ?
ಮಾತಿನ ಮಾಲೆಯಿಂದ ದ್ವೈತಾದ್ವೈತಂಗಳ ಎಷ್ಟು ನುಡಿದಡೇನು
ಚಿತ್ತ ವಸ್ತುವಿನಲ್ಲಿ ನಿಹಿತವಿಲ್ಲದೆ ಮತ್ತೆ?
ಇಂತಿವನರಿತು ಗುರುಕರಜಾತನಾದವಂಗೆ ಕರ್ತೃಭೃತ್ಯನೆಂಬ
ಸೂತಕದ ಸುಳುಹಿಲ್ಲ.
ಶಂಭುವಿನಿಂದಿತ್ತ ಸ್ವಯಂಭುವಿನಿಂದತ್ತ ಅತಿಬಳ ನೋಡಾ,
ಮಾತುಳಂಗ ಮಧುಕೇಶ್ವರನು. ॥ ೯೩ ॥

೧೧೫೭

ಸರ್ವಾಂಗಲಿಂಗ ವ್ಯವಧಾನಿ ಎಂದು ಆತ್ಮಂಗೆ ಕಟ್ಟಮಾಡಿ,
ಒಟ್ಟಾದ ತಿರುಗಿ ಮುಟ್ಟಿಹೆನೆನಬಹುದೆ?
ಮತ್ತೆ ಮನಸೋತು ಮುಟ್ಟುವುದು ವಿಷಯವೊ?
ನಿರ್ವಿಷಯವೊ?
ಹೆಣ್ಣ ಹಿಡಿದಲ್ಲಿ ವಿಷಯ ವ್ಯಾಪಾರನಾಗಿ
ಹೊನ್ನ ಹಿಡಿದಲ್ಲಿ ಸತಿ-ಸುತ ಸಕಲ ಸುಖಂಗಳಿಗೆ ಈಡೆಂದು
ಅಂಡಿನ ಅಂಡಕ್ಕೆ ಹಾಕುತ್ತ,
ಮಣ್ಣ ಹಿಡಿದಲ್ಲಿ ಅರೆ ಅಡಿಗಾಗಿ ಕಡಿದಾಡುತ್ತ
ಆ ತೆರ ಅರಿಕೆಗೊಡಲುಂಟೆ?
ಉನ್ಮತ್ತಂಗೆ ತನ್ನ ನುಡಿ ಸಸಿನವಲ್ಲದೆ
ಸನ್ಮತಗುಂಟೆ ಮರವೆಯ ತೆರ?
ಬಿಟ್ಟುದು ಹಿಡಿದೆನೆಂಬ ನಾಚಿಕೆ ತೋರದೆ,
ದುಷ್ಟ ಜೀವವ ನೋಡಾ?
ಅದು ನುಡಿಗೆಡೆಗಂಜದು, ಪುಡಿಪುಚ್ಚವಿಲ್ಲ,
ಅವರ ಒಡಗೂಡಲಿಲ್ಲ.
ಶಂಭುವಿನಿಂದಿತ್ತ ಸ್ವಯಂಭುವಿನಿಂದತ್ತ ಅತಿಬಳ ನೋಡಾ,
ಮಾತುಳಂಗ ಮಧುಕೇಶ್ವರನು. ॥ ೯೪ ॥

೧೧೫೮

ಸಹಪಂತಿಯಲ್ಲಿ ಗುರುಚರವಿರುತಿರಲಿಕ್ಕಾಗಿ
ತನ್ನ ಗುರುವೆಂದು ಮುಂದಿದ್ದ ಪ್ರಸಾದವ ಬಿಟ್ಟು
ಕೈವೊಡ್ಡಿ ಕೊಂಡಡೆ, ವಿಚಾರವಿಲ್ಲದೆ ಕೊಟ್ಟಡೆ,
ಆ ಗುರುವಿಂಗೆ ಗುರುವಿಲ್ಲ, ಅವನಿಗೆ ಪ್ರಸಾದವಿಲ್ಲ.

ಮುಂದೆ ಇದಿರಿಟ್ಟು ತೋರಿದನಾಗಿ
ಎಲ್ಲಿಯೂ ನಾನೆ ಎಂದಲ್ಲಿ ಗುರುಸ್ಥಲ.
ಅಲ್ಲಿ ಪರಿಪೂರ್ಣನಾಗಿಪ್ಪನು.
ಶಂಭುವಿನಿಂದಿತ್ತ ಸ್ವಯಂಭುವಿನಿಂದತ್ತ ಅತಿಬಳ ನೋಡಾ,
ಮಾತುಳಂಗ ಮಧೇಕೇಶ್ವರನು. ॥ ೯೫ ॥

೧೧೫೯

ಸುಗಂಧದ ಅಂಗವಿದ್ದು ಕರಂಡದಲ್ಲಿ ಬಂಧಿಸಲಿಕ್ಕಾಗಿ,
ಗಂಧ ನಿಂದಿತ್ತಲ್ಲದೆ, ವಾಯುವಿನ ಕೈಯ ಗಂಧವ
ಕರಂಡವಲ್ಲಿ ಕೂಡಿ ಮುಚ್ಚಲಿಕ್ಕೆ ನಿಂದುದುಂಟೆ ಆ ಸುವಾಸನೆ?
ಈ ಗುಣ ಲಿಂಗಾಂಗಿಯ ಸಂಗದ ಇರವು.
ಶಂಭುವಿನಿಂದಿತ್ತ ಸ್ವಯಂಭುವಿನಿಂದತ್ತ ಅತಿಬಳ ನೋಡಾ,
ಮಾತುಳಂಗ ಮಧುಕೇಶ್ವರನು. ॥ ೯೬ ॥

೧೧೬೦

ಸ್ಥೂಲತನುವ ಬಿಟ್ಟು ನಿನ್ನ ಕಂಡೆಹೆನೆಂದಡೆ
ನಿನ್ನ ಪ್ರಮಾಣು ಕ್ರೀವಿಡಿದು ಅಂಗದಲ್ಲಿ ನಿಂದ ಕಾರಣ
ಸೂಕ್ಷ್ಮತನುವನೊಲ್ಲದೆ ನಿನ್ನ ಕಂಡೆಹೆನೆಂದಡೆ
ನಿನ್ನ ಪ್ರಮಾಣು ಭಾವದ ಕೈಯಲ್ಲಿ ಅರ್ಪಿಸಿಕೊಂಬೆಯಾಗಿ.
ಕಾರಣತನುವ ಹರಿದು ನಿನ್ನ ಕಂಡೆಹೆನೆಂದಡೆ
ನಿನ್ನ ಪ್ರಮಾಣು ಚಿದಾದಿತ್ಯ ಚಿತ್ಪ್ರಕಾಶದ ಬೆಳಗಿನಲ್ಲಿ
ಕಟ್ಟುವಡೆದೆಯಾಗಿ.
ಇಂತೀ ಜಾಗ್ರದಲ್ಲಿ ಕ್ರೀವಂತನಾಗಿ,
ಸ್ವಪ್ನದಲ್ಲಿ ಆತ್ಮಸ್ವರೂಪನಾಗಿ,
ಸುಷುಪ್ತಿಯಲ್ಲಿ ಮೂರ್ಛೆಯಿಂದ ಅಮೂರ್ತಿಯಾಗಿ
ವಿರಳಕ್ಕೆ ಅವಿರಳನಾಗಿ ಪರಿಪೂರ್ಣವಸ್ತು ನೀನಲಾ!
ಶುಂಭುವಿನಿಂದಿತ್ತ ಸ್ವಯಂಭುವಿನಿಂದತ್ತ ಅತಿಬಳ ನೋಡಾ,
ಮಾತುಳಂಗ ಮಧುಕೇಶ್ವರನು. ॥ ೯೭ ॥

೧೧೬೧

ಸ್ಥೂಲ ತನುವಿಂಗೆ ಶಿಲೆಯ ಮರೆಯಲ್ಲಿ
ಎನ್ನ ಘಟದಲ್ಲಿ ಮೂರ್ತಿಗೊಂಡು

ಬಾಹ್ಯಕ್ರೀ ಅರ್ಚನೆ ಪೂಜನೆಗಳಿಂದ ಶುದ್ಧತೆಯ ಮಾಡಿದೆ.
ಸೂಕ್ಷ್ಮತನುವಿಂಗೆ ಭಾವದ ಕೊನೆಯಲ್ಲಿ ಅರಿವಾಗಿ ಬಂದು
ಪ್ರಕೃತಿ ಸಂಚಾರ ಮರವೆಯಿಂದ ಬಹ ತೆರನ ತೀರ್ಚಿ
ಸರ್ವೇಂದ್ರಿಯದಲ್ಲಿ ನೀ ನಿಂದು ಆ ಸೂಕ್ಷ್ಮತನುವ ಶುದ್ಧವ
ಮಾಡಿದೆ.
ಕಾರಣತನುವಿಂಗೆ ಇಂದ್ರ ಮಹೇಂದ್ರ ಜಾಲದಂತೆ,
ಮರೀಚಿಕಾ ಜಲವಳಿಯತೆ,
ವಿದ್ಯುಲ್ಲತೆಯ ಸಂಚದ ಶಂಕೆಯ ಬೆಳಗಿನಂತೆ
ಸಷುಪ್ತಿಯಲ್ಲಿ ಮರವೆಯಿಂದ ಮಗ್ನನಾಗಲೀಸದೆ
ಆ ಚಿತ್ತುವಿಗೆ ನೀ ಚಿತ್ತವಾಗಿ ಮೂರ್ಛೆಗೊಳಿಸದೆ
ನೀನೆ ಮೂರ್ತಿಗೊಂಡೆಯಲ್ಲಾ!
ಇಂತೀ ತ್ರಿವಿಧ ಸ್ವರೂಪಕ್ಕೆ ತ್ರಿವಿಧಾಂಗ ಭರಿತನಾಗಿ
ತ್ರಿವಿದ ಸ್ವರೂಪ ನೀನಲಾ!
ಶಂಭುವಿನಿಂದಿತ್ತ ಸ್ವಯಂಭುವಿನಿಂದತ್ತ ಅತಿಬಳ ನೋಡಾ,
ಮಾತುಳಂಗ ಮಧುಕೇಶ್ವರನು. ॥ ೯೮ ॥

೧೧೬೨

ಹರಿದ ನೀರಿನ ಅಡಿಯ ಕಾಣಬಹುದಲ್ಲದೆ
ನಿಂದ ಇಂಗಡಲಿನ ಅಡಿಯ ಕಂಡವರುಂಟೆ?
ಚಲನೆಯಿಂದ ತೋರುವ ತೋರಿಕೆಯ ಕಾಣಬಹುದಲ್ಲದೆ
ಶಬ್ದ ಮುಗ್ಧವಾದ ಶರಣನ ಚಿತ್ತವ ಭೇದಿಸಬಹುದೆ?
ಅದು ಸರಹರಿದ ಸಂಬಂಧ.
ಶಂಭುವಿನಿಂದಿತ್ತ ಸ್ವಯಂಭುವಿನಿಂದತ್ತ ಅತಿಬಳ ನೋಡಾ,
ಮಾತುಳಂಗ ಮಧುಕೇಶ್ವರನು. ॥ ೯೯ ॥

೧೧೬೩

ಹುತ್ತಕ್ಕೆ ಸರ್ಪನಾಗಿ, ಉದಕಕ್ಕೆ ಒಳ್ಳೆಯಾಗಿ,
ಕೊಂಬೆಗೆ ಕೋಡಗನಾಗಿ ಅವರವರ ಬೆಂಬಳಿಯಲ್ಲಿ
ಅಜಬೀಜವ ಕಾವ ಜಂಬುಕನಂತೆ ತಿರುಗಲೇತಕ್ಕೆ?
ಆಯುಷ್ಯ ತೀರಿದಲ್ಲಿ ಮರಣ, ಐಶ್ವರ್ಯ ಹೋದಲ್ಲಿ ದಾರಿದ್ರ್ಯ
ಬಪ್ಪುದು
ಎಲ್ಲಿದ್ದಡೂ ತಪ್ಪದೆಂದರಿದ ಮತ್ತೆ

ಬಾಯಿಮುಚ್ಚಿ ಸತ್ತಂತಿಪ್ಪ ತೆರ.
ಇದು ಭಕ್ತಿವಿರಕ್ತಿಯ ಪಥ.
ಶಂಭುವಿನಿಂದಿತ್ತ ಸ್ವಯಂಭುವಿನಿಂದತ್ತ ಅತಿಬಳ ನೋಡಾ,
ಮಾತುಳಂಗ ಮಧುಕೇಶ್ವರನು. ॥ ೧೦೦ ॥

೧೧೬೪

ಪ್ರಮಾಣವ ಪ್ರಮಾಣಿಸಿದಲ್ಲಿ ತಪ್ಪದಿಪ್ಪೆ.
ಅಪ್ರಮಾಣ ಅಗೋಚರವೆಂದಡೆ ಅತ್ಯತಿಷ್ಠದ್ದಶಾಂಗುಲನಾಗಿಪ್ಪೆ.
ಪೂರ್ವಕ್ಕೆ ಭಾವಜ್ಞನಾಗಿ, ಉತ್ತರಕ್ಕೆ ತೊಟ್ಟುಬಿಟ್ಟ ಹಣ್ಣಿನಂತೆ
ನಿಶ್ಚಯನಾಗಿಪ್ಪೆ.
ಶಂಭುವಿನಿಂದಿತ್ತ ಸ್ವಯಂಭುವಿನಿಂದತ್ತ ಅತಿಬಳ ನೋಡಾ,
ಮಾತುಳಂಗ ಮಧುಕೇಶ್ವರನು. ॥ ೧೦೧ ॥

## ನಗೆಯ ಮಾರಿತಂದೆಯ ವಚನ

೧೧೬೫

ಅಂಗವೆಂಬ ವಾಕುಳದ ಕುಂಭದಲ್ಲಿ
ತೋರಿ ಅಡಗುವ ಮರೀಚಿಕಾ ಜಲವ ತುಂಬಿದಂತೆ.
ಚಿತ್ತ ಸಾಳಿವನವೆಂಬ ತಂಡುಲ ತೊಳೆಯದೆ, ಥಳಿಸದೆ,
ಕುಂಭದೊಳಗೆ ಹಾಕಿ ವಾಯುವಿನ ದೂಮ್ರದಿಂದ ಬೇಯಿಸಿ
ಅದು ಬೆಂದುದಿಲ್ಲ.
ಅದು ಮೂರು ಗುಂಡಿನ ಗುಣದಿಂದ
ಗುಂಡಿನ ಚಂದ ತುಂಬಿಹ ಮಡಕೆಯಂತೆ.
ಮತ್ತೊಂದರ ಇರವು ತಿರುಗುವ ಚಕ್ರದಗೊಂದಣದಂದವಸ
ದ್ವಂದ್ವವ,
ಹಿಂಗಿ ನಿಂದ ಕುಂದಿನಿರವು, ಕೂರಲಗಿನ ಬಾಯ ಧಾರೆಯಂತೆ
ಉಭಯವ ಕೂಡಿಕೊಂಡು ನಿಂದ ಗುಂಡು.
ಇದು ಬೇಯದು, ಮಡಕೆಯನೊಡೆ, ಜಲವ ತಡಹು,
ತಂಡುಲವ ಚೆಲ್ಲು, ಮಾರುತನ ಬೆಂಕಿಯ ಕೆಡಿಸು,
ಓಗರದೂಟವ ಬಿಡು, ಭವಸಾಗರದ ಸಾಧನೆಯನೆ ಗೈ,
ಕಾಹುರದ ಕಮ್ಮಟವ ಪರರುವ ಬೋಧಿಸುವ ರಸನವ ಕೀಳು,
ಕಿತ್ತ ಮತ್ತೆ ಇನ್ನರಿ. ಸಕಲೇಂದ್ರಿಯದ ಹುತ್ತದ ಹಾವ ಹಿಡಿ.
ಮೊತ್ತದ ಮನೆ ವಿಕಾರದ ಚಿತ್ತದ ಹುಲಿಯ ಮುರಿ.
ಭಕ್ತಿಗೆ ಸಹ ಕರ್ತುವ ಚಿತ್ತದಲ್ಲಿ ಅಚ್ಚೊತ್ತಿದಂತಿರು.
ಸಚ್ಚಿದಾನಂದ ಹೃದಯಪೂರಿತನಾಗಿ ಬೆಚ್ಚಂತಿರು.
ವಿರಳವಿಲ್ಲದೆ ಅವಿರಳನಾಗಿ ಎನಗೊಂದು ತೊಡುಗೆಯಿಲ್ಲ,
ನಿನ್ನಡಿಯಲ್ಲಿ ಅಡಗಿದೆನಾಗಿ
ನಿನ್ನ ಒಡಗೂಡುವ ಕಡೆಯಾವುದು ?
ಎನ್ನ ಕಾಯಕದ ಬಿಡುವಾವುದು ?
ಅಂದಾಡಿದ ಮಾತಿನ ಕಡಿವೆಂಗೆ ಬಂದ ಮೊಡತವ

ನಗೆಯ ಕಾಯಕ ಸಂದಿತ್ತು.
ನಿನ್ನಯ ಕೂಪಳ ಬಯಲಾಗಿ ಅಜಾತನೆ ಸಲಹು,
ಆತುರವೈರಿ ಮಾರೇಶ್ವರಾ. ॥ ೧ ॥

೧೧೬೬

ಅಂಡದಿಂದ ಪಿಂಡ ಜನಿಸುವಾಗ ಅಂದಿಗಾರೊಡೆಯರು ?
ಪಿಂಡ ಹೊರಹೊಮ್ಮಿ ಮಂದಿರಗಳಲ್ಲಿ ಆಡುವಾಗ
ಅಂದಿಗಾರೊಡೆಯರು ?
ಮಂದಿರವ ಬಿಟ್ಟು ಮರಣವಾಹಾಗ ಅಂದಿಗಾರೊಡೆಯರು?
ಎಂದೆಂದಿಗೂ ನೀನೆ, ಆತುರವೈರಿ ಮಾರೇಶ್ವರಾ. ॥ ೨ ॥

೧೧೬೭

ಅಗಸನ ಮುನಿಸು ಕತ್ತೆಯ ಸ್ನೇಹ,
ಸರ್ಪನ ಮುನಿಸು ಕಪ್ಪೆಯ ಮೋಹ,
ಶಬರನ ಸೊಪ್ಪುಡಿಗೆ ಪ್ರಭೆಯವನ ನಂಬುಗೆ,
ಮೆರೆವಡಿಗನ ಮಾತು ಗುಡುಗಿನ ಮನೆ
ಇಂತಿವು ಅಡಗಿಹ ಭೇದವನರಿ,
ಆತುರವೈರಿ ಮಾರೇಶ್ವರಾ. ॥ ೩ ॥

೧೧೬೮

ಅರಸು ಅರಸಿಯ ಕೂಡುವಾಗ ಅವರಂಗವ ಕಂಡವರುಂಟೆ?
ಕೌಮುದಿಯ ಕುಂಡಲಿಯ ತಂದುದುಂಟೆ?
ಚಂದನ ಗಂಧವ ತಂದಿರಲು ಸಂಚಾರದೊವಗು.
ಮಿಂಚಿನವಳಿ, ಕಂಚಿನ ಕೂಟದಂತೆ ಆತ್ಮನ ಸಂಚಿತದಳಿವು
ಆತುರವೈರಿ ಮಾರೇಶ್ವರಾ. ॥ ೪ ॥

೧೧೬೯

ಅರಿತಡೆ ಇಹಪರದವನಾಗಿ ಇದ್ದಲ್ಲಿ
ಷಡ್ವಾದಿ ಸರ ಸಮನಾಗಿ ಭಿತ್ತಿಯ ಚಿತ್ರದಂತೆ
ಸುಳಿದೋರದ ಸಲಿಲದಂತೆ, ಕಲೆದೋರದ ಫಲದಂತೆ,
ತ್ರಿವಿಧಕ್ಕಲ್ಲದೆ ತೂತಿನ ಬಲವಿಲ್ಲದೆ ಆತನನರಿ,
ಆತುರವೈರಿ ಮಾರೇಶ್ವರಾ. ॥ ೫ ॥

೧೧೭೦

ಅವನಿಕ್ಕಿದ ಗಾಣಕ್ಕೆ ಮೂವರು ಹುದುಗು.
ಉದಯ ಮಧ್ಯಾಹ್ನ ಅಸ್ತಮಯವೆಂಬ ಮೂರು ವೇಳೆಗೆ,
ಅದ ತಿರುಗುವ ಎತ್ತು ಒಂದೆಯಾಯಿತ್ತು.
ಒಬ್ಬ ಹಿಂಗಿದ ಇಬ್ಬರು ಹೊರುತ್ತಿದ್ದರು
ಆತುರವೈರಿ ಮಾರೇಶ್ವರಾ. ॥ ೬ ॥

೧೧೭೧

ಅವರಪ್ಪನ ಮಗಳ ಗಂಡನ ತಂದೆಯ ತಾಯ ತಂದವರ
ಗಂಡನ ಹೆಂಡತಿಯ ಹೆತ್ತವಳ ಮಕ್ಕಳ ಮೂರಿ ತಲೆಗಡಿದವರ
ಅಂದಿನ ನಂಟ ಬಂದ ನಾನು.
ನೀಂ ಪಂದಿಯೊಳಗಿರ್ದ ಅಂದವ ತೋರಾ
ಆತುರವೈರಿ ಮಾರೇಶ್ವರಾ. ॥ ೭ ॥

೧೧೭೨

ಅವಳನವನೇರಿ ಕಳಚಿತ್ತ ಬಿಂದು
ನಿಲುವುದಕ್ಕೆ ನೆಲೆಯಿಲ್ಲದೆ, ರೂಪಿಂಗೊಡಲಿಲ್ಲದೆ
ಕೂಸು ಸತ್ತಿತ್ತು,
ಅವರಿಬ್ಬರ ಆಸೆ ಹರಿಯಿತ್ತು.
ನಾ ಮಾತಿನ ಮರೆಯವನಲ್ಲ
ಆತುರವೈರಿ ಮಾರೇಶ್ವರಾ. ॥ ೮ ॥

೧೧೭೩

ಅಶ್ವತ್ಥ ವೃಕ್ಷದ ಪರ್ಣದ ಅಗ್ರದ ಬಿಂದುವಿನಂತೆ
ಅಲ್ಪಸುಖಕ್ಕೆ ಮಚ್ಚಿ ಕುಕ್ಕುರ ಆಸ್ತಿಯ ಕಚ್ಚಿ
ತನ್ನಯ ಶೋಣಿತವ ಚಪ್ಪರಿವಂತೆ.
ಉಚ್ಚೆಯ ಬಚ್ಚಲ ಕೊಚ್ಚೆಯ ಹಡಿಕೆಯ ಮಚ್ಚಿಕೊಂಡಿಪ್ಪ
ಕಕ್ಕುಲತೆಯಣ್ಣಗಳು ಕೇಳಿರೋ, ಅದು ಮರ್ತ್ಯದ ಹುದುಗು,
ಚಿತ್ತದ ವಿರೋಧ, ಭುಕ್ತಿಯ ವಕ್ರ, ತಮದ ಪುಂಜ,
ಕೌರುಕನಂಗ ಸೌಭೇದಿನ ಬೀಡು, ಮಲದ ಬಾಂಡ.

ಭಾವದ ಭ್ರಮೆಯನರಿ, ಉರಿ ಫಳಕದಂತೆ ನೆರೆ ನಂಬಿರು
ಆತುರವೈರಿ ಮಾರೇಶ್ವರಾ. ॥ ೯ ॥

೧೧೭೪

ಆಸೆಯೆಂಬ ಮನ ಕೋಡಗನ ಕೂಸಿನ
ಭಾಸುರಿಯಂತೆನಿಸುವನ ಉದಕದ ಕಾಲಿನ ಮೈಸೆಳವಿನಂತೆ.
ಭಾಸುರವ ಕೂಡಿದ ತಮದ ಕಜ್ಜಳದಂತೆ.
ಈ ಸಾಕಾರವ ಕೂಡಿದ ಆಸೆ ಹುಸಿಲೇಪ ಸಾಕು.
ತೂತಿನ ಹಂಬಲು ಇನ್ನೇಕೆ?
ಆತುರವೈರಿ ಮಾರೇಶ್ವರಾ. ॥ ೧೦ ॥

೧೧೭೫

ಇರಿಯೆಂದಡೆ ಕೈಮುಂಚಿಯಲ್ಲದೆ ಗಾಯವಿಲ್ಲ.
ಅರಿಯೆಂದಡೆ ಮನನಿಶ್ಚೈಸಲ್ಲದೆ ಜ್ಞಾನಿಯಲ್ಲ
ಮರನ ಕಡಿವುದಕ್ಕೆ ಪ್ರವೇಷ್ಟಿಸಿದ ಮೆಳೆಯ ಕಡಿದಲ್ಲದೆ ಆಗದು.
ಆಗಮದ ಯುಕ್ತಿಯಿಂದ ಬೋಧಕನಹನಲ್ಲದೆ ಅನಾಗತವನರಿಯ.
ಅದ ಭೇದಿಸಬೇಕು, ಆತುರವೈರಿ ಮಾರೇಶ್ವರಾ. ॥ ೧೧ ॥

೧೧೭೬

ಇವರೆಲ್ಲರ ಕಂಡು ನಾನವಳಿಗೆ ಹೋಗಲಾಗಿ,
ಕುಳ್ಳಿರುವುದಕ್ಕೆ ಮೊದಲೆ ಒದ್ದಳೆನ್ನ
ಬಾಯ ಹಲ್ಲು ಮುರಿಯಿತ್ತು, ಗಲ್ಲವೊಡೆಯಿತ್ತು
ನಾಲಗೆ ಉಡುಗಿತ್ತು. ಇನ್ನಿವಳ ಗೊಡವೆ ಬೇಡ
ಆತುರವೈರಿ ಮಾರೇಶ್ವರಾ. ॥ ೧೨ ॥

೧೧೭೭

ಉತ್ಪತ್ಯ ಉದಯ, ಸ್ಥಿತಿ ಮಧ್ಯಾಹ್ನ, ಲಯ ಅಸ್ತಮಯವೆಂಬ
ಬಾರದ ಬಟ್ಟೆಯಲ್ಲಿ ಮೆಟ್ಟಿದ ಹಜ್ಜೆಯಲ್ಲಿ ಮೆಟ್ಟಡೆತ್ತು ಜ್ಞಾನಿ.
ಇಂತಿದು ದೃಷ್ಟವಾಯಿತ್ತು.
ಅವರಿಗದು ನನಗಿದು ತೂತಿನ ಹಾದಿಯೆ,
ಆತುರವೈರಿ ಮಾರೇಶ್ವರಾ. ॥ ೧೩ ॥

೧೧೭೮

ಉದಯದ ಪೂಜೆ ಬ್ರಹ್ಮನ ತೊಡಕು.
ಮಧ್ಯಾಹ್ನದ ಪೂಜೆ ವಿಷ್ಣುವಿನ ತೊಡಕು.
ಬೈಗಿನ ಪೂಜೆ ರುದ್ರನ ತೊಡಕು.
ಕೃತ್ಯದ ಪೂಜೆ ಮಿಥ್ಯದ ಜಪ.
ಇವು ಮರ್ತ್ಯರ ಸಿಕ್ಕಿಸುವ ಬಲೆ,
ಆತುರವೈರಿ ಮಾರೇಶ್ವರಾ. ॥ ೧೪ ॥

೧೧೭೯

ಊರ ಹೊರಗೊಂದು ಹೊಸ ಕೇಲನಿಕ್ಕಿದೆ.
ಅದು ದಾನವರ ಕೇಲಲ್ಲ, ಮಾನವರ ಕೇಲಲ್ಲ,
ಆತುರವೈರಿ ಮಾರೇಶ್ವರನ ಹೊಂದಿಕೆಯ ಕೇಲು. ॥ ೧೫ ॥

೧೧೮೦

ಊರೆಲ್ಲರ ಹೂರು ತಿಂದಿತ್ತು,
ಹೂರ ಹೂರಣ ತಿಂದಿತ್ತು,
ಬಂದ ಬಂದವರೆಲ್ಲರೂ ಉಂಡುಟ್ಟು ಸಂದಣಿಗೊಳತಿದ್ದರು.
ಇನ್ನೆಂದಿಗೆ ಸಂದೇಹ ಹರಿಗು
ಆತುರವೈರಿ ಮಾರೇಶ್ವರಾ. ॥ ೧೬ ॥

೧೧೮೧

ಎನಗೆ ಅಂಗವೆಂಬುದೊಂದು ಹೆಣ್ಣು.
ಬಾಯಿ ಎಂಬುದು ಭಗ, ಕೈ ಎಂಬುದು ಪುರುಷ.
ಇಕ್ಕಲಾಗಿ ಸಂಸಾರವೆಂಬ ಬಿಂದು ನಿಂದಿತ್ತು.
ಆಸೆಯೆಂಬ ಮಾಸಿನ ಕುಪ್ಪಸದಲ್ಲಿ ಬೆಳೆ ಪತ್ತಿದೆ.
ನವಮಾಸ ತುಂಬುವನ್ನಕ್ಕ ಕೂಸು ಬಲಿವುದಕ್ಕೆ ಮೊದಲೆ
ಮಾಸ ಹರಿದು ಕೂಸ ಕೊಂದು ಪಾಶವ ಕೆಡಿಸಿ,
ನಿಜತತ್ವದ ಮೂರ್ತಿ ಗುರುವಾಗಿ, ಅದರ ಕಳೆ ಲಿಂಗವಾಗಿ,
ಕೊಟ್ಟ ಲಿಂಗ ಎನ್ನ ಚಿತ್ತದಲ್ಲಿ ನಿಲ್ಲುವುದಲ್ಲದೆ
ಈ ಕೊಟ್ಟಿನ ಕೋಮಳೆ ಕೊಟ್ಟುವ ಎತ್ತಲೆಂದರಿಯೆ
ಆತುರವೈರಿ ಮಾರೇಶ್ವರಾ. ॥ ೧೭ ॥

೧೧೮೨

ಎನ್ನ ಕೈಯಲ್ಲಿ ಕೊಟ್ಟುದ ದೇವರೆಂದಿದ್ದೆ.
ಇದು ಮೆಲ್ಲಮೆಲ್ಲನೆ ಕಲ್ಲಾಗಿ ಬರುತ್ತಿದೆ ; ಇದ ನಾನೊಲ್ಲೆ.
ಬಲ್ಲವರು ಹೇಳಿ ; ಉಂಬಡೆ ಬಾಯಿಲ್ಲ, ನೋಡುವಡೆ ಕಣ್ಣಿಲ್ಲ.
ಎನ್ನ ಬಡತನಕ್ಕೆ ಬೇಡುವಡೆ ಏನೂ ಇಲ್ಲ,
ಆತುರವೈರಿ ಮಾರೇಶ್ವರಾ. ॥ ೧೮ ॥

೧೧೮೩

ಎನ್ನ ಮಾತು ನಿಮಗೆ ಅನ್ಯವೆ ?
ರಂಭದ ಸಂಚಾರ ರಂಭಕ್ಕೆ ಕೇಡು.
ಕುರುಂಬದ ಸಂಚಾರ ರಂಭದ ಕೇಡು..
ಎನ್ನಿಂದ ನಿಮ್ಮಿಂದ ಬಂದ ಕೊರತೆ ಪ್ರಮಥ ಸಮೂಹಕ್ಕೆ ಭಂಗ.
ಹುಲಿಯ ಪ್ರಾಣ ಕಳ್ಳನ ತಲೆ ಹಗೆಯ ಮರಣವೆಲ್ಲಕ್ಕೂ ಲೇಸು.
ಇಂದು ಎನಗೆ ಅಗೂಢವಿಲ್ಲ,
ಆತುರವೈರಿ ಮಾರೇಶ್ವರಾ. ॥ ೧೯ ॥

೧೧೮೪

ಎಲ್ಲರಂತೆ ಮಾಡಿ ಮನನಗುಂದಲಾರೆ.
ಅರಿತು ಮರೆಯಲಾರೆ, ಕಂಡು ಕಾಣದಂತಿರಲಾರೆ.
ಹೇಳಿದಡೆ ಭಕ್ತರ ತೊಡಕು, ಹೇಳದಿದ್ದಡೆ ನಿನ್ನ ತೊಡಕು.
ಇಂತೀ ಎರಡರ ಏರಿನಲ್ಲಿ ಗುರಿಯಾಗಲಾರೆ,
ಆತುರವೈರಿ ಮಾರೇಶ್ವರಾ. ॥ ೨೦ ॥

೧೧೮೫

ಎಲ್ಲವ ಜರೆದೆನೆಂದು, ಜಗದವರೆಲ್ಲರ ಗೆದ್ದೆನೆಂದು,
ದೇವಪದದಲ್ಲಿ ಸಲೆ ಸಂಪನ್ನನೆಂದು,
ಅಲ್ಲಿ ಅಲ್ಲಿ ನುಡಿದು ಎಲ್ಲರ ಮಂದಿರದಲ್ಲಿ ಬಂಧನಾಗಲೇಕೆ ?
ಅವಳವಳ ಸಂಧಿಯೊಳಗೆ ಅಡಗಿದ ಈ ಭವದ ಅಂದವ
ಹೇಳಾ,
ಆತುರವೈರಿ ಮಾರೇಶ್ವರಾ. ॥ ೨೧ ॥

೧೧೮೬

ಎಲೆ ದೇವಾ, ಏತಕ್ಕೆ ನುಡಿಯೆ ಎನ್ನೊಳು ?
ನಿನ್ನಯ ಚಿತ್ತವ ನೀಕರಿಸಿ ನುಡಿವರೆಂದೆ ?
ನಿನ್ನಯ ನೋವು ಎನ್ನೊಳು ನೀ ಮಾಡುವ ಮಾಟ ಅನೇಕ.
ಕುಟಿಲ ಯೋನಿಯ ಸುತ್ತಿ ಮುತ್ತಿದ ಪರಿತದ ಪಾಶದ ಮಲ ನಿನ್ನಲ್ಲಿ
ಅನೇಕರ ಕೊಲುವ ಪಾಶ ಕೈಯಲ್ಲಿ, ಭವ ವೇಷ ಅಂಗದಲ್ಲಿ.
ಭಕ್ತರ ಕೊಲುವ ದೋಷಕ್ಕೆ ಅಂಜಿದೆಯಾ ?
ನಿನಗದು ನೀತಿ, ರುದ್ರನ ವೇಷಕ್ಕೆ ಸಹಜ.
ಅದ ಬಿಟ್ಟಾಡು, ನೀಕರಿಸು.
ಉಮಾಪತಿಯ ವೇಷವ ಬಿಟ್ಟು ಸ್ವಯಂಭುವಾಗು.
ಅದ ಬಿಟ್ಟು ಇಚ್ಛೆಯಲ್ಲಿ ನಿಂದು, ನಿರ್ಮಾಯ ಮಲನಾಸ್ತಿಯಾಗಿ,
ಮುಕುರ ಪ್ರತಿಬಿಂಬಿಸುವಂತೆ ಎನ್ನಿರವು ನಿನ್ನಲ್ಲಿ ತೋರುತ್ತದೆ. ಅದೇಕೆ ?
ನಿರ್ಮಾಯನಾದ ಕಾರಣ ನಿನ್ನಿರವು ಎನ್ನಲ್ಲಿ ಕೂರ್ತು,
ದರ್ಪಣದ ಆಕಾರ ಬೆಳಗಿನಲ್ಲಿ ತೋರುವ ನಿರಾಕಾರ
ಎರಡಕ್ಕೂ ರೂಪು ನಿರೂಪು ಉಭಯ ಭಿನ್ನವಿಲ್ಲದಂತೆ.
ಎನ್ನಂಗವಂತಿರಲಿ ಮನವ ಒಡಗೂಡಿಕೊ.
ಉರದ ಮಾತಿಂಗೆ ಮಾರನ ಕೊಂದ ಮಲತ್ರಯ ದೂರ,
ಅನಾಗತ ಸಂಸಿದ್ಧ ಭೋಗಮಯ ಸಯನಚರಣವಿರಾಜಿತ,
ಜೀಮೂತ ಮೃತ ದಗ್ಧ ಸರ್ವವ್ಯಾಪಕ ನಾಶನ,
ಸರ್ವ ಅಂತರ್ಗತ ವಿಮಲತರಂಗ,
ಕರುಣಾಬ್ಧಿ ಪೂರ್ಣಚಂದ್ರ ವಿಲಾಸಿತ,
ಒಡಗೂಡಿದ ಭಕ್ತರ ಚಿತ್ತದ ಸಾಕಾರ ಪುಂಜವೆ,
ಸರ್ವಾತುರಂಗಳ ವಿರೋಧಿ, ಅಜಾತ,
ಶಂಭು ಮಾರೇಶ್ವರಾ. ॥ ೨೨ ॥

೧೧೮೭

ಏರಿಯ ಕಟ್ಟೆ ಒಡೆದಡೆ ಪಾಪವೆಂಬರು.
ನೀರಿನ ಸಾರವಿಲ್ಲದ ಮತ್ತೆ ಏರಿಯ ಪಾಪ ಆರಿಗೆಂಬುದನರಿ.
ಆಪ್ಯಾಯನವಡಸಿ ಬಂದವರು
ತಮ್ಮಯ ಅಘಹರವಾಗಬೇಕೆಂದು

ಬಗೆಗೊಳ್ಳುತಿರಲಾಗಿ, ತಮ್ಮಯ ಉದರದ ಬಗೆಯ ಹೇಳುವ
ಗುದಿಗಳ್ಳರ ನುಡಿಯೇಕೆ,
ಆತುರವೈರಿ ಮಾರೇಶ್ವರಾ. ॥ ೨೩ ॥

೧೧೮೮

ಒಳಗಣ ಕಲ್ಲು, ಮೇಲಣ ಮರ, ನಡುವಣ ಮಣ್ಣು,
ಹೊಡೆನವನಂಗ ಹದನರಿದಡೆ ಕುಂಭ.
ಇಂತೀ ಮೂವರೆದೆಯನರಿ, ಆಮಳ ಸಂದಿಗೆ ಒಡಗೂಡದಿರು.
ಸಾಕು ಬಿಡು, ತೂತಿನ ಹಾದಿಯ
ಆತುರವೈರಿ ಮಾರೇಶ್ವರಾ. ॥ ೨೪ ॥

೧೧೮೯

ಕಂಗಳ ಮುಂದಣ ಕಾಮವ ಕೊಂದು,
ಮನದ ಮುಂದಣ ಆಸೆಯ ತಿಂದು,
ಆತನನರಿ, ಆತುರವೈರಿ ಮಾರೇಶ್ವರಾ. ॥ ೨೫ ॥

೧೧೯೦

ಕಲ್ಲಿಯ ಹಾಕಿ ನೆಲ್ಲವ ತುಳಿದು
ಗುಬ್ಬಿಯ ಸಿಕ್ಕಿಸುವ ಕಳ್ಳನಂತೆ ;
ವಾಗದ್ವೈತವ ಕಲಿತು
ಸಂಸ್ಕೃತದ ಮಾತಿನ ಪಸರವ ಮುಂದೆ ಇಕ್ಕಿಕೊಂಡು
ಮತ್ಸ್ಯದ ವಕ್ತ್ರದಲ್ಲಿ ಗ್ರಾಸವ ಹಾಕುವನಂತೆ
ಅದೇತರ ನುಡಿ ? ಮಾತಿನ ಮರೆ.
ಆತುರವೈರಿ ಮಾರೇಶ್ವರಾ. ॥ ೨೬ ॥

೧೧೯೧

ಕಾಗೆ ಕುಟುಕುವ ಕೊಂಬಾಗ ಗೂಗೆ ಕಣ್ಣು ತೆರೆಯಿತ್ತು.
ಗೂಗೆ ಕಣ್ಣು ತೆರೆವಾಗ ಆದಿಯ ಹಕ್ಕಿ ಬಾಯಿಬಿಟ್ಟಿತ್ತು,
ಆದಿಯ ಹಕ್ಕಿ ಬಾಯಿಬಿಡುವಾಗ ಮೂದೇವರೊಡೆಯ
ಮೂದೇವನಾದ.
ಮೂದೇವಗೆ ಮುಂಪೆ ಓಲೆಯ ತೆಗೆವಾಗ ಕೋಡಗ
ಏಡಿಸುತ್ತಿದ್ದಿತ್ತು.

ಕೋಡಗ ಏಡಿಸುವಾಗ ಬಳ್ಳು ತಲೆದೂಗುತ್ತಿದ್ದಿತ್ತು.
ಬಳ್ಳು ತಲೆದೂಗುವಾಗ ಒಳ್ಳೆಗೆ ದಳ್ಳುರಿ ಹೊಡೆಬಂದು,
ಜಗವೆಲ್ಲರ ಕೊಂದಿತ್ತು, ಆತುರವೈರಿ ಮಾರೇಶ್ವರಾ. ॥ ೨೭ ॥

೧೧೯೨

ಕಾಡಕಲ್ಲು ಹೊಲಗೇರಿಯ ನಾಯಿ,
ಇವ ಕೊಂಡಾಡ ಬಂದೆ.
ನೋಡದ ಲಿಂಗ, ಹಿಂದೆ ಬಿಟ್ಟೋಡದ ಹೊಲೆಗುಣ
ಇದೆಂದಿಗೆ ಹರಿಗು ?
ಈ ಸಂಸಾರದ ಸಂದಣಿ ಬೇಡ,
ಆತುರವೈರಿ ಮಾರೇಶ್ವರಾ. ॥ ೨೮ ॥

೧೧೯೩

ಕಾಯ ಕಲ್ಪಿತಕ್ಕೊಳಗು, ಜೀವ ಭವಕ್ಕೊಳಗು.
ಈ ಉಭಯದ ಠಾವನರಿಯದೆ ಥಾವತಿಗೊಂಬರೆಲ್ಲರು.
ಕಾವಲಾದರು ಕಾಮನ ಕರ್ಮವಕ್ಕೆ.
ಈ ಭಾವವನರಿತು ತೊಲಗು ಸಾರಿದೆ,
ಸಾರಥಿಯ ಪತಿಯೊಡೆಯ ಸುತವೈರಿ ಮಾರೇಶ್ವರಾ.
॥ ೨೯ ॥

೧೧೯೪

ಕಾಯದ ಕರ್ಮ ಮಾಡುವನ್ನಕ್ಕ ಶಿವಪೂಜಕನಲ್ಲ.
ಜೀವ ಭವಕ್ಕೆ ತಿರುಗುವನ್ನಕ್ಕ ವೈರಾಗ್ಯಭಾವ ಸಂಬಂಧಿಯಲ್ಲ.
ಇವೆಲ್ಲವೂ ಸೊಟ್ಟೆಯ ಹೊರೆವ ಘಟ್ಟಿಯತನವಲ್ಲದೆ
ನಿಶ್ಚಯವಲ್ಲ,
ಆತುರವೈರಿ ಮಾರೇಶ್ವರಾ. ॥ ೩೦ ॥

೧೧೯೫

ಕಾಳಕೂಟವ ಕೊಡುವರೆಲ್ಲರು,
ಕೊಂಬವನಾರನೂ ಕಾಣೆ.
ಮಲತ್ರಯವ ಬಿಡೆಂದು ಹೇಳುವರೆಲ್ಲರನೂ ಕಂಡೆ.
ತಾ ತೊಲಗಿ ಹೆರೆಹಿಂಗಿ ಛೀ ಮುಟ್ಟದಿರೆಂಬಿವರನಾರನೂ ಕಾಣೆ.

ಸಕಲೇಂದ್ರಿಯದಲ್ಲಿ ತೊಟ್ಟು ಬಿಟ್ಟರೆಂದು ಹೇಳುವರ ಮಾತಿನ
ದೃಷ್ಟವ ಕಂಡೆ.
ಚಿತ್ತ ವಸ್ತುವಿನಲ್ಲಿ ಬೆಚ್ಚಂತೆ ಕೂಡಿಪರ ಸ್ವಪ್ನದಲ್ಲಿ ಕಾಣೆ.
ವಾಗದ್ವೈತದ ಭಾವಿಗಳ ಸಾಕುಬೇಕಾದಷ್ಟು ಕಂಡೆ,
ಸ್ವಯಾದ್ವೈತ ಸಂಪನ್ನರ ನಾ ಬಂದಂದಿಂದ ಎಂದೂ ಕಾಣೆ.
ಅದು ಎನ್ನ ಇರವೋ? ಪಾಪಿಯ ಕಣ್ಣಿಗೆ ಪರುಷ
ಪಾಷಾಣದಂತೆ!
ಎನ್ನ ಭಾವದ ಮಾಯೆ ಎನ್ನಲ್ಲಿ ನೀ ಕಾಣಿಸಿಕೊಳ್ಳದಿರವೊ.
ಇಂತೀ ಉಭಯವ ಚೆನ್ನಾಗಿ ಪೇಳು,
ಆತುರವೈರಿ ಮಾರೇಶ್ವರಾ. ॥ ೩೧ ॥

೧೧೯೬

ಕುಂಭದಲ್ಲಿ ಕುದಿವ ರೂಪು
ಮುಚ್ಚಳ ಅಂಗವ ತೆಗೆದಲ್ಲದೆ ಪಾತಕ ಸಂಗವನರಿಯಬಾರದು.
ಶರೀರದ ಕುಂಭದಲ್ಲಿ ಕುದಿವ ಜೀವನ ಇಂದ್ರಿಯಂಗಳ
ಹಿಂಗಿಯಲ್ಲದೆ
ಲಿಂಗಸಂಗಿಯಲ್ಲ, ಪ್ರಾಣಲಿಂಗಿಯಲ್ಲ,
ಅಸು ಭೇದವನರಿವುದಕ್ಕೆ ಸುಸಂಗಿಯಲ್ಲ,
ಇಂತಿವನರಿವುದಕ್ಕೆ ಪಶುಪತಿಯ ಶರಣರಲ್ಲಿ
ಒಸೆದು ಸಂಗವ ಮಾಡಿ ಅರಿ, ಅಸುವ ಅರಿ,
ತೂತ ತರಿ, ಸಂದೇಹದ ಭವವನರಿ,
ಘನಲಿಂಗದಲ್ಲಿ ಅರಿದೊರಗು, ಕರಿಗೊಂಡಿರು,
ಆತುರವೈರಿ ಮಾರೇಶ್ವರಾ. ॥ ೩೨ ॥

೧೧೯೭

ಕುಣಿವ ಕುದುರೆಯ ಮೇಲೆ ಕುಳಿತು,
ಆಡುವ ಪಾತ್ರವ ನೋಡುತ ಬಂದವರೆಲ್ಲರು ಅರುಹಿರಿಯರೆ?
ಇವರ ಸಂದಣಿಯ ನೋಡಿ ಅಂಜಿ ಅಡಗಿದೆ,
ಆತುರವೈರಿ ಮಾರೇಶ್ವರಾ. ॥ ೩೩ ॥

೧೧೯೮

ಕೂರಲಗು ಕೊಯ್ಯಿತ್ತು ಜಾಜಿಯ ಬಿರಿಮೊಗ್ಗೆಯ,
ಆರವೆ ನುಂಗಿತ್ತು ಸೇರಿದ ಪಕ್ಷಿಯ

ಮಾದಿಗನ ಮನೆಯ ಮಡಗೆಯ ಕೂ[illegible] ಹಾರುವನುಂಡ.
ಸಹೋದರರದವಳ ಕೂಡಿದ ಹಿರಿಯಣ್ಣ.
ಅಣ್ಣನ ಹೆಂಡಿರ ತಮ್ಮ ಹಾಕಿಕೊಂಡು ಕೊಡದಿರಲಾಗಿ,
ಇದು ಅನ್ಯಾಯವೆಂದು ಅವನ ಕಿರಿಯ ತಮ್ಮ ತಾ ತೆಕ್ಕೊಂಡ.
ಇದು ಚೆನ್ನಾಯಿತ್ತು, ಇದರ ಗನ್ನವ ಹೇಳು,
ಆತುರವ್ಯೆರಿ ಮಾರೇಶ್ವರಾ. ॥ ೩೪ ॥

೧೧೯೯

ಕೆಲ ಜೀವದ ಒಲವು ತಲೆಯ ಕಡಿದು ಬೇರೆ ಮಾಡಿದಲ್ಲಿ
ಆಡುತ್ತದೆ ಅಂಗ; ಮತ್ತೆ ನರಜೀವದ ಒಲವು
ರುಜೆಯಡಸಿ ಪ್ರಾಣ ಬಿಟ್ಟಾಗ ಅಡಿ ಕರವಾದದ ಪರಿಯ
ನೋಡಾ!
ಘಟ ಜೀವವೊಂದೆಂಬರು ಅಸು ಬೇರಾಗಿದೆ.
ಇದರ ಹುಸಿ ಕವಲ ಹೇಳಾ,
ಆತುರವ್ಯೆರಿ ಮಾರೇಶ್ವರಾ. ॥ ೩೫ ॥

೧೨೦೦

ಕೆಳಗಣ ಅವಳಿವಳೆ, ಮೇಲಣ ಆತನ ಕಾಣೆ, ಆತನೇತರವ.
ಬಾಸರ ಕೃಷ್ಣ ಕಪೋತ ತೂತಿನವ
ಅಜಾತನಲ್ಲಾಯೆಂದೆ, ಆತುರವ್ಯೆರಿ ಮಾರೇಶ್ವರಾ. ॥ ೩೬ ॥

೧೨೦೧

ಕೊಟ್ಟವನೀಶ ಭಕ್ತನಲ್ಲ, ಅರಿವಡೆ ಕರಿಗೊಂಡವನಲ್ಲ.
ಅಂಧಕ ಪಂಗುಳನ ಸಂಗದಂತಾಯಿತ್ತು.
ಇದ ನೋಡಿ ಬೆಂದು ಬೇಯಲಾರೆ,
ಆತುರವ್ಯೆರಿ ಮಾರೇಶ್ವರಾ. ॥ ೩೭ ॥

೧೨೦೨

ಕೋಡಗಕ್ಕೆ ಏಡಿಸುವ ಭ್ರಾಂತು,
ಹುಲಿಗೆ ಹೊಯಿವ ಗದಕ, ಬಲಿಗೆ ಬಂಟನ ಚಿಂತೆ.

ಎನಗೆ ಎಲ್ಲರ ಗೆಲ್ಲುವ ಚಿಂತೆ, ನೀ ಕೊಟ್ಟ ಕಾಯಕ.
ಆತುರವೈರಿ ಮಾರೇಶ್ವರಾ. ॥ ೩೮ ॥

೧೨೦೩

ಕೈದ ಮಾಡಿದ ಕಾರುಕ ಧೀರನಹನೆ?
ಚಿತ್ತದ ಆಮ್ನೆಯಿಂದ, ಶಾಸ್ತ್ರಿ ಭಿತ್ತಿಯಿಂದ,
ಕವಿತ್ವದ ಲಕ್ಷಣದಿಂದ,
ಅನಿತ್ಯ ಅನಿತ್ಯವೆಂದು ಮಿಕ್ಕಾದವರಿಗೆ ಹೇಳುವ ಕರ್ತುವಲ್ಲದೆ
ತತ್ ಪ್ರಾಣಲಿಂಗಾಂಗಯೋಗ ತಾನಾಗಬೇಕು,
ಆತುರ ವೈರಿ ಮಾರೇಶ್ವರಾ. ॥ ೩೯ ॥

೧೨೦೪

ಕೈ ಬಾಯಿ ಆಡುವನ್ನಕ್ಕ ಕೆಳಗಣ ಹೂರಿನ ದ್ವಾರವನರಸಿತ್ತು.
ಅದು ಸಾಕಾರದ ನೆಳಲು, ಭೀತಿಯ ಕೇಳದೆ ವಿಕಾರ,
ಸ್ವಪ್ನದಲ್ಲಿ ಸೋರುವ ಮನೆ.
ಇದಾರಿಗೂ ಅಸಾಧ್ಯ, ಮಾರಮಥನ ಮಾರೇಶ್ವರಾ. ॥ ೪೦ ॥

೧೨೦೫

ಗುಂಡ ವೇಶಿ ದಾಸಿ ಜೂಜು ಬೇಂಟೆ
ಭಂಡರ ಸಂಸರ್ಗದಲ್ಲಿರುತ್ತ
ಮತ್ತೆ ಲಿಂಗಾಂಗಸಂಗ ಶರಣರ ವಚನಾನುಭಾವದ
ಸುದ್ದಿಯೇಕೊ?
ನಡೆ ನುಡಿ ಶುದ್ಧವಿಲ್ಲದೆ ಮಾತಿನ ಬಣಬೆಯ ನೀತಿಯೇಕೊ?
ಸರ್ವರ ಸಿಕ್ಕಿಸುವ ವೇಷದ ಭಾಷೆಯ
ಆಸೆಯ ಘಾತಕತನವಲ್ಲದೆ ಅದು ನಿರತವಲ್ಲ.
ನಂಬುಗೆಯ ದೀಪದಂತೆ ಅವರು ತೂತಿಗೆ ಬಹರೆಂಬೆ
ಆತುರವೈರಿ ಮಾರೇಶ್ವರಾ. ॥ ೪೧ ॥

೧೨೦೬

ಗುರುವಿನಲ್ಲಿ ಗುಣವಿಲ್ಲದಿರ್ದಡೆ ಪೂಜ್ಯನಾಗಿ
ಪೊಡವಡಿಸಿಕೊಳಲೇಕೆ?

ಲಿಂಗದಲ್ಲಿ ಲಕ್ಷಣವಿಲ್ಲದಿರ್ದಡೆ ತ್ರಿಸಂಧ್ಯಾಕಾಲದಲ್ಲಿ
ಪೂಜಿಸಿಕೊಳಲೇಕೆ?
ಜಂಗಮದಲ್ಲಿ ಜಾತಿಯಿಲ್ಲದಿರ್ದಡೆ ಹಿರಿದು ಕಿರಿದೆಂದು
ಹೋರಲೇಕೆ?
ಇದನೇನ ಹೇಳುವೆ?
ಗುರು ಭವಕ್ಕೊಳಗಾದ, ಲಿಂಗ ಲಕ್ಷಣಕ್ಕೊಳಗಾಯಿತ್ತು,
ಜಂಗಮ ಜಾತಿಗೊಳಗಾದ!
ಇವನೆಲ್ಲವ ಹೇಳಿ ಹೇಳಿ:
ಎನಗಿದು ಒಳ್ಳಿತ್ತೊ ಹೊಲ್ಲವೊ? ಗೆಲ್ಲತನಬೇಡ.
ಆತುರವೈರಿ ಮಾರೇಶ್ವರಾ. ॥ ೪೨ ॥

೧೨೦೭

ಗುರುಲಿಂಗ ಜಂಗಮದ ಇರವನರಿವಲ್ಲಿ,
ತನ್ನ ಶ್ರದ್ಧೆಯೊ ಅವರ ಇರವೊ ಎಂಬುದನರಿಯಬೇಕು.
ಗುರುವಿನಲ್ಲಿ ಗುಣವನರಸಲಿಲ್ಲಾ ಎಂಬರು;
ಲಿಂಗದಲ್ಲಿ ಲಕ್ಷಣವನರಸಲಿಲ್ಲಾ ಎಂಬರು;
ಜಂಗಮದಲ್ಲಿ ಜಾತಿಸೂತಕವನರಸಲಿಲ್ಲಾ ಎಂಬರು.
ಇದು ಎಲ್ಲರ ಬಳಕೆಯ ಮಾತು.
ಗುರುವಿನಲ್ಲಿ ಗುಣವಿಲ್ಲದಿರ್ದಡೆ
ಶಿಷ್ಯನ ಕೃತಾರ್ಥನ ಮಾಡುವ ಪರಿಯಿನ್ನೆಂತೊ?
ಲಿಂಗದಲ್ಲಿ ಲಕ್ಷಣವಿಲ್ಲದಿರ್ದಡೆ
ಪಂಚಸೂತ್ರ ಪ್ರವರ್ತನ ವರ್ತುಳ ಗೋಮುಖ
ಗೋಳಕಾಕಾರ ಇಷ್ಟಾರ್ಥ ಭಕ್ತರಿಗೆ
ಮನೋಹರವಹ ಪರಿಯಿನ್ನೆಂತೊ?
ಜಂಗಮಕ್ಕೆ ಜಾತಿಯಿಲ್ಲದಿರ್ದಡೆ,
ಉತ್ತಮ ಕನಿಷ್ಠ ಮಧ್ಯಮ
ಮುಖದಲ್ಲಿ ವೇದಾಂತಿ, ಭುಜದಲ್ಲಿ ಕ್ಷತ್ರಿಯ,
ಉದರದಲ್ಲಿ ಹರದಿಗ, ಜಂಘೆಯಲ್ಲಿ ಹಲಾಯುಧ
ಈ ಅಂಗದಲ್ಲಿ ವಿಶೇಷವ ಕಂಡು ಜಾತಿಯ ಹಿಂಗುವ
ಪರಿಯಿನ್ನೆಂತೊ?
ನುಡಿಯಬಾರದು, ದರಿಸಿನಕ್ಕಂಜಿ ಸುಮ್ಮನಿರಬಾರದು.
ಜ್ಞಾನಕ್ಕಂಜಿ ಬಿದಿರ ಹೋಟೆಯಲ್ಲಿ ಹರಿದ ಉರಿಯಂತೆ

ಬೇವುತ್ತಿದ್ದೇನೆ.
ಈ ಬೇಗೆಯ ಬಿಡಿಸು ಆತುರವೈರಿ ಮಾರೇಶ್ವರಾ. ॥ ೪೩ ॥

೧೨೦೮

ಚೇತನದಿಂದ ಬಿಂದು, ಆ ಬಿಂದುವಿನಿಂದ ಸಾಕಾರ,
ಆ ಸಾಕಾರದಿಂದ ವೈಭವ, ಆ ವೈಭವದಿಂದ ಆಧ್ಯ.
ಇಂತಿವೆಲ್ಲವೂ ಸಂಚಾರದ ಸಂದೇಹ.
ಇದರಲ್ಲಿ ಕಂಚು ಮಿಂಚಾಗದೆ ಮುಂಚಬೇಕು
ಆತುರವೈರಿ ಮಾರೇಶ್ವರಾ. ॥ ೪೪ ॥

೧೨೦೯

ತನ್ನಯ ಇರವ ತಾನರಿಯದೆ,
ಇದಿರಿಂಗೆ ಭಿನ್ನ ಬೋಧೆಯ ಹೇಳುವವನ ಇರವು,
ಸರಧಿಯಲ್ಲಿ ಹೋಹ ಲಘು ಅನ್ಯಭಿನ್ನವಾದಂತೆ.
ಇವರು ಗನ್ನದ ಗಾಂಭೀರವ ನುಡಿವುದು ಅನ್ಯಾಯವೆ?
ಆತುರವೈರಿ ಮಾರೇಶ್ವರಾ. ॥ ೪೫ ॥

೧೨೧೦

ತನ್ನ ಹೊಟ್ಟೆ ತುಂಬಿಯಲ್ಲದ ತೃಪ್ತಿಯಿಲ್ಲ,
ಭವದ ತೊಟ್ಟು ಹರಿದಲ್ಲದೆ ನಿತ್ಯನಲ್ಲ.
ವಿಕಾರದ ಕಟ್ಟು ಮೆಟ್ಟ ನಿತ್ತರಿಸಿಯಲ್ಲದೆ ವಿರಕ್ತನಲ್ಲ.
ಇವನರಿಯದೆ ವ್ಯರ್ಥನಾಗಿ ತಿರುಗುವ ಉನ್ಮತ್ತಂಗೆ
ಸತ್ಯದ ಸುದ್ದಿಯೇಕೆ? ಆತುರವೈರಿ ಮಾರೇಶ್ವರಾ. ॥ ೪೬ ॥

೧೨೧೧

ತಳದಿ ಬಟುವು ಮೇಲೆ ಗೋಮುಖದೊಳಗೆ
ಶಿವದೇವನಾರೆಂದರಿಯೆ.
ಇದು ಹೊರಹೊಮ್ಮಿಯಲ್ಲದೆ ಎನ್ನ ಮನವರಿಯದು.
ಎಲ್ಲರ ಇಷ್ಟಕ್ಕೆ ಕಣ್ಣು ಕೈ ಬಾಯಿ ಮುಖ ಕಾಲು ಇದು
ನುಣ್ಣನಿದೆ.
ಇದ ಚೆನ್ನಾಗಿ ಹೇಳು.

ಆ ಎನ್ನ ಕೈಯಲ್ಲಿ ಕೊಟ್ಟ ಮುನ್ನೈದು ನಿನ್ನ ಗನ್ನ,
ಆತುರವೈರಿ ಮಾರೇಶ್ವರಾ. ॥ ೪೭ ॥

೧೨೧೨

ತಾ ಹೊಂದುವಾಗ ಕೈದು ಬಾಯೆಂದು ಕರೆದುದುಂಟೆ?
ತಡಿಯಲ್ಲಿದ್ದು ಮಡುವಿನಲ್ಲಿ ಬೀಳುವಾಗ
ಆ ಮಡು ಒಡಗೂಡುವ ಬಾಯೆಂದು ಕರೆಯಿತ್ತೆ?
ತಮವಡಸಿದ ನಿಳಯಕ್ಕೆ ಕರೆಯಿತ್ತೆ ಜ್ಯೋತಿಯ?
ನೀ ಬಂದ ಮಣಿಹಕ್ಕೆ ಎನ್ನ ಇರಲೀಸೆಯೆಂದು
ಆಸ್ಮಿಕ್ರದಲ್ಲಿ ಆತುರವೈರಿ ಮಾರೆಶ್ವರ ನುಡಿದ. ॥ ೪೮ ॥

೧೨೧೩

ತಿತ್ತಿಯ ಸೂಯಲು ಅದೆತ್ತಣಿಂದ ಬಂದ ವಾಯ?
ತುಂಬುವಾನಂದ ಸೂಸುವ ಚೆಂದ, ಬೆಂಬಳಿ ಆರಿಂದರಿ.
ಅತುರವೈರಿ ಮಾರೇಶ್ವೇರಾ. ॥ ೪೯ ॥

೧೨೧೪

ತೂತಿಂಗೆ ತೂತು ಸರಿ,
ಮಾತಿಂಗೆ ಮಾತು ಸರಿ.
ನಿಮ್ಮ ಮಾಟಕೂಟಕ್ಕೆ ಎನ್ನ ಆಟ ಸರಿ.
ಬಹು ರಾಟೆಯ ಹಿಡಿದು ತಿರಹುವಳ ತೂತೇತಕ್ಕೆ ಬಾತೆ
ಆತುರವೈರಿ ಮಾರೇಶ್ವರಾ. ॥ ೫೦ ॥

೧೨೧೫

ತೂತಿಗೆ ಬಹವರ ಶುದ್ಧಿಯ ಮಾತು,
ಅದೇತರ ವೇದ? ಅದೇತರ ಶಾಸ್ತ್ರ?
ಅದೇತರ ಆಗಮಯುಕ್ತಿ?
ಪೂರ್ವ ಅಪರವೆಂಬ ತೂತಿನ ಭೇದವ ಮುಚ್ಚಿ
ಆತನನರಿತಲ್ಲಿ ಸಕಲ ಭ್ರಾಂತು ನಿರಸನ,
ಆತುರವೈರಿ ಮಾರೇಶ್ವರಾ. ॥ ೫೧ ॥

೧೨೧೬

ತೃಣ ಮುನಿದು ತ್ರಿಣಯನ ಹೆಡಗುಡಿಯ ಕಟ್ಟುವಾಗ,
ಹಣೆಯ ಬೆಂಕಿ ಎಲ್ಲಿ ಅಡಗಿತ್ತೆಂದರಿಯೆ,
ಕಡುಗಲಿಗಳೆಲ್ಲರೂ ಉಡುವಿನ ಕೈಯಲ್ಲಿ ಸಾವಾಗ,
ಉಡಿಯ ಕೈದು ಎಲ್ಲಿ ಉಡುಗಿದವೆಂದರಿಯೆ.
ಒಕ್ಕುಡಿತೆಯಲ್ಲಿ ಅಡಗಿತ್ತು ಸಮುದ್ರ,
ಕೆರೆ ತುಂಬಿ ತೊರೆ ಒಡೆಯಿತ್ತು
ಆತುರವೈರಿ ಮಾರೇಶ್ವರಾ. ॥ ೫೨ ॥

೧೨೧೭

ತೊಡೆಯಲ್ಲಿ ಸರಮುದ್ರೆ, ಜಡೆಯಲ್ಲಿ ಸರಮುದ್ರೆ
ಉಡಿಯಲ್ಲಿ ಲಿಂಗಮುದ್ರೆ.
ಇದರ ಒಡಗೂಡುವ ತೆರನಾವುದು?
ಬಿಡು ಸಾಕು, ನಿನಗೆ ಇವು ಒಡವೆಯಲ್ಲ.
ನಿನ್ನಡಿಗೆರಗುವೆ, ಆತುರವೈರಿ ಮಾರೇಶ್ವರಾ. ॥ ೫೩ ॥

೧೨೧೮

ದಂತಶೂಕ ಶಿಲೆಯಿದಿರಲ್ಲಿ ಬಂದು ನಿಂದಿರಲಾಗಿ,
ತನ್ನ ಆಕಾರ ಪ್ರತಿಬಿಂಬಿಸಲಿಕ್ಕೆ
ತಿಳಿಯಲರಿಯದೆ ಹೋರಿ ನೊಂದಿತ್ತಲ್ಲಾ!
ನಾನೆಂಬುದನರಿಯದೆ ಅರಿದೆನೆಂಬವರೆಲ್ಲಾ
ಅಹಂಕಾರ ಅಹಂಮಮತೆಗೆ ರಾಗಿಗಳಾದಿರಣ್ಣಾ!
ತನ್ನಲ್ಲಿ ತೋರುವ ದ್ವೇಷ ತನಗೆ ಇದಿರಾದುದ ತಾನರಿಯದೆ,
ಇದಿರಿಗೆ ಹೇಳಿಹೆನೆಂದು ಹುದುಗಿಗೆ ಹೋರಲೇಕೆ?
ಆತುರವೈರಿ ಮಾರೇಶ್ವರಾ. ॥ ೫೪ ॥

೧೨೧೯

ದೃಷ್ಟ ಚಕ್ಷು, ಸ್ವಪ್ನ ಚಕ್ಷು, ಸುಷುಪ್ತಿ ಚಕ್ಷು, ತ್ರಿವಿಧ ಭೇದ.
ಚಕ್ಷುವಿನಲ್ಲಿ ಕಾಬುದು ಒಂದೊ ಮೂರೊ?
ಸಾಕಾರದಲ್ಲಿ ಚರಿಸಿ, ನಿರಾಕಾರದಲ್ಲಿ ವಿಶ್ರಮಿಸಿ
ಕಾಣಬಾರದ ಕಡೆ ನಡು ಮೊದಲಿಲ್ಲದಲ್ಲಿ

ಅಡಗಿ ಕುರುಹುದೋರದ ಇರವು ಕಾರಣಭೇದ
ಇದನರಿವುದಕ್ಕೆ ಕ್ಷೀರ ಸಂಗಪತಿಯೋಗದಿ
ಮಥನ ಕಲಂಕಿ ಘೃತಕಡೆಯಂತೆ ಆತ್ಮಭೇದ,
ಆತುರವೈರಿ ಮಾರೇಶ್ವರಾ. ॥ ೫೫ ॥

೧೨೨೦

ನಡೆವ ಕಾಲು, ಆನುವ ಕೈ, ಬೇಡುವ ಬಾಯಿ,
ಸರ್ವವನೊಡಗೂಡುವ ಮನವುಡಗಿ,
ಘನಲಿಂಗದಲ್ಲಿ ತಲ್ಲೀಯವಾದವನಂಗ,
ಮರುಳು ಕಂಡ ಕನಸಿನಂತೆ, ಮೂಗನ ಕಾವ್ಯದಂತೆ,
ಜಲಲಿಪಿಯಂತೆ, ಉರಿಯ ಧೂಮದಂತೆ,
ಇದಾರಿಗೂ ಅಸಾಧ್ಯ, ಆತುರವೈರಿ ಮಾರೇಶ್ವರಾ. ॥ ೫೬ ॥

೧೨೨೧

ನಾನಾ ಭವಂಗಳಿಂದ ಬಂದವರ,
ಅಂಡಪಿಂಡದ ಸಂದಣಿಯಲ್ಲಿ ಬಂದವರ,
ಇವ ಹಿಂಗಿದರೆಂದಡೆ ಲಿಂಗಸಂಗಕ್ಕೆ ದೂರ.
ದ್ವಂದ್ವದಲ್ಲಿ ಸಂಗೀತರಾದೆನೆಂದಡೆ ಮಂಗಳಮಯ ಚಿತ್ತ;
ಅನಂಗವಿರೋಧಿಗೆ ದೂರ.
ಹಿಡಿದಡೆ ಭಂಗ, ಹಿಡಿಯದಿದ್ದಡೆ ತೊಡಕು.
ಇದರ ಬಿಡುಗಡೆಯ ಹೇಳಾ,
ಆತುರೆವೈರಿ ಮಾರೇಶ್ವರಾ. ॥ ೫೭ ॥

೧೨೨೨

ನಿಃಕಲನ ನಿಜ ಬೆಲ್ಲ ಬೇವಾಗಬೇಕು, ಬೇವು ಬೆಲ್ಲವಾಗಬೇಕು.
ಸೊಲ್ಲು ಸೊಲ್ಲಿಂಗೆ ಕ್ರಮವ ಬಲ್ಲವನ ಮುಟ್ಟಬೇಕು.
ಇದು ಎಲ್ಲರ ಬಳಸಿಪ್ಪ ಕಲ್ಲಿಯ ರಜ್ಜು.
ಬಲ್ಲವರ ಮುನ್ನುಡಿಗೆ ಗುಣಜ್ಞರ ಭಾವ ಎಲ್ಲಕ್ಕೂ ಸರಿ,
ಆತುರವೈರಿ ಮಾರೇಶ್ವರಾ. ॥ ೫೮ ॥

೧೨೨೩

ನೆನಹಿನ ಭಾವಕ್ಕೆ ಈ ಭವ; ಮನಸಿನ ಮೋಹವೆಲ್ಲ ಸತಿ;
ಆಸೆಯೆ ತನ್ನ ಸುತ್ತಿಪ್ಪ ಭವಪಾಶದ ಹೇಳಿಗೆ.

ತನ್ನಲ್ಲಿ ತೋರುತಿಪ್ಪ ತಥ್ಯಮಿಥ್ಯವೆ ಕೂರಲಗು.
ಬೇರೊಂದರಸಲೇಕೆ ಸಂಸಾರವ?
ಆತುರವೈರಿ ಮಾರೇಶ್ವರಾ. ॥ ೫೯ ॥

೧೨೨೪

ಬಂದ ಬಂದವರೆಲ್ಲರೂ ನೀರ ಕಾಸುವರಲ್ಲದೆ
ಮಿಂದುಂಡು ಹೋಹವರನಾರನೂ ಕಾಣೆ.
ಕಾಗಲೆತ್ತಿತ್ತು ಮೇಲು ಮಡಕೆಯಿಲ್ಲ.
ಸೌದೆ ಬೆಂದಿತ್ತು, ಬೆಂಕಿಯ ಕಾಣೆ.
ಮೀವಾತ ಬಂದ, ಉದಕವನೆರೆವವರನಾರನೂ ಕಾಣೆ.
ಕಂಡವರ ಕೇಳಿದಾತ ಬಂದು ಕಾಣಿಸಿಕೊಂಡವನಿಲ್ಲ,
ಆತುರವೈರಿ ಮಾರೇಶ್ವರಾ. ॥ ೬೦ ॥

೧೨೨೫

ಘಟದಲ್ಲಿ ಆತ್ಮ ದಿಟಕರಿಸಿ ಇಹಾಗ ತನ್ನ ಮಠವಾವುದೆಂದರಿ.
ಘಟವಳಿದು ಮಠ ತುಂಬಿ ಹೋಹಾಗ ದಿಟದ ಸುದ್ದಿಯನರಿ.
ಪಥಪಯಣದಿ ಹಾದಿಯ ಕಾಣು,
ಆತುರವೈರಿ ಮಾರೇಶ್ವರಾ. ॥ ೬೧ ॥

೧೨೨೬

ಬಲ್ಲವನ ನುಡಿ ಸರ್ವವೆಲ್ಲಕ್ಕೂ ನನ್ನಿ.
ಬೆಲ್ಲದ ಘಟ್ಟಿ ಸರ್ವವೆಲ್ಲಕ್ಕೂ ಮಧುರ.
ಕಳವಿಲ್ಲದವನ ನುಡಿ ಸರ್ವವೆಲ್ಲಕ್ಕೂ ದಿಟ.
ಹುಸಿ ಒಂದಕ್ಕೆ ದಿಟವೆರಡಕ್ಕೆ ಸಂದೇಹ ಮೂರಕ್ಕೆ ಬೀಡು.
ಮೂಕೊರೆಗನ ಶುದ್ಧಿಯೇತಕ್ಕೆ?
ಆತುರವೈರಿ ಮಾರೇಶ್ವರಾ. ॥ ೬೨ ॥

೧೨೨೭

ಬಲ್ಲವನಾಗಿ ಮಾತಿನ ವೈರಕ್ಕೆ ಎಲ್ಲರೊಳಗೂ ಹೋರಿ,
ಕೃಪೆಯಿಲ್ಲದವನಾಗಿ ತತ್ಕಾಲ ಉಚಿತ ದೇಹಕ್ಕೆ ದಳ್ಳುರಿಯವನಾಗಿ,

ಮಿಕ್ಕವರೆಲ್ಲರಿಗೆ ಸನ್ಮತಿಯ ಹೇಳುವ ಚಿಳ್ಳನ ನೋಡಾ,
ಆತುರವೈರಿ ಮಾರೇಶ್ವರಾ. ॥ ೬೩ ॥

೧೨೨೮

ಬ್ರಹ್ಮ ಅವ್ವೆಯ ಗಂಡನಾದ.
ವಿಷ್ಣು ಅಕ್ಕನ ಗಂಡನಾದ.
ರುದ್ರ ಕಿರುತಂಗಿಯ ಗಂಡನಾದ.
ಈ ಮೂವರ ಹೋಬಳಿ ಇದೇನು ಚೋದ್ಯ!
ಇಂತಿವು ಮಾಯಾಮಲಯೋನಿ ಸಂಬಂಧ.
ಏಕಗುಣ ಭಾವ, ತರುಕೊಂಬು ಫಲದಂತೆ.
ಸಾಕು ಸಂಸರ್ಗ, ಆತುರವೈರಿ ಮಾರೇಶ್ವರಾ. ॥ ೬೪ ॥

೧೨೨೯

ಬ್ರಹ್ಮ ಮಡಕೆಯಾಗಿ, ವಿಷ್ಣು ಮಂತಾಗಿ,
ಯುಗಜುಗಂಗಳು ಮೊಸರಾಗಿ,
ಅಹುದಲ್ಲಯೆಂಬ ಎರಡು ಕಡೆಗುಣಿಯ ನೇಣು;
ನೆಟ್ಟ ಸ್ಥಾಣು ರುದ್ರಮೂರ್ತಿ, ಹಿಡಿದು ಕಡೆವ ಕಣ್ಣ ಕಂಗಳ ನೋಟ
ಇದು ಅತಿ ಮಥನವಾಗಿದೆ,
ಆತುರವೈರಿ ಮಾರೇಶ್ವರಾ. ॥ ೬೫ ॥

೧೨೩೦

ಬಾಯಾರಿ ರಸ ಬತ್ತಿದವಂಗೆ ಪಾಯಸದ ಗಡಿಗೆಯ
ತಂದಿರಿಸಿದಡೆ ಬಾಯಾರು ಹಿಂಗುವುದೆ?
ಸಕಲ ಸುಖದಲ್ಲಿ ಇಹಂಗೆ ಸಕಳೇಶ್ವರನ ಅಕಲ ಬಲ್ಲನೆ?
ಇಂತಿವರೆಲ್ಲರು ಅಖಿಳರೊಳಗೆ ಅಡಗಿ ಸುಖದುಃಖವ
ಭೋಗಿಸುವ
ಪ್ರಕೃತಿ ವಿಧರಿಗೇಕೆ ಅಕಳಂಕನ ಮಾತು.
ಆತುರವೈರಿ ಮಾರೇಶ್ವರಾ. ॥ ೬೬ ॥

೧೨೩೧

ಬಿರಿದ ಕಟ್ಟಿದಾತನ ಬಿರಿದದೆ.
ಕಟ್ಟಿದೊಡೆಯನೆತ್ತ ಹೋದನೆಂದರಿಯೆ.
ಇನ್ನಾರೊಳಗೆ ಕದನ? ವಾದಿಸುವರಿಲ್ಲ.
ಭೇದದ ಗುರು, ಚೋದ್ಯದ ಶಿಷ್ಯ,
ಇಂತೀಲಾಗುಕಾರನೊಲ್ಲ.
ಆತುರವೈರಿ ಮಾರೇಶ್ವರಾ. ॥ ೬೭ ॥

೧೨೩೨

ಬೀಜವೊಡೆದು ಮೊಳೆಯಂಕುರಿಸುವಾಗ ಎಲೆ ಎಲ್ಲಿದ್ದಿತ್ತು?
ಎಲೆ ಸುಳಿಬಿಟ್ಟು ಕಮಲುವಾಗ ಶಾಖೆಯೆಲ್ಲಿದ್ದಿತ್ತು?
ಶಾಖೆ ಒಡೆದು ಕುಸುಮ ತೋರುವಾಗ ಫಲವೆಲ್ಲಿದ್ದಿತ್ತು?
ಫಲ ಬಲಿದು ರಸ ತುಂಬುವಾಗ ಸವಿಯೆಲ್ಲಿದ್ದಿತ್ತು?
ಸವಿಯ ಸವಿದು ಪರಿಣತೆಗೊಂಬಾಗ ಅದೇತರೊದಗು?
ಇಷ್ಟರಿ ನೀತಿಯನರಿ, ಆತುರವೈರಿ ಮಾರೇಶ್ವರಾ. ॥ ೬೮ ॥

೧೨೩೩

ಬೆಲ್ಲ ಹಣ್ಣಾದುದುಂಟೆ, ಪಾದಪಕ್ಕೆ ಫಲವಲ್ಲದೆ?
ಬಲ್ಲವ ಎಲ್ಲರೊಳಗೆ ಬಲ್ಲಿದನಾದೆಹೆನೆಂದು ಗೆಲ್ಲ ಸೋಲಕ್ಕೆ ಹೋರುವ.
ಅವನಲ್ಲಿಯೆ ಉಳಿದ ಎಡದೊಡೆ ಸಂದಿಯಲ್ಲಿ,
ಆತುರವೈರಿ ಮಾರೇಶ್ವರಾ. ॥ ೬೯ ॥

೧೨೩೪

ಪರಬ್ರಹ್ಮವ ನುಡಿವರೆಲ್ಲಾ ಬ್ರಹ್ಮನ ಬಾಯಾಟ,
ಹಿಂಗಿದಲ್ಲಿ ಹೋಯಿತ್ತು.
ಬೊಮ್ಮ ಬಾಯೆಂಬ ಬಾಗಿಲಮುಂದೆ ಸುಳಿಯದಿರೆ,
ಅನ್ನ ಆತ್ಮಂಗೆ ಅರಿವೆ ಪ್ರಾಣ ವಿರಕ್ತಂಗೆ.
ಇಂತೀ ಗುಣಕ್ಕೆ ಇದಿರ ಕೇಳಲಿಲ್ಲ, ತನ್ನ ಮರೆಯಲಿಲ್ಲ,
ಆತುರವೈರಿ ಮಾರೇಶ್ವರಾ. ॥ ೭೦ ॥

೧೨೩೫

ಪೂರ್ವವನಳಿದು ಪುನರ್ಜಾತನಾದ ಮತ್ತೆ
ಜಾತತ್ವ ಅಳವಟ್ಟು ಆ ಗುರುಮೂರ್ತಿಯ ಇರವು
ತಾನಾದ ಮತ್ತೆ ಹಿಂದ ಮೆಟ್ಟಲಿಲ್ಲ.
ಬಂಧುಗಳೆಂದು, ಕೊಂಡ ಕೊಟ್ಟ ಬೆಂಬಳಿಯವರೆಂದು,
ತಂದೆ ತಾಯಿ ಒಡಹುಟ್ಟಿದವರ.
ಹಿಂದ ನೆನೆವನಿಗೇಕೆ ಗುರುಸ್ಥಲದ ಸಂಪತ್ತಿನಿರವು
ಮಾತಾ ಉಮೆ ಪಿತಾ ಶಿವ ಶಿವಭಕ್ತ ಬಾಂಧವರಾದಲ್ಲಿ,
ಅವರೊಳಗೆ ಒಬ್ಬರಿವರೆಂದು ವಿಶೇಷವ ಕಾಣದೆ ಕಾಬುದು ಗುರುಸ್ಥಲ.
ಹಾಗಲ್ಲದೆ ಹಿಂದಣ ತೂತಿನವರೆಂದು ಬದ್ದುದ ಮಾಡಿ,
ಮುಂದಣ ತೂತಿಂಗೀಡುಮಾಡುವ
ಭಂಡಂಗೇಕೆ ಗಾಂಭೀರದ ಇರವು
ಆತುರವೈರಿ ಮಾರೇಶ್ವರಾ. ॥ ೭೧ ॥

೧೨೩೬

ಭಕ್ತನಾಗಿ ಹುಟ್ಟಿ ಮತ್ತೊಬ್ಬರಲ್ಲಿ ಬೇಡುವುದೆ ಕಷ್ಟ.
ಹೊತ್ತು ಹೋರಿ ಭೂಮಿಯ ಅಗೆವಲ್ಲಿ
ಮೊತ್ತದ ಜೀವಂಗಳು ಸತ್ತುದ ದೃಷ್ಟವ ಕಂಡಲ್ಲಿಯೆ
ಮಾಡುವ ಮಾಟ ನಷ್ಟ.
ಇದನರಿತು ವಿರಕ್ತರಾಗಿ ಹೋದಲ್ಲಿ,
ಮತ್ತೊಬ್ಬರ ಅಪ್ಪಾ ಅಣ್ಣಾ ಎಂದು ಚಿತ್ತ ಕಲಕುವದು ಕಷ್ಟ.
ಈ ಹೊತ್ತ ದೇಹಕ್ಕೆ ನಗೆಯ ಚಿತ್ತದ ಕಾಯಕ, ಇದನೊಪ್ಪುಗೊ,
ಆತುರವೈರಿ ಮಾರೇಶ್ವರಾ. ॥ ೭೨ ॥

೧೨೩೭

ಭಕ್ತಿಯುಕ್ತಿ ಸತ್ಯ ಸಮತೆಯ ಹೇಳಿ
ಭೃತ್ಯನುತ್ತಮ ನೀವು ಕರ್ತುವೆಂದು ಅವರುವ
ಅಸ್ತಿ ನಾಸ್ತಿಯನರಿಯದೆ ಕತ್ತರಿಯ ಮೊನೆಯಂತೆ
ಹೊಕ್ಕು ಕೆಡಹುವ ಕೃತ್ತಿಮರು ತೂತಿನ ಅತ್ತಣವರು,
ಆತುರವೈರಿ ಮಾರೇಶ್ವರಾ. ॥ ೭೩ ॥

೧೨೩೮

ಭಕ್ತಿಯೆಂಬ ಭಾಂಡದಲ್ಲಿ ಸತ್ಯವೆಂಬ ಅಕ್ಕಿಯ ಹೊಯಿದು
ನಿರ್ಮಲವೆಂಬ ಉದಕವ ಸಂಬಂಧಿಸಿ
ತ್ರಿಗುಣವೆಂಬ ಮೂರು ಒಲೆಯ ಗುಂಡು
ಆತುರದ ಸೌದೆ, ಸುಡದ ಬೆಂಕಿಯಲ್ಲಿ ಉರುಹಲಾಗಿ,
ಒಗರ ಬೆಂದಿತ್ತು, ಇಕ್ಕುವರಿಲ್ಲ, ಉಂಬವರ ಕಾಣೆ,
ಆತುರವೈರಿ ಮಾರೇಶ್ವರಾ. ॥ ೭೪ ॥

೧೨೩೯

ಭಲ್ಲೂಕನ ನೋಟ, ವ್ಯಾಘ್ರನ ಸಂಚ,
ವಿಕ್ರಮನ ನಾಸಿಕ, ಸಿಕ್ಕಿಸುವಾತನ ಬುದ್ಧಿ,
ಗುರುವೆನಲಿಲ್ಲ, ಪ್ರಮಾಣಿಸಲಿಲ್ಲ, ವರ್ಮಿಸಲಿಲ್ಲ,
ಹರವರಿಯಲ್ಲಿ ಹರಿಸಲಿಲ್ಲ.
ಅವನಿರವಿನಲ್ಲಿ ನುಡಿದ ನುಡಿ ಕೆಡಬಾರದೆಂದು
ಅವುಡಕಚ್ಚಿರು ತೂತಿನ ಭ್ರಾಂತ,
ಆತುರವೈರಿ ಮಾರೇಶ್ವರಾ. ॥ ೭೫ ॥

೧೨೪೦

ಭೂಮಿಯ ಮಧ್ಯದಲ್ಲಿ ಒಬ್ಬ ಗಾಣಿಗ ಸ್ಥಾಣುವ ನೆಟ್ಟು,
ಮೊದಲೊಂದು, ಬಾಯಿಮೂರು, ಕೊಂತವಾರು, ಎಂಟೆತ್ತು,
ನೊಗ ಹದಿನಾರು, ಕೊರಳಕಣ್ಣ ನೂರೊಂದು.
ಇಂತಿವ ಕೂಡಿ ಹೊಡೆಯಲಾಗಿ,
ಒರಳ ಬಾಯಿಗೆ ಏರಿದ ಹಲಗೆಗೆ
ಮೇಲೆ ಏತದ ಸೂತ್ರಕ್ಕೆ ಒಂದೆ, ಇದ ಹೇಳು,
ಆತುರವೈರಿ ಮಾರೇಶ್ವರಾ. ॥ ೭೬ ॥

೧೨೪೧

ಮಡಿವಳ ವಸ್ತ್ರಕ್ಕೆ ಮುನಿದಲ್ಲಿ, ಅರಿ ಸಮರಿಪು ಮುನಿದಲ್ಲಿ,
ಸರಸಮ ಮುನಿದಲ್ಲಿ ಸುರ ಅಂತಕ ಮುನಿದಲ್ಲಿ
ಇವು ಸರಸವೆ? ಇಂತಿವು ವಿರಸವಲ್ಲಾ ಎಂದು ಉಸುರಿದೆ.

ನಿಮ್ಮ ದೆಸೆಯವನೆಂದು ಎನ್ನ ಗಸಣೆಗೊಳಬೇಡ,
ಅಸುಕುತನ ದೂರವಾಗಿರಿ, ಬಾಳಾಂಬಕನ ಬಾಲಲೋಲರಾಗಿರಿ.
ವಿಶಾಲ ಗುಣನಿಧಿ ಭಕ್ತಗುಣಲೋಲ ಶರಣರನಳಿನರ್ಗ
ಕಾಲುಮಾಡಿದಿರೆನ್ನ, ಆತುರವೈರಿ ಮಾರೇಶ್ವರಾ. ॥ ೭೭ ॥

೧೨೪೨

ಮಣ್ಣೆಂಬುದು ದೇಹ, ಹೊನ್ನೆಂಬುದು ಕಾಂಕ್ಷೆ,
ಹೆಣ್ಣೆಂಬುದು ಸಕಲ ಸುಖಭೋಗಂಗಳು.
ಅಣ್ಣಾ, ಇದ ಹೇಳದೆ ಮಣ್ಣ ಮುದ್ದೆಯ ಕೈಯಲ್ಲಿ ಕೊಟ್ಟು
ನುಣ್ಣನೆ ಹೋದೆ, ಆತುರವೈರಿ ಮಾರೇಶ್ವರಾ. ॥ ೭೮ ॥

೧೨೪೩

ಮನ ಮನವ ಕೂಡಿ, ತನು ತನುವ ಕೂಡಿ,
ಅರಿವು ಅರಿವನರಿತು ಹೆರೆಹಿಂಗದವ
ಕರಿಗೊಂಡು ತನ್ನರಿವಿನ ಕುರುಹಿನ ಕುರಿತು
ಇಷ್ಟದಲ್ಲಿ ಅನ್ಯೈಷ್ಟಿಕತ್ವವೆ ವಸ್ತು ತಾನಾಗಿ ಇದ್ದು
ಭಿನ್ನಭಾವವಿಲ್ಲ, ಆತುರವೈರಿ ಮಾರೇಶ್ವರಾ. ॥ ೭೯ ॥

೧೨೪೪

ಮನ ಮಹದಲ್ಲಿ ನೆಮ್ಮಿ ಮತ್ತೊಂದು ಜಿನುಗುವ ನೇಮವೇತಕ್ಕೆ?
ತಲೆ ಪುಣ್ಯದ ತತ್ತಿಂಗೆ ಪೂಜೆ.
ಆಗಣ್ಯನನರಿವುದಕ್ಕೆ ತ್ರಿಕರಣ.
ಅಣ್ಣಾ, ಇವ ತಿಳಿದು ನೋಡಿ ಪ್ರಸನ್ನನರಿ,
ಆತುರವೈರಿ ಮಾರೇಶ್ವರಾ. ॥ ೮೦ ॥

೧೨೪೫

ಮಾಡುವರ ಮಾಟಕ್ಕಂಜಿ ತೂತ ಬಿಟ್ಟಡೆ
ಅದೇತರ ಯೋಗ? ಅದೇತರ ಪೂಜೆ?
ಪರರ ಬೇಡುವ ಬಾಯಿ ತೂತ ಮುಚ್ಚಿದಡೆ ಆಸೆಗೆ ಹೊರಗು,
ಆತುರವೈರಿ ಮಾರೇಶ್ವರಾ. ॥ ೮೧ ॥

೧೨೪೬

ಮಾತ ವೆಗ್ಗಳವನಾಡಿ, ಹಿರಿಯತನದಿ ಪಾಶವ ತೋರಿ,
ಜಗಹಿತಾರ್ಥವಾಗಿ ಆಸೆಯೆಂಬ ಕೂಸು
ದ್ರವ್ಯದ ಗಾತ್ರದ ಮೊಲೆಯನುಣುತದೆ.
ನಿಹಿತವ ಬಿಟ್ಟು ಕೂತನಾಗಿ ಬಿಡು ಭಾಷೆಯೇಕೆ?
ವೇಷವ ಪಾಶವೇಕೆ? ಬಿಡು ತೂತಿಗೆ ಪೋಗಿ
ಆತುರವೈರಿ ಮಾರೇಶ್ವರಾ. ॥ ೮೨ ॥

೧೨೪೭

ಮಾತಿನ ವೈರಕ್ಕೆ ಹೋತುವಾಗದೆ,
ಖ್ಯಾತಿಯ ಲಾಭಕ್ಕೆ ಮಾಟಕೂಟವಾಗದೆ
ವಾಸಿಯ ಮಾತಿಗೆ ನಾಸಿಕವನರಿದುಕೊಳ್ಳದೆ,
ವೇಸಿಯ ಕೂಸಿಗಾಗಿ ಸತಿಪುತ್ರರ ಘಾಸಿಮಾಡದೆ,
ಕಿಂಚಿತ್ತು ತೂತಿಗಾಗಿ ಆತನ ಬಿಡದಿರು,
ಆತುರವೈರಿ ಮಾರೇಶ್ವರಾ. ॥ ೮೩ ॥

೧೨೪೮

ಮಾತು ಬ್ರಹ್ಮಾಂಡವ ಮುಟ್ಟಿ,
ನೀತಿ ಮಾತಿನ ಬಾಗಿಲ ಕಾಯ್ವುದು, ಅದೇತರ ಮಾತು?
ಆತುರವೈರಿ ಮಾರೇಶ್ವರಾ. ॥ ೮೪ ॥

೧೨೪೯

ಮಾರುತನಂತೆ ಮನ, ಮರಾಳನಂತೆ ಬುದ್ಧಿ,
ಸಂಚಾರಿಸದ ಅಂಬುಧಿಯಂತೆ ಅಂಗ,
ಮೊಳೆದೋರದ ವೃಕ್ಷದಂತೆ ಸಲೆ ಸಂದಿಹ ಜ್ಞಾನ.
ಬಲುಗೈಯನ ತೋಟಿಯ ತೊಡಕಿನಂತೆ,
ಗೆಲು ಇಂದ್ರಿಯ ವರ್ಗಂಗಳ, ಆತುರವೈರಿ
ಮಾರೇಶ್ವರಾ. ॥ ೮೫ ॥

೧೨೫೦

ಮೆಟ್ಟದ ಮೃತ್ತಿಕೆಯ ಇಕ್ಕುವುದೊಂದೆ ಚಕ್ರ.
ತುರುಗೂಡೊಂದೆ ಭೇದ, ಹಿಡಿದವನೊಬ್ಬನೆ.

ಘಟ ಹಲವು ತೆರನಾದವು, ಬೇಗೆ ಒಂದೆ.
ಇದರ ಭೇದವ ಹೇಳಾ,
ಆತುರವೈರಿ ಮಾರೇಶ್ವರಾ. ॥ ೮೬ ॥

೧೨೫೧

ಲಿಂಗವ ಪೂಜಿಸುವಲ್ಲಿ ಲಿಂಗದ ಅಂಗವನರಿದು ಮುಟ್ಟಬೇಕು.
ಲಿಂಗಕ್ಕೆ ಅರ್ಪಿತವ ಮಾಡುವಲ್ಲಿ ಲಿಂಗದ ಆಪ್ಯಾಯನವನರಿವಲ್ಲಿ
ಉಚಿತವನರಿದು ಅರ್ಪಿಸಬೇಕು.
ತನ್ನ ಹಸಿವನರಿತು ಹುಸಿಯ ಪೂಜೆಯ ಕಂಡಡೆ,
ಕಿಸುಕುಳದಲ್ಲಿ ಇಕ್ಕುವ,
ಆತುರವೈರಿ ಮಾರೇಶ್ವರಾ. ॥ ೮೭ ॥

೧೨೫೨

ವೇದ ಯೋನಿಯ ಹಂಗು.
ಶಾಸ್ತ್ರ ಯೋನಿಯ ಹಂಗು
ಪುರಾಣ ಯೋನಿಯ ಹಂಗು.
ಆಗಮ ಯೋನಿಯ ಹಂಗು.
ನಾದದಿಂದ ಉದಿಸಿದವು ಶ್ರೋತ್ರದ ಹಂಗು.
ಹೇಳುವುದು ವೆಜ್ಜ, ಕೇಳುವುದು ವೆಜ್ಜ,
ತಾ ಹಿಂದೆ ಬಂದುದು ವೆಜ್ಜ, ಈಗ ನಿಂದು ಮಾಡುವುದು ವೆಜ್ಜ.
ಇಂತೀ ವೆಜ್ಜದಜ್ಜೆಯ ಗುದ್ದಿನಲ್ಲಿ ಬಿದ್ದವರಿಗೆ ನಿರ್ಧರವಿಲ್ಲ
ಆತುರವೈರಿ ಮಾರೇಶ್ವರಾ. ॥ ೮೮ ॥

೧೨೫೩

ಶರೀರದ ವಾಯುದ್ವಾರದ ಸಂಚಾರದ ನಾಡಿ ಕೂಡಿದ
ಮಜ್ಜೆ ನರ ಮಾಂಸ ಪುದಿದಿಹ ಚರ್ಮದ ತ್ರಿಕೋಣೆಯ ತುದಿಯ
ಉನ್ಮನಿಯಲ್ಲಿ ಅರಿಯಬೇಕೆಂಬರು.
ಹರಿದು ಹೋಹಾಗ ಆತ್ಮನಡಿಯ ಹಜ್ಜೆಯಂತೆ
ಅಡಿದೋರದ ಇರವು
ಆತುರವೈರಿ ಮಾರೇಶ್ವರಾ. ॥ ೮೯ ॥

೧೨೫೪

ಸಮತೆಯ ಸಮಾಧಾನವ ಹೇಳುವ ಪುಸ್ತಕ ಎತ್ತಿನ ಮೇಲೆ,
ಹೊಯಿವ ದೊಣ್ಣೆ ಕೈಯಲ್ಲಿ, ಲೇಸಾಯಿತ್ತು ಈತನಿರವು.
ಮಾತಿನಲ್ಲಿ ಆಗಮ, ಮನದಲ್ಲಿ ತೂತಿನ ಕುಡುಕೆಯ ಆಶೆ
ಇದು ನೀತಿಯಲ್ಲ, ಆತುರವೈರಿ ಮಾರೇಶ್ವರಾ. ॥ ೯೦ ॥

೧೨೫೫

ಹರಿಗೋಲು ಹರಿದ ಮತ್ತೆ ಹೊಳೆಯೇನು ಮಾಡುವುದು?
ಇರಿದವನಿದ್ದಂತೆ ಕೈದೇನ ಮಾಡುವುದು?
ಎಚ್ಚವನಿದ್ದಂತೆ ಅಂಬಿಗೆ ಮುನಿವರೆ?
ಎನ್ನ ಚಿತ್ತದಲ್ಲಿ ಕಲೆದೋರಿ, ನೀನಾಡಿಸಿದಂತೆ ಆಡಿದೆ.
ನೀ ಕೊಟ್ಟ ಕಾಯಕವ ಹೊತ್ತೆ, ನೀ ಹೇಳಿದ ಬಿಟ್ಟಿಯ ಮಾಡಿದೆ
ಕುಳದವನಾದ ಮತ್ತೆ ಮಾನ್ಯರ ಒಲವರ ಎನಗೊಂದು
ಗುಣವಿಲ್ಲ.
ನೀನಾಡಿಸಿದಂತೆ ಆಡಿದೆ, ಆತುರವೈರಿ ಮಾರೇಶ್ವರಾ. ॥ ೯೧ ॥

೧೨೫೬

ಹಳ್ಳಿಯ ಹೊಲೆಯನ ಕೈಯಲ್ಲಿ ಡಿಳ್ಳಿಯಧಿಪತಿ ಸತ್ತ.
ಆಳುವ ಗಂಡ ಹೆಂಡತಿಗೆ ಕೀಳಾಳಾದ.
ಒಡೆಯ ಬಂಟನಿಗೆ ಬಡಿಹೋರಿಯಾದ.
ಹೊಡೆಯ ಹುಲ್ಲು ಕರವಾಳ ಹಿಡಿಯ ಕೊಯ್ಯಿತ್ತು,
ಆತುರವೈರಿ ಮಾರೇಶ್ವರಾ. ॥ ೯೨ ॥

೧೨೫೭

ಹಾಕಿದಡೆ ಸಮಯಕ್ಕೆ ಭಂಗ, ಹಿಡಿದಡೆ ಜ್ಞಾನಕ್ಕೆ ಭಂಗ
ಇದರೊಡಗೂಡುವ ಒಡಲಾವುದು?
ಹಾಗಕ್ಕೆ ಕೊಂಡು ಹಣವಡ್ಡವ ಕಟ್ಟುವ ಲಾಗಿನ ಗುರು ಬೇಡ,
ಆತುರವೈರಿ ಮಾರೇಶ್ವರಾ. ॥ ೯೩ ॥

೧೨೫೮

ಹಿಂದೆ ನಾ ಬಂದ ಭವಕ್ಕೆ ಅಟ್ಟಣೆಯಿಲ್ಲ.
ಉದಯವಲ್ಲಿ ಕಮ್ಮಾರನ ಮನೆಗೆ ಬಂದು ಬೇಸತ್ತೆ.

ಮಧ್ಯಾಹ್ನದಲ್ಲಿ ಅಗಸನ ಮನೆಗೆ ಎಡತಾಕಿ ಬೇಸತ್ತೆ.
ಅಸ್ತಮಯದಲ್ಲಿ ನಾವಿದನ ಮನೆಗೆ ಹೋಗಿ ನಿಂದಿರ್ದು ಬೇಸತ್ತೆ.
ಕಮ್ಮಾರನ ಕೈಯ ಮುರಿದವರಿಲ್ಲ,
ಅಗಸನ ಕಾಲ ಕಡಿದವರಿಲ್ಲ.
ನಾವಿದನ ತಲೆಯ ಕೊಯ್ದವರಿಲ್ಲ.
ಇಷ್ಟನಾರೈದುಕೊ, ಆತುರವೈರಿ ಮಾರೇಶ್ವರಾ. ॥ ೯೪ ॥

೧೨೫೯

ಹಿಂದೆ ಬಂದವರೆಲ್ಲರೂ ಯೋನಿಯ ಹಂಗು.
ಸಕಲ ಶಾಸ್ತ್ರಜ್ಞರೆಲ್ಲಾ, ವೇದ ವೇದಾಂತರೆಲ್ಲಾ,
ಹಿಂದೆ ಬಂದ ಯೋನಿಯ ಮರೆದು, ಮುಂದಕ್ಕೆ ಯೋನಿಗಾಗಿ
ಲಂದಳಗಿತ್ತಿಯಂತೆ ಬಂದ ನಿಂದ ಭಕ್ತರಲ್ಲಿ
ಹೊಸತನದಂದವ ಹೇಳಿ, ಎಡಗಾಲಸಂದಿಯ ಮೆಚ್ಚಿ,
ಅನಂಗನ ಬಲೆಯೊಳಗಾದವರಿಗೆ
ಘನಲಿಂಗನ ಸುದ್ಧಿಯೇಕೆ, ಆತುರವೈರಿ ಮಾರೇಶ್ವರಾ. ॥ ೯೫ ॥

೧೨೬೦

ಹುಗುಲು ಹೂಟದೊಳಗಾಡುವರೆಲ್ಲರು
ಬಗೆಗೆ ಅಳವಡದನ ಬಲ್ಲರೆ?
ಗುಹ್ಯ ಜಿಹ್ವೆಯಲ್ಲಿ ಬಲ್ಲವನಾಗಬೇಕು,
ಅದು ಬಿಡುಮುಡಿಯ ಸಂಗ.
ಒಡಗೂಡುವ ತೊಡಗೆಯ ಭೇದವನರಿಯಬೇಕು,
ಆತುರವೈರಿ ಮಾರೇಶ್ವರಾ. ॥ ೯೬ ॥

೧೨೬೧

ಹೆಣ್ಣಿನ ಮೇಲಿನ ಮೋಹ ಯೋನಿ ಕಂಡಾಗ ದಣಿಯಿತ್ತು.
ಹೊನ್ನಿನ ಮೇಲಿನ ಮೋಹ ಕೂಡಿ ಭಿನ್ನವಾಗಲಾಗಿಯೆ
ದಣಿಯಿತ್ತು.
ಮಣ್ಣಿನ ಮೇಲಿನ ಮೋಹ ಅರಿಗಳ ಮುರಿದು
ಹರವರಿಯಾದಾಗಲೇ ದಣಿಯಿತ್ತು.
ಇವನೊಂದುವ ಕಾಣದ ಮೋಹ ಎಂದಿಗೂ ಬಿಡದು.

ಇದರ ಸಂದನಳಿದು ಹೇಳಾ,
ಆತುರವೈರಿ ಮಾರೇಶ್ವರಾ. ॥ ೯೭ ॥

೧೨೬೨

ಹೇಳಿಸಿಕೊಂಡು ಕೇಳಿ ಅರಿದೆಹೆನೆಂದಡೆ ಗಣಿತದ ಲೆಕ್ಕವಲ್ಲ.
ಎನ್ನನರಿತು ನಿನ್ನನರಿವಡೆ ನಾ ಪರಂಜ್ಯೋತಿಯಲ್ಲ.
ರುಜೆಯಡಸಿದವನ ದೇಹ, ಅಂಧಕನ ನೋಟ, ಪಂಗುಳನ ಪಯಣ,
ಮತಿಹೀನನ ಗತಿಗೆಟ್ಟವನ ಮೋಕ್ಷ
ಇಂತಿವು ಹುಸಿಯಾದ ತೆರ ನನಗೊ ನಿನಗೊ,
ಆತುರವೈರಿ ಮಾರೇಶ್ವರಾ. ॥ ೯೮ ॥

೧೨೬೩

ಹೊಳೆಯಲ್ಲಿ ನಿಂದಿರ್ದು ಹಾದಿಯ ಕೇಳಿದಡೆ,
ತಡಿಮಡುವ ಹೇಳಿದಡೆ ಅದು ಕೆಡುಗುಡಿತನವೆ?
ಎನ್ನ ಬಿಡುವರು ಬಿಡಲಿ, ಇದ ನಡಸಿಯಲ್ಲದೆ ಬಿಡೆ, ಬಿಡ ಮತವಲ್ಲ.
ಎನ್ನ ಒಡಗೂಡಿಕೊ, ಆತುರವೈರಿ ಮಾರೇಶ್ವರಾ. ॥ ೯೯ ॥

## ನಿಜಗುಣಯೋಗಿಯ ವಚನ

೧೨೬೪

ಅಂಗ ಲಿಂಗವೆಂಬನ್ನಕ್ಕ
ಯೋಗಪೂಜೆ ಪುಣ್ಯಕ್ಕೆ ಬೀಜ.
ಆತ್ಮನನರಿದೆಹೆನೆಂಬನ್ನಕ್ಕ ಉಭಯದೊಡಲಾಯಿತ್ತು.
ಉಭಯದ ಗಿಜಬಜೆಯಲ್ಲಿ ಸಿಲುಕದೆ ನಿಂದ
ನಿಜಗುಣಯೋಗಿ. ॥ ೧ ॥

೧೨೬೫

ಅರಿಬಿರಿದಿನಾಲಯದೊಳಗೆ ದೊರೆ(ಯದೆ)
ತಿರಿತಿರಿಗಿ ಬರುವ ದುರದಿಕ್ಕಿಗಳನೊಲ್ಲ.
ಕರುಕರತ ತಾಳತೋರಿ ಎನ್ನನಿಂಬುಗೊಂಡೆಯಲ್ಲಾ,
ನಿಜಗುಣಯೋಗಿ. ॥ ೨ ॥

೧೨೬೬

ಆನು ನೀನೆಂಬ ಸಂದೇಹ ಗಗನಕ್ಕೆ ಕೈಯನಿಟ್ಟಂತೆ!
ಕೈ ಗಗನವ ನುಂಗಿತ್ತೊ, ಗಗನ ಕೈಯ ನುಂಗಿತ್ತೊ ಎಂಬುದ
ನಿನ್ನ ನೀ ತಿಳಿದು ತಿಳಿವಿನ ಕಣ್ಣಿಂದ ನೋಡಯ್ಯಾ.
ನಿಜಗುಣನೆಂಬ ಆನಂದರತ್ನವ
ನುಂಗಿದ ರುಚಿಯನು ಏನೆಂದು ಉಪಮಿಸುವೆ? ॥ ೩ ॥

೧೨೬೭

ಆನುಳ್ಳನ್ನಕ್ಕ ನೀನುಂಟೆಲೆ ಮಾಯೆ
ಆನಿಲ್ಲದಿರ್ದಡೆ ನೀನಿಲ್ಲ.

ಆನು ನೀನೆಂಬುಭಯವಳಿಯಲು
ಆನಂದ ನಿಜಗುಣಯೋಗ. ॥ ೪ ॥

೧೨೬೮

ಆರರ ಅಂತ್ಯವು ಮೂರರ ಅಂತ್ಯವು ಒಂದೆ,
ಭಾವ ಅವು ಆವಾವವಯ್ಯ ಎಂದಡೆ:
ಕಕ್ಷೆ, ಕಂಠ, ಕರಸ್ಥಲ, ಉರಸಜ್ಜೆ, ಉತ್ತಮಾಂಗ, ಅಮಳೋಕ್ಯ
ಇಂತೀ ಆರು ಸ್ಥಾನ ಬಾಹ್ಯವೆಂಬೆ.
ನಾಸಿಕಾಗ್ರ, ಭ್ರೂಮಧ್ಯ, ಬ್ರಹ್ಮರಂಧ್ರ
ಇಂತೀ ಮೂರರ ತುೂಯ ಚೌಕಮಧ್ಯವೆನಿಸುವದು.
ಅದರ ಕ್ರಮವೆಂತೆಂದಡೆ:
ಇಂತೀ ಮೂರು ಸ್ಥಾನದ ಮೇಲಣ
ಸಹಸ್ರದಳಕಮಲದೊಳಗೆ ತೋರುವ
ನಾಲ್ಕು ಕೋಣೆಯ ಚೌಕಮಧ್ಯ
ಅದರೊಳಗಿಪ್ಪ ಅಮೃತಮಯಲಿಂಗವ ಕಂಡು
ನೋಡುತ್ತ ನೋಡುತ್ತ ನಿಬ್ಬೆರಗಾದ ನಿಜಗುಣಾ. ॥ ೫ ॥

೧೨೬೯

ಕಕ್ಷೆ ಮೊದಲಾಗಿ ಅಮಳೋಕ್ಯ ಕಡೆಯಾಗಿ
ಆರು ಸ್ಥಾನ ಬಾಹ್ಯವೆಂಬೆ.
ನಾಸಿಕಾಗ್ರ ಭ್ರೂಮದ್ಯ ಬ್ರಹ್ಮರಂಧ್ರ ಚೌಕಮಧ್ಯವೆಂದು
ಈ ನಾಲ್ಕು ಸ್ಥಾನಗಳು ಅಭ್ಯಂತವಾಗಿಹವು.
ನಾಸಿಕಾಗ್ರದ ಗುರು ಭ್ರೂಮಧ್ಯವನೆಯ್ದಿದಡೆ
ಭ್ರೂಮಧ್ಯಕ್ಕೆ ಲಿಂಗವಾಯಿತ್ತು.
ಭ್ರೂಮಧ್ಯದ ಲಿಂಗವನರಿತಡೆ
ಬ್ರಹ್ಮರಂಧ್ರಕ್ಕೆ ಜಂಗಮವಾಯಿತ್ತು.
ಇಂತೀ ತ್ರಿವಿಧದರಿವೆ ಗದ್ದುಗೆ.
ಅದಕ್ಕೆ ಶ್ರುತಿ:
"ಗುರುಲಿಂಗ ಜಂಗಮಾಖ್ಯಾತ್ಯಂ ಮಹಾಲಿಂಗ ಚತುರ್ವಿಧಂ
ಯಥಾ ಚತುರ್ವಿಧಂ ಪೀಠಂ ಚಿತ್ಕಲಾ ಪರಿಪೂಜಿತಂ॥"
ಇಂತೆಂಬ ಚೌಕಮಧ್ಯದಲ್ಲಿ ಮಹಾಘನವ ನೋಡುತ್ತ
ನಿಬ್ಬೆರಗಾದ ನಿಜಗುಣಾ. ॥ ೬ ॥

೧೨೭೦

ಕಲ್ಲಿನ ಹುಳ್ಳಿಯ ನೀರಲ್ಲಿ ಹುಟ್ಟಿದ ಕಿಚ್ಚು
ತ್ರಿವಿಧಕ್ಕೂ ಅಲ್ಲಲ್ಲಿಯ ಗುಣವಲ್ಲಿಯದೆ,
ಬೇರೊಂದಕ್ಕೆಲ್ಲಿಯೂ ತೆರಪಿಲ್ಲ.
ಕಾಯಗುಣದಿಂದ ಕಲ್ಪಿತಕ್ಕೊಳಗಾಗಿ
ಜೀವಗುಣದಿಂದ ಭವಕ್ಕೆ ಬೀಜವಾಗಿ
ಅರಿದಿಹೆ ಗುಣದಿಂದ ಮರವೆಗೆ ಒಳಗಾಗಿ.
ಅರಿದಿಹೆನೆಂಬ ಅರಿವು ಕುರುಹುಗೊಳ್ಳದೆ ನಿಂದುದು
ನಿಜಗುಣ ಯೋಗಿಯ ಯೋಗಕ್ಕೆ
ಭಾವವಿಲ್ಲದ ಸೂತ್ರದ ಬಿಂಬ. ॥ ೭ ॥

೧೨೭೧

ಜಡ ಅಜಡವೆಂಬುಭಯ ಕೂಟ ಉಳ್ಳನ್ನಕ್ಕ
ನಾನೆಂಬುದದೇನು? ವಿಚಾರಕ್ಕೆ ನೀನೆಂಬುದದೇನು?
ಗೆಲ್ಲ ಸೋಲಕ್ಕೆ ಹೋರಿ ಒಳ್ಳಿದನಾದನೆಂಬಲ್ಲಿಯೆ
ಕಳ್ಳ ಕದ್ದ ಗಜವೆಲ್ಲಿ ಅಡಗಿ ಮಾರೂದು ಹೇಳಾ.
ಬಲ್ಲವನಾದೆನೆಂಬಲ್ಲಿಯೆ ಉಳಿಯಿತ್ತು
ನಿಜಗುಣಯೋಗಿಯ ಯೋಗಕ್ಕೆ ಸಲ್ಲದ ಗುಣ. ॥ ೮ ॥

೧೨೭೨

ದೊರೆಯವನ..... ವನ್ನ ಬರವ,
ದೊರೆಯವೆ ಇರಲಿಕೆ ಕಾಯ ಬವರಕ್ಕೆ ಗುರಿಯಹುದು.
ಕುರುಹಿಗೆ ಬಾರದೆ ಆಲಿನಿಂದ ಠಾವಿನಲ್ಲಿ
ನಿಜಗುಣನಿಹನು. ॥ ೯ ॥

೧೨೭೩

ನಿಜ ಹೃದಯಾಂಬುಜದಲ್ಲಿ
ನಿರಾಳ ಪ್ರಣಮ ಪೀಠವಾಗಿರ್ಪನೊರ್ವ
ಆಗೋಚರ ಶಿವಯೋಗಿಯು.
ಆತನೆರಡು ಗುಂಡು ಹೊಸೆದಡೆ

ಗೋಚರನಪ್ಪ ಕಾಣಾ,
ನಿಜಗುಣಲಿಂಗ ಸಾಕ್ಷಿಯಾಗಿ, ಸಿದ್ಧರಾಮಯ್ಯ. ॥ ೧೦ ॥

೧೨೭೪

ಪಥದೊಳಗಣ ಪ್ರತಿಷ್ಠೆಯ ಪೂಜಿಸಿ
ಸ್ವಯಂಭುವನರಿದುದಿಲ್ಲ,
ಅದನರಿಸಿ ಕಂಡುದುದಿಲ್ಲ;
ಸ್ವಯಕ್ಕೂ ವಚನಕ್ಕೂ ವಿರೋಧವಿಲ್ಲದೆ
ಉಭಯವಳಿದು ನಿಂದ
ನಿಜಗುಣಯೋಗಿಯ ಯೋಗವೆಂಬುದಿಲ್ಲ. ॥ ೧೧ ॥

೧೨೭೫

ಬಂದಲ್ಲಿ ನಿಂದು ಕಂಡು ಸಂದೇಹವಳಿದ ಮತ್ತೆ
ಬೇರಂದವ ಕೇಳುವುದಕ್ಕೆ ಕಂಗಳ ಸೂತಕಕ್ಕೆ ಇಂಬಿಲ್ಲ
ಆ ಉಭಯದಂಗದ ಸಂಗವ ಮರದಲ್ಲಿ
ನಿಜಗುಣಯೋಗಿಯ ಯೋಗ. ॥ ೧೨ ॥

೧೨೭೬

ಭಕ್ತನಾದಡೆ ಜಂಗಮುದಡಕದಲ್ಲಿ ಸಂದಿರಬೇಕು.
ಜಂಗಮವಾದಡೆ ಭಕ್ತನ ಕೈಯ ತತ್ತಲಗೂಸಿನಂತಿರಬೇಕು.
ಇದಲ್ಲದೆ,
ಭಕ್ತನೂ ನಾ(ನೆ ಜಂಗ) ಮವೂ ನಾನೆ ಎಂದಡಾ
ಇಬ್ಬರಿಗೂ ದಾರಿಯ ಕೊಡಲೊಲ್ಲೆ ಕಾಣಾ,
ಆನಂದ ನಿಜಗುಣಯೋಗಿ. ॥ ೧೩ ॥

೧೨೭೭

ಮಿಂಚಿನ ಸಂಚಾರದಂತೆ
ಬಹುವರ್ಣದ ಬಣ್ಣದ ಗನ್ನದಂತೆ,
ರಂಜನೆಯಲ್ಲಿ ರಂಜಿಸಿ ತೋರಿ ಅಡಗುವ ಪ್ರತಿಬಿಂಬವಂತೆ,
ಅಂಗವಿದ್ದಳಿದು ತೋರುವ ಜಲಮಣಿಯೊಳಗಿನಂತೆ
ನಿರಂಗದ ಸಂಗಕ್ಕೆ ಹೊರಗು
ನಿಜಗುಣಯೋಗಿಯ ಯೋಗ. ॥ ೧೪ ॥

೧೨೭೮

ವಾರಿಗಿದಿರಾದ ಕಾಷ್ಟ.
ಬವರಕ್ಕಿದಿರಾದ ಬಂಟ,
ಅರಿದೊರೆಗೆ ಇದಿರಾದ ದೊರೆ
ಮರಳುವದಕ್ಕೆ ನೆರೆ ಸ್ವಪ್ನ.
ಕಾಯ ಜೀವಕ್ಕಿದಿರಾದ ಅರಿವು
ಭಾವಕ್ಕೆ ಕುರುಹುಗೊಡಲಿಲ್ಲ.
ಉಭಯವಳಿದಲ್ಲದೆ ನಿಜಗುಣಯೋಗಿಯ ಯೋಗಕ್ಕೆ
ಹೊರಗಲ್ಲ. ॥ ೧೫ ॥

೧೨೭೯

ಸರ್ವಮಯ ಆತ್ಮನೆಂದಲ್ಲಿ
ರಕ್ಷಿಸಿ ಶಿಕ್ಷಿಸಿಹೆನೆಂಬುದೇನೊ?
'ಅಣೋರಣೀಯಾನ್ಮಹತೋಮಹೀಯಾನ್' ಎಂಬಲ್ಲಿ
ಬೇರೊಂದರಿತು ಕುರಿತು ಕಾಬುದೇನು?
ಇದಿರಿಗೆ ತಾನಿಲ್ಲ, ತನಗೆ ಇದಿರಿಲ್ಲ ಎಂದಲ್ಲಿ
ಗಜಬಜೆಯಲ್ಲಿ ಕುಜನವೇತಕ್ಕೆ?
ಬೇರಿಗೆ ನೀರನೆರೆದಲ್ಲಿ ಶಾಖೆಗೆ ಸಂದುಂಟೆ?
ಅಂಗ ಪ್ರಾಣಲಿಂಗ ಒಂದೆಂದಲ್ಲಿ
ಅರ್ಪಿತಕ್ಕೆ ಹಿಂದು ಮುಂದಿಲ್ಲ.
ನಿಜಗುಣಯೋಗಿಯ ಯೋಗಕ್ಕೆ ಮುನ್ನವೆ ಇಲ್ಲ. ॥ ೧೬ ॥

# ನಿವೃತ್ತಿ ಸಂಗಯ್ಯನ ವಚನ

೧೨೮೦

ಪರಧನ ಪರಾನ್ನ ಪರಸ್ತ್ರೀಯರಾಸೆ ಬಿಡದು, ಶರಣನೆಂತೆಂಬೆ
ಮರುಳೆ?
"ಜಿಹ್ವೆದಗ್ಧ ಪರಾನ್ನಂಚ ಹಸ್ತದಗ್ಧ ಪ್ರತಿಗ್ರಹಂ
ಚಕ್ಷುದಗ್ಧ ಪರಸ್ತ್ರೀನಾಂ ತಸ್ಯ ಜನ್ಮ ನಿರರ್ಥಕಂ"
ಎಂದು ಶ್ರುತಿ ಸಾರಲು ಮತಿಗೆಡುವನಕಟಾ,
ನಿವೃತ್ತಿ ಸಂಗಯ್ಯನೆಂತೊಲಿವನವ್ವಾ! ॥ ೧ ॥

೧೨೮೧

ಬ್ರಾಹ್ಮಣ ಶಿವಭಕ್ತನಾದ ಬಳಿಕ ಬ್ರಾಹ್ಮಣರ ಬೆರಸಲಾಗದು.
ಕ್ಷತ್ರಿಯ ಶಿವಭಕ್ತನಾದ ಬಳಿಕ ಕ್ಷತ್ರಿಯರ ಬೆರಸಲಾಗದು.
ವೈಶ್ಯ ಶಿವಭಕ್ತನಾದ ಬಳಿಕ ವೈಶ್ಯರ ಬೆರಸಲಾಗದು.
ಶೂದ್ರ ಶಿವಭಕ್ತನಾದ ಬಳಿಕ ಶೂದ್ರರ ಬೆರಸಲಾಗದು.
ಇವರ ಜೀವದತೀತರ ಜಾತಿಯ ಉದ್ಭವಮಂ
ಇವದಿರ ಕಾಯಕ ಕುಲದರುಶನ ಪಕ್ಷ
ಸಪ್ತಧಾತು ಸರಿಯೆಂದೆಂಬರೆ
"ಕೃತಂ ಜೀವಂ ಕೃತಂ ಫಲಂ"
ಅಗ್ರಜ ಮೊದಲು ಅಂತ್ಯಜ ಕಡೆ
"ಬ್ರಾಹ್ಮಣ ಕ್ಷತ್ರಿಯ ವೈಶ್ಯ
ಶೂದ್ರೋವಾ ಗುರುಹಸ್ತಯೋ॥
ಪ್ರತಿ ಭೋಜನ ಕರ್ತವ್ಯಂ
ಕರ್ತವ್ಯಂ ಪುನರ್ವತಾಯೋ"
ನಿವೃತ್ತಿ ಸಂಗಯ್ಯದೇವ ಬಲ್ಲ.
ಜಾತಿ ವಿಚಾರದ ಭೇದವ ಬಿಟ್ಟರೆ ಬಿಡುವುದು
ಬಿಡದಿರ್ದಡೆ ತಮ್ಮ ಮುನ್ನಿನಂತಿಹುದು. ॥ ೨ ॥

೧೨೮೨

ಸಚರಾಚರವೆಲ್ಲಕ್ಕೆ ಆಸೆಯೆ ಪ್ರಾಣ.
ಸಚರಾಚರದ ಚತುರಾಸಿ ಬಲದೊಳಗೆ
ಆಸೆಯಿಲ್ಲದೆ ಚರಿಸುವ ಲಿಂಗಾಂಗಿಯ ತೋರಾ.
"ಆಸೆಯಾ ಬದ್ಧತೇ ಲೋಕೇ
ಕರ್ಮಣಾ ಬಹು ಬಂತಯಾ
ಆಯು ಕ್ಷೀಣನ ಜಾನಾತಿ
ಮೇಣುಸೂತ್ರ ವಿಧೀಯತೇ"
ಎಂದುದಾಗಿ, ಆಸೆಯನೆ ಧಿಕ್ಕರಿಸಿ
ನಿರಾಸೆಯಲಿ ನಡೆವವರ ಸರಿಯೆಂಬೆ ಕಾಣಾ,
ನಿವೃತ್ತಿ ಸಂಗಯ್ಯ. ॥ ೩ ॥

## ನುಲಿಯ ಚಂದಯ್ಯನ ವಚನ

೧೨೮೩

ಅಂದು ಹೋಗಿ ಇಂದು ಬಾ ಎಂದಾಗ ದಂದುಗಕ್ಕೊಡಲುಂಟೆ?
ಘನಲಿಂಗ ಎಲ್ಲಿದ್ದಡೂ ಪರಿಪೂರ್ಣ,
ಚಂದೇಶ್ವರಲಿಂಗವು. ॥ ೧ ॥

೧೨೮೪

ಆವಾವ ಕಾಯಕದಲ್ಲಿ ಬಂದಡೂ ಭಾವಶುದ್ಧವಾಗಿ
ಗುರು-ಲಿಂಗ-ಜಂಗಮಕ್ಕೆ ಮಾಡುವುದೇ ಶಿವಪೂಜೆ.
ಮಾಡುವ ಮಾಟವಿಲ್ಲದೆ ಮಾತಿಂಗೆ ಮಾತಾಡುವುದು
ಅದೇತರ ಪೂಜೆ?
ಅದು ಚಂದೇಶ್ವರಲಿಂಗಕ್ಕೆ ಒಪ್ಪವಲ್ಲ, ಮಡಿವಾಳಯ್ಯಾ. ॥ ೨ ॥

೧೨೮೫

ಇದಿರ ಭೂತಹಿತಕ್ಕಾಗಿ ಗುರುಭಕ್ತಿಯ ಮಾಡಲಿಲ್ಲ.
ಅರ್ತಿಗಾರಿಕೆಯಾಗಿ ಲಿಂಗವ ಬಿಟ್ಟು ಪೂಜಿಸಲಿಲ್ಲ.
ರಾಜ ಚೋರರ ಭಯಕ್ಕಂಜಿ ಜಂಗಮ ದಾಸೋಹವ
ಮಾಡಲಿಲ್ಲ.
ಆವ ಕೃಪೆಯಾದಡೂ ಭಾವ ಶುದ್ಧವಾಗಿರಬೇಕು,
ಚನ್ನಬಸವಣ್ಣಪ್ರಿಯ ಚಂದೇಶ್ವರಲಿಂಗವನರಿಯ ಬಲ್ಲಡೆ. ॥ ೩ ॥

೧೨೮೬

ಇಷ್ಟಲಿಂಗ ಗುರುವಿನ ಹಂಗು,
ಚಿತ್ತ ಕಾಮನ ಹಂಗು,

ಪೂಜೆ-ಪುಣ್ಯ ಮಹಾದೇವನ ಹಂಗು;
ಎನ್ನ ದಾಸೋಹ ಆರ ಹಂಗೂ ಇಲ್ಲ.
ಚನ್ನಬಸವಣ್ಣಪ್ರಿಯ ಚಂದೇಶ್ವರಲಿಂಗವೆ,
ಕಣ್ಣಿಯ ಮಾಡಬಲ್ಲಡೆ ಬಾ, ಎನ್ನ ತಂದೆ. ॥ ೪ ॥

೧೨೮೭

ಇಷ್ಟವೆಂಬುದು ಗುರುವಿನ ಹಂಗು
ಆ ಗುರುವಿಂಗೆಯು, ಇಷ್ಟಲಿಂಗಕ್ಕೆಯು,
ಜಂಗಮವೆ ಪ್ರಾಣಾಪದವೆಂದರಿದ ಬಳಿಕ
ಆ ಗುರುವೂ ಇಷ್ಟವೂ ಜಂಗಮದಲ್ಲಿಯೇ ಅಡಕ ನೋಡಾ!
ಆ ಗುರುವೂ ಲಿಂಗವೂ ಜಂಗಮದ ಹಂಗಿಗರು!
ಇದು ಕಾರಣ ಚಂದೇಶ್ವರಲಿಂಗಕ್ಕೆ ಕಣ್ಣಿಯ ಮಾಡಬಲ್ಲಡೆ
ಬಾರಾ ಎನ್ನ ತಂದೆ. ॥ ೫ ॥

೧೨೮೮

ಎನ್ನಂಗದ ಸತ್ಕ್ರೀ ಸಂಗನ ಬಸವಣ್ಣನು
ಎನ್ನ ಲಿಂಗದ ಸತ್ಕ್ರೀ ಚನ್ನಬಸವಣ್ಣನು.
ಎನ್ನ ಅರುಹಿನ ಸತ್ಕ್ರೀ ಪ್ರಭುವೆ ನೀವು ನೋಡಾ!
ಎನ್ನ ದಾಸೋಹದ ನೈಷ್ಠೆಯೇ ಮಡಿವಾಳಯ್ಯನು!
ಇಂತೀ ಅಂಗ ಲಿಂಗ ಜ್ಞಾನ ದಾಸೋಹ
ಇವು ಮುಂತಾದವೆಲ್ಲವೂ ನಿಮ್ಮ ಪುರಾತನರಾದ ಕಾರಣ
ಚಂದೇಶ್ವರಲಿಂಗದಲ್ಲಿ ಚನ್ನಬಸವಣ್ಣನ ಕೃಪೆಯಿಂದ
ನಿಮ್ಮ ಶ್ರೀಪಾದವ ಬೆರಸಿದೆನಯ್ಯಾ ಪ್ರಭುವೇ! ॥ ೬ ॥

೧೨೮೯

ಎನ್ನ ಸತ್ಕ್ರೀ ಸಂಗನಬಸವಣ್ಣ
ಎನ್ನ ಸುಜ್ಞಾನವೇ ಚನ್ನಬಸವಣ್ಣ
ಈ ಎರಡರ ಏಕೀಭಾವವೇ ಪ್ರಭುವೆ ನೀವು ನೋಡಾ!
ನಿಮ್ಮೆಲ್ಲರ ನೈಷ್ಠಯೇ ಮಡಿವಾಳಯ್ಯನು!
ಇಂತೀ ಚತುರ್ವಿಧವೆನಗೆ ಬೇಕಾದ ಕಾರಣ
ಇಷ್ಟಲಿಂಗದ ಸೇವೆ ಚರಲಿಂಗದ ದಾಸೋಹವೆಂಬುದನು

ಬಸವಣ್ಣಪ್ರಿಯ ಚಂದೇಶ್ವರಲಿಂಗದಲ್ಲಿ
ಚನ್ನಬಸವಣ್ಣನ ಕೈಯಲ್ಲಿ ಎನಗೆ ತಿಳುಹಿಕೊಡಾ ಪ್ರಭುವೆ!!! ೭ ॥

೧೨೯೦

ಒಂದ ಬಿಟ್ಟು ಒಂದು ಹಿಡುವಲ್ಲಿ ಮೂರರಂಗ ಒಂದೂ ಇಲ್ಲ.
ಹಿಡಿದ ಭಾವ ಒಂದುಂಟಾಯಿತ್ತಾದಡೆ,
ಉಭಯದಂಗ ಸಲೆ ಸಂದಿತ್ತು
ಚಂದೇಶ್ವರಲಿಂಗಕ್ಕೆ ಮಡಿವಾಳಯ್ಯಾ. ॥ ೮ ॥

೧೨೯೧

ಕಂದಿಸಿ ಕುಂದಿಸಿ ಬಂಧಿಸಿ ಕಂಡವರ ಬೇಡಿತಂದು
ಜಂಗಮಕ್ಕೆ ಮಾಡಿದೆನೆಂಬ ದಂದುಗದೋಹರ ಲಿಂಗಕ್ಕೆ
ನೈವೇದ್ಯ ಸಲ್ಲ.
ತನು ಕರಗಿ ಮನ ಬಳಲಿ ಬಂದ ಚರದ ಅನುವರಿತು
ಸಂದಿಲ್ಲದೆ ಸಂಶಯವಿಲ್ಲದೆ ಜಂಗಮಲಿಂಗಕ್ಕೆ
ದಾಸೋಹವ ಮಾಡುವುದೆ ಮಾಟ.
ಕಾಶಿಯ ಕಾಯಿ ಕಾಡಿನ ಸೋಪ್ಪಾಯಿತ್ತಾದಡೂ
ಕಾಯಕದಿಂದ ಬಂದುದು ಲಿಂಗಾರ್ಪಿತ.
ಚನ್ನಬಸವಣ್ಣಪ್ರಿಯ ಚಂದೇಶ್ವರಲಿಂಗಕ್ಕೆ ನೈವೇದ
ಸಂದಿತ್ತು. ॥ ೯ ॥

೧೨೯೨

ಕಾಯದಿಂದ ಕಾಬುದು ಕುರುಹಿನ ಮೂರ್ತಿಯ.
ಆತ್ಮದಿಂದ ಕಾಬುದು ಅರಿವಿನ ಮೂರ್ತಿಯ.
ಅರಿವ ಕುರುಹ ಮರೆದಲ್ಲಿ
ಪರಮ ದಾಸೋಹದಿಂದ ಪರಶಿವಮೂರ್ತಿಯ ಕಾಣಬಂದಿತ್ತು.
ಚನ್ನಬಸವಣ್ಣಪ್ರಿಯ ಚಂದೇಶ್ವರ ನೀನೆ ಬಲ್ಲೆ. ॥ ೧೦ ॥

೧೨೯೩

ಕಾಯವಿಡಿದು ಕಾಬುದೆಲ್ಲವು ಗುರುವಿನ ಭೇವ.
ಜೀವವಿಡಿದು ಕಾಬುದೆಲ್ಲವು ಲಿಂಗದ ಭೇವ.
ಜ್ಞಾನವಿಡಿದು ಕಾಬುದೆಲ್ಲವು ಜಂಗಮದ ಭೇವ

ಮೂರನರಿತು ಬೇರೊಂದ ಕಾಬುದೆಲ್ಲವು ಮಹಾಪ್ರಕಾಶ
ಚನ್ನಬಸವಣ್ಣಪ್ರಿಯ ಚಂದೇಶ್ವರಲಿಂಗಕ್ಕೆ ಶಬ್ದಮುಗ್ಧವಾದ
ಭೇದ. ॥ ೧೧ ॥

೧೨೯೪

ಕೈದ ಹಿಡಿದಾಡುವರೆಲ್ಲರು ಇರಿಯಬಲ್ಲರೆ?
ಸಾಧನೆಯ ಮಾಡುವ ಬಾಲರೆಲ್ಲರೂ ಕಾದಬಲ್ಲರೆ?
ಅರ್ತಿಗೆ ಮಾಡುವ ಕೃತ್ಯವಂತರೆಲ್ಲರೂ ಸದ್ಭಕ್ತರಪ್ಪರೆ?
ಅದು ಚಂದೇಶ್ವರಲಿಂಗಕ್ಕೆ ಸಲ್ಲದ ಮಾಟ. ॥ ೧೨ ॥

೧೨೯೫

ಗುರು ಇಷ್ಟವ ಕೊಟ್ಟು ಕೂಲಿಗೆ ಕಟ್ಟಿದ ಲಿಂಗ
ವೃಷ್ಟವ ತೋರಿ ತನ್ನ ರಜತದ ಬೆಟ್ಟದ ಮೇಲಿರಿಸಿದ.
ಇಂತು ಗುರುಲಿಂಗಕ್ಕೆ ಮಾಡಿ
ಹಿಂದಣ ಮುಂದಣ ಸಂದೇಹಕ್ಕೀಡಾದೆ.
ಪ್ರಸಿದ್ಧವಪ್ಪ ಜಂಗಮಲಿಂಗಕ್ಕೆ ಸಂದೇಹವಿಲ್ಲದೆ
ಮನಸಂದು ಮಾಡಲಾಗಿ
ಚಂದೇಶ್ವರಲಿಂಗಕ್ಕೆ ಹಿಂದುಮುಂದೆಂಬುದಿಲ್ಲ. ॥ ೧೩ ॥

೧೨೯೬

ಗುರುಪೂಜಕರು ಲಿಂಗವನೆತ್ತ ಬಲ್ಲರು?
ಲಿಂಗಪೂಜಕರು ಜಂಗಮವನೆತ್ತ ಬಲ್ಲರು?
ಜಂಗಮ-ದಾಸೋಹವೆಂಬುದು ಉಭಯದ ಸಂಗನಾಸ್ತಿ;
ಚಂದೇಶ್ವರಲಿಂಗವೆಂಬ ಲಿಂಗದ ಪೂಜೆ. ॥ ೧೪ ॥

೧೨೯೭

ಗುರುವ ಕುರಿತು ಮಾಡುವಲ್ಲಿ
ಬ್ರಹ್ಮನ ಭಜನೆಯ ಹರಿಯಬೇಕು.
ಲಿಂಗವ ಕುರಿತು ಮಾಡುವಲ್ಲಿ
ವಿಷ್ಣುವಿನ ಸಂತೋಷಕ್ಕೆ ಸಿಕ್ಕದಿರಬೇಕು.
ಜಂಗಮವ ಕುರಿತು ಮಾಡುವಲ್ಲಿ

ರುದ್ರನ ಪಾಶವ ಹೊದ್ದದಿರಬೇಕು.
ಒಂದವನರಿದು ಒಂದ ಮರೆದು
ಸಂದಿಲ್ಲದ ಸುಖ ಜಂಗಮ ದಾಸೋಹದಲ್ಲಿ
ಸಂಗನ ಬಸವಣ್ಣ ನಿತ್ಯ ಚಂದೇಶ್ವರಲಿಂಗಕ್ಕೆ ತಲಪಿ. ॥ ೧೫ ॥

೧೨೯೮

ಶ್ರೀಗುರುವ ತಾನರಿದು ಪರಗುರು ತಾನಾಗಬೇಕು.
ಲಿಂಗನೈಷ್ಠಿಕೆಯಾಗಿ ಪೂಜಿಸಿಕೊಳಬೇಕು.
ಜಂಗಮ ತಾ ತ್ರಿವಿಧವ ಮರೆದು
ಜಂಘೆ ನಾಸ್ತಿಯಾಗಿ ಜಂಗಮವಾಗಬೇಕು.
ಜಂಗಮಕ್ಕೆ ಮಾಡಿ ನೀಡಿ ಸಂದು ಸಂಶಯವನಳಿದು
ನಮ್ಮ ಚಂದೇಶ್ವರಲಿಂಗವನರಿಯಬೇಕು ಕಾಣಾ,
ಎಲೆ ಅಲ್ಲಮಪ್ರಭುವೆ. ॥ ೧೬ ॥

೧೨೯೯

ಗುರುವರಿದಲ್ಲಿ ಬ್ರಹ್ಮನ ಕಲ್ಪ ಹರಿವುದು.
ಲಿಂಗವನರಿದಲ್ಲಿ ವಿಷ್ಣುವಿನ ಸ್ಥಿತಿಯ ಹರಿವುದು.
ಜಂಗಮವನರಿದಲ್ಲಿ ರುದ್ರನ ಲಯಕ್ಕೆ ಸಿಕ್ಕ.
ಈ ತ್ರಿವಿಧ ಭೇದವನರಿದು, ತನ್ನ ತಾನರಿದಲ್ಲಿ
ಬಂಧ ಮೋಕ್ಷ ಕರ್ಮ ಒಂದೂ ಇಲ್ಲ.
ಚನ್ನಬಸವಣ್ಣಪ್ರಿಯ ಚಂದೇಶ್ವರಲಿಂಗವನರಿದಲ್ಲಿ. ॥ ೧೭ ॥

೧೩೦೦

ಗುರುವನರಿತು ಮಾಡುವಲ್ಲಿ ಅಹಂಕಾರವ ಮರೆದು
ಮಾಡಬೇಕು.
ಲಿಂಗವನರಿತು ಮನಮುಟ್ಟುವಲ್ಲಿ ಪ್ರಕೃತಿ ತಲೆದೋರದಿರಕಬೇಕು
ಜಂಗಮವನರಿತು ಮುಟ್ಟಿ ಪೂಜಿಸುವಲ್ಲಿ
ಅರ್ಥ ಪ್ರಾಣ ಅಪಮಾನ ಈ ಮೂರರಲ್ಲಿ ನಿಶ್ಚಯವಾಗಿರಬೇಕು
ಸಂಗನಬಸವಣ್ಣಪ್ರಿಯ ಚಂದೇಶ್ವರಲಿಂಗವನರಿಯ-
ಬಲ್ಲಡೆ. ॥ ೧೮ ॥

೧೩೦೧

ಗುರುವನರಿದಲ್ಲಿ ಉತ್ಪತ್ಯಕ್ಕೆ ಹೊರಗಾಗಬೇಕು.
ಲಿಂಗವನರಿದಲ್ಲಿ ಸ್ಥಿತಿಗೆ ಹೊರಗಾಗಬೇಕು.
ಜಂಗಮವನರಿದಲ್ಲಿ ಲಯಕ್ಕೆ ಹೊರಗಾಗಬೇಕು.
ಈ ಗುಣವನರಿದಲ್ಲದೆ ಸದ್ಭಕ್ತನಲ್ಲ.
ಚನ್ನಬಸವಣ್ಣಪ್ರಿಯ ಚಂದೇಶ್ವರಲಿಂಗವ ಕಾಣಬಾರದು.॥ ೧೯ ॥

೧೩೦೨

ಗುರುವ ವಿಶ್ವಾಸಿಸಿದಲ್ಲಿ ಬಂಧನವಿಲ್ಲದಿಪ್ಪುದು.
ಲಿಂಗವ ವಿಶ್ವಾಸಿಸಿದಲ್ಲಿ ಭವವಿಲ್ಲದಿಪ್ಪುದು.
ಜಂಗಮವ ವಿಶ್ವಾಸಿಸಿದಲ್ಲಿ ಇಹ-ಪರ ಉಭಯವಿಲ್ಲ,
ಚನ್ನಬಸವಣ್ಣಪ್ರಿಯ ಚಂದೇಶ್ವರಲಿಂಗವನರಿಯಲಾಗಿ. ॥ ೨೦ ॥

೧೩೦೩

ಗುರುವಾದಡೂ ಕಾಯಕದಿಂದವೆ ಜೀವನ್ಮುಕ್ತಿ.
ಲಿಂಗವಾದಡೂ ಕಾಯಕದಿಂದವೆ ವೇಷದ ಪಾಶ ಹರಿವುದು.
ಗುರುವಾದಡೂ ಚರಸೇವೆಯ ಮಾಡಬೇಕು
ಲಿಂಗವಾದಡೂ ಚರಸೇವೆಯ ಮಾಡಬೇಕು.
ಜಂಗಮವಾದಡೂ ಚರಸೇವೆಯ ಮಾಡಬೇಕು
ಚನ್ನಬಸವಣ್ಣಪ್ರಿಯ ಚಂದೇಶ್ವರಲಿಂಗದ ಅರಿವು. ॥ ೨೧ ॥

೧೩೦೪

ಗುರುವಿಗೆ ತನುವೆಂದಲ್ಲಿ, ಲಿಂಗಕ್ಕೆ ಮನವೆಂದಲ್ಲಿ
ಜಂಗಮಕ್ಕೆ ಧನವೆಂದಲ್ಲಿ
ಮತ್ತೊಂದರಾಸೆಗೆ ಕೊಂಡಾಡಲೇತಕ್ಕೆ?
ಆ ಗುಣ ಚಂದೇಶ್ವರಲಿಂಗಕ್ಕೆ ದೂರ. ॥ ೨೨ ॥

೧೩೦೫

ಗುರುವಿಂಗೆ ಮೋಹಿತವಾಗಿ ಮಾಡುವಲ್ಲಿ
ಮನ ಲಿಂಗವ ಮುಟ್ಟದಿರಬೇಕು.

ಲಿಂಗಕ್ಕೆ ಮೋಹಿತವಾಗಿ ಮಾಡುವಲ್ಲಿ
ಮನ ಜಂಗಮವ ಮುಟ್ಟದಿರಬೇಕು.
ಜಂಗಮಕ್ಕೆ ಮೋಹಿತವಾಗಿ ಮಾಡುವಲ್ಲಿ
ಮೂರು ಮಲತ್ರಯವ ಮುಟ್ಟದಿರಬೇಕು.
ಆ ಘನವನರಿತು ಮಾಡುವಲ್ಲಿ
ಸಂಗನ ಬಸವಣ್ಣಪ್ರಿಯ ಚಂದೇಶ್ವರಲಿಂಗಕ್ಕೆ ಅರ್ಪಿತ. ॥ ೨೩ ॥

೧೩೦೬

ಗುರು ಶಿಷ್ಯಂಗೆ ಭೋಧಿಸುವಲ್ಲಿ
ತನ್ನನಳಿದು ಲಿಂಗವ ತೋರಿಸಬೇಕು.
ಲಿಂಗದ ಸಂಗ ನೆನಹಾದಲ್ಲಿ ಆ ಲಿಂಗಕ್ಕೆ
ಉಂಬ ಬಾಯಿ ಜಂಗಮವಾದ ಕಾರಣ,
ಆ ಜಂಗಮಲಿಂಗದ ದಾಸೋಹದಿಂದ ಬೇರೊಂದಂಗವಿಲ್ಲ.
ಸಂಗನಬಸವಣ್ಣಪ್ರಿಯ ಚಂದೇಶ್ವರಲಿಂಗವು
ಹಿಂಗದ ಭಾವ ಕಾಣಾ ಮಡಿವಾಳಯ್ಯಾ. ॥ ೨೪ ॥

೧೩೦೭

ಗುರುವಿನಲ್ಲಿ ಶುದ್ಧಾತ್ಮನಾದಲ್ಲಿ
ಲಿಂಗದಲ್ಲಿ ಸಲೆಸಂದು, ಜಂಗಮದಲ್ಲಿ ಹೆರೆ ಹಿಂಗದೆ
ಮನ ಭಾವ ಕರಣಂಗಳಲ್ಲಿ ಒಂದೂ ತೋರದಿದ್ದುದು
ಚಂದೇಶ್ವರಲಿಂಗಕ್ಕೆ ನಿಜ ನಿಂದುದು ಮಡಿವಾಳಯ್ಯಾ. ॥ ೨೫ ॥

೧೩೦೮

ಗುರುಸೇವೆಯ ಮಾಡುವಲ್ಲಿ ಇಹದಲ್ಲಿ ಸುಖ;
ಲಿಂಗಸೇವೆಯ ಮಾಡುವಲ್ಲಿ ಪರದಲ್ಲಿ ಸುಖ;
ಜಂಗಮಸೇವೆಯ ಮಾಡುವಲ್ಲಿ
ಇಹ-ಪರವೆಂಬ ಉಭಯವು ನಾಸ್ತಿ,
ಚಂದೇಶ್ವರಲಿಂಗವ ಹಿಂಗದ ಭಾವ. ॥ ೨೬ ॥

೧೩೦೯

ಗೋಡೆಯ ತೋಳೆದು ಕೆಸರ ಕೆಡಿಸಿಹೆನೆಂದಡೆ,
ಆದಾರ ವಶ?

ನೇಮಕ್ಕೆ ಕಡೆ ನಡು ಮೊದಲಿಲ್ಲ.
ಒಂದ ಬಿಟ್ಟು ಒಂದ ಹಿಡಿದೆಹೆನೆಂದಡೆ, ಸಂದಿಲ್ಲದ ಸಂಶಯ.
ಅದು ಚಂದೇಶ್ವರಲಿಂಗಕ್ಕೆ ದೂರ ಮಡಿವಾಳಯ್ಯಾ. ॥ ೨೭ ॥

೧೩೧೦

ಚಾಪ ಕಪಿ(ತ್ಥ)ದ ಕಾಯ ಕೂಡಿ ಹಿಡಿದು ಎಸೆಯಬುಹುದೆ?
ಪೂಜೆಗೆ ಷೋಡಶ ಉಪಚರಿಯಬೇಕು.
ಮಾಡುವನ್ನಬರ ಕಾಯಕ ನಿಂದಿತ್ತು.
ಕಾಯಕದೊದಗೆ ಮೂರರ ಕೂಟ ಚಂದೇಶ್ವರಲಿಂಗಕ್ಕೆ
ಮಡಿವಾಳಯ್ಯಾ. ॥ ೨೮ ॥

೧೩೧೧

ಜಂಗಮ ನಮಸ್ಕಾರವೆ ಗುರುಪೂಜೆ,
ಜಂಗಮ ಪೂಜೆಯೆ ಲಿಂಗಪೂಜೆ,
ಜಂಗಮ ತೃಪ್ತಿಯೆ ತನಗೆ ಪ್ರಸನ್ನ.
ತನಗೆ ಪ್ರಸನ್ನವಾದುದೆ ನಿತ್ಯಪ್ರಸಾದದಾಗು,
ಚನ್ನಬಸವಣ್ಣಪ್ರಿಯ ಚಂದೇಶ್ವರಲಿಂಗಕ್ಕೆ ಕಟ್ಟುಗೊತ್ತು ಕಾಣಾ!
ಸಂಗನ ಬಸವಣ್ಣ ಪ್ರಭುವೆ. ॥ ೨೯ ॥

೧೩೧೨

ಜಂಗಮಸೇವೆಯ ಚಿತ್ತ ಶುದ್ಧವಾಗಿ ಮಾಡುವಲ್ಲಿ
ಗುರುಸೇವೆ ಸಂದಿತ್ತು.
ಜಂಗಮಸೆವೆಯ ಚಿತ್ತಶುದ್ಧವಾಗಿ ಮಾಡಲಾಗಿ
ಲಿಂಗಪೂಜೆ ಸಂದಿತ್ತು.
ಜಂಗಮದಾಸೋಹದಿಂದ ಸರ್ವ ಪದವಾಯಿತ್ತು.
ಆ ಗುಣವನರಿದು ಹರಿಯಲಾಗಿ
ಬಟ್ಟಬಯಲು ಕಾಣಬಂದಿತ್ತು.
ಹುಟ್ಟುವ ಹೊಂದುವ ನೆಲೆ ಇತ್ತಲೆ ಉಳಿಯಿತ್ತು
ಚನ್ನಬಸವಣ್ಣಪ್ರಿಯ ಚಂದೇಶ್ವರ ಲಿಂಗವನರಿಯಲಾಗಿ. ॥ ೩೦ ॥

೧೩೧೩

ಜಲಚರಕೇಕೆ ತೆಪ್ಪದ ಹಂಗು?
ವಿಹಂಗಗೇಕೆ ಅಡಿವಜ್ಜೆಯ ಮೆಟ್ಟು?

ಮಧುರರಸಕ್ಕೇಕೆ ಮೇಲಪ್ಪ ಸಿಹಿ?
ಕಲ್ಪವೃಕ್ಷಕ್ಕೇಕೆ ಕಾಲದ ಹಂಗು?
ದಾಸೋಹವನರಿದು ಮಾಡುವಂಗೆ ಇನ್ನೇತರ ಪೂಜೆ ಪುಣ್ಯ?
ಚನ್ನಬಸವಣ್ಣಪ್ರಿಯ ಚಂದೇಶ್ವರಲಿಂಗಕ್ಕೆ
ಎಡೆದೆರಪಿಲ್ಲ. ॥ ೩೧ ॥

೧೩೧೪

ತನ್ನ ಮನವನರಿದಿಪ್ಪುದು ಗುರುಭಕ್ತಿ.
ತನ್ನ ಭಾವವನರಿದಿಪ್ಪುದು ಲಿಂಗಭಕ್ತಿ.
ತ್ರಿವಿಧ ಮಲವ ಮರೆದಿಪ್ಪುದು ಜಂಗಮಭಕ್ತಿ.
ಈ ಗುಣ ನಿಶ್ಚಯವಾಗಿ ನಿಂದುದು
ಚನ್ನಬಸವಣ್ಣಪ್ರಿಯ ಚಂದೇಶ್ವರ ಲಿಂಗವನರಿದುದು. ॥ ೩೨ ॥

೧೩೧೫

ನಾನೆಂಬುದ ಮರೆದಲ್ಲಿ ಗುರುಸ್ಥಲ.
ಜಗದ ಆಗುಭೇಗೆಗೆ ಸಿಕ್ಕದಿಪ್ಪುದು ಲಿಂಗಸ್ಥಲ.
ತ್ರಿವಿಧದ ಬಟ್ಟೆಗೆ ಬಾರದಿಪ್ಪುದು ಜಂಗಮಸ್ಥಲ.
ಅಂಗವರತು, ಮನದ ಪ್ರಕೃತಿ ನಿಂದು, ಗುರು ಲಿಂಗ ಜಂಗಮದ
ತ್ರಿವಿಧಾಂಗದದಲ್ಲಿ ನಿಶ್ಚಯವಾದ ಸದ್ಭಕ್ತ
ಚನ್ನಬಸವಣ್ಣಪ್ರಿಯ ಚಂದೇಶ್ವರಲಿಂಗವು ತಾನೆ. ॥ ೩೩ ॥

೧೩೧೬

ನಾನೆಂದು ಇಹನ್ನಬರ ಗುರುಪೂಜೆಯ ಮಾಡಬೇಕು.
ನಾನೆಂದು ಇಹನ್ನಬರ ಲಿಂಗಪೂಜೆಯ ಮಾಡಬೇಕು.
ನಾನೆಂದು ಇಹನ್ನಬರ ಜಂಗಮಪೂಜೆಯ ಮಾಡಬೇಕು.
ನಾ ನೀನೆಂಬುಭಯವಳಿಯೆ
ಚನ್ನಬಸವಣ್ಣಪ್ರಿಯ ಚಂದೇಶ್ವರಲಿಂಗವ ಏನೂ
ಎನಲಿಲ್ಲ. ॥ ೩೪ ॥

೧೩೧೭

ನುಡಿವ ಮಾತಿಂಗೆ ತಡಬಡ ಬಂದಲ್ಲಿ
ನುಡಿದ ಭಾಷೆಗೆ ಭಂಗ ನೋಡಾ.

ಹಿಡಿದ ಕುಳಕ್ಕೆ ಹಾನಿ ಬಂದಲ್ಲಿ
ಒಡಲನಿರಿಸುವದೆ ಭಂಗ ನೋಡಯ್ಯಾ.
ಇದು ಕಾರಣ ನಡೆ ನುಡಿ ಶುದ್ಧವಿಲ್ಲದಿದ್ದಡೆ
ಚಂದೇಶ್ವರಲಿಂಗವಾದಡೂ ತಪ್ಪನೊಳಕೊಳ್ಳ ಕಾಣಾ
ಮಡಿವಾಳಯ್ಯಾ. ॥ ೩೫ ॥

೧೩೧೮

ಪರವ ಕುರಿತು ಮಾಡುವನ್ನಬರ, ಇಹಕ್ಕೆ ಗೊತ್ತಾಯಿತ್ತು.
ಇಹ ಪರವನರಿತು ಮಾಡಬೇಕು.
ದ್ವಂದ್ವವಳಿದು ನಿಂದ ಮಾಟ
ಚನ್ನಬಸವಣ್ಣಪ್ರಿಯ ಚಂದೇಶ್ವರಲಿಂಗಕ್ಕೆ. ॥ ೩೬ ॥

೧೩೧೯

ಬಿಟ್ಟು ಕಟ್ಟಿ ಪೂಜಿಸುವಲ್ಲಿ ಮನ ನಿಶ್ಚಯವಾಗದೆ ಮುಟ್ಟಲಾಗದು.
ಲಿಂಗದ ಮನ ಮುಟ್ಟಿದಲ್ಲಿ ಮೂರ ಮುಟ್ಟದೆ,
ಮನ ತೊಟ್ಟುಬಿಟ್ಟು ನಿಜ ನಿಶ್ಚಯವಾದಲ್ಲಿ
ಚನ್ನಬಸವಣ್ಣಪ್ರಿಯ ಚಂದೇಶ್ವರಲಿಂಗವ
ಹಿಂಗದಿರಬೇಕು. ॥ ೩೭ ॥

೧೩೨೦

ಭಾವ ಶುದ್ಧವಾಗಿಪ್ಪುದೇ ಗುರುಪೂಜೆ
ಜ್ಞಾನಶುದ್ಧವಾಗಿಪ್ಪುದೇ ಲಿಂಗಪೂಜೆ.
ತ್ರಿಕರಣ ಶುದ್ಧವಾಗಿ ತ್ರಿವಿಧ ಮಲದಲ್ಲಿ
ನಿಶ್ಚಯವಾಗಿ ನಿಂದುದೇ ಜಂಗಮಪೂಜೆ.
ಇಂತೀ ತ್ರಿವಿಧ ಭೇದದಲ್ಲಿ ತ್ರಿವಿಧಾರ್ಪಣವ ಅರ್ಪಿಸಿ ನಿಂದುದೇ
ಚಂದೇಶ್ವರಲಿಂಗಕ್ಕೆ ಅರ್ಪಿತ, ಮಡಿವಾಳಯ್ಯಾ. ॥ ೩೮ ॥

೧೩೨೧

ರಣವ ನಿಶ್ಚೈಸಿದ ಭಟಂಗೆ ಮನೆಯ ಮೋಹವುಂಟೆ?
ಅರ್ಥ ಪ್ರಾಣ ಅಪಮಾನ ಈ ಮೂರ ಕರ್ತರಿಗೆಂದಿತ್ತು
ಮತ್ತೆ ಹೊತ್ತು ಹೋರುವಂಗೆ ಸದ್ಭಕ್ತಿಯುಂಟೆ?
ಅದು ಚಂದೇಶ್ವರಲಿಂಗವ ಮುಟ್ಟದ ಮಾಟ. ॥ ೩೯ ॥

೧೩೨೨

ಲಿಂಗವೆಂಬುದು ಗುರುವಿನ ಹಂಗು,
ಗುರುವೆಂಬುದು ಲಿಂಗದ ಹಂಗು.
ಉಭಯಕ್ಕತೀತ ಜಂಗಮಲಿಂಗ ದಾಸೋಹ.
ಚಂದೇಶ್ವರಲಿಂಗಕ್ಕೆ ಕಟ್ಟುವ ಗೊತ್ತು. ॥ ೪೦ ॥

೧೩೨೩

ಲಿಂಗ ಹೋಯಿತ್ತೆಂಬ ಸಂದೇಹ ಉಂಟಾಯಿತ್ತಾದಡೆ,
ಅಂಗ ಉಳಿಯಬಲ್ಲುದೆ?
ಆತ್ಮ ಹೋದಲ್ಲಿ ಘಟ ಎಷ್ಟು ದಿನ ಉಳಿಯುವುದು?
ಚಂದೇಶ್ವರಲಿಂಗಕ್ಕೆ ಸಂದಿಲ್ಲ, ಮಡಿವಾಳಯ್ಯಾ. ॥ ೪೧ ॥

೧೩೨೪

ಶಿಷ್ಯಂಗೆ ಗುರು ಬೋಧಿಸುವಲ್ಲಿ
ತನ್ನನಳಿದು ಲಿಂಗದ ಸಂಗುವ ತೋರಿಸಬೇಕು.
ಲಿಂಗದ ಸಂಗ ನೆನಹಾದಲ್ಲಿ
ಆ ಲಿಂಗಕ್ಕೆ ಉಂಬ ಬಾಯಿ ಜಂಗಮವಾದ ಕಾರಣ
ಆ ಜಂಗಮದ ದಾಸೋಹದಿಂದ ಬೇರೊಂದಂಗವಿಲ್ಲ;
ಸಂಗನ ಬಸವಣ್ಣಪ್ರಿಯ ಚಂದೇಶ್ವರಲಿಂಗವ ಹಿಂಗದ
ಭಾವ. ॥ ೪೨ ॥

೧೩೨೫

ಸಂಸಾರವೆಂಬ ಸಾಗರದ ಮಧ್ಯದೊಳಗೆ
ಬೆಳೆದರ ಹೊಡಕೆಯಹುಲ್ಲ ಕೊಯ್ದು
ಮತ್ತಮಾ ಕಣ್ಣ ತೆಗೆದು, ಕಣ್ಣಿಯ ಮಾಡಿ
ಇಹಪರವೆಂಬ ಉಭಯದ ಗಂಟನಿಕ್ಕಿ
ತುದಿಯಲ್ಲಿ ಮಾಟಕೂಟವೆಂಬ ಮನದ ಕುಣಿಕೆಯಲ್ಲಿ
ಕಾಯಕವಾಯಿತ್ತು.
ಇದು ಕಾರಣ ಚಂದೇಶ್ವರಲಿಂಗವೆಂಬ ಭಾವವೆನಗಿಲ್ಲ ॥ ೪೩ ॥

೧೩೨೬

ಸತ್ಯ ಶುದ್ಧ ಕಾಯಕದಿಂದ ಬಂದ ದ್ರವ್ಯದಲ್ಲಿ
ಚಿತ್ತ ವಿಚ್ಛಂದವಾಗದಿರಬೇಕು.
ನೇಮದ ಕೂಲಿಯಂದಿನ ನಿತ್ಯ ನೇಮದಲ್ಲಿ ಸಂದಿಲ್ಲದಿರಬೇಕು.
ನೇಮದ ಕೂಲಿಯ ಬಿಟ್ಟು
ಹೇಮದಾಸೆಗೆ ಕಾಮಿಸಿ ದ್ರವ್ಯವ ಹಿಡಿದಡೆ
ತಾ ಮಾಡುವ ಸೇವೆ ನಷ್ಟವಯ್ಯಾ.
ನಿನ್ನಾಸೆಯ ವೇಷದ ಪಾಶಕ್ಕೆ ನೀನೆ ಹೋಗು.
ನನಗೆ ನಮ್ಮ ಜಂಗಮದ ಪ್ರಸಾದದಾಗೆ
ಚಂದೇಶ್ವರಲಿಂಗಕ್ಕೆ ಪ್ರಾಣವಯ್ಯಾ. ॥ ೪೪ ॥

೧೩೨೭

ಸುಖ ದುಃಖ ಭೋಗಾದಿ ಭೋಗಂಗಳೆಲ್ಲವೂ
ಗುರು ಲಿಂಗ ಜಂಗಮದ ಒಡಲಾಗಿ ಬೆಳೆವುತ್ತಿಹವು.
ತಾನವ ಒಡಲುಗೊಂಡು ಮಾಡುವ ಕಾರಣ
ತನ್ನ ಬೆಂಬಳಿಯ ದೂಯೆ.
ಅವ ಹಿಂಗಿ ತನ್ನ ತಾನರಿತಲ್ಲಿ
ಚನ್ನಬಸವಣ್ಣಪ್ರಿಯ ಚಂದೇಶ್ವರಲಿಂಗವ ಕಾಣಬಂದಿತ್ತು.॥ ೪೫ ॥

೧೩೨೮

ಹಿಂದಣ ಭವಸಾಗರವ ದಾಂಟಿದೆ
ಮುಂದಣ ಮುಕ್ತಿಯಪಥಕ್ಕೆ ಜ್ಞಾನವಂಕುರಿಸಿತ್ತು.
ಇನ್ನಂಜೆನಿನ್ನಂಜೆನಯ್ಯಾ,
ಎನ್ನ ಮನೋಮಯ ಮೂರ್ತಿಯಪ್ಪ
ಚಂದೇಶ್ವರನ ಕಾರುಣ್ಯವಾಯಿತ್ತಾಗಿ
ಗೆದ್ದೆನಯ್ಯಾ ಮಹಾಮಾಯೆಯ! ॥ ೪೬ ॥

೧೩೨೯

ಹೊಕ್ಕಲ್ಲಿ ಹೊಕ್ಕು, ಒಕ್ಕುದ ಮಿಕ್ಕುದನುಂಡು
ಸುಖಿಯಾಗಿ ಸುಳಿವ ಜಂಗಮಕ್ಕೆ

ಕುಲವೆಲ್ಲಿಯದೊ ಛಲವೆಲ್ಲಿಯದೊ?
ಶೀಲ ವ್ರತ ನೇಮಂಗಳಿಲ್ಲ, ಜಾತ್ಯಾದಿ ಸೂತಕ ಮುನ್ನಿಲ್ಲ.
ಆವಾವಾಚಾರ ವಿಚಾರ ಭಕ್ತಂಗಲ್ಲದೆ ಜಂಗಮಕ್ಕುಂಟೆ?
ಒಡೆಯರಲ್ಲಿ ಆಚಾರವಿಲ್ಲೆಂದು ಪಾದೋದಕ
ಪ್ರಸಾದವನೊಲ್ಲದಿಪ್ಪ
ಬಹುಭ್ರಮಿತ ಪಾತಕರ ಅಚ್ಚಲಿಂಗೈಕ್ಯರು ಮೆಚ್ಚರು ಕಾಣಾ
ಚಂದೇಶ್ವರಾ. ॥ ೪೭ ॥

೧೩೩೦

ಹೊಣಕೆಗೆ ಹೋರಿದಲ್ಲಿ ವನಿತೆಯರ ಮನೆಯಾಸೆ ಉಂಟೆ?
ಘನತರವಪ್ಪ ಪರಮ ದಾಸೋಹಿ ತಾನಾಗಿ
ಅಲ್ಲಿ ಅಸುವರವನರಸಲುಂಟೆ?
ಮೂರಕ್ಕೆ ಆಶೆಯ ಹರಿದು ಮಾಡುವ ಮಾಟ
ಚಂದೇಶ್ವರಲಿಂಗದ ಕೂಟ. ॥ ೪೮ ॥

# ಅನುಬಂಧ

# ಕಠಿಣ ಪದಕೋಶ

(ಕಂಸದೊಳಗಿನ ಮೊದಲ ಸಂಖ್ಯೆ ಪುಟಸಂಖ್ಯೆಯನ್ನೂ ಎರಡನೆಯದು ವಚನಸಂಖ್ಯೆಯನ್ನೂ ಸೂಚಿಸುತ್ತದೆ)

---

ಅಂಕ (೧೪೪.೪೧೪) ಯುದ್ಧ

ಅಂಕುರ (೩೧.೭೩) ಚಿಗುರು

ಅಂಗುಲಿ (೧೫.೩೫) ಬೆರಳು

ಅಂತಕ (೨೫.೫೯) ಯಮ

ಅಂತಃಕರಣಚತುಷ್ಟಯ (೨೬೯.೮೮೬) ಮನಸ್ಸು, ಬುದ್ಧಿ, ಅಹಂಕಾರ, ಚಿತ್ತ

ಅಂತುಕ (೧೧೭.೩೪೬) ಕೊನೆ,ಮಕ್ತಾಯ

ಅಂಬರ (೬೩.೧೬೨) ಆಕಾಶ

ಅಂಬಲಿ (೧೦೨.೨೯೫) ಮಜ್ಜಿಗೆ

ಅಕ್ಕರು < ಅಳ್ಕರು (೧೦೧.೨೯೨) ಪ್ರೀತಿ

ಅಕ್ಕುಲಿಜ (೨೪೪.೭೭೫) ಕುಲಹೀನ

ಅಗಡ (೫೬.೧೩೭) ನಿಂದೆ

ಅಘ (೧೨೧.೩೫೭) ಪಾಪ

ಅಚ್ಚಿಗ (೪.೮) ಶ್ರಮ

ಅಜ (೩೧೪.೧೦೩೧) ಆಡು

ಅಟಮಟ (೩೭.೮೪) ಸುಳ್ಳು

ಅಟ್ಟಗೋಲು (೭೪.೧೯೮) ಏಣಿ

ಅಡಕ (೪೦೩.೧೨೭೬) ಹಿಡಿತ

ಅಡಗು (೨೩೧.೭೧೫) ಮಾಂಸ

ಅಡ್ಡಣಿಗೆ (೪೫.೧೦೦) ಊಟದತಟ್ಟೆ ಮುಂತಾದುವನ್ನು ಇಡುವ ಪೀಠ, ಮುಕ್ಕಾಲುಮಣೆ

ಅಡು (೩೨೯.೧೦೬೬) ಬೇಯಿಸು

ಅಣೆ (೨೩೬.೭೩೮) ಅಣೆದಪ್ಪೆ, ನೆಯ್ಗೆಯ ಸಾಧನ

ಅದಪ (೫೨.೧೨೬) ಅಂಗಹೀನ

ಅನಂಗ (೯.೧೯) ಮನ್ಮಥ, ಕಾಮ

ಅನಲ(೧೩.೨೯) ಅಗ್ನಿ, ಬೆಂಕಿ

ಅನಿಲ (೧೩.೨೯) ವಾಯು

ಅನು (೧೬..೩೦) ಕ್ರಮ

ಅಪ್ಪು(೩೪.೭೭) ನೀರು

ಅಬ್ಧಿ (೧೪೨.೪೦೮) ಸಮುದ್ರ

ಅಭೀಷ್ಟ (೫೬.೧೪೧) ಪ್ರಿಯವಾದುದು, ಬಯಸಿದುದು

ಅಮೇಧ್ಯ (೧೮೯.೫೭೨) ಮಲ, ಹೇಲು

ಅರತು (೩೯.೮೬) ಬತ್ತು

ಅರ್ತಿ (೩೮.೮೪) ಪ್ರೀತಿ

ಅರಿ (೧೦.೨೩) ಕತ್ತರಿಸು

ಅರಿಕೆ (೧೧.೨೪) ಖ್ಯಾತಿ, ಪ್ರಸಿದ್ಧಿ

ಅರಿಕೆವಿದ (೧೦೪.೩೦೨) ಜ್ಞಾನಿ

ಅರಿವು (೨೧.೪೬) ಜ್ಞಾನ, ತಿಳುವಳಿಕೆ

ಅರಿಷಡ್ವರ್ಗಗಳು (೨೬೯.೮೮೬) ಕಾಮ, ಕ್ರೋಧ, ಲೋಭ, ಮೋಹ, ಮದ, ಮತ್ಸರ

ಅಲಗು (೩೦.೭೦) ಕತ್ತಿ

ಅವಗಹಿಸು (೨೮೯.೯೫೫) ಒಳಹೋಗು, ಲೀನವಾಗು

ಅವಲೋಹ (೨೯೯.೯೮೬) ಅಮಂಗಳ

ಅವಾರಿ (೨೮೯.೯೫೩) ಸಂತತವಾಗಿ ನಡೆಯುವ

ಅಶನ (೫೭.೧೪೨) ಆಹಾರ, ಅನ್ನ

ಅಷ್ಟತನು (೮೫.೨೪೦) ಪೃಥ್ವಿ, ಅಪ್ಪು, ತೇಜ, ವಾಯು, ಆಕಾಶ, ಸೋಮ, ಸೂರ್ಯ, ಜೀವಾತ್ಮ

ಅಷ್ಟಮದಗಳು (೩೬.೮೧; ೨೭೦.೮೮೬)

ಧನ, ಕುಲ, ವಿದ್ಯಾ, ರೂಪ, ಯೌವನ, ಬಲ, ಪರಿವಾರ, ಅಧಿಕಾರ

ಅಳಗು (೩೧೫.೧೦೩೪) ಹವಳದ ಬಣ್ಣದ ಹಸು

ಅಳಲು (೨೧.೪೮) ದುಃಖ, ವ್ಯಥೆ

ಅಳುಪು (೨೭.೬೩) ಅತಿಯಾಸೆ, ಬಯಕೆ

ಅಳೆ (೨೩೦.೭೧೨) ಮಜ್ಜಿಗೆ

ಆಗು ಚೇಗು (೪೪.೯೮) ಲಾಭ ನಷ್ಟ

ಆಣತಿ (೧೬.೩೬) ಆಜ್ಞೆ

ಆಪ್ಯಾಯನ (೫೬.೧೩೭,೧೪೨) ಹಸಿವು, ತೃಪ್ತಿ

ಆಮ್ನೆ (೧೦೦.೨೯೧) ನೆನಪಿಗೆ ಒಳಪಡಿಸುವುದು

ಆಯ (೩೪.೭೭) ಶರೀರದ ಮರ್ಮಸ್ಥಾನ

ಆಯತ (೪.೯) ನೆಲೆ, ವಾಸಸ್ಥಾನ

ಆರತ (೧೮೭.೫೬೬) ಸಂಕಟ

ಆರಯ್ (೨೫೯.೮೪೭) ವಿಚಾರಮಾಡು

ಆರೂಢ (೨೨೫.೬೯೫) ಜೀವನ್ಮುಕ್ತ, ತತ್ವಜ್ಞ

ಆಲವಟ್ಟ (೩೨೭.೧೦೬೦) ಹುಲ್ಲು ಅಥವಾ ತಾಳೆಗರಿಯಿಂದ ಮಾಡಿದ ಬೀಸಣಿಗೆ

ಆವೆ (೫.೧೧) ಆಮೆ

ಇಂಬುಗೊಳ್ (೧೦೮.೩೧೬) ಆಶ್ರಯಿಸು

ಇಮ್ಮನ (೨೯.೬೭) ಎರಡು ಮಾನ

ಉಂಕೆ (೨೩೬.೭೩೮) ನೂಲಿನ ಹಾಸು

ಉಂಡಲಿಗೆ (೨೨೩.೬೫೪) ಕಡುಬು, ಬೇಯಿಸಿದ ಹಿಟ್ಟಿನ ಮುದ್ದೆ

ಉಕ್ಕಡ (೨೮೪.೯೩೫) ಪಹರೆಯ ನೆಲೆ, ಸುಂಕದಕಟ್ಟೆ

ಉಡಿಕೆ (೧೪೩.೪೧೦) ವಿಧವೆಯರು ಮಾಡಿಕೊಳ್ಳುವ ಪುನರ್ವಿವಾಹ, ಕೂಡುವಳಿ

ಉಡು (೧೦೨.೨೯೪) ಹಲ್ಲಿಯ ಜಾತಿಗೆ ಸೇರಿದ ಒಂದು ದೊಡ್ಡ ಪ್ರಾಣಿ

ಉತ್ತಮಾಂಗ (೩೩೮.೧೦೮೬) ಹಣೆ

ಉಪಾಧಿ (೩೫.೭೮) ಬಿರುದು, ಪ್ರಶಸ್ತಿ, ಕಾರಣ, ತೊಂದರೆ

ಉರವಣೆ (೩೩೭.೧೧೮೨) ಆತುರ, ದುಡುಕು

ಉರಸ್ಥಲ (೨೭.೬೨) ಎದೆ

ಉರಸು (೨೨೩.೬೫೪; ೨೪೯.೭೯೬) ಸಹಿಸು; ರುಚಿಸು

ಉಲುಹು (೧೫.೩೫) ಧ್ವನಿ, ಕೂಗು

ಉಸಿಕನೆ (೧೯೪.೫೮೮) ಮೆಲ್ಲನೆ

ಊಣಾಯ (೩೫೬.೧೧೩೧) ಕುಂದು, ಕೊರತೆ

ಎಕ್ಕಸಿಕ್ಕ (೧೮೮.೫೭೦) ಅಸಂಬದ್ಧವಾಗಿ ಪ್ರಲಾಪಿಸು

ಎಚ್ಚಿ (೨೪೩.೭೭೧) ಲೇಪಿಸಿ

ಎಡರು (೨೩೭.೭೪೩) ಕೇಡು

ಎಡೆ (೧೨.೨೮) ಅವಕಾಶ

ಎಡೆಯಾಡು (೫೨.೧೨೫) ಓಡಾಡು

ಎರಗು (೨೮.೬೫) ಬಾಗು, ನಮಸ್ಕರಿಸು

ಎರಳೆ (೫೦.೧೧೭) ಜಿಂಕೆ

ಎರೆಯ (೨೫೯.೮೪೪) ಒಡೆಯ

ಎಲವ (೮೧.೨೨೩) ಬೂರುಗ

ಎಲು (೨೩೨.೭೨೦) ಮೂಳೆ

ಎಸಕ (೧೩.೩೧; ೧೦೦, ೨೯೧) ರೀತಿ; ಸೊಬಗು, ಕಾಂತಿ, ಅತಿಶಯ

ಎಸುಗೆ (೩೩೧.೧೦೭೦) ಎಸೆಯುವಿಕೆ

ಒಕತನ (೧೬೪.೪೮೯) ಕೂಡಿ ಬಾಳುವೆ ಮಾಡುವುದು

ಒಕ್ಕು (೨೫೫.೮೨೫) ತಿಂದು

ಒಕ್ಕುದು (೨೩೯.೭೫೪) ಊಟಮಾಡಿ ಮಿಕ್ಕುದು

ಒಡತಣ (೨೫೩.೮೧೪) ಜೊತೆ

ಒಡೆಯರು (೨೪೦.೭೬೦) ಜಂಗಮ

ಒಪವು (೩೦೨.೯೯೩) ಸಲಹು, ಕಾಪಾಡು

ಒಪ್ಪಚ್ಚಿ (೨೪೬.೭೮೪) ಒಂದು ಭಾಗ

ಒಮ್ಮನ (೨೯.೬೭) ಒಂದು ಮಾನ

ಒಲವರ (೨೬೮.೮೮೫) ಪ್ರೀತಿಯ ಮಾತು

ಒಲವಸ (೨೪೧.೭೬೨) ಒಲವು ಮತ್ತು ಒಸಗೆ

ಒಲ್ಲಗೆ (೭.೧೫) ನಿಧಾನವಾಗಿ

ಓಗರವನಡು (೩೭.೮೨) ಅನ್ನವನ್ನು ಬೇಯಿಸು

ಓಜ (೨೪೮.೭೯೪) ಗುರು

ಓಹೆ (೯೩.೨೬೮) ಅವಧಿ, ಗಡುವು

ಓರೆ (೩೦೫.೧೦೦೩) ತುಂಟ (ಹಸು)

ಓಸರಿಸು (೧೨.೨೭) ಹಿಂಜರಿ, ಪಕ್ಕಕ್ಕೆ ಸರಿ

ಕಂಚುಗಾರ (೨೫೩.೮೧೭) ಲೋಹದ ಪಾತ್ರೆ ವ್ಯಾಪಾರಿಗ

ಕಂಟಕ (೩೦.೬೯) ವಿಘ್ನ, ಕೇಡು

ಕಂದಲು (೨೯.೬೭) ಮಣ್ಣಿನ ಚಿಕ್ಕ ಪಾತ್ರೆ

ಕಕ್ಷೆ (೩೩೮.೧೦೮೬) ಕಂಕುಳು

ಕಚ್ಚು (೩೧೭.೧೦೪೯) ತೊಳೆ; ತುತ್ತು

ಕಜ್ಜಳ (೬೧.೧೫೫) ಕಾಡಿಗೆ; ಕಪ್ಪು

ಕಟಕ > ಕಡಗ (೨೪೮.೭೯೧) ಚಿನ್ನದಬಳೆ

ಕಟಕ (೧೦೦.೨೯೧) ಸೈನ್ಯ

ಕಟ್ಟು (೧೪.೩೨) ನಿಯಮ

ಕಠಾರ (೫೨.೧೨೬) ಬಾಕು, ಚೂರಿ

ಕಡಹು (೪.೮) ಹಾಯ್ಗಡ, ಹೊಳೆಯನ್ನು ದಾಟುವ ಸ್ಥಳ

ಕಡಿ (೨೪೧.೭೬೫) ತುಂಡು,ಅಡ್ಡಿ

ಕಣೆ (೧೪.೩೩) ಭವಿಷ್ಯ

ಕಣಕ (೨೩೧.೭೧೫) ಕಲಸಿದ ಗೋದಿ ಮುಂತಾದುವುಗಳ ಹಿಟ್ಟು

ಕಣ್ಣೆ (೧೦೨.೨೯೮) ಹಗ್ಗ

ಕಣೆ (೩.೮) ಬಿದಿರುಕೋಲು, ಬೊಂಬು

ಕದಕತನ (೪.೮) ಮೋಸಗಾರಿಕೆ

ಕಪ್ಪಡ (೧೧೯.೩೫೦) ವಸ್ತ್ರ

ಕಪ್ಪರ (೫೭.೧೪೨) ಭಿಕ್ಷೆ ಬೇಡಲು ಉಪಯೋಗಿಸುವ ಮಣ್ಣಿನ ಪಾತ್ರೆ

ಕಪ್ಪು (೫೦.೧೧೭) ಕಂದಕ ಕಾಲುವೆ

ಕಪಿತ್ಥದಕಾಯಿ (೪೧೪.೧೩೧೦) ಬೇಲದ ಕಾಯಿ

ಕಪಿಲ (೩೧೫.೧೦೩೪) ಕಂದು ಬಣ್ಣ

ಕಪೋತ (೩೧೫.೧೦೩೪) ಬೂದು ಬಣ್ಣ

ಕಮ್ಮಟ < ಕರ್ಮಠ (೫೬.೧೩೮) ಶುಷ್ಕ ಆಚಾರ ಮಾಡುವವ

ಕರಂಡ (೫೮.೧೪೫)ಭರಣಿ

ಕರಣ (೬೭.೧೭೫) ಇಂದ್ರಿಯ

ಕರತಳಾಮಳಕ (೩೬೩.೧೧೪೫) ಅಂಗೈ ಮೇಲಣ ನೆಲ್ಲಿಯ ಕಾಯಿ

ಕರ್ತೃ (೧೧.೨೪) ಒಡೆಯ, ಸ್ವಾಮಿ

ಕರಿ (೨೪೩.೭೭೨) ಲೋಹದ ಪಾತ್ರೆ ವ್ಯಾಪಾರಿಗ

ಕರುಮಾಡ (೧೬೪.೪೯೧) ಉಪ್ಪರಿಗೆಯ ಮನೆ

ಕಲಿವೀರ (೨೪೩.೭೭೩) ವೀರಭದ್ರ

ಕಲ್ಲಿ (೧೦೫.೩೦೭) ಹೆಣಿಕೆಯ ಬಲೆ

ಕಷ್ಟ ಕುಲ (೨೯೮.೯೮೩) ನೀಚಕುಲ

ಕಷ್ಟ ಜಾತಿ (೨೪೪.೭೭೪) ಶೂದ್ರರು, ಭವಿ

ಕಳ (೨೪೪.೭೭೫) ಕಣ, ಗದ್ದೆ

ಕಳಕಿ < ಕಳಲಿಕೆ (೯೦.೨೬೦) ಎಚ್ಚರದಪ್ಪುವಿಕೆ, ಬವಳಿ

ಕಾಕೋಳಿ (೨೬೫.೮೭೦) ಕಾಡು ಕೋಳಿ

ಕಾರ್ಪಣ್ಯ (೮.೧೮) ಮರುಕ

ಕಾರ್ಪಾಸ (೩೫೭.೧೧೩೧) ಹತ್ತಿ

ಕಾರುಕ (೫೮.೧೪೫) ಕೈಕೆಲಸಗಾರ, ಶಿಲ್ಪಿ

ಕಾಷ್ಠ (೧೬೧.೪೭೭) ಕಟ್ಟಿಗೆ

ಕಾಳು (೨೪೭.೭೮೮) ವ್ಯರ್ಥ

ಕಿಚ್ಚು (೩೬.೮೨) ಬೆಂಕಿ, ಅಗ್ನಿ

ಕಿರಾತರು (೨೨.೫೧) ಬೇಡರು; ದುಷ್ಟರು

ಕಿಸುಕುಳ (೬೩.೧೬೦) ಹೊಲಸು

ಕೀಳು (೨೪೪.೭೭೭) ಕೆಳವರ್ಗ; ಕರು

ಕುಂಭ (೨೫೨.೮೧೦) ಮಡಿಕೆ

ಕ್ಷುತ್ತು (೩೦೩.೯೯೬) ಹಸಿವೆ

ಕುಂಭಿನಿ (೨೪೮.೭೯೩) ಭೂಮಿ

ಕುಕ್ಕುಟ (೫೦.೧೧೬) ಕೋಳಿ

ಕುಕ್ಕುರ (೧೮೧.೫೪೮) ನಾಯಿ

ಕುನ್ನಿ (೧೧೯.೩೫೦) ನಾಯಿ

ಕುಲಿಶ (೪.೧೦) ಒಂದು ಜಾತಿಯ ಮೀನು

ಕುಸಿಕಿರಿ (೩೦೧.೯೮೯) ಮೆಲ್ಲನೆ ತಿವಿ

ಕುಳಿ (೯೦.೨೫೯) ತೋಡಿದ ಹಳ್ಳ

ಕೂರ್ (೮೩.೨೩೩) ಪ್ರೀತಿಸು, ಮೆಚ್ಚು, ಮೋಹಿಸು

ಕೂರ್ಮ (೮೯.೨೫೪) ಆಮೆ

ಕೃಷ್ಣ (೩೧೫.೧೦೩೪) ಕಪ್ಪು

ಕೆಲ (೪೯.೧೧೫) ಪಕ್ಕ

ಕೆಳೆ (೫೧.೧೨೧) ಸ್ನೇಹ

ಕೈದು (೧೧೦.೩೨೨) ಆಯುಧ

ಕೊಂಬು (೧೫೬.೪೫೭) ಕೊಂಬೆ, ರೆಂಬೆ

ಕೊಡಬೆ (೪.೧೦) ಮೀನು ಹಿಡಿಯುವ ಜೋಡು ಬುಟ್ಟಿ

ಕೊಪ್ಪು (೯೨.೨೬೩) ಬಿಲ್ಲಿನ ತುದಿ

ಕೊಳುಕೊಡೆ (೧೮.೪೦) ಸಂಬಂಧ

ಕೊಳುಗುಳ (೮೯.೨೫೩)ಯುದ್ಧರಂಗ

ಕೋಡಗ (೯೮.೨೮೪) ಮಂಗ

ಕೋಲು (೨೧.೪೮; ೯೩.೨೬೩) ಅಳತೆಯ ಕಡ್ಡಿ; ಬಾಣ

ಕೋಳುಹೋಗು (೧೧೦.೩೨೩) ಸೂರೆಹೋಗು, ವಶವಾಗು, ಹಾಳಾಗು

ಕೌರು ಏಳು (೩೨.೭೪) ಸುಟ್ಟವಾಸನೆ ಹೊಡೆ, ಹೊಗೆ, ನಾತ ಬಡಿ

ಕ್ರೀ (೧೨.೨೭) ಮಾಡುವ ಕಾರ್ಯ

ಖಂಡೆಯ (೧೩೫.೩೯೧) ಕತ್ತಿ

ಗಂಧರಾಜ (೨೬೫.೮೭೮) ಆನೆ

ಗಂಪ (೨.೩) ಬುಟ್ಟಿ

ಗಡಿಗೆ (೨೬೧.೮೫೪) ಕಂಭದಲ್ಲಿ ಬೋದುಗೆಯ ಮೇಲಿಡುವ ಸಾಧನ

ಗದಕ (೬೨.೧೬೦) ಮೋಸ, ಕಪಟ

ಗನ್ನ (೪೫.೯೭) ಮೋಸ

ಗರಳ (೧೨.೨೬) ವಿಷ

ಗರಳಧರ (೨೭.೬೨) ವಿಷವನ್ನು ಕಂಠದಲ್ಲಿ ಧರಿಸಿದವನು-ಶಿವ

ಗರಿ (೯೨.೨೬೨) ಬಾಣ

ಗವಲು (೬೫.೧೬೯) ಕೆಟ್ಟ ವಾಸನೆ, ಗಬ್ಬು

ಗಸಣಿ (೯೩.೨೬೫) ಘರ್ಷಣೆ, ತೊಂದರೆ

ಗಹನ (೬೯.೧೮೩) ಕಾಡು

ಗಾವಳಿ (೧೬೪.೪೮೮) ಸದ್ದು, ಗದ್ದಲ

ಗಾಹುಗಳ್ಳ (೩೨.೭೫) ಮೋಸಮಾಡುವ ಕಳ್ಳ; ವಂಚಕ

ಗ್ರಾಸ (೧೦೫.೩೦೭) ಆಹಾರ

ಗುಂಡ (೨೫೯.೮೪೩) ಸೋಗಲಾಡಿ

ಗುಹ್ಯ (೪೮.೧೧೦) ಮರ್ಮಸ್ಥಾನ

ಗೊತ್ತು (೩೨.೭೪; ೧೪೫.೪೦೮) ತಿಳಿವಳಿಕೆ, ಬೀಡು, ನಿಶ್ಚಿತವಾದ ಸ್ಥಳ

ಗೋಸಿ (೨೬೮.೮೪೦) ಕೌಪೀನ

ಗೌರ (೩೨೯.೧೦೪೨) ನಸುಗೆಂಪು

ಘಟ (೧೨.೨೭; ೫೫.೧೩೩) ಶರೀರ; ಮಡಕೆ

ಘೋಷ (೧೪೨.೪೦೮) ಸಮುದ್ರದ ತೆರೆಯು ಅಪ್ಪಳಿಸುವ ಧ್ವನಿ

ಚಚ್ಚಗೋಷ್ಠಿ (೩೮.೮೪) ಚರ್ಚಾಗೋಷ್ಠಿ

ಚಟ್ಟಿಗೆ (೩೨.೭೪) ಮಣ್ಣಿನಪಾತ್ರೆ

ಚರ (೫೭.೧೪೩)ಜಂಗಮ

ಚಿಕ್ಕುಟ್ಟು (೮೨.೨೨೮) ಸೊಳ್ಳೆಯಂತಹ ಸಣ್ಣ ರೆಕ್ಕೆಹುಳು

ಚಿನುಪಾಲು (೨೪.೫೬) ಚೆನ್ನಾಗಿ ಕಾಯಿಸಿದ ಹಾಲು, ಕೆನೆಹಾಲು

ಚುನ್ನ (೮.೧೮) ನಿಂದೆ, ಅಣಕ

ಚೂಡ (೩೫೮.೧೧೩೪) ಹುಂಜ

ಚೇಟಿ (೫೫.೧೩೬) ಸೇವಕಿ

ಚೊಕ್ಕೆಹ (೨೭೮.೯೧೪) ಓರಣ

ಚೊಲ್ಲೆಹ (೪೮.೧೧೧) ತುರುಬಿನ ಕೊನೆ, ತುರುಬಿನಲ್ಲಿ ಮುಡಿಯುವ ಹೂಪಿನ ದಂಡೆ

ಜಂಬುಕ (೨೪೮.೭೯೩) ನರಿ

ಜಂಬುಕಫಲ (೨೭೬.೯೦೮) ನೇರಳೆಹಣ್ಣು

ಜಾಗ್ರ (೨೨೫.೬೯೫) ಎಚ್ಚರ

ಜಾಲಗಾರ (೩೨.೭೫) ಬೆಸ್ತ

ಜಾವಳಿ (೧೧೩.೩೩೧) ನಾಲ್ಕು ಹರಳುಗಳ ಕರ್ಣಾಭರಣ

ಜಾಳಿಗೆ (೧೮೯.೫೭೨) ಬಲೆ

ಜಾಳು (೫೭.೧೪೨) ಹುರುಳಿಲ್ಲದುದು, ನಿಷ್ಪ್ರಯೋಜಕ

ಜೂಳಿ (೧೦೫.೩೦೬) ಕಮುಂಡಲು, ಗಿಂಡಿ ಮುಂತಾದುವುಗಳ ನಳಿಕೆ

ಠಕ್ಕು (೩೭.೮೪) ಮೋಸ, ವಂಚನೆ

ಠವಾಳ < ಠೌಳಿ (೩೭.೮೪) ಮಾಯಾವಿ, ಐಂದ್ರಜಾಲಕ

ಡಾವರ (೨.೩) ತೀವ್ರತೆ, ತಾಪ

ಡಿಂಗರಿಗ (೯.೨೧) ಸೇವಕ, ಭಕ್ತ

ಡೋಣೆ (೬೫.೧೬೯) ಹಳ್ಳ

ಢವುಡೆ (೧೯೫.೫೯೨) ಒಂದು ಬಗೆಯ ಚರ್ಮವಾದ್ಯ

ತಟಾಕ (೩೯.೮೭) ಕೆರೆ

ತಡಹು (೬೭.೧೭೭) ಕೆಣಕು, ಕೆರಳಿಸು, ಅಡ್ಡಿ, ತಡೆ

ತಡಬಡ (೪೧೫.೧೩೧೭) ಅಡ್ಡಿ

ತಡಿ (೪.೯) ದಡ

ತತ್ತಲಗೂಸು (೪೦೩.೧೨೭೬) ಮುಗ್ಧಮಗು (?)

ತರಹರಿಸು (೨೭.೬೩) ತತ್ತರಿಸು

ತಳಿಗೆ (೨೫೩.೮೧೭) ತಟ್ಟೆ, ಗಂಗಳ

ತಾರ್ಕಣೆ (೯೦.೨೫೮) ಹೊಂದಾಣಿಕೆ, ಖಾತ್ರಿ

ತಾರಕಿ (೭೯.೨೧೭) ನಕ್ಷತ್ರ

ತಾವಡಿಸು (೧೧೫.೩೪೦) ಅಲೆದಾಡು

ತಿತ್ತಿ (೩೮೬.೧೨೧೩) ಚರ್ಮದ ಊದು ಚೀಲ

ತ್ರಿಕರಣ (೩೬.೮೧) ಮಾತು, ಮನಸ್ಸು ಮತ್ತು ದೇಹ

ತ್ರಿಗುಣಗುಣ (೩೯.೮೬) ತನುಗುಣ, ಮನಗುಣ, ಧನಗುಣ

ತ್ರಿವಿಧ (೧೦೮.೩೧೩) ತನು-ಮನ-ಧನ

ತ್ರಿವಿಧಮಲ (೩೮.೮೬) ಆಣವ, ಮಾಯಾ, ಕಾರ್ಮಿಕ ಎನ್ನುವ ಮೂರು ಮಲಗಳು

ತುಡುಗಣಿ (೨೪೨.೭೬೬) ಪುಂಡ, ಕಳ್ಳ

ತುರೀಯ < ತುರ್ಯ (೫೬.೧೩೭) ಪರಮಾತ್ಮನಲ್ಲಿ ಐಕ್ಯವಾಗುವ ಸ್ಥಿತಿ

ತೂತು (೩೮೬.೧೨೧೪, ೧೨೧೫) ಯೋನಿ; ಕೊರತೆ, ವಕ್ರತೆ

ತೆನೆ (೫೧.೧೨೨) ಗರ್ಭ, ಬಸಿರು

ತ್ರೈಭುವನ (೨೩.೫೨) ದೇವಲೋಕ, ಮರ್ತ್ಯಲೋಕ, ಪಾತಾಳಲೋಕ

ತೊಂಡು(೨೧೬.೬೬೫) ತುಂಟಾಟ, ಪುಂಡತನ

ತೊಡಕು (೨೮.೬೪) ತೊಂದರೆ, ಅಡಚಣೆ

ತೊಡಚಿ (೨೪೧.೭೬೫) ಗಂಟಿಕ್ಕಿ

ತೋಹು (೧೧೩.೩೩೨) ತೋಪು, ಮರಗಳ ಸಾಲು

ದಂತಶೂಕ (೪೪.೯೫) ಸರ್ಪ

ದಂದುಗ (೯೭.೨೮೧) ತೊಂದರೆ, ಕಷ್ಟ

ದಗ್ಧ (೧೬೧.೪೭೭) ಸುಟ್ಟ

ದಡಿ (೫.೧೧) ಕೋಲು

ದರ್ಪಣ (೫೮.೧೪೫) ಕನ್ನಡಿ

ದಾವಾನಳ (೩೫೬.೧೧೩೧) ಕಾಡುಗಿಚ್ಚು

ದಿವ (೧೧೮.೩೪೭) ಹಗಲು

ದೃಷ್ಟ (೧೭.೪೦) ಅನುಭವಕ್ಕೆ ಬಂದ, ನೋಡಿದ

ದೆರ < ತೆರ (೧೦೨.೨೯೬) ರೀತಿ

ದೆಸೆವರಿ (೪೮.೧೧೧) ದಿಕ್ಕು ದಿಕ್ಕಿಗೆ ನಡೆ

ದೇಶಾಖಿ (೮೩.೨೩೧) ಒಂದು ಬಗೆಯ ರಾಗ

ದೇಹಾರ (೨೫೧.೮೦೬) ದೇವರಪೂಜೆ

ದೋಟಿ (೨೯೬.೯೭೮) ಕೊಕ್ಕೆಕೋಲು

ದ್ವ್ಯಕ್ಷ (೧೯೧.೫೭೮) ಎರಡು ಕಣ್ಣು

ಧಾತ (೫೬.೧೩೮) ಬ್ರಹ್ಮ

ಧಾತುಗೆಡು (೫೬.೧೩೯) ಶಕ್ತಿಗುಂದು

ನಂಜು (೨೩೭.೭೪೫) ವಿಷ

ನಂದಿಸು (೬೧.೧೫೫) ಅಳಿಸು

ನಖ (೬.೧೨) ಉಗುರು

ನವರಸಗಳು (೨೬೯.೮೮೬) ಶೃಂಗಾರ, ಹಾಸ್ಯ, ಕರುಣ, ರೌದ್ರ, ವೀರ, ಭಯಾನಕ, ಭೀಭತ್ಸ್ಯ, ಅದ್ಭುತ, ಶಾಂತ

ನಾರಿ (೯೨.೨೬೨) ಬಿಲ್ಲಿನ ಹಗ್ಗ

ನಾರಿವಾಳ (೧೧೬.೩೪೩) ತೆಂಗು

ನಾಸಿಕ (೩.೭) ಮೂಗು

ನಿಃಪತಿ (೧೪೪.೪೧೨) ಪರಿಪೂರ್ಣ ಸ್ಥಿತಿ

ನಿಕ್ಷೇಪ (೨೪೩.೭೭೧) ನಿಧಿ

ನಿಗಮ (೪೦.೮೮) ವೇದ

ನಿಚ್ಚಣಿಕೆ (೯೮.೨೮೩) ಏಣಿ

ನಿಜ (೨೬೨.೮೫೭) ದೇಹ, ಶರೀರ

ನಿಧಾನ (೯೦.೨೫೯)ಗುಪ್ತನಿಧಿ

ನಿರ್ಭರ (೧೪೨.೪೦೮) ಅತಿಶಯ

ನಿರೂಪ (೨೪೭.೭೮೭) ಆಜ್ಞೆ

ನಿರ್ವೇಗ (೧೪೨.೪೦೮) ವಿರಕ್ತಿ

ನಿರತಿಶಯ (೩೨.೭೪) ಹೆಚ್ಚಳವಿಲ್ಲದ, ಅಸಾಧಾರಣವಲ್ಲದ

ನಿಲುಕು (೩೧೯.೧೦೪೭) ತುದಿಗಾಲಿನಲ್ಲಿ ನಿಲ್ಲು

ನಿಸ್ಸಾಳ (೧೯೫.೫೯೨) ಒಂದು ಬಗೆಯ ಚರ್ಮವಾದ್ಯ

ನೀರಡಸು (೨೫೮.೮೩೯) ಬಾಯಾರು

ನೆಟ್ಟೆಲುವ (೨೬೩.೮೬೫) ನಿಡಿದಾದ ಮೂಳೆ

ನೆಯಿ (೮೬.೨೪೩) ತುಪ್ಪ

ನೆಯ್ದಿಲು (೮೩.೨೩೨) ಕಮಲ, ತಾವರೆ

ನೆಲ್ಲು (೧೨೬.೩೭೦) ಬತ್ತ

ನೇತಿಗಳೆ (೬೧.೧೫೪) ತ್ಯಜಿಸು, ತಿರಸ್ಕರಿಸು

ನೇವಳ (೮೦.೨೧೯) ಕಂಠಿಹಾರ, ಸರ

ನೇಸರು (೩೨೦.೧೦೪೬) ಸೂರ್ಯ

ಪಂಗುಳ (೩೮.೮೬) ಮೂಗ

ಪಂಚವಿಂಶತಿ (೨೧೦.೬೪೭) ೨೫ ತತ್ತ್ವಗಳು

ಪಂಚೇಂದ್ರಿಯಗಳು (೨೬೯.೮೮೬) ಕಣ್ಣು, ಕಿವಿ, ಮೂಗು, ನಾಲಗೆ, ಚರ್ಮ

ಪಟ್ಟೆರ್ದು (೩೧೯.೧೦೪೩) ಮಲಗಿ

ಪಡಿಗ (೯೩.೨೬೫) ಪೀಕದಾನಿ, ಉಗುಳುವ ಪಾತ್ರೆ

ಪಣ್ಣೆಯ (೯೭.೨೮೧) ಹೊಲ, ಭೂಮಿ

ಪತ್ಥಳಿ (೫೩.೧೨೭) ಎಂಜಲು, ಉಚ್ಛಿಷ್ಟ

ಪದುಮ ಪಜ್ಜಳ ವರ್ಣ (೮೫.೨೪೧) ನವನಿಧಿಗಳಲ್ಲಿ ಒಂದಾದ ಪದ್ಮದ ಹೊಳೆಯುವ ಬಣ್ಣ

ಪದ್ಮೋದ್ಭವ (೯೨.೨೬೨) ಬ್ರಹ್ಮ
ಪಯ (೨೮೮.೯೪೮) ನೀರು
ಪರ (೨೪೭.೭೮೭) ಮೋಕ್ಷ, ಕೈಲಾಸ
ಪರಿಣಾಮಿ (೯.೧೯) ತೃಪ್ತ
ಪಾಕುಳ (೧೦೨.೨೯೬) ಗೋಡೆ
ಪಾದಪ (೩೯೧.೧೨೩೩) ಮರ, ಗಿಡ
ಪಾಮರ ತರು (೨೭೫.೯೦೬) ಸಾಮಾನ್ಯ ಮರ
ಪಾರದ್ವಾರ (೫೬.೧೪೦) ಹಾದರ
ಪಾವಕ (೧೨೭.೩೭೪) ಬೆಂಕಿ
ಪಾಷಂಡಿ (೨.೫) ನಾಸ್ತಿಕ, ಸಂಪ್ರದಾಯ ವಿರೋಧಿ
ಪಾಷಾಣ (೬೦.೧೫೧) ಕಲ್ಲು
ಪಿಪೀಲಿಕ (೩೫೮.೧೧೩೨) ಇರುವೆ
ಪಿಸುಣ (೩೭.೮೪) ಚಾಡಿ
ಪಿಷ್ಟ (೫೬.೧೪೧) ಹಿಟ್ಟು
ಪೀತ (೩೧೫.೧೦೩೪) ಹೊಂಬಣ್ಣ; ಹಳದಿ
ಪುಚ್ಛ (೨೬೫.೮೭೦) ಗರಿ
ಪುಳಿಂದ (೧೦೫.೩೨೭) ಬೇಡ
ಪ್ರಣವ (೨೫.೬೦) ಓಂಕಾರ
ಪ್ರವುಡಿ (೨೪.೫೮) ಅನುಭವಿ, ನಿಪುಣ, ಪ್ರಬುದ್ಧ
ಪ್ರಸ್ತಾವ (೯೭.೨೮೧) ಪ್ರಸಂಗ, ಸಂದರ್ಭ, ಆರಂಭ
ಪ್ರಸೂತೆ (೨೧೫.೬೬೦) ತಾಯಿ
ಪ್ರಾರಬ್ಧ (೧೮೫.೫೫೮) ವಿಧಿ
ಬಂದಿಕಾರ (೧೫೪.೪೫೧) ಕಳ್ಳ
ಬಟ್ಟೆ (೧೧೦.೩೨೧) ದಾರಿ
ಬವರ (೪೦೨.೧೨೭೨) ಚಾಂಚಲ್ಯ
ಬರುಸತಗ (೨೫೪.೮೨೩) ಹುಸಿಭಕ್ತ
ಬಳ್ಳು (೬೮.೧೮೧) ನರಿ
ಬಯಲು (೨೬.೬೧) ಐಕ್ಯ, ಸೇರು, ಒಂದಾಗು
ಬರುದೊರೆ (೨೬೭.೮೮೧) ವ್ಯರ್ಥ
ಬರುಬ (೫೩.೧೨೯) ಬರಿದಾದವನು
ಬಲ್ಲೆಹ (೪೮.೧೧೧) ಒಂದು ಬಗೆಯ ಆಯುಧ
ಬಸವಂತ (೭೯.೨೧೪) ವಸಂತ, ಚೈತ್ರ ಮತ್ತು ವೈಶಾಖಮಾಸಗಳಲ್ಲಿ ಬರುವ ಋತು
ಬಾತೆ (೬೦.೧೫೧; ೩೮೬.೧೨೧೩) ಸುದ್ದಿ; ಪ್ರಯೋಜನ
ಬಾಯಲ್ಲಿ ಉಗಿವವ (೨೩.೫೨) ಬೇಡರ ಕಣ್ಣಪ್ಪ
ಬಾಯಾರು (೩೯೦.೧೨೩೦) ನೀರಡಿಕೆಯಾಗು, ದಾಹವುಂಟಾಗು
ಬಾರುಕ (೪೭.೧೦೬) ತಳವಾರ
ಬಾಹತ್ತರ (೨೬೯.೮೮೬) ಎಪ್ಪತ್ತೆರಡು
ಬಾಹು (೩೫.೮೦) ತೋಳು
ಬಿರಯ (೧೨೩.೩೬೧) ಅಗಲು
ಬೆಚ್ಚು (೧೦೯.೩೧೯) ಬೆದರು, ಅಂಜು
ಬೆನಕ (೨೧೩.೬೫೪) ವಿಘ್ನೇಶ್ವರ, ಗಣಪತಿ
ಬೆನ್ನಪಳಿ (೯.೨೦) ಒಂದು ವಿಧವ ಕಾಯಿಲೆ
ಬೆಸುವ (೫೯.೧೪೭) ಒಂದುಗೂಡಿಸುವ
ಬೆಳ್ಳ (೫೧.೧೨೦) ಮಂಕ, ಬೆಪ್ಪ, ದಡ್ಡ
ಬೆಳುವೆ (೫೧.೧೨೦) ಮರುಳು, ಮೋಹ
ಬೇಳು (೧೯೩.೫೮೫) ಹೋಮದಲ್ಲಿ ಬಲಿಯನ್ನು ಅರ್ಪಿಸು
ಬೇಳುವೆ (೧೧೨.೩೨೭; ೧೪೪.೪೧೪) ಮಾಯೆ; ಕಳವಳ
ಬೈತಿಡು (೨೯೩.೯೬೭) ಬಚ್ಚಿಡು
ಬೊಕ್ಕ (೧೪೩.೪೧೧) ಹಲ್ಲಿಲ್ಲದವನು, ತಲೆಗೂದಲು ಉದುರಿದವನು

ಬೋದಿಗೆ (೯೧೨.೪೬) ಕಂಬದ ಮೇಲೆ ತೊಲೆಯನ್ನು ನಿಲ್ಲಿಸಲು ಮಾಡಿದ ಸಾಧನೆ

ಬ್ರಹ್ಮ (೩೨.೭೫) ಬ್ರಹ್ಮಜ್ಞಾನ, ಪಾರಮಾರ್ಥಿಕ ವಿಚಾರ

ಭಲ್ಲೂಕ (೩೯೩.೧೨೩೬) ಕರಡಿ

ಭವಿ (೨೩೯.೭೫೫) ಭಕ್ತನಲ್ಲದವನು

ಭಾಂಡ (೧೦೭.೩೧೩) ಸರಕು, ದಾಸ್ತಾನು

ಭಾಗೀರಥಿ (೩೫೬.೧೧೩೧) ಗಂಗೆ

ಭೃತ್ಯಭಾವ (೧೨೨.೩೫೯) ಸೇವಕತನ

ಭ್ರಮರ (೫೮.೧೪೭) ದುಂಬಿ

ಮಂಜರಿ (೩೫೮.೧೧೩೪) ಹೆಣ್ಣು ಬೆಕ್ಕು

ಮಂಡಲ (೧೬೯.೫೦೯) ಸಮೂಹ

ಮಕರ (೧೨೬.೩೭೦) ಮೊಸಳೆ

ಮಕ್ಷಿಕ (೬೦.೧೪೯) ನೊಣ

ಮಗ್ನ (೩೯೮.೯೮೧) ಮುಳುಗು

ಮಟ್ಟಿ (೧೧೦.೩೨೪) ಮಣ್ಣು

ಮಠ (೨೫೫.೮೨೭) ಮನೆ

ಮಡಿ (೫೪.೧೩೨) ಬಾಗು, ಮಣಿ, ಇಲ್ಲವಾಗು

ಮಡುವು (೩.೭) ನದಿ, ಹೊಳೆ ಮುಂತಾದುವುಗಳ ಆಳವಾದ ನೀರಿರುವ ಪ್ರದೇಶ

ಮತ್ಸ್ಯ (೫೨.೧೨೪) ಮೀನು

ಮದಕರಿ (೯೪.೨೭೦) ಮಧಿಸಿದ ಆನೆ

ಮದವಳಿಗೆ (೧೧೯.೩೫೧) ಮದುವಣಗಿತ್ತಿ

ಮದಾಳಿ (೭೪.೧೯೫) ದುಂಬಿ

ಮನಕತ < ಮನಃಕ್ಷತ (೧೯೩.೫೮೬) ಮನಸ್ಸಿನ ಚಿಂತೆ

ಮರುಜವಣಿ (೨೪೬.೭೮೫) ಸಂಜೀವಿನಿ

ಮಲಯಜ (೭೦.೧೮೭) ಶ್ರೀಗಂಧ

ಮಸಕ (೨೬೬.೮೭೫; ೭೯.೨೧೭) ಸಿಟ್ಟು ಆವೇಗ, ತಳಮಳ, ಘರ್ಷಣೆ

ಮಸ್ತಕ (೨೭.೬೨) ಶಿರ

ಮಹಾಜನ (೫೦.೧೧೮) ಬ್ರಾಹ್ಮಣ ಮುಖ್ಯರು

ಮಾಂಜಿಷ್ಠ (೩೧೫.೧೦೩೪) ಅತ್ಯಂತ ಪ್ರಕಾಶಮಾನವಾದ ಕೆಂಪುಬಣ್ಣ

ಮಾರ್ಕೊಳ್ಳೆ (೨೫೮.೮೩೯) ಪ್ರತಿಭಟಿಸೆನು

ಮಾಗಿ (೭೮.೨೧೩; ೮೭.೨೪೮) ಶಿಶಿರ ಋತು, ಚಳಿಗಾಲ

ಮಾದು (೧೮೫.೫೫೯) ನಿವಾರಣೆ

ಮಾನಿಸ (೨೫೩.೮೧೬) ಮನುಷ್ಯ

ಮಾಸಾಳು (೭೯.೨೧೭) ಶೂರ, ಸಾಹಸಿ

ಮಿಥ್ಯ-ತಥ್ಯ (೩೧.೭೨) ಸುಳ್ಳು-ನಿಜ

ಮುಂಚು (೩೨೨.೧೦೫೧) ಮೀರು, ಉಲ್ಲಂಘಿಸು

ಮುಂಡ (೧೬೯.೫೦೯) ತಲೆಯಿಲ್ಲದ ದೇಹ

ಮುಂಡಿಗೆ (೨೬೩.೮೬೩) ಸವಾಲು

ಮುಕುಟ (೨೩.೫೫) ಕಿರೀಟ

ಮುಕುರ (೯.೨೧) ಕನ್ನಡಿ

ಮುರಿ (೨೭.೬೩) ನಾಶವಾಗು

ಮುರುಹ(೨೬೪.೮೬೭) ಮುಸುರೆ

ಮೂಳ (೧೪೩.೪೧೧) ತಿಳಿಗೇಡಿ, ಬೆಪ್ಪ

ಮೃಗ (೯೦.೨೬೦) ಜಿಂಕೆ

ಮೃತ್ತಿಕೆ (೩೪.೭೭) ಮಣ್ಣು

ಮೈಯಕ್ಕು (೨೧೩.೬೫೪) ದೇಹಕ್ಕೆ ಹಿಡಿಸುವುದು

ಮೊಳೆ (೪೩.೯೪) ಮೊಳಕೆ, ಚಿಗುರು

ಮೋಹಳ (೧೪೪.೪೧೪) ಕತ್ತಿ, ಕಠಾರಿ ಮೊದಲಾದುವುಗಳ ಹಿಡಿ

ರಣ (೪೧೬.೧೩೨೧) ಯುದ್ಧ ರುಜೆಯಡಸು (೩೯೯.೧೨೬೨) ರೋಗ ಆವರಿಸು

ರೂಹು (೯.೨೧) ಆಕಾರ

ಲಂಡ (೧೯.೪೩) ಧರ್ಮದಲ್ಲಿ ಶ್ರದ್ಧೆಯಿಲ್ಲದವನು, ದುಷ್ಟ, ಉದ್ಧತ

ಲಂದಣ (೯.೧೯) ಅಡುಗೆ

ಲಾಗು (೨೭೬.೯೦೭) ಹೆಚ್ಚಳ

ಲಾಳಿಲು (೮೫.೨೪೦) ನೆಯ್ಗೆಯಲ್ಲಿ ಬಳಸುವ ಒಂದು ಉಪಕರಣ, ಮಗ್ಗದಲ್ಲಿ ಹೊಕ್ಕಿನ ದಾರವನ್ನು ಸೇರಿಸುವ ಸಾಧನ

ಲೀಯ (೧೫.೩೫) ಸೇರುವಿಕೆ, ಕೂಡುವಿಕೆ

ಲೆಂಕ (೯.೨೧) ನಿಷ್ಠಾವಂತ ಸೇವಕ

ಲೆಂಗಿ (೨೫೪.೮೨೦) ಸೇವಕ

ಲೆಪ್ಪ (೧೩೯.೪೦೧) ಗೊಂಬೆ, ಪುತ್ಥಳಿ

ಲೋಚು (೮.೧೮) ತಲೆಗೂದಲನ್ನು ಕೀಳುವುದು

ವಟ್ಟ (೧೨೧.೩೫೫) ಸೋಡಿ, ರಿಯಾಯಿತಿ

ವರುಣ (೧೨೬.೩೭೦) ಸೂರ್ಯ

ವರ್ಮ (೧೬.೩೬) ರಹಸ್ಯ; ಒಳಾರ್ಥ; ಗೂಢಾರ್ಥ

ವಸ್ತು (೩೬.೮೧; ೩೦೬.೧೦೦೫) ಪರಮಾತ್ಮ

ವಾಜಿ (೩೦೬.೧೦೦೫) ಕುದುರೆ

ವಾಯ (೧೧೪.೩೩೬) ವ್ಯರ್ಥ, ಮೋಸ

ವಾಯುಪೋಷ (೨೯೬.೯೭೭) ಹಾವು

ವಾರಣಾಸಿ(೨೦೪.೬೦೭) ಪವಿತ್ರ ಕ್ಷೇತ್ರವಾದ ಕಾಶಿ

ವಾಸಿ (೬೧.೧೫೪) ಸ್ಪರ್ಧೆ, ಮೇಲಾಟ, ಆಣೆ, ಭಾಷೆ

ವಿಧಾಂತ (೫೪.೧೩೧) ಸೃಷ್ಟಿಸುವವನು

ವಿಷಮಾಕ್ಷ (೨೬೬.೮೭೪) ಕೆಟ್ಟಗಣ್ಣವ

ವಿಷಯ (೨೬೬.೮೭೪) ಕಾಮ, ಇಂದ್ರಿಯಲಾಲಸೆ, ಭೋಗಾಭಿಲಾಷೆ, ಬಯಕೆಯ ವಸ್ತು

ವಿಹಂಗ (೫೭.೧೪೪) ಪಕ್ಷಿ

ವ್ಯಾಧ (೩.೨, ೭೫) ಬೇಡ

ವೃಶ್ಚಿಕ (೩೫೬.೧೧೩೧) ಚೇಳು

ವೆಜ್ಜ (೩೯೬.೧೨೫೨) ತೂತು, ರಂಧ್ರ

ವೇಣು (೬೩೦.೧೬೧) ಬಿದಿರು, ಕೊಳಲು

ವೈಸಿಕ (೨೫೫.೮೨೬) ಕಪಟ, ಮೋಸ, ವಂಚನೆ

ಶರಧಿಯೇಳು < ಸಪ್ತಸಮುದ್ರ (೨೫೧.೮೦೭) ಲವಣ, ಇಕ್ಷು ಸುರಾ, ಸರ್ಪಿಸ್, ದಧಿ, ಕ್ಷೀರ, ಜಲ

ಶುಕ್ತಿ (೫೯.೧೪೭) ಮುತ್ತು

ಶ್ವೇತ (೩೧೫.೧೦೩೪) ಬಿಳಿ

ಶೋಣಿತ (೩೫.೮೦) ರಕ್ತ

ಷಡ್ವಿಧಸ್ಥಲ (೨೬.೬೧) ಭಕ್ತ ಮಹೇಶ ಪ್ರಸಾದಿ ಪ್ರಾಣಲಿಂಗ ಶರಣ ಐಕ್ಯ ಎಂಬ ಈ ಆರು ಭಕ್ತನು ಸಾಧಕಾವಸ್ಥೆಯಲ್ಲಿ ಕ್ರಮಕ್ರಮವಾಗಿ ಏರುವ ಮೆಟ್ಟಿಲುಗಳಾಗಿವೆ

ಷಡುದರ್ಶನ (೧೮.೪೧) ಯೋಗಿ ಜೋಗಿ ಶ್ರವಣ ಸನ್ಯಾಸಿ ಕಾಳಾಮುಖಿ ಪಾಶುಪತಿ (ಚನ್ನಬಸವ. ೪೬೬)

ಷೋಡಶಕಲೆಗಳು (೨೬೯.೮೮೬) ಅಮೃತ ಮಾನದ, ಪೂಷ, ಪುಷ್ಟಿ, ತುಷ್ಟಿ, ರತಿ, ಧೃತಿ, ಶಶಿನಿ, ಚಂದ್ರಿಕ, ಕಾಂತಿ, ಜ್ಯೋತ್ಸ್ನಾ, ಶ್ರೀ, ಪ್ರೀತಿ, ಅಂಗದ, ಪೂರ್ಣ, ಪೂರ್ಣಾಮೃತ ಈ ಹದಿನಾರು ಚಂದ್ರನ ಕಲೆಗಳು.

ಷೋಡಶೋಪಚಾರ (೫೩.೧೨೮; ೧೪೮೫.೪೧೬) ಆವಾಹನ, ಆಸನ, ಪಾದ್ಯ, ಅರ್ಘ್ಯ, ಸ್ನಾನೋದ್ವರ್ತನ, ವಸ್ತ್ರ, ಉಪವೀತ,ಗಂಧ, ಪುಷ್ಪ, ಧೂಪ, ದೀಪ, ನೈವೇದ್ಯ, ಆಚಮನ, ಫಲ, ತಾಂಬೂಲ, ಪ್ರದಕ್ಷಿಣ

ಸಂಚುವ (೨೩೯.೭೫೬) ಕುರುಹು

ಸಂಜೀವನ (೫೪.೧೩೧) ಅಮೃತ

ಸಂದು (೧೬.೩೬) ಕೂಡುವಸ್ಥಾನ; ಭೇದ

ಸಟ್ಟುಪದಿ (೮೧.೨೨೪) ದುಂಬಿ

ಸತ್ತೆ (೪.೮) ಕಸಕಡ್ಡಿ

ಸನ್ನಿಭ (೩೧೯.೧೦೪೪) ಸದೃಶ

ಸಪ್ತಧಾತು (೩೬.೮೧) ರಸ, ರುಧಿರ, ಮಾಂಸ, ಮೇಧಸ್ಸು, ಅಸ್ಥಿ, ಮಜ್ಜೆ, ಶುಕ್ಲ

ಸಬಳ (೧೭೬.೫೨೯) ಈಟಿ

ಸರನಿ (೨೯೬.೯೭೬) ಶಬ್ದ, ನಾದ

ಸರಹು (೩.೮) ಸಣ್ಣ ಪ್ರವಾಹ, ಝರಿ

ಸರಿಗೆ (೨೩೬.೭೩೮) ದಾರ

ಸಹಸ್ರಾಕ್ಷ (೧೯೭.೫೮೩)ದೇವೇಂದ್ರ

ಸಾವಧಾನಿ (೩೮.೮೪) ಎಚ್ಚರವುಳ್ಳವನು

ಸೀರೆ (೨೩೬. ೭೩೮) ವಸ್ತ್ರ

ಸುಮ್ಮಾನ (೨೯.೬೭) ಸಂತೋಷ

ಸುಯಿದಾನಿ (೨೮೪.೯೩೫) ಶಾಂತಿ

ಸುರಗಿ (೨೫೨.೮೧೨) ಕತ್ತಿ, ಚೂರಿ

ಸುರಭಿ (೩೪.೭೭) ಪರಿಮಳ

ಸುಷುಪ್ತಿ (೨೨೫.೬೯೫) ಗಾಢನಿದ್ರೆ

ಸೂಡು (೨೩.೫೫) ಧರಿಸು

ಸೂತಕ (೬.೧೩) ಮೈಲಿಗೆ

ಸೂತ್ರ (೨೫೭.೮೩೪) ಮಣಿಗಳನ್ನು ಬಂಧಿಸುವ ದಾರ

ಸೂಯಲು (೩೮೬.೧೨೧೩) ತುಂಬಿ ಊದಲು (?)

ಸೂಳ (೧೧೨.೩೨೯) ಸರದಿ

ಸೆಜ್ಜೆ (೨೪.೫೭) ಮಲಗುವ ಮನೆ; ಹಾಸುಗೆ

ಸೈವೆರಗು (೧೮೭.೫೬೬) ಅತಿಯಾದ ಆಶ್ಚರ್ಯ

ಸೊಮ್ಮು (೧೪೦.೪೦೩) ಸಂಬಂಧ, ಸೊಬಗು

ಸೊಲ್ಲು (೩೨೪.೧೦೫೫) ನುಡಿ

ಸೋಗೆಗ (೨೪೮.೭೯೪) ವೇಷಧಾರಿ

ಸೋಹಂಭಾವ (೧೮೩.೫೬೫) ತಾನೇ ಪರಮಾತ್ಮನೆಂಬ ಭಾವ

ಸ್ಫಟಲ (೯೯.೨೮೭) ಬಿಚ್ಚಿದ (ಹಾವಿನ) ಹೆಡೆ

ಸ್ವಯವಾಗು (೨೪೮.೭೯೩) ಒಂದಾಗು

ಹಂದರ (೧೭೯.೫೪೨) ಚಪ್ಪರ

ಹಗಿನ (೩೨೬.೧೦೬೦) ಮರದಿಂದ ಸ್ರವಿಸುವ ಜಿಗುಟಾದ ಪದಾರ್ಥ

ಹಡಪ (೭.೧೪) ಕ್ಷೌರಿಕನ ಸಲಕರಣೆಯ ಚೀಲ

ಹಡಿಕೆ (೨೫೧.೮೦೫) ಹೇಸಿಗೆ

ಹಡ್ಡಿಗರು (೨೩೧.೭೧೫) ತುಚ್ಛರು

ಹಡುಹು (೯೬.೨೭೮) ಹೊಲಸು ಪದಾರ್ಥ

ಹಣಿಗೆ (೯.೨೧) ಕೂದಲನ್ನು ಬಾಚುವ ಸಾಧನ

ಹತ್ತೆ (೨೩೫.೭೩೨) ಸಮೀಪ

ಹಪ್ಪು (೯೪.೨೭೧) ಮಾಂಸ

ಹರದಿಗ (೯.೧೯) ವ್ಯಾಪಾರಿ

ಹರವರಿ (೧೪೭.೪೨೬) ವ್ಯಾಪ್ತಿ

ಹರಿ (೭೨.೧೯೧) ಸಿಂಹ

ಹರಿಗೆ (೬೭.೧೭೬) ಗುರಾಣಿ

ಹರಿವಾಣ (೪೫.೧೦೦) ಅಗಲವಾದ ತಟ್ಟೆ

ಹರಿ ಹರಿ (೧೦೦.೨೯೧) ಅಗ್ನಿ ವಾಯು

ಹಲುಬು (೩೧.೭೨) ಗೋಳಾಡು

ಹಲ್ಲಣ (೪೮.೧೧೧) ಜೀನು, ತಡಿ

ಹಲ್ಲಣಿಸು (೨೬೦.೮೫೦) ಸಜ್ಜಾಗು

ಹವಿ (೧೯೩.೫೮೫) ಯಜ್ಞದಲ್ಲಿ ಅಗ್ನಿಗೆ ಆಹುತಿ ಕೊಡುವ ಹಾಲು, ತುಪ್ಪ, ಧಾನ್ಯ ಮೊದಲಾದವು

ಹಸರದವ (೧೮೩.೫೫೩) ವ್ಯಾಪಾರಿ

ಹಸಿ (೬೨.೧೬೦) ಮಾಂಸ.

ಹಸುಕು ನಾರು (೩೨.೭೪) ಹಸಿಯಿಂದ ಉಂಟಾಗುವ ಒಂದು ಬಗೆಯ ವಾಸನೆ, ಕೊಳೆತ ವಾಸನೆ

ಹಸೆ (೯೧.೨೬೧) ರಂಗವಲ್ಲಿ, ಶುಭಕಾರ್ಯಗಳಲ್ಲಿ ಹಾಕುವ ಪೀಠ

ಹಳಚಿಕೆ (೧೦೨.೨೯೬) ಕಾಂತಿ, ಹೊಳಪು

ಹಳಚು (೧೧೦.೩೨೩) ಮುಚ್ಚು

ಹಾಗ (೯೫.೨೭೩) ಹಣವೆಂಬ ನಾಣ್ಯದ ಬೆಲೆಯ ನಾಲ್ಕನೆಯ ಒಂದು ಭಾಗ

ಹಾಯಿ (೩.೮) ದೋಣಿಯ ಕಂಬಕ್ಕೆ ಕಟ್ಟುವ ಬಟ್ಟೆ, ಪಟ

ಹಾರು (೧೪೬.೪೨೨) ನಿರೀಕ್ಷಿಸು, ಬಯಸು
ಹಾವಸೆ (೭.೧೫) ಪಾಚಿ
ಹಾಹೆ (೩೧೫.೧೦೧೦) ಗೊಂಬೆ, ಕಣ್ಣು ಗುಡ್ಡೆ
ಹಾಳ (೧೦೮.೩೧೬) ನಾಯಿ
ಹಿಳಿಲು > ಹಿಣಿಲು (೨೩೫.೭೪೧) ಹೆಣೆಯುವಿಕೆ
ಹಿಳುಕು (೯೨.೨೬೨) ಬಾಣದಹಿಂಭಾಗ; ಪುಂಖ
ಹೀಹಂದಿ (೨೫೧.೮೦೫) ಹೆಣ್ಣುಹಂದಿ
ಹುಗತೆ (೨೭೮.೯೧೪) ಪ್ರವೇಶ
ಹುಗುಲು (೩೯೮.೧೨೬೦) ಸೀಳಿರುಪಿಕೆ (ಯೋನಿ)
ಹುಮುರು (೬೦.೧೫೦) ಕೆಸರು?
ಹುಳ್ಳಿ (೯೭.೨೮೧) ಸಣ್ಣ ಕಟ್ಟಿಗೆ, ಪುರಲೆ
ಹೂಟ (೩೯೮.೧೨೬೦) ಸಿದ್ಧತೆ, ಏರ್ಪಾಡು
ಹೂಣು (೧೧೪.೩೩೬)ಬಲವಾಗಿ ನಾಟು
ಹೂಸಿದ (೯೧.೨೬೧) ಲೇಪಿಸಿದ
ಹೆಕ್ಕಳ (೨೬೭.೮೮೧) ಹಿಗ್ಗು, ಉಬ್ಬು
ಹೆಡಗುಡಿ (೩೮೭.೧೨೧೬) ಹಿಂಗಟ್ಟು, ಹೆಡಮುರಿಗೆ
ಹೆಡೆಗೆ (೨೪೫.೭೮೧) ಮಂಕರಿ, ಬಿದಿರಿನ ಬುಟ್ಟಿ
ಹೆಬ್ಬಾರುವರು (೫೦.೧೧೮) ಹಿರಿಯ ಬ್ರಾಹ್ಮಣರು
ಹೆಳವ (೨೩೬.೭೪೧) ಕಾಲಿಲ್ಲದವ
ಹೇಮ (೨೯೫.೯೩೩) ಚಿನ್ನ
ಹೇಮಚೋರ (೩೨.೭೫) ಚಿನ್ನವನ್ನು ಕದಿಯುವವನು
ಹೇಳಿಗೆ (೫೨.೧೨೪) ಬುಟ್ಟಿ
ಹೊಗು (೨೫೫.೮೨೭) ಪ್ರವೇಶಿಸು
ಹೊಟ್ಟೆ < ಹೋಃಕೆ (೨೩೮.೭೫೧) ಬೊಬ್ಬೆ
ಹೊಡಕೆ (೧೫೦.೪೩೬) ಒಂದು ಜಾತಿಯ ಹುಲ್ಲು; ಆನೆಹುಲ್ಲು
ಹೊಣಕೆ (೪೧೯.೧೩೩೦) ಸ್ಪರ್ಧೆ, ಶಪಥ
ಹೊಯ್ಲು (೧೭೩.೫೨೨) ಹೊಡೆತ, ಪೆಟ್ಟು
ಹೊರಸು (೨೬೬.೮೭೭) ಹಗ್ಗದಿಂದ ಮಾಡಿದ ಮಂಚ
ಹೊಲ (೧೭.೩೯) ಎಡೆ, ಸ್ಥಳ
ಹೊಲಬು (೩೯.೮೭; ೪.೯) ರೀತಿ, ಬಗೆ; ಮಾರ್ಗ, ದಾರಿ
ಹೊಲ್ಲಹ (೨೬೬.೮೭೭) ಕೆಟ್ಟದ್ದು
ಹೋಹಾಗ (೧೧.೨೨) ಹೋಗುವಾಗ

# ಕೋಲ ಶಾಂತಯ್ಯನ ವಚನಗಳ ಅಕಾರಾದಿ


| | ಪು. ಸಂಖ್ಯೆ | ವ. ಸಂಖ್ಯೆ |
|---|---|---|
| **ಅ** | | |
| ಅಂಗ ಮಾಸಿದಲ್ಲಿ ಜಲದೊಲುಮೆ | ೫೫ | ೧೩೫ |
| ಅಂಗಲಿಂಗ ಸಂಬಂಧ ಶೈವಗುರು | ೫೯ | ೧೪೮ |
| ಅಕಾಯದ ಕಣ್ಣಿನಲ್ಲಿ ನೋಡಿ | ೬೯ | ೧೮೪ |
| ಅಣು ಇರುಹಿನ ಮರಿ ಬ್ರಹ್ಮನ | ೬೫ | ೧೭೦ |
| ಅರ್ತಿಗಾರಿಕೆಯಲ್ಲಿ ಕೆಲಬರು | ೬೨ | ೧೫೮ |
| ಅಲಗನೇರಿ ಪುಷ್ಪ ಕೊಯಿದು | ೫೧ | ೧೨೧ |
| **ಆ** | | |
| ಆಡಿನ ಕಾಲ ಮುರಿದು ಕೋಡಗದ | ೬೮ | ೧೮೧ |
| ಆತ್ಮತತ್ತ್ವ ವಸ್ತುವಾದಡೆ | ೪೫ | ೧೦೦ |
| ಆತ್ಮನಿದ್ದು ಶಯನಾಂತವಾಗಿ | ೫೫ | ೧೩೬ |
| ಆರಿಗೂ ತೋರದ ಅಂಬರದಲ್ಲಿ | ೬೩ | ೧೬೨ |
| ಆರು ಸ್ಥಲವಸರಿದು | ೪೫ | ೯೯ |
| ಆರೂ ಇಲ್ಲದ ಠಾವಿನಲ್ಲಿ ಊರಕಟ್ಟಿ | ೫೨ | ೧೨೫ |
| ಆಸೆಯಳಿದು ನಿರಾಸಕನಾದಲ್ಲಿ | ೬೭ | ೧೭೬ |
| **ಇ** | | |
| ಇಚ್ಛಾಶಕ್ತಿ ಹೋತಿಂಗೆ ಸತಿಯಾಪಲ್ಲಿ | ೭೦ | ೧೮೬ |
| ಇದಿರಿಟ್ಟು ಪೂಜಿಸುವಲ್ಲಿ ಷೋಡಶ | ೫೩ | ೧೨೮ |
| ಇಷ್ಟಪ್ರಾಣವ ಸಂಬಂಧಿಸ | ೪೨ | ೮೯ |
| **ಉ** | | |
| ಉದಕ ನಾನಾ ವರ್ಣದ ರೂಪಿನಲ್ಲಿ | ೬೮ | ೧೮೦ |
| **ಊ** | | |
| ಊರ ಬಾರುಕನ ಬಾಗಿಲಲ್ಲಿ | ೪೭ | ೧೦೬ |
| ಊರೆಲ್ಲರೂ ಕೂಡಿಕೊಂಡು | ೫೧ | ೧೧೯ |

| | ಪು. ಸಂಖ್ಯೆ | ವ. ಸಂಖ್ಯೆ |
|---|---|---|
| **ಎ** | | |
| ಎನಗುಣಲಿಕ್ಕಿದರಯ್ಯಾ ಸಿರಿಯಾಳ | ೭೧ | ೧೮೯ |
| ಎನ್ನಾಕಾರವೆ ನೀನಯ್ಯಾ ಬಸವಣ್ಣ | ೭೧ | ೧೯೦ |
| **ಒ** | | |
| ಒಂದಿರುಹಿನ ಗೂಡಿನಲ್ಲಿ | ೬೩ | ೧೬೩ |
| ಒಂದು ಯೋನಿಯಲ್ಲಿ | ೪೨ | ೯೧ |
| **ಓ** | | |
| ಓಡ ಕುದುರೆಯ ಮೇಲೆ ಮಸಿಯ | ೪೮ | ೧೧೧ |
| **ಕ** | | |
| ಕಂಡವರಿಗೆ ದೇವರ ಕಟ್ಟುವ | ೬೦ | ೧೫೦ |
| ಕಣ್ಣಿನೊಳಗಣ ಮತ್ಸ್ಯಕ್ಕೆ ಬಲೆಯ | ೫೨ | ೧೨೪ |
| ಕಣ್ಣಿಲ್ಲದ ಕುರುಡ ಕನ್ನಡಿಯ | ೫೨ | ೧೨೬ |
| ಕಳ್ಳ ಉಸುರಡಗಿ ಬೆಳ್ಳನ | ೫೫ | ೧೩೭ |
| ಕಾಮಧೇನುವಿನ ನಡುವೆ ಒಂದು | ೬೫ | ೧೬೯ |
| ಕಾಳಿಯ ಹೊಲದ ಓಣಿಯ | ೫೧ | ೧೨೦ |
| ಕೊಲೆ ಹೊಲೆ ಪಾರದ್ವಾರವ | ೫೬ | ೧೪೦ |
| ಕೋಣನ ಕಿವಿಯಲ್ಲಿ ಮೂರು | ೫೧ | ೧೨೨ |
| ಕೋಲ ಬಳಿಯ ಅಂಧಕನಂತೆ | ೬೯ | ೧೮೩ |
| ಕೋಲು ಕಪ್ಪರವ ಹಿಡಿದು | ೫೭ | ೧೪೨ |
| ಕ್ಷಮೆಯಿಲ್ಲದ ಭಕ್ತ | ೬೧ | ೧೫೫ |
| **ಗ** | | |
| ಗೋವು ಮೊದಲು ಚತುಃಪಾದಿ | ೬೯ | ೧೮೨ |
| **ಚ** | | |
| ಚರ ಸ್ಥಾವರವಾದುದುಂಟೆ? | ೫೭ | ೧೪೩ |

ಜ

ಜ ಎಂದಲ್ಲಿ ಜನನ ನಾಸ್ತಿಯಾಗಿ ೫೭ ೧೪೪
ಜಡೆ ಮುಡಿ ಬೋಳು ೬೧ ೧೫೩
ಜಲದ ಮಧ್ಯದಲ್ಲಿ ೫೦ ೧೧೭
ಜಲದುಡುಕೆಯ ತುಂಬಿ ೪೬ ೧೦೩

ತ

ತಡಿ ಮಡುವಾದಡೆ ಮೊಗವ ೬೬ ೧೭೨
ತತ್ಕಾಲವನರಿವ ಕುಕ್ಕುಟನ ೫೦ ೧೧೬
ತನಗೆ ಇದಿರಾದ ಗುರುವ ಕಳೆದು ೫೮ ೧೪೬
ತಾ ಗುರುವಾಹಾಗ ತನ್ನ ಗುರುವ ೫೯ ೧೪೭
ತ್ರಿಸಂಧಿಯಲ್ಲಿ ನಿಂದು ೪೯ ೧೧೫

ದ

ದಾಳಿ ಹೋಪ ಆಳಿನ ಉಸುರಿನಲ್ಲಿ ೬೩ ೧೬೧
ದಿನಚರಿಯೆಂಬ ಪಟ್ಟಣದಲ್ಲಿ ೪೭ ೧೦೮

ಧ

ದರೆ ಸಲಿಲ ಅನಲ ರವಿ ಶಶಿ ೪೩ ೯೫
ಧರೆ ಸಿರಿ ಉರಿ ಮೂರು ಕೂಡಿ ೭೦ ೧೮೭
ಧಾತ ಮಾಡುವ ತೆರಪನರಿಯದೆ ೫೬ ೧೩೮

ನ

ನಾಮ ಘಟ್ಟಿಸಿಯಲ್ಲದೆ ಕರೆದಡೆ ೫೪ ೧೩೦
ನಿರ್ಮಲ ಜಲಸ್ಥಾನದಲ್ಲಿ ೫೪ ೧೩೩

ಪ

ಪಂಚ ಪೃಥ್ವಿಯ ಮಧ್ಯದಲ್ಲಿ ೪೮ ೧೦೯
ಪಂಚವಳಯ ವಿಸ್ತೀರ್ಣದಲ್ಲಿ ೫೦ ೧೧೮
ಪಥವನರಿಯದೆ ಇಷ್ಟವ ಕಟ್ಟುವ ೬೦ ೧೪೯
ಪುಟ್ಟಿದ ಮರದಲ್ಲಿ ಹಾರಿದ ೬೪ ೧೬೬
ಪೂರ್ವವ ಕಳೆದು ಪುನರ್ಜಾತನಾನೆ ೫೬ ೧೪೧
ಪೃಥ್ವಿ ಪೃಥ್ವಿಯ ಕೂಡಿದಲ್ಲಿ ೪೫ ೯೭

ಬ

ಬಾಹ್ಯದ ನೀತಿ ೬೬ ೧೭೪
ಬಾಳೆ ಬಲಿದು ೪೯ ೧೧೪
ಬಿತ್ತಿದ ಬೆಳೆ ಕಟ್ಟಿದ ಕೆರೆ ೬೨ ೧೫೭
ಬಿತ್ತು ಅಂಕುರವ ನುಂಗಿಪ್ಪಾಗ ೪೨ ೯೦
ಬಿಸಿಲ ಮುಂದಣ ೭೨ ೧೯೧
ಬೇವಿನ ಮರದಲ್ಲಿ ಕಾಗೆ ಮನೆಯ ೪೭ ೧೦೭
ಬ್ರಹ್ಮನ ಬಾಯ ಓಗರವನುಂಡು ೬೪ ೧೬೭

ಭ

ಭಕ್ತನಾದಲ್ಲಿ ಆವ ಸೋಂಕು ೬೭ ೧೭೭
ಭಕ್ತನಾದಲ್ಲಿ ದ್ರವ್ಯವ ಸವಸಿ ೬೧ ೧೫೪
ಭಕ್ತಿಜ್ಞಾನ ವೈರಾಗ್ಯದಿಂದ ೪೩ ೯೨

ಮ

ಮದನನ ಗುಹ್ಯದಲ್ಲಿ ಒಂದು ೪೮ ೧೧೦
ಮದ್ದಿಗೆ ರುಜೆಯಡಸಿ ೪೯ ೧೧೩
ಮನಮಂಗಳಾಂಗಿಯೆಂಬ ೭೦ ೧೮೫
ಮನೆಯ ಮಂದಿರದ ನಿಳಯವ ೫೪ ೧೩೨
ಮರುತ ಸಂಚಾರಿಸಿದಲ್ಲಿ ೪೪ ೯೬
ಮರೆಯ ಮನೆಯ ಮಧ್ಯದಲ್ಲಿ ೫೨ ೧೨೩
ಮಲೆಯ ಮಂದಿರದ ಕಾಳವ್ವೆಯ ೪೬ ೧೦೪
ಮಹಾಮನೆಯ ಮಂಟಪದಲ್ಲಿ ೬೪ ೧೬೪
ಮಾಡಿ ಆಡಲೇತಕ್ಕೆ? ೬೧ ೧೫೬
ಮಾತ ಬಲ್ಲವನಾದಡೆ ಸರ್ವಜೀವದ ೬೬ ೧೭೩
ಮೂರು ಮೊಲೆಯನುಂಡು ೪೬ ೧೦೨
ಮೂಲದ ಮೊಳೆಯ ಮುರಿದಲ್ಲಿ ೪೩ ೯೪
ಮೃತ ಬೊಂಬೆಯ ಗದಕವ ಪಾಶ ೬೬ ೧೭೧

ರ

ರಾಜ್ಯದಲ್ಲಿ ಹೋದಲ್ಲಿ ರಾಯತನ ೭೧ ೧೮೮

ಲ

ಲಂದಣಗಿತ್ತಿಯ ಮಾತು ೬೨ ೧೫೯
ಲಿಂಗಕ್ಕೆ ಮಜ್ಜನವ ಮಾಡಿದಲ್ಲಿ ೫೫ ೧೩೪

ವ

ವಾರಿ ಸಲಿಲವಲ್ಲಿ ಒಂದು ಶರಧಿ ೬೫ ೧೪೮
ವೇಸಿಯ ಸಂಗ ದ್ರವ್ಯದ ಕೇಡು ೬೭ ೧೭೫
ವ್ರತ ನೇಮವ ತೋರಿ ೬೨ ೧೬೦

**ಶ**

ಶಾಸ್ತ್ರವೆ ಅಡ್ಡಣಿಗೆಯಾಗಿ ೪೫ ೧೦೦

**ಸ**

ಸಂಜೀವನವ ತಂದೆನೆಂದಡೆ ೫೪ ೧೩೧
ಸಂಪಗೆಯ ತಂಬೆಲರಿನಲ್ಲಿ ೬೪ ೧೬೫
ಸಕಲ ವ್ಯಾಪಾರದಲ್ಲಿ ೬೮ ೧೭೯
ಸತ್ತ ಹಾವು ಹೆಣನ ಕಚ್ಚಿ ೪೯ ೧೧೨
ಸತ್ವರಜ ತಮವೆಂಬ ಮೂರು ೫೩ ೧೨೭
ಸದ್ಗತಿಯ ತೋರುವ ಗುರುವಿಂಗೆ ೬೦ ೧೫೨
ಸದ್ಗುರುಮೂರ್ತಿಯ ಇರವು ೫೮ ೧೪೫
ಸಮಯ ಸಮೂಹ ದರುಶನ ೫೬ ೧೩೯
ಸುಖ ದುಃಖ ಸತಿಪುರುಷರಿಗೂ ೬೭ ೧೭೮
ಸೂತೆಯಲ್ಲಿ ಬೀಜ ಹುಟ್ಟಿದಡೆ ೬೦ ೧೫೧
ಸ್ಥಳಕುಳವನೆತ್ತಿದಲ್ಲಿಹ ಸಮಯಕ್ಕೆ ೪೩ ೯೩

**ಹ**

ಹಲವ ತೊಳೆವ ಮಡಿವಾಳಂಗೆ ೫೪ ೧೨೯
ಹಿತ್ತಿಲ ಬಾಗಿಲಲ್ಲಿ ಹೋಹಡೆತ್ತ ೪೭ ೧೦೫
ಹೇಮ ಬಣ್ಣವ ಕೂಡಿದ ೪೪ ೯೮

# ಆಕರ ಗ್ರಂಥಗಳು


ಅದ್ವೈತಾನಂದದ ವಚನಗಳು
ಸಂ. ಡಾ. ಬಿ.ಆರ್. ಹಿರೇಮಠ
ವೀರಶೈವ ಅಧ್ಯಯನ ಸಂಸ್ಥೆ
ಶ್ರೀ ಜಗದ್ಗುರು ತೋಂಟದಾರ್ಯ ಸಂಸ್ಥಾನಮಠ,
ಗದಗ. ೧೯೮೩

ಅನುಭಾವಜ್ಞಾನ ಸಾರಾಮೃತ ಸಂಪಾದನಾಸ್ತೋತ್ರ
-ಸಂಪಾದನೆಯ ಪರ್ವತೇಶ್ವರ
ಸಂ. ಬಿ.ಆರ್. ಹೂಗಾರ, ವೀರಶೈವ ಅಧ್ಯಯನ ಸಂಸ್ಥೆ
ಶ್ರೀ ಜಗದ್ಗುರು ತೋಂಟದಾರ್ಯ ಸಂಸ್ಥಾನಮಠ,
ಗದಗ. ೧೯೮೯

ಆಚರಣೆಯ ಸಂಬಂಧದ ವಚನಗಳು
-ಸಂಪಾದನೆಯ ಸಿದ್ಧವೀರೇಶ್ವರದೇವರು
ಸಂ. ಪಿ.ಎಂ. ಗಿರಿರಾಜು
ಗೌ. ಸಂ. 'ಶರಣ ಸಂತಾನ' (ತ್ರೈಮಾಸಿಕ)
೪೪೭-ಸಂತೇಪೇಟೆ, ಮೈಸೂರು-೨೪. ೧೯೮೦

ಆಚರಣೆಯ ಸಂಬಂಧವ ವಚನಗಳು
-ಸಂಪಾದನೆಯ ಹರತಾಳ ಚನ್ನನಂಜೆಯದೇವರು
ಸಂ. ಪಿ.ಎಂ. ಗಿರಿರಾಜು
ಗೌ. ಸಂ. 'ಶರಣ ಸಂತಾನ' (ತ್ರೈಮಾಸಿಕ)
೪೪೭-ಸಂತೇಪೇಟೆ, ಮೈಸೂರು-೨೪. ೧೯೮೨

ಎಲ್ಲ ಪುರಾತನರ ವಚನಗಳು
-ಕುಂತೂರ ಮಹತ್ತದೇವರು
ಸಂ. ಜಿ.ಎ. ಶಿವಲಿಂಗಯ್ಯ
ವೀರಶೈವ ಅಧ್ಯಯನ ಸಂಸ್ಥೆ

ಶ್ರೀ ಜಗದ್ಗುರು ತೋಂಟದಾರ್ಯ ಸಂಸ್ಥಾನಮಠ,
ಗದಗ. ೧೯೯೦

ಎಲ್ಲ ಪುರಾತರ ಸ್ತೋತ್ರದ ವಚನಗಳು
ಸಂ. ಡಾ. ವೀರಣ್ಣ ರಾಜೂರ
ವೀರಶೈವ ಅಧ್ಯಯನ ಸಂಸ್ಥೆ
ಶ್ರೀ ಜಗದ್ಗುರು ತೋಂಟದಾರ್ಯ ಸಂಸ್ಥಾನಮಠ,
ಗದಗ. ೧೯೮೮

ಏಕೋತ್ತರ ಶತಸ್ಥಲ
-ಸಿದ್ಧಲಿಂಗ ಸಂ. ಫ.ಗು. ಹಳಕಟ್ಟಿ
ಶಿವಾನುಭವ ಗ್ರಂಥಮಾಲಾ-೧೪, ಬಿಜಾಪುರ.

ಏಕೋತ್ತರ ಶತಸ್ಥಲಸಾರಾಮೃತ (ಅಪ್ರಕಟಿತ)
-ಕಟ್ಟಿಗೆಹಳ್ಳಿ ಸಿದ್ಧಲಿಂಗಸ್ವಾಮಿ .

ಏಕೋತ್ತರ ಶತಸ್ಥಲ
-ಮಹಾಲಿಂಗದೇವರು
ಸಂ. ಪ್ರೊ. ಸಂ.ಶಿ. ಭೂಸನೂರಮಠ
ಶ್ರೀ ನಿ.ಪ್ರ.ಸ್ವ. ಶಿವಬಸವ ಮಹಾಸ್ವಾಮಿಗಳು
ರುದ್ರಾಕ್ಷಿಮಠ, ನಾಗನೂರು, ಬೆಳಗಾಂ ಜಿಲ್ಲೆ. ೧೯೭೪

ಗಣಭಾಷ್ಯ ರತ್ನಮಾಲೆ
-ಗುಬ್ಬಿಯ ಮಲ್ಲಣಾರ್ಯ
ಸಂ. ವೇ. ನಂಜುಂಡಶಾಸ್ತ್ರಿಗಳವರ ಶಿವಪ್ಪ ಶಾಸ್ತ್ರಿಗಳು
ಬಳ್ಳಾಪುರಪೇಟೆ, ಬೆಂಗಳೂರು ಸಿಟಿ. ೧೯೦೯

ಚಿತ್ಕ್ರಿಯಾ ಸಂಗ್ರಹ
-ಜಿಗುನಿ ಮರುಳದೇವರು
ಸಂ. ಡಾ. ಎಸ್. ವಿದ್ಯಾಶಂಕರ
ವೀರಶೈವ ಅಧ್ಯಯನ ಸಂಸ್ಥೆ
ಶ್ರೀ ಜಗದ್ಗುರು ತೋಂಟದಾರ್ಯ ಸಂಸ್ಥಾನಮಠ,
ಗದಗ. ೧೯೮೩

ಚಿದೈಶ್ವರ್ಯ ಚಿದಾಭರಣ
-ಗುರುಸಿದ್ಧದೇವರು
ಸಂ. ಪಿ.ಎಂ. ಗಿರಿರಾಜು
ಗೌ. ಸಂ. 'ಶರಣ ಸಂತಾನ' (ತ್ರೈಮಾಸಿಕ)
೪೪೭-ಸಂತೇಪೇಟೆ, ಮೈಸೂರು-೨೪. ೧೯೮೫

ಜ್ಞಾನಷಟ್ಸ್ಥಲಸಾರ
-ಗುರುಶಂಕರ ಸ್ವಾಮಿಗಳು
ಸಂ. ಡಾ. ವೀರಣ್ಣ ರಾಜೂರ
ವೀರಶೈವ ಅಧ್ಯಯನ ಸಂಸ್ಥೆ
ಶ್ರೀ ಜಗದ್ಗುರು ತೋಂಟದಾರ್ಯ ಸಂಸ್ಥಾನಮಠ,
ಗದಗ. ೧೯೯೧

ನಿಷ್ಕಲಲಿಂಗ ಚಿದಾನಂದ ಲೀಲೆ (ಅಪ್ರಕಟಿತ ಓಲೆ ಕೃತಿ)
ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು.

ಪರಮಮೂಲಜ್ಞಾನ ಷಟ್‌ಸ್ಥಲ
ಸಂ. ಡಾ. ಎಂ.ಎಸ್. ಸುಂಕಾಪುರ
ಕನ್ನಡ ಅಧ್ಯಯನ ಪೀಠ
ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.

ಪ್ರಭುದೇವರ ಸ್ತೋತ್ರದ ವಚನಗಳು
-ಸಂಪಾದನೆಯ ಸಿದ್ಧವೀರಣಾರ್ಯ
ಸಂ. ಎಸ್. ಶಿವಣ್ಣ
ವೀರಶೈವ ಅಧ್ಯಯನ ಸಂಸ್ಥೆ
ಶ್ರೀ ಜಗದ್ಗುರು ತೋಂಟದಾರ್ಯ ಸಂಸ್ಥಾನಮಠ,
ಗದಗ. ೧೯೯೧

ಪ್ರಭುದೇವರ ಷಟ್‌ಸ್ಥಲ ಜಂಗಮಸ್ಥಲ ನಿರ್ದೇಶ
ಸಂ. ಡಾ. ವೀರಣ್ಣ ರಾಜೂರ
ವೀರಶೈವ ಅಧ್ಯಯನ ಸಂಸ್ಥೆ
ಶ್ರೀ ಜಗದ್ಗುರು ತೋಂಟದಾರ್ಯ ಸಂಸ್ಥಾನಮಠ,
ಗದಗ. ೧೯೮೯

ಪ್ರಸಾದಿಸ್ಥಲದ ವಚನಗಳು
ಸಂ. ಡಾ. ಎಂ.ಎಸ್. ಸುಂಕಾಪುರ
ಕನ್ನಡ ಅಧ್ಯಯನ ಪೀಠ
ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.

ಬಸವ ಸ್ತೋತ್ರದ ವಚನಗಳು ೧
-ಸಂಪಾದನೆಯ ಬೋಳಬಸವರಾಜದೇವರು
ಸಂ. ಡಾ. ಎಂ.ಎಂ. ಕಲ್ಬುರ್ಗಿ
ಬಸವೇಶ್ವರ ಪೀಠ, ಕರ್ನಾಟಕ ವಿಶ್ವವಿದ್ಯಾಲಯ,
ಧಾರವಾಡ ೧೯೭೬.

ಬ್ರಹ್ಮಾದ್ವೈತ ಸಿದ್ಧಾಂತ ಷಟ್‌ಸ್ಥಲಾಭರಣ
-ಕರಸ್ಥಲದ ಮಲ್ಲಿಕಾರ್ಜುನ ಒಡೆಯರು
ಸಂ. ಡಾ. ಆರ್.ಸಿ. ಹಿರೇಮಠ
ಕನ್ನಡ ಅಧ್ಯಯನ ಪೀಠ
ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ. ೧೯೭೩

ಭಕ್ತ್ಯಾನಂದ ಸುಧಾರ್ಣವ
ಸಂ. ಡಾ. ವೀರಣ್ಣ ರಾಜೂರ
ವೀರಶೈವ ಅಧ್ಯಯನ ಸಂಸ್ಥೆ
ಶ್ರೀ ಜಗದ್ಗುರು ತೋಂಟದಾರ್ಯ ಸಂಸ್ಥಾನಮಠ,
ಗದಗ. ೧೯೮೫

ಮಿಶ್ರಸ್ತೋತ್ರದ ವಚನಗಳು
-ಎಳಮಲೆಯ ಗುರುಶಾಂತದೇವ
ಸಂ. ಡಾ. ವೀರಣ್ಣ ರಾಜೂರ
ವೀರಶೈವ ಅಧ್ಯಯನ ಸಂಸ್ಥೆ
ಶ್ರೀ ಜಗದ್ಗುರು ತೋಂಟದಾರ್ಯ ಸಂಸ್ಥಾನಮಠ,
ಗದಗ. ೧೯೮೩

ಮಿಶ್ರಸ್ತೋತ್ರದ ವಚನಗಳು
-ಸಂಪಾದನೆಯ ಚೆನ್ನಂಜೇದೇವರು
ಸಂ. ಹೊಸಹಳ್ಳಿಯ ಸಂಸ್ಥಾನಮಠದ ಶ್ರೀ ಪ್ರಭುಸ್ವಾಮಿಗಳು
ಹೊಸಹಳ್ಳಿ. ೧೯೫೨

ಮೋಕ್ಷದರ್ಶನ ಸಂಗ್ರಹ (ಅಪ್ರಕಟಿತ)
-ಪ್ರಭುದೇಶಿಕ
ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ
ಮಾನಸಗಂಗೋತ್ರಿ, ಮೈಸೂರು.

ಲಿಂಗಚಿದಮೃತ ಬೋಧೆ
ಸಂ. ಡಾ. ಎಂ.ಎಸ್. ಸುಂಕಾಪುರ
ಕನ್ನಡ ಅಧ್ಯಯನ ಪೀಠ
ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ. ೧೯೭೫

ಲಿಂಗಲೀಲಾವಿಲಾಸ ಚಾರಿತ್ರ
-ಕಲ್ಲುಮಠದ ಪ್ರಭುದೇವ
ಸಂ. ಪ್ರೊ. ಸಂ.ಶಿ. ಭೂಸನೂರಮಠ

ಶ್ರೀ ನಿ.ಪ್ರ.ಸ್ವ. ಮೃತ್ಯುಂಜಯ ಮಹಾಸ್ವಾಮಿಗಳು
ಮುರುಘಾಮಠ, ಧಾರವಾಡ. ೧೯೫೬

ಲಿಂಗವಿಕಳಾವಸ್ಥೆಯ ವಚನಗಳು
-ಎಳಮಲೆಯ ಗುರುಶಾಂತದೇವ
ಸಂ. ಡಾ. ವೀರಣ್ಣ ರಾಜೂರ
ವೀರಶೈವ ಅಧ್ಯಯನ ಸಂಸ್ಥೆ
ಶ್ರೀ ಜಗದ್ಗುರು ತೋಂಟದಾರ್ಯ ಸಂಸ್ಥಾನಮಠ,
ಗದಗ. ೧೯೮೩

ಲಿಂಗಸ್ತೋತ್ರದ ವಚನಗಳು
-ಸಂಪಾದನೆಯ ಸಿದ್ಧವೀರಣ್ಣದೇವರು
ಸಂ. ವೀರಭದ್ರಪ್ಪ ಕೊಪ್ಪಳ
ಶ್ರೀ ಗುರು ಬಸವ ಮಂಟಪ ಟ್ರಸ್ಟ್ ಕಮಿಟಿ, ಹುಬ್ಬಳ್ಳಿ. ೧೯೬೪

ವಚನಸಾರ
ಸಂ. ಡಾ. ವೀರಣ್ಣ ರಾಜೂರ
ವೀರಶೈವ ಅಧ್ಯಯನ ಸಂಸ್ಥೆ
ಶ್ರೀ ಜಗದ್ಗುರು ತೋಂಟದಾರ್ಯ ಸಂಸ್ಥಾನಮಠ,
ಗದಗ. ೧೯೮೯

ವಚನಾಮೃತಸಾರ
ಸಂ. ಪ್ರೊ. ಕಾಶಿ ಪುಟ್ಟಸೋಮಾರಾಧ್ಯರು ಮತ್ತು ಡಾ. ವೀರಣ್ಣ ರಾಜೂರ
ಮಂಗಳ ಪ್ರಕಾಶನ
ಕಲ್ಯಾಣ ನಗರ, ಧಾರವಾಡ. ೧೯೭೯

ವಚನೈಕೋತ್ತರ ಶತಸ್ಥಲ
-ಚೆನ್ನಬಸವಣ್ಣ
ಸಂ. ಜಿ.ಎ. ಶಿವಲಿಂಗಯ್ಯ
ವೀರಶೈವ ಅಧ್ಯಯನ ಸಂಸ್ಥೆ
ಶ್ರೀ ಜಗದ್ಗುರು ತೋಂಟದಾರ್ಯ ಸಂಸ್ಥಾನಮಠ,
ಗದಗ. ೧೯೮೭

ವಿರತಾಚರಣೆಯ ಶರಣ ಸಂಬಂಧದ ವಚನಗಳು
-ಶಂಕರದೇವರು
ಸಂ. ಪಿ.ಎಂ. ಗಿರಿರಾಜು
ಗೌ. ಸಂ. 'ಶರಣ ಸಂತಾನ' (ತ್ರೈಮಾಸಿಕ)
೪೪೭-ಸಂತೇಪೇಟೆ, ಮೈಸೂರು-೨೪. ೧೯೭೯

ವಿಶೇಷಾನುಭವ ಷಟ್‌ಸ್ಥಲ
ಸಂ. ಡಾ. ಆರ್.ಸಿ. ಹಿರೇಮಠ
ಕನ್ನಡ ಅಧ್ಯಯನ ಸಂಸ್ಥೆ
ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ. ೧೯೭೧

ವೀರಶೈವ ಚಿಂತಾಮಣಿ
-ಮಹದ್ದೇವಯೋಗಿ
ಸಂ. ಡಾ. ಆರ್.ಸಿ. ಹಿರೇಮಠ
ಕನ್ನಡ ಅಧ್ಯಯನ ಸಂಸ್ಥೆ
ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ. ೧೯೭೧

ಶರಣಮುಖಮಂಡನ
ಸಂ. ಡಾ. ಬಿ.ವಿ. ಶಿರೂರ ಮತ್ತು ಶ್ರೀ ಬಿ.ಆರ್. ಹೂಗಾರ
ವೀರಶೈವ ಅಧ್ಯಯನ ಸಂಸ್ಥೆ
ಶ್ರೀ ಜಗದ್ಗುರು ತೋಂಟದಾರ್ಯ ಸಂಸ್ಥಾನಮಠ,
ಗದಗ. ೧೯೮೮

ಶರಣ ಚಾರಿತ್ರದ ವಚನಗಳು
-ಸಂಪಾದನೆಯ ಸಣ್ಣ ಬರಹದ ಗುರುಬಸವ ರಾಜದೇವರು
ಸಂ. ಡಾ. ಬಿ.ವ್ಹಿ. ಶಿರೂರ
ವೀರಶೈವ ಅಧ್ಯಯನ ಸಂಸ್ಥೆ
ಶ್ರೀ ಜಗದ್ಗುರು ತೋಂಟದಾರ್ಯ ಸಂಸ್ಥಾನಮಠ,
ಗದಗ. ೧೯೮೪

ಶರಣಸ್ತೋತ್ರದ ವಚನಗಳು
-ಎಳಮಲೆಯ ಗುರುಶಾಂತದೇವ
ಸಂ. ಡಾ. ವೀರಣ್ಣ ರಾಜೂರ
ವೀರಶೈವ ಅಧ್ಯಯನ ಸಂಸ್ಥೆ
ಶ್ರೀ ಜಗದ್ಗುರು ತೋಂಟದಾರ್ಯ ಸಂಸ್ಥಾನಮಠ,
ಗದಗ. ೧೯೮೩

ಶಿವನ ಬಿರುದಾವಳಿಸ್ತೋತ್ರದ ವಚನಗಳು
-ಸಂಪಾದನೆಯ ಸಿದ್ಧವೀರಣಾರ್ಯ
ಸಂ. ಎಸ್. ಶಿವಣ್ಣ
ವೀರಶೈವ ಅಧ್ಯಯನ ಸಂಸ್ಥೆ
ಶ್ರೀ ಜಗದ್ಗುರು ತೋಂಟದಾರ್ಯ ಸಂಸ್ಥಾನಮಠ,
ಗದಗ. ೧೯೯೧

ಶಿವಮಹಿಮಸ್ತೋತ್ರದ ವಚನ
-ಸಂಪಾದನೆಯ ಸಿದ್ಧವೀರೇಶ್ವರದೇವರು (ವೀರಸಂಗಯ್ಯ)
ಸಂ. ಡಾ. ವೀರಣ್ಣ ರಾಜೂರ
ಕರ್ನಾಟಕ ಭಾರತಿ (ತ್ರೈಮಾಸಿಕ) ಸಂ. ೧೯ ಸಂ. ೨ ೧೯೮೯

ಶಿವಯೋಗ ಚಿಂತಾಮಣಿ
-ಜಾಳಿಗೆಕಂತೆ ಸಿದ್ಧಲಿಂಗ ಶಿವಯೋಗಿಗಳು
ಸಂ. ಡಾ. ಉಮಾದೇವಿ
ವೀರಶೈವ ಅಧ್ಯಯನ ಸಂಸ್ಥೆ
ಶ್ರೀ ಜಗದ್ಗುರು ತೋಂಟದಾರ್ಯ ಸಂಸ್ಥಾನಮಠ,
ಗದಗ. ೧೯೮೭

ಶೀಲ ಸಂಪಾದನೆ
ಸಂ. ಡಾ. ವೀರಣ್ಣ ರಾಜೂರ
ವೀರಶೈವ ಅಧ್ಯಯನ ಸಂಸ್ಥೆ
ಶ್ರೀ ಜಗದ್ಗುರು ತೋಂಟದಾರ್ಯ ಸಂಸ್ಥಾನಮಠ,
ಗದಗ. ೧೯೮೪

ಶ್ರೀ ಜೇಡರ ದಾಸಿಮಯ್ಯದೇವ ಷಟ್ಸ್ಥಲ ವಚನಾಗಮ
ಸಂ. ಪಿ.ಎಂ. ಗಿರಿರಾಜು
ಗೌ. ಸಂ. 'ಶರಣ ಸಂತಾನ' (ತ್ರೈಮಾಸಿಕ)
ಮೈಸೂರು-೨೮. ೧೯೮೯

ಶೂನ್ಯ ಸಂಪಾದನೆ
-ಗುಮ್ಮಳಾಪುರದ ಸಿದ್ಧಲಿಂಗದೇವ
ಸಂ. ಡಾ. ಆರ್.ಸಿ. ಹಿರೇಮಠ
ಕನ್ನಡ ಅಧ್ಯಯನ ಸಂಸ್ಥೆ,
ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ. ೧೯೭೨

ಶೂನ್ಯ ಸಂಪಾದನೆ .
-ಗೂಳೂರು ಸಿದ್ಧವೀರಣ್ಣೊಡೆಯರು
ಸಂ. ಪ್ರೊ. ಸಂ.ಶಿ. ಭೂಸನೂರಮಠ
ರಾವೂರ ಶ್ರೀ ಸಿದ್ಧಲಿಂಗೇಶ್ವರಮಠ ಮತ್ತು ಅದವಾನಿಯ
ಕಲ್ಲುಮಠದ ಅಧಿಪತಿಗಳು, ರಾವೂರು. ೧೯೫೮

ಶೂನ್ಯಸಂಪಾದನೆ
-ಶಿವಗಣಪ್ರಸಾದಿ ಮಹಾದೇವಯ್ಯ
ಸಂ. ಡಾ. ಆರ್.ಸಿ. ಹಿರೇಮಠ

ಕನ್ನಡ ಅಧ್ಯಯನ ಪೀಠ
ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ. ೧೯೭೧

ಶೂನ್ಯಸಂಪಾದನೆ (ಅಪ್ರಕಟಿತ)
-ಹಲಗೆಯದೇವ
ಕೆ.ಎ. ೧೦೫, ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಮಾನಸಗಂಗೋತ್ರಿ,
ಮೈಸೂರು.

ಷಟ್ಪ್ರಕಾರ ಸಂಗ್ರಹ
-ಶಾಂತದೇವರು
ಸಂ. ಜಿ.ಎ. ಶಿವಲಿಂಗಯ್ಯ
ವೀರಶೈವ ಅಧ್ಯಯನ ಸಂಸ್ಥೆ
ಶ್ರೀ ಜಗದ್ಗುರು ತೋಂಟದಾರ್ಯ ಸಂಸ್ಥಾನಮಠ,
ಗದಗ. ೧೯೮೭

ಷಟ್‌ಸ್ಥಲ ಬ್ರಹ್ಮಾನಂದ ವಿರಕ್ತ ಚಾರಿತ್ರ ಸಂಪಾದನೆಯ ವಚನಗಳು
-ಸಂಪಾದನೆಯ ಬೋಳಬಸವರಾಜದೇವರು
ಸಂ. ಪ್ರೊ. ಎಸ್. ಉಮಾಪತಿ
ವೀರಶೈವ ಅಧ್ಯಯನ ಸಂಸ್ಥೆ
ಶ್ರೀ ಜಗದ್ಗುರು ತೋಂಟದಾರ್ಯ ಸಂಸ್ಥಾನಮಠ,
ಗದಗ. ೧೯೮೪

ಷಟ್‌ಸ್ಥಲ ಸ್ತೋತ್ರದ ವಚನಗಳು
-ಎಳೆಮಲೆಯ ಗುರುಶಾಂತದೇವ
ಸಂ. ಡಾ. ವೀರಣ್ಣ ರಾಜೂರ
ವೀರಶೈವ ಅಧ್ಯಯನ ಸಂಸ್ಥೆ
ಶ್ರೀ ಜಗದ್ಗುರು ತೋಂಟದಾರ್ಯ ಸಂಸ್ಥಾನಮಠ,
ಗದಗ. ೧೯೮೩

ಸಂಪಾದನೆಯ ಸಾರಾಮೃತ
-ಕಟ್ಟಿಗೆಹಳ್ಳಿ ಸಿದ್ಧಲಿಂಗಸ್ವಾಮಿ
ಸಂ. ಡಾ. ಬಿ.ಆರ್. ಹಿರೇಮಠ
ವೀರಶೈವ ಅಧ್ಯಯನ ಸಂಸ್ಥೆ
ಶ್ರೀ ಜಗದ್ಗುರು ತೋಂಟದಾರ್ಯ ಸಂಸ್ಥಾನಮಠ,
ಗದಗ. ೧೯೮೮

ಸಂಬಂಧಾಚರಣೆಯ ವಚನಗಳು
ಸಂ: ಪಿ.ಎಂ ಗಿರಿರಾಜು

ಗೌ. ಸಂ. 'ಶರಣ ಸಂತಾನ' (ತ್ರೈಮಾಸಿಕ)
೪೪೭, ಸಂತೇಪೇಟೆ, ಮೈಸೂರು ೨೪. ೧೯೮೬

ಸಕಲ ಪುರಾತನರ ಬೆಡಗಿನ ವಚನಗಳು
-ಸಿಂಗಳದ ಸಿದ್ಧಬಸವರಾಜದೇವರು
ಸಂ. ಡಾ. ಎಂ.ಎಸ್. ಸುಂಕಾಪುರ
ಕನ್ನಡ ಅಧ್ಯಯನ ಪೀಠ, ಕರ್ನಾಟಕ ವಿಶ್ವವಿದ್ಯಾಲಯ,
ಧಾರವಾಡ. ೧೯೭೮

ಸಕಲ ಪುರಾತನರ ವಚನಗಳು -ಸಂಪುಟ ೧
ಸಂ. ಡಾ. ಆರ್.ಸಿ. ಹಿರೇಮಠ
ಕನ್ನಡ ಅಧ್ಯಯನ ಪೀಠ
ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ. ೧೯೭೨

ಸಕಲ ಪುರಾತನರ ವಚನಗಳು -ಸಂಪುಟ ೨
ಸಂ. ಡಾ. ಎಂ.ಎಸ್. ಸುಂಕಾಪುರ
ಕನ್ನಡ ಅಧ್ಯಯನ ಪೀಠ
ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ. ೧೯೭೬

ಸಕಲ ಪುರಾತನರ ವಚನಗಳು-ಸಂಪುಟ ೩
ಸಂ. ಡಾ. ಎಂ.ಎಸ್. ಸುಂಕಾಪುರ
ಕನ್ನಡ ಅಧ್ಯಯನ ಪೀಠ
ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ. ೧೯೭೮

ಸುಖಿ ಸಂಪಾದನೆಯ ವಚನಗಳು
ಸಂ. ಡಾ. ಬಿ.ಆರ್. ಹಿರೇಮಠ
ವೀರಶೈವ ಅಧ್ಯಯನ ಸಂಸ್ಥೆ,
ಶ್ರೀ ಜಗದ್ಗುರು ತೋಂಟದಾರ್ಯ ಸಂಸ್ಥಾನಮಠ,
ಗದಗ. ೧೯೮೭

ಸೂಕ್ಷ್ಮ ಮಿಶ್ರಷಟ್ಸ್ಥಲ
-ಮಹಾಲಿಂಗದೇವ
ಸಂ. ಡಾ. ವೀರಣ್ಣ ರಾಜೂರ
ವೀರಶೈವ ಅಧ್ಯಯನ ಸಂಸ್ಥೆ
ಶ್ರೀ ಜಗದ್ಗುರು ತೋಂಟದಾರ್ಯ ಸಂಸ್ಥಾನಮಠ,
ಗದಗ. ೧೯೮೭

# ಸಮಗ್ರ ವಚನಸಾಹಿತ್ಯ ಪ್ರಕಟನ ಯೋಜನೆ

'ಸಮಗ್ರ ವಚನಸಾಹಿತ್ಯದ ಪ್ರಕಟನ ಯೋಜನೆ' ಕರ್ನಾಟಕ ಸರ್ಕಾರದ ಈವರೆಗಿನ ಸಾಹಿತ್ಯಕ ಸಾಧನೆಗಳಲ್ಲಿ ಒಂದು ಮಹತ್ವದ ದಾಖಲೆಯಾಗಿದೆ. ಇದು ಒಂದು ಸಾಹಿತ್ಯಕೃತಿಯ ಪ್ರಕಟನೆಯಲ್ಲ; ಒಂದು ಸಾಹಿತ್ಯ ಪ್ರಕಾರದ ಪ್ರಕಟನೆ.

ತತ್ವಕ್ಕೆ ತತ್ವ, ಸಾಹಿತ್ಯಕ್ಕೆ ಸಾಹಿತ್ಯವಾಗಿರುವ 'ವಚನ ವಾಙ್ಮಯ' ಏಕಕಾಲಕ್ಕೆ ಆತ್ಮಕಲ್ಯಾಣವನ್ನೂ ಸಮಾಜ ಕಲ್ಯಾಣವನ್ನೂ ಪ್ರತಿಪಾದಿಸುವ ಮೂಲಕ ಜಾಗತಿಕ ಮಹತ್ವ ಗಳಿಸಿದೆ. ಈ ಮೌಲಿಕ ಸಾಹಿತ್ಯವನ್ನು ಸುಲಭ ಬೆಲೆಯಲ್ಲಿ ಜನತೆಗೆ ಒದಗಿಸುವುದು ಈ ಯೋಜನೆಯ ಉದ್ದೇಶವಾಗಿದೆ.

ಇವತ್ತಿನ ಮಿತಿಗೆ ಸಿಗುವ ಬಸವಯುಗ ಮತ್ತು ಬಸವೋತ್ತರ ಯುಗಗಳ ಎಲ್ಲ ಶರಣರ ಎಲ್ಲ ವಚನಗಳನ್ನು ಸಂಗ್ರಹಿಸಿ, ಸಂಸ್ಕರಿಸಿ, ಪ್ರಕಟಿಸಿದ ಪ್ರಯತ್ನವಿದು. ಈ ಮೂಲಕ ಬಸವಯುಗದ ಹಲವು ಹೊಸ ವಚನಗಳು ಬೆಳಕಿಗೆ ಬರುವುದರೊಂದಿಗೆ, ಬಸವೋತ್ತರ ಯುಗದ ಸಮಗ್ರ ವಚನ ಸಂಪತ್ತು ಪ್ರಥಮಸಲ ಹೊರ ಬರುತ್ತಿರುವುದು ಈ ಯೋಜನೆಯ ವಿಶೇಷ ಸಾಧನೆಯಾಗಿದೆ.

೮೦೦ ವರ್ಷಗಳುದ್ದಕ್ಕೂ ಬೆಳೆದುಬಂದ ಈ ಸಾಹಿತ್ಯದ ವ್ಯಾಪ್ತಿಯನ್ನು ಪ್ರಥಮಬಾರಿ ಗುರುತಿಸಿಕೊಡುತ್ತಿರುವ ಈ ಸಾಹಸದ ಫಲವಾಗಿ, ೨೦ಸಾವಿರ ವಚನಗಳು ಸುಮಾರು ೧೦ಸಾವಿರ ಪುಟ ವ್ಯಾಪ್ತಿಯ ೧೫ ಸಂಪುಟಗಳಲ್ಲಿ (ವಚನ ಪರಿಭಾಷಾಕೋಶ ಸೇರಿ) ಬೆಳಕು ಕಾಣುತ್ತಿವೆ.

ISBN : 81-7713-098-6